ಶ್ರೀ ಗುದ್ಲೆಪ್ಪ ಹಳ್ಳಿಕೇರಿ :
ರಾಜಕೀಯ ಜೀವನ ಮತ್ತು ಸಾಧನೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಪಿಎಚ್. ಡಿ. ಮಹಾಪ್ರಬಂಧ

ಸಂಶೋಧಕರು :
ಸಿದ್ದಲಿಂಗೇಶ ಎಸ್. ಹಂಡಿಗಿ
ಎಂ. ಎ.

ಮಾರ್ಗದರ್ಶಕರು :
ಡಾ. ಎಸ್. ಎಚ್. ಪಾಟೀಲ
ಎಂ.ಎ., ಪಿಎಚ್. ಡಿ.
ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೩

113

ಶ್ರೀ ಗುದ್ಲೆಪ್ಪ ಹಳ್ಳಿಕೇರಿ :
ರಾಜಕೀಯ ಜೀವನ ಮತ್ತು ಸಾಧನೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಪಿಎಚ್. ಡಿ. ಮಹಾಪ್ರಬಂಧ

ಸಂಶೋಧಕರು :
ಸಿದ್ಧಲಿಂಗೇಶ ಎಸ್. ಹಂಡಿಗಿ
ಎಂ. ಎ.

ಮಾರ್ಗದರ್ಶಕರು :
ಡಾ. ಎಸ್. ಎಚ್. ಪಾಟೀಲ
ಎಂ.ಎ., ಪಿಎಚ್. ಡಿ.
ನಿವೃತ್ತ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅಭಿವೃದ್ಧಿ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೨

113

ಪ್ರಮಾಣ ಪತ್ರ

" ಶ್ರೀ ಗುದ್ಲೆಪ್ಪ ಹಳ್ಳಿಕೇರಿ : ರಾಜಕೀಯ ಜೀವನ ಮತ್ತು ಸಾಧನೆ " ಎಂಬ ಈ ಮಹಾಪ್ರಬಂಧವನ್ನು **ಡಾ. ಎಸ್. ಎಚ್. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ಯಾವುದೇ ಭಾಗವನ್ನು ಇದುವರೆಗೆ ಯಾವುದೇ ಪದವಿಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

೧೬-೧೨-೨೦೦೨

ಸಂಶೋಧಕರು,

ಸಿದ್ಧಲಿಂಗೇಶ ಎಸ್. ಹಂಡಿಗಿ

(ಸಿದ್ಧಲಿಂಗೇಶ ಎಸ್. ಹಂಡಿಗಿ)

ದೃಢೀಕರಣ ಪತ್ರ

" **ಶ್ರೀ ಗುದ್ಲೆಪ್ಪ ಹಳ್ಳಿಕೇರಿ : ರಾಜಕೀಯ ಜೀವನ ಮತ್ತು ಸಾಧನೆ** " ಎಂಬ ಈ ಮಹಾಪ್ರಬಂಧವನ್ನು ಪಿಎಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು **ಶ್ರೀ ಸಿದ್ಧಲಿಂಗೇಶ ಎಸ್. ಹಂಡಿಗಿ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಅಧ್ಯಯನದ ಯಾವುದೇ ಭಾಗವನ್ನು ಇದುವರೆಗೆ ಯಾವುದೇ ಪದವಿಗೆ ಅವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

೧೬-೧೨-೨೦೦೨

ಮಾರ್ಗದರ್ಶಕರು,

(ಡಾ. ಎಸ್. ಎಚ್. ಪಾಟೀಲ)

ಕೃತಜ್ಞತೆಗಳು

ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣಕ್ಕಾಗಿ ಸಮರ್ಪಣ ಮನೋಭಾವದಿಂದ ಹೋರಾಡಿ ಯಶಸ್ಸು ಸಾಧಿಸಿದ ಧೀಮಂತ ನಾಯಕ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರು. ಇವೆರಡೂ ಗುರಿಗಳು ಸಾಧಿಸಿದ ನಂತರ ವಿಧಾನಸಭಾ ಸದಸ್ಯರಾಗಿ. ವಿಧಾನ ಪರಿಷತ್ತಿನ ಸದಸ್ಯರಾಗಿ ಹಾಗೂ ಸಭಾಪತಿಗಳಾಗಿ ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ಅವಿಶ್ರಾಂತವಾಗಿ ಶ್ರಮಿಸಿದ ಧೀರೋದಾತ್ತ ಜನನಾಯಕ ಗುದ್ಲೆಪ್ಪನವರ ವ್ಯಕ್ತಿತ್ವವನ್ನು ನಾಡಿನ ಪತ್ರಿಕೆಗಳಲ್ಲಿ ಹಾಗೂ ಗ್ರಂಥಗಳಲ್ಲಿ ಓದಿ ಪ್ರಭಾವಿತನಾಗಿದ್ದೆ.

ಅವರನ್ನು ಕುರಿತು ಸಂಶೋಧನೆ ಮಾಡಬೇಕೆಂಬ ನನ್ನ ಹಂಬಲಕ್ಕೆ ಬೆಂಬಲವಿತ್ತು ಪ್ರೋತ್ಸಾಹಿಸಿದವರು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರು. ಯು.ಜಿ.ಸಿ. ಎಮಿರಿಟಸ್ ಫೆಲೋ ಹಾಗೂ ನನ್ನ ವಿದ್ಯಾಗುರುಗಳಾದ ಡಾ. ಎಸ್. ಎಚ್. ಪಾಟೀಲ ಅವರು. ಜೊತೆಗೆ ಇನ್ನೋರ್ವರು ಶ್ರೀ ಗುದ್ಲೆಪ್ಪನವರ ಹಿರಿಯ ಪುತ್ರರೂ ಹುಬ್ಬಳ್ಳಿಯ ಖ್ಯಾತ ಶಸ್ತ್ರಚಿಕಿತ್ಸಾತಜ್ಞರೂ ಆದ ಡಾ. ದೀನಬಂಧು ಹಳ್ಳಿಕೇರಿ ಅವರು.

ಡಾ. ದೀನಬಂಧು ಹಳ್ಳಿಕೇರಿಯವರು ಸಂಶೋಧನೆಗೆ ಬೇಕಾಗುವ ಆಕರಗಳನ್ನು ಒದಗಿಸಿ. ಕಾಲಕಾಲಕ್ಕೆ ಸೂಕ್ತ ಮಾಹಿತಿ ನೀಡಿ ಮುನ್ನಡೆಸಿದ್ದಾರೆ. ಡಾ. ಎಸ್. ಎಚ್. ಪಾಟೀಲ ಅವರು ಸಂಶೋಧನೆಯಲ್ಲಿ ತಮ್ಮ ಜ್ಞಾನಾನುಭವಗಳಿಂದ ನನಗೆ ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನವಿತ್ತು ಈ ಮಹಾಪ್ರಬಂಧ ರೂಪುಗೊಳ್ಳುವಂತೆ ಮಾಡಿದ್ದಾರೆ. ಅವರುಗಳಿಗೆ ನನ್ನ ಅನಂತ ಕೃತಜ್ಞತೆಗಳು.

ಕ್ಷೇತ್ರಕಾರ್ಯಕ್ಕಾಗಿ ಬೆಂಗಳೂರು. ಚಿತ್ರದುರ್ಗ. ಹುಬ್ಬಳ್ಳಿ. ಧಾರವಾಡ. ಹಾವೇರಿ. ಮುಂಡರಗಿ. ಹೊಸರಿತ್ತಿ. ನೆಗಳೂರು. ತೆಲಗಿ. ಮನಗೂಳಿ ಮುಂತಾದ ಊರುಗಳಿಗೆ ಹೋದಾಗ ಶ್ರೀ ಗುದ್ಲೆಪ್ಪನವರ ನಿಕಟವರ್ತಿಗಳು. ಅಭಿಮಾನಿಗಳು ಅವರೊಂದಿಗಿನ ತಮ್ಮ ಅನುಭವಗಳನ್ನು ಹಾಗೂ ಮಾಹಿತಿಗಳನ್ನು ನೀಡಿ ಸಹಕರಿಸಿದರು. ಶ್ರೀ ಗುದ್ಲೆಪ್ಪನವರ ಧರ್ಮಪತ್ನಿ ಶ್ರೀಮತಿ ಗಂಗಾದೇವಿ ಹಳ್ಳಿಕೇರಿ ಹಾಗೂ ಕುಟುಂಬ ವರ್ಗದವರು. ಕರ್ನಾಟಕ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು. ಮಾಜಿ ಉಪರಾಷ್ಟ್ರಪತಿಗಳಾದ ಶ್ರೀ ಬಿ. ಡಿ.

ಜತ್ತಿಯವರು, ಮಾಜಿ ಸಚಿವರು ಹಾಗೂ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು, ಮಾಜಿ ಸಚಿವರು ಹಾಗೂ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದ ಶ್ರೀ ಟಿ. ಎನ್. ನರಸಿಂಹಮೂರ್ತಿಯವರು, ಮಾಜಿ ಸಚಿವರಾದ ಶ್ರೀ ಬಿ. ಎಸ್. ಪಾಟೀಲ (ಮನಗೂಳಿ), ಮಾಜಿ ಲೋಕಸಭಾ ಸದಸ್ಯರಾದ ಶ್ರೀ ಬಿ. ಎಂ. ಮೆಣಸಿನಕಾಯಿ, ಮಾಜಿ ವಿಧಾನಸಭಾ ಸದಸ್ಯರಾದ ಡಾ. ಸಿ. ಎಂ. ಚುರ್ಚಿಹಾಳಮಠ, ಶ್ರೀಮತಿ ನಾಗಮ್ಮ ವೀರನಗೌಡ ಪಾಟೀಲ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ವಾಯ್. ಎಸ್. ಪಾಟೀಲ, ಶ್ರೀಮತಿ ರವೀನಾ ಸಿ. ಕಮಲಾನಿ ಅವರುಗಳು ಶ್ರೀ ಗುದ್ಲೆಪ್ಪನವರ ಬಗೆಗಿನ ವಿವರಗಳನ್ನು ನೀಡಿ ನೆರವಾಗಿದ್ದಾರೆ. ಇವರೆಲ್ಲರನ್ನು ಕೃತಜ್ಞತೆಯಿಂದ ನೆನೆಯುವದು ನನ್ನ ಕರ್ತವ್ಯ.

ಹಿರಿಯ ಪತ್ರಕರ್ತರಾದ ಶ್ರೀ ಕೆ. ಶಾಮರಾವ, ಡಾ. ಪಾಟೀಲ ಪುಟ್ಟಪ್ಪ, ಶ್ರೀ ಪ. ಲೋ. ಬಂಕಾಪೂರ, ಶ್ರೀ ಹುಚ್ಚೇಶ್ವರ ಮೇದಿ ಅವರುಗಳನ್ನೂ ಹೃತ್ಪೂರ್ವಕ ನೆನೆಯುವೆ.

ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲದ ಮುಖ್ಯಾಧ್ಯಾಪಕ ಶ್ರೀ ಗೋಪಣ್ಣ ಕುಲಕರ್ಣಿ ಮತ್ತು ಸಿಬ್ಬಂದಿಯವರು ನೀಡಿದ ನೆರವಿಗಾಗಿ ಕೃತಜ್ಞತೆಗಳು.

ಅನೇಕ ಸ್ವಾತಂತ್ರ್ಯಯೋಧರು, ನಿವೃತ್ತ ಅಧಿಕಾರಿಗಳು ಹಾಗೂ ಸಮಾಜ ಕಾರ್ಯಕರ್ತರು ಮಾಹಿತಿ ಒದಗಿಸಿದ್ದಾರೆ. ಅವರಿಗೂ ಕೃತಜ್ಞತೆಗಳು.

ಈ ಸಂಶೋಧನೆಗೆ ಉತ್ತೇಜನವಿತ್ತ ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರು ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು, ಗದುಗಿನ ತೋಂಟದಾರ್ಯ ಸಂಸ್ಥಾನಮಠದ ಜಗದ್ಗುರು ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಹಾಗೂ ನಿಡುಮಾಮಿಡಿ ಸಂಸ್ಥಾನ ಮಾನವಧರ್ಮ ಪೀಠದ ಶ್ರೀ ವೀರಭದ್ರ ಚನ್ನಮಲ್ಲ ಮಹಾಸ್ವಾಮಿಗಳು, ಬೆಂಗಳೂರು ಈ ಪೂಜ್ಯರುಗಳಿಗೆ ನನ್ನ ಅನಂತ ಪ್ರಣಾಮಗಳು.

ವಿಧಾನ ಪರಿಷತ್ತಿನ ಕಲಾಪಗಳ ಮಾಹಿತಿ ಒದಗಿಸಿದ ಬೆಂಗಳೂರ ವಿಧಾನ ಸೌಧದ ಗ್ರಂಥಾಲಯ, ಸಂಶೋಧನ ಮತ್ತು ಉಲ್ಲೇಖನ ಶಾಖೆಯ ಸಿಬ್ಬಂದಿಯವರಿಗೆ ನನ್ನ ನೆನಕೆಗಳು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಹಾಗೂ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯ ಸಿಬ್ಬಂದಿಗೆ ಧನ್ಯವಾದಗಳು. ಹುಬ್ಬಳ್ಳಿಯ ' ಸಂಯುಕ್ತ ಕರ್ನಾಟಕ ' ದಿನಪತ್ರಿಕೆಯ ಕಾರ್ಯಾಲಯದಲ್ಲಿ ಹಿಂದಿನ ಸಂಚಿಕೆಗಳನ್ನು ಅವಲೋಕಿಸಲು ಅವಕಾಶವಿತ್ತ ಸಿಬ್ಬಂದಿವರ್ಗಕ್ಕೆ ಕೃತಜ್ಞತೆಗಳು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಎಂ. ಎಂ. ಕಲಬುರ್ಗಿ ಹಾಗೂ ಸದ್ಯದ ಕುಲಪತಿಗಳಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಅಧ್ಯಯನಾಂಗ ವಿಭಾಗದ ನಿರ್ದೇಶಕರಾದ ಡಾ. ಕರಿಗೌಡ ಬೀಚನಹಳ್ಳಿ ಮತ್ತು ಸಿಬ್ಬಂದಿ. ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಟಿ. ಆರ್. ಚಂದ್ರಶೇಖರ. ಡಾ. ಚಂದ್ರ ಪೂಜಾರಿ. ಶ್ರೀ ಎ. ಶ್ರೀಧರ. ಶ್ರೀಮತಿ ಸಿದ್ದಗಂಗಮ್ಮ. ಶಿಲ್ಪ ಮತ್ತು ವರ್ಣಚಿತ್ರಕಲೆಗಳ ವಿಭಾಗದ ಮುಖ್ಯಸ್ಥ ಡಾ. ಎಸ್. ಸಿ. ಪಾಟೀಲ. ಹಸ್ತಪ್ರತಿಶಾಸ್ತ್ರ ವಿಭಾಗದ ಡಾ. ಎಫ್. ಟಿ. ಹಳ್ಳಿಕೇರಿ. ಡಾ. ಕೆ. ರವೀಂದ್ರನಾಥ. ಶಿಗ್ಗಾವಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಶ್ರೀ ಡಿ. ವಿ. ಗೊಬ್ಬರಗುಂಪಿ ಹಾಗೂ ಹುಬ್ಬಳ್ಳಿಯ ಪ್ರೊ. ಸಿ. ಪಿ. ಹೇಮಗಿರಿಮಠ ಅವರುಗಳಿಗೆ ನನ್ನ ಧನ್ಯವಾದಗಳು.

ನಾನು ಉದ್ಯೋಗದಲ್ಲಿರುವ ನವಲಗುಂದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣುಮಕ್ಕಳ ಶಾಲೆಯ ಮುಖ್ಯೋಪಾಧ್ಯಾಯರು, ಸಹಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ನನ್ನ ಸಂಶೋಧನ ಕಾರ್ಯದಲ್ಲಿ ಪ್ರೋತ್ಸಾಹ ನೀಡಿದುದಕ್ಕಾಗಿ ಅವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಸಂಶೋಧನ ಕಾರ್ಯದಲ್ಲಿ ನೆರವಾದ ನನ್ನ ಪೂಜ್ಯ ತಂದೆ ಡಾ. ಸಂಗಮೇಶ ಹಂಡಿಗಿ. ತಾಯಿ ಶ್ರೀಮತಿ ಶಿವಲೀಲಾ. ಸಹೋದರಿ ಶ್ರೀಮತಿ ಆಶಾ ಹಾಗೂ ಸಹೋದರ ವೀರೇಶ ಅವರಿಗೆ ನನ್ನ ನಮನಗಳು.

ಈ ಪ್ರಬಂಧವನ್ನು ಅಂದವಾಗಿ ಕಂಪ್ಯೂಟರೀಕರಣಗೊಳಿಸಿದ ಧಾರವಾಡದ ಮನೋಹರ ಮುದ್ರಣಾಲಯದ ಒಡೆಯರಾದ ಶ್ರೀ ರವೀಂದ್ರ ಮತ್ತು ಶ್ರೀ ಚಂದ್ರಶೇಖರ ಆಕಳವಾಡಿ ಸಹೋದರರಿಗೆ ನನ್ನ ನೆನಕೆಗಳು.

೧೬-೧೨-೨೦೦೨ **ಸಿದ್ಧಲಿಂಗೇಶ ಎಸ್. ಹಂಡಿಗಿ**

ಪರಿವಿಡಿ



ಜನನಾಯಕ ಗುದ್ಲೆಪ್ಪ ಹಳ್ಳಿಕೇರಿ

ಅಧ್ಯಯನದ ಉದ್ದೇಶ ಮತ್ತು ಪದ್ಧತಿ

ಅಧ್ಯಯನದ ಉದ್ದೇಶ ಮತ್ತು ಪದ್ಧತಿ

ಬ್ರಿಟಿಷರ ಆಳ್ವಿಕೆಯಿಂದ ಜರ್ಜರಿತವಾದ ಭಾರತದಲ್ಲಿ ಗುಲಾಮಗಿರಿಯ ಅಂಧಃಕಾರ ಮುಸುಕಿ ಜನರಿಗೆ ಸ್ವಾತಂತ್ರ್ಯದ ಬೆಳಕಿನ ಕಿರಣ ಕಾಣದಾಗಿತ್ತು. ಅಂಥ ಸಮಯದಲ್ಲಿ ಮಹಾತ್ಮಾ ಗಾಂಧೀಜಿಯವರು ಸೂರ್ಯನಂತೆ ಭಾರತದ ರಾಜಕೀಯ ಕ್ಷಿತಿಜದಲ್ಲಿ ಮೂಡಿಬಂದರು. ಜನಮನದಲ್ಲಿ ರಾಷ್ಟ್ರೀಯತೆಯನ್ನು ತುಂಬಿ, ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಲು ಕರೆಕೊಟ್ಟರು.

ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಣಕ್ಕಿಳಿದು ಹೋರಾಡಿದ ವೀರ ಯೋಧರು ಹಲವರು. ತಮ್ಮ ವೈಯಕ್ತಿಕ ಹಿತಾಕಾಂಕ್ಷೆಗಳನ್ನು ಬದಿಗೊತ್ತಿ ಸ್ವಾರ್ಥತ್ಯಾಗ, ದೇಶಪ್ರೇಮವನ್ನೇ ತಮ್ಮ ಬದುಕಿನ ಜೀವಾಳವಾಗಿರಿಸಿಕೊಂಡು ತಾವಿದ್ದ ಪರಿಸರದಲ್ಲಿ ಜನರನ್ನು ಸಂಘಟಿಸಿ, ಗಾಂಧೀಜಿಯವರ ಸತ್ಯ ಅಹಿಂಸೆಗಳ ತತ್ವ ಪ್ರಣಾಲಿಯ ತಳಹದಿಯಲ್ಲಿ ತಾವೂ ಹೋರಾಡಿ ಅದರಲ್ಲಿ ಪಾಲ್ಗೊಳ್ಳುವಂತೆ ಜನರನ್ನು ಅಣಿಗೊಳಿಸಿದ ನಾಯಕರು ಅನೇಕರು. ಅಂಥ ಜನನಾಯಕರ ಅಗ್ರಪಂಕ್ತಿಯಲ್ಲಿ ಎದ್ದು ಕಾಣುವವರು ಕರ್ನಾಟಕದ ಗುದ್ಲೆಪ್ಪ ಹಳ್ಳಿಕೇರಿಯವರು.

ಖಾದಿ ಮತ್ತು ಕಾಂಗ್ರೆಸ್ಸು ಗುದ್ಲೆಪ್ಪ ಹಳ್ಳಿಕೇರಿಯವರ ಜೀವನದ ಶ್ವಾಸೋಚ್ಛ್ವಾಸಗಳಾಗಿದ್ದವು. ಇವೆರಡೂ ಅವರ ಸ್ವಾತಂತ್ರ್ಯ ಸಿದ್ಧಿಯ ಪ್ರಮುಖ ಮಾಧ್ಯಮಗಳಾಗಿದ್ದವು. ಖಾದಿ ಉತ್ಪತ್ತಿ ಮತ್ತು ಪ್ರಸಾರ, ಕಾಂಗ್ರೆಸ್ ಸಂಘಟನೆ, ತನ್ಮೂಲಕ ಜನಕಲ್ಯಾಣ ಇವುಗಳನ್ನೇ ಸಾಧನವಾಗಿಸಿಕೊಂಡು ದೇಶದ ಸ್ವಾತಂತ್ರ್ಯ ಹಾಗೂ ನಾಡಿನ ಏಕೀಕರಣದ ಗುರಿ ಸಾಧಿಸಿದ ಧೀಮಂತ ನಾಯಕರು ಅಪ್ರತಿಮ ಗಾಂಧಿವಾದಿ ಗುದ್ಲೆಪ್ಪನವರು.

ಈ ಹೋರಾಟಗಳಲ್ಲಿ ಗುದ್ಲೆಪ್ಪನವರ ಪಾತ್ರ ನಿಸ್ಸಂಶಯವಾಗಿಯೂ ಧೀರೋದಾತ್ತ. ಅವರು ತೋರಿದ ಶೌರ್ಯ, ಸಾಹಸ, ಧೈರ್ಯ, ನಿಷ್ಠೆ ಹಾಗೂ ಸಂಘಟನಾ ಸಾಮರ್ಥ್ಯ ಎಲ್ಲ ಕಾಲಕ್ಕೂ, ಎಲ್ಲ ಜನಾಂಗಕ್ಕೂ ಆದರ್ಶ ಮತ್ತು ಅನುಕರಣೀಯ.

ಅಧ್ಯಯನದ ಉದ್ದೇಶ :

ಗುದ್ಲೆಪ್ಪನವರ ಧೀರೋದಾತ್ತ ವ್ಯಕ್ತಿತ್ವವನ್ನು ನಾಡಿನ ಪತ್ರಿಕೆಗಳ ಮೂಲಕ ಹಾಗೂ ಅವರನ್ನು ಕುರಿತ ಗ್ರಂಥಗಳನ್ನು ನೋಡಿ, ಆಕರ್ಷಿತನಾಗಿ ಅವರ ಬಗೆಗೆ ಸಮಗ್ರ ಸಂಶೋಧನೆ ಮಾಡಲು ನಿರ್ಧರಿಸಿದೆನು.

ಹಳ್ಳಿಯ ತೀರ ಕೆಳಸ್ತರದ ಬಡವನನ್ನು ಹಾಗೂ ಪಟ್ಟಣದ ಶ್ರೀಮಂತರನ್ನು ಯಾವ ಭೇದ ಭಾವಗಳಿಲ್ಲದೆ ಸಮನಾಗಿ ಕಾಣುವ ಗುದ್ಲೆಪ್ಪನವರ ಸಮದರ್ಶಿತ್ವ. ನಿರ್ವ್ಯಾಜ ಪ್ರೀತಿ. ವಿಶ್ವಾಸ ಮುಂತಾದ ಸದ್ಗುಣಗಳು ವಿಶೇಷವಾಗಿ ನನ್ನನ್ನು ಆಕರ್ಷಿಸಿದವು.

ಗುದ್ಲೆಪ್ಪನವರು ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಇವೆರಡೂ ಗುರಿಗಳನ್ನು ಜೊತೆಯಾಗಿಟ್ಟುಕೊಂಡು ಹೋರಾಟ ಮಾಡಿದರು. ಇವೆರಡೂ ಸಾಧಿಸಿದ ನಂತರ ಕರ್ನಾಟಕದಲ್ಲಿ ಅವರು ವಿಧಾನಪರಿಷತ್ ಸದಸ್ಯರಾಗಿ, ಸಭಾಪತಿಯಾಗಿ ಮಾಡಿದ ಅವರ ಶಿಸ್ತು ಹಾಗೂ ನಿಷ್ಠಾಪೂರ್ಣ ಸೇವಾ ಜೀವನದ ವಿವರಗಳನ್ನೂ ಪ್ರಸ್ತುತ ಮಹಾಪ್ರಬಂಧದಲ್ಲಿ ನಿರೂಪಿಸಲಾಗಿದೆ.

ರಾಜಕೀಯ ರಂಗದಲ್ಲಿದ್ದುಕೊಂಡೇ ಅದರಂಗವಾಗಿ ಅವರು ಕೈಕೊಂಡ ಸಾಮಾಜಿಕ. ಆರ್ಥಿಕ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಹೀಗೆ ವೈವಿಧ್ಯಮಯವಾದ ಸೇವಾ ಕ್ಷೇತ್ರದ ಕಾರ್ಯ ಚಟುವಟಿಕೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ರಾಷ್ಟ್ರ ಮತ್ತು ರಾಜ್ಯದ ಹಿತಾಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಜನಕಲ್ಯಾಣಕ್ಕಾಗಿಯೇ ತಮ್ಮ ಉಸಿರಿರುವವರೆಗೂ ಸಮರ್ಪಣ ಮನೋಭಾವದಿಂದ ಶ್ರಮಿಸಿದ ಗುದ್ಲೆಪ್ಪನವರ ಸಾಧನೆ ಇಂದಿನ ಮತ್ತು ಮುಂದಿನ ಜನಾಂಗಕ್ಕೆ ಮಾರ್ಗದರ್ಶಿ ಹಾಗೂ ಸ್ಫೂರ್ತಿದಾಯಕ.

ಸಾಹಿತ್ಯ ಸಮೀಕ್ಷೆ :

ಈ ಅಧ್ಯಯನ ಮಾಡುತ್ತಿರುವಾಗ ಗುದ್ಲೆಪ್ಪನವರಿಗೆ ಸಂಬಂಧಪಟ್ಟ ಸಾಹಿತ್ಯ ಕೃತಿಗಳು ಮತ್ತು ಲೇಖನಗಳು ನೆರವಾದವು. ಅವರ ಸಂಪೂರ್ಣ ರಾಜಕೀಯ ಜೀವನವನ್ನು ಇಲ್ಲಿ ಅಧ್ಯಯನಿಸಲಾಗಿದೆ.

' The Mysore Legislative Council Debates ' 1962 - 1972 ಹಾಗೂ ' A Review of working of Mysore Legislative Council ' 1962 - 1966 ರ ವರೆಗಿನ ವರದಿಗಳಲ್ಲಿ ಗುದ್ಲೆಪ್ಪನವರು ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿ - ಸಭಾಪತಿಯಾಗಿ ಮಾಡಿದ ಭಾಷಣಗಳು ಹಾಗೂ ಇತರರು ಅವರ ಬಗೆಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು ದೊರೆತವು.

ಜಿ. ಎಸ್. ಹಾಲಪ್ಪನವರು ಸಂಪಾದಿಸಿದ ' History of Freedom Movement in Karnataka ' Vol - II (1964) ಇದರಲ್ಲಿ ಗುದ್ಲೆಪ್ಪನವರು ಪಾಲ್ಗೊಂಡಿದ್ದ ಸ್ವಾತಂತ್ರ್ಯ ಹೋರಾಟದ ಬಗೆಗಿನ ವಿವರಗಳು ತಿಳಿದು ಬರುತ್ತವೆ.

ಡಾ. ವಿ. ಕೃ. ಗೋಕಾಕ. ಪ್ರೊ. ಗ. ಸ. ಹಾಲಪ್ಪ. ಪ್ರಿ. ರಾ. ಯ. ಧಾರವಾಡಕರ. ಡಾ. ದ. ರಾ. ಬೇಂದ್ರೆ. ಡಾ. ಡಿ. ಎಸ್. ಕರ್ಕಿ ಇವರುಗಳು ಸಂಪಾದಿಸಿದ ಗುದ್ಲೆಪ್ಪನವರ ಷಷ್ಟ್ಯಬ್ದಿ ಸಂಸ್ಮರಣ ಗ್ರಂಥ ' ರತ್ನಶಿಖಾ ' (೧೯೬೬) ಈ ಗ್ರಂಥದಲ್ಲಿ ಅನೇಕ ಸಾಹಿತಿಗಳು. ರಾಜಕಾರಣಿಗಳು ಮತ್ತು ಅಭಿಮಾನಿಗಳು ಅವರ ವ್ಯಕ್ತಿತ್ವದ ವಿವಿಧ ಮಗ್ಗುಲುಗಳನ್ನು ಕುರಿತು ಬರೆದಿದ್ದಾರೆ.

ಪ್ರೊ. ಸಂಗಮೇಶ ಹಂಡಿಗಿ, ಪ್ರೊ. ಎಸ್. ಶಿ. ದಾನಪ್ಪಗೌಡರ ಹಾಗೂ ಎಂ. ಎ. ವಾರಿಮನಿ ಸಂಪಾದಿಸಿದ ಹುದಲಿಯ ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರಿ ಉತ್ಪಾದಕ ಸಂಘದ ಬೆಳ್ಳಿ ಹಬ್ಬದ ಸಂಸ್ಮರಣ ಸಂಚಿಕೆ ' ಕುಂದರನಾಡಿನ ಕುಂದಣ ' (೧೯೮೨) ಇದರಲ್ಲಿ ಗುದ್ಲೆಪ್ಪನವರು ಹುದಲಿಯಲ್ಲಿ ಜರುಗಿದ ಗಾಂಧಿ ಸೇವಾ ಸಂಘದ ಸಮ್ಮೇಳನದಲ್ಲಿ ಪಾಲ್ಗೊಂಡುದರ ಕುರಿತು ಹಾಗೂ ರಾಜ್ಯ ಖಾದಿ ಮಂಡಲಿಯ ಪ್ರಥಮ ಅಧ್ಯಕ್ಷರಾದ ಬಗ್ಗೆ ಮಾಹಿತಿ ದೊರಕಿತು.

ವ್ಹಿ. ಸಿ. ಮೊಗಲಿಶೆಟ್ಟರ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಅಪ್ರಕಟಿತ ಎಂ. ಫಿಲ್ ಪ್ರಬಂಧ ' Shri Hallikeri Gudleppa; A Political Profile ' (1985) ಇದರಲ್ಲಿ ಅವರ ವ್ಯಕ್ತಿ ಚಿತ್ರಣವಿದೆ.

ಡಾ. ಎಚ್. ಎಸ್. ಗೋಪಾಲರಾವ್ ಬರೆದ ' ಕರ್ನಾಟಕ ಏಕೀಕರಣ ಇತಿಹಾಸ ' (೧೯೯೬) ಇಲ್ಲಿ ಏಕೀಕರಣ ಹೋರಾಟದಲ್ಲಿಯ ಗುದ್ಲೆಪ್ಪನವರ ಪಾತ್ರದ ವಿವರಗಳು ದೊರೆತವು.

ಸುರೇಂದ್ರ ದಾನಿ ಸಂಪಾದಿಸಿದ ' ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಸಂಗ್ರಾಮ ' (೧೯೯೬) ಈ ಕೃತಿಯಲ್ಲಿ ಗುದ್ಲೆಪ್ಪನವರು ಮತ್ತು ಅವರ ಸಂಗಡಿಗರು ಕೈಕೊಂಡ ಸ್ವಾತಂತ್ರ್ಯ ಹೋರಾಟದ ಬಗೆಗಿನ ವಿವರಗಳಿವೆ.

ಪ್ರೊ. ಬಿ. ಷೇಕ್ ಅಲಿ (ಪ್ರಧಾನ ಸಂಪಾದಕ) ಮತ್ತು ಪ್ರೊ. ಎಸ್. ಚಂದ್ರಶೇಖರ (ಸಂಪುಟ ಸಂಪಾದಕ) ಸಂಪಾದಿಸಿದ ' ಕರ್ನಾಟಕ ಚರಿತ್ರೆ ' ಸಂಪುಟ ೭ (೧೯೯೭) ಇದರಲ್ಲಿ ಗುದ್ಲೆಪ್ಪನವರ ಕುರಿತಾದ ಮಾಹಿತಿ ಇದೆ.

ಡಾ. ಸೂರ್ಯನಾಥ ಕಾಮತ ಸಂಪಾದಿಸಿದ ' ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ' ಪ್ರಥಮ ಹಾಗೂ ತೃತೀಯ ಸಂಪುಟಗಳು (೧೯೯೮, ದ್ವಿತೀಯ ಮುದ್ರಣ) ಹಾಗೂ ಡಾ. ಎಂ. ಎಂ. ಕಲಬುರ್ಗಿ ಮತ್ತು ಡಾ. ಎಸ್. ಎಚ್. ಪಾಟೀಲ ಸಂಪಾದಿಸಿದ ' ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ – ಲಿಂಗಾಯತರ ಪಾತ್ರ ' (೧೯೯೮) ಇವುಗಳಲ್ಲಿ ಗುದ್ಲೆಪ್ಪನವರು ಭಾಗವಹಿಸಿದ ಚಳುವಳಿಗಳ ವಿವರ ಇದೆ.

ಡಾ. ಎಸ್. ಎಚ್. ಪಾಟೀಲ ಅವರ ' Modernisation and Democratic Politics of a Dominant community : A case study of Lingayats in Karnataka ' (Indian Council of Social Sciences Research, New Dehli) (1998) ಎಂಬ ಅಪ್ರಕಟಿತ ವರದಿಯಲ್ಲಿಯೂ ಗುದ್ಲೆಪ್ಪನವರ ಕುರಿತು ವಿವರಗಳು ದೊರೆತವು.

ಡಾ. ಆರ್. ಎಲ್. ಎಂ. ಪಾಟೀಲ ಅವರು ಬರೆದ ' ಜಿ. ವ್ಹಿ. ಹಳ್ಳಿಕೇರಿ ' (೧೯೯೯) ಈ ಕೃತಿಯಲ್ಲಿ ಗುದ್ಲೆಪ್ಪನವರು ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿ ಮತ್ತು ಸಭಾಧ್ಯಕ್ಷರಾಗಿ ಮಾಡಿದ ಭಾಷಣ ಮತ್ತಿತರ ವಿವರಗಳಿವೆ.

ಯಾಸ್ಮಿನ್ ಜಿ. ವಾಲೀಕಾರ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದಪಡಿಸಿದ ಎಂ. ಫಿಲ್ ಪ್ರಬಂಧ ' ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರ ಪಾತ್ರ : ಒಂದು ಅಧ್ಯಯನ ' (೧೯೯೯) ಎಂಬ ಅಪ್ರಕಟಿತ ಪ್ರಬಂಧದಲ್ಲಿ ಗುದ್ಲೆಪ್ಪನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಮಾಡಿದ ಕಾರ್ಯಗಳ ಮಾಹಿತಿ ಇದೆ.

ಡಾ. ಚಂದ್ರಮೌಳಿ ನಾಯ್ಕರ ಬರೆದ ' ಛಲದಂಕಮಲ್ಲ ಹಳ್ಳಿಕೇರಿ ಗುದ್ಲೆಪ್ಪನವರು' (೧೯೯೫) ಹಾಗೂ ಸಿದ್ಧಲಿಂಗ ಪಟ್ಟಣಶೆಟ್ಟಿ ರಚಿಸಿದ ' ಹಳ್ಳಿಕೇರಿ ಗುದ್ಲೆಪ್ಪನವರು ' (೨೦೦೦. ತೃ. ಮು.) ಈ ಕೃತಿಗಳಲ್ಲಿ ಗುದ್ಲೆಪ್ಪನವರ ಬದುಕಿನ ವಿವಿಧ ವಿವರಗಳಿವೆ.

ಎಂ. ಎ. ಸುಬ್ರಮಣ್ಯ ಹಾಗೂ ರಾಮು ಮೂಲಗಿ ಸಂಕಲಿಸಿದ ' ಜನನಾಯಕ ಹಳ್ಳಿಕೇರಿ ಗುದ್ಲೆಪ್ಪ ' (೨೦೦೦) ಈ ಕೃತಿಯಲ್ಲಿ ಗುದ್ಲೆಪ್ಪನವರ ಕುರಿತು ವಿವಿಧ ಲೇಖಕರು ಬರೆದ ಲೇಖನಗಳಿವೆ.

ಡಾ. ಸರೋಜಿನಿ ಶಿಂತ್ರಿ ಮತ್ತು ಡಾ. ಕೆ. ರಾಘವೇಂದ್ರರಾವ್ ಬರೆದ ' The Iron Man of Karnataka; Hallikeri Gudleppa ' (2000) ಈ ಗ್ರಂಥದಲ್ಲಿ ಗುದ್ಲೆಪ್ಪನವರು ಪಾಲ್ಗೊಂಡ ವಿವಿಧ ಕಾರ್ಯಚಟುವಟಿಕೆಗಳ ಸಚಿತ್ರ ವಿವರಗಳಿವೆ.

ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದ ಕುರಿತಾದ ಗ್ರಂಥಗಳಲ್ಲಿ ಹಾಗೂ ಬಿಡಿ ಲೇಖನಗಳಲ್ಲಿಯೂ ಗುದ್ಲೆಪ್ಪನವರ ಕುರಿತು ವಿವರಗಳು ದೊರೆತವು.

ಕೃತಿಗಳ ಸಮೀಕ್ಷೆ ಮಾಡಿದಾಗ ಕಂಡುಬಂದ ಸಂಗತಿಗಳಿವು : ಅನೇಕ ವಿದ್ವಾಂಸರು ಗುದ್ಲೆಪ್ಪನವರ ಕೆಲವು ಮುಖಗಳ ಬಗ್ಗೆ ಬರೆದಿದ್ದಾರೆ. ಆದರೆ ಗುದ್ಲೆಪ್ಪನವರ ವ್ಯಕ್ತಿತ್ವ ಬಹುಮುಖವಾದ ವ್ಯಕ್ತಿತ್ವ. ಈ ಬಹುಮುಖವಾದ ವ್ಯಕ್ತಿತ್ವವನ್ನು ಕುರಿತು ಸಮಗ್ರವಾದಂತಹ ಸಂಶೋಧನಾತ್ಮಕವಾದಂತಹ ಅಧ್ಯಯನವನ್ನು ಯಾರೂ ಈ ವರೆಗೆ ಮಾಡಿಲ್ಲ. ಈ ದೃಷ್ಟಿಯಿಂದ ಆ ಕೊರತೆ ತುಂಬುವ ಸಲುವಾಗಿ ಸಮಗ್ರವಾದ ಸಂಶೋಧನಾತ್ಮಕವಾದಂತಹ ಒಂದು ಅಧ್ಯಯನವನ್ನು ಗುದ್ಲೆಪ್ಪ ಹಳ್ಳಿಕೇರಿಯವರ ಬಗೆಗೆ ಕೈಕೊಂಡು ಸೈದ್ಧಾಂತಿಕ ಚೌಕಟ್ಟಿನಲ್ಲಿ ವಿಶ್ಲೇಷಿಸಲಾಗಿದೆ.

ಗುದ್ಲೆಪ್ಪನವರ ಬಗ್ಗೆ ಬರೆದ ಗ್ರಂಥಗಳಲ್ಲಿ ಉಲ್ಲೇಖಿಸದೇ ಇರುವ ಅನೇಕ ಮಹತ್ವದ ಸಂಗತಿಗಳು ನನಗೆ ದೊರೆತವು. ಬೇರೆ ಬೇರೆ ಪುಸ್ತಕಗಳನ್ನು ಅಭ್ಯಸಿಸಿದಾಗ ಮತ್ತು ಅನೇಕ ಜನರನ್ನು ಸಂದರ್ಶಿಸಿದಾಗ ಇವು ತಿಳಿದು ಬಂದವು. ಅವುಗಳನ್ನು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಅವು ಇಂತಿವೆ :

೧) ಜವಾಬ್ದಾರಿ ಸರಕಾರದ ಸ್ಥಾಪನೆಗಾಗಿ ಹೋರಾಟ

೨) ಹೈದರಾಬಾದ ವಿಮೋಚನಾ ಹೋರಾಟ

೩) ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸುವುದಕ್ಕಾಗಿ ಹೋರಾಟ

೪) ಗೋವಾ ವಿಮೋಚನಾ ಹೋರಾಟ

ಹೀಗೆ ಗುದ್ಲೆಪ್ಪನವರು ಜೀವನ ಪರ್ಯಂತ ಹೋರಾಟಗಳಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿದ್ದರೆಂಬುದು ವಿದಿತವಾಗುತ್ತದೆ.

ಒಟ್ಟಿನಲ್ಲಿ ಹೇಳಬೇಕೆಂದರೆ. ಗುದ್ಲೆಪ್ಪನವರ ಬಹುಮುಖ ವ್ಯಕ್ತಿತ್ವದ ಬಗ್ಗೆ ಸಮಗ್ರ ಸಾಹಿತ್ಯವನ್ನು ಸಂಗ್ರಹಿಸಿ ಒಂದು ಸೈದ್ಧಾಂತಿಕ ಚೌಕಟ್ಟಿನೊಳಗೆ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ವಿಶೇಷವೇನೆಂದರೆ ಗುದ್ಲೆಪ್ಪನವರ

ಬಗ್ಗೆ ಅನೇಕ ಅಪ್ರಕಟಿತ ಮತ್ತು ಅಧ್ಯಯನವಾಗದೆ ಇದ್ದಂತಹ ಮಾಹಿತಿಗಳನ್ನು ಸಂಗ್ರಹಿಸಿ ವಿಷಯದ ಹರಹನ್ನು ಇಲ್ಲಿ ಹೆಚ್ಚಿಸಲಾಗಿದೆ.

ಅಧ್ಯಯನದ ಗುರಿಗಳು :

ಈ ಅಧ್ಯಯನದ ಗುರಿಗಳು ಇಂತಿವೆ :

೧) ಸ್ವಾತಂತ್ರ್ಯ ಹೋರಾಟದ ಪ್ರಭಾವ ಉದಯೋನ್ಮುಖ ನಾಯಕರ ಮೇಲೆ ಯಾವ ರೀತಿ ಆಗುತ್ತದೆ ಎನ್ನುವದನ್ನು ತಿಳಿಯುವದು.

೨) ಬಹುಮುಖ ವ್ಯಕ್ತಿತ್ವವಿರುವ ಗಾಂಧೀಜಿಯವರ ನಾಯಕತ್ವ ಉದಯೋನ್ಮುಖ ನಾಯಕರ ಮೇಲೆ ಯಾವ ಪ್ರಭಾವ ಬೀರುತ್ತದೆ ಎನ್ನುವದು.

೩) ಸ್ವಾತಂತ್ರ್ಯ ಹೋರಾಟ ಮತ್ತು ಗಾಂಧೀಜಿಯವರ ಪ್ರಭಾವ ಗ್ರಾಮಾಂತರ ಪ್ರದೇಶದಲ್ಲಿ ನಾಯಕತ್ವ ಹೊಂದಿದ ಯುವಕರ ಮೇಲೆ ಯಾವ ತರಹದ ಪ್ರಭಾವ ಬೀರುತ್ತದೆ ಎನ್ನುವದರ ವಿಶ್ಲೇಷಣೆ.

೪) ಈ ಗ್ರಾಮಾಂತರ ನಾಯಕರು ಇಂತಹ ಪರಿಸರದಲ್ಲಿ ತಮ್ಮನ್ನು ತಾವೇ ಯಾವ ರೀತಿಯಲ್ಲಿ ರೂಪಿಸಿಕೊಳ್ಳುತ್ತಾರೆನ್ನುವದು.

೫) ಇಂಥ ಉದಯೋನ್ಮುಖ ನಾಯಕರು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುವ ಸಂಘಟನೆ, ಸ್ವಾತಂತ್ರ್ಯ ಹೋರಾಟ, ಗಾಂಧೀಜಿಯವರ ರಚನಾತ್ಮಕ ಕಾರ್ಯಗಳ ಪ್ರಚಾರ ಹಾಗೂ ಅವುಗಳ ಅನುಷ್ಠಾನವನ್ನು ತಿಳಿಯುವದು.

ಊಹೆಗಳು :

೧) ಸ್ವಾತಂತ್ರ್ಯ ಹೋರಾಟ ಸಮಗ್ರವಾದಾಗ ಅದರ ಪ್ರಭಾವ ಉದಯೋನ್ಮುಖ ನಾಯಕರ ಮೇಲೆ ಆಗುತ್ತದೆ.

೨) ಬಹುಮುಖ ವ್ಯಕ್ತಿತ್ವವಿರುವ ಗಾಂಧೀಜಿಯವರ ನಾಯಕತ್ವ ಉದಯೋನ್ಮುಖ ನಾಯಕರ ಮೇಲೆ ತನ್ನ ಪ್ರಭಾವ ಬೀರಿರುತ್ತದೆ.

೩) ಸ್ವಾತಂತ್ರ್ಯ ಚಳುವಳಿ ಮತ್ತು ಗಾಂಧೀಜಿಯವರ ಪ್ರಭಾವ ಯುವ ನಾಯಕರ ಮೇಲೆ ವಿವಿಧ ರೀತಿಯ ಪರಿಣಾಮವನ್ನು ಬೀರಿದೆ.

೪) ಇಂತಹ ಪ್ರಭಾವಕ್ಕೆ (ಸ್ವಾತಂತ್ರ್ಯ ಹೋರಾಟ ಮತ್ತು ಗಾಂಧೀಜಿ) ಒಳಗಾದ ನಾಯಕರು ತಮ್ಮನ್ನು ಸಮಯಕ್ಕನುಸಾರವಾಗಿ ರೂಪಿಸಿಕೊಳ್ಳುತ್ತಾರೆ.

೫) ಈ ಉದಯೋನ್ಮುಖ ನಾಯಕರು ಗ್ರಾಮಾಂತರ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಬೇರುಗಳಿಳಿದು ಗಟ್ಟಿಯಾಗಿ ವ್ಯಾಪಕವಾಗುವಂತೆ ಮಾಡುತ್ತಾರೆ ಹಾಗೂ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ಪ್ರಚಾರಗೊಳಿಸಿ, ಅನುಷ್ಠಾನಗೊಳಿಸುವಲ್ಲಿ ಪ್ರಯತ್ನ ಮಾಡುತ್ತಾರೆ.

ಅಧ್ಯಯನದ ಪದ್ಧತಿ :

ಈ ಅಧ್ಯಯನದಲ್ಲಿ ಎರಡು ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಗಿದೆ.

೧) ಐತಿಹಾಸಿಕ ಪದ್ಧತಿ : ಗುದ್ಲೆಪ್ಪನವರು ಸ್ವಾತಂತ್ರ ಹೋರಾಟ, ಕರ್ನಾಟಕ ಏಕೀಕರಣ ಮತ್ತು ಇನ್ನಿತರ ಹೋರಾಟಗಳಲ್ಲಿ ಅವಿಭಾಜ್ಯ ಅಂಗವಾಗಿ ಕಾರ್ಯ ಮಾಡಿದ್ದಾರೆ. ಅವುಗಳೆಲ್ಲ ಭಾರತದ ಆಧುನಿಕ ಇತಿಹಾಸದ ಮಹತ್ವದ ಭಾಗಗಳಾಗಿವೆ. ಆ ದೃಷ್ಟಿಯಿಂದ ಗುದ್ಲೆಪ್ಪನವರ ನಾಯಕತ್ವದ ಬೆಳವಣಿಗೆ ಮತ್ತು ಅವರ ಚಟುವಟಿಕೆಗಳನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

೨) ನಾಯಕತ್ವ ಸಿದ್ಧಾಂತ : ಗುದ್ಲೆಪ್ಪನವರ ವ್ಯಕ್ತಿತ್ವವನ್ನು ನಾಯಕತ್ವ ಸಿದ್ಧಾಂತಗಳ ಚೌಕಟ್ಟಿನೊಳಗೆ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಯನ್ನು ೩ ಸಿದ್ಧಾಂತಗಳ ತಳಹದಿಯ ಮೇಲೆ ಮಾಡಲಾಗಿದೆ. ಅವು ಯಾವುವೆಂದರೆ–

೧) ವಿಶಿಷ್ಟ ಗುಣ ಸಿದ್ಧಾಂತ (Traits theory)

೨) ವರ್ತನಾ ಸಿದ್ಧಾಂತ (Behaviorial theory)

೩) ಸನ್ನಿವೇಶದ ಸಿದ್ಧಾಂತ (Situational theory)

ಈ ಸಂಶೋಧನೆಗೆ ಬೇಕಾದಂತಹ ವಿಷಯವನ್ನು ಎರಡು ರೀತಿಯಲ್ಲಿ ಸಂಗ್ರಹಿಸಲಾಗಿದೆ. ೧) ಗುದ್ಲೆಪ್ಪನವರ ಬಗ್ಗೆ ಪ್ರಕಟಿತ– ಅಪ್ರಕಟಿತ ಸಾಹಿತ್ಯವನ್ನು ಸಂಗ್ರಹಿಸಲಾಯಿತು ೨) ಹಳ್ಳಿಕೇರಿಯವರ ಧರ್ಮಪತ್ನಿ, ಮಕ್ಕಳು, ಸಂಬಂಧಿಕರು ಮತ್ತು ಅವರ ಜೊತೆಗೆ ಕಾರ್ಯ ಮಾಡಿದ ಸಹೋದ್ಯೋಗಿಗಳನ್ನು ಮುಕ್ತ ಪ್ರಶ್ನಾವಾಳಿಯ ಮುಖಾಂತರ ಸಂದರ್ಶಿಸಿ ವಿಷಯವನ್ನು ಸಂಗ್ರಹಿಸಲಾಯಿತು. (ಮುಕ್ತ ಪ್ರಶ್ನಾವಳಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.)

ಈ ರೀತಿಯಾಗಿ ಸಂಗ್ರಹಿಸಿದ ವಿಷಯಗಳನ್ನು ವಿಶ್ಲೇಷಿಸಿ ಎಂಟು ಅಧ್ಯಾಯಗಳಲ್ಲಿ ಬರೆಯಲಾಗಿದೆ. ಅಧ್ಯಾಯಗಳ ಸಾರಾಂಶವನ್ನೂ ಕೊಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಸ್ವಾತಂತ್ರ್ಯ ಹೋರಾಟ ಮತ್ತು ಗಾಂಧೀಜಿಯವರ ಪ್ರಭಾವದ ಹಿನ್ನೆಲೆಯಲ್ಲಿ ಗುದ್ಲೆಪ್ಪನವರ ನಾಯಕತ್ವದ ಬೆಳವಣಿಗೆ, ಸ್ವಾತಂತ್ರ್ಯ ಚಳುವಳಿ, ಗಾಂಧೀಜಿಯವರ ರಚನಾತ್ಮಕ ಕಾರ್ಯ, ಕರ್ನಾಟಕ ಏಕೀಕರಣ, ವಿವಿಧ ಹೋರಾಟಗಳಲ್ಲಿ ವಹಿಸಿದ ಪಾತ್ರ, ಕಾಂಗ್ರೆಸ್ ಪಕ್ಷದ ಸಂಘಟನೆ, ಸಾಮಾಜಿಕ -ಶೈಕ್ಷಣಿಕ - ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ, ವಿಧಾನ ಪರಿಷತ್ ಸದಸ್ಯರಾಗಿ ಮತ್ತು ಸಭಾಪತಿಯಾಗಿ ನಿರ್ವಹಿಸಿದ ಕಾರ್ಯ ಮುಂತಾದವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇದು ನಾಯಕತ್ವದ ಬೆಳವಣಿಗೆ ಮತ್ತು ನಾಯಕನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ವಿವರಿಸುವ ಒಂದು ಅಧ್ಯಯನವಾಗಿದೆ.

ಅಧ್ಯಯನದ ಯೋಜನೆ :

ಪ್ರಸ್ತುತ ಅಧ್ಯಯನವನ್ನು ಕ್ರಮಬದ್ಧವಾಗಿ ಎಂಟು ಅಧ್ಯಾಯಗಳಲ್ಲಿ ವಿಭಜಿಸಲಾಗಿದೆ. ಮೊದಲಿಗೆ ಅಧ್ಯಯನದ ಉದ್ದೇಶ ಮತ್ತು ಪದ್ಧತಿಯನ್ನು ವಿವರಿಸಲಾಗಿದೆ.

ಒಂದನೆಯ ಅಧ್ಯಾಯದಲ್ಲಿ ನಾಯಕತ್ವದ ಸಿದ್ಧಾಂತ. ಗುದ್ಲೆಪ್ಪನವರ ನಾಯಕತ್ವದ ಬೆಳವಣಿಗೆಗೆ ಪೂರಕವಾದ ಪರಿಸರ ಮತ್ತು ವ್ಯಕ್ತಿಗಳ ಪ್ರಭಾವವನ್ನು ನಿರೂಪಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸ್ವಾತಂತ್ರ್ಯದ ಪ್ರಮುಖ ಚಳುವಳಿಯ ಅಂಗವಾಗಿ ಗುದ್ಲೆಪ್ಪನವರು ಕೈಕೊಂಡ ಹೋರಾಟಗಳು ಹಾಗೂ ವಿಧಾಯಕ ಕಾರ್ಯಗಳ ಚಿತ್ರಣವನ್ನು ನೀಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಕರ್ನಾಟಕ ಏಕೀಕರಣ ಚಳುವಳಿ ಮತ್ತು ಇತರ ಹೋರಾಟಗಳಲ್ಲಿ ಅವರು ವಹಿಸಿದ ಪಾತ್ರದ ವಿವರಗಳಿವೆ.

ನಾಲ್ಕನೆಯ ಅಧ್ಯಾಯವು ಕಾಂಗ್ರೆಸ್ ಪಕ್ಷದ ಸಂಘಟನೆ. ಪಕ್ಷದಲ್ಲಿಯ ಅವರ ಸ್ಥಾನಮಾನ ಹಾಗೂ ಅವರ ಕಾರ್ಯಶೀಲತೆಯ ಕುರಿತಾಗಿದೆ.

ಐದನೆಯ ಅಧ್ಯಾಯದಲ್ಲಿ ಸಾಮಾಜಿಕ. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವೆಯ ವಿವಿಧ ಮಗ್ಗುಲುಗಳನ್ನು ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ವಿಧಾನ ಪರಿಷತ್ತಿನಲ್ಲಿ ಗುದ್ಲೆಪ್ಪನವರ ಕಾರ್ಯವೈಖರಿಯ ನಿರೂಪಣೆಯಿದೆ.

ಏಳನೆಯ ಅಧ್ಯಾಯದಲ್ಲಿ ಗುದ್ಲೆಪ್ಪನವರ ಬದುಕಿನ ಅಂತಿಮ ದಿನಗಳ ಚಿತ್ರಣವಿದೆ.

ಕೊನೆಯ ಎಂಟನೆಯ ಅಧ್ಯಾಯ ಸಮಾರೋಪದಲ್ಲಿ ಸಮಗ್ರ ಅಧ್ಯಯನದ ಸಾರಾಂಶವನ್ನು ವಿವರಿಸಲಾಗಿದೆ.

ಈ ರೀತಿ ಎಂಟು ಅಧ್ಯಾಯಗಳ ವ್ಯಾಪ್ತಿಯಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರ ರಾಜಕೀಯ ಜೀವನ ಮತ್ತು ಸಾಧನೆಗಳನ್ನು ಅಧ್ಯಯನಿಸಲಾಗಿದೆ.

अध्याय ಒಂದು

ನಾಯಕತ್ವದ ಬೆಳವಣಿಗೆ

ಅಧ್ಯಾಯ ಒಂದು

ನಾಯಕತ್ವದ ಬೆಳವಣಿಗೆ

ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರ ರಾಜಕೀಯ ಜೀವನ ಮತ್ತು ಸಾಧನೆಯ ಬಗ್ಗೆ ಅಧ್ಯಯನಿಸುವಾಗ ಮೊದಲಿಗೆ ನಾಯಕತ್ವದ ಸಿದ್ಧಾಂತಗಳ ಕುರಿತು ಸಂಕ್ಷಿಪ್ತದಲ್ಲಿ ತಿಳಿದುಕೊಂಡು ಮುಂದುವರಿಯೋಣ.

ಸಂಕೀರ್ಣ ಸಮಾಜದಲ್ಲಿ ನಾಯಕತ್ವವಿಲ್ಲದ ಕ್ಷೇತ್ರವಿಲ್ಲ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಸಮರ್ಥ ನಾಯಕತ್ವವಿದ್ದರೆ ಆಯಾ ಕ್ಷೇತ್ರಗಳು ಕ್ಷಿಪ್ರಗತಿಯಲ್ಲಿ ಪ್ರಗತಿ ಹೊಂದಿ ನಿರ್ದಿಷ್ಟ ಗುರಿ ಸಾಧಿಸಲು ಶಕ್ಯವಾಗುತ್ತದೆ. ಸಮರ್ಥ ನಾಯಕತ್ವವಿಲ್ಲದ ಕ್ಷೇತ್ರ ಪ್ರಗತಿ ವಿಹೀನವಾಗಿ ಬರಡಾಗುವದು.

ಜನ ಸಂಘಟನೆಯ ವಿಧಾಯಕ ಕಾರ್ಯದಲ್ಲಿ ನಾಯಕತ್ವದ ಅಂಶ ಅತ್ಯಂತ ಮಹತ್ವದ್ದಾಗಿದೆ. ಜನರ ಮೇಲೆ ಬೀರುವ ಪ್ರಭಾವವು ನಾಯಕತ್ವದ ಭದ್ರ ಅಡಿಗಲ್ಲಾಗಿದೆ.

ಜನಸಮ್ಮತ ಅಧಿಕಾರವು ಆಕರ್ಷಣೆ, ಒಬ್ಬರಿಂದ ಒಬ್ಬರಿಗೆ ಮಾಡುವ ಮನವಿಯ ಆಧಾರದ ಮೇಲೆ ನಿಂತಿರುತ್ತದೆ. ಆಕರ್ಷಿಸುವ ಮತ್ತು ಪ್ರೇರೇಪಿಸುವ ವಿಶೇಷ ಗುಣಗಳಿಂದಾಗಿ ನಾಯಕನನ್ನು ಜನರು ಗೌರವಿಸುವರು. ನಾಯಕತ್ವ ಎಂದರೆ ಒಬ್ಬರ ಅಥವಾ ಅನೇಕ ಜನರ ನಡುವಿನ ಸಂಬಂಧವಾಗಿದೆ. ಒಂದು ಒಳ್ಳೆಯ ಗುರಿ ಸಾಧನೆಯಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಬೀರುವ ಪ್ರಭಾವವನ್ನು ಅವಲಂಬಿಸಿದೆ.[೧]

ನಾಯಕರು ಹುಟ್ಟುತ್ತಾರೆಯೋ ಅಥವಾ ನಿರ್ಮಾಣವಾಗುತ್ತಾರೆಯೋ ಎಂಬ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ನಾಯಕನ ಗುಣಲಕ್ಷಣಗಳು ಹುಟ್ಟಿನಿಂದಲೇ ಬಂದಿರುತ್ತವೆ ಮತ್ತು ನಿರ್ಮಾಣವಾಗುವುದಿಲ್ಲವೆಂದು ಕೆಲವರ ಅಭಿಮತ. ನಾಯಕನ ಗುಣಗಳನ್ನು ಕಠಿಣ ಪರಿಶ್ರಮದಿಂದ, ಸತತ ಪ್ರಯತ್ನದಿಂದ ಸಂಪಾದಿಸಬಹುದು. ಆದುದರಿಂದ ಹುಟ್ಟಿನಿಂದ ಬಂದಿರದಿದ್ದರೂ ಸಂಪಾದಿಸಿ ನಾಯಕರಾಗಬಹುದೆಂದು ಇನ್ನು ಕೆಲವು ತಜ್ಞರ ಅಭಿಪ್ರಾಯ. ಆದರೆ ಎಲ್ಲ ವ್ಯಕ್ತಿಗಳಿಗೂ ಇದು ಸಾಧ್ಯವಿಲ್ಲ. ಆದುದರಿಂದ ನಾಯಕತ್ವವು ಹುಟ್ಟಿನಿಂದಲೇ ಬಂದಿರುತ್ತದೆ ಮತ್ತು ಸಂಪಾದಿಸಲೂ ಸಾಧ್ಯವೆಂದು ಹೇಳಬಹುದಾಗಿದೆ.

ವಿದ್ವಾಂಸರು ನಾಯಕತ್ವವನ್ನು ಮೂರು ಬಗೆಯ ಸಿದ್ಧಾಂತಗಳಲ್ಲಿ ಅಧ್ಯಯನಿಸಿದ್ದಾರೆ– ೧) ವಿಶಿಷ್ಟ ಗುಣ ಸಿದ್ಧಾಂತ (Trait Theory), ೨) ವರ್ತನಾ ಸಿದ್ಧಾಂತ (Behavioural Theory), ೩) ಸನ್ನಿವೇಶದ ಸಿದ್ಧಾಂತ (Situational Theory).

೧. ವಿಶಿಷ್ಟ ಗುಣ ಸಿದ್ಧಾಂತ (TRAIT THEORY)

ನಾಯಕತ್ವದ ಅಧ್ಯಯನಗಳು ನಾಯಕನ ವಿಶಿಷ್ಟ ಗುಣಗಳ ಮೇಲೆ ಬೆಳಕು ಬೀರುತ್ತವೆ. ಯಶಸ್ವಿ ಧುರೀಣನ ಚರಿತ್ರೆ, ವ್ಯಕ್ತಿತ್ವ, ಭಾವನಾತ್ಮಕ, ದೈಹಿಕ, ಬೌದ್ಧಿಕ ಮತ್ತಿತರ ವೈಯಕ್ತಿಕ ಗುಣಗಳ ಬಗ್ಗೆ ಸಂಶೋಧಕರು ವ್ಯಾಪಕ ಅಧ್ಯಯನ ನಡೆಸಿದ್ದಾರೆ. ಈ ಸಂಶೋಧನೆಯನ್ನು ಅವಲೋಕಿಸುತ್ತ ಸ್ಟಾಗ್‌ಡಿಲ್ ಅವರು ಆರು ವಿಶಾಲ ವಿಭಾಗಗಳ ತಳಹದಿಯಲ್ಲಿ ನಾಯಕತ್ವವನ್ನು ವಿಶ್ಲೇಷಿಸಿದ್ದಾರೆ. [೨]

೧. ದೈಹಿಕ ಲಕ್ಷಣಗಳು, ೨. ಸಾಮಾಜಿಕ ಹಿನ್ನೆಲೆ, ೩. ಬುದ್ಧಿಮತ್ತೆ, ೪. ವ್ಯಕ್ತಿತ್ವ, ೫. ಕಾರ್ಯಕ್ಕೆ ಸಂಬಂಧಿಸಿದ ಲಕ್ಷಣಗಳು, ೬. ಸಾಮಾಜಿಕ ಲಕ್ಷಣಗಳು.

೧. ದೈಹಿಕ ಲಕ್ಷಣಗಳು (Physical Characteristics) :

ಎತ್ತರ ಮತ್ತು ಭಾರ ಇವು ನಾಯಕತ್ವದ ಪ್ರಾರಂಭಿಕ ಸಂಶೋಧನೆಯಲ್ಲಿ ಪರಿಗಣಿಸಲ್ಪಟ್ಟಿವೆ. ಇಂಥ ದೈಹಿಕ ಲಕ್ಷಣಗಳು ಕೆಲವು ವ್ಯಕ್ತಿಗಳಲ್ಲಿ, ಕೆಲವು ಸಂದರ್ಭಗಳಲ್ಲಿ ಪರಿಣಾಮಕಾರಿ ಎನಿಸಲಿಕ್ಕಿಲ್ಲ.

೨. ಸಾಮಾಜಿಕ ಹಿನ್ನೆಲೆ (Social Background) :

ನಾಯಕನ ಸಮಾಜೋ ಆರ್ಥಿಕ ಹಿನ್ನೆಲೆಯ ಅಧ್ಯಯನವು ಶಿಕ್ಷಣ, ಸಮಾಜದಲ್ಲಿಯ ಸ್ಥಾನಮಾನ ಮತ್ತು ಚಲನಶೀಲತೆಯ ಅಂಶಗಳ ಮೇಲೆ ಬೆಳಕು ಬೀರುತ್ತದೆ. ಉಚ್ಚ ಸಮಾಜೋ ಆರ್ಥಿಕ ಸ್ಥಿತಿಯು ನಾಯಕತ್ವ ಸ್ಥಾನ ಹೊಂದಲು ಒಂದು ಒಳ್ಳೆಯ ಪ್ರಯೋಜನಕಾರಿ ಅಂಶವಾಗಿದೆ.

೩. ಬುದ್ಧಿಮತ್ತೆ (Intelligence) :

ನಾಯಕತ್ವ ಮತ್ತು ಬುದ್ಧಿಮತ್ತೆ ಇವುಗಳ ನಡುವಿನ ಸಂಬಂಧದ ಬಗ್ಗೆ ನಡೆದ ಅಧ್ಯಯನವು ಈ ಅಂಶಗಳನ್ನು ಸೂಚಿಸುತ್ತವೆ: ನಾಯಕರು ಉತ್ಕೃಷ್ಟ ಮಟ್ಟದ ತೀರ್ಪು, ನಿರ್ಣಾಯಕತ್ವ, ಜ್ಞಾನ ಮತ್ತು ನಿರರ್ಗಳ ವಾಗ್ವೈಖರಿ ಉಳ್ಳವರಾಗಿರಬೇಕು. ಇಷ್ಟೇ ಸಾಲದು ಇನ್ನಿತರ ಅಂಶಗಳನ್ನೂ ಪರಿಗಣಿಸಬೇಕಾಗುತ್ತದೆ.

೪. ವ್ಯಕ್ತಿತ್ವ (Personality) :

ಪರಿಣಾಮಕಾರಿ ನಾಯಕನಲ್ಲಿ ವ್ಯಕ್ತಿತ್ವದ ಈ ವಿಶೇಷ ಗುಣಗಳಿರಬೇಕು : ಜಾಗರೂಕತೆ, ಆತ್ಮವಿಶ್ವಾಸ, ವೈಯಕ್ತಿಕ ಪ್ರಾಮಾಣಿಕತೆ, ಸ್ವಯಂ ಭರವಸೆ ಮತ್ತು ಪ್ರಭುತ್ವ.

೫. ಕಾರ್ಯಕ್ಕೆ ಸಂಬಂಧಿಸಿದ ಲಕ್ಷಣಗಳು (Task-related Characteristics) :

ನಾಯಕನಾದವನು ಗುರಿ ಸಾಧನೆಯ ಅವಶ್ಯಕತೆ, ಹೊಣೆಗಾರಿಕೆ, ಸಾಧನೆಯಲ್ಲಿ ಮೊದಲ ಹೆಜ್ಜೆ, ಪ್ರೇರಕ ಶಕ್ತಿ ಮುಂತಾದ ಲಕ್ಷಣಗಳನ್ನು ಹೊಂದಿರಬೇಕು.

೬. ಸಾಮಾಜಿಕ ಲಕ್ಷಣಗಳು (Social Characteristics) :

ನಾಯಕನಾದವನು ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವನಾಗಿರಬೇಕು. ಇತರರೊಂದಿಗೆ ಸಹಕರಿಸುವವನಾಗಿರಬೇಕು. ಇಂಥ ವೈಯಕ್ತಿಕ ಜೀವನ ಕಲೆಯನ್ನು ಜನಸಮೂಹವು ಅಳೆಯುತ್ತದೆ. ಸಾಮರಸ್ಯ, ನಂಬಿಗೆ ಹಾಗೂ ಪರಸ್ಪರ ಹೊಂದಾಣಿಕೆಯಂತಹ ಗುಣಗಳನ್ನು ನಿರೀಕ್ಷಿಸುತ್ತದೆ.

ವ್ಯಕ್ತಿಯಲ್ಲಿ ಈ ಕೆಲವೊಂದು ಗುಣಗಳಿದ್ದರೂ ವಿಶಿಷ್ಟ ಸನ್ನಿವೇಶ ನಿರ್ಮಾಣವಾಗುವವರೆಗೂ ಅವು ಪ್ರಕಟಗೊಳ್ಳುವುದಿಲ್ಲ. ಗುಣಗಳಿಗೂ ನಾಯಕನ ಕೃತಿಗಳಿಗೂ ನಿಜವಾದ ಸಂಬಂಧ ಕಾಣಬರುವುದಿಲ್ಲ. ಕೆಲವು ಗುಣಲಕ್ಷಣಗಳ ಮೂಲಕ ಒಬ್ಬ ವ್ಯಕ್ತಿಯು ಒಂದು ಸನ್ನಿವೇಶದಲ್ಲಿ ಯಶಸ್ವಿ ನಾಯಕನಾಗಿ ಹೊರಹೊಮ್ಮಬಹುದು. ಆದರೆ ಇನ್ನೊಂದು ಸನ್ನಿವೇಶದಲ್ಲಿ ಅವನು ವಿಫಲನಾಗಬಹುದು.

ಒಬ್ಬ ವ್ಯಕ್ತಿಯು ನಾಯಕನಾದ ನಂತರ ಅವನಲ್ಲಿರುವ ಗುಣಗಳನ್ನು ಗುರುತಿಸಲಾಗುತ್ತದೆಯೇ ವಿನಾ ಇಂಥ ಗುಣಗಳಿದ್ದವರೆಲ್ಲರೂ ಯಶಸ್ವಿ ನಾಯಕರಾಗುತ್ತಾರೆಂದು ನಿರ್ಣಯಿಸುವುದು ಕಠಿಣ.

ಆದರೂ ಸಾಮಾನ್ಯವಾಗಿ ನಾಯಕರು ಯಶಸ್ವಿಯಾಗಬೇಕಾದರೆ ಅವರಲ್ಲಿ ಕೆಲವು ಮೂಲಭೂತ ಗುಣಗಳು ಇರಬೇಕಾಗುತ್ತವೆ. ಬುದ್ಧಿಮತ್ತೆ ಕಾರ್ಯನಿರ್ವಹಿಸುವ ಪ್ರವೃತ್ತಿ, ಮುಂಧೋರಣೆ, ಬೌದ್ಧಿಕ ಮತ್ತು ದೈಹಿಕ ವಿಕಾಸ, ಹೊಣೆಗಾರಿಕೆ, ಬಿಚ್ಚುಮನಸ್ಸು, ಆತ್ಮವಿಶ್ವಾಸ, ಮಾನವೀಯ ಸಂಬಂಧದ ಪ್ರವೃತ್ತಿ ಮುಂತಾದ ಗುಣಗಳಿರಬೇಕಾಗುತ್ತದೆ.

೨. ವರ್ತನಾ ಸಿದ್ಧಾಂತ (BEHAVIOURAL THEORY)

ಶ್ರೇಷ್ಠ ನಾಯಕನು ಸಂದರ್ಭ ಸನ್ನಿವೇಶಗಳಿಗನುಗುಣವಾಗಿ ಹೇಗೆ ನಡೆದುಕೊಳ್ಳುತ್ತಾನೆಂಬುದನ್ನು ಈ ಸಿದ್ಧಾಂತವು ನಿರೂಪಿಸುತ್ತದೆ.

ಪರಿಣಾಮಕಾರಿ ನಾಯಕರು ವ್ಯಕ್ತಿಗಳನ್ನು ಅಥವಾ ಸಮೂಹವನ್ನು ನಿರ್ದಿಷ್ಟ ಗುರಿಸಾಧನೆಗಾಗಿ ಒಂದು ಬಗೆಯ ಶೈಲಿ (style) ಯನ್ನು ಹೊಂದಿರುತ್ತಾರೆ. ಇದನ್ನು 'ನಾಯಕತ್ವದ ಶೈಲಿ' ಎನ್ನಬಹುದು. ಜನರಿಗೆ ವಹಿಸಿಕೊಟ್ಟ ಕಾರ್ಯಸಾಧನೆಗಾಗಿ ನಿರ್ಣಯಗಳನ್ನು ಕೈಕೊಳ್ಳುವಲ್ಲಿ ನಾಯಕನು ತನ್ನದೆಯಾದ ವಿಶಿಷ್ಟ ಶೈಲಿಯಿಂದ ಜನರನ್ನು ಹುರಿದುಂಬಿಸುವನು. ಸ್ವತಃ ತಾನೂ ಅದರಂತೆ ಮೊದಲು ನಡೆದುಕೊಂಡು ಇತರರಿಗೆ ಮಾದರಿಯಾಗುವನು.[೩]

ನಾಯಕನಾದವನು ಬೇರೆ ಬೇರೆ ಸನ್ನಿವೇಶದಲ್ಲಿ ಬೇರೆ ಬೇರೆ ಶೈಲಿಗಳನ್ನು ಅನುಸರಿಸುತ್ತಾನೆ. ಇಂಥ ಶೈಲಿಯು ನಾಯಕನ ವ್ಯಕ್ತಿತ್ವ, ಅನುಭವ, ಮೌಲ್ಯ, ವ್ಯವಸ್ಥೆ ಹಾಗೂ ಅನುಯಾಯಿಗಳ ಸ್ವಭಾವ, ಪರಿಸರದ ಸ್ವರೂಪಗಳನ್ನು ಅವಲಂಬಿಸಿದೆ.

ನಾಯಕತ್ವದ ಶೈಲಿಗಳಲ್ಲೊಂದಾದ ಪ್ರಜಾಪ್ರಭುತ್ವದ ಶೈಲಿ (Democratic style) ಯನ್ನು ಹೊಂದಿದ ನಾಯಕನು ತನ್ನ ಅನುಯಾಯಿಗಳೊಂದಿಗೆ ವಿಚಾರ ವಿನಿಮಯ ಮಾಡಿ ಧೋರಣೆಗಳನ್ನು ರೂಪಿಸುತ್ತಾನೆ ಹಾಗೂ ಆದೇಶಗಳನ್ನು ನೀಡುತ್ತಾನೆ. ನಿರ್ಣಯಗಳನ್ನು ಕೈಕೊಳ್ಳುತ್ತಾನೆ. ಕೈಕೊಂಡ ಕಾರ್ಯದ ಯಶಸ್ಸಿಗೆ ಅಥವಾ ವಿಫಲತೆಗೆ ಎಲ್ಲರೂ ಭಾಗಿಗಳಾಗಿರುತ್ತಾರೆಂಬುದನ್ನು ನಾಯಕನು ಸ್ಪಷ್ಟಪಡಿಸುತ್ತಾನೆ. ಪ್ರಜಾಪ್ರಭುತ್ವ ಶೈಲಿಯ ನಾಯಕನು ಜನತಂತ್ರದ ಮೂಲಕ ಕೆಲಸವನ್ನು ಮಾಡಿಸಿಕೊಳ್ಳುತ್ತಾನೆ.

ಪ್ರಜಾಪ್ರಭುತ್ವ ಶೈಲಿಯ ನಾಯಕತ್ವವು ಆದೇಶ ನೀಡಿದ ರೀತಿ - ನೀತಿಗಳನ್ನು ಅನುಯಾಯಿಗಳು ವಿರೋಧವಿಲ್ಲದೆ ಒಪ್ಪಿಕೊಳ್ಳುವಂತೆ ಮಾಡುತ್ತದೆ. ಬದಲಾವಣೆಗಳಿಗೆ ಅನುಯಾಯಿಗಳು ಸುಲಭವಾಗಿ ಒಪ್ಪಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಅನುಯಾಯಿಗಳು ಕೆಲಸದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುವಂತೆ ಮತ್ತು ಸಂಸ್ಥೆಯ ಹಿತಾಸಕ್ತಿಗಳನ್ನು ರಕ್ಷಿಸುವಂತೆ ಅವರನ್ನು ಪ್ರೇರೇಪಿಸುತ್ತದೆ. ಅನುಯಾಯಿಗಳ ನೈತಿಕ ಮಟ್ಟವನ್ನು ಸುಧಾರಿಸುತ್ತದೆ. ಒಂದು ಬಗೆಯ ಸ್ವಯಂ ನಿಯಂತ್ರಣ ಹಾಗೂ ಸ್ವಯಂ ಸ್ಫೂರ್ತಿಗೆ ಅವಕಾಶ ಮಾಡಿಕೊಡುತ್ತದೆ. ನಾಯಕ ಮತ್ತು ಅನುಯಾಯಿಗಳ ನಡುವೆ ಹಾರ್ದಿಕ ಸಂಬಂಧವನ್ನು ಏರ್ಪಡಿಸುತ್ತದೆ.[೮]

ನಾಯಕನು ತನ್ನ ಸದ್ವರ್ತನೆಯಿಂದ ಉತ್ತಮ ನಾಯಕನೆನಿಸಿಕೊಂಡರೆ ಅನುಯಾಯಿಗಳಿಗೆ ತೃಪ್ತಿ ಸಿಗುತ್ತದೆ. ಅವರೆಲ್ಲರೂ ಅವನನ್ನು ತಮ್ಮ ನಾಯಕನೆಂದು ಅಭಿಮಾನದಿಂದ ಮನಃಪೂರ್ವಕ ಒಪ್ಪಿಕೊಳ್ಳುತ್ತಾರೆ.

ನಾಯಕನಾದವನು ಅನುಯಾಯಿಗಳನ್ನು ಗುರಿ ಸಾಧನೆಯಲ್ಲಿ ಬಳಸುವ ಉಪಕರಣಗಳೆಂದು ಪರಿಗಣಿಸದೆ ಮಾನವೀಯ ಅಂತಃಕರಣದಿಂದ ಸಹಭಾಗಿಗಳೆಂದು ಭಾವಿಸಿ. ಅವರ ಅನುವು ಆಪತ್ತುಗಳಿಗೆ, ಬೇಕು - ಬೇಡಗಳಿಗೆ ಸ್ಪಂದಿಸಬೇಕಾಗುತ್ತದೆ. ಅದರಿಂದ ಅನುಯಾಯಿಗಳಿಗೆ ಉತ್ತೇಜನ ದೊರೆತು ನಿರ್ದಿಷ್ಟ ಗುರಿ ಸಾಧನೆಯಲ್ಲಿ ಹೆಚ್ಚು ಶ್ರದ್ಧೆ, ಉತ್ಸಾಹದಿಂದ ದುಡಿದು ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ.

ನಾಯಕನಾದವನು ಅನುಯಾಯಿಗಳಿಗೆ ಬೋಧಿಸುವ ಆದರ್ಶಗಳನ್ನು ಸ್ವತಃ ಅನುಸರಿಸಿ ಅವರಿಗೆ ಮಾದರಿಯಾಗಬೇಕು. ಅನುಯಾಯಿಗಳು ಸಂಸ್ಥೆಗೆ ಶ್ರದ್ಧೆ, ನಿಷ್ಠೆ ತೋರಬೇಕು. ಮನ ಮುಟ್ಟಿ ದುಡಿಯಬೇಕು ಎಂದೆಲ್ಲ ಬೋಧಿಸಬೇಕಾದರೆ ನಾಯಕನಾದವನು ಅವುಗಳನ್ನು ಸ್ವಯಂ ಕಾರ್ಯಗತ ಮಾಡಿ ತೋರಿಸಬೇಕು. ಅಂದರೆ ಮಾತ್ರ ನಾಯಕನ ಬೋಧನೆಗೆ ಬೆಲೆ ಬರುವುದು. ಒಟ್ಟಿನಲ್ಲಿ ನಾಯಕನು ತನ್ನ ಕ್ರಿಯಾಶೀಲ ವರ್ತನೆಯಿಂದ ಅನುಯಾಯಿಗಳಿಗೆ ಆದರ್ಶಪ್ರಾಯನಾಗಿರಬೇಕು.

೩) ಸನ್ನಿವೇಶದ ಸಿದ್ಧಾಂತ (SITUATIONAL THEORY)

ಒಂದು ನಿರ್ದಿಷ್ಟ ಸನ್ನಿವೇಶಕ್ಕೆ ಹೊಂದಿಕೊಳ್ಳುವ ಕ್ರಿಯಾಶೀಲತೆ ಮತ್ತು ವಿಧೇಯತೆ ನಾಯಕತ್ವದ ಲಕ್ಷಣಗಳಾಗಿವೆ.[೯]

ಈ ಸಿದ್ಧಾಂತದ ಪ್ರಕಾರ ಸನ್ನಿವೇಶವು ನಾಯಕನನ್ನು ನಿರ್ಮಾಣ ಮಾಡುತ್ತದೆ. ವಿಶಿಷ್ಟ ಸನ್ನಿವೇಶದಲ್ಲಿ ವ್ಯಕ್ತಿಯೊಬ್ಬನು ನಾಯಕನಾಗಿ ಆಯ್ಕೆಯಾಗುತ್ತಾನೆ. ಅವರ ಹಿತಾಸಕ್ತಿಗಳನ್ನು ಕಾಪಾಡಲು ಕೆಲಸ ಮಾಡುತ್ತಾನೆ. ಜನಸಮೂಹ ಮತ್ತು ಅವರು ಆಯ್ಕೆ ಮಾಡಿದ ನಾಯಕ ಇವರ ನಡುವೆ ಪರಸ್ಪರ ಅಂತರ ಕ್ರಿಯೆಗಳ ಸಂಬಂಧವಿರುತ್ತದೆ. ನಾಯಕನು ತನ್ನನ್ನು ಆಯ್ಕೆ ಮಾಡಿದ ಜನರ ಹಿತಾಸಕ್ತಿಗಳನ್ನು ವಿಶಿಷ್ಟ ಸನ್ನಿವೇಶದಲ್ಲಿ ಮಾತ್ರ ಕಾಪಾಡಲು ಸಾಧ್ಯವಾಗಬಹುದು.

ಎಲ್ಲ ಕಾಲಕ್ಕೂ ಎಲ್ಲ ಸನ್ನಿವೇಶ ಸಂದರ್ಭಗಳಲ್ಲಿಯೂ ಸಾರ್ವತ್ರಿಕವಾಗಿ ಯಶಸ್ವಿಯಾಗಬಹುದಾದ ನಾಯಕತ್ವವು ಸಾಧ್ಯವಿಲ್ಲವೆಂದು ಈ ಸಿದ್ಧಾಂತವು ಪ್ರತಿಪಾದಿಸುತ್ತದೆ.

ಸನ್ನಿವೇಶ ಹಾಗೂ ಅನುಯಾಯಿಗಳ ಮಧ್ಯೆ ಉದ್ಭವಿಸುವ ವ್ಯತ್ಯಾಸಗಳಿಗೆ ಯಶಸ್ವಿ ನಾಯಕನಾದವನು ತಾನೇ ಹೊಂದಿಕೊಳ್ಳುವವನಾಗಿರಬೇಕು. ಪರಿಣಾಮಕಾರಿ ನಾಯಕತ್ವವು ವ್ಯಕ್ತಿತ್ವ, ವಹಿಸಿದ ಕಾರ್ಯ, ಅಧಿಕಾರ, ದೃಷ್ಟಿಕೋನ ಹಾಗೂ ಗ್ರಹಿಸುವ ಸಾಮರ್ಥ್ಯಗಳ ಸಂಬಂಧವನ್ನು ಅವಲಂಬಿಸಿರುತ್ತದೆ.

ಸನ್ನಿವೇಶದ ಸಿದ್ಧಾಂತವು ಈ ಊಹೆಗಳ ತಳಹದಿಯ ಮೇಲಿದೆ :

೧) ಜನ ಸಮೂಹ ಮತ್ತು ನಾಯಕನ ಮಧ್ಯೆ ಅಸ್ತಿತ್ವದಲ್ಲಿರುವ ಅಂತರ ಕ್ರಿಯಾಶೀಲತೆ.

೨) ತಮ್ಮ ಆಕಾಂಕ್ಷೆಗಳನ್ನು ಈಡೇರಿಸುವ ಸಾಮರ್ಥ್ಯವುಳ್ಳ ನಾಯಕನನ್ನು ಜನರು ಅನುಸರಿಸುತ್ತಾರೆ. ನಾಯಕನು ಸಮೂಹದ ಹಾಗೂ ಸದಸ್ಯರ ಗುರಿಗಳನ್ನು ಸಾಧಿಸುವ ಮಧ್ಯಸ್ಥನಾಗಿ ಪರಿಣಮಿಸುತ್ತಾನೆ.

ಫ್ರೆಡ್ರಿಕ್ ಫಿಡ್ಲರ್ ಪ್ರಕಾರ ನಾಯಕನ ವರ್ತನೆ ಹಾಗೂ ಅವನ ಕಾರ್ಯ ಸಾಧನೆಯ ಮೇಲೆ ಪರಿಣಾಮ ಬೀರುವ ಪ್ರಭಾವಶಾಲಿ ಅಂಶಗಳು ಮುಖ್ಯವಾಗಿ ನಾಲ್ಕು ಇವೆ– ೧. ನಾಯಕನ ಶೈಲಿಯ ನಿಷ್ಕರ್ಷೆ (Leadership style assessment), ೨. ವಹಿಸಿಕೊಟ್ಟ ಕಾರ್ಯದ ರೂಪುರೇಷೆ (Task structure), ೩. ಸಮೂಹದ ವಾತಾವರಣ (Group atmosphere), ೪. ನಾಯಕನ ಸ್ಥಾನಮಾನದ ಅಧಿಕಾರ (Leader's position power). ಮೊದಲನೆಯದು ನಾಯಕನ ಪ್ರೇರಣಾ ಸಾಮರ್ಥ್ಯವನ್ನು ಗುರುತಿಸುತ್ತದೆ. ಉಳಿದ ಮೂರು ಅಂಶಗಳು ನಾಯಕನ ಸನ್ನಿವೇಶದ ಅನುಕೂಲತೆಗಳನ್ನು ವರ್ಣಿಸುತ್ತವೆ. [೬]

ನಾಯಕನಿಗೆ ಅತ್ಯಂತ ಅನುಕೂಲಕರ ಸನ್ನಿವೇಶವೆಂದರೆ ನಾಯಕನ ಸ್ಥಾನಮಾನದ ಅಧಿಕಾರ ಉನ್ನತವಾಗಿರಬೇಕು. ವಹಿಸಿಕೊಟ್ಟ ಕಾರ್ಯದ ರೂಪುರೇಷೆ ಸ್ಪಷ್ಟವಿರಬೇಕು. ನಾಯಕನ ಮತ್ತು ಅನುಯಾಯಿಗಳ ಸಂಬಂಧ ಉತ್ತಮವಿರಬೇಕು.

ಈ ಪ್ರಕಾರ ಸನ್ನಿವೇಶದ ಸಿದ್ಧಾಂತವು ನಾಯಕನ ಹಾಗೂ ಅನುಯಾಯಿಗಳ ವರ್ತನೆಯ ಮೇಲೆ, ವಿವಿಧ ಸನ್ನಿವೇಶಗಳ ಮೇಲೆ ಹೆಚ್ಚು ಒತ್ತು ಕೊಡುತ್ತದೆ.

ಯಶಸ್ವಿ ನಾಯಕನ ಲಕ್ಷಣಗಳು :

ಒಟ್ಟಿನ ಮೇಲೆ ನಾಯಕನಾದವನು ಒಳ್ಳೆಯ ವ್ಯಕ್ತಿತ್ವ, ಪ್ರಾಮಾಣಿಕತೆ, ಸಿಹ್ನಾವಂತಿಕೆ ಹೊಂದಿ ಶಾಂತ ಹಾಗೂ ಗಂಭೀರ ಸ್ವಭಾವದವನಾಗಿರಬೇಕು. ಒಳ್ಳೆಯ ವಾಗ್ಮಿ, ದೂರದೃಷ್ಟಿಯನ್ನು ಹೊಂದಿರಬೇಕು. ಮುಂದಾಗಿ ಕಾರ್ಯನಿರ್ವಹಿಸುವ ಪ್ರವೃತ್ತಿ ಇರುವವನಾಗಿರಬೇಕು. ಪರಿಸ್ಥಿತಿಗನುಗುಣವಾಗಿ ಹೊಂದಿಕೊಳ್ಳುವ ಸ್ವಭಾವ, ಕಠಿಣ ಪ್ರಸಂಗಗಳನ್ನು ಎದುರಿಸುವ ಧೈರ್ಯ, ಆತ್ಮವಿಶ್ವಾಸ, ಉನ್ನತ ನೈತಿಕ ಮಟ್ಟ, ಇತರರ ಬಗ್ಗೆ ಗೌರವ ಭಾವನೆ ಹಾಗೂ ಸಮಯೋಚಿತ ಪ್ರಜ್ಞೆ ಮುಂತಾದವುಗಳನ್ನು ಅವನು ಹೊಂದಿರಬೇಕು.

ತಾತ್ವಿಕವಾಗಿ ನಾಯಕತ್ವದ ಬಗೆಗೆ ಮೂರು ಸಿದ್ಧಾಂತಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಗುದ್ಲೆಪ್ಪನವರ ನಾಯಕತ್ವವನ್ನು ಯಾವುದೇ ಒಂದು ಸಿದ್ಧಾಂತದ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಸೂಕ್ತವಲ್ಲ. ಆದುದರಿಂದ ಈ ಮೂರೂ ಸಿದ್ಧಾಂತಗಳು ಅವರ ನಾಯಕತ್ವದಲ್ಲಿ ಪ್ರತಿಬಿಂಬಿತವಾಗಿರುವುದನ್ನು ಗಮನಿಸಬಹುದು.

ಹಾವೇರಿಯ ಹಿನ್ನೆಲೆ :

ಪುಣೆ - ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಹಾವೇರಿ ಮೊದಲು ಧಾರವಾಡ ಜಿಲ್ಲೆಯ ಒಂದು ದೊಡ್ಡ ತಾಲೂಕು ಕೇಂದ್ರವಾಗಿ ವ್ಯಾಪಾರ - ವ್ಯವಹಾರಗಳಿಗೆ ಪ್ರಸಿದ್ಧವಾಗಿತ್ತು. ಇದು ಧಾರವಾಡ ಜಿಲ್ಲೆಯಿಂದ ಬೇರ್ಪಟ್ಟು ೧೯೯೭ ಆಗಸ್ಟ್ ೧೫ ರಂದು ಹೊಸ ಜಿಲ್ಲೆಯಾಗಿ ಸ್ಥಾಪಿತಗೊಂಡು ಏಳು ತಾಲೂಕುಗಳನ್ನು ಹೊಂದಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ ೪,೨೮೩.೭ ಚ. ಕಿ. ಮೀ. ೧೯೯೧ ರ ಜನಗಣತಿಯ ಪ್ರಕಾರ ೧೧,೨೧,೭೧೪ ಜನಸಂಖ್ಯೆಯನ್ನು ಹೊಂದಿದೆ. ಭೌಗೋಳಿಕವಾಗಿ ಈ ಜಿಲ್ಲೆಯು ಹೆಚ್ಚಿನ ಪ್ರಮಾಣದಲ್ಲಿ ಸಣ್ಣಪುಟ್ಟ ಗುಡ್ಡ - ಬೆಟ್ಟಗಳ ಪ್ರದೇಶವಾಗಿದ್ದು ಕಪ್ಪು ಮಣ್ಣಿನ ಭೂಮಿಯನ್ನು ಹೊಂದಿದೆ.

ಹಾವೇರಿಯು ಪ್ರಾಚೀನ ಶಾಸನಗಳಲ್ಲಿ ಪಾವರಿ, ಹಾವರಿ, ಹಾವೇರಿ, ನಳಪುರಿ ಎಂದು ಉಲ್ಲೇಖಗೊಂಡಿದೆ. ರಾಷ್ಟ್ರಕೂಟರ ಚಕ್ರವರ್ತಿ ಮೂರನೇ ಕೃಷ್ಣನ ಕಾಲದ ಒಂದು ಶಿಲಾಶಾಸನದ ಪ್ರಕಾರ ಹಾವೇರಿಯು ಹತ್ತನೇ ಶತಮಾನಕ್ಕಿಂತ ಹಿಂದೆಯೇ ಅಸ್ತಿತ್ವದಲ್ಲಿತ್ತು. ಕಲ್ಯಾಣದ ಚಾಲುಕ್ಯ, ಕಳಚೂರಿ, ಹೊಯ್ಸಳ ಮತ್ತು ಸೇವುಣ ಅರಸರ ಆಳ್ವಿಕೆಗೆ ಇದು ಒಳಪಟ್ಟಿತ್ತು. ಹದಿನೆಂಟನೆಯ ಶತಮಾನದ ಆರಂಭಕ್ಕೆ ಪೇಶ್ವೆ ಅರಸರ ಪ್ರಯತ್ನದಿಂದಾಗಿ ಹಾವೇರಿ ಪ್ರಸಿದ್ಧ ವ್ಯಾಪಾರ ಕೇಂದ್ರವಾಯಿತು. ೧೯೦೫ ರಲ್ಲಿ ತಾಲೂಕು ಕೇಂದ್ರವಾಯಿತು.[೭] ಇತ್ತೀಚಿನವರೆಗೂ ಇದು ಯಾಲಕ್ಕಿ ಸಂಸ್ಕರಣ ಕೇಂದ್ರವಾಗಿ ಪ್ರಖ್ಯಾತವಾಗಿತ್ತು. ಸುಂದರ ಯಾಲಕ್ಕಿ ಮಾಲೆಗಳಿಗೆ ಈಗಲೂ ಹೆಸರಾಗಿದೆ.

ಹೊಸರಿತ್ತಿಯ ಪರಿಸರ :

ಜಿಲ್ಲಾ ಸ್ಥಳವಾದ ಹಾವೇರಿಯಿಂದ ಗುದ್ಲೆಪ್ಪನವರ ಹುಟ್ಟೂರು ಹೊಸರಿತ್ತಿಯು ೨೪ ಕಿ. ಮೀ. ದೂರದಲ್ಲಿದ್ದು ವರದಾ ನದಿ ತೀರದಲ್ಲಿದೆ. ೧೯೯೧ ರ ಜನಗಣತಿ ಪ್ರಕಾರ ೪.೮೩೦ ಜನಸಂಖ್ಯೆ ಹೊಂದಿದ್ದು ಫಲವತ್ತಾದ ಭೂಮಿಯಿಂದ

ಕೂಡಿದೆ. ಹೊಸರಿತ್ತಿಯು ಗುದ್ಲೆಪ್ಪನವರ ಪ್ರಖ್ಯಾತಿಯಿಂದ ಕರ್ನಾಟಕದ ಅತ್ಯಂತ ಪ್ರಸಿದ್ಧ ಹಳ್ಳಿಯೆನಿಸಿದೆ. ಇಲ್ಲಿ ವೀರಶೈವ ಧರ್ಮದ ಗುದ್ದಲಿ ಸ್ವಾಮಿಗಳ ಹಾಗೂ ಮಾಧ್ವ ಮತದ ರಾಘವೇಂದ್ರ ಸ್ವಾಮಿಗಳ ಮಠಗಳಿವೆ. ವೀರಶೈವರೇ ಪ್ರಮುಖವಾಗಿರುವ ಈ ಊರಿನ ಧಾರ್ಮಿಕ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದ ಗುದ್ದಲಿ ಸ್ವಾಮಿಗಳ ಹೆಸರನ್ನು ಹೊತ್ತ ಗುದ್ಲೆಪ್ಪ ಹಳ್ಳಿಕೇರಿಯವರು ನಾಡಿನ ಹಳ್ಳಿ ಹಳ್ಳಿಗೂ ಹೆಸರಾಗಿ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದ ಗುರುವಾಗಿ ಕಂಗೊಳಿಸಿದರು. ವೀರಶೈವ - ವೈಷ್ಣವ ಪರಂಪರೆಯ ಈ ಮಠಗಳಿಂದಾಗಿ ಹಳ್ಳಿಯಲ್ಲಿ ಧರ್ಮಸಮನ್ವಯ ನೆಲೆಸಿದೆ. ಈ ಸಮನ್ವಯ ಭಾವ ಹಳ್ಳಿಕೇರಿ ಮನೆತನದವರಲ್ಲಿಯೂ ಪರಂಪರಾಗತವಾಗಿ ಬೆಳೆದು ಬಂದಿದೆ.

ಗುದ್ಲೆಪ್ಪನವರ ಜನನ :

ಗುದ್ಲೆಪ್ಪನವರು ೧೯೦೬ ಜೂನ್ ೬ ರಂದು ಹೊಸರಿತ್ತಿಯ ಮಧ್ಯಮ ವರ್ಗದ ವೀರಶೈವ ರೈತ ಕುಟುಂಬದಲ್ಲಿ ಜನಿಸಿದರು. ತಂದೆ ವೀರಪ್ಪ, ತಾಯಿ ವೀರಮ್ಮ. ಈ ದಂಪತಿಗಳಿಗೆ ಐದು ಜನ ಗಂಡು ಮಕ್ಕಳು. ಹೆಣ್ಣು ಮಕ್ಕಳಿರಲಿಲ್ಲ. ಸಂಗಪ್ಪ, ಸಂಗನಬಸಪ್ಪ, ಮಹಾದೇವಪ್ಪ, ಅನ್ನದಾನೀಶ (ಮುಂದೆ ಇವರು ಮುಂಡರಗಿ ಅನ್ನದಾನೇಶ್ವರ ಮಠಕ್ಕೆ ಮರಿದೇವರಾಗಿ ರಿತ್ತಿ ಅನ್ನದಾನ ಮರಿದೇವರೆಂದೇ ಪ್ರಸಿದ್ಧರಾದರು) ಮತ್ತು ಕೊನೆಯವರು ಗುದ್ಲೆಪ್ಪನವರು.

ಗುದ್ಲೆಪ್ಪ ಎಂಬ ಹೆಸರು ಕೇಳಲು ವಿಚಿತ್ರವೆನಿಸಿದರೂ ಅದು ಅಚ್ಚಕನ್ನಡದ ಹಳ್ಳಿಯ ಕೆಚ್ಚನ್ನು ಹೊಂದಿದ ಹೆಸರು. ಗುದ್ಲೆಪ್ಪ ಅಂಕಿತನಾಮವು ಅನ್ವರ್ಥಕವಾಗುವ ರೀತಿಯಲ್ಲಿ ಹೊಲದ ಕಳೆಯನ್ನು ಗುದ್ದಲಿಯಿಂದ ಕಿತ್ತು ಸಾಗುವಳಿ ಮಾಡಿದಂತೆ ಅವರು ನಾಡಿನ ರಾಜಕೀಯದಲ್ಲಿಯ ಕಳೆಯನ್ನು ಕಿತ್ತಿ ಜನರಲ್ಲಿ ರಾಷ್ಟ್ರೀಯತೆಯ ಬೀಜ ಬಿತ್ತಿದರು. ಜನ ಕಲ್ಯಾಣದ ಫಲ ಬರುವಂತೆ ಶ್ರಮಿಸಿದರು.

ಗುದ್ಲೆಪ್ಪನವರು ಚಿಕ್ಕವರಿದ್ದಾಗಲೇ ತಂದೆ ತಾಯಿ ನಿಧನರಾದರು. ಹಿರಿಯ ಅಣ್ಣ ಸಂಗಪ್ಪನವರ ಮೇಲೆಯೇ ನಾಲ್ಕೂ ಜನ ತಮ್ಮಂದಿರ ಪಾಲನೆ ಪೋಷಣೆ ಮಾಡುವ ಹೊಣೆಗಾರಿಕೆ ಬಿದ್ದಿತು. ಗುದ್ಲೆಪ್ಪನವರ ದೊಡ್ಡವ್ವ ಮುರಿಗೆಮ್ಮ ತಾಯಿಯ ಸ್ಥಾನದಲ್ಲಿದ್ದು, ವಾತ್ಸಲ್ಯದಿಂದ ಬೆಳೆಸಿದಳು. ಸಂಗಪ್ಪನವರ ಸತತ ಪರಿಶ್ರಮ, ಸ್ಫೂರ್ತಿ, ಪ್ರೇರಣೆಗಳೇ ಹಳ್ಳಿಕೇರಿ ಮನೆತನದ ಏಳ್ಗೆಗೆ ಕಾರಣವಾದವು.

ತಮ್ಮ ಸ್ವಂತ ಹೊಲಗಳೊಂದಿಗೆ ಇತರರ ಹೊಲಗಳನ್ನು ಗೇಣಿಗೆ ಪಡೆದು ಸಾಗುವಳಿ ಮಾಡಿಸುತ್ತ ಕಿರಾಣಿ ವ್ಯಾಪಾರವನ್ನೂ ಹಳ್ಳಿಕೇರಿ ಕುಟುಂಬದವರು ಕೈಕೊಂಡಿದ್ದರು. ಹೊಸರಿತ್ತಿಯ ಸುತ್ತಮುತ್ತಲಿನ ಹತ್ತಾರು ಹಳ್ಳಿಯ ಜನರು ಇವರ ಅಂಗಡಿಯಲ್ಲಿಯೇ ವಹಿವಾಟು ನಡೆಸುತ್ತಿದ್ದರು. ಹೀಗಾಗಿ ಆ ಭಾಗದಲ್ಲಿಯೇ ಹಳ್ಳಿಕೇರಿ ಕುಟುಂಬವು ಪ್ರತಿಷ್ಠಿತ ಕುಟುಂಬವೆನಿಸಿತ್ತು.

ಜೀವಂತ ಕಂಪ್ಯೂಟರ್ :

ಗುದ್ಲೆಪ್ಪನವರು ಬಾಲ್ಯದಲ್ಲಿಯೇ ತಮ್ಮ ಗಣಿತ ಪ್ರತಿಭೆಯನ್ನು ಮೆರೆದರು. ಪ್ರಾಥಮಿಕ ಶಾಲೆಯಲ್ಲಿದ್ದಾಗ ಬಾಯಿಯಲ್ಲಿಯೇ ಹತ್ತು ಹತ್ತು ಅಂಕಿಗಳ ಗುಣಾಕಾರವನ್ನು ಕ್ಷಣಾರ್ಧದಲ್ಲಿ ಮಾಡಿ ತೋರಿಸುವ ಗಣಿತ ಪ್ರತಿಭೆಯನ್ನು ಕಂಡು ಶಿಕ್ಷಕರೆ ಆಶ್ಚರ್ಯಪಡುತ್ತಿದ್ದರು. ಅವರ ತಲೆಯು ಅಂಕಿಸಂಖ್ಯೆಗಳ ಖಜಾನೆಯಾಗಿತ್ತು. ಹಳ್ಳಿಹಳ್ಳಿಗಳ ಶಾಲೆಗಳಿಗೆ, ಸಮಾರಂಭಗಳಿಗೆ ಬಾಲಕ ಗುದ್ಲೆಪ್ಪನವರನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಬೇಕಾದಷ್ಟು ಅಂಕಿಸಂಖ್ಯೆಗಳ ಗುಣಾಕಾರ, ಬೇರೀಜ, ವಜಾಬಾಕಿಗಳನ್ನು ಕೂಡಲೇ ಬಾಯಲ್ಲಿಯೇ ಮಾಡಿ ತೋರಿಸುವ ಜಾಣ್ಮೆಯ ಪ್ರದರ್ಶನ ನಡೆಯುತ್ತಿತ್ತು. ಜನ ಕುತೂಹಲಭರಿತರಾಗಿ ಬಾಲಕನ ಸುತ್ತ ನೆರೆಯುತ್ತಿದ್ದರು. ಅಗಾಧ ಗಣಿತ ಪ್ರತಿಭೆಗೆ ಅಚ್ಚರಿಗೊಳ್ಳುತ್ತಿದ್ದರು. ಅದಕ್ಕಾಗಿ ಬಾಲಕ ಗುದ್ಲೆಪ್ಪ ಪಡೆದ ಪಾರಿತೋಷಕಗಳು ಅಸಂಖ್ಯ. ಸಂಖ್ಯಾಧಿಪತಿಯಾದ ಅವರನ್ನು 'ಜೀವಂತ ಕಂಪ್ಯೂಟರ್' ಎಂದು ಕರೆಯಬಹುದು.

ಪ್ರತಿಭಾವಂತ ತಮ್ಮನ ಶಿಕ್ಷಣದ ಬಗ್ಗೆ ಹಿರಿಯ ಅಣ್ಣ ಸಂಗಪ್ಪ ತುಂಬಾ ಆಸ್ಥೆ ವಹಿಸಿ ಪ್ರೇರಣೆ, ಪ್ರೋತ್ಸಾಹ ನೀಡುತ್ತಿದ್ದರು. ಆತ ವಿದೇಶಕ್ಕೆ ಹೋಗಿ ಗಣಿತ ಪ್ರತಿಭೆಯನ್ನು ಬೆಳೆಸಿಕೊಂಡು ದೊಡ್ಡ ವಿದ್ವಾಂಸನಾಗಿ ರ್‍ಯಾಂಗ್ಲರ್ ಪದವಿ ಪಡೆದು ಬಂದು ಕೀರ್ತಿಶಾಲಿಯಾಗಬೇಕೆಂದು ಬಯಸಿದರು. ಹೊಸರಿತ್ತಿಯಲ್ಲಿಯೇ ಪ್ರಾಥಮಿಕ ಶಿಕ್ಷಣ ಪೂರೈಸಿದ ಗುದ್ಲೆಪ್ಪನವರು ಮಾಧ್ಯಮಿಕ ಶಿಕ್ಷಣಕ್ಕಾಗಿ ಧಾರವಾಡಕ್ಕೆ ಹೋಗಬೇಕಾಯಿತು. ತಮ್ಮನ ಭವಿಷ್ಯ ಉಜ್ವಲಗೊಳಿಸಲು ದಿವಾನ ಬಹದ್ದೂರ ಶಾಂತವೀರಪ್ಪ ಮೆಣಸಿನಕಾಯಿಯವರನ್ನು ಅಣ್ಣ ಸಂಗಪ್ಪ ವಿನಂತಿಸಿಕೊಂಡರು.

ವಿದ್ಯಾಕೇಂದ್ರ ಧಾರವಾಡದಲ್ಲಿ :

ಎಳೆಹರೆಯದ ಗುದ್ಲೆಪ್ಪನವರನ್ನು ೧೯೧೯ ಜೂನ್ ೧೩ ರಂದು ದಿವಾನ ಬಹದ್ದೂರ ಶಾಂತವೀರಪ್ಪ ಮೆಣಸಿನಕಾಯಿಯವರು ಧಾರವಾಡಕ್ಕೆ ಕರೆತಂದರು. ವಿದ್ಯಾ ಪ್ರೇಮಿಗಳೂ, ತ್ರಿವಿಧ ದಾಸೋಹ ಮೂರ್ತಿಗಳೂ, ಯುವಕರ ಮೇಲೆ ಅಗಾಧ ಪ್ರಭಾವ ಬೀರಿದ ಮಹಾಪುರುಷರೂ ಆದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳಿಂದಾಗಿ ಧಾರವಾಡದ ಮುರುಘಾಮಠವು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಪರಿಣಮಿಸಿತ್ತು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಆಸರೆಯ ತಾಣವಾಗಿ ಆಶಾಕಿರಣವಾಗಿತ್ತು. ಗುದ್ಲೆಪ್ಪನವರು ಈ ಮಠದ ಉಚಿತ ಪ್ರಸಾದ ನಿಲಯದಲ್ಲಿದ್ದುಕೊಂಡು ತಮ್ಮ ಶಿಕ್ಷಣ ಮುಂದುವರಿಸಿದರು. ಅಲ್ಲಿದ್ದಾಗಲೆ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಪರಿಚಯ ವಿದ್ಯಾರ್ಥಿ ಗುದ್ಲೆಪ್ಪನವರಿಗೆ ಆಗಿ ಆಶೀರ್ವಾದವಾಗಿ ಪರಿಣಮಿಸಿತು.

೧೯೨೪ ರ ವರೆಗೂ ಗುದ್ಲೆಪ್ಪನವರು ಮಠದ ಪ್ರಸಾದ ನಿಲಯದಲ್ಲಿದ್ದುಕೊಂಡೇ ಕಲಿತರು. ಪ್ರಾರಂಭದಲ್ಲಿ ಕರ್ನಾಟಕ ಹೈಸ್ಕೂಲಿನ ವಿದ್ಯಾರ್ಥಿಯಾಗಿ ಪ್ರಾಚಾರ್ಯ ಕಟ್ಟಿಯವರ ಮೆಚ್ಚುಗೆ ಪಡೆದರು. ನಂತರ ೧೯೨೭ ರಲ್ಲಿ ಧಾರವಾಡದ ಲಿಂಗಾಯತ (ಸದ್ಯ ಆರ್. ಎಲ್. ಎಸ್.) ಹೈಸ್ಕೂಲಿನಿಂದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಶಿ. ಶಿ. ಬಸವನಾಳ ಮತ್ತು ಎಚ್. ಎಫ್. ಕಟ್ಟಿಮನಿಯವರಂತಹ ಗಣ್ಯ ಮಹನೀಯರು[೮] ಗುದ್ಲೆಪ್ಪನವರ ಶಿಕ್ಷಕರಾಗಿದ್ದರೆಂಬುದು ಗಮನಾರ್ಹ.

ಮುಂದೆ ಕರ್ನಾಟಕ ಕಾಲೇಜಿನ ವಿದ್ಯಾರ್ಥಿಯಾಗಿ ೧೯೨೮ ರಲ್ಲಿ ಎಫ್. ವಾಯ್. ಮತ್ತು ೧೯೨೯ ರಲ್ಲಿ ಇಂಟರ್ ಮಿಡಿಯೆಟ್ ಪರೀಕ್ಷೆ ಪಾಸಾದರು. ಆಗ ಡಿ. ಡಿ. ಕಪಾಡಿಯಾ ಪ್ರಭಾರ ಪ್ರಾಚಾರ್ಯರಾಗಿದ್ದರು. ಗಾಂಧೀಜಿಯವರ ಪ್ರಭಾವ ಮತ್ತು ಸ್ವಾತಂತ್ರ್ಯಾಂದೋಲನದ ಆಕರ್ಷಣೆಯಿಂದಾಗಿ ತಮ್ಮ ಮುಂದಿನ ಶಿಕ್ಷಣಕ್ಕೆ ಗುದ್ಲೆಪ್ಪನವರು ತಿಲಾಂಜಲಿಯಿತ್ತರು.

ನಾಯಕತ್ವದ ಪ್ರಥಮ ಪಾಠ :

ಗುದ್ಲೆಪ್ಪನವರು ಧಾರವಾಡದ ಮುರುಘಾಮಠದಲ್ಲಿದ್ದುಕೊಂಡು ಓದುತ್ತಿರುವಾಗಲೇ ಶ್ರೀ ಮೃತ್ಯುಂಜಯ ಸ್ವಾಮಿಗಳಿಗೆ ಅವರ ಬುದ್ಧಿಶಕ್ತಿಯ ಬಗ್ಗೆ ಪ್ರೀತಿ ಅಭಿಮಾನ ಹುಟ್ಟಿದ್ದವು. ಗುದ್ಲೆಪ್ಪನವರು ಮುಂದೆ ನಾಡಿನ ಮೇಧಾವಿ ವ್ಯಕ್ತಿಯಾಗುವರೆಂದು ಮೃತ್ಯುಂಜಯ ಸ್ವಾಮಿಗಳು ಆಗಾಗ್ಗೆ ಹೇಳುತ್ತಿದ್ದರು. " ನೀನು ನಮ್ಮ ನಾಡಿನ ಮತ್ತು ದೇಶದ ನಾಯಕನಾಗಬೇಕಪ್ಪಾ " ಎಂದು ಆಶೀರ್ವದಿಸಿದುದನ್ನು ಗುದ್ಲೆಪ್ಪನವರು ನಾಯಕರಾದ ಮೇಲೆಯೂ ಗೌರವದಿಂದ ನೆನೆಯುತ್ತಿದ್ದರು.[೯] ಧಾರವಾಡಕ್ಕೆ ಹೋದಾಗಲೆಲ್ಲ ಅವರು ಶ್ರೀ ಮೃತ್ಯುಂಜಯ ಸ್ವಾಮಿಗಳ ದರ್ಶನ ಪಡೆದುಕೊಂಡೇ ಬರುತ್ತಿದ್ದರು.

ಗುದ್ಲೆಪ್ಪನವರು ಮುಂದೆ ಶ್ರೀ ಮೃತ್ಯುಂಜಯ ಸ್ವಾಮಿಗಳ ಆಪ್ತ ಬಳಗದವರಲ್ಲೊಬ್ಬರಾದರು. ೧೯೨೦ ರಲ್ಲಿ ಶ್ರೀಗಳವರ ಜೊತೆಗೆ ಅಥಣಿಗೆ ಹೋದಾಗ ಲಿಂಗಪೂಜಾನಿಷ್ಠರೂ ಮಹಿಮಾಪುರುಷರೂ ಆದ ಶ್ರೀ ಮುರುಘೇಂದ್ರ ಶಿವಯೋಗಿಗಳನ್ನು ಕಂಡು ಆಶೀರ್ವಾದ ಪಡೆದರು. ೧೯೨೨ ರಲ್ಲಿ ಶ್ರೀ ಮೃತ್ಯುಂಜಯ ಸ್ವಾಮಿಗಳು ತಮ್ಮ ಹಲವಾರು ಶಿಷ್ಯರೊಂದಿಗೆ ಧಾರವಾಡದಿಂದ ಕಲಬುರ್ಗಿ, ಭಾಲ್ಕಿ, ಬಸವಕಲ್ಯಾಣ ಮುಂತಾದ ಶರಣ ಕ್ಷೇತ್ರಗಳಿಗೆ ಧರ್ಮಜಾಗೃತಿ ಪಾದಯಾತ್ರೆ ಕೈಕೊಂಡಾಗ ಗುದ್ಲೆಪ್ಪನವರನ್ನೇ ಆ ಪ್ರವಾಸದ ಮುಖ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು. ಈ ಅವಕಾಶವು ಗುದ್ಲೆಪ್ಪನವರಿಗೆ ನಾಯಕತ್ವದ ಪ್ರಥಮ ಪಾಠ ಮತ್ತು ತರಬೇತಿಯಾಗಿ ಪರಿಣಮಿಸಿತು. ಗುದ್ಲೆಪ್ಪನವರು ತಮ್ಮ ಹದಿ ವಯಸ್ಸಿನಲ್ಲಿ ಮಾಡಿದ ಈ ಪ್ರವಾಸವು ಅವರಿಗೆ ಬದುಕಿನ ಬಹಳಷ್ಟು ಶ್ರಮಸಹಿಷ್ಣುತೆಯನ್ನು, ಜನಪ್ರೀತಿಯನ್ನು, ಧರ್ಮಶ್ರದ್ಧೆಯನ್ನು ಕಲಿಸಿತು.[೧೦]

ಗಾಂಧೀಜಿ ದರ್ಶನ :

ಸ್ವಾತಂತ್ರ್ಯ ಚಳುವಳಿಗೆ ಜನಪರ ಹೋರಾಟದ ನೆಲವನ್ನು ಕೊಟ್ಟು, ಅಹಿಂಸೆ ಹಾಗೂ ಸತ್ಯಾಗ್ರಹದ ಪ್ರತಿಪಾದನೆ ಮಾಡಿ, ಭಾರತ ಜನತೆಯ ಮೇಲೆ ಕ್ಷಿಪ್ರದಲ್ಲಿಯೇ ಅಗಾಧ ಪ್ರಭಾವವನ್ನು ಬೀರಿ ಜನಾನುರಾಗಿಯಾದ ಗಾಂಧೀಜಿ ಅವರು ಅಸಹಕಾರ ಆಂದೋಲನದ ಅಂಗವಾಗಿ ಕರ್ನಾಟಕ ಪ್ರವಾಸವನ್ನು ಕೈಕೊಂಡಿದ್ದರು. ೧೯೨೦ ರ ನವಂಬರನಲ್ಲಿ ಗಾಂಧೀಜಿ ಧಾರವಾಡಕ್ಕೆ ಬಂದಾಗ ಅವರ ದರ್ಶನ ಭಾಗ್ಯವು ಆಗ ಹೈಸ್ಕೂಲ ವಿದ್ಯಾರ್ಥಿಯಾಗಿದ್ದ ಗುದ್ಲೆಪ್ಪನವರಿಗಾಯಿತು.

ಅದೇ ವರ್ಷ ಲಾಲಾ ಲಜಪತರಾಯರ ಅಧ್ಯಕ್ಷತೆಯಲ್ಲಿ ಕಲಕತ್ತಾದಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಶೇಷ ಅಧಿವೇಶನದ ತರುವಾಯ ರಾಷ್ಟ್ರದ ಅನೇಕ ಗಣ್ಯರು ಕರ್ನಾಟಕದ ಪ್ರವಾಸಕ್ಕೆ ಬಂದಾಗ ಅವರನ್ನೆಲ್ಲ ಗುದ್ಲೆಪ್ಪನವರು ಕಂಡರು.

" ನಾನು ಹೆಚ್ಚಿನ ಪ್ರಮುಖ ರಾಷ್ಟ್ರನಾಯಕರನ್ನು ಕಂಡದ್ದು ೧೯೨೦ ರಲ್ಲಿ. ಲಾಲಾ ಲಜಪತರಾಯ, ಶೌಕತ ಅಲಿ, ಸರೋಜಿನಿ ನಾಯಡು ಮೊದಲಾದವರನ್ನು ಆಗಲೇ ಕಂಡೆ. ಇವರೆಲ್ಲ ನನ್ನನ್ನು ರಾಷ್ಟ್ರೀಯ ಜೀವನದತ್ತ ಸೆಳೆದ ಮುಖ್ಯ ಪ್ರೇರಣೆಗಳು. ರಾಷ್ಟ್ರ ದೀಕ್ಷೆಯ ಆರಂಭ ಮಂತ್ರ..... " ಎಂದು ಗುದ್ಲೆಪ್ಪನವರೇ ಹೇಳಿದ್ದಾರೆ. [೧೧]

ಗಾಂಧೀಜಿಯವರ ಆಗಿನ ಸಭೆಗಳಲ್ಲಿ ಗುದ್ಲೆಪ್ಪನವರು ಉಪಸ್ಥಿತರಿದ್ದು, ಅವರ ನಿಷ್ಕಪಟ ಹೃದಯ ಹಾಗೂ ಪ್ರಾಮಾಣಿಕ ಮಾತಿನ ಮೋಡಿಗೆ ಮರುಳಾದರು. ಅಂದಿನಿಂದ ಆರಂಭವಾದ ಗಾಂಧಿ ಪ್ರಭಾವ ಅವರನ್ನು ಸಂಪೂರ್ಣ ಗಾಂಧಿಮಯವಾಗಿಸಿಬಿಟ್ಟಿತು. ಗುದ್ಲೆಪ್ಪನವರು ಗಾಂಧೀಜಿಯ ಪಾದಸ್ಪರ್ಶ ಮಾಡಿ ನಮಸ್ಕರಿಸಿ ತಮ್ಮನ್ನು ಭಕ್ತಿಯಿಂದ ಅವರಿಗೆ ಸಮರ್ಪಿಸಿಕೊಂಡರು. " ಅಂದಿನಿಂದ ಮೃತ್ಯುಂಜಯ ಸ್ವಾಮಿಗಳು ನನ್ನ ಪಾಲಿಗೆ ದೀಕ್ಷಾಗುರುಗಳು, ಗಾಂಧೀಜಿ ಶಿಕ್ಷಾ ಗುರುಗಳಾದರು " ಎಂದು ಗುದ್ಲೆಪ್ಪನವರು ಆಗಾಗ್ಗೆ ಹೇಳುತ್ತಿದ್ದರು. [೧೨] ಹೀಗೆ ಗಾಂಧೀಜಿಯವರ ಅಸಹಕಾರ ಆಂದೋಲನಕ್ಕೆ ಗುದ್ಲೆಪ್ಪನವರ ಸಹಕಾರ ಆರಂಭವಾಯಿತು.

ಗಣಿತ ಪ್ರವಾಹ ಗಾಂಧಿ ಪ್ರಭಾವದೆಡೆಗೆ :

ಕಲಕತ್ತೆಯಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ ವಿಶೇಷ ಅಧಿವೇಶನದಲ್ಲಿ ಶಾಸನ ಸಭೆ, ಶೈಕ್ಷಣಿಕ ಕ್ಷೇತ್ರ, ಕೋರ್ಟು, ಕಚೇರಿ ಮುಂತಾದವುಗಳನ್ನು ಬಹಿಷ್ಕರಿಸುವ ನಿರ್ಣಯ ಕೈಕೊಳ್ಳಲಾಯಿತು. ಅದರಂಗವಾಗಿ ನಡೆಯುವ ಜನತೆಯ ಚಳುವಳಿಯನ್ನು ಹತ್ತಿಕ್ಕಲು ಬ್ರಿಟೀಷ ಸರಕಾರ ಕೈಕೊಂಡ ದಮನ ನೀತಿಗೆ ಜನತೆ ರೊಚ್ಚಿಗೆದ್ದಿತು.

" ೧೯೨೦ ರ ಮಾತು, ಧಾರವಾಡದಲ್ಲಿ ಸದ್ಯ ಪೊಲೀಸ್ ಸ್ಟೇಶನ್ ಇರುವ ಸ್ಥಳದ ಹತ್ತಿರ ಆಗ ಸಿಂದಿ ಸೆರೆ ಅಂಗಡಿಗಳಿದ್ದವು. ಅವುಗಳ ಪಿಕೆಟಿಂಗ್ ಕಾಲಕ್ಕೆ ಬಹಳ ಗದ್ದಲವಾಗಿ ಅನೇಕ ಜನ ರಾಷ್ಟ್ರೀಯ ವಾದಿಗಳಿಗೆ ಬಹಳ ತೊಂದರೆಯಾಯಿತು. ಆಗ ಕಬ್ಬೂರ ಮದ್ದೂರಾಯರನ್ನು ಜೇಲಿಗೆ ಎಳೆದೊಯ್ಯುತ್ತಿದ್ದ ದೃಶ್ಯ ಇನ್ನೂ ನನ್ನ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ನಿಂತಿದೆ " ಎಂದಿದ್ದಾರೆ ಗುದ್ಲೆಪ್ಪನವರು.

ಈ ಘಟನೆ ಗುದ್ಲೆಪ್ಪನವರ ಗಣಿತ ಪ್ರವಾಹವನ್ನು ಗಾಂಧಿ ಪ್ರಭಾವದ ರಾಷ್ಟ್ರೀಯತೆಯ ಕಡೆಗೆ ಹರಿಯುವಂತೆ ಮಾಡಿತು.

" ಎಳೆಯ ಗುದ್ಲೆಪ್ಪ ೧೯೨೨ ರಲ್ಲಿ ಕರ್ನಾಟಕ ಕಾಲೇಜನ್ನು ಸೇರಿದಾಗ ನಾನು ಅಲ್ಲಿ ಗಣಿತದ ಪ್ರಾಧ್ಯಾಪಕನಾಗಿದ್ದೆ. ಗಣಿತದಲ್ಲಿ ಅವರ ಜಾಣ್ಮೆಯನ್ನು ಕಂಡು ಅವರ ಕಾಲೇಜು ಜೀವನ ಯಶಸ್ವಿಯಾಗುವುದು ಎಂದು ನಂಬಿದ್ದೆ. ಆದರೆ ನಮ್ಮ ಹಾಗೂ ನಮ್ಮ ದೇಶದ ಸುದೈವದಿಂದ ಅವರು ಗಣಿತದ ಶೀತಲ ಸೌಂದರ್ಯಕ್ಕೆ ಮಾರುಹೋಗಲಿಲ್ಲ. ಅವರ ರಕ್ತದ ಬಿಸಿ ಅವರನ್ನು ಹಾಗೆ ಮಾಡಗೊಡಲಿಲ್ಲ " ಎಂದು ವಿದ್ಯಾರ್ಥಿ ಗುದ್ಲೆಪ್ಪನವರ ಗುರುಗಳಾಗಿದ್ದ ಬಿ. ಬಿ. ಬಾಗಿ ಅವರು ಹೇಳಿದ್ದಾರೆ. [೧೩]



ಗಾಂಧಿ ಭಕ್ತ ಗುದ್ಲೆಪ್ಪ ಹಳ್ಳಿಕೇರಿ



ಅಧ್ಯಯನಾಸಕ್ತ ಗುದ್ಲೆಪ್ಪನವರು

ಓದುವ ಅಭಿರುಚಿ - ರಾಷ್ಟ್ರೀಯ ನಾಯಕರ ಪ್ರಭಾವ :

ಗುದ್ಲೆಪ್ಪನವರು ವಿದ್ಯಾರ್ಥಿ ದೆಸೆಯಲ್ಲಿಯೇ ಉತ್ತಮ ಪುಸ್ತಕಗಳನ್ನು ಕೊಂಡು ಓದುವ ಹವ್ಯಾಸವಿರಿಸಿಕೊಂಡಿದ್ದರು. ತಮಗೆ ಬರುವ ವಿದ್ಯಾರ್ಥಿ ವೇತನದ ಹಣವನ್ನು ಪುಸ್ತಕಗಳಿಗಾಗಿಯೇ ವ್ಯಯಿಸುತ್ತಿದ್ದರು. ರವೀಂದ್ರನಾಥ ಟಾಗೋರ, ಅರವಿಂದ ಘೋಷ್, ವಿವೇಕಾನಂದರ ಕೃತಿಗಳನ್ನು ಅವರು ನಿಯಮಿತವಾಗಿ ಓದುತ್ತಿದ್ದರು. ಅವರ ಕೋಣೆ ಉತ್ತಮ ಗ್ರಂಥಾಲಯವಾಗಿತ್ತು. ತಮ್ಮ ಬದುಕಿನುದ್ದಕ್ಕೂ ಪುಸ್ತಕಗಳನ್ನು ಕೊಳ್ಳುವ ಮತ್ತು ಓದುವ ರೂಢಿಯನ್ನಿಟ್ಟುಕೊಂಡಿದ್ದರು. ಇಂಗ್ಲೀಷ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟವಾದ ಧರ್ಮದ, ತತ್ವಶಾಸ್ತ್ರದ, ರಾಜನೀತಿಯ ಪುಸ್ತಕಗಳಲ್ಲದೆ ಕಾದಂಬರಿಗಳನ್ನೂ ಕೊಂಡು ಓದುತ್ತಿದ್ದರು. ಜೀವನ ಚರಿತ್ರೆಗಳನ್ನೂ ಓದುವ ಆಸಕ್ತಿ ಅವರಿಗಿತ್ತು. ಲೋಕಮಾನ್ಯ ಬಾಲಗಂಗಾಧರ ತಿಲಕ ಹಾಗೂ ಕರ್ನಾಟಕದ ಗಾಂಧಿ ಎನಿಸಿದ್ದ ಹರ್ಡೇಕರ ಮಂಜಪ್ಪನವರ ವಿಚಾರಗಳನ್ನು ಅವರು ವಿಶೇಷವಾಗಿ ಮೆಚ್ಚುತ್ತಿದ್ದರು. " ಉತ್ತಮ ಗ್ರಂಥ, ಉತ್ತಮ ಖಾದಿ ನನಗೆ ಯಾವಾಗಲೂ ಪ್ರಿಯ " ವೆನ್ನುತ್ತಿದ್ದರು.

ಧಾರವಾಡದ ಸಾಹಿತ್ಯಿಕ ವಾತಾವರಣ, ವಾಚನಾಲಯಗಳ ಗ್ರಂಥ ಭಂಡಾರವನ್ನು ತಮ್ಮ ಶಿಕ್ಷಕರ - ಸ್ನೇಹಿತರ ಸಲಹೆ ಸೂಚನೆಗಳಿಗನುಸಾರವಾಗಿ ಸದುಪಯೋಗಪಡಿಸಿಕೊಳ್ಳತೊಡಗಿದರು. ನಾಯಕನಿಗಿರಬೇಕಾದ ಶಕ್ತಿಯುತ ಭಾಷೆಯ ಬಳಕೆ, ಸೂಕ್ತ ಶಬ್ದಗಳ ಪ್ರಯೋಗವನ್ನು ರೂಢಿಸಿಕೊಳ್ಳತೊಡಗಿದರು.

ಅರವಿಂದ ಘೋಷರ ಗ್ರಂಥಗಳಲ್ಲಿಯ ಅಧ್ಯಾತ್ಮಿಕತೆಗಿಂತ ದೇಶದ ಸ್ವಾತಂತ್ರ್ಯದ ಬಗೆಗಿನ ಉಜ್ವಲ ವಿಚಾರಗಳು ಗುದ್ಲೆಪ್ಪನವರನ್ನು ವಿಶೇಷವಾಗಿ ಆಕರ್ಷಿಸಿದವು. ರಾಮಕೃಷ್ಣ ಪರಮಹಂಸರ ಬಗೆಗೂ ಅವರಲ್ಲಿ ಅಪಾರ ಭಕ್ತಿಯಿತ್ತು. ವಲ್ಲಭಭಾಯಿ ಪಟೇಲ ಹಾಗೂ ಜವಾಹರಲಾಲ ನೆಹರೂ ಅವರ ವ್ಯಕ್ತಿತ್ವದ ಪ್ರಭಾವ ಗುದ್ಲೆಪ್ಪನರ ಮೇಲೆ ಆಯಿತು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಸೆರೆಮನೆ ವಾಸದಲ್ಲಿದ್ದಾಗ ತಾವು ಕಾಂಗ್ರೆಸ್ಸಿಗರಾಗಿದ್ದರೂ ಕೂಡ ಕಾರ್ಲ್‌ಮಾರ್ಕ್ಸ್, ಲೆನಿನ್ ಮುಂತಾದ ಎಡಪಂಥೀಯ ವಿಚಾರವಾದಿಗಳ ಗ್ರಂಥಗಳನ್ನು ಅಧ್ಯಯನ ಮಾಡಿದರು.

ಬಾಂಬೆ ಕ್ರಾನಿಕಲ್, ನ್ಯಾಶನಲ್ ಹೆರಾಲ್ಡ್, ಅಮೃತ ಬಜಾರ, ಟಾಯಿಮ್ಸ್ ಆಫ್ ಇಂಡಿಯಾ, ಹಿಂದುಸ್ತಾನ್ ಟೈಮ್ಸ್ ಮುಂತಾದ ಇಂಗ್ಲೀಷ ಪತ್ರಿಕೆಗಳನ್ನು ಓದಿ ಅವರು ರಾಜಕೀಯ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಿದ್ದರು.

ಗುದ್ಲೆಪ್ಪನವರ ನಾಯಕತ್ವದ ಗುಣಗಳನ್ನು ಬೆಳೆಸಲು ಗ್ರಂಥಗಳು, ಪತ್ರಿಕೆಗಳು, ರಾಷ್ಟ್ರೀಯ ಧುರೀಣರ ಹಾಗೂ ಜಾಗತಿಕ ಮುತ್ಸದ್ದಿಗಳ ವ್ಯಕ್ತಿತ್ವ ತುಂಬಾ ಪ್ರಭಾವ ಬೀರಿದವು.

ಸ್ವಾತಂತ್ರ್ಯ ಚಳುವಳಿಯ ಪ್ರಭಾವ :

ಗುದ್ಲೆಪ್ಪನವರು ತಮ್ಮ ಅಣ್ಣಂದಿರ ಹಾಗೂ ದಿವಾನ ಬಹದ್ದೂರ ಶಾಂತವೀರಪ್ಪ ಮೆಣಸಿನಕಾಯಿಯವರ ಆಸೆಯಂತೆ ಕಾಲೇಜು ಶಿಕ್ಷಣ ಪೂರೈಸಿ ದೊಡ್ಡ ಅಧಿಕಾರಿಯಾಗುವರೆಂಬ ನಂಬಿಕೆ ಹುಸಿಯಾಗುವ ಕಾಲ ಬಂದಿತು. ದೇಶದ ಪ್ರಜೆಗಳಲ್ಲಿ ಹೆಚ್ಚುತ್ತಿದ್ದ ಗಾಂಧೀಜಿಯವರ ಪ್ರಭಾವ ಗುದ್ಲೆಪ್ಪನವರ ಮೇಲೂ ಆಗಿತ್ತು. ೧೯೧೯ ರಲ್ಲಿ

ಜಾರಿಯಾದ ರೌಲೆಟ್ ಕಾಯ್ದೆಯು ಭಾರತೀಯರ ಸ್ವಾತಂತ್ರ್ಯ ದಮನ ಮಾಡಿ ಉಗ್ರ ಶಿಕ್ಷೆ ವಿಧಿಸುವಂತಹದಾಗಿತ್ತು. ಆ ಕಾಯ್ದೆಯು ಸಾರ್ವಜನಿಕ ಸಭೆ ಸಮಾರಂಭ ಏರ್ಪಡಿಸುವಂತಿಲ್ಲ. ಮಾರಕ ಅಸ್ತ್ರಗಳನ್ನು ಬಳಸುವಂತಿಲ್ಲ. ಕ್ರಾಂತಿಕಾರಿಗಳನ್ನು ವಿಚಾರಣೆಯಿಲ್ಲದೆ ಶಿಕ್ಷೆಗೊಳಪಡಿಸುವದು ಮುಂತಾದ ಉಗ್ರ ಕ್ರಮಗಳನ್ನು ಒಳಗೊಂಡಿತ್ತು.

ಇಂಥ ಕಾಯ್ದೆ ವಿರೋಧಿಸಿ ದೇಶದೆಲ್ಲೆಡೆ ಪ್ರತಿಭಟನೆಗಳು ಆರಂಭಗೊಂಡವು. ೧೯೧೯ ಏಪ್ರಿಲ್ ೧೩ ರಂದು ಅಮೃತಸರದ ಜಲಿಯನ್ ವಾಲಾಬಾಗ್‌ನಲ್ಲಿ ಏರ್ಪಟ್ಟ ಶಾಂತಿಯುತ ಪ್ರತಿಭಟನಾ ಸಭೆಯ ಮೇಲೆ ಬ್ರಿಟಿಷ್ ಸೈನ್ಯ ಗುಂಡಿನ ಮಳೆಗರೆಯಿತು. ನೂರಾರು ಜನರು ಹುತಾತ್ಮರಾದರು. ಇದರಿಂದಾಗಿ ರಾಷ್ಟ್ರೀಯವಾದಿಗಳ ಭಾಷಣಗಳು, ಪ್ರತಿಭಟನಾ ಮೆರವಣಿಗೆಗಳು ಹೆಚ್ಚಾದವು. ರಾಷ್ಟ್ರೀಯವಾದಿ ಪತ್ರಿಕೆಗಳಲ್ಲಿ ವರದಿಗಳು, ಉಗ್ರ ಲೇಖನಗಳು ಪ್ರಕಟವಾದವು. ಇವೆಲ್ಲ ಬಿಸಿರಕ್ತದ ತರುಣ ಗುದ್ಲೆಪ್ಪನವರನ್ನು ಬಡಿದೆಬ್ಬಿಸಿತು. ಅಂತರಂಗದಲ್ಲಡಗಿದ್ದ ರಾಷ್ಟ್ರಭಕ್ತಿ ಬಹಿರಂಗಕ್ಕೆ ಬರುವಂತಾಯಿತು. ಗುದ್ಲೆಪ್ಪನವರು ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿಯೇ ಪಾಲ್ಗೊಳ್ಳಲು ವೇದಿಕೆಯನ್ನು ಸಜ್ಜುಗೊಳಿಸಿತು. ಅವರು ಕಾಲೇಜು ಶಿಕ್ಷಣಕ್ಕೆ ಪೂರ್ಣ ವಿರಾಮ ಹಾಕಿ ಹೋರಾಟದಲ್ಲಿ ಪಾಲ್ಗೊಳ್ಳಲು ಪ್ರೇರಕವಾಯಿತು. ಈ ರೀತಿ ಸ್ವಾತಂತ್ರ್ಯ ಚಳುವಳಿಯ ಪ್ರಭಾವ ಗುದ್ಲೆಪ್ಪನವರ ಮೇಲೆ ಆಯಿತು.

ರಾಷ್ಟ್ರೀಯ ವಿವಾಹ :

ಗುದ್ಲೆಪ್ಪನವರು ನಾಯಕರಾಗಿ ಸ್ವಾತಂತ್ರ್ಯ ಹೋರಾಟದ ಪರಿಸರದ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಸಾದಾ ಜೀವನ, ಸಮಾನತೆ, ಹರಿಜನೋದ್ಧಾರ, ಸ್ತ್ರೀ ಸ್ವಾತಂತ್ರ್ಯ ಮುಂತಾದವು ಆ ಪರಿಸರದ ಮೌಲ್ಯಗಳು. ಇವು ಸ್ವಾತಂತ್ರ್ಯ ಹೋರಾಟದ ನಾಯಕರ ಬದುಕಿನ ಮೌಲ್ಯಗಳೂ ಆಗಿದ್ದವು. ಇವುಗಳನ್ನು ಗುದ್ಲೆಪ್ಪನವರು ಮೈಗೂಡಿಸಿಕೊಂಡಿದ್ದರು. ಅದೇ ರೀತಿಯಾಗಿ ತಮ್ಮ ಭಾವಿ ಪತ್ನಿಯು ಸ್ವಾತಂತ್ರ್ಯ ಹೋರಾಟದ ಪರಿಸರದ ಮೌಲ್ಯಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಬಯಸಿದರು. ಅಂಥ ಪತ್ನಿಯಿಂದಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಲು ಅವರಿಗೆ ಅನುಕೂಲ - ಪ್ರೋತ್ಸಾಹ ಸಾಧ್ಯ. ಆದ್ದರಿಂದ ಅಂತಹ ಸ್ವಾತಂತ್ರ್ಯ ಹೋರಾಟದ ಪರಿಸರ ಹಾಗೂ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬಂದ ಸಾಣಿಕೊಪ್ಪ ಕುಟುಂಬದಿಂದ ವಧುವನ್ನು ಆಯ್ಕೆಮಾಡಿಕೊಂಡರು.

೧೯೩೭ ರ ಅಕ್ಟೋಬರ್ ೨ ರಂದು ಗಾಂಧಿ ಜಯಂತಿಯ ದಿನ ಗುದ್ಲೆಪ್ಪನವರ ಮದುವೆ ಸಾಂಪ್ರದಾಯಿಕವಾದ ಆಡಂಬರ ಅಟ್ಟಹಾಸಗಳಿಲ್ಲದ ಸರಳ, ನಿರಾಡಂಬರ ರಾಷ್ಟ್ರೀಯ ವಿವಾಹವಾಗಿ ಪರಿಣಮಿಸಿತು. ಪಂಚಾಂಗ ತೆಗೆಸಿ ಮುಹೂರ್ತ ಕೇಳಲಿಲ್ಲ. ಗಾಂಧಿ ಭಕ್ತ ಗುದ್ಲೆಪ್ಪನವರಿಗೆ ಗಾಂಧಿ ಜಯಂತಿಯ ದಿನವೇ ಶುಭಮುಹೂರ್ತವಾಯಿತು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಇಟಗಿಯ ಸಾಣಿಕೊಪ್ಪ ಮನೆತನದ ಬಸವಲಿಂಗಪ್ಪ ಮತ್ತು ಜಾನಮ್ಮ ದಂಪತಿಗಳ ಕೊನೆಯ ಮಗಳು ಗಂಗಾದೇವಿಯೇ ವಧು. ಮುಂದೆ ವಿಧಾನಸಭೆಯ ಸದಸ್ಯರಾದ ಬಸವಣ್ಣೆಪ್ಪ ಎಂ. ಸಾಣಿಕೊಪ್ಪ ಮತ್ತು ಗುದ್ಲೆಪ್ಪನವರು ಹಿಂಡಲಗಿ ಜೇಲಿನಲ್ಲಿದ್ದಾಗ ಪರಸ್ಪರ ವಿಶ್ವಾಸ ಬೆಳೆದು ಆತ್ಮೀಯ

ಮಿತ್ರರಾಗಿದ್ದರು. ಇಬ್ಬರೂ ಕೂಡಿಯೇ ದೇಶದ ಸ್ವಾತಂತ್ರ್ಯಕ್ಕಾಗಿ ವಿಧಾಯಕ ಕಾರ್ಯಗಳಲ್ಲಿ ದುಡಿದವರು. ಗುದ್ಲೆಪ್ಪನವರು ತಮ್ಮ ವಿವಾಹದ ಪ್ರಸ್ತಾಪ ಮಾಡಿದಾಗ ಸಾಣಿಕೊಪ್ಪ ಅವರು ತಮ್ಮ ತಂಗಿಯನ್ನು ತೋರಿಸುವುದಾಗಿ ಹೇಳಿದಾಗ, ಗುದ್ಲೆಪ್ಪನವರು ತಮ್ಮ ಕೆಲವು ಕರಾರುಗಳಿಗೆ ವಧು ಒಪ್ಪಿದರೆ ಮಾತ್ರ ಮದುವೆಯಾಗುವೆನೆಂದರು. ಆ ಪ್ರಕಾರ ಗಂಗಾದೇವಿಯ ಸಂದರ್ಶನ ಮಾಡಿದರು. ಗುದ್ಲೆಪ್ಪನವರು ಗಂಗಾದೇವಿಗೆ ಹಾಕಿದ ಕರಾರುಗಳಿವು : ಜೀವನ ಪರ್ಯಂತ ಖಾದಿ ತೊಡಬೇಕು, ಹರಿಜನ ಸೇವೆ, ಹರಿಜನ ಕೇರಿಯ ವಾಸ ಮಾಡಬೇಕು, ತಮ್ಮೊಂದಿಗೆ ರಾಷ್ಟ್ರಕ್ಕಾಗಿ ದುಡಿಯಲು ಎಲ್ಲ ಬಗೆಯ ಕಷ್ಟನಷ್ಟಗಳನ್ನು ಅನುಭವಿಸಲು ಸಿದ್ಧಳಾಗಿರಬೇಕು. ಮುಂದಿನ ಮಾತು ಗಂಗಾದೇವಿಯವರೇ ಹೇಳುವಂತೆ, " ಸೀತಾದೇವಿ ಗಂಡನ ಬೆನ್ನು ಹತ್ತಿ ಅಡವಿ ಅಡವಿ ಅಡ್ಡಾಡಿದಂಗ ನೀ ನನ್ನ ಬೆನ್ನ ಹತ್ತಿ ಇರಬೇಕು ಎಂದರು ಅವರು. "[೧೪] ಅದಕ್ಕೆ ಗಂಗಾದೇವಿ ಒಪ್ಪಿದರು.

ಮದುವೆಯ ದಿನ ಗುದ್ಲೆಪ್ಪನವರು, ಗಂಗಾದೇವಿಯವರು ಬೆಳಿಗ್ಗೆ ಎದ್ದು ಊರಲ್ಲೆಲ್ಲ ಕಸ ಗೂಡಿಸಿದರು. ಹರಿಜನ ಕೇರಿಗೆ ಹೋಗಿ ಸ್ವಚ್ಛತಾ ಕಾರ್ಯಕ್ರಮ ಕೈಕೊಂಡರು. ಹರಿಜನರ ಮನೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಸ್ನಾನ ಮಾಡಿಸಿದರು. ಹರಿಜನಕೇರಿಯ ಧ್ವಜಸ್ತಂಭದ ಕೆಳಗೆ ನಿಂತರು. ಗುದ್ಲೆಪ್ಪನವರು ವಧುವಿಗೆ ೪ - ೫ ರೂಪಾಯಿಗಳ ಸಾದಾ ಖಾದಿ ಸೀರೆ ಉಡುಗೊರೆಯಾಗಿ ನೀಡಿದರು. ಅದೇ ಅವರಿಗೆ ಪಟ್ಟೆ ಪೀತಾಂಬರ. ಪರಸ್ಪರ ಹಾಕಿದ ಖಾದಿ ಲಡಿಗಳೇ ದೇಶಭಕ್ತಿಯ ಸುವಾಸನೆ ಬೀರುವ ಪುಷ್ಪ ಮಾಲೆಗಳು. ಹಿರಿಯರಿಗೆ, ಗಾಂಧೀಜಿಯ ಭಾವಚಿತ್ರಕ್ಕೆ ನಮಸ್ಕರಿಸಿದರು. ಮುಗಿಯಿತು ಮದುವೆ.

ಇಂಥ ಮದುವೆ ಗಂಗಾದೇವಿಯವರ ಮನೆಯ ಬಳಗಕ್ಕೆ ಸೇರಲಿಲ್ಲ. ಆದರೆ ಸಹೋದರ ಬಸವಣ್ಣೆಪ್ಪ ಸಾಣಿಕೊಪ್ಪ ಅವರು ಮಾತ್ರ ಬಂದಿದ್ದರು. ದೇಶಭಕ್ತ ಖಾದಿಧಾರಿ ತರುಣರು, ಗುದ್ಲೆಪ್ಪನವರ ಮನೆಯ ಬಳಗದವರು ಬಂದಿದ್ದರು.

ಗುದ್ಲೆಪ್ಪನವರು ಧಾರವಾಡ ಜಿಲ್ಲೆಯ ಶೀಲವಂತ ಬಣಜಿಗರ ಕ್ರೋಧವನ್ನು ಎದುರಿಸಬೇಕಾಯಿತು. ತಮ್ಮ ವಿವಾಹ ಸಮಾರಂಭದ ಭೋಜನ ಕೂಟದಲ್ಲಿ ಹರಿಜನರೊಂದಿಗೆ ಸಹ ಪಂಕ್ತಿಯಲ್ಲಿ ಕುಳಿತುಕೊಳ್ಳಬೇಕೆಂಬ ಕರಾರನ್ನು ಅವರ ಕುಟುಂಬದವರು ಗಾಂಧಿವಾದಿಗಳಾದುದರಿಂದ ಒಪ್ಪಿ ಸಹಕರಿಸಿದರು. ಆದರೆ ಹಾವೇರಿ ತಾಲೂಕಿನ ಬಣಜಿಗರು ಮೊದಲಿಗೆ ಆತಂಕ ವ್ಯಕ್ತಪಡಿಸಿ ಅಸಹಕಾರ ತೋರತೊಡಗಿದರು. ಸಾಮಾಜಿಕ ಸುಧಾರಣೆ, ಸ್ವಾತಂತ್ರ್ಯ ಹೋರಾಟ ದೇಶಾದ್ಯಂತ ಪರಿಣಾಮಕಾರಿಯಾಗಿ ನಡೆದಿದ್ದವು. ಗುದ್ಲೆಪ್ಪನವರು ಆಗಲೆ ಮಹಾನಾಯಕರಾಗಿ ಪ್ರಭಾವಿ ವ್ಯಕ್ತಿಯಾಗಿದ್ದರು. ಅವರನ್ನು ವೈಚಾರಿಕವಾಗಿ ವಿರೋಧಿಸುವ ಸಾಮರ್ಥ್ಯ ಅವರಿಗಿರಲಿಲ್ಲ. ಹೀಗಾಗಿ ಹಾವೇರಿ ತಾಲೂಕಿನ ಕುಲಬಾಂಧವರೆಲ್ಲ ಹರಿಜನರೊಡನೆ ಸಹಪಂಕ್ತಿ ಭೋಜನಕ್ಕೆ ಒಪ್ಪಿಕೊಂಡರು. " ಹಳ್ಳಿಕೇರಿ ಮನೆತನದವರು ಈ ದಿಸೆಯಲ್ಲಿ ಹೊಸ ಯುಗವನ್ನೇ ಪ್ರಾರಂಭಿಸಿದರು. "[೧೫] ಜನರು ಸಂತೋಷದಿಂದ ಸ್ವಾಗತಿಸಿದರು. ಇಂತಹ ನಿರಾಡಂಬರ ರಾಷ್ಟ್ರೀಯ ವಿವಾಹಕ್ಕೆ ಜನ ಮುಂದಾಗತೊಡಗಿದರು.

ಮಕ್ಕಳು - ಮನೆ :

ಗುದ್ಲೆಪ್ಪನವರ ದೇಶಭಕ್ತಿಯಿಂದಾಗಿ ಅವರ ಕುಟುಂಬ ರಾಷ್ಟ್ರೀಯತೆಯ ಸಂಕೇತವಾಗಿ ಶೋಭಿಸುತ್ತಿದೆ. ಅವರದು ತುಂಬು ಸಂಸಾರ. ಅವರ ಹಿರಿಯ ಮಗಳು ಪ್ರೇಮಲತಾ. ಹಿರಿಯ ಮಗ ದೀನಬಂಧು. ಆ ಹೆಸರು ದೀನಬಂಧು ಸಿ. ಎಫ್. ಆ್ಯಂಡ್ರೂಜ ಅವರ ಸವಿನೆನಪಿನದಾಗಿದೆ. ಸಂಗ್ರಾಮಸಿಂಹ ಭಾರತ ಸ್ವಾತಂತ್ರ್ಯ ಸಂಗ್ರಾಮದ ಪ್ರತೀಕ. ೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಘೋಷಣೆ ಬ್ರಿಟಿಶರಿಂದ ಹೊರಬಿದ್ದ ಸಂದರ್ಭದಲ್ಲಿ ಹುಟ್ಟಿದ ಮಗಳಿಗೆ ಭಾರತ ರಾಜರಾಜೇಶ್ವರಿಯೆಂದು ಹೆಸರಿಸಿದರು. ಡಾ॥ ಬಾಬು ರಾಜೇಂದ್ರ ಪ್ರಸಾದರ ಹೆಸರನ್ನು ಹೊತ್ತವನು ರಾಜೇಂದ್ರ. ಕರ್ನಾಟಕ ಏಕೀಕರಣದ ಕಾರ್ಯ ಯಶಸ್ವಿಯಾಗಲಿರುವ ಸಂದರ್ಭದಲ್ಲಿ ಹುಟ್ಟಿದ ಮಗಳಿಗೆ ಕರ್ನಾಟಕ ಜಯಶ್ರೀ ಎಂದು ಹೆಸರು. ಖ್ಯಾತ ರಾಷ್ಟ್ರೀಯ ನಾಯಕ ಚಿತ್ತರಂಜನದಾಸ ಅವರ ಹೆಸರು ಇನ್ನೋರ್ವ ಮಗ ಚಿತ್ತರಂಜನನಿಗೆ. ಪ್ರೇಮಲತಾಳ ಮಗಳು, ಗುದ್ಲೆಪ್ಪನವರ ಮೊದಲ ಮೆಚ್ಚಿನ ಮೊಮ್ಮಗಳು ಪ್ರಿಯಾ. ಇದು ಇಂದಿರಾ ಪ್ರಿಯದರ್ಶಿನಿ ಹೆಸರಿನ ಸಂಕ್ಷಿಪ್ತ ರೂಪ. ಇವರೆಲ್ಲರೂ ಹುಬ್ಬಳ್ಳಿಯಲ್ಲಿ ವಾಸಿಸುವ ಮನೆ ' ಗಾಂಧಿ ಕುಟೀರ ' ಹೀಗೆ ಗುದ್ಲೆಪ್ಪನವರ ದೇಶಭಕ್ತಿ ಹಾಗೂ ನಾಡಿನ ಅಭಿಮಾನದ ಸಂಕೇತವಾಗಿ ಅವರ ಕುಟುಂಬ ಶೋಭಿಸುತ್ತಿದೆ.

ಗುದ್ಲೆಪ್ಪನವರ ನಾಯಕತ್ವ - ಪ್ರಮುಖ ವ್ಯಕ್ತಿಗಳು ಕಂಡಂತೆ :

ಗುದ್ಲೆಪ್ಪನವರ ಸ್ಮರಣ ಶಕ್ತಿ, ಗ್ರಹಣ ಶಕ್ತಿ, ಮೇಧಾ ಶಕ್ತಿ ಮತ್ತು ಭಾಷಣ ಕಲೆ ಅವರ ವ್ಯಕ್ತಿತ್ವದ ಒಡನಾಡಿಗಳಾಗಿದ್ದವು. ಅವರ ಸಂಪರ್ಕದಲ್ಲಿ ಬಂದವರಿಗೆ ಗುದ್ಲೆಪ್ಪನವರ ಸ್ಮರಣಶಕ್ತಿಯ ಪರಿಚಯ ಚೆನ್ನಾಗಿತ್ತು. ತಮ್ಮ ಸಹಾಯ ಬೇಡಿ ಬಂದ ಜನರನ್ನು, ಸ್ನೇಹಿತರನ್ನು, ಶಿಕ್ಷಕರನ್ನು ಎಂದೂ ಮರೆಯಲಿಲ್ಲ. ಅವರು ಗಣಿತಜ್ಞರು. ಪ್ರಸಂಗ ನಡೆದ ಸಮಯ, ದಿನಾಂಕ, ವಾರ, ತಿಂಗಳು, ಇಸ್ವಿಯನ್ನು ಖಚಿತವಾಗಿ ಹೇಳುತ್ತಿದ್ದರು. ಒಮ್ಮೆ ಪರಿಚಯವಾದರೆ ಆ ವ್ಯಕ್ತಿ ಹತ್ತು ವರ್ಷದ ನಂತರ ಭೆಟ್ಟಿಯಾದರೆ ಅವರ ಹೆಸರುಗೊಂಡು ಕರೆಯುತ್ತಿದ್ದರು. ಇದು ಅವರ ವೈಶಿಷ್ಟ್ಯ.

ಡಾ. ಡಿ. ಸಿ. ಪಾವಟೆ ಅವರ ಮಾತಿನಲ್ಲಿ ಹೇಳುವುದಾದರೆ, " ಜಾತಿ ಮತಗಳ ಕಟ್ಟುಗಳ ಆಚೆ ಇದ್ದವರು ಹಳ್ಳಿಕೇರಿಯವರು. ಅಂತೆಯೇ ಎಲ್ಲ ವರ್ಗಗಳಲ್ಲಿ, ಎಲ್ಲ ಜನಾಂಗಗಳಲ್ಲಿ ಅವರ ಸ್ನೇಹಿತರಿದ್ದಾರೆ, ಅನುಯಾಯಿಗಳಿದ್ದಾರೆ. ಎಲ್ಲರಿಗೂ ಅವರನ್ನು ಕಂಡರೆ ಗೌರವಾದರ. ಅವರು ನಾಡಿಗಾಗಿ ಮಾಡಿದ ತ್ಯಾಗ ಹಾಗೂ ನಿಸ್ವಾರ್ಥ ಸೇವೆಗಳಷ್ಟೇ ಅಲ್ಲದೆ ಅವರ ಉಪಕಾರಿ ಮನೋಧರ್ಮವೂ ಕಾರಣವಾಗಿದೆ. ಎಂಥ ಸಾಮಾನ್ಯನೂ ಅವರ ಬಾಗಿಲಿಗೆ ಸಹಾಯಕ್ಕಾಗಿ ಬಂದರೂ ಅವರಿಗಾಗಿ ಯಾವ ಹುಯಿಲನ್ನೂ ಎಬ್ಬಿಸದೆ ತಮ್ಮಿಂದ ಸಾಧ್ಯವಾದುದೆಲ್ಲವನ್ನು ಮಾಡುವ ಸ್ವಭಾವ ಅವರದು. " [೧೬]

ಅವರದು ಎತ್ತರದ ನಿಲುವು, ಬಿತ್ತರದ ನೋಟ. ಭೀಮಸೇನನಂತಹ ಅಜಾನುಬಾಹುಕಾಯ. ತಮ್ಮ ೧೯೬೦ ರ ದಿನಚರಿಯಲ್ಲಿ ಅವರೇ ಬರೆದಂತೆ ಅವರ ಎತ್ತರ ೫ ಅಡಿ ೧೧.೫ ಅಂಗುಲ ಇತ್ತು.



ಗುದ್ಲೆಪ್ಪನವರು ಜನಿಸಿದ ಹೊಸರಿತ್ತಿಯ ಮನೆ.



ಪತ್ನಿ. ಮಕ್ಕಳು ಮತ್ತು ಮೊಮ್ಮಗಳೊಂದಿಗೆ ಗುದ್ಲೆಪ್ಪನವರು

" ಬಡಿಗೆ ಹಿಡಿದ, ಸೂಕ್ಷ್ಮ ಹೊಳಪುಗಣ್ಣಿನ, ಒಳನಗೆಯ, ಭಾರಿ ಹಳ್ಳಿಕೇರಿಯವರ ವ್ಯಕ್ತಿತ್ವ ಕರ್ನಾಟಕದ ಜನತೆಗೆ ಊರುಗೋಲಂತೆ ದೃಢ; ಮಹಾವೃಕ್ಷದಂತೆ ಆಶ್ರಿತ ವತ್ಸಲ; ಪರ್ವತದಂತೆ ಅಚಲ, ಮಾನವಮೇರು. "[೧೭] ವಿಧಾನ ಪರಿಷತ್ತಿನ ಉಪಸಭಾಪತಿಯಾಗಿದ್ದ ಎಂ. ಆರ್. ಲಕ್ಷ್ಮಮ್ಮನವರ ಈ ಮಾತುಗಳು ಹಳ್ಳಿಕೇರಿಯವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

" ಬಿಳಿ ಧೋತಿ, ಬಿಳಿ ಅಂಗಿ, ತಲೆಯ ಮೇಲೆ ಟೊಪ್ಪಿಗೆ ಹಾಕುತ್ತಿರಲಿಲ್ಲ. ಕೈಯಲ್ಲಿ ಒಂದು ಬಡಿಗಿ ಹಿಡಿದುಕೊಂಡು ಸಾವಕಾಶವಾಗಿ ಬರುತ್ತಿದ್ದ ಅವರ ವ್ಯಕ್ತಿತ್ವದ ಚಿತ್ರ ನಮ್ಮ ಕಣ್ಮುಂದೆ ಬರುತ್ತದೆ. ಅವರು ಡಿಕ್ಟೇಟರ್ ಇದ್ದಾಂಗ ಇರತಿದ್ರು. ಈ ಕೆಲಸ ಆಗಬೇಕೆಂದರೆ ಆಗಲೇಬೇಕು. ಅಂಥ ಛಲ ಅವರದು. ಯಾರಿಗೂ ನೋವು ಆಗುವಂತಹ ಮಾತು ಆಡುತ್ತಿರಲಿಲ್ಲ. ದಿಲ್ಲಿ ವಾಸ್ತವ್ಯದಲ್ಲಿ ಒಂದೇ ಕೋಣೆಯಲ್ಲಿದ್ದೆವು. ತಮ್ಮ ಮಕ್ಕಳು, ತಮ್ಮಂದಿರನ್ನು ನೋಡಿದಂತೆ ನನ್ನನ್ನು ಆತ್ಮೀಯತೆಯಿಂದ ನೋಡಿದರು. ನಾವು ರಾಜಕೀಯದಲ್ಲಿ ಹೇಗೆ ಬೆಳೆಯಬೇಕೆಂದು ಮಾರ್ಗದರ್ಶನ ಮಾಡುತ್ತಿದ್ದರು. "[೧೮] ಎಂದು ಗುದ್ಲೆಪ್ಪನವರ ನೇತೃತ್ವದಲ್ಲಿ ಮಹಾಜನ ವರದಿ ಜಾರಿಗೆ ತರಬೇಕೆಂದು ಆಗ್ರಹಿಸಿ ದಿಲ್ಲಿಗೆ ಹೋದ ನಿಯೋಗದಲ್ಲಿದ್ದ ವಿಧಾನ ಪರಿಷತ್ತಿನ ಜನಸಂಘದ ಸದಸ್ಯರಾಗಿದ್ದ ವಾಯ್. ಎಸ್. ಪಾಟೀಲ ಅವರು ತಮ್ಮ ಅನುಭವವನ್ನು ಹೇಳಿದರು.

ನಾಯಕನಾದವನಿಗೆ ಉತ್ತಮ ವಾಕ್‌ಶೈಲಿ ಅಗತ್ಯ. ಗುದ್ಲೆಪ್ಪನವರು ಉತ್ತಮ ವಾಗ್ಮಿಗಳಾಗಿದ್ದರು. ಪಕ್ಷದ ಸಭೆಯಲ್ಲಿ ಚರ್ಚೆ ಮಾಡುವಾಗ, ಸಾರ್ವಜನಿಕ ಸಮಾರಂಭಗಳಲ್ಲಿ ಭಾಷಣ ಮಾಡುವಾಗ ವಿಷಯ ನಿರೂಪಣೆ, ಅನುಭವಪೂರ್ಣ ವಿಷಯ ಸಂಗ್ರಹ, ಪರಿಣಾಮಕಾರಿ ಶೈಲಿ ಮುಂತಾದವು ಕೇಳುಗರನ್ನು ಆಕರ್ಷಿಸುತ್ತಿದ್ದವು. ಗಂಟೆಗಟ್ಟಲೆ ಮಾತನಾಡುತ್ತಿದ್ದರು. ಅವರು ಗಳಿಸಿದ ಜ್ಞಾನ, ಹೃದಯಕ್ಕೆ ಮುಟ್ಟುವ ಮಾತಿನಶೈಲಿ ಇವು ಜನರ ಮನಸ್ಸಿನ ಮೇಲೆ ಅಚ್ಚೊತ್ತುವಂತೆ ಮಾಡುತ್ತಿದ್ದವು. ಜನರನ್ನು ಹುರಿದುಂಬಿಸುತ್ತಿದ್ದವು. ಕನ್ನಡದಲ್ಲಷ್ಟೇ ಅಲ್ಲ ಇಂಗ್ಲೀಷ, ಹಿಂದಿ ಭಾಷೆಗಳಲ್ಲಿಯೂ ಅವರು ನಿರರ್ಗಳವಾಗಿ ಮಾತನಾಡುತ್ತಿದ್ದರು. ಅಂತೆಯೇ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಅನೇಕ ಪ್ರಾಂತಗಳಲ್ಲಿ ಮಿತ್ರರನ್ನು ಪಡೆದಿದ್ದರು. ಚುನಾವಣಾ ಪ್ರಚಾರಕ್ಕಾಗಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುತ್ತಿದ್ದ ರಾಷ್ಟ್ರೀಯ ನಾಯಕರುಗಳ ಹಿಂದಿ ಮತ್ತು ಇಂಗ್ಲೀಷ ಭಾಷಣಗಳನ್ನು ಗುದ್ಲೆಪ್ಪನವರು ಸ್ಥಳದಲ್ಲಿಯೇ ಕನ್ನಡಕ್ಕೆ ಅನುವಾದಿಸುತ್ತಿದ್ದರು. ಇದರಿಂದ ಜನಸಾಮಾನ್ಯರಿಗೆ ನಾಯಕರುಗಳು ಹೇಳಿದ ವಿಚಾರಗಳು ಮನದಟ್ಟಾಗುತ್ತಿದ್ದವು.

ಕಾಂಗ್ರೆಸ್ ಸಭೆಗಳಲ್ಲಿ ಅವರು ವಿಷಯಗಳನ್ನು ಮಂಡಿಸುತ್ತಿದ್ದ ರೀತಿ, ಅವರ ಕಟ್ಟುನಿಟ್ಟಾದ ಖಡಾಖಂಡಿತ ವಾದಸರಣಿ ಮೆಚ್ಚುಗೆ ಗಳಿಸುತ್ತಿತ್ತು. ಪ್ರಭುತ್ವಪೂರ್ಣವಾದ ಧ್ವನಿಯಲ್ಲಿ ತಮ್ಮ ವಾದ ಮಂಡಿಸುತ್ತಿದ್ದರು.

" ..... ಈತ ಕಾರ್ಯನಿರತ. ಸಂಸ್ಥೆಗೆ ದುಡಿದಂಥ ಮನುಷ್ಯ. ವಿದ್ಯಾಪಂಡಿತನಲ್ಲ ನಿಜ. ಆದರೆ ಜನ ಸಾಮಾನ್ಯರ ಕಷ್ಟ ಕೋಟಲೆಗಳನ್ನು ಪಾರ್ಲಿಮೆಂಟಿನ ಮುಂದೆ ಎತ್ತಿ ಹಿಡಿಯಬಲ್ಲ. ಮೇಲಾಗಿ ಅಲ್ಪ ಸಂಖ್ಯಾತ " ಎಂದು ಮುಂತಾಗಿ

ತಮ್ಮ ಹುರಿಯಾಳನ್ನು ಮುಂದಿಡುವ ಪರಿ. ನಾವು ಅವರ ದೃಷ್ಟಿಕೋನ ಒಪ್ಪಲಿ ಬಿಡಲಿ ಪ್ರಭಾವಶಾಲಿಯಾಗಿರುತ್ತಿತ್ತು. " ನೂರಕ್ಕೆ ಎಪ್ಪತ್ತೈದು ಸಾರಿ ಅವರ ಪಟ್ಟು ಗೆಲ್ಲುತ್ತಿತ್ತು. " [೧೯]

ಧಾರವಾಡದ ಸಂಘವೊಂದರಲ್ಲಿ ಗುದ್ಲೆಪ್ಪನವರು ಸಹಕಾರ ವಿಷಯಕ್ಕೆ ಸಂಬಂಧಪಟ್ಟಂತೆ ಅಧ್ಯಯನಪೂರ್ಣವಾದ ಸುದೀರ್ಘ ಭಾಷಣ ಮಾಡಿದರು. " ಬಿಡುವಿಲ್ಲದ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಯೂ ಇಷ್ಟು ಅಧ್ಯಯನವನ್ನು ಹೇಗೆ ಮಾಡಿದರೆಂದು ಆಶ್ಚರ್ಯವೆನಿಸಿತು. " [೨೦] ಎನ್ನುತ್ತಾರೆ ಮಾಜಿ ಲೋಕಸಭಾ ಸದಸ್ಯ ಬಿ. ಎಂ. ಮೆಣಸಿನಕಾಯಿ ಅವರು.

ತಮ್ಮ ಅಗಾಧವಾದ ನೆನಪಿನ ಶಕ್ತಿ. ಹೃದಯ ವೈಶಾಲ್ಯ. ಅಂತಃಕರಣಗಳಿಂದಾಗಿ ಜನರ ಪ್ರೀತಿ ಅಭಿಮಾನಗಳಿಗೆ ಪಾತ್ರರಾದರು. ಈ ಗುಣಗಳು ಅನುಯಾಯಿಗಳ ಮೇಲೆ ತುಂಬಾ ಪ್ರಭಾವ ಬೀರಿದವು. ಜನಸಾಮಾನ್ಯರ ನೆಚ್ಚಿನ ನಾಯಕರೆನಿಸಿದರು.

ಗುದ್ಲೆಪ್ಪನವರ ವ್ಯಕ್ತಿತ್ವದ ವಿಶಿಷ್ಟ ಗುಣಗಳನ್ನು ಅವರ ಆತ್ಮೀಯ ಸ್ನೇಹಿತರಾದ ಅಂಕೋಲೆಯ ಸ. ಪ. ಗಾಂವಕರ ಹೀಗೆ ಹೇಳುತ್ತಾರೆ :

" ಅವರೊಬ್ಬ ತೇಜಸ್ವೀ ಸಂಘಟಕರು. ಅವರು ಕುಶಾಗ್ರಮತಿಗಳು. ದೃಢಚಿತ್ತರು. ಕಷ್ಟ ಸಹಿಷ್ಣುಗಳು. ಹಾಗೆಯೇ ಕಾರ್ಯಕುಶಲರೂ ಕಾರ್ಯತತ್ಪರರೂ ಹೌದು. ಅಂತೆಯೇ ಸಂಘಟನಾ ಚತುರರೆಂದು ಅವರ ಕೀರ್ತಿ. ಕಷ್ಟಗಳನ್ನೆದುರಿಸಿ ಎದ್ದು ನಿಲ್ಲಬಲ್ಲಂಥ ಸಾಹಸೀ ಮನೋವೃತ್ತಿ. ಹೋರಾಡಿ ಗೆದ್ದು ಬರುವಂಥ ಪ್ರಕೃತಿ. ಸ್ವಲ್ಪದರಲ್ಲಿ ಹೇಳಬೇಕೆಂದರೆ ಅವರು ಸಹಿಷ್ಣು, ವರ್ಧಿಷ್ಣು ಮತ್ತು ಜಯಿಷ್ಣು ! " ಇಂಥ ವೈಶಿಷ್ಟ್ಯಪೂರ್ಣ ಗುಣಗಳಿಂದಾಗಿ ಗುದ್ಲೆಪ್ಪನವರು ಜನಪ್ರಿಯ ಹಾಗೂ ಯಶಸ್ವೀ ನಾಯಕರಾಗಿ ಬೆಳೆದರು.

ಗಾಂವಕರ ಅವರೇ ಮುಂದುವರಿದು. " ಶ್ರೀ ಹಳ್ಳಿಕೇರಿಯವರು ದೀರ್ಘದ್ವೇಷಿಗಳಲ್ಲ. ಮತ್ತು ಜಾತಿ ದ್ವೇಷಿಗಳೂ ಅಲ್ಲ. ಬಡವರ ಬಗ್ಗೆ ಸಹಾಯ ಮಾಡುವ ಹಾಗೂ ಬಡವರ ತೊಂದರೆಗಳನ್ನು ಎಂಥ ಗಡಿಬಿಡಿಯಲ್ಲಿಯೂ ಸಾವಧಾನವಾಗಿ ತಿಳಿದುಕೊಳ್ಳುವ ಬಹುದೊಡ್ಡ ಗುಣವುಳ್ಳವರು " [೨೧] ಎನ್ನುತ್ತಾರೆ.

ಗುದ್ಲೆಪ್ಪನವರು ರಚನಾತ್ಮಕ ಕಾರ್ಯಗಳನ್ನು ಮಾಡುವಲ್ಲಿ ಭಾರತ ಸ್ವಾತಂತ್ರ್ಯಕ್ಕಾಗಿ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಡುವಲ್ಲಿ. ಸಭೆ ಸಮ್ಮೇಳನಗಳನ್ನು ನೆರವೇರಿಸುವಲ್ಲಿ. ಹಲವಾರು ಹೋರಾಟಗಳಲ್ಲಿ ಜನರನ್ನು ಸಂಘಟಿಸುವಲ್ಲಿ ಅವರು ತೋರಿದ ಕರ್ತವ್ಯದಕ್ಷತೆ. ಬುದ್ಧಿ ಕೌಶಲ್ಯ. ಪ್ರಾಮಾಣಿಕತೆ ಹಾಗೂ ಸಂಘಟನಾ ಸಾಮರ್ಥ್ಯ ಅದ್ಭುತವಾಗಿದ್ದವು. ಅವರ ಧೈರ್ಯ. ಸ್ಥೈರ್ಯ. ತ್ಯಾಗ. ಸಮರ್ಪಣಾ ಮನೋಭಾವಗಳು ಎಂಥವರೂ ಮೆಚ್ಚತಕ್ಕವಾಗಿದ್ದವು.

ಹುಚ್ಚೇಶ್ವರ ಮೇದಿಯವರು ಹೇಳುವಂತೆ. " ಹಳ್ಳಿಕೇರಿಯವರು ಮೂಲತಃ ಸಂಘಟಕರು. ಹಳ್ಳಿಯೊಳಗಿನ ಪ್ರಮುಖರು ಯಾರು ? ಯಾರಿಂದ ಕೆಲಸ ಆಗುತ್ತದೆ ? ಯಾರಿಂದ ಆಗುವದಿಲ್ಲ. ಇದನ್ನು ತಿಳಿದುಕೊಳ್ಳುವ ಶಕ್ತಿ ಅವರಲ್ಲಿತ್ತು.. " [೨೨]

ಅವರ ಕಾಯ ವಜ್ರದಂತೆ ಕಠೋರವಾಗಿ ಕಂಡರೂ ಹೃದಯ ಮಾತ್ರ ಹೂವಿನಂತೆ ಕೋಮಲ. ಬಡವರು - ಸಿರಿವಂತರು, ಹಿರಿಯರು - ಕಿರಿಯರು ಯಾರೇ ಅವರ ಕಡೆ ಕೆಲಸಕ್ಕಾಗಿ ಬಂದರೆ ಅವರನ್ನು ಅಕ್ಕರತೆಯಿಂದ ಮಾತನಾಡಿಸಿ, ಅವರ ಆಗು - ಹೋಗುಗಳನ್ನು ತಿಳಿದುಕೊಂಡು ನೆರವು ನೀಡುತ್ತಿದ್ದರು.

ಅಂತೆಯೇ ಬೆಲ್ಲಕ್ಕೆ ಇರುವೆ ಮುತ್ತುವಂತೆ ಜನ ಅವರಿದ್ದಲ್ಲಿ ನೆರೆಯುತ್ತಿದ್ದರು. ಅವರ ಮನೆಯ ಮುಂದೆ ಜನ ಅವರನ್ನು ಭೆಟ್ಟಿಯಾಗಲು ಸಾಲು ಹಚ್ಚಿ ನಿಲ್ಲುತ್ತಿದ್ದರು. ಅವರನ್ನು ಭೆಟ್ಟಿಯಾದರೆ ತಮ್ಮ ಕೆಲಸ ಕೈಗೂಡುವುದೆಂಬ ವಿಶ್ವಾಸ ಜನರಲ್ಲಿ ಪ್ರಚಲಿತವಿತ್ತು.

ಗುದ್ಲೆಪ್ಪನವರು ಜನರನ್ನು ಸಂಘಟಿಸಿ, ರಚನಾತ್ಮಕ ಕಾರ್ಯ ಮಾಡುವಲ್ಲಿ ದಣಿವರಿಯದೇ ದುಡಿದವರು. ಗುದ್ಲೆಪ್ಪನವರ ಕಾರ್ಯವೈಖರಿಯ ಕುರಿತು ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರ ಅಭಿಪ್ರಾಯ ಗಮನಾರ್ಹ :

" ಅನವಶ್ಯಕ ಮಾತುಗಳಿಲ್ಲ. ಜೊಳ್ಳು ಹರಟೆಯಿಲ್ಲ. ದೇಶಾವರಿ ನಗೆಯಿಲ್ಲ. ಸಮಯದೊಡನೆ ಸ್ಪರ್ಧೆ ನಡೆದಂತೆ ಎಲ್ಲವೂ ಪಟಪಟನೆ ಮುಗಿಯಬೇಕು. ಆಗಬೇಕಾದ ಕೆಲಸ ಆಗಲೇಬೇಕು. ಇಂದಿನ ಕೆಲಸವನ್ನು ನಾಳೆಗೆ ಮುಂದೂಡುವುದು ಅವರಿಗೆ ಗೊತ್ತೇ ಇಲ್ಲ. ಮೈಸೂರಿನಲ್ಲಿದ್ದವರು ಬೆಳಿಗ್ಗೆ ಹುಬ್ಬಳ್ಳಿಗೆ ಬರುವುದಿದ್ದರೆ ರಾತ್ರಿಯಿಡೀ ಪ್ರವಾಸಿ ಮಾಡಿಯಾದರೂ ಸಮಯಕ್ಕೆ ಸರಿಯಾಗಿ ಬಂದೇ ಬರತಕ್ಕವರು. ಸೋಮಾರಿತನವಂತೂ ಅವರ ಹತ್ತಿರವೂ ಸುಳಿಯುವಂತಿಲ್ಲ. ಬೇನೆ - ಬೇಸರಿಕೆಗಳನ್ನು ಗಮನಿಸತಕ್ಕವರಲ್ಲ. ಕರ್ನಾಟಕದ ರಾಜಕೀಯ ರಂಗದಲ್ಲಿ ಗುದ್ಲೆಪ್ಪನವರಂತಹ ವ್ಯಕ್ತಿ ಗುದ್ಲೆಪ್ಪನವರೊಬ್ಬರೇ. ಅವರನ್ನು ಕುರಿತು ಯೋಚಿಸಿದಾಗಲೆಲ್ಲ ನನಗೆ ಸದೋಬಾ ಪಾಟೀಲರ ನೆನಪು ಬರುತ್ತದೆ. ಇಬ್ಬರದೂ ವಿಶ್ರಾಂತಿಯರಿಯದ ಜೀವನ. ಸತತವಾಗಿ ದುಡಿತ. ಜನರನ್ನು ಆಕರ್ಷಿಸಿ, ಗುಂಪುಕಟ್ಟಿ, ಸಂಘ - ಸಂಸ್ಥೆಗಳ ಕಾರ್ಯದಲ್ಲಿ ಅವರನ್ನು ತೊಡಗಿಸಿ, ಹಿರಿಯ ಸೋದರನಂತೆ ಅವರನ್ನು ನಡೆಸಿಕೊಳ್ಳುತ್ತ ಪ್ರಬಲವಾದ ಸಂಘಟನೆಯನ್ನು ನಿರ್ಮಿಸುವುದರಲ್ಲಿ ಇಬ್ಬರೂ ನಿಷ್ಣಾತರು. " [೩೩]

" ಹಿಡಿದ ಕಾರ್ಯವನ್ನು ಬಿಡದ ಛಲ ಅವರದು. ಆದುದರಿಂದ ಅವರನ್ನು ನೋಡಿದವರೆಲ್ಲ ' ಛಲದಂಕಮಲ್ಲ ', ' ಉಕ್ಕಿನ ಮನುಷ್ಯ '. ' ಕರ್ನಾಟಕದ ವಲ್ಲಭಭಾಯಿ ಪಟೇಲ ' ಎನ್ನುತ್ತಿದ್ದರು. ಪಟೇಲರ ಸಿಂಹ ಧೈರ್ಯ, ಪಂಡಿತ ನೆಹರೂಜಿಯ ತ್ಯಾಗದೃಷ್ಟಿ, ಗಾಂಧೀಜಿಯ ಸೇವಾಧರ್ಮ ಇವು ಗುದ್ಲೆಪ್ಪನವರ ಜೀವನದಲ್ಲಿ ಮುಪ್ಪುರಿಗೊಂಡಿವೆ " [೩೪] ಎಂದು ಅವರ ಮಾರ್ಗದರ್ಶನದಲ್ಲಿ ಕಾರ್ಯ ಮಾಡಿದ ಮಹಾಂತೇಶ ಹಂದ್ರಾಳ ಅವರು ಬಣ್ಣಿಸಿದ್ದಾರೆ.

ಗುದ್ಲೆಪ್ಪನವರ ಅಸದೃಶವಾದ ನಾಯಕತ್ವದ ಕುರಿತು ಸಮಾಜದ ವಿವಿಧ ವಲಯಗಳ ಇನ್ನೂ ಅನೇಕ ಪ್ರಮುಖರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಇಂಥ ಮೇರು ವ್ಯಕ್ತಿತ್ವದ ಧೀರನಾಯಕ ಗುದ್ಲೆಪ್ಪನವರು ಸಂಘಟಿಸಿದ ವಿವಿಧ ಚಟುವಟಿಕೆಗಳು, ಹೋರಾಟಗಳ ಕುರಿತು ಮುಂದಿನ ಅಧ್ಯಾಯಗಳಲ್ಲಿ ನಿರೂಪಿಸಲಾಗಿದೆ.

ಟಿಪ್ಪಣೆಗಳು

೧. Szilagyi Andrew. D., and Wallace Marc. J., **Organizational behavior And Performance** (Illinois : Scott Foresman and Company, 1980) p. 276 and 277

೨. *Ibid. p. 280 and 281*

೩. *Ibid. p. 283*

೪. ಬಸವಾ ಕೆ. ಡಿ., **ನಿರ್ವಹಣಾಶಾಸ್ತ್ರದ ಮೂಲ ತತ್ವಗಳು** (ಹುಬ್ಬಳ್ಳಿ : ವಿದ್ಯಾವಾಹಿನಿ ಪ್ರಕಾಶನ. ೧೯೯೫) ಪು. ೨೮೧

೫. Szilagyi Andrew. D., and Wallace Marc. J., **Organizational Behavior And Performance** (Illinois : Scott Foresman and Company, 1980) p. 288

೬. *Ibid. p. 291*

೭. ಕಾಮತ ಸೂರ್ಯನಾಥ. ಯು., (ಸಂ.) **ಕರ್ನಾಟಕ ರಾಜ್ಯ ಗ್ಯಾಝೆಟೀಯರ್**, ಭಾಗ - ೨ (ಬೆಂಗಳೂರು : ಕರ್ನಾಟಕ ರಾಜ್ಯ ಸರಕಾರ, ೧೯೮೬) ಪು. ೬೨೪

ಕಾಮತ ಸೂರ್ಯನಾಥ. ಯು.. (ಸಂ.) **ಕರ್ನಾಟಕ ರಾಜ್ಯ ಗ್ಯಾಝೆಟೀಯರ್**, ಧಾರವಾಡ ಜಿಲ್ಲೆ (ಬೆಂಗಳೂರು : ಕರ್ನಾಟಕ ರಾಜ್ಯ ಸರಕಾರ. ೧೯೯೫) ಪು. ೧೦೩೪

೮. ಮುಂದೆ ಉತ್ತರ ಕರ್ನಾಟಕದ ಪ್ರಖ್ಯಾತ ಕೆ. ಎಲ್. ಇ. ಶಿಕ್ಷಣ ಸಂಸ್ಥೆಯನ್ನು ಸಂಸ್ಥಾಪಿಸಿದ ಸಪ್ತರ್ಷಿಗಳಲ್ಲಿ ಇವರಿಬ್ಬರು.

೯. ಪಟ್ಟಣಶೆಟ್ಟಿ ಸಿದ್ಧಲಿಂಗ., **ಹಳ್ಳಿಕೇರಿ ಗುದ್ಲೆಪ್ಪನವರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ. ೨೦೦೦. ತೃ. ಮು.) ಪು. ೨೦

೧೦. ಅದೇ. ಪು. ೨೦

೧೧. ಅದೇ. ಪು. ೨೩

೧೨. ಅದೇ. ಪು. ೨೩

೧೩. ಬಾಗಿ ಬಿ. ಬಿ., " ನನ್ನ ವಿದ್ಯಾರ್ಥಿ ಶ್ರೀ ಹಳ್ಳಿಕೇರಿ ". ಗೋಕಾಕ ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪು. ೧೯೯

೧೪. ಹಳ್ಳಿಕೇರಿ ಗಂಗಾದೇವಿ., ಗುದ್ಲೆಪ್ಪನವರ ಧರ್ಮಪತ್ನಿ. ಹುಬ್ಬಳ್ಳಿ. ವಯಸ್ಸು : ೮೪. ೨೨-೧೦-೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೫. ಕಂಬಿ ವಿ. ಎಸ್., ಬಿ. ಎಂ. **ಸಾಣಿಕೊಪ್ಪ – ಸ್ವಾತಂತ್ರ್ಯ ಸಮರ ಮತ್ತು ನಂತರ** (ಧಾರವಾಡ : ಶ್ರೀ ವಿದ್ಯಾ ಪ್ರಕಾಶನ. ೧೯೯೧) ಪು. ೨೮೫ ಮತ್ತು ೨೮೬

೧೬. ಪಾವಟೆ ಡಿ. ಸಿ., " ಕರ್ನಾಟಕದ ಸಿಂಹ ". ಗೋಕಾಕ ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪು. ೨೬

೧೭. ಲಕ್ಷ್ಮಮ್ಮ ಎಂ. ಆರ್., " ಮಾನವ ಮೇರು ". ಅದೇ. ಪು. ೭೩

೧೮. ಪಾಟೀಲ ವಾಯ್. ಎಸ್., ಮಾಜಿ ವಿಧಾನ ಪರಿಷತ್ ಸದಸ್ಯರು. ಧಾರವಾಡ. ವಯಸ್ಸು : ೭೫. ೧೬ - ೭ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದುದು.

೧೯. ಲಕ್ಷ್ಮಮ್ಮ ಎಂ. ಆರ್., " ಮಾನವ ಮೇರು ". ಗೋಕಾಕ. ವಿ. ಕೆ. . ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪುಟ ೭೩

೨೦. ಮೆಣಸಿನಕಾಯಿ ಬಿ. ಎಂ., ಮಾಜಿ ಲೋಕಸಭಾ ಸದಸ್ಯರು. ಹಾವೇರಿ. ವಯಸ್ಸು : ೭೬. ೪-೧೨-೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೧. ಗಾಂವಕರ ಸ. ಪ., " ನಾನು ಕಂಡ ಜಿ. ವ್ಹಿ. ಹಳ್ಳಿಕೇರಿಯವರು ". ಗೋಕಾಕ ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪುಟ. ೩೨ ಮತ್ತು ೩೩

೨೨. ಮೇದಿ ಹುಚ್ಚೇಶ್ವರ., ಸ್ವಾತಂತ್ರ್ಯಯೋಧರು ಮತ್ತು ಸಂಪಾದಕರು " ಕನ್ನಡಿಗ " ವಾರಪತ್ರಿಕೆ ಹುಬ್ಬಳ್ಳಿ. ವಯಸ್ಸು : ೭೮. ೧೪-೨-೧೯೯೯ ರಂದು ಸಂದರ್ಶನದಲ್ಲಿ ಹೇಳಿದುದು.

೨೩. ಕಟ್ಟಿಮನಿ ಬಸವರಾಜ., " ನಾನು ಕಂಡ ಹಳ್ಳಿಕೇರಿಯವರು." ಗೋಕಾಕ ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪು. ೮೩

೨೪. ಹಂದ್ರಾಳ ಮಹಾಂತೇಶ., " ಕರ್ಮವೀರ ಗುದ್ಲೆಪ್ಪನವರು." ಅದೇ. ಪು. ೧೨೪

ಅಧ್ಯಾಯ ಎರಡು

ಸ್ವಾತಂತ್ರ್ಯ ಚಳುವಳಿಯ ಮುಂದಾಳುತನ

ಅಧ್ಯಾಯ ಎರಡು

ಸ್ವಾತಂತ್ರ್ಯ ಚಳುವಳಿಯ ಮುಂದಾಳುತನ

ಬ್ರಿಟಿಷರ ಆಡಳಿತಾವಧಿಯಲ್ಲಿ ಭಾರತೀಯರ ಜೀವನ ಗುಲಾಮಗಿರಿ, ದಬ್ಬಾಳಿಕೆ, ಶೋಷಣೆಗೆ ಒಳಗಾಗಿ ಬಳಲುತ್ತಿತ್ತು. ಅಲ್ಲಲ್ಲಿ ಪ್ರತಿಭಟನೆಗಳು ನಡೆದರೂ ಯಶಸ್ವಿಯಾಗದೇ ಹೋದವು. ವಿಧಾಯಕ ಸಂಘಟನೆಯ ಮೂಲಕ ಸಾಮೂಹಿಕ ಹೋರಾಟ ಮಾಡಿದಾಗ ಮಾತ್ರ ಬೇಡಿಕೆಗಳು ಈಡೇರುವವು, ಕಾರ್ಯಗಳು ಸಿದ್ಧಿಸುವವು ಎಂದು ಮನಗಂಡ ಭಾರತೀಯರು ಕಾಂಗ್ರೆಸ್ ಸಂಘಟನೆಯ ಮೂಲಕ ವ್ಯವಸ್ಥಿತವಾದ ಹೋರಾಟ ಪ್ರಾರಂಭಿಸಿದರು.

ಪ್ರಾರಂಭದಲ್ಲಿ ಕಾಂಗ್ರೆಸ್‌ನಲ್ಲಿದ್ದ ಮಂದಗಾಮಿಗಳು ಸೌಮ್ಯ ರೀತಿಯಲ್ಲಿ ಬ್ರಿಟಿಷರಿಗೆ ಮನವಿಗಳನ್ನು ಸಲ್ಲಿಸುವುದು, ಗೊತ್ತುವಳಿಗಳನ್ನು ಪಾಸು ಮಾಡುವುದರ ಮೂಲಕ ಅವರ ಮನವೊಲಿಸಿ ಭಾರತೀಯರ ಬೇಡಿಕೆಗಳ ಈಡೇರಿಕೆಗೆ ಯತ್ನಿಸುತ್ತಿದ್ದರು. ಕಾಂಗ್ರೆಸ್ಸಿನಲ್ಲಿದ್ದ ಕೆಲವು ಮುಖಂಡರು ಈ ಮಂದಗಾಮಿ ನೀತಿಯನ್ನು ಖಂಡಿಸತೊಡಗಿದರು.

ತತ್ಫಲವಾಗಿ ೧೯೦೫ ರಲ್ಲಿ " ಲಾಲ - ಬಾಲ - ಪಾಲ " ಎಂದೇ ಖ್ಯಾತನಾಮರಾದ ಲಾಲಾ ಲಜಪತರಾಯ, ಬಾಲಗಂಗಾಧರ ತಿಲಕ ಹಾಗೂ ಬಿಪಿನಚಂದ್ರ ಪಾಲ ಅವರ ನೇತೃತ್ವದಲ್ಲಿ ಕಾಂಗ್ರೆಸ್ಸಿನಲ್ಲಿಯೇ ಉಗ್ರಗಾಮಿ ಪಂಥದ ಉಗಮವಾಯಿತು. ಮುಂದೆ ಉಗ್ರಗಾಮಿಗಳ ಒಡಿತವನ್ನು ಸಡಿಲಿಸಿಕೊಂಡ ಕಾಂಗ್ರೆಸ್ ಮೊದಲಿನ ನೀತಿಯನ್ನು ಬದಲಿಸಿಕೊಂಡಿತು. ಉಚ್ಚವರ್ಗದವರ ಪ್ರವೇಶಕ್ಕೆ ಮಾತ್ರ ಪರಿಮಿತಗೊಂಡ ಕಾಂಗ್ರೆಸ್ ಬಾಗಿಲು ಮಧ್ಯಮವರ್ಗದವರಿಗೂ ಮುಕ್ತವಾಗುವಂತಾಯಿತು.

ಕರ್ನಾಟಕವು ವಿದೇಶಿ ಶಕ್ತಿಗಳ ವಿರುದ್ಧ ಬಹುಕಾಲದಿಂದಿಲೂ ಅದರಲ್ಲೂ ವಿಶೇಷವಾಗಿ ೧೮ ಮತ್ತು ೧೯ ನೇ ಶತಮಾನದಿಂದ ೧೯೪೭ ರ ವರೆಗೂ ಹೋರಾಡುತ್ತ ಬಂದುದು ಭಾರತದ ಇತಿಹಾಸದಲ್ಲಿ ಅಜರಾಮರವಾಗಿದೆ. ಈ ಹೋರಾಟದಲ್ಲಿ ಕರ್ನಾಟಕದ ಕೊಡುಗೆ ಅಮೋಘವಾದುದು.

ಕರ್ನಾಟಕದಲ್ಲಿ ರಾಷ್ಟ್ರೀಯ ಜಾಗೃತಿ ಲೋಕಮಾನ್ಯ ಬಾಲಗಂಗಾಧರ ತಿಲಕರ ಪ್ರಭಾವದಿಂದ ಪ್ರಾರಂಭವಾಗಿದ್ದರೂ ಅದು ಪ್ರಬಲವಾಗಿ, ವ್ಯಾಪಕವಾಗಿ ಪ್ರಸಾರವಾದುದು ಗಾಂಧೀಜಿಯವರ ಪ್ರಭಾವದಿಂದ. ಸ್ವಾತಂತ್ರ್ಯವೆಂದರೇನು ? ಸ್ವಾತಂತ್ರ್ಯವೇಕೆ ಬೇಕು ? ಎಂದು ತಿಳಿಯದೆ ನಾವು ಪಾರತಂತ್ರ್ಯದಲ್ಲಿದ್ದೇವೆ ಎಂಬ

ಪ್ರಜ್ಞೆಯು ಸಹ ಅನೇಕರಿಗೆ ಇದ್ದಿರಲಿಲ್ಲ. ಅಂತಹ ಸಂದರ್ಭದಲ್ಲಿ ಸ್ವಾತಂತ್ರ್ಯದಿಂದ ಎಲ್ಲ ಜನಗಳ ಪ್ರಗತಿಯಿದೆ ಎಂದು ಜನಸಾಮಾನ್ಯರಿಗೆ ತಿಳಿವಳಿಕೆ ಮಾಡಿಕೊಟ್ಟ ಶ್ರೇಯಸ್ಸು ಗಾಂಧೀಜಿಯವರಿಗೆ ಸಲ್ಲುತ್ತದೆ. ಅವರ ಪ್ರಭಾವದಿಂದ ಕರ್ನಾಟಕವೂ ಸೇರಿದಂತೆ ಇಡೀ ದೇಶದಲ್ಲಿ ಜಾಗೃತಿಯಾಯಿತು.

ಹಳ್ಳಿಯ ರೈತ ಸಮುದಾಯ ಹಾಗೂ ಪಟ್ಟಣಗಳಲ್ಲಿಯ ಜನಸಾಮಾನ್ಯ ವರ್ಗಕ್ಕೆ ಯಾರು ಆಳಿದರೇನು ? ಜೋಳ ಬೀಸುವದು ತಪ್ಪುವದಿಲ್ಲ ಎಂಬ ನಂಬಿಕೆಯಿತ್ತು. ಇನ್ನೊಂದು ವರ್ಗದ ಜನರಲ್ಲಿ ಬ್ರಿಟಿಷರೆಂದರೆ ಬುದ್ಧಿವಂತರು, ಶೂರರು. ಅವರು ನಮ್ಮ ದೇಶವನ್ನು ಬಿಟ್ಟು ಏಕೆ ಹೋಗಬೇಕು ಎನ್ನುವ ಭಾವನೆಯನ್ನು ಹೊಂದಿದ್ದರು. ಅವರ ಇಂಗ್ಲೀಷ ಭಾಷೆ, ಸಾಹಿತ್ಯ, ಆಡಳಿತ, ಶಿಕ್ಷಣ, ವೇಷಭೂಷಣ, ಸಾರಿಗೆ ಸಾಧನಗಳು ಶ್ರೇಷ್ಠಮಟ್ಟದವು ಎನ್ನುವ ಭಾವನೆ ಅವರಲ್ಲಿ ಬೇರೂರಿತ್ತು. ಇವರೆಲ್ಲರಿಗೆ ಸ್ವಾತಂತ್ರ್ಯದ ತಿಳಿವಳಿಕೆ ನೀಡಿ ಸ್ವರಾಜ್ಯದ ಕಲ್ಪನೆ ಕೊಟ್ಟಾಗ ಇವರುಗಳು ಸ್ವಾತಂತ್ರ್ಯದ ಚಳುವಳಿಯಲ್ಲಿ ಪಾಲ್ಗೊಂಡರು.

ಭಾರತದ ಸ್ವಾತಂತ್ರ್ಯಾಂದೋಲನದ ಮಹಾನಾಯಕತ್ವವನ್ನು ಗಾಂಧೀಜಿ ವಹಿಸಿಕೊಂಡರು. ತಮ್ಮ ಸರಳ ಜೀವನ, ಶುದ್ಧ ಚಾರಿತ್ರ್ಯ, ಅಪರಿಮಿತ ತ್ಯಾಗ, ಅಪಾರ ದೇಶಪ್ರೇಮ ಮುಂತಾದ ಸದ್ಗುಣಗಳಿಂದ ಜನಸಮೂಹದ ಮೇಲೆ ಅದ್ಭುತ ಪ್ರಭಾವ ಬೀರಿದರು. ಲೋಕಮಾನ್ಯ ಬಾಲಗಂಗಾಧರ ತಿಲಕರ ಸ್ಥಾನವನ್ನು ಅವರು ತುಂಬಿದರು. ಜಗತ್ತಿನ ಇತಿಹಾಸದಲ್ಲಿಯೇ ಹೊಸದೆನಿಸಿದ ಸತ್ಯಾಗ್ರಹದ ತಳಹದಿಯಲ್ಲಿ ಅಸಹಕಾರ ಆಂದೋಲನವನ್ನು ರೂಪಿಸಿದರು. ಅದರಲ್ಲಿ ಎಲ್ಲ ವರ್ಗದ ಜನರೂ ಪಾಲ್ಗೊಳ್ಳುವಂತೆ ಮುಕ್ತ ಅವಕಾಶವಿತ್ತರು. ಇದರಿಂದಾಗಿ ಕಾಂಗ್ರೆಸ್ ಸಂಘಟನೆಯು ಜನಸಾಮಾನ್ಯರ ಸಂಘಟನೆಯಾಗುವಂತಾಯಿತು.

"ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ರಚನೆಯ ಫಲವಾಗಿ ೧೯೨೦ ರ ನಂತರ ಕಾಂಗ್ರೆಸ್ ಚಟುವಟಿಕೆಗಳು ಹೆಚ್ಚು ಚುರುಕುಗೊಂಡವು. ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳು ಕರ್ನಾಟಕದ ತುಂಬೆಲ್ಲ ಪ್ರಾರಂಭವಾದವು. ರಾಷ್ಟ್ರೀಯ ಶಾಲೆಗಳು ದ್ವಿಗುಣಿತ ಉತ್ಸಾಹದಿಂದ ಕಾರ್ಯಾರಂಭಿಸಿದವು. ಹೊಸ ಶಾಲೆಗಳು ತಲೆಎತ್ತಿದವು. ಖಾದಿ ಕಾರ್ಯಕ್ರಮ, ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ ಚಳುವಳಿ, ಗ್ರಾಮೋದ್ಯೋಗಗಳಿಗೆ ಉತ್ತೇಜನ ಇವು ಪ್ರಮುಖ ವಿಧಾಯಕ ಕಾರ್ಯಕ್ರಮಗಳು. ರಾಷ್ಟ್ರೀಯ ಸೇವಾಭಾವನೆಯನ್ನು ಜಾಗೃತಗೊಳಿಸಲು ಹಾಗೂ ಮುಂಬರುವ ವರ್ಷಗಳಲ್ಲಿ ಕಠಿಣ ಹೋರಾಟಗಳಿಗೆ ಜನರನ್ನು ಅಣಿಗೊಳಿಸಲು ಇವು ಸಹಾಯಕವಾದವು."[೧]

ಅಸಹಕಾರ ಆಂದೋಲನ :

ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಅಸಹಕಾರ ಆಂದೋಲನ ಆರಂಭಿಸಬೇಕೆಂದು ಗಾಂಧೀಜಿ ಸಂಕಲ್ಪಿಸಿದರು. ಕಲಕತ್ತೆಯಲ್ಲಿ ೧೯೨೦ ರ ಸಪ್ಟೆಂಬರದಲ್ಲಿ ಜರುಗಿದ ಲಾಲಾ ಲಜಪತರಾಯ ಅಧ್ಯಕ್ಷತೆಯ ಕಾಂಗ್ರೆಸ್‌ನ ವಿಶೇಷ ಅಧಿವೇಶನದಲ್ಲಿ ಅದಕ್ಕೆ ಮೂರ್ತ ಸ್ವರೂಪ ಕೊಡಲು ಮುಂದಾದರು. ಅದೇ ವರ್ಷ ನಾಗಪುರದಲ್ಲಿ ವಿಜಯ ರಾಘವಾಚಾರ್ಯ ಅಧ್ಯಕ್ಷತೆಯ ಕಾಂಗ್ರೆಸ್ ಅಧಿವೇಶನದಲ್ಲಿ ಚಿತ್ತರಂಜನದಾಸ್ ಅವರು ಪೂರ್ಣ ಅಸಹಕಾರ ಗೊತ್ತುವಳಿ

ಮಂಡಿಸಿದರು. ಅದಕ್ಕೆ ಪ್ರಚಂಡ ಬೆಂಬಲ ದೊರೆಯಿತು. ಇದೇ ಅಧಿವೇಶನದಲ್ಲಿ ಕಾಂಗ್ರೆಸ್ಸು ಭಾಷಾವಾರು ಪ್ರಾಂತ ಸಮಿತಿಗಳನ್ನು ರಚಿಸಲು ನಿರ್ಣಯಿಸಿದ್ದರಿಂದ. ಇಂಗ್ಲೀಷ ಜೊತೆಗೆ ಹಿಂದಿ ಮತ್ತು ಪ್ರಾಂತೀಯ ಭಾಷೆಗಳನ್ನು ಚರ್ಚೆಯಲ್ಲಿ ಉಪಯೋಗಿಸಲಾರಂಭಿಸಿದ್ದರಿಂದ ಕಾಂಗ್ರೆಸ್ಸು ಜನಸಮೂಹದ ಸಮೀಪ ಬರುವಂತಾಯಿತು.

ಈ ನಿರ್ಣಯಗಳ ಪ್ರಕಾರ ಅಸಹಕಾರ ಆಂದೋಲನ ದೇಶದೆಲ್ಲೆಡೆ ಪ್ರಾರಂಭವಾಯಿತು. ಕೌನ್ಸಿಲ್ ಚುನಾವಣೆಗೆ ನಿಂತ ಅಭ್ಯರ್ಥಿಗಳೆಲ್ಲ ನಾಮಪತ್ರಗಳನ್ನು ಹಿಂತೆಗೆದುಕೊಂಡರು. ವಕೀಲರು ನ್ಯಾಯಾಲಯಗಳ ಕಾರ್ಯಕಲಾಪಗಳನ್ನು ಬಹಿಷ್ಕರಿಸಿದರು. ಶಿಕ್ಷಕರು ಮತ್ತು ಪ್ರಾಧ್ಯಾಪಕರು ಶಾಲೆ - ಕಾಲೇಜುಗಳನ್ನು ತ್ಯಜಿಸಿದರು. ಸರಕಾರಿ ಅಧಿಕಾರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಶಾಲೆ - ಕಾಲೇಜು ತೊರೆದ ವಿದ್ಯಾರ್ಥಿಗಳಿಗಾಗಿ ಅಲ್ಲಲ್ಲಿ ರಾಷ್ಟ್ರೀಯ ಶಾಲೆಗಳು ಪ್ರಾರಂಭವಾದವು. ವಿದೇಶಿ ವಸ್ತ್ರಬಹಿಷ್ಕಾರ, ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಆರಂಭಗೊಂಡವು. ಈ ರೀತಿ ಅಸಹಕಾರ ಆಂದೋಲನ ಬಹುಮುಖವಾಗಿ ಇಡೀ ದೇಶವನ್ನೇ ವ್ಯಾಪಿಸಿತು. ಕರನಿರಾಕರಣೆಯ ಮೂಲಕ ಈ ಚಳುವಳಿ ಹಳ್ಳಿಗಳಿಗೂ ಹಬ್ಬಿತು.

೧೯೨೦ ರಲ್ಲಿ ಪ್ರಾರಂಭವಾದ ಈ ಚಳುವಳಿ ಸ್ವಾತಂತ್ರ್ಯದ ಅಂತಿಮ ಹೋರಾಟವೇ ಆಗಿದೆ. ಅದು ಒಂದು ತಿಂಗಳು ನಡೆಯಬಹುದು. ಅಥವಾ ಅನೇಕ ವರ್ಷ ಮುಂದುವರೆಯಬಹುದು. ಆದರೆ ಎಂದೂ ನಿಲ್ಲಲಾರದು ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದರು. ಅದೇ ವರ್ಷ ಧಾರವಾಡದಲ್ಲಿ ಸೇಂದಿ - ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆದ ಸಮಯದಲ್ಲಿ ಬಹಳ ಗದ್ದಲವಾಗಿ ಪೋಲೀಸರು ಅನೇಕ ಜನ ರಾಷ್ಟ್ರೀಯವಾದಿಗಳಿಗೆ ಬಹಳ ತೊಂದರೆ ಕೊಟ್ಟರು. ಆಗ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದ ಕಬ್ಬೂರ ಮಧ್ವರಾಯರನ್ನು ಪೋಲೀಸರು ಜೇಲಿಗೆ ಎಳೆದೊಯ್ಯುತ್ತಿದ್ದ ದೃಶ್ಯ ಗುದ್ಲೆಪ್ಪನವರ ಮನಸ್ಸಿನ ಮೇಲೆ ತುಂಬಾ ಪ್ರಭಾವ ಬೀರಿತು. ಆಗಲೇ ಅವರ ಮನಸ್ಸು ಗಾಂಧೀಜಿಯವರ ವಿಚಾರಗಳತ್ತ ಹರಿಯಿತು.

ಹಾವೇರಿಯಲ್ಲಿ ಧಾರವಾಡ ಜಿಲ್ಲಾ ರಾಷ್ಟ್ರೀಯ ಪರಿಷತ್ತು :

೧೯೨೪ ರ ಬೆಳಗಾವಿಯ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಅಲ್ಲಲ್ಲಿ ಸಭೆ ಸಮ್ಮೇಳನಗಳು ಏರ್ಪಟ್ಟವು.

೧೯೨೩ ರ ನವಂಬರನಲ್ಲಿ ಹಾವೇರಿಯಲ್ಲಿ ಧಾರವಾಡ ಜಿಲ್ಲಾ ರಾಷ್ಟ್ರೀಯ ಪರಿಷತ್ತು ಸೇರಿತ್ತು. ಆಗ ಖಾದಿ ಪ್ರದರ್ಶನ ಮತ್ತು ದನಗಳ ಪರಿಸೆಯನ್ನು ಏರ್ಪಾಡು ಮಾಡಲಾಯಿತು. ಅದರ ಜೊತೆಗೆ ರಾಷ್ಟ್ರೀಯ ಪದ್ಯಗಳನ್ನು ಹಾಡುವ ಸ್ಪರ್ಧೆಯನ್ನೂ ಹಮ್ಮಿಕೊಳ್ಳಲಾಗಿತ್ತು. ಪ್ರಾಂತೀಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿ. ಗಂಗಾಧರರಾವ ದೇಶಪಾಂಡೆ. ಕಾರ್ನಾಡ ಸದಾಶಿವರಾವ. ರಂ. ರಾ. ದಿವಾಕರ. ದ. ಪ. ಕರಮರಕರ. ಮಧ್ವರಾವ ಕಬ್ಬೂರ. ನಾರಾಯಣರಾವ ಕಬ್ಬೂರ. ಕಡಪಾ ರಾಘವೇಂದ್ರರಾವ. ಗದುಗಿನ ಅನಂತರಾವ ಜಾಲಿಹಾಳ ಮೊದಲಾದ ಮುಖಂಡರು ಬಂದಿದ್ದರು. ಡಾ. ನಾ. ಸು. ಹರ್ಡೀಕರರು ತಮ್ಮ

ಸ್ವಯಂಸೇವಕರೊಂದಿಗೆ ಪರಿಷತ್ತಿನ ವ್ಯವಸ್ಥೆಯನ್ನು ನೋಡಿಕೊಂಡರು. ಈ ಸಭೆಯಲ್ಲಿ ಅಹಿಂಸೆಗೆ ಹೆಚ್ಚು ಒತ್ತನ್ನು ಕೊಡಲಾಯಿತು.

ಈ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದ್ದ ಹರ್ಡೇಕರ ಮಂಜಪ್ಪನವರು. "ಗಾಂಧೀಜಿ ರಾಜಕೀಯ ರಂಗವನ್ನು ತಮ್ಮ ಅಹಿಂಸಾ ಅಸ್ತ್ರದಿಂದ ಪ್ರವೇಶಿಸದೇ ಹೋಗಿದ್ದರೆ ಭಾರತೀಯ ಯುವಕರು ಬಂದೂಕ ಮತ್ತು ಬಾಂಬ ಸಂಸ್ಕೃತಿಯನ್ನು ಬೆಳೆಸಿಕೊಂಡು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಗಾಳಿಗೆ ತೂರುತ್ತಿದ್ದರು. ಗಾಂಧೀಜಿಯವರ ಆಂದೋಲನವು ಮಾನವನ ಪಾವಿತ್ರ್ಯ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡಿರುವುದು ಭಾರತಕ್ಕೊಂದು ವರದಾನವಾಗಿದೆ" ಎಂದು ಹೇಳಿದ್ದು ಎಲ್ಲರಿಗೂ ಹಿಡಿಸಿತು.[೨]

ಈ ಪರಿಷತ್ತಿಗೆ ಹೊಸರಿತ್ತಿಯ ತರುಣ ಗುದ್ಲೆಪ್ಪನವರು, ಕರ್ಜಗಿಯ ಪರಮಣ್ಣ ಹೊಸಮನಿ ಹಾಗೂ ತಾಲೂಕಿನ ಅನೇಕ ಕಾರ್ಯಕರ್ತರು ಆಗಮಿಸಿದ್ದರು. ಈ ಪರಿಷತ್ತಿನ ಪ್ರಭಾವದಿಂದ ಅಹಿಂಸೆ, ವಿದೇಶಿ ವಸ್ತುಗಳ ಬಹಿಷ್ಕಾರ, ಅಸಹಕಾರ ಚಳುವಳಿಯನ್ನು ಬೆಂಬಲಿಸುವುದು ಮುಂತಾದ ವಿಧಾಯಕ ಕಾರ್ಯಕ್ರಮಗಳತ್ತ ಜನರು ಗಮನವಿತ್ತರು. ಈ ಪರಿಷತ್ತಿನ ಪ್ರಭಾವದಿಂದಾಗಿ ಹಾವೇರಿಯಲ್ಲಿ ಸಾವಿರಾರು ಜನರು ಕಾಂಗ್ರೆಸ್ಸನ್ನು ಸೇರಿದರು.

೧೯೨೪ ರ ಬೆಳಗಾವಿ ಕಾಂಗ್ರೆಸ್ ಅಧಿವೇಶನ :

ಆಂಧ್ರಪ್ರದೇಶದ ಕಾಕಿನಾಡಿನಲ್ಲಿ ೧೯೨೩ ರ ಡಿಸೆಂಬರನಲ್ಲಿ ಜರುಗಿದ ೩೮ ನೇ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕದ ಗಂಗಾಧರರಾವ ದೇಶಪಾಂಡೆಯವರು ಕನ್ನಡದಲ್ಲಿ ಮಾತನಾಡಿ ಮುಂದಿನ ಕಾಂಗ್ರೆಸ್ ಅಧಿವೇಶನ ಕರ್ನಾಟಕದಲ್ಲಿ ಆಗಲಿ ಎಂದು ಕರ್ನಾಟಕದ ಪರವಾಗಿ ಆಹ್ವಾನವಿತ್ತರು. ಮೌಲಾನಾ ಮಹಮ್ಮದ ಅಲಿ ಅಧ್ಯಕ್ಷರಾಗಿದ್ದ ಈ ಅಧಿವೇಶನವು ಇದಕ್ಕೆ ಒಪ್ಪಿಗೆ ಸೂಚಿಸಿತು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಗಂಗಾಧರರಾವ ದೇಶಪಾಂಡೆಯವರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಸಭೆಯನ್ನು ಹುಬ್ಬಳ್ಳಿಯಲ್ಲಿ ಕರೆದು ಚರ್ಚಿಸಿ ಈ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ನಿರ್ಣಯಿಸಲಾಯಿತು.

ಕರ್ನಾಟಕದಲ್ಲಿ ಬಹುಸಂಖ್ಯಾತರಾದ ಲಿಂಗಾಯತರನ್ನು ಕಾಂಗ್ರೆಸ್ಸಿನತ್ತ ಆಕರ್ಷಿಸಲು ಮತ್ತು ಮರಾಠಿ ಪ್ರಭಾವ ತಡೆಗಟ್ಟಿ ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳನ್ನು ಏಕೀಕರಣಗೊಳಿಸುವ ಮೂಲಕ ಕರ್ನಾಟಕ ಏಕೀಕರಣ ಚಳುವಳಿಗೆ ಬೆಂಬಲ ಪಡೆಯುವ ಉದ್ದೇಶವನ್ನೂ ಪ್ರಾಂತಿಕ ಕಾಂಗ್ರೆಸ್ ಸಮಿತಿ ಹೊಂದಿತ್ತು.

ಎಲ್ಲ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳು ಬೆಳಗಾವಿ ಅಧಿವೇಶನಕ್ಕೆ ಅಧ್ಯಕ್ಷರನ್ನಾಗಿ ಗಾಂಧೀಜಿಯವರ ಹೆಸರನ್ನೇ ಸೂಚಿಸಿದ್ದವು. ಆ ಪ್ರಕಾರ ಗಾಂಧೀಜಿಯವರು ಈ ಅಧಿವೇಶನದ ಅಧ್ಯಕ್ಷರಾದರು. ಗಂಗಾಧರರಾವ ದೇಶಪಾಂಡೆ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಅಧಿವೇಶನ ಯಶಸ್ವಿಗೊಳಿಸಲು ಶ್ರಮಿಸಿದರು.

೧೯೨೪ ರ ಡಿಸೆಂಬರನಲ್ಲಿ ಬೆಳಗಾವಿಯಲ್ಲಿ ೩೯ ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯುವ ಸ್ಥಳಕ್ಕೆ ಕನ್ನಡಿಗರ ಹೆಮ್ಮೆಯ ಸಾಮ್ರಾಜ್ಯವಾದ " ವಿಜಯನಗರ " ಎಂಬ ಹೆಸರನ್ನಿಟ್ಟಿದ್ದರು. ಬೃಹತ್ ಮಂಟಪದಲ್ಲಿ ಹದಿನೇಳು ಸಾವಿರ ಜನರು ಕುಳಿತುಕೊಳ್ಳಲು ಅವಕಾಶವಿತ್ತು. ಅಧಿವೇಶನದ ಅಧ್ಯಕ್ಷರಿಗಾಗಿ ಖಾದಿಯ ಅರಮನೆ, ಭೋಜನಕ್ಕಾಗಿ ವಿಶಾಲವಾದ ಚಪ್ಪರ ನಿರ್ಮಿಸಲಾಗಿತ್ತು.

ಅಧಿವೇಶನದಲ್ಲಿ ಪಾಲ್ಗೊಂಡ ಎಲ್ಲ ವರ್ಗಕ್ಕೆ ಸೇರಿದ ೭೫ ಜನ ಸ್ವಯಂ ಸೇವಕರು ಕಾಕಾ ಕಾಲೇಲಕರ ನೇತೃತ್ವದಲ್ಲಿ ಪೌರಸಭೆಯ ಭಂಗಿಗಳ ಜೊತೆಗೆ ಸ್ವಚ್ಛತಾ ಕಾರ್ಯವನ್ನು ಕೈಕೊಂಡುದು ವೈಶಿಷ್ಟ್ಯಪೂರ್ಣವಾಗಿತ್ತು. ಇದನ್ನು ಉಲ್ಲೇಖಿಸಿ ಗಾಂಧೀಜಿಯವರು " ಯಂಗ್ ಇಂಡಿಯ " ಪತ್ರಿಕೆಯ ೧೯೨೫ ರ ಜನೇವರಿ ೧ - ೮ ರ ಸಂಚಿಕೆಯಲ್ಲಿ " ಬೆಳಗಾವಿ ಇಂಪ್ರೆಶನ್ಸ್ " ಎಂಬ ಲೇಖನದಲ್ಲಿ ಪ್ರಶಂಸಿಸಿದ್ದಾರೆ.[೩]

ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಈ ಅಧಿವೇಶನವು ಹೊಸ ಹುಮ್ಮಸ್ಸು ಚೈತನ್ಯ ನೀಡಿತು. ಹಲವಾರು ದೃಷ್ಟಿಯಿಂದ ಈ ಅಧಿವೇಶನವು ವೈಶಿಷ್ಟ್ಯಪೂರ್ಣವೆನಿಸಿದೆ.

ಮೊದಲನೆಯದಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದಲ್ಲಿ ನಡೆದ ಏಕೈಕ ಅಧಿವೇಶನ ಬೆಳಗಾವಿ ಅಧಿವೇಶನ. ಎರಡನೆಯದಾಗಿ ಕಾಂಗ್ರೆಸ್‌ನ ಇತಿಹಾಸದಲ್ಲಿ ಗಾಂಧೀಜಿಯವರು ಒಮ್ಮೆ ಮಾತ್ರ ಅಧ್ಯಕ್ಷರಾಗಿದ್ದರು. ಅದೇ ಬೆಳಗಾವಿ ಅಧಿವೇಶನ. ಮೂರನೆಯದಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಅನೇಕ ಜಾತಿ ವರ್ಗಗಳು ಈ ಅಧಿವೇಶನದ ಕಾಲದಲ್ಲಿ ಕಾಂಗ್ರೆಸ್ ಸನಿಹಕ್ಕೆ ಬಂದವು. ಅನೇಕ ಜಾತಿವರ್ಗಗಳಿಗೆ ಕಾಂಗ್ರೆಸ್ ಬಗ್ಗೆ ಇದ್ದ ಅನುಮಾನ ಶಂಕೆಗಳನ್ನು ಬೆಳಗಾವಿ ಅಧಿವೇಶನ ಪರಿಹರಿಸಿತು. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಹರ್ಡೇಕರ ಮಂಜಪ್ಪನವರು ಏರ್ಪಡಿಸಿದ್ದ ವೀರಶೈವ ಪರಿಷತ್ ಸಭೆಯಲ್ಲಿ ಗಾಂಧೀಜಿ ಪಾಲ್ಗೊಂಡರು.[೪]

ಹರ್ಡೇಕರ ಮಂಜಪ್ಪನವರು ತಾವು ಸ್ಥಾಪಿಸಿದ " ಬಸವೇಶ್ವರ ಸೇವಾದಳ "ದ ಸ್ವಯಂ ಸೇವಕರನ್ನು ಈ ಅಧಿವೇಶನಕ್ಕೆ ಕರೆತಂದಿದ್ದರು. ತಾವು ಬರೆದ " ಬಸವೇಶ್ವರ ಚರಿತ್ರೆ "ಯನ್ನು ಆಧರಿಸಿ ಹಿಂದಿ ಮತ್ತು ಮರಾಠಿಯಲ್ಲಿ ಪ್ರಕಟಿಸಿದ " ಸತ್ಯಾಗ್ರಹಿ ಬಸವೇಶ್ವರ " ಎಂಬ ಪುಸ್ತಕವನ್ನು ಅವರು ಗಾಂಧೀಜಿಯವರಿಗೆ ಅರ್ಪಿಸಿದುದು ವಿಶೇಷವಾಗಿತ್ತು.

ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಪರದೇಶಿ ವಸ್ತು ಬಹಿಷ್ಕಾರ. ಖಾದಿ. ಹಿಂದು - ಮುಸ್ಲಿಂ ಐಕ್ಯತೆ. ಅಸ್ಪೃಶ್ಯತಾ ನಿವಾರಣೆ ಕುರಿತು ಹೃದಯಸ್ಪರ್ಶಿಯಾಗಿ ಮಾತನಾಡಿದರು. ತರುಣ ಗುದ್ಲೆಪ್ಪನವರು. ಸ್ವಯಂ ಸೇವಕರಾಗಿ ಅಧಿವೇಶನದಲ್ಲಿ ಪಾಲ್ಗೊಂಡು ಶಿಸ್ತು. ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಅಧಿವೇಶನದಲ್ಲಿ ಪಾಲ್ಗೊಂಡ ರಾಷ್ಟ್ರೀಯ ನಾಯಕರಾದ ಸರ್ದಾರ ವಲ್ಲಭಭಾಯಿ ಪಟೇಲ. ಜವಾಹರಲಾಲ ನೆಹರು. ಸಿ. ರಾಜಗೋಪಾಲಾಚಾರಿ. ರಾಜೇಂದ್ರ ಪ್ರಸಾದ. ಅಲಿ ಸಹೋದರರು. ಶೌಕತ್ ಖುರೇಶಿ. ಜಮ್ನಾಲಾಲ

ಬಜಾಜ, ಖಾನ ಅಬ್ದುಲ ಗಫಾರಖಾನ ಮುಂತಾದವರನ್ನು ಸಮೀಪದಿಂದ ಕಂಡು ಸ್ಫೂರ್ತಿಹೊಂದಿದರು. ಗಾಂಧೀಜಿಯವರ ಭಾಷಣದಿಂದ ಪ್ರೇರಿತರಾಗಿ ಅವರ ತತ್ವಗಳನ್ನು ಸಾಕಾರಗೊಳಿಸಲು ಸಂಕಲ್ಪಿಸಿ ಕಾರ್ಯೋನ್ಮುಖರಾದರು.

ಗುದ್ಲೆಪ್ಪನವರು ತಮ್ಮ ಸ್ವಗ್ರಾಮ ಹೊಸರಿತ್ತಿಗೆ ತೆರಳಿ ೧೯೨೪ ರಲ್ಲಿಯೇ ಮಾಧ್ಯಮಿಕ ಶಾಲೆಯನ್ನು ತೆರೆದು, ಅಲ್ಲಿ ವಿದ್ಯಾರ್ಥಿಗಳಿಗೆ ದೇಶದ ಚರಿತ್ರೆ, ರಾಷ್ಟ್ರೀಯತೆ, ಸ್ವಾವಲಂಬಿ ಜೀವನ ಮುಂತಾದ ವಿಷಯಗಳನ್ನು ಬೋಧಿಸುವ ವ್ಯವಸ್ಥೆ ಮಾಡಿ, ಸುತ್ತಮುತ್ತಲಿನ ಗ್ರಾಮಗಳ ಬಡ ಮಕ್ಕಳಿಗೆ ಉಪಯೋಗವಾಗುವಂತೆ ಮಾಡಿದರು. ಮುಂದೆ ಇವರ ಕಾರ್ಯಕ್ಷೇತ್ರ ವಿಸ್ತಾರಗೊಂಡು ಬೇರೆ ಬೇರೆ ಸ್ಥಳಗಳಿಗೆ ಪ್ರವಾಸ ಕೈಕೊಳ್ಳಬೇಕಾದುದರಿಂದಾಗಿ ಸ್ವಗ್ರಾಮದಲ್ಲಿನ ಮಾಧ್ಯಮಿಕ ಶಾಲೆಯು ಮುಚ್ಚಿತು.

ಭಾರತೀಯ ತರುಣ ಸಂಘ :

ರಾಷ್ಟ್ರೀಯತೆ, ದೇಶಾಭಿಮಾನ, ದೇಶದ ಸ್ವಾತಂತ್ರ್ಯ, ಇವುಗಳನ್ನೇ ತಲೆಯಲ್ಲಿ ತುಂಬಿಕೊಂಡ ತರುಣ ಗುದ್ಲೆಪ್ಪ, ತನ್ನಂತಹ ಉತ್ಸಾಹಿ ತೇಜಸ್ವಿ ಯುವಕರನ್ನು ಸಂಘಟಿಸಿ, ಮುಂದಾಳುತನ ವಹಿಸಿ, ಧಾರವಾಡದಲ್ಲಿ ೧೯೨೭ ಅಕ್ಟೋಬರ ೨ ಗಾಂಧಿ ಜಯಂತಿಯಂದು ಯುವಕರ ತಂಡವೊಂದನ್ನು ಕಟ್ಟಿದರು. ಅದುವೇ " ಭಾರತೀಯ ತರುಣ ಸಂಘ. "

ಸ್ವಾತಂತ್ರ್ಯ ಚಳುವಳಿಯ ಧ್ಯೇಯವನ್ನೇ ಮುಖ್ಯವಾದ ಗುರಿಯನ್ನಾಗಿಟ್ಟುಕೊಂಡು ಕ್ರಿಯಾಶೀಲ ಚಟುವಟಿಕೆಗಳನ್ನು ಈ ಸಂಘ ಆರಂಭಿಸಿತು. ಇದರಲ್ಲಿ ನಿಜಗುಣಾರ್ಯ ಹಿರೇಮಠ, ಸಿದ್ಧಲಿಂಗಸ್ವಾಮಿ ಎಸ್. ಕಜ್ಜರಿ, ಲಿಂಗರಾಜ ಮುದ್ದಣ್ಣವರ, ವೆಂಕಟೇಶ ಮಾಗಡಿ, ಲಂಬಿ, ಕುಂಬಿ, ತಲ್ಲೂರ ರಾಯನಗೌಡ ಪಾಟೀಲ, ಕಂಬಿಮಠ, ಸುಬುದ್ಧಿಸ್ವಾಮಿ ಹಿರೇಮಠ, ಜವಳಿ, ಪವಾರ ಮಾಸ್ತರ, ಸಿರಿಯಣ್ಣನವರ, ಹೊಂಬಣ್ಣನವರ ಮುಂತಾದವರು ಇದ್ದರು. ಮುಂದೆ ೧೯೨೯ ರ ಜನವರಿಯಲ್ಲಿ ಕೆ. ಎಫ್. ಪಾಟೀಲರು ಸಂಘದ ಸದಸ್ಯರಾದರು. ಇವರೆಲ್ಲರೂ ಕಾಂಗ್ರೆಸ್ ಸೇರಿದ್ದಲ್ಲದೆ ಎಲ್ಲ ಬ್ರಾಹ್ಮಣೇತರರಿಗೂ ಕಾಂಗ್ರೆಸ್ ಸೇರಲು ಕರೆಕೊಟ್ಟು ದುಡಿಯಹತ್ತಿದರು.

ಗಾಂಧೀಜಿಯವರು ರೂಪಿಸಿದ ೧೫ ರಚನಾತ್ಮಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಭಾರತೀಯ ತರುಣ ಸಂಘದ ಕಾರ್ಯಕರ್ತರು ಹಳ್ಳಿಹಳ್ಳಿಗಳಿಗೆ ಹೋಗಿ ಜನರಲ್ಲಿ ಬಿತ್ತರಿಸುತ್ತಿದ್ದರು. ಅವು ಇಂತಿವೆ :

೧) ಜಾತಿ ಜಾತಿಗಳ ನಡುವೆ ಸಾಮರಸ್ಯ. ೨) ಅಸ್ಪೃಶ್ಯತಾ ನಿವಾರಣೆ. ೩) ಮದ್ಯಪಾನ ನಿಷೇಧ. ೪) ಖಾದಿ ಪ್ರಸಾರ. ೫) ಗ್ರಾಮೋದ್ಯೋಗ. ೬) ಮೂಲಶಿಕ್ಷಣ. ೭) ಗ್ರಾಮೋದ್ಧಾರ. ೮) ಪ್ರೌಢಶಿಕ್ಷಣ. ೯) ಸ್ತ್ರೀಯರ ಉನ್ನತಿ. ೧೦) ಆರೋಗ್ಯ ಮತ್ತು ಸ್ವಚ್ಛತೆ. ೧೧) ರಾಷ್ಟ್ರಭಾಷಾ ಪ್ರಸಾರ (ಹಿಂದಿ ಕಲಿಕೆ). ೧೨) ಪ್ರಾಂತೀಯ ಭಾಷಾ ಪ್ರೇಮ. ೧೩) ಆರ್ಥಿಕ ಸಮಾನತೆ. ೧೪) ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳಲ್ಲಿ ಜಾಗೃತಿ. ೧೫) ಆದಿವಾಸಿಗಳ ಸೇವೆ.



ಸತ್ಯಾಗ್ರಹಿ ಗುದ್ದೆಪ್ಪನವರು. ೧೯೩೦



ಗುದ್ದೆಪ್ಪನವರೊಂದಿಗೆ ಭಾರತೀಯ ತರುಣ ಸಂಘದ ಸದಸ್ಯರಾದ ಕಲ್ಲೂರ ರಾಮನಗೌಡ ಪಾಟೀಲ,
ಕೆ. ಜಿ. ಮಂಡೂರ, ವಿ. ಟಿ. ಮಾಗಡಿ, ಎಸ್. ಬಿ. ಹಿರೇಮಠ ಮುಂತಾದವರು, ೧೯-೧೨-೧೯೩೦

ಸ್ವಾತಂತ್ರ್ಯವೊಂದೇ ಎಲ್ಲರ ಏಳ್ಗೆಯ ಮಾರ್ಗವೆಂಬುದನ್ನು ಹಳ್ಳಿಹಳ್ಳಿಗಳಲ್ಲಿಯೂ ಬಿತ್ತರಿಸುವದು. ಗುಲಾಮಗಿರಿಯನ್ನು ಬೋಧಿಸುವ ಶಾಲೆ ಕಾಲೇಜುಗಳ ಶಿಕ್ಷಣಕ್ಕೆ ಬಹಿಷ್ಕಾರ ಹಾಕುವದು. ರಾಷ್ಟ್ರಪ್ರಜ್ಞೆ ಜಾಗೃತಗೊಳಿಸುವದು ಮತ್ತು ಸ್ವಾತಂತ್ರ್ಯ ಸೇನಾನಿಗಳನ್ನು ತಯಾರಿಸುವದು ಈ ಸಂಘದ ಇನ್ನಿತರ ಕಾರ್ಯಗಳಾಗಿದ್ದವು.

ಗುದ್ಲೆಪ್ಪನವರ ದೃಷ್ಟಿಯಲ್ಲಿ ಕರ್ನಾಟಕದ ರಾಜಕೀಯ ರಂಗದಲ್ಲಿ ಮೊದಲ ನಾಯಕರಾಗಿದ್ದ ಗಂಗಾಧರರಾವ ದೇಶಪಾಂಡೆ, ಕಾರ್ನಾಡ ಸದಾಶಿವರಾವ, ಮುದವೀಡು ಕೃಷ್ಣರಾವ, ಆಲೂರು ವೆಂಕಟರಾವ, ಕೌಜಲಗಿ ಶ್ರೀನಿವಾಸರಾವ, ರಂಗನಾಥ ದಿವಾಕರ ಮುಂತಾದವರ ಗಮನವನ್ನು ಭಾರತೀಯ ತರುಣ ಸಂಘ ತನ್ನತ್ತ ಸೆಳೆಯಿತು. ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸ್ವಾತಂತ್ರ್ಯ ಸೇನಾನಿಗಳನ್ನು ನಿರ್ಮಿಸಿದ ಈ ಸಂಘದ ಹೆಸರು ಚಿರಸ್ಥಾಯಿಯಾಗಿದೆ.

೧೯೨೮ ರ ನವಂಬರದಲ್ಲಿ ಹಂಸಭಾವಿಯ ದುರ್ಗದ ಹೈಸ್ಕೂಲಿನಲ್ಲಿ ಮುಖ್ಯಾಧ್ಯಾಪಕರಾಗಿದ್ದ ಕೆ. ಎಫ್. ಪಾಟೀಲರು ಮಹಾದೇವ ಮೈಲಾರರನ್ನು ರಾಜಕೀಯ ಭವಿಷ್ಯ ರೂಪಿಸಿಕೊಳ್ಳಲು ಗುದ್ಲೆಪ್ಪನವರ ಹತ್ತಿರ ಕಳಿಸಿದರು. ಅಂದಿನಿಂದ ಮಹಾದೇವರು ಗುದ್ಲೆಪ್ಪನವರ ನೆರಳಾಗಿದ್ದು. ಈ ಸಂಘದ ತರಬೇತಿಯಿಂದ ರೂಪುಗೊಳ್ಳತೊಡಗಿದರು.

ಕೆಲ ದಿನಗಳ ನಂತರ ಗುದ್ಲೆಪ್ಪನವರು ಮಹಾದೇವರನ್ನು ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ಗಂಗಾಧರರಾವ ದೇಶಪಾಂಡೆಯವರ ಮಾರ್ಗದರ್ಶನಲ್ಲಿ ಖಾದಿ ಕೇಂದ್ರಕ್ಕೆ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳಲ್ಲಿ ತರಬೇತಿ ಪಡೆಯಲು ಕಳಿಸಿದರು. ನಂತರ ವಿಜಾಪೂರ ಜಿಲ್ಲೆಯ ಕಲಾದಗಿಯಲ್ಲಿ ಹನುಮಂತರಾವ ಕೌಜಲಗಿಯವರ ನೇತೃತ್ವದಲ್ಲಿ ನಡೆಯುತ್ತಿರುವ ಖಾದಿ ಕೇಂದ್ರಕ್ಕೆ ಕಳಿಸಿದರು. ಮತ್ತೆ ಮರಳಿ ೧೯೨೯ ರಲ್ಲಿ ಗುದ್ಲೆಪ್ಪನವರ ಹತ್ತಿರ ಬಂದರು. ನಂತರ ಮಹಾದೇವರು ಭಾರತೀಯ ತರುಣ ಸಂಘದ ಪ್ರತಿನಿಧಿಯಾಗಿ ವಿಶೇಷ ತರಬೇತಿಗಾಗಿ ಗಾಂಧೀಜಿಯವರ ಸಾಬರಮತಿ ಆಶ್ರಮಕ್ಕೆ ಹೋಗಿ ಬಂದರು.[೫]

ಭಾರತೀಯ ತರುಣ ಸಂಘದ ಕಾರ್ಯಕರ್ತರು ಪೋಲೀಸರ ಕಣ್ಣುತಪ್ಪಿಸಿ ಭೂಗತರಾಗಿ ರಾಷ್ಟ್ರೀಯ ಕಾರ್ಯಗಳನ್ನು ನೆರವೇರಿಸುತ್ತಿದ್ದರು. ಧಾರವಾಡದ ಕೋಟೆ ಹತ್ತಿರ ತರುಣ ಸಂಘದ ಕಾರ್ಯಕರ್ತ ನಿಜಗುಣಾರ್ಯ ಹಿರೇಮಠರ . ಮನೆಯಲ್ಲಿ ಸೇರುತ್ತಿದ್ದರು. ಚಳುವಳಿಯಲ್ಲಿ ಪಾಲ್ಗೊಂಡಿದ್ದ ಗುದ್ಲೆಪ್ಪನವರು. ಲಿಂಗರಾಜ ಮುದ್ದಣ್ಣವರ ಪವಾರ ಮಾಸ್ತರ. ರಾಷ್ಟ್ರೀಯ ಕೀರ್ತನಕಾರ ಕಳ್ಳಿತಿಪ್ಪಣ್ಣ ಶಾಸ್ತ್ರಿ, ಬೆಂಕಿ ಸ್ವಾಮಿಯೆಂದೇ ಪ್ರಸಿದ್ಧರಾದ ಮುಗುಟಖಾನ ಹುಬ್ಬಳ್ಳಿಯ ಚಿನ್ಮಯಸ್ವಾಮಿ ಓಂಕಾರಮಠ ಇವರೆಲ್ಲ ಅಲ್ಲಿ ಸೇರಿ ಚಳುವಳಿಯ ಕಾರ್ಯಯೋಜನೆಗಳನ್ನು ತಯಾರಿಸುತ್ತಿದ್ದರು. ಇವರನ್ನು ಬಂಧಿಸಲು ಸರಕಾರದ ವಾರಂಟ ಇದ್ದವು. ಇವರೆಲ್ಲರೂ ಕೋಟೆಯಲ್ಲಿಯ ಜನಸಂಚಾರವಿರದ ದಟ್ಟವಾದ ಗೊಳಗೊಳಕಿ ಮುಳ್ಳಿನ ಗಿಡ. ಕಂಟಿಗಳಿರುವ ಕಂದಕಗಳಲ್ಲಿ ಜಾಗಮಾಡಿಕೊಂಡು ಹಗಲು ಹೊತ್ತಿನಲ್ಲಿ ಅಡಗಿ. ರಾತ್ರಿ ಸಂಚರಿಸುತ್ತಿದ್ದರು. ನಿಜಗುಣಾರ್ಯ ಹಿರೇಮಠರ ಪತ್ನಿ

ಭೂದೇವಿಯವರು ಆಹಾರ ತಯಾರಿಸಿ ಚನ್ನಬಸಯ್ಯ ಹಿರೇಮಠರಿಗೆ ಸೀರಿ ಉಡಿಸಿ ಸ್ತ್ರೀ ವೇಷದಲ್ಲಿ ಭೂಗತರಿಗೆ ಕೊಟ್ಟು ಬರಲು ಕಳಿಸುತ್ತಿದ್ದರು. ಹಿರೇಮಠರು ಕಂದಕದ ಹತ್ತಿರ ಹೋಗಿ ಸಿಳ್ಳು ಹಾಕಿದಾಗ ಭೂಗತರಲ್ಲಿ ಒಬ್ಬರು ಬಂದು ಆಹಾರ ಸಾಮಗ್ರಿ ತೆಗೆದುಕೊಂಡು ಹೋಗುತ್ತಿದ್ದರು. ಇದು ಐದಾರು ತಿಂಗಳವರೆಗೆ ನಡೆಯಿತು.[೬]

ಭಾರತೀಯ ತರುಣ ಸಂಘವು ಗುದ್ಲೆಪ್ಪನವರ ನೇತೃತ್ವದಲ್ಲಿ ಅತ್ಯಂತ ಸಮರ್ಥವಾಗಿ ನಡೆದು ಮುಂದೆ ಕೆಲ ಕಾಲದಲ್ಲಿಯೇ ಅದು ಜಯರಾಮದಾಸ್ ದೌಲತರಾಮ, ಕಾಕಾ ಕಾಲೇಲಕರ, " ಯಂಗ್ ಇಂಡಿಯಾ "ದ ಸಂಪಾದಕ ಕಿಶೋರಲಾಲ ಮಶ್ರೂವಾಲಾ, ನರಹರಿಭಾಯಿ ಪಾರೀಖರಂಥ ಅಖಿಲ ಭಾರತ ನಾಯಕರ ಗಮನ ಸೆಳೆಯಿತು.

ಗಾಂಧೀಜಿಯವರಿಗೆ ೧೯೨೯ ರಲ್ಲಿ ಅರವತ್ತು ವರ್ಷ ತುಂಬಿದ ನಿಮಿತ್ತ ಅವರ ಷಷ್ಟ್ಯಬ್ದಿಪೂರ್ತಿ ಸಮಾರಂಭವನ್ನು ಧಾರವಾಡದಲ್ಲಿ ಆಚರಿಸಲು ಭಾರತೀಯ ತರುಣ ಸಂಘ ನಿರ್ಧರಿಸಿತು. ಜಯರಾಮದಾಸ ದೌಲತರಾಮ ಅವರ ಅಧ್ಯಕ್ಷತೆಯಲ್ಲಿ ಈ ಸಮಾರಂಭ ಆಚರಿಸಲು ನಿರ್ಧರಿಸಲಾಯಿತು. ಮುಂಜಾನೆ ಧ್ವಜಾರೋಹಣ, ಪರೇಡ, ವಂದನೆ ಜರುಗಿದವು. ಮಧ್ಯಾಹ್ನ ಬೃಹತ್ ಮೆರವಣಿಗೆಯು ನಡೆದು ಕರ್ನಾಟಕ ಕಾಲೇಜಿಗೆ ಬಂದಿತು. ಆಗ ಪ್ರಭಾರ ಪ್ರಾಚಾರ್ಯರಾಗಿದ್ದ ಡಿ. ಡಿ. ಕಪಾಡಿಯಾ ಅವರು ಮೆರವಣಿಗೆಯು ಕಾಲೇಜ ಆವರಣದಲ್ಲಿ ಬರಲು ಮತ್ತು ಸಭೆ ನಡೆಸಲು ಅನುಮತಿಯಿತ್ತರು. ವಿ. ಕೆ. ಗೋಕಾಕ ಅವರು ಗಾಂಧೀಜಿ ಕುರಿತು ಬರೆದ ಇಂಗ್ಲೀಷ ಕವನ ಓದಿದರು. ಪ್ರಾಚಾರ್ಯರು ಬಾಪೂಜಿ ಬದುಕು ಮತ್ತು ಕಾರ್ಯದ ಕುರಿತು ಮಾತನಾಡಿ, ಕೊನೆಗೆ ಕಾಲೇಜಿಗೆ ಬಿಡುವು ಸಾರಿದರು. ನಂತರ ಮೆರವಣಿಗೆಯು ಕಡಪಾ ಮೈದಾನಕ್ಕೆ ಹೋಯಿತು. ಜಯರಾಮದಾಸ್ ದೌಲತರಾಮ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿತು. ಈ ಷಷ್ಟ್ಯಬ್ದಿ ಸಮಾರಂಭದ ಮುಖ್ಯ ಸಂಘಟಕ ಗುದ್ಲೆಪ್ಪನವರಾಗಿದ್ದರು.

ಭಾರತೀಯ ತರುಣ ಸಂಘ ಹಮ್ಮಿಕೊಂಡ ಈ ಸಮಾರಂಭದ ಅನೇಕ ಕಾರ್ಯಕ್ರಮಗಳಲ್ಲಿ ಲೇಖನ ಸ್ಪರ್ಧೆಯೂ ಒಂದಾಗಿತ್ತು. ಲೇಖನದ ವಿಷಯಗಳಲ್ಲಿ ' What place Mahatma Gandhi holds among the greatest men of the world ' ಎಂಬುದು ಒಂದಾಗಿತ್ತು. ಈ ವಿಷಯದ ಬಗ್ಗೆ ಕೆ. ಎಫ್. ಪಾಟೀಲರು ಬರೆದ ಪ್ರಬಂಧ ಪ್ರಥಮ ಸ್ಥಾನ ಪಡೆಯಿತು. ಮುಂದೆ ೧೯೩೩ ಮೇ ೨೯ ರಲ್ಲಿ ಸಂಘವು ಈ ಪ್ರಬಂಧವನ್ನು ' ಜಗತ್ತಿನ ಮಹಾವಿಭೂತಿಗಳಲ್ಲಿ ಮಹಾತ್ಮಾ ಗಾಂಧಿಯವರ ಸ್ಥಾನ ' ಎಂಬ ಶೀರ್ಷಿಕೆಯಲ್ಲಿ ಗಾಂಧೀಜಿಯವರ ಉಪೋಷಣದ ಸುಖರೂಪ ಸಮಾಪ್ತಿಯ ಸ್ಮಾರಕವಾಗಿ ತನ್ನ ಸೇವಾಪುಷ್ಪ ಗ್ರಂಥಮಾಲೆಯ ದ್ವಿತೀಯ ಪುಸ್ತಕವನ್ನಾಗಿ ಪ್ರಕಟಿಸಿತು. ಇದಕ್ಕೂ ಪೂರ್ವದಲ್ಲಿ ಸಂಘವು ' ಮಹಾತ್ಮಾ ಗಾಂಧಿಯವರ ತತ್ವಬೋಧಾಭ್ಯಾಸ ' ಎಂಬುದನ್ನು ಗ್ರಂಥಮಾಲೆಯ ಪ್ರಥಮ ಪುಸ್ತಕವನ್ನಾಗಿ ಪ್ರಕಟಿಸಿತ್ತು.

ಕರ್ನಾಟಕ ಯುಥ್ ಲೀಗ್ :

ಭಾರತೀಯ ತರುಣ ಸಂಘದ ಚಟುವಟಿಕೆಗಳನ್ನು ತೀವ್ರಗೊಳಿಸುತ್ತ ೧೯೨೮ ರಲ್ಲಿ ಕರ್ನಾಟಕ ಯುಥ್ ಲೀಗ್ ಎಂಬ ಸಂಘಟನೆಯನ್ನೂ ಗುದ್ಲೆಪ್ಪನವರು ಸ್ಥಾಪಿಸಿದರು. ಅದರಲ್ಲಿ ಆಲೂರು ವೆಂಕಟರಾವ್. ಮೌಲ್ವಿ ಮುಂತಾದವರು ಸೇರಿ ತಮ್ಮ ಅನುಭವ ಮತ್ತು ಜ್ಞಾನಗಳಿಂದ ಅದನ್ನು ಬಲಪಡಿಸಿದರು.[೭]

ಬ್ರಾಹ್ಮಣೇತರರು ಕಾಂಗ್ರೆಸ್ ಸೇರಿದುದು :

" ೧೯೩೦ ಮೇ ತಿಂಗಳಲ್ಲಿ ಬೆಳಗಾವಿಯಲ್ಲಿ ಸಿದ್ದಪ್ಪ ಹೊಸಮನಿ ಅವರ ಅಧ್ಯಕ್ಷತೆಯಲ್ಲಿ ಸೇರಿದ ಬ್ರಾಹ್ಮಣೇತರರ ಪರಿಷತ್ತಿನಲ್ಲಿ ಬ್ರಾಹ್ಮಣೇತರರೆಲ್ಲ ಕಾಂಗ್ರೆಸ್ಸಿನಲ್ಲಿ ಸೇರಿ ಕೂಡಲೇ ಕಾಂಗ್ರೆಸ್‌ನ ವಿಧಾಯಕ ಕಾರ್ಯವನ್ನು ಕೈಕೊಳ್ಳಬೇಕೆಂದು ನಿರ್ಣಯವಾಯಿತು. ಮುಂದೆ ಅದೇ ವರ್ಷದ ಅಗಸ್ಟ್ ೧೦ ರಂದು ಹಾವೇರಿಯಲ್ಲಿ ಹರ್ಡೇಕರ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದ ವೀರಶೈವ ಪರಿಷತ್ತು ಕೂಡ ಇಂಥದೇ ನಿರ್ಣಯ ಕೈಕೊಂಡಿತು. ಸಿದ್ದಪ್ಪ ಹೊಸಮನಿ, ವೀರನಗೌಡ ಪಾಟೀಲ, ಮಲ್ಲನಗೌಡ ಪಾಟೀಲ ಮುಂತಾದ ಸುಶಿಕ್ಷಿತ ಮುಂದಾಳುಗಳು ಕಾಂಗ್ರೆಸ್ಸಿನ ಕೆಲಸ ಮಾಡುತ್ತಿದ್ದು, ಹಿರಿಯರ ಮೇಲ್ಪಂಕ್ತಿಯನ್ನು ಅನುಸರಿಸಿ ಅನೇಕ ತರುಣರೂ, ವರ್ತಕರೂ, ಒಕ್ಕಲಿಗರೂ, ಶೆಟ್ಟರೂ, ಸಾವುಕಾರರೂ ಕಾಂಗ್ರೆಸ್ ಕೆಲಸಕ್ಕೆ ತುಂಬ ಪ್ರೋತ್ಸಾಹವೀಯುವುದಲ್ಲದೆ ತಾವೂ ಸಾಧ್ಯವಾದಷ್ಟು ಕಷ್ಟಪಡುತ್ತಿರುವರು. ಬಹುಜನರು ಖಾದಿಯ ಹುಟ್ಟುವಳಿಯ ಬಗ್ಗೆ ಹಣವನ್ನು ಹಾಕಿ ದುಡಿಯುತ್ತಿದ್ದಾರೆ. ಚರಖಾ ಸಂಘಗಳನ್ನೂ, ಖಾದಿಯ ಅಂಗಡಿಗಳನ್ನೂ ತೆರೆದಿರುವರು. ತರುಣರು ವಿಶೇಷವಾಗಿ ಸ್ವಯಂ ಸೇವಕರಾಗಿಯೂ, ಯುವಕ ಸಂಘಗಳನ್ನು ಮಾಡಿಯೂ ಉತ್ಸಾಹದಿಂದ ಕೆಲಸ ನಡೆಸಿರುವರು " [೮] ಎಂದು ೧೯೩೦ - ೩೧ ರ ಸತ್ಯಾಗ್ರಹದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

" ಹಾವೇರಿಯ ಸಿದ್ದಪ್ಪ ಹೊಸಮನಿ ನೇತೃತ್ವದಲ್ಲಿ ಟಿ. ಆರ್. ನೆಶ್ವಿ, ಅಂದಾನಪ್ಪ ದೊಡ್ಡಮೇಟಿ, ಕೆ. ಎಫ್. ಪಾಟೀಲ, ಅಂದಾನಪ್ಪ ಕುಂದರಗಿ, ವೀರನಗೌಡ ಪಾಟೀಲ, ಸಿದ್ದಪ್ಪ ಸಿಂಧೂರ, ಗುದ್ಲೆಪ್ಪ ಹಳ್ಳಿಕೇರಿ, ಮಹಾದೇವಪ್ಪ ಮೈಲಾರ, ವೆಂಕಟೇಶ ಮಾಗಡಿ ಮೊದಲಾದ ಯುವಕರು ಮುಂದೆ ಬಂದು ರಾಷ್ಟ್ರೀಯ ಚಳುವಳಿಯಲ್ಲಿ ಅಗ್ರಪಾತ್ರ ವಹಿಸತೊಡಗಿದರಲ್ಲದೆ ಜಾತಿಭೇದ ಮರೆತು ಎಲ್ಲರೂ ಚಳುವಳಿಯಲ್ಲಿ ಭಾಗವಹಿಸಬೇಕೆಂದು ಆಗ್ರಹಪಡಿಸತೊಡಗಿದರು " [೯] ಮೊದಲು ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಾಹ್ಮಣರೇ ಮುಂದಾಳುತನ ವಹಿಸುತ್ತಿದ್ದರು. ಬರಬರುತ್ತ ಬ್ರಾಹ್ಮಣೇತರರು ಸಕ್ರಿಯವಾಗಿ ಮುಂದಾಳುತನ ವಹಿಸಲಾರಂಭಿಸಿದರು.

ವಿಶೇಷವಾಗಿ ಗುದ್ಲೆಪ್ಪನವರು ಸ್ವತಃ ಕಾಂಗ್ರೆಸ್ ಸೇರಿ ಮಾದರಿ ಹಾಕಿಕೊಟ್ಟು, ಮುಂದಾಳುತನ ವಹಿಸಿ ಬಹುಸಂಖ್ಯೆಯ ಬ್ರಾಹ್ಮಣೇತರ ತರುಣರನ್ನು ಕಾಂಗ್ರೆಸ್ಸಿಗರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ಇದರಿಂದಾಗಿ ಕಾಂಗ್ರೆಸ್ಸಿಗೆ ಹೆಚ್ಚಿನ ಬಲ ಬಂದು ಸ್ವಾತಂತ್ರ್ಯ ಹೋರಾಟವು ನಗರಗಳಿಂದ ಹಳ್ಳಿಗಳವರೆಗೂ ವ್ಯಾಪಿಸಿತು. ಈ ದಿಸೆಯಲ್ಲಿ ಗುದ್ಲೆಪ್ಪನವರು ಸ್ಥಾಪಿಸಿದ ಭಾರತೀಯ ತರುಣ ಸಂಘದ ಕಾರ್ಯ ಗಮನಾರ್ಹ.

ಸೈಮನ್ ಕಮೀಶನ್ :

" ೧೯೧೯ ರ ಭಾರತ ಸರಕಾರದ ಕಾಯ್ದೆಯ ೮೪ ನೇ ಸೆಕ್ಷನ್‌ನಲ್ಲಿ ಕಾಯ್ದೆ ಜಾರಿಗೆ ಬಂದ ಹತ್ತು ವರ್ಷಗಳ ನಂತರ ಭಾರತದಲ್ಲಿಯ ರಾಜಕೀಯ ಬೆಳವಣಿಗೆ, ಸ್ವಯಂ ಆಡಳಿತ ಮತ್ತು ಪ್ರಾತಿನಿಧಿಕ ಸರಕಾರಗಳ ರಚನೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಆಯೋಗವನ್ನು ರಚಿಸಲು ಅವಕಾಶವಿತ್ತು. ಅನಿವಾರ್ಯ

ಕಾರಣಗಳಿಂದಾಗಿ ೧೯೨೭ ರಲ್ಲಿಯೇ ಆಯೋಗವನ್ನು ಭಾರತದ ರಾಜಕೀಯ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ನೇಮಿಸಲಾಯಿತು. ೧೯೨೫ ರಲ್ಲಿಯೇ ಭಾರತದ ರಾಜ್ಯ ಕಾರ್ಯದರ್ಶಿ ಲಾರ್ಡ್ ಬರ್ಕೆನ್‌ಹೆಡ್ ಇಂಥ ಒಂದು ಆಯೋಗದ ರಚನೆಗೆ ಬೆಂಬಲಿಸಿದ್ದರು. ಲಾರ್ಡ್ ಬರ್ಕೆನ್‌ಹೆಡ್ ಮತ್ತು ಕಂಜರ್ವೇಟಿವ್ ಪಕ್ಷದ ಈ ಆತುರದ ಕ್ರಮದ ಉದ್ದೇಶವೆಂದರೆ ಮುಂದಿನ ಚುನಾವಣೆಯಲ್ಲಿ ಗೆಲ್ಲುವ ಅವಕಾಶವಿದ್ದ ಲೇಬರ್ ಸರಕಾರವು ಇಂತಹ ಆಯೋಗವನ್ನು ನೇಮಿಸದಂತಾಗಲಿ ಎಂಬುದಾಗಿತ್ತು. ಹಾಗೂ ಸ್ವರಾಜ್ಯ ಪಕ್ಷದಲ್ಲುಂಟಾಗಿದ್ದ ರಾಜಕೀಯ ಬಿರುಕನ್ನು ಇನ್ನೂ ಹೆಚ್ಚಿಸುವ ಉದ್ದೇಶವು ಈ ಆಯೋಗದ ನೇಮಕದಲ್ಲಿತ್ತು." ೧೦

೧೯೧೯ ರ ಕಾಯ್ದೆಯ ನಂತರದ ಸರಕಾರದ ಕಾರ್ಯವೈಖರಿ ಶಿಕ್ಷಣದ ಬೆಳವಣಿಗೆ ಮತ್ತು ಬ್ರಿಟಿಷ್ ಭಾರತದಲ್ಲಿ ಪ್ರತಿನಿಧಿ ಸಂಸ್ಥೆಗಳ ಬೆಳವಣಿಗೆ ಇತ್ಯಾದಿ ಅಂಶಗಳ ಬಗ್ಗೆ ಆಯೋಗವು ವರದಿ ಸಲ್ಲಿಸುವದಾಗಿತ್ತು. ಭಾರತಕ್ಕೆ ಸ್ವಯಂ ಆಡಳಿತ ನೀಡಲು ಕಾಲ ಪಕ್ವವಾಗಿದೆಯೆ ಎಂಬುದನ್ನು ಪರಿಶೀಲಿಸಿ ಶಿಫಾರಸು ಮಾಡಬೇಕಾಗಿತ್ತು. ಸರ್‌ಜಾನ್ ಸೈಮನ್ ಆಯೋಗದ ಅಧ್ಯಕ್ಷನಾಗಿದ್ದ. ಇದರಲ್ಲಿ ಏಳು ಜನ ಬ್ರಿಟಿಷ್ ಸದಸ್ಯರಿದ್ದರು. ಆದರೆ ಒಬ್ಬ ಭಾರತೀಯನೂ ಇದರಲ್ಲಿರಲಿಲ್ಲ. ಇದರಿಂದ ಭಾರತೀಯರ ಬುದ್ಧಿಮತ್ತೆ ಹಾಗೂ ಆತ್ಮವಿಶ್ವಾಸಕ್ಕೆ ಅವಮಾನವಾಗಿ ಎಲ್ಲ ರಾಜಕೀಯ ಪಕ್ಷಗಳು ಒಮ್ಮತದಿಂದ ಆಯೋಗಕ್ಕೆ ಬಹಿಷ್ಕಾರ ಹಾಕಿದವು.

೧೯೨೮ ರ ಫೆಬ್ರುವರಿ ೩ ರಂದು ಸೈಮನ್ ಕಮೀಶನ್ ಮುಂಬಯಿಗೆ ಬಂದಿತು. ಅಬಾಲ ವೃದ್ಧರಾದಿಯಾಗಿ ಎಲ್ಲರಿಂದಲೂ 'ಸೈಮನ್ ಮರಳಿ ಹೋಗಿರಿ' ಎಂಬ ಘೋಷಣೆ, ಹರತಾಳಗಳು ಪ್ರಾರಂಭವಾದವು. ಆಗ ಗುದ್ಲೆಪ್ಪನವರು ಮುಂಬಯಿಯಲ್ಲಿದ್ದರು. ಅಲ್ಲಿ ಜರುಗಿದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಶಾಲೆ ಕಾಲೇಜುಗಳನ್ನು ತೊರೆದು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅವರು ಎಲ್ಲ ರಸ್ತೆಗಳಲ್ಲೂ ಫಲಕಗಳನ್ನು ಹಿಡಿದುಕೊಂಡು ಘೋಷಣೆಗಳನ್ನು ಕೂಗುತ್ತ ಸಂಚರಿಸುತ್ತಿದ್ದರು. ಪ್ರತ್ಯಕ್ಷದರ್ಶಿ ಗುದ್ಲೆಪ್ಪನವರು ಹೀಗೆ ಹೇಳುತ್ತಾರೆ, " ನಾನು ಮುಂಬೈಯಲ್ಲಿ ನೋಡಿದಂತೆ ಸೈಮನ್ ಕಮೀಶನ್ ಭೇಟಿ ಇತ್ತ ಎಲ್ಲ ಸ್ಥಳಗಳಲ್ಲಿಯೂ ಅದರ ವಿರುದ್ಧ ಪ್ರತಿಭಟನೆಗಳು ನಡೆದವು. ಜನರ ಭಾವನೆಗಳಿಗೆ ನಿಸರ್ಗವೂ ಸ್ಪಂದಿಸಿದಂತಿತ್ತು. ಮಳೆಯಿಲ್ಲದ ಸಂದರ್ಭದಲ್ಲಿ ಭೀಕರ ಚಂಡಮಾರುತವೆದ್ದು, ಭಾರಿ ಮಳೆ ಸುರಿದು ಕಮೀಶನ್ನಿನ ಭೆಟ್ಟಿಗೆ ಅಸಂತೋಷವನ್ನು ತೋರ್ಪಡಿಸಿದಂತಾಯಿತು. ಸೈಮನ್ ಕಮೀಶನ್ ವಿರುದ್ಧ ಏರ್ಪಡಿಸಿದ ಪ್ರತಿಭಟನೆ ಮತ್ತು ಮೆರವಣಿಗೆಗಳಲ್ಲಿ ನಮ್ಮ ಭಾರತೀಯ ತರುಣ ಸಂಘವು ಮಹತ್ವದ ಪಾತ್ರ ವಹಿಸಿತ್ತು. ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಇತರ ಜನರಲ್ಲಿರುವಂತೆ ತೀವ್ರ ಆಸಕ್ತಿ ಕರ್ನಾಟಕ ಏಕೀಕರಣಕ್ಕಾಗಿ ನಮ್ಮಲ್ಲಿಯೂ ಇತ್ತು. ಓರಿಸ್ಸಾದ ಜನರು ತಮಗೆ ಪ್ರತ್ಯೇಕ ರಾಜ್ಯ ಬೇಕೆಂದು ಸೈಮನ್ ಕಮೀಶನ್ ಮುಂದೆ ಮನವಿ ಸಲ್ಲಿಸಿದರು. ಆದರೆ ಕರ್ನಾಟಕದಲ್ಲಿ ನಾವು ಈ ಬಗ್ಗೆ ಬಹಿಷ್ಕೃತ ಸೈಮನ್ ಕಮೀಶನ್ ಬಳಿ ಹೋಗುವ ವಿಚಾರ ಮಾಡಲಿಲ್ಲ. " ೧೧

ಕರ್ನಾಟಕ ಏಕೀಕರಣಕ್ಕಾಗಿ ಮನವಿ ಕೊಟ್ಟಿದ್ದರೆ, ಬಹಿಷ್ಕೃತ ಸೈಮನ್ ಕಮೀಶನ್ನಿಗೆ ಮನ್ನಣೆ ಕೊಟ್ಟಂತಾಗುತ್ತಿತ್ತು. ಆದುದರಿಂದ ಗುದ್ಲೆಪ್ಪನವರು ಈ ಕುರಿತು ಅದರ ಬಳಿಗೆ ಹೋಗದೆ ವಿರೋಧ ವ್ಯಕ್ತಪಡಿಸಿದರು. ಗುದ್ಲೆಪ್ಪನವರ

ನೇತೃತ್ವದಲ್ಲಿ ಭಾರತೀಯ ತರುಣ ಸಂಘವು ಸೈಮನ್ ಕಮೀಶನ್ ವಿರುದ್ಧ ಮೆರವಣಿಗೆ, ಸಭೆಗಳನ್ನು ಸಂಘಟಿಸಿ ಪ್ರತಿಭಟನೆ ವ್ಯಕ್ತಪಡಿಸಿತು.

ಹೊಸರಿತ್ತಿಯಲ್ಲಿ ಗಾಂಧಿ ಆಶ್ರಮ :

ಮಹಾತ್ಮಾ ಗಾಂಧೀಜಿಯವರ ವಿಚಾರಗಳನ್ನು, ತತ್ವಗಳನ್ನು ಕಾರ್ಯರೂಪದಲ್ಲಿ ತರಲು ಅನೇಕ ಆಶ್ರಮಗಳು ಸ್ಥಾಪನೆಗೊಂಡಿದ್ದವು. ಸ್ವತಃ ಗಾಂಧೀಜಿಯವರು ಗುಜರಾತ ರಾಜ್ಯದ ಅಹಮದಾಬಾದ ಬಳಿ ಸಾಬರಮತಿ ನದಿ ದಂಡೆಯ ಮೇಲೆ ಆಶ್ರಮವೊಂದನ್ನು ಸ್ಥಾಪಿಸಿದರು. ಅದು ಸಾಬರಮತಿ ಆಶ್ರಮ ಎಂದೇ ಖ್ಯಾತವಾಯಿತು. ಇದೇ ರೀತಿ ಬಾಬು ರಾಜೇಂದ್ರ ಪ್ರಸಾದರ ಸದಾಕತ್ ಆಶ್ರಮ (ಬಿಹಾರ), ವಲ್ಲಭಭಾಯಿ ಪಟೇಲರ ಬಾರ್ಡೋಲಿ ಆಶ್ರಮ (ಗುಜರಾತ), ಚಕ್ರವರ್ತಿ ರಾಜಗೋಪಾಲಾಚಾರಿಯವರ ತ್ರಿಚನಗೂಡು ಆಶ್ರಮ (ತಮಿಳುನಾಡು), ಆಚಾರ್ಯ ಜೆ. ಬಿ. ಕೃಪಲಾನಿಯವರ ಸೇವಾಪುರಿ ಆಶ್ರಮ (ಉತ್ತರ ಪ್ರದೇಶ), ಆಚಾರ್ಯ ವಿನೋಬಾ ಭಾವೆಯವರ ಪವನಾರ ಆಶ್ರಮ (ಮಹಾರಾಷ್ಟ್ರ), ಗಂಗಾಧರ ರಾವ ದೇಶಪಾಂಡೆಯವರ ಕುಮರಿ ಆಶ್ರಮ (ಹುದಲಿ, ಕರ್ನಾಟಕ) ಇದೇ ಸಾಲಿನಲ್ಲಿ ಬರುವ ಪ್ರಮುಖವಾದ ಆಶ್ರಮವೆಂದರೆ ಗುದ್ಲೆಪ್ಪ ಹಳ್ಳಿಕೇರಿಯವರು ಹೊಸರಿತ್ತಿಯಲ್ಲಿ ಸ್ಥಾಪಿಸಿದ ' ಗಾಂಧಿ ಆಶ್ರಮ '. ಈ ಆಶ್ರಮಗಳು ಭಾರತೀಯ ಸಂಸ್ಕೃತಿಯ ಸಂವರ್ಧನೆ, ರಾಷ್ಟ್ರೀಯತೆ, ಸ್ವಾವಲಂಬನೆ ಇವನ್ನು ಜನರಲ್ಲಿ ಬಿತ್ತಿ ಬೆಳೆಸುವಲ್ಲಿ ಬಹುಮುಖ್ಯವಾದ ಪಾತ್ರ ವಹಿಸಿದವು.

ಗುದ್ಲೆಪ್ಪನವರು ಸಂಕಲ್ಪಿಸಿದಂತೆ ಸಾಬರಮತಿ ಆಶ್ರಮದ ಮಾದರಿಯ ಗಾಂಧಿ ತತ್ವ ಪ್ರಣಾಲಿಯಂತೆ ವೈವಿಧ್ಯಮಯವಾದ ವಿಧಾಯಕ ಕಾರ್ಯಕ್ರಮಗಳ ಪ್ರಯೋಜನ ತನ್ನ ಗ್ರಾಮೀಣ ಜನರಿಗೆ ಲಭಿಸಲೆಂಬ ಮಹದುದ್ದೇಶದೊಂದಿಗೆ ೧೯೨೮ ರಲ್ಲಿ ಹೊಸರಿತ್ತಿಯಲ್ಲಿ ' ಗಾಂಧಿ ಆಶ್ರಮ ' ಪ್ರಾರಂಭಿಸಿದರು.

ಆಶ್ರಮದ ಆರಂಭದ ದಿನಗಳಲ್ಲಿ ಅನೇಕ ಕಷ್ಟನಷ್ಟಗಳು ಬಂದರೂ ಗುದ್ಲೆಪ್ಪನವರು ಧೃತಿಗೆಡದೆ ತಮ್ಮ ಮನೆಯ ಎಲ್ಲ ಸದಸ್ಯರ ಬೆಂಬಲ, ಪ್ರೋತ್ಸಾಹ ಪಡೆದುಕೊಂಡು ಮುನ್ನಡೆದರು. ಅಸ್ಪೃಶ್ಯತಾ ನಿವಾರಣೆ, ಗ್ರಾಮೋದ್ಯೋಗ, ಖಾದಿ ಉತ್ಪಾದನೆ ಮತ್ತು ಖಾದಿಯನ್ನು ಹಳ್ಳಿಗಳಲ್ಲಿ ಸಂಚರಿಸಿ ಮಾರಾಟ ಮಾಡುವುದು, ಗ್ರಾಮ ನೈರ್ಮಲ್ಯ, ಶಿಕ್ಷಣ ಪ್ರಸಾರ, ರಾಷ್ಟ್ರಭಾಷೆ ಹಿಂದೀ ಕಲಿಸುವುದು ಇಂಥ ಚಟುವಟಿಕೆಗಳಲ್ಲಿ ಆಶ್ರಮವು ಮಹತ್ವದ ಪಾತ್ರ ವಹಿಸಿತ್ತು.

ಬಸವಣ್ಣೆಪ್ಪ ಎಂ. ಸಾಣಿಕೊಪ್ಪ ಅವರು ಆಶ್ರಮದಲ್ಲಿ ಎಣ್ಣೆ ಗಾಣ ತಿರುಗಿಸುವ ಕೆಲಸದ ಜೊತೆಗೆ ಕರಣಿಕ ಕೆಲಸವನ್ನೂ ಮಾಡಿದರು.

ಮಾಜಿ ಲೋಕಸಭಾ ಸದಸ್ಯ ಬಿ. ಎಂ. ಮೆಣಸಿನಕಾಯಿಯವರು ಆಶ್ರಮದ ಕುರಿತು ಹೀಗೆ ಹೇಳುತ್ತಾರೆ : " ನಮ್ಮ ಊರು ಹೊಸರಿತ್ತಿ ಸಮೀಪದ ಅಕ್ಕೂರು. ನಮ್ಮ ತಾಯಿ ಪಾರ್ವತೆವ್ವ ರಾಟಿಯಿಂದ ದಿನವೂ ನೂಲುತ್ತಿದ್ದಳು. ಚಿಕ್ಕವನಾದ ನಾನೂ ಸೇರಿದಂತೆ ಮನೆಯಲ್ಲಿನ ಎಲ್ಲರೂ ನೂಲುತ್ತಿದ್ದರು. ಆ ನೂಲನ್ನು ಹೊಸರಿತ್ತಿಯ ಗಾಂಧಿ ಆಶ್ರಮಕ್ಕೆ ಹೋಗಿ ಕೊಟ್ಟು ನಮ್ಮ ಮನೆಯವರಿಗೆ ಬೇಕಾಗುವಷ್ಟು ಖಾದಿ ಬಟ್ಟೆಯನ್ನು ತರುತ್ತಿದ್ದೆವು. ಅದರ ಲೆಕ್ಕವನ್ನು ಆಶ್ರಮದಲ್ಲಿಡುತ್ತಿದ್ದರು. " [೨೨]

ಆಶ್ರಮದ ವತಿಯಿಂದ ಕಾರ್ಯಕರ್ತರನ್ನು ಹಳ್ಳಿಗಳಿಗೆ ಕಳಿಸಿ ನೂಲುವುದನ್ನು ಕಲಿಸುವುದು. ಖಾದಿ ಪ್ರಚಾರ ಮಾಡುವುದು. ಖಾದಿ ಬಟ್ಟೆ ಮಾರಾಟ ಮಾಡುವುದು ಮುಂತಾದ ಕಾರ್ಯಗಳನ್ನು ಮಾಡಿಸಲಾಗುತ್ತಿತ್ತು. " ಸ್ವತಃ ಗುದ್ಲೆಪ್ಪನವರೆ ಆಶ್ರಮದಲ್ಲಿ ತಯಾರಾದ ಖಾದಿ ಬಟ್ಟೆಯನ್ನು ಹಳ್ಳಿಗಳಿಗೆ ತೆರಳಿ ಮಾರಿದರು. ತಳವಾರ ಬಸಪ್ಪ, ನರಗುಂದ ಬಸಪ್ಪ ಇವರೆಲ್ಲ ಅವರ ಜೊತೆಗೆ ಖಾದಿ ಬಟ್ಟೆ ಒಯ್ಯುತ್ತಿದ್ದರು. " [೧೩]

ಆಶ್ರಮದಲ್ಲಿ ಕೈಯಿಂದ ಕಾಗದ ತಯಾರಿಸಲಾಗುತ್ತಿತ್ತು. ಇದರ ತರಬೇತಿಗಾಗಿ ರಮಾನಂದ ಮನ್ನಂಗಿ ಹಾಗೂ ವೆಂಕಟೇಶ ಮಾಗಡಿಯವರು ಕಲಕತ್ತಾ ಬಳಿಯ ಶೋಧಪುರಕ್ಕೆ ಹೋಗಿ ಬಂದಿದ್ದರು. ಫಕೀರಪ್ಪ ತಾವರೆಯವರು ಗ್ರಾಮೋದ್ಯೋಗ ತರಬೇತಿ ಪಡೆಯಲು ವರ್ಧಾಕ್ಕೆ ಹೋಗಿ ಬಂದಿದ್ದರು.

ಆಶ್ರಮವಾಸಿಯಾಗಿದ್ದ ಪರಮೇಶ್ವರಗೌಡ ಸಿಂ. ಹರಕಂಗಿ ಹೇಳುವಂತೆ, " ಆಶ್ರಮದಲ್ಲಿ ಬೆಳಿಗ್ಗೆ ನಾಲ್ಕಕ್ಕೆ ಗಂಟೆ ಬಾರಿಸಲಾಗುತ್ತಿತ್ತು. ಎಲ್ಲರೂ ಸಾಮೂಹಿಕ ಪ್ರಾರ್ಥನೆ ಮಾಡುತ್ತಿದ್ದೆವು. ಅಂದಿನ ದಿನ ಮಾಡುವ ಕಾರ್ಯಕ್ರಮಗಳನ್ನು ಬರೆದು ಸೂಚನಾ ಫಲಕದ ಮೇಲೆ ಅಂಟಿಸಲಾಗುತ್ತಿತ್ತು. ಕಾರ್ಯಕರ್ತರು ಅದರಂತೆ ವಹಿಸಿದ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಯುವಕರಿಗೆ ದೈಹಿಕ ಶಿಕ್ಷಣದ ತರಬೇತಿ ಕೊಡಲಾಗುತ್ತಿತ್ತು. ನಮ್ಮ ಮಾವನವರಾದ ಶಿವನಗೌಡ ಪಾಟೀಲ, ವಿರುಪಾಕ್ಷಯ್ಯನವರು ಹಾಗೂ ದೊಡ್ಡನಾಯ್ಕರ ಎಂಬ ಕಾರ್ಯಕರ್ತರು ಯುವಕರಿಗೆ ಡಬಲ್ ಬಾರ್, ಸಿಂಗಲ್ ಬಾರ್, ಲಾಠಿ ತಿರುಗಿಸುವುದು, ಲೇಜಿಮ್ - ಡ್ರಿಲ್ ಮುಂತಾದವುಗಳನ್ನು ಕಲಿಸುತ್ತಿದ್ದರು. ಜೊತೆಗೆ ನೆಗಳೂರು, ಹಾಲಗಿ ಮುಂತಾದ ಹಳ್ಳಿಗಳಲ್ಲಿ ವ್ಯಾಯಾಮಶಾಲೆಗಳನ್ನು ಸ್ಥಾಪಿಸಿ ತರುಣರಿಗೆ ದೈಹಿಕ ಶಿಕ್ಷಣ ತರಬೇತಿ ಕೊಡುತ್ತಿದ್ದರು. ಆಶ್ರಮದ ಕಾರ್ಯಕರ್ತರು ಹಳ್ಳಿಗಳಿಗೆ ಹೋಗಿ ಚಹ, ಸೆರೆ, ಸಿಂದಿ ಕುಡಿಯಬಾರದು, ಬೀಡಿ - ಸಿಗರೇಟು ಸೇದಬಾರದು ಎಂದು ತಿಳಿವಳಿಕೆ ಕೊಟ್ಟು ಜನರಿಂದ ದುಶ್ಚಟ ತೊರೆಯಲು ಪ್ರತಿಜ್ಞೆ ಮಾಡಿಸುತ್ತಿದ್ದರು. "

ಅವರು ಮುಂದುವರಿದು ಹೀಗೆ ಹೇಳುತ್ತಾರೆ : " ನಮ್ಮ ತಂದೆಯವರು ಪೊಲೀಸಗೌಡರಿದ್ದರು. ಮನೆಯಲ್ಲಿ ಆರನೆಯ ಜಾರ್ಜ್ ಬಾದಶಹನ ಫೋಟೋ ಇತ್ತು. ನಮ್ಮ ಮಾವ ಶಿವನಗೌಡ ಪಾಟೀಲ ಆಶ್ರಮದ ಕಾರ್ಯಕರ್ತ. ಆತ ನಮ್ಮ ಮನೆಗೆ ಬಂದಾಗ ಬಾದಶಹನ ಫೋಟೋ ಕಾಣಬಾರದೆಂದು ತಿರುವಿ ಹಾಕುತ್ತಿದ್ದೆವು. ಒಮ್ಮೆ ಅದು ಗೊತ್ತಾಗಿ ಮಾವನವರು ನಮಗೆಲ್ಲ ಬಯ್ದು, ಪೂಜ್ಯ ಗಾಂಧೀಜಿಯವರ ಫೋಟೋ ಹಾಕಿಸಿದರು. ಇದೆಲ್ಲ ಗುದ್ಲೆಪ್ಪನವರ ಹೊಸರಿತ್ತಿಯ ಗಾಂಧಿ ಆಶ್ರಮದ ಪ್ರಭಾವ. ಆ ಕಾಲಕ್ಕೆ ಕಾಂಗ್ರೆಸ್ ಕಾರ್ಯಕರ್ತರನ್ನು ಹಳ್ಳಿಗಳ ಜನರು ಪಟ್ಟಾಧೀಶ ಸ್ವಾಮಿಗಳನ್ನು ಕಂಡಂತೆ ಪೂಜ್ಯ ಭಾವನೆಯಿಂದ ಕಾಣುತ್ತಿದ್ದರು. ಕಾರ್ಯಕರ್ತರ ಒಳ್ಳೆಯ ನಡತೆ, ಸಮಾಧಾನ ಗುಣಗಳಿಂದಾಗಿ ಎಲ್ಲರೂ ಗೌರವ ಕೊಡುತ್ತಿದ್ದರು. ನಾವೆಲ್ಲ ಅವರು ಹೇಳಿದಂತೆ ನಡೆದುಕೊಳ್ಳುತ್ತಿದ್ದೆವು. "

" ನೆಗಳೂರಿನಿಂದ ನಮ್ಮ ತಾಯಿ ಮತ್ತು ಅಜ್ಜಿ ನೂಲನ್ನು ಒಯ್ದು ಆಶ್ರಮಕ್ಕೆ ಕೊಟ್ಟು ಬರುವಾಗ ಅಲ್ಲಿ ತಯಾರಿಸಿದ ಗಾಣದ ಎಣ್ಣೆಯನ್ನು ತರುತ್ತಿದ್ದರು. ಆಗ ಮನೆ ಮನೆಗಳಿಗೆ ಎಲೆ ರಾಟೆಗಳನ್ನು ಆಶ್ರಮವೇ ಪೂರೈಸುತ್ತಿತ್ತು.

ಆಶ್ರಮದಲ್ಲಿ ತರಬೇತಿ ಪಡೆದ ನಮ್ಮ ಸತ್ಯಾಗ್ರಹಿಗಳ ಒಂದು ಗುಂಪಿತ್ತು. ಸರಕಾರದ ಕಣ್ಣು ತಪ್ಪಿಸಿ ಭೂಗತರಾಗಿ ಅಡವಿಯಲ್ಲಿ ಅಡ್ಡಾಡುತ್ತಿದ್ದೆವು. ಸತ್ಯಾಗ್ರಹಿಗಳು ಏನೇನು ಮಾಡಬೇಕೆಂಬ ಕುರಿತು ಸುದ್ದಿಗಳು ಆಶ್ರಮಕ್ಕೆ ಬರುತ್ತಿದ್ದವು. ಆಶ್ರಮದಿಂದ ನಮಗೆ ಸೂಚನೆಗಳು ಬರುತ್ತಿದ್ದವು. ಇಂಥಿಂಥ ಕಡೆಗೆ ಕಾರ್ಯಕ್ರಮ ಮಾಡೋದು, ಸಿಂದಿ ಕಪಾಲಿ ಹರಿಯುವುದು ಇತ್ಯಾದಿ ತಿಳಿಸುತ್ತಿದ್ದರು. ಆ ಪ್ರಕಾರ ನಾವು ಮಾಡುತ್ತಿದ್ದೆವು " [೧೪] ಎಂದು ವಿವರಿಸಿದರು.

ಹಾವೇರಿ ತಾಲೂಕಿನ ಹಾಲಗಿ ಗ್ರಾಮದ ಶ್ರೀಮತಿ ಸುಶೀಲಮ್ಮ ಜಾನಪ್ಪ ಕದರಗಾರ ಇವರು ಕೂಡ ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿದ್ದು ಹೊಸರಿತ್ತಿ ಗಾಂಧಿ ಆಶ್ರಮದಲ್ಲಿಯೇ ತರಬೇತಿ ಹೊಂದಿದವರು. ಆಶ್ರಮದ ಬಗ್ಗೆ ಅವರು ಹೀಗೆ ಹೇಳುತ್ತಾರೆ : " ಈ ಆಶ್ರಮಕ್ಕೆ ಗಂಡ - ಹೆಂಡತಿ ಜೊತೆಯಾಗಿ ಬರುತ್ತಿದ್ದರು. ಕೆಲವರು ಗಂಡಂದಿರ ಕಣ್ಣು ತಪ್ಪಿಸಿ ಕಳುವಿಲೆ ಬರುತ್ತಿದ್ದರು. ಇದರಾಗ ಹೆಣ್ಣು ಮಕ್ಕಳು, ಗಂಡು ಮಕ್ಕಳು ಎಂಬ ಭೇದಭಾವವಿಲ್ದೆ ಇರ್ತಿದ್ವಿ. ಒಮ್ಮೆ ಒಂದು ವಾರ, ಇನ್ನೊಮ್ಮೆ ತಿಂಗಳುಗಟ್ಟಲೆ, ಮತ್ತೊಮ್ಮೆ ಮೂರು ಮೂರು ತಿಂಗಳು ಇರ್ತಿದ್ವಿ. ಚಳುವಳಿಗಾರರು ಸಾರ್ವಜನಿಕರಲ್ಲಿ ಸಂಘಟನೆ ಮೂಡಿಸಲು ಜಾಗೃತಿಯನ್ನುಂಟು ಮಾಡಲು ಈ ಆಶ್ರಮ ಸ್ಥಾಪಿಸಿದ್ರು. ಇಲ್ಲಿ ಚರಖಿದಿಂದ ನೂಲುವದು, ದೇಶಭಕ್ತಿ ಗೀತೆಗಳನ್ನು ಹಾಡುವದನ್ನು ಕಲಿಸುತ್ತಿದ್ದರು. ಬೆಳಿಗ್ಗೆ ಗಂಜಿ ಕುಡಿದು, ಮಧ್ಯಾಹ್ನ ಒಪ್ಪತ್ತು ಉಂಡು, ಸಂಯಮದ ಜೀವನ ಕಳೆದೆವು. " [೧೫]

ಗುದ್ಲೆಪ್ಪನವರ ಧರ್ಮಪತ್ನಿ ಶ್ರೀಮತಿ ಗಂಗಾದೇವಿ ಅವರು ಹೀಗೆ ಹೇಳುತ್ತಾರೆ : " ಆಶ್ರಮವಾಸಿಗಳಿಗಾಗಿ ಮುಂಜಾನೆ ಗಂಜಿ, ಸಜ್ಜಕಾ ನಾನೇ ಮಾಡ್ತಿದ್ದೆ. ಮಧ್ಯಾಹ್ನದ ಊಟಕ್ಕೆ ರೊಟ್ಟಿ, ಕಾರಬೇಳೆ, ನೆವಣಕ್ಕಿ ಅನ್ನ ಮಾಡ್ತಿದ್ದೆ. ಮಾಗಡಿ ದಂಪತಿಗಳು, ನಮ್ಮ ಜಮಾನರು, ಪ್ರಭೂಜಿ ಸವಣೂರ, ಭೀಮಪ್ಪ ಪವಾರ ಮಾಸ್ತರು ಇವರು ಮುಂಜಾನೆ ಜೋಳ ಗೋದಿ ಬೀಸುತ್ತಿದ್ದರು. " [೧೬] ಹೀಗೆ ಆಶ್ರಮವಾಸಿಗಳು ಎಲ್ಲ ಕೆಲಸ ಕಾರ್ಯಗಳನ್ನು ಭೇದಭಾವವಿಲ್ಲದೆ ಮಾಡುತ್ತಿದ್ದರು.

ಗುದ್ಲೆಪ್ಪನವರ ಹಿರಿಯ ಪುತ್ರ ಡಾ. ದೀನಬಂಧು ಹೀಗೆ ಹೇಳುತ್ತಾರೆ : " ನಾನು ಬಾಲಕನಾಗಿದ್ದಾಗ ಹೊಸರಿತ್ತಿಯ ಗಾಂಧಿ ಆಶ್ರಮದಲ್ಲಿ ತಾಯಿಯೊಂದಿಗೆ ಇದ್ದೆ. ಬೆಳಗಾವಿ ಜಿಲ್ಲೆಯ ನಾಗನೂರಿನ ಶಿವನಾಯಕ ರಾಚನಾಯ್ಕರ ಮಾಸ್ತರ ಅವರು ಆಶ್ರಮದಲ್ಲಿದ್ದು, ಗ್ರಾಮವಾಸಿ ಮಕ್ಕಳಿಗೆ ಸಾಲಿ ಕಲಿಸುತ್ತಿದ್ದರು. ಆಶ್ರಮವಾಸಿಗಳಿಗೆ ನಮ್ಮ ತಾಯಿ ಅಡುಗೆ ಮಾಡುತ್ತಿದ್ದರು. ಗೋವಿಂದಪ್ಪ ಸಿಂಪಿ ಇವರು ಆಶ್ರಮವಾಸಿಗಳಿಗೆ ಖಾದಿ ಬಟ್ಟೆಗಳನ್ನು ಹೊಲಿದು ಕೊಡುತ್ತಿದ್ದರು. " [೧೭]

ವಿಧಾಯಕ ಕಾರ್ಯಗಳಲ್ಲಿ ಹಿಂದಿ ಪ್ರಚಾರವೂ ಒಂದು. ಆಶ್ರಮದಲ್ಲಿ ಹಿಂದಿ ಬಲ್ಲ ಒಬ್ಬ ಕಾರ್ಯಕರ್ತನಿರಬೇಕೆಂದು ಗುದ್ಲೆಪ್ಪನವರು ಆರ್. ಜಿ. ಕುಲಕರ್ಣಿಯವರನ್ನು ನೇಮಿಸಿದರು. ಆಶ್ರಮಕ್ಕೆ ಬೇಕಾದ ದವಸ ಧಾನ್ಯಗಳನ್ನು ಕಾರ್ಯಕರ್ತರು ಹಳ್ಳಿಗಳಲ್ಲಿ ಸಂಚರಿಸಿ ಸಂಗ್ರಹಿಸುತ್ತಿದ್ದರು. ಶ್ರೀಮಂತರು, ಮಾರ್ವಾಡಿಗಳು

ದೇಣಿಗೆಗಳನ್ನು ಕೊಡುತ್ತಿದ್ದರು. ಈ ರೀತಿ ಆಶ್ರಮದ ಬಗ್ಗೆ ಜನರಲ್ಲಿ ಅಭಿಮಾನ ಗೌರವವಿತ್ತು. ದೇಶ ಕಟ್ಟುವ ಕಾರ್ಯವಲ್ಲಿ ಯೋಧರನ್ನು ನಿರ್ಮಿಸುವ ಈ ಆಶ್ರಮಕ್ಕೆ ಕಾಕಾ ಕಾರಖಾನಿಸ, ಕಿಶೋರಿಲಾಲ ಮಶ್ರೂವಾಲಾ, ಮೊರಾರ್ಜಿ ದೇಸಾಯಿ ಮುಂತಾದವರು ಭೇಟಿಕೊಟ್ಟು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ೧೯೩೭ ಏಪ್ರಿಲ್ ೧೬ ರಂದು ಗಾಂಧೀಜಿಯವರ ಉಪಸ್ಥಿತಿಯಲ್ಲಿ ಜರುಗಿದ ಗಾಂಧಿ ಸೇವಾ ಸಮ್ಮೇಳನದಲ್ಲಿ ಸ್ವಾಗತಾಧ್ಯಕ್ಷ ಗಂಗಾಧರರಾವ ದೇಶಪಾಂಡೆಯವರು ಸ್ವಾಗತ ಭಾಷಣ ಮಾಡುತ್ತ, " ಸಹಯೋಗಿ ಸದಸ್ಯ ಶ್ರೀ ಹಳ್ಳಿಕೇರಿ ಮತ್ತು ಮಾಗಡಿ ಇಬ್ಬರೂ ಗಾಂಧೀಜಿಯ ಸಿದ್ಧಾಂತಕ್ಕನುಸಾರವಾಗಿ ಕೆಲಸ ಮಾಡಲು ಧಾರವಾಡ ಜಿಲ್ಲೆಯ ಹೊಸರಿತ್ತಿಯಲ್ಲಿ ಒಂದು ಆಶ್ರಮ ಸ್ಥಾಪಿಸಿದ್ದಾರೆ.... ಹಾವೇರಿ ತಾಲೂಕಿನಲ್ಲಿ ಅಕ್ಕಪಕ್ಕದಲ್ಲಿ ಜನಜಾಗೃತಿ ಮಾಡಲು ಈ ಆಶ್ರಮ ಪ್ರಯತ್ನಿಸುತ್ತಿದೆ. ಈ ಆಶ್ರಮ ಭವಿಷತ್ತಿನ ಆಸೆಗೆ ಬೀಜ ಹಾಕಿದೆ. "[೧೮] ಎಂದು ಪ್ರಶಂಸಿಸಿದುದು ಗಮನಾರ್ಹ. ಸ್ವತಃ ಗಾಂಧೀಜಿಯವರೇ ಗುದ್ಲೆಪ್ಪನವರ ಕರ್ತೃತ್ವ ಶಕ್ತಿಗೆ ಮೆಚ್ಚಿ ಅವರನ್ನು ಗಾಂಧಿ ಸೇವಾ ಸಂಘದ ಸದಸ್ಯರನ್ನಾಗಿ ಮಾಡಿದ್ದರು. ಈ ಸಮ್ಮೇಳನದಲ್ಲಿ ಗುದ್ಲೆಪ್ಪನವರು ಪಾಲ್ಗೊಂಡಿದ್ದರು.

ಭಾರತೀಯ ಮುಖಂಡರಲ್ಲದೆ ಯುರೋಪಿಯನ್ ಅಧಿಕಾರಿಗಳು ಆಶ್ರಮಕ್ಕೆ ಭೇಟಿ ಇತ್ತು ಗುದ್ಲೆಪ್ಪನವರ ಕರ್ತೃತ್ವ ಶಕ್ತಿಯನ್ನು ಮೆಚ್ಚುತ್ತಿದ್ದರು. ಆಶ್ರಮದ ಶಿಸ್ತಿನ ಜೀವನ, ವಿಧಾಯಕ ಕಾರ್ಯಕ್ರಮುಗಳನ್ನು ನೋಡಿ ದೇಣಿಗೆಗಳನ್ನು ಕೊಟ್ಟು ಹೋಗುತ್ತಿದ್ದರು. ಅಂಥ ಒಂದು ಪ್ರಸಂಗವನ್ನು ಆಶ್ರಮವಾಸಿಗಳಾಗಿದ್ದ ಆರ್. ಜಿ. ಕುಲಕರ್ಣಿಯವರು ಹೀಗೆ ನೆನೆಯುತ್ತಾರೆ : " ಒಮ್ಮೆ ಒಬ್ಬ ಕಲೆಕ್ಟರನು ಶ್ರೀ ಹಳ್ಳಿಕೇರಿಯವರಿಗೆ ಇಂಗ್ಲೀಷಿನ ಮೇಲಿದ್ದ ಪ್ರಭುತ್ವವನ್ನು ನೋಡಿ, ' ನಿಮ್ಮ ಎಜ್ಯುಕೇಶನ್ ಎಲ್ಲಿಯವರೆಗೆ ಆಗಿದೆ ? ' ಎಂದು ಕೇಳಲು, ಅದಕ್ಕೆ ಶ್ರೀ ಹಳ್ಳಿಕೇರಿಯವರು, ' ಕಾಲೇಜು ಕಟ್ಟೆಯನ್ನು ಹತ್ತಿದ್ದೇನೋ ನಿಜ, ಆದರೆ ಈಗ ನಾನು ಮಾಟ್ರಿಕ್ಯುಲೇಟ್ ' ಎಂದು ಹೇಳಿದರು. ಕಲೆಕ್ಟರನು ಇವರ ಸರಳತನಕ್ಕೆ, ಬುದ್ಧಿಮತ್ತೆಗೆ ಮೆಚ್ಚಿ ' ನಿಮ್ಮಂತಹ ಕಾರ್ಯಕರ್ತರು ಕಾಂಗ್ರೆಸ್ಸಿನಲ್ಲಿರುವುದರಿಂದಲೇ ಕಾಂಗ್ರೆಸ್ಸಿನ ಭವಿಷ್ಯ ದಿನದಿನಕ್ಕೆ ಉಜ್ವಲವಾಗತೊಡಗಿದೆ ' ಎಂದು ಅಂದು ಆಶ್ರಮಕ್ಕೆ ದೇಣಿಗೆ ಕೊಟ್ಟದ್ದಲ್ಲದೆ ನಾನು ಇಲ್ಲಿ ಇರುವವರೆಗೆ ನನ್ನಿಂದ ಆದಷ್ಟು ಸಹಾಯ - ಸಹಕಾರ ಕೊಡುವೆನೆಂದು ಆಶ್ವಾಸನೆ ಕೊಟ್ಟರು. "[೧೯]

ಗುದ್ಲೆಪ್ಪನವರ ಪ್ರಭಾವ ಪ್ರೇರಣೆಯಿಂದ ಸುತ್ತಲಿನ ಹಳ್ಳಿಗಳು ಗಾಂಧಿ ಗ್ರಾಮಗಳಾಗಿ ಪರಿವರ್ತಿತವಾದವು. ಕಾಂಗ್ರೆಸ್ಸಿನ ಪ್ರಭಾವ ವ್ಯಾಪಕವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಸುತ್ತಲಿನ ಹಳ್ಳಿಗಳಿಂದ ಸುಮಾರು ಐದು ಸಾವಿರ ಜನರು ಹಾಗೂ ಹೊಸರಿತ್ತಿಯೊಂದರಿಂದಲೇ ಒಂದು ಸಾವಿರ ಜನರು ಸತ್ಯಾಗ್ರಹಿಗಳಾಗಿ ಪಾಲ್ಗೊಂಡರು. ಇದು ಗುದ್ಲೆಪ್ಪನವರ ಸಂಘಟನಾ ಸಾಮರ್ಥ್ಯಕ್ಕೆ ಉಜ್ವಲ ನಿದರ್ಶನವಾಗಿದೆ. ಹೊಸರಿತ್ತಿಯ ಗಾಂಧಿ ಆಶ್ರಮದ ಪ್ರಭಾವದಿಂದ ಮುಂದೆ ಮಹಾದೇವಪ್ಪ ಮೈಲಾರ ಅವರು ಕೊರಡೂರಿನಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು.

ಈ ಹೊಸರಿತ್ತಿ ಆಶ್ರಮದಲ್ಲಿ ಸುಮಾರು ಐವತ್ತು - ಅರವತ್ತು ಜನ ಕಾರ್ಯಕರ್ತರು ರಚನಾತ್ಮಕ ಕಾರ್ಯಗಳಲ್ಲಿ ನಿರತರಾಗಿದ್ದರು. ಅವರಲ್ಲಿ ವೆಂಕಟೇಶ ಮತ್ತು ಲೀಲಾವತಿ ಮಾಗಡಿ, ರಮಾನಂದ ಮತ್ತು ದೇವಕ್ಕ ಮುನ್ನಂಗಿ, ಮಹಾದೇವಪ್ಪ ಮತ್ತು ಸಿದ್ಧಮ್ಮ ಮೈಲಾರ ದಂಪತಿಗಳು, ಸರ್ದಾರ ವೀರನಗೌಡ ಪಾಟೀಲ, ಕೆ. ಎಫ್. ಪಾಟೀಲ, ಫಕೀರಪ್ಪ ತಾವರೆ, ಆರ್. ಜಿ. ಕುಲಕರ್ಣಿ, ಪರಮೇಶ್ವರಗೌಡ, ನಿಂ. ಹರಕಂಗಿ, ಭೀಮಪ್ಪ ಪವಾರ ಮಾಸ್ತರ, ಪ್ರಭೂಜಿ ಸವಣೂರ, ಬೆಳಗಾವಿ ಜಿಲ್ಲೆಯ ನಾಗನೂರಿನ ಶಿವನಾಯಕ ರಾಚನಾಯ್ಕರ, ಹನಮಣ್ಣ ಜಂಗಲಿ, ಬಸಪ್ಪ ನರಗುಂದ, ಗೋಣೆಪ್ಪ ಕಮತ, ಮಲ್ಲಯ್ಯ ಕುಲಕರ್ಣಿ, ವೆಂಕಣ್ಣಾಚಾರ್ಯ ವಡವಿ, ಯಲ್ಲಪ್ಪ ಕನವಳ್ಳಿ, ನವಲಗುಂದದ ಡಾ. ಎಚ್. ಆರ್. ರಾಯರಡ್ಡಿ, ಸೊಲ್ಲಾಪುರದ ಡಾ. ಸಿದ್ಧನಾಥ ಬಳ್ಳಾರಿ, ವಿರುಪಾಕ್ಷಪ್ಪ ಗು. ಅಂಗಡಿ ಮುಂತಾದವರು ಪ್ರಮುಖರು.

ಬನದ ಹುಣ್ಣಿವೆಗೆ ಹೊಸರಿತ್ತಿಯಲ್ಲಿ ಗುದ್ದಲಿ ಸ್ವಾಮಿ ಮಠದ ಜಾತ್ರೆ ಎರಡರಿಂದ ಮೂರು ತಿಂಗಳವರೆಗೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು. ಆಗ ದನಗಳ ಜಾತ್ರೆಯದೇ ವಿಶೇಷ. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಎತ್ತುಗಳನ್ನು ಮಾರಲು ಮತ್ತು ಕೊಳ್ಳಲು ರೈತರು ಬಹು ಸಂಖ್ಯೆಯಲ್ಲಿ ಬರುತ್ತಿದ್ದರು. ಗುದ್ಲೆಪ್ಪನವರು ಜಾತ್ರೆಯಲ್ಲಿ ರಾಷ್ಟ್ರೀಯ ಭಾವನೆಯನ್ನು ತುಂಬುವಂತಹ ಹಾಡುಗಳನ್ನು ಹೇಳಿಸುತ್ತಿದ್ದರು. ಗಾಂಧಿ ಆಶ್ರಮದಿಂದ ಅನೇಕ ಸ್ವಯಂ ಸೇವಕರು ಸಮವಸ್ತ್ರಧಾರಿಗಳಾಗಿ ಕೈಯಲ್ಲಿ ಲಾಠಿ ಹಿಡಿದುಕೊಂಡು ಶಾಂತಿ, ಸುವ್ಯವಸ್ಥೆ, ಶಿಸ್ತು ಕಾಪಾಡಲು ನೇಮಕಗೊಳ್ಳುತ್ತಿದ್ದರು. ರೈತರಿಗೆ ನೆರವಾಗುತ್ತಿದ್ದರು.

ಆ ಸಂದರ್ಭದಲ್ಲಿ ಗುದ್ಲೆಪ್ಪನವರು ರೈತಪರಿಷತ್ತನ್ನು ಏರ್ಪಡಿಸುತ್ತಿದ್ದರು. ರೈತರಲ್ಲಿ ರಾಷ್ಟ್ರೀಯ ಭಾವನೆ ಬಿತ್ತರಿಸುವ ಭಾಷಣಗಳನ್ನು ಸ್ವತಃ ತಾವು ಮಾಡುತ್ತಿದ್ದರಲ್ಲದೆ ಬೇರೆ ಮುಖಂಡರ ಕಡೆಯಿಂದಲೂ ಮಾಡಿಸಿ ರೈತರಲ್ಲಿ ರಾಷ್ಟ್ರಾಭಿಮಾನ ಬಿಂಬಿಸುತ್ತಿದ್ದರು. ಕೃಷಿ ತಜ್ಞರನ್ನು ಕರೆಯಿಸಿ ಕೃಷಿ ಮತ್ತು ಪಶು ಸಂಗೋಪನೆಯ ಬಗ್ಗೆ ಭಾಷಣ ಮಾಡಿಸಿ, ಉತ್ತಮ ತಳಿ ದನಗಳಿಗೆ ಪಾರಿತೋಷಕ ವಿತರಣೆ ಮಾಡಿಸುತ್ತಿದ್ದರು.

ಹೀಗೆ ರೈತ ಮನೆತನದಲ್ಲಿ ಜನಿಸಿದ ಗುದ್ಲೆಪ್ಪನವರಿಗೆ ರೈತರ ಬಗ್ಗೆ ವಿಶೇಷ ಆಸ್ಥೆಯಿತ್ತು. ಅವರೂ ರಾಷ್ಟ್ರಸೇವೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುತ್ತಿದ್ದರು.

ಗಾಂಧಿ ವಾಚನಾಲಯ :

ಗಾಂಧಿ ಆಶ್ರಮದ ಅಂಗವಾಗಿ ಜನಕಲ್ಯಾಣಕ್ಕೋಸ್ಕರ ಗುದ್ಲೆಪ್ಪನವರು ಬೇರೆ ಬೇರೆ ಸಂಸ್ಥೆಗಳನ್ನು ಸ್ಥಾಪಿಸಿದರು. ಜನರಲ್ಲಿ ರಾಷ್ಟ್ರೀಯ ಭಾವನೆ ಬೆಳೆಸಲು ಅಕ್ಷರ ಜ್ಞಾನ ಅವಶ್ಯ. ಈ ದೃಷ್ಟಿಯಿಂದ ಗಾಂಧಿ ವಾಚನಾಲಯವು ಸ್ಥಾಪಿತವಾಯಿತು. ಇದು ಹಳ್ಳಿಗರಲ್ಲಿ ಓದುವ ಅಭಿರುಚಿಯನ್ನು ಬೆಳೆಸುವಲ್ಲಿ ಶ್ಲಾಘನೀಯ ಕಾರ್ಯ ಮಾಡಿತು. ವಾಚನಾಲಯಕ್ಕಾಗಿಯೇ ಹಳ್ಳಿಗರಿಗೆ, ಮಕ್ಕಳಿಗೆ, ಮಹಿಳೆಯರಿಗೆ ಬಹಳಷ್ಟು ಪುಸ್ತಕಗಳನ್ನು ಗುದ್ಲೆಪ್ಪನವರು ಸಂಗ್ರಹಿಸಿದರು. ಜನರಲ್ಲಿ ವಾಚನಾಭಿರುಚಿ ಹೆಚ್ಚಿದಂತೆ ಸಾಮಾಜಿಕ ಮತ್ತು ರಾಷ್ಟ್ರೀಯ ಪ್ರಜ್ಞೆ ಜಾಗೃತವಾಯಿತು. ಕನ್ನಡ ಭಾಷೆಯ ಬಗೆಗೂ ಜನರಲ್ಲಿ ಅಭಿಮಾನ ಮೂಡಲಾರಂಭಿಸಿತು.

ಮಾಜಿ ಲೋಕಸಭಾ ಸದಸ್ಯ ಬಿ. ಎಂ. ಮೆಣಸಿನಕಾಯಿಯವರು ವಾಚನಾಲಯದ ಬಗ್ಗೆ ಹೀಗೆ ಹೇಳುತ್ತಾರೆ : " ವಾಚನಾಲಯದ ವ್ಯವಸ್ಥೆಯನ್ನು ಮೊದಲು ಮರೋಳ ಮಾಸ್ತರರು ನೋಡಿಕೊಳ್ಳುತ್ತಿದ್ದರು. ನಾನು ಆಗಾಗ ಅಲ್ಲಿ ಹೋಗುತ್ತಿದ್ದೆ. ಮುಂದೆ ಹಳ್ಳಿಕೇರಿಯವರು ಅದರ ವ್ಯವಸ್ಥೆಯ ಕೆಲಸವನ್ನು ನನಗೆ ಒಪ್ಪಿಸಿದರು. ಎಲ್ಲ ದಿನಪತ್ರಿಕೆಗಳನ್ನು ವ್ಯವಸ್ಥಿತವಾಗಿ ಇಡುವದು. ಪುಸ್ತಕಗಳನ್ನು ನಂಬರ ಪ್ರಕಾರ ಹೊಂದಿಸಿಡುವದು ಮತ್ತು ಸ್ವಚ್ಛತೆಯನ್ನು ನೋಡುತ್ತಿದ್ದೆನು. ಹಳ್ಳಿಕೇರಿಯವರು ಬೇಡಿದ ಪುಸ್ತಕಗಳನ್ನು ಕೂಡಲೇ ಒಯ್ದು ಕೊಡುತ್ತಿದ್ದೆ. ರಾತ್ರಿ ಅಲ್ಲಿಯೇ ಇರುತ್ತಿದ್ದೆ. ೧೯೪೪ ರಲ್ಲಿ ಮುಂಬಯಿ ಪ್ರಾಂತದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೊರಾರ್ಜಿ ದೇಸಾಯಿಯವರನ್ನು ಹಳ್ಳಿಕೇರಿಯವರು ಹೊಸರಿತ್ತಿಗೆ ಬರಮಾಡಿಕೊಂಡರು. ಸಾರ್ವಜನಿಕ ಸಭೆ ಏರ್ಪಡಿಸಿದರು. ಸುತ್ತಲಿನ ಹಳ್ಳಿಗಳ ಜನರೆಲ್ಲ ಬಂದಿದ್ದರು. ಮೊರಾರ್ಜಿಯವರನ್ನು ಆನೆಯ ಮೇಲೆ ಮೆರವಣಿಗೆ ಮಾಡಿಸುತ್ತ ಗಾಂಧಿ ಆಶ್ರಮಕ್ಕೆ ಕರೆತಂದರು. ಅಲ್ಲಿ ಅವರಿಗೆ ಆಶ್ರಮದ ಎಲ್ಲ ಚಟುವಟಿಕೆಗಳ ಪರಿಚಯ ಮಾಡಿಕೊಟ್ಟರು. ಮೊರಾರ್ಜಿಯವರು ಸಾರ್ವಜನಿಕ ಭಾಷಣ ಮಾಡಿದ ನಂತರ ಹಳ್ಳಿಕೇರಿಯವರು ಅವರನ್ನು ಗಾಂಧಿ ವಾಚನಾಲಯಕ್ಕೆ ಕರೆತಂದರು. ಅಲ್ಲಿದ್ದ ಮಹತ್ವದ ಗ್ರಂಥಗಳನ್ನು ಮೊರಾರ್ಜಿಯವರು ಆಸಕ್ತಿಯಿಂದ ನೋಡಿ ಸಂತೋಷಗೊಂಡರು. " [೨೦]

ಗಾಂಧಿ ಚಿಕಿತ್ಸಾಲಯ :

ಹಳ್ಳಿಗಳಲ್ಲಿ ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಅದಕ್ಕಾಗಿ ಬಡರೋಗಿಗಳಿಗೆ ಉಚಿತ ಔಷಧೋಪಚಾರವನ್ನು, ಆರೋಗ್ಯ ಸಲಹೆಗಳನ್ನು ನೀಡುವುದಕ್ಕಾಗಿ ಹಳ್ಳಿಕೇರಿಯವರು ಹೊಸರಿತ್ತಿಯಲ್ಲಿ ಗಾಂಧಿ ಚಿಕಿತ್ಸಾಲಯವನ್ನು ತೆರೆದರು. ಮೊದಲು ಶಿವನಾಯಕ ರಾಚನಾಯ್ಕರ ಮಾಸ್ತರ ನಾಗನೂರ ಅವರು ಬಡರೋಗಿಗಳಿಗೆ ಉಚಿತ ಆಯುರ್ವೇದ ಚಿಕಿತ್ಸೆಯನ್ನು ನೀಡುತ್ತಿದ್ದರು.

ಹಳ್ಳಿಗಳಲ್ಲಿ ಆಗ ವೈದ್ಯರೂ ಇರುತ್ತಿರಲಿಲ್ಲ. ಆಶ್ರಮದ ವತಿಯಿಂದಲೇ ವೈದ್ಯರು ಕುದುರೆಯ ಮೇಲಿಂದ ಹಳ್ಳಿಹಳ್ಳಿಗೆ ಹೋಗಿ ರೋಗಿಗಳಿಗೆ ಔಷಧೋಪಚಾರ ಮಾಡುತ್ತಿದ್ದರು. [೨೧] ಇದು ಗುದ್ಲೆಪ್ಪನವರಿಗೆ ಬಡವರ ಬಗೆಗಿರುವ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.

ಕಾನೂನು ಭಂಗ ಚಳುವಳಿ :

೧೯೨೯ ರ ಡಿಸೆಂಬರ್ ೩೧ ರಂದು ಲಾಹೋರದಲ್ಲಿ ಜವಾಹರಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯ ಸಿಗಬೇಕು ಎಂಬ ನಿರ್ಣಯ ಸರ್ವಾನುಮತದಿಂದ ಸ್ವೀಕೃತವಾಯಿತು. ಇನ್ನು ಮುಂದೆ ಜನೆವರಿ ೨೬ ನೇ ದಿನವನ್ನು ಸ್ವಾತಂತ್ರ್ಯ ದಿನವೆಂದು ಆಚರಿಸಬೇಕೆಂಬ ನಿರ್ಣಯ ಕೈಕೊಳ್ಳಲಾಯಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕಾನೂನು ಭಂಗ ಚಳುವಳಿ ಜೊತೆಗೆ ಕರನಿರಾಕರಣ ಚಳುವಳಿ ಕೈಕೊಳ್ಳಲು ತೀರ್ಮಾನಿಸುವ ಅಧಿಕಾರವನ್ನು ನೀಡಲಾಯಿತು. ಸತ್ಯಾಗ್ರಹ ಚಳುವಳಿಯನ್ನು ಯೋಚಿಸಿ ನಿರ್ಧರಿಸುವಂತೆ ಕಾಂಗ್ರೆಸ್ಸು ಮಹಾತ್ಮಾ ಗಾಂಧೀಜಿಯವರನ್ನು ಕೇಳಿಕೊಂಡಿತು. ಇದಕ್ಕೆ ಗಾಂಧೀಜಿ ಒಪ್ಪಿಕೊಂಡರು.

ಕಾಂಗ್ರೆಸ ಕಾರ್ಯಕಾರಿ ಸಮಿತಿಯು ೧೯೩೦ ರ ಫೆಬ್ರುವರಿ ೧೪ ರಿಂದ ೧೬ ರ ವರೆಗೆ ಸಾಬರಮತಿ ಆಶ್ರಮದಲ್ಲಿ ಸೇರಿ ಗಾಂಧೀಜಿಯವರಿಗೆ ಕಾನೂನುಭಂಗ ಚಳುವಳಿ ಕೈಕೊಳ್ಳಲು ಸಂಪೂರ್ಣ ಅಧಿಕಾರ ನೀಡಿತು. ಈ ಚಳುವಳಿಯ ಅಂಗವಾಗಿ ಬ್ರಿಟಿಷ್ ಸರಕಾರವು ಜನಜೀವನದ ಸತ್ಯ ಬಳಕೆಯ ಉಪ್ಪಿನ ಮೇಲೆ ವಿಧಿಸಿದ್ದ ಕರವನ್ನು ವಿರೋಧಿಸಿ, ಕಾನೂನು ಭಂಗಗೊಳಿಸುವ ಚಳುವಳಿ ಆರಂಭಿಸಲು ಗಾಂಧೀಜಿಯವರು ನಿರ್ಧರಿಸಿದರು.

ಉಪ್ಪಿನ ಮೇಲೆ ವಿಧಿಸಿದ್ದ ಕರದ ಹಿನ್ನೆಲೆ ಹೀಗಿದೆ: ೧೮೩೬ ರಲ್ಲಿ ಬ್ರಿಟಿಷ್ ಸರಕಾರವು 'ಉಪ್ಪಿನ ಆಯೋಗ' ವೊಂದನ್ನು ನೇಮಿಸಿತ್ತು. ಇಂಗ್ಲೆಂಡಿನ ಉಪ್ಪು ಭಾರತದಲ್ಲಿ ಮಾರಾಟವಾಗಬೇಕಾದರೆ ಭಾರತೀಯ ಉಪ್ಪಿನ ಮೇಲೆ ತೆರಿಗೆ ವಿಧಿಸುವ ಮೂಲಕ ತಮ್ಮ ಉಪ್ಪನ್ನು ಮಾರಾಟ ಮಾಡುವ ಉದ್ದೇಶವನ್ನು ಹೊಂದಿದ್ದರು. ಇಂಗ್ಲೆಂಡ್ ತಯಾರಿಸಿದ ಸರಕುಗಳನ್ನು ಭಾರತಕ್ಕೆ ಹಡಗುಗಳ ಮೂಲಕ ರಫ್ತು ಮಾಡಲಾಗುತ್ತಿತ್ತು. ಮರಳಿ ಭಾರತದಿಂದ ಕಚ್ಚಾ ಸರಕುಗಳು ಹಾಗೂ ಆಹಾರ ಸರಕುಗಳನ್ನು ಒಯ್ಯಲು ಬೇಕಾಗುವ ಹಡಗುಗಳು ಕಡಿಮೆಯಾಗಿದ್ದವು. ಅದಕ್ಕಾಗಿ ಇಂಗ್ಲೆಂಡು ಕೆಲವು ಖಾಲಿ ಹಡಗುಗಳನ್ನು ಭಾರತಕ್ಕೆ ಕಳಿಸಿ ಇಲ್ಲಿಯ ವಸ್ತುಗಳನ್ನು ಒಯ್ಯಬೇಕಾಗುತ್ತಿತ್ತು. ಇದು ಇಂಗ್ಲೆಂಡಿಗೆ ನಷ್ಟ ತರುತ್ತಿತ್ತು. ಆದ ಕಾರಣ ಇಂಗ್ಲೆಂಡು ಖಾಲಿ ಹಡಗು ಕಳಿಸುವ ಬದಲು ತಮ್ಮ ದೇಶದ ಚೆಶೈರ್ ಎಂಬಲ್ಲಿಯ ಹೇರಳವಾಗಿದ್ದ ಉಪ್ಪನ್ನು ತುಂಬಿ ಭಾರತಕ್ಕೆ ಕಳಿಸಲಾರಂಭಿಸಿತು. ಹೀಗಾಗಿ ಭಾರತದಲ್ಲಿ ತಯಾರಾದ ಉಪ್ಪಿನ ಬೆಲೆಗಿಂತ ರಫ್ತಾದ ಉಪ್ಪಿನ ಬೆಲೆ ಜಾಸ್ತಿಯಾಗಿತ್ತು. ಆಗ ಬ್ರಿಟಿಷ್ ಆಡಳಿತಗಾರರು ಭಾರತದ ಉಪ್ಪಿನ ಬೆಲೆ ಹೆಚ್ಚಿಸಲು ತೆರಿಗೆ ವಿಧಿಸಿದರು.

ಹೀಗೆ ಬ್ರಿಟಿಷರು ತಮ್ಮ ಲಾಭಕ್ಕಾಗಿ ಭಾರತೀಯರನ್ನು ಶೋಷಿಸುವ ತಂತ್ರಗಾರಿಕೆ ಇದರಲ್ಲಿತ್ತು. ಈ ಕಾರಣಕ್ಕಾಗಿ ಗಾಂಧೀಜಿಯವರು ಉಪ್ಪಿನ ಕಾನೂನನ್ನು ಮುರಿದು. ಕರ ಕೊಡದೆ ಉಪ್ಪನ್ನು ತಯಾರಿಸುವ ಉಪ್ಪಿನ ಸತ್ಯಾಗ್ರಹ ನಿರ್ಣಯ ಕೈಕೊಂಡರು.

ಗಾಂಧೀಜಿಯವರು ಮಾರ್ಚ್ ೨ ರಂದು ವೈಸ್‌ರಾಯ್ ಇರ್ವಿನ್‌ಗೆ ಬರೆದ ಐತಿಹಾಸಿಕ ಪತ್ರದಲ್ಲಿ ೧೧ ಅಂಶಗಳ ಬೇಡಿಕೆಯ ಪಟ್ಟಿಯನ್ನು ಸರಕಾರದ ಮುಂದಿರಿಸಿದರು. ಅವು ಹೀಗಿವೆ : ೧. ಪೂರ್ಣ ಮದ್ಯಪಾನ ನಿಷೇಧ, ೨. ಭಾರತದ ರೂಪಾಯಿಯ ಪರಿವರ್ತನೆಯ ಬೆಲೆಯನ್ನು ೧ ಷಿಲ್ಲಿಂಗ್, ೪ ಪೆನ್ಸ್ ಎಂಬ ಹಾಗೆಯೇ ಇರಿಸುವುದು, ೩. ಭೂಕಂದಾಯವನ್ನು ಶೇ. ೫೦ ಕ್ಕೆ ಇಳಿಸುವುದು, ೪. ಉಪ್ಪಿನ ಕರವನ್ನು ತೆಗೆದುಹಾಕುವುದು. ೫. ಸೈನ್ಯದ ವೆಚ್ಚವನ್ನು ಶೇ. ೫೦ ಕ್ಕೆ ತಗ್ಗಿಸುವುದು. ೬. ರಾಜ್ಯಾಧಿಕಾರಿಗಳ ಸಂಬಳವನ್ನು ಅರ್ಧಕ್ಕೆ ಇಳಿಸುವುದು. ೭. ಪರದೇಶಿ ಬಟ್ಟೆಗಳ ಮೇಲೆ ಆಮದು ಸುಂಕ ವಿಧಿಸುವುದು. ೮. ತೀರಪ್ರದೇಶವನ್ನು ಕಾದಿಡುವ ಮಸೂದೆಯನ್ನು ಶಾಸನಗೊಳಿಸುವುದು. ೯. ಮರಣ ಶಿಕ್ಷೆಗೆ ಗುರಿಯಾದವರನ್ನುಳಿದು ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವುದು. ೧೦. ಸಿ. ಐ. ಡಿ. ಗಳನ್ನು ತೆಗೆದು ಹಾಕುವುದು. ೧೧. ನಿಯಂತ್ರಣಕ್ಕೊಳಪಟ್ಟು ಆತ್ಮರಕ್ಷಣೆಗಾಗಿ ಸಿಡಿಮದ್ದಿನ ಆಯುಧಗಳಿಗೆ ಪರವಾನಿಗೆ ನೀಡುವದು. ಈ ಎಲ್ಲ ಬೇಡಿಕೆಗಳ ಪತ್ರಕ್ಕೆ ವೈಸ್‌ರಾಯ್ ಉತ್ತರಿಸಲಿಲ್ಲ. ಕೊನೆಗೆ ಗಾಂಧೀಜಿಯವರು ಕಾನೂನು ಭಂಗ ಚಳುವಳಿಯನ್ನು ಕೈಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾಯಿತು.

ದಾಂಡಿ ಯಾತ್ರೆ - ಉಪ್ಪಿನ ಸತ್ಯಾಗ್ರಹ :

ಉಪ್ಪಿನ ಸತ್ಯಾಗ್ರಹದ ಮಹತ್ವದ ಕುರಿತು ಗಾಂಧೀಜಿಯವರು ' ಯಂಗ್ ಇಂಡಿಯಾ ' ದಲ್ಲಿ ಈ ರೀತಿ ಬರೆದರು : " ಮನುಷ್ಯನಿಗೆ ನೀರನ್ನು ಬಿಟ್ಟರೆ ಉಪ್ಪು ಮುಖ್ಯವಾದದ್ದು. ಇದಕ್ಕೆ ವಿಧಿಸಿದ ಕರ ರೋಗಿಗಳನ್ನು, ಕುಂಠಿತರನ್ನು, ಅಸಹಾಯಕರನ್ನು, ಹೊಟ್ಟೆಗಿಲ್ಲದ ಲಕ್ಷಾವಧಿ ಜನರನ್ನು ತಟ್ಟುತ್ತದೆ. ಭಾರತದ ಸುಡು ಬಿಸಿಲಿನಲ್ಲಿ ಹೊಲಗಳಲ್ಲಿ ಕೆಲಸ ಮಾಡುವ ರೈತ ಹೆಚ್ಚು ಬೆವರುವುದರಿಂದ ಶ್ರೀಮಂತನಿಗಿಂತ ಹೆಚ್ಚಾಗಿ ಅವನಿಗೆ ಉಪ್ಪು ಅವಶ್ಯಕ. ಆದ್ದರಿಂದ ಶ್ರೀಮಂತನಿಗಿಂತ ರೈತನ ಮೇಲೆ ಉಪ್ಪಿನ ತೆರಿಗೆ ಅಧಿಕವಾಗಿದೆ. ರೈತನ ಉಪ್ಪಿನ ತೆರಿಗೆ ವರ್ಷದಲ್ಲಿ ಮೂರು ದಿನದ ಆದಾಯಕ್ಕೆ ಸಮನಾಗಿದೆ. ಮನುಷ್ಯನ ಬುದ್ಧಿಶಕ್ತಿ ಸಂಚು ಮಾಡುವ ತಲೆ ತೆರಿಗೆಗಳಲ್ಲೆಲ್ಲ ಇದು ಅತ್ಯಂತ ಅಮಾನುಷವಾದುದು " [೨೨] ಎಂದು ಅಭಿಪ್ರಾಯಪಟ್ಟಿದ್ದಾರೆ.

ಗಾಂಧೀಜಿಯವರು ಉಪ್ಪಿನ ಕಾನೂನು ಭಂಗ ಮಾಡುವುದಕ್ಕಾಗಿ ದಾಂಡಿ ಯಾತ್ರೆ ಕೈಕೊಂಡರು. ೭೮ ಜನ ತರಬೇತಿ ಹೊಂದಿದ ದೇಶದ ಎಲ್ಲ ಪ್ರದೇಶ ಮತ್ತು ಧರ್ಮಕ್ಕೆ ಸಂಬಂಧಿಸಿದ ಸತ್ಯಾಗ್ರಹಿಗಳನ್ನು ಅವರೊಂದಿಗೆ ಕರೆದೊಯ್ಯಲು ಆಯ್ಕೆ ಮಾಡಲಾಯಿತು. ಇವರಿಗೆ ತರಬೇತಿ ನೀಡಲು ಗಾಂಧೀಜಿಯವರು ಜಮನಾಲಾಲ್ ಬಜಾಜ್ ಅವರಿಗೆ ವಹಿಸಿಕೊಟ್ಟಿದ್ದರು. ಗುದ್ಲೆಪ್ಪನವರು ಮಹಾದೇವಪ್ಪ ಮೈಲಾರನನ್ನು ತರಬೇತಿ ಪಡೆಯಲು ಗಾಂಧೀಜಿಯವರ ಆಶ್ರಮಕ್ಕೆ ಕಳುಹಿಸಿದರು. ಬಜಾಜರು ಗುದ್ಲೆಪ್ಪನವರಿಗೆ ಪತ್ರ ಬರೆದು ಮಹಾದೇವರಿಗೆ ಅನಾರೋಗ್ಯವಿರುವುದರಿಂದ ಅವರನ್ನು ಆಯ್ಕೆ ಮಾಡಲಾಗುವುದಿಲ್ಲ ಎಂದು ತಿಳಿಸಿದರು. ಯುವಕ ಮಹಾದೇವಪ್ಪನವರಿಗೆ ಕ್ಷಣಿಕ ಅನಾರೋಗ್ಯವು ಅವರ ಮಹೋದ್ದೇಶಕ್ಕೆ ಅಡ್ಡಿ ಬಾರದು. ಅವರನ್ನು ಆಯ್ಕೆ ಮಾಡಲೇಬೇಕೆಂದು ಮರಳಿ ಗುದ್ಲೆಪ್ಪನವರು ಬಜಾಜರಿಗೆ ಪತ್ರ ಬರೆದರು. ಆಗ ಮಹಾದೇವರು ಆಯ್ಕೆಯಾಗಿ ಅವಿಸ್ಮರಣೀಯ ದಾಂಡಿ ಯಾತ್ರೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದರು. ಈ ಯಾತ್ರೆಯಲ್ಲಿ ಅತ್ಯಂತ ಕಿರಿಯ ವಯಸ್ಸಿನವರೆಂದರೆ ೧೮ ವರ್ಷದ ಮೈಲಾರ ಮಹಾದೇವಪ್ಪನವರಾಗಿದ್ದರು. ಅತ್ಯಂತ ಹಿರಿಯ ವಯಸ್ಸಿನವರೆಂದರೆ ೬೧ ವರ್ಷದ ಗಾಂಧೀಜಿಯವರೇ ಆಗಿದ್ದರು.

೧೯೩೦ ರ ಮಾರ್ಚ್ ೧೨ ರಂದು ಗಾಂಧೀಜಿ ನೇತೃತ್ವದಲ್ಲಿ ಸತ್ಯಾಗ್ರಹಿಗಳು ಸಾಬರಮತಿ ಆಶ್ರಮದಿಂದ ಸುಪ್ರಸಿದ್ಧ ದಾಂಡಿ ಯಾತ್ರೆ ಕೈಕೊಂಡರು. ದಾಂಡಿಯು ಗುಜರಾತಿನ ಪಶ್ಚಿಮ ಕರಾವಳಿಯಲ್ಲಿರುವ ಒಂದು ಹಳ್ಳಿ. ಅಹ್ಮದಾಬಾದಿನಿಂದ ೨೪೦ ಕಿ. ಮೀ. ದೂರದಲ್ಲಿರುವ ದಾಂಡಿಯನ್ನು ಕಾಲ್ನಡಿಗೆಯಿಂದ ತಲುಪಲು ಇವರಿಗೆಲ್ಲ ೨೪ ದಿನಗಳು ಬೇಕಾದವು. ಯಾತ್ರೆಯುದ್ದಕ್ಕೂ ಹಳ್ಳಿಗಳ ಜನರು ದಾರಿಯಲ್ಲಿ ನೆರೆದರು. ಜನರು ಮಂಡಿಯೂರಿ ಕುಳಿತು ಗಾಂಧೀಜಿಯವರಿಗೆ ಗೌರವ ಸಲ್ಲಿಸಿದರು. ಈ ಯಾತ್ರೆ ದೇಶಭಕ್ತರಿಗೆ ಅತ್ಯಂತ ಪವಿತ್ರ ಯಾತ್ರೆಯಂತೆ ತೋರಿ ಬಂದಿತು. ' ಇದು ಅಮರನಾಥ, ಬದರಿ, ಕೇದಾರಗಳಿಗೆ ಕೈಕೊಂಡ ಯಾತ್ರೆಯಂತೆಯೆ ' ಎಂದು ಗಾಂಧೀಜಿಯವರೇ ಹೇಳಿದ್ದರು.

ದಾಂಡಿ ಯಾತ್ರೆಯಲ್ಲಿ ಸೇರಿಕೊಳ್ಳಬೇಕೆಂಬ ಅಭಿಲಾಷೆ ಗುದ್ಲೆಪ್ಪನವರಲ್ಲಿ ಉಂಟಾಯಿತು. ಅವರೇ ಹೇಳಿದಂತೆ, " ೧೯೩೦ ರ ಮಾರ್ಚ್ ೧೯ ರಂದು ನಾನು ಹೇಳದೇ ಕೇಳದೇ ಮನೆಯಿಂದ ಹೊರಟು ಬಿಟ್ಟೆ. ಮಾರ್ಚ್ ೨೦ ಕ್ಕೆ

ಮುಂಬಯಿ ತಲುಪಿದೆ. ೨೧ ಕ್ಕೆ ಅಹ್ಮದಾಬಾದ. ೨೨ ಕ್ಕೆ ಜಂಬೂಸಾರ ಎಂಬ ಹಳ್ಳಿಯಲ್ಲಿ ಗಾಂಧೀಜಿಯವರನ್ನು ಕಂಡೆ. ಅವರು ಅಲ್ಲಿ ಹಾದು ದಾಂಡಿಗೆ ಹೊರಟಿದ್ದರು. ಮುಂದೆ ಎರಡು ದಿನಗಳಾದ ನಂತರ ಗಾಂಧೀಜಿ ನಮ್ಮನ್ನು ಕಾಕಾ ಕಾಲೇಲಕರರೊಂದಿಗೆ ವಿದ್ಯಾಪೀಠಕ್ಕೆ ಕಳಿಸಿದರು. ಕರ್ನಾಟಕಕ್ಕೆ ಹೋಗಿ ಮುಂದೆ ನಾವು ಮಾಡಬೇಕಾದ ಕಾರ್ಯಗಳ ಬಗ್ಗೆ ಅಲ್ಲಿ ನಮಗೆ ಪಾಠ ಹೇಳಿಕೊಡಲಾಯಿತು. ಅಲ್ಲಿ ನಾವು ಕಠಿಣ ದೈಹಿಕ ಶ್ರಮದ ಕೆಲಸ ಮಾಡುತ್ತಿದ್ದೆವು. ನಮಗೆ ದಿನಾಲು ತಿನ್ನಲಿಕ್ಕೆ ಹಸಿ ಮಾವಿನ ಕಾಯಿ, ಪುಠಾಣಿ, ಚುರುಮರಿ ಮೊದಲಾದವನ್ನು ಕೊಡುತ್ತಿದ್ದರು. ನಿಜವಾದ ಸತ್ಯಾಗ್ರಹಿಗಳಾಗಲು ನಾವು ಎಲ್ಲ ರೀತಿಯಿಂದಲೂ ತಯಾರಾಗಬೇಕೆಂಬುದೇ ಗಾಂಧೀಜಿಯವರ ಆಸೆಯಾಗಿತ್ತು. ಅಡವಿಯಲ್ಲಿರುವ ಪ್ರಸಂಗ ಬಂದರೂ ನಾವು ಅದಕ್ಕೆ ಸಿದ್ಧರಾಗಿರಬೇಕಿತ್ತು." ಈ ರೀತಿ ಗುದ್ಲೆಪ್ಪನವರು ಗುಜರಾತಿನ ವಿದ್ಯಾಪೀಠದಲ್ಲಿ ತರಬೇತಿ ಹೊಂದಿದರು.

" ಉಪ್ಪಿನ ಸತ್ಯಾಗ್ರಹವು ಸ್ವಾತಂತ್ರ್ಯ ಚಳುವಳಿಯ ಪ್ರಥಮ ಹಂತವಾಗಿದ್ದು, ಸ್ವಾತಂತ್ರ್ಯವು ದೊರೆಯುವವರೆಗೂ ಈ ಸತ್ಯಾಗ್ರಹವು ವಿವಿಧ ರೂಪಗಳಲ್ಲಿ ಮುಂದುವರಿಯುವುದು " ಎಂದು ಗಾಂಧೀಜಿ ಹೇಳಿದರು. ೧೯೩೦ ರ ಎಪ್ರೀಲ ೫ ರಂದು ದಾಂಡಿಯನ್ನು ತಲುಪಿದರು. ಸಮುದ್ರ ತೀರವನ್ನು ತಲುಪಿದ ಮರುದಿವಸ ಎಪ್ರೀಲ ೬ ರಂದು ತಯಾರಿಸಿದ ಉಪ್ಪನ್ನು ಕೈಯಿಂದ ಎತ್ತಿಹಿಡಿದರು. " ನಾನೀಗ ಕಾನೂನು ಭಂಗ ಮಾಡಿದ್ದೇನೆ. ಜನರು ಕಾನೂನಿನ ಪ್ರಕಾರ ಬಂಧನಕ್ಕೊಳಗಾದರೆ ಅಂಜಬೇಕಿಲ್ಲ. ಜನರು ಎಲ್ಲಿ ಬೇಕೋ ಅಲ್ಲಿ ಉಪ್ಪನ್ನು ಸಿದ್ಧಪಡಿಸಬೇಕು "[೨೩] ಎಂದು ಹೇಳಿ ಎಪ್ರೀಲ ೬ ರಿಂದ ೧೨ ರ ವರೆಗಿನ ವಾರವನ್ನು ಉಪ್ಪಿನ ಕಾನೂನು ಭಂಗದ ರಾಷ್ಟ್ರೀಯ ವಾರವಾಗಿ ಘೋಷಿಸಿದರು. ಅಂದಿನಿಂದ ದೇಶದ ಎಲ್ಲೆಡೆಯಲ್ಲಿ ಕಾನೂನು ಭಂಗ ಚಳುವಳಿಗಳು ನಡೆದು ಉಪ್ಪನ್ನು ತಯಾರಿಸಿ ಮಾರಾಟ ಮಾಡಲಾಯಿತು. ಸರಕಾರವು ಉಗ್ರಕ್ರಮ ಕೈಕೊಂಡು ದಮನ ನೀತಿಯನ್ನು ಮುಂದುವರಿಸಿತು.

ಅಂಕೋಲೆಯಲ್ಲಿ ಉಪ್ಪಿನ ಸತ್ಯಾಗ್ರಹ :

ಸತ್ಯಾಗ್ರಹ ಮಂಡಲದ ನಿರ್ಣಯದ ಮೇರೆಗೆ ಅಂಕೋಲೆಯಲ್ಲಿ ೧೯೩೦ ಎಪ್ರೀಲ ೧೩ ರಂದು ಉಪ್ಪಿನ ಸತ್ಯಾಗ್ರಹ ಆರಂಭಿಸಲಾಯಿತು. ಸತ್ಯಾಗ್ರಹಕ್ಕೆ ಎಂಟು ದಿನ ಮೊದಲು ಏಪ್ರಿಲ್ ೬ ರಂದು ಡಾ. ಎನ್. ಎಸ್. ಹರ್ಡೀಕರ ನೇತೃತ್ವದಲ್ಲಿ ಸೇವಾದಳದವರು ಅಂಕೋಲೆಯಲ್ಲಿ ಶಿಬಿರ ತೆರೆದರು. ಈ ಸತ್ಯಾಗ್ರಹದ ಯಶಸ್ಸಿಗಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ತನ್ನೆಲ್ಲ ಶಕ್ತಿ ಸಾಮರ್ಥ್ಯವನ್ನು ಬಳಸಿತು. ಈ ಮೊದಲೇ ಗುಜರಾತ ವಿದ್ಯಾಪೀಠದಲ್ಲಿ ಗಾಂಧೀಜಿಯವರ ಮಾರ್ಗದರ್ಶನದಂತೆ ತರಬೇತಿ ಪಡೆದುಕೊಂಡು ಬಂದ ಅದಮ್ಯ ಉತ್ಸಾಹದ ಕಾರ್ಯಕರ್ತ ಗುದ್ಲೆಪ್ಪ ಹಳ್ಳಿಕೇರಿಯವರು ತಮ್ಮ ಸಂಗಡಿಗರೊಂದಿಗೆ ಅಂಕೋಲೆಗೆ ಬಂದರು. ರಾಜ್ಯದ ಮೂಲೆ ಮೂಲೆಗಳಿಂದ ಸತ್ಯಾಗ್ರಹಿಗಳು ತಂಡೋಪತಂಡವಾಗಿ ಅಂಕೋಲೆಗೆ ಧಾವಿಸಿದರು. ಅಲ್ಲಿ ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ತಾವು ಗುಜರಾತ ವಿದ್ಯಾಪೀಠದಲ್ಲಿ ತರಬೇತಿ ಪಡೆದು ಬಂದ ಅನುಭವಗಳನ್ನು ಸತ್ಯಾಗ್ರಹ ತಂತ್ರಗಳನ್ನು ಬೋಧಿಸಿ ಹುರಿದುಂಬಿಸಿದರು.

ಈ ಚಳುವಳಿಯಲ್ಲಿ ಭಾಗವಹಿಸುವುದಕ್ಕಾಗಿ ನಾಡಿನ ನಾನಾ ಭಾಗಗಳಿಂದ ಸ್ತ್ರೀಯರು, ಪುರುಷರು, ವೃದ್ಧರು, ಬಾಲಕರಾದಿಯಾಗಿ ಸುಮಾರು ಮೂವತ್ತು ಸಹಸ್ರಕ್ಕಿಂತಲೂ ಹೆಚ್ಚಿಗೆ ಜನರು ಬಂದು ಸೇರಿ ಪ್ರಭಾತ ಫೇರಿ ಹೊರಟರು. ಜಯಘೋಷಗಳು, ಬ್ಯುಗಿಲ್, ಕಹಳೆಗಳು, ಮೊಳಗಿದವು. ದೇಶಭಕ್ತಿಗೀತೆಗಳನ್ನು ಹಾಡುತ್ತ ಮುನ್ನಡೆದರು. ರಸ್ತೆ ಸಾಲದೆ ಅಕ್ಕಪಕ್ಕದ ಗದ್ದೆಗಳಲ್ಲಿ ಜನ ನಡೆದು ಬಂದರು. ಜನಸ್ತೋಮ ಎಷ್ಟಿತ್ತೆಂದರೆ ಒಂದು ಮೈಲು ದೂರದ ಕರಾವಳಿ ತೀರ ತಲುಪಿದರೂ ಕೂಡ ಇನ್ನೂ ಜನರ ಸಾಲು ಗಾಂಧಿ ಮೈದಾನದಲ್ಲಿತ್ತು.

ಈ ಚಳುವಳಿಯ ಮುಖಂಡರಾದ ಗುದ್ಲೆಪ್ಪ ಹಳ್ಳಿಕೇರಿ, ಎಂ. ಪಿ. ನಾಡಕರ್ಣಿ, ಸ್ವಾಮಿ ವಿದ್ಯಾನಂದ ಮುಂತಾದವರು ಸಭೆಯಲ್ಲಿ ಸ್ಫೂರ್ತಿಯುತ ಭಾಷಣ ಮಾಡಿ ಜನರಲ್ಲಿ ಪ್ರೇರಣೆ, ಉತ್ಸಾಹ ತುಂಬಿದರು.

" ಅಂಕೋಲಾದಲ್ಲಿ ಎಪ್ರಿಲ ತಿಂಗಳ ೨೫, ೨೭ ಹಾಗೂ ಮೇ ೩ ರಂದು ಉಪ್ಪಿನ ಸಂತೆಗಳನ್ನೇರ್ಪಡಿಸಲಾಗಿತ್ತು. ಮೇ ೩ ರಂದು ನೆರೆದ ಸಂತೆಯಲ್ಲಿ ೨೫ - ೩೦ ಹಳ್ಳಿಗಳಿಂದ ೬೨೫ ಜನರು ಉಪ್ಪನ್ನು ತಂದಿದ್ದರು. ಉಪ್ಪನ್ನು ಕೊಳ್ಳಲಿಕ್ಕೆ ೬ - ೭ ಸಾವಿರ ಜನರು ನಾ ಮುಂದೆ ನೀ ಮುಂದೆ ಎಂದು ಹಾತೊರೆಯುತ್ತಿದ್ದರು. ಎಲ್ಲರಿಗೂ ಉಪ್ಪು ಸಿಕ್ಕುವುದು ಸಾಧ್ಯವಿರಲಿಲ್ಲ. ಇದ್ದದ್ದರಲ್ಲಿಯೇ ಎಲ್ಲರೂ ಸ್ವಲ್ಪ ಸ್ವಲ್ಪ ಉಪ್ಪನ್ನು ಒಳ್ಳೇ ಪವಿತ್ರವಾದದ್ದೆಂದು ತಿಳಿದು ತಮ್ಮೊಳಗೆ ಹಂಚಿಕೊಂಡರು. ಇಡೀ ಹಿಂದುಸ್ತಾನದಲ್ಲಿ ಇಷ್ಟು ಶಾಂತಿ ಶಿಸ್ತುಗಳಿಂದ ಇನ್ನೊಂದು ಕಡೆ ಉಪ್ಪಿನ ಸತ್ಯಾಗ್ರಹವಾಗಲಿ, ಸಂತೆಯಾಗಲಿ ಆಗಲಿಲ್ಲವೆಂದು ಧಾರಾಳವಾಗಿ ಹೇಳಬಹುದು. " ೨೫

ಈ ಸತ್ಯಾಗ್ರಹ ೪೫ ದಿನಗಳ ವರೆಗೆ ನಡೆಯಿತು. ಗುದ್ಲೆಪ್ಪನವರು ಮೇ ತಿಂಗಳ ಕೊನೆಯವರೆಗೆ ಅಂಕೋಲೆಯಲ್ಲಿಯೇ ಇದ್ದು ಜನರಲ್ಲಿ ನವಚೈತನ್ಯ ತುಂಬಿ ದೇಶಭಕ್ತಿ ಪ್ರೇರೇಪಿಸಿ ಚಳುವಳಿಯನ್ನು ಯಶಸ್ವಿಗೊಳಿಸಿದರು.

ಉಪ್ಪಿನ ಸತ್ಯಾಗ್ರಹವು ಮಂಗಳೂರು, ಕುಂದಾಪುರ, ಪಡುಬಿದ್ರೆ, ಉಡುಪಿ, ಕಾರ್ಕಳ, ಪುತ್ತೂರು, ಮಲ್ಪೆ, ಕಾಪು (ದಕ್ಷಿಣ ಕನ್ನಡ ಜಿಲ್ಲೆ), ಬಿಸನಾಳ (ವಿಜಾಪುರ ಜಿಲ್ಲೆ), ನವಲಗುಂದ, ಕಿರೇಸೂರು, ಯಾವಗಲ್ಲ (ಧಾರವಾಡ ಜಿಲ್ಲೆ) ಹೀಗೆ ಕರ್ನಾಟಕದ ಸುಮಾರು ೩೦ ಸ್ಥಳಗಳಲ್ಲಿ ನಡೆಯಿತು.

ವಿದೇಶಿ ವಸ್ತುಗಳ ಬಹಿಷ್ಕಾರ :

ಗುದ್ಲೆಪ್ಪನವರು ಉತ್ತರ ಕನ್ನಡ ಜಿಲ್ಲೆಯ ತುಂಬ ಸಂಚರಿಸಿ ಮಹತ್ವದ ಸ್ಥಳಗಳಲ್ಲಿ ಸತ್ಯಾಗ್ರಹ ಶಿಬಿರಗಳನ್ನು ಸ್ಥಾಪಿಸಿದರು. ಹೋರಾಟದ ಸ್ವರೂಪವನ್ನು, ನಿರ್ವಹಿಸುವ ಕರ್ತವ್ಯ ಮತ್ತು ಹೊಣೆಗಾರಿಕೆಯನ್ನು ತಿಳಿಸಿಕೊಟ್ಟರು. ಹೊನ್ನಾವರದ ಟಿಪ್ಪರ್ ಹಾಲ್‌ನಲ್ಲಿ ಸಾರ್ವಜನಿಕ ಭಾಷಣ ಮಾಡಿ ಸ್ವದೇಶಿ ವಸ್ತುಗಳನ್ನು ಮಾತ್ರ ಬಳಸಬೇಕೆಂದು ಜನರಿಗೆ ಪ್ರತಿಜ್ಞೆ ಮಾಡಿಸಿದರು. ಗುದ್ಲೆಪ್ಪನವರ ಭಾಷಣದಿಂದ ಪ್ರೇರೇಪಿತರಾದ ಜನರು ವಿದೇಶಿ ವಸ್ತ್ರಗಳನ್ನು ಸುಟ್ಟರು. ವಿದೇಶಿ ಸಾಬೂನು, ಸಿಗರೇಟು, ಸಕ್ಕರೆಯನ್ನೂ ಸಹ ಸಮುದ್ರಕ್ಕೆ ಚೆಲ್ಲಿದರು.

ಗುದ್ಲೆಪ್ಪನವರ ಹೊಸರಿತ್ತಿಯ ಗಾಂಧಿ ಆಶ್ರಮವಾಸಿಗಳಾಗಿದ್ದ ರಮಾನಂದ ಮನ್ನಂಗಿ. ಶಿವಾನಂದ ಎಲಿ ಇವರು ಗುದ್ಲೆಪ್ಪನವರ ಆದೇಶದಂತೆ ನಲವತ್ತು ಸ್ವಯಂ ಸೇವಕರನ್ನು ಕರೆದುಕೊಂಡು ಬಂದು ಬ್ಯಾಡಗಿ. ರಾಣೆಬೆನ್ನೂರಗಳಲ್ಲಿ ಮತ ಪ್ರದರ್ಶನ ಮಾಡಿ ವಿದೇಶಿ ಬಟ್ಟೆಗಳನ್ನು ಮಾಲಿಕರು ಗಂಟುಕಟ್ಟಿಟ್ಟು ಮಾರಲು ಬಾರದಂತೆ ಮಾಡಿದರು.

ಅರಣ್ಯ ಸತ್ಯಾಗ್ರಹ :

ಉತ್ತರ ಕನ್ನಡ ಜಿಲ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹ ಕಾರ್ಯವನ್ನು ಯಶಸ್ವಿಗೊಳಿಸಿದ ಗುದ್ಲೆಪ್ಪನವರು ಹುಬ್ಬಳ್ಳಿಗೆ ಬಂದರು. ಮುಂಬರುವ ಹೋರಾಟದಲ್ಲಿ ಯುವಕರನ್ನು ಇನ್ನಷ್ಟು ಹೆಚ್ಚು ಕ್ರಿಯಾಶೀಲವಾಗಿ ತೊಡಗಿಸುವ ಅಪೇಕ್ಷೆಯಿಂದ ಸ್ವತಂತ್ರ ವ್ಯಕ್ತಿತ್ವ ಹೊಂದುವ. ಬಲಾಢ್ಯ ಮತ್ತು ಪ್ರಬಲರಾದ. ದೇಶಸೇವೆಗಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಡುವ ದೃಢ ಮನಸ್ಸಿನ ಯುವಕರನ್ನು ಕೂಡಿಸಿ ಒಂದು ತಂಡವನ್ನೇ ಕಟ್ಟಿದರು. ಅವರಿಗೆಲ್ಲ ಯೋಗ್ಯ ತರಬೇತಿ ಕೊಟ್ಟರು.

ಧಾರವಾಡ ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹ ಆರಂಭಿಸಲು ಗುದ್ಲೆಪ್ಪನವರು ನಿರ್ಧರಿಸಿದರು. ಮದ್ಯಪಾನ ನಿರೋಧದ ಅಂಗವಾಗಿ ಈಚಲು ಗಿಡಗಳನ್ನು ಕಡಿಯುವ ಯೋಜನೆಯನ್ನು ಹಾಕಿಕೊಂಡರು. ಆಗ ಕೃಷ್ಣರಾವ್ ಮುದವೀಡಕರ್ ಅವರು ಜಿಲ್ಲೆಯಲ್ಲಿ ಸಂಚರಿಸಿ ತಮ್ಮ ಉಗ್ರ ಭಾಷಣಗಳ ಮೂಲಕ ಜನರಲ್ಲಿ ಉತ್ಸಾಹ ತುಂಬುತ್ತಿದ್ದರು.

ಗುದ್ಲೆಪ್ಪನವರು ಹೊಸರಿತ್ತಿಗೆ ಬಂದು ತರುಣರನ್ನು ಒಗ್ಗೂಡಿಸಿ ಬೃಹತ್ ಪ್ರಮಾಣದಲ್ಲಿ ಈಚಲು ಗಿಡಗಳನ್ನು ಕಡಿಯುವ ಕಾರ್ಯವನ್ನು ವ್ಯಾಪಕವಾಗಿ ಕೈಕೊಂಡರು. ಈ ದೃಶ್ಯ ನೋಡಿದ ಉಳಿದ ಜನರೆಲ್ಲರೂ ಅತ್ಯಂತ ಉತ್ಸಾಹದಿಂದ ತಾವೂ ಈ ರಾಷ್ಟ್ರೀಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಿರೇಕೆರೂರ ಮತ್ತು ಹೊಸರಿತ್ತಿ ಭಾಗದಲ್ಲಿ ಸರಕಾರಿ ಮೀಸಲು ಅರಣ್ಯಗಳಲ್ಲಿಯ ಈಚಲು ಗಿಡಗಳನ್ನು ಕಡಿದು ಕಾನೂನು ಭಂಗಗೊಳಿಸಿದರು. ಡಿ. ಎಸ್. ಪಿ. ಚಿನ್ನ ಮುಳಗುಂದ ಹಾಗೂ ಕೌಜಲಗಿ ಎಂಬ ಇನ್ನೊಬ್ಬ ಪೊಲೀಸ್ ಅಧಿಕಾರಿ ಗುದ್ಲೆಪ್ಪನವರ ತಂಡದ ಕಾರ್ಯವನ್ನು ನಿಷ್ಫಲಗೊಳಿಸಲು ಯತ್ನಿಸುತ್ತಿದ್ದರು. ಈ ಎಲ್ಲ ಅಡ್ಡಿ ಆತಂಕಗಳ ಮಧ್ಯೆಯೂ ಗುದ್ಲೆಪ್ಪನವರು ತಮ್ಮ ತಂಡದೊಂದಿಗೆ ಅರಣ್ಯ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು. ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್. ಹೆಂಡದ ಅಂಗಡಿ ಹರಾಜ ವಿರುದ್ಧ ಪ್ರದರ್ಶನಗಳನ್ನು ನಡೆಸಿದರು.

ಈ ಮಧ್ಯೆ ಅರಣ್ಯ ಸತ್ಯಾಗ್ರಹದಲ್ಲಿ ತಮ್ಮನ್ನು ವ್ಯಾಪಕವಾಗಿ ತೊಡಗಿಸಿಕೊಂಡ ಗುದ್ಲೆಪ್ಪನವರನ್ನು ಅವರ ಅಣ್ಣ ಸಂಗಪ್ಪನವರು ಭೇಟಿಯಾಗಿ ಮೊದಲು ಶಿಕ್ಷಣ ಮುಗಿಸಿ ನಂತರ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವಂತೆ ಒತ್ತಾಯಿಸಿದರೂ ಅವರು ಒಪ್ಪಲಿಲ್ಲ. ಇಪ್ಪತ್ನಾಲ್ಕು ತಾಸುಗಳ ಸುದೀರ್ಘ ವಾಗ್ವಾದ ನಡೆದು ಅವರ ಅಣ್ಣ ತನ್ನ ಮಾತು ಕೇಳದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದರು. ಇದಾವುದಕ್ಕೂ ಮಣಿಯದೆ ಗುದ್ಲೆಪ್ಪನವರು ರಾಷ್ಟ್ರೀಯ ಹೋರಾಟದ ತಮ್ಮ ದೃಢಸಂಕಲ್ಪ ಬಿಟ್ಟು ಕದಲಲಿಲ್ಲ. ಅಣ್ಣ ಸಂಗಪ್ಪನವರು ನಿರಾಶೆಯಿಂದ ಮರಳಿದರು.

ಗುದ್ಲೆಪ್ಪನವರು ಹಾವೇರಿಯಲ್ಲಿ ಉತ್ತರ ಕರ್ನಾಟಕ ಪರಿಷತ್ತನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವಾಗ ಇವರ ಬಗ್ಗೆ ಪೊಲೀಸರ ಕೋಪ ಹೆಚ್ಚಾಗಿ ಬಂಧಿಸಲು ಹವಣಿಸುತ್ತಿದ್ದರು. ಧಾರವಾಡದ ಅಂದಿನ ಅಸಿಸ್ಟಂಟ್ ಕಲೆಕ್ಟರ್ ಮೆಹರ್ ಅವರು ಪ್ರಬಲ ಪುರಾವೆಗಳು ಇಲ್ಲದ್ದರಿಂದ ಬಂಧಿಸಲಿಲ್ಲ.

೧೯೩೨ ರಲ್ಲಿ ಹಿರೇಕೆರೂರ ತಾಲೂಕಿನ ಸೂಡಂಬಿ ಭಾಗದಲ್ಲಿಯೂ ಈಚಲು ಗಿಡಗಳನ್ನು ಕಡಿಯುವ ಆಂದೋಲನವು ಭರದಿಂದ ಸಾಗಿತ್ತು. ಗುದ್ಲೆಪ್ಪನವರು ತಮ್ಮ ಸಂಗಡಿಗರಾದ ಲಿಂಗರಾಜ ಮುದ್ದಣ್ಣವರ, ಎಸ್. ಎಸ್. ಕಜ್ಜರಿ, ವೀರಭದ್ರಪ್ಪ ನ್ಯಾಮತಿ ಇವರೊಂದಿಗೆ ಈ ಆಂದೋಲನದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಸರಕಾರವು ಇವರನ್ನು ಬಂಧಿಸಲು ವಾರಂಟ್ ಹೊರಡಿಸಿತು. ಆಗ ಇವರೆಲ್ಲರೂ ಪೊಲೀಸರ ಕೈಗೆ ಸಿಗದೆ ದಾವಣಗೆರೆಗೆ ಹೋಗಿ ಭೂಗತರಾದರು.

ಕರ ನಿರಾಕರಣೆ ಚಳುವಳಿ :

ಗುಜರಾತಿನ ಬಾರ್ಡೋಲಿಯಲ್ಲಿ ನಡೆದ ಕರ ನಿರಾಕರಣ ಚಳುವಳಿಯು ಯಶಸ್ವಿಯಾದ ನಂತರ ಇದರ ಪ್ರಭಾವವು ಕರ್ನಾಟಕಕ್ಕೂ ಹಬ್ಬಿತು. ಕರ್ನಾಟಕದಲ್ಲಿ ಈ ಚಳುವಳಿಯನ್ನು ನಡೆಸಲು ನಾಲ್ಕು ತಾಲೂಕುಗಳನ್ನು ಆಯ್ದುಕೊಳ್ಳಲಾಗಿತ್ತು. ಅವು ಯಾವುವೆಂದರೆ : ಹಿರೇಕೆರೂರ (ಧಾರವಾಡ ಜಿಲ್ಲೆ). ಅಂಕೋಲಾ. ಶಿರಸಿ. ಸಿದ್ಧಾಪುರ (ಉತ್ತರ ಕನ್ನಡ ಜಿಲ್ಲೆ). ಕರ ನಿರಾಕರಣ ಚಳುವಳಿಯು ಹಿರೇಕೆರೂರ ತಾಲೂಕಿನಲ್ಲಿ ವ್ಯಾಪಕವಾಗಿ ನಡೆದು ಯಶಸ್ಸು ಪಡೆಯಿತು. ೧೯೩೧ ರ ಫೆಬ್ರುವರಿಯಲ್ಲಿ ಹಿರೇಕೆರೂರ ತಾಲೂಕಿನ ಜನರಲ್ಲಿ ಎರಡು ಬಣಗಳಿದ್ದವು. ಎರಡೂ ಬಣಗಳನ್ನು ಒಗ್ಗೂಡಿಸಿ ಕರ ನಿರಾಕರಣೆ ಚಳುವಳಿಯನ್ನು ಸಂಘಟಿಸಲು ವೀರನಗೌಡ ಪಾಟೀಲರು ತೀರ್ಮಾನಿಸಿದರು. " ಈ ಮಹತ್ವದ ಕಾರ್ಯದಲ್ಲಿ ಅವರಿಗೆ ವೀರಶೈವ ತರುಣರಾದ ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರು ತುಂಬಾ ನೆರವಾದರು. ಇಡೀ ತಾಲೂಕನ್ನು ಸುತ್ತಾಡಿ ಅವರು ಕರ ನಿರಾಕರಣದ ಕಾರ್ಯಕ್ಕೆ ಅತ್ಯಂತ ಸಹಾಯವನ್ನು ಮಾಡಿದರು. " [೨೫]

" ಶಿರಸಿ, ಸಿದ್ಧಾಪೂರ, ಅಂಕೋಲಾಗಳಲ್ಲಿ ಕರ ನಿರಾಕರಣ ಚಳುವಳಿಯು ಯಶಸ್ವಿಯಾಗಲು ಅದರ ನಾಯಕತ್ವ ವಹಿಸಿದವರಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರೂ ಪ್ರಮುಖ ಕಾರಣಕರ್ತರು. " [೨೬] ಕರ ನಿರಾಕರಣೆಯ ಮೂಲಕ ಬ್ರಿಟಿಷ ಸರಕಾರಕ್ಕೆ ಅಸಹಕಾರ ತೋರುವದರಿಂದ ಅವರ ಆಡಳಿತ ಅಂತ್ಯಗೊಳ್ಳುವಂತೆ ಮಾಡುವುದೇ ಈ ಚಳುವಳಿಯ ಉದ್ದೇಶವಾಗಿತ್ತು. ಆ ಕಾರ್ಯದಲ್ಲಿ ಗುದ್ಲೆಪ್ಪನವರು ಅತ್ಯಂತ ಉತ್ಸಾಹದಿಂದ ನಾಯಕತ್ವ ವಹಿಸಿ ಚಳುವಳಿಯ ಬಿಸಿಯನ್ನು ಆಡಳಿತಕ್ಕೆ ಮುಟ್ಟಿಸಿದರು.

ಬ್ರಿಟಿಷ್ ಪರವಾಗಿದ್ದ ಸಂಸ್ಥಾನಿಕರ ಪ್ರದೇಶಗಳಲ್ಲಿಯೂ ಈ ಕರ ನಿರಾಕರಣೆ ಚಳುವಳಿಯು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಂಗ್ರೆಸ್ ಮುಖಂಡರ ಬೆಂಬಲದಿಂದ ಅತ್ಯುಗ್ರವಾಯಿತು.

ರಾಮದುರ್ಗ ಸಂಸ್ಥಾನದಲ್ಲಿ ೧೯೩೮ ರಲ್ಲಿ ಮಳೆಯಾಗದೆ ಜನ ಕಂಗಾಲಾದರು. ಸಂಸ್ಥಾನಿಕರಿಗೆ ಹಳ್ಳಿಗಳ ಜನರು ಭೂಕಂದಾಯವನ್ನು ಸ್ಥಗಿತಗೊಳಿಸಬೇಕೆಂದು ನಿವೇದಿಸಲು ಅರಮನೆಯ ಮುಂದೆ ನೆರೆದಾಗ ಲಾಠೀ ಚಾರ್ಜ್. ಗೋಳೀಬಾರ್ ನಡೆದವು. ಈ ಘಟನೆಯೇ ' ರಾಮದುರ್ಗ ದುರಂತಕ್ಕೆ ' ಕ್ಕೆ ಕಾರಣವಾಯಿತು. ಮುಂದೆ

ಪ್ರಜಾಸಂಘದವರಿಗೂ ರಾಜರಿಗೂ ಮತಬೇಧವಾಯಿತು. ಜನ ರೊಚ್ಚಿಗೆದ್ದರು. ಗೋಳೀಬಾರಿನಲ್ಲಿ ನಾಲ್ಕು ಜನ ಹೋರಾಟಗಾರರು ಹಾಗೂ ಪೊಲೀಸರು ಜೀವ ತೆತ್ತರು.

" ೧೯೩೯ ಎಪ್ರಿಲ ೧೭ ರಂದು ಹಳ್ಳಿಕೇರಿ ಗುದ್ಲೆಪ್ಪನವರು ಸರದಾರ ವೀರನಗೌಡರೊಂದಿಗೆ ರಾಮದುರ್ಗ ದುರಂತದ ಬಗ್ಗೆ ಹೇಳಿಕೆಯೊಂದನ್ನು ಹೊರಡಿಸಿದರು. ಆ ಸಮಯದಲ್ಲಿ ಬ್ರಿಟಿಷ ಆಳರಸರಿಗೆ ಗುದ್ಲೆಪ್ಪನವರು ಭಯಾನಕ ವ್ಯಕ್ತಿಯಾಗಿ ಕಂಡರು. ಇದು ದೇಶಸೇವೆಯಲ್ಲಿ ಗುದ್ಲೆಪ್ಪನವರು ತೋರುತ್ತಿರುವ ಶಕ್ತಿ. ಸಾಮರ್ಥ್ಯ. ಹುರುಪು. ಹುಮ್ಮಸ್ಸುಗಳನ್ನು ತೋರಿಸುತ್ತದೆ. "[೩]

ಇದೇ ರೀತಿ ಮಿರಜ ಸಂಸ್ಥಾನದ ಆಡಳಿತಕ್ಕೊಳಪಟ್ಟ ಲಕ್ಷ್ಮೇಶ್ವರ ಭಾಗದಲ್ಲಿ ಮೂರು ವರ್ಷಗಳಿಂದ ಮಳೆಯಾಗದಿದ್ದರೂ ತೆರಿಗೆ ಕೊಡಬೇಕೆಂದು ಸಂಸ್ಥಾನದ ಅಧಿಕಾರಿಗಳು ಜನರಿಗೆ ಆಗ್ರಹಿಸತೊಡಗಿದರು. ಇದರ ಪ್ರತಿಭಟನಾರ್ಥ ಪ್ರಜಾ ಪರಿಷತ್ತು ಸ್ಥಾಪನೆಯಾಯಿತು. ಇದಕ್ಕೆ ಗುದ್ಲೆಪ್ಪನವರು ಪ್ರೋತ್ಸಾಹಿಸಿದರು. ಸ್ವತಃ ಗುದ್ಲೆಪ್ಪನವರು ಶಿಗ್ಲಿಗೆ ಹೋಗಿ ಸಾರ್ವಜನಿಕ ಭಾಷಣ ಮಾಡಿ ಜನರನ್ನು ಜಾಗ್ರತಗೊಳಿಸಿದರು. ತತ್ಫಲವಾಗಿ ಪ್ರಜಾಪರಿಷತ್ತು ಸಂಸ್ಥಾನದಾದ್ಯಂತ ಕರ ನಿರಾಕರಣೆಯ ಚಳುವಳಿಯನ್ನು ಘೋಷಿಸಿತು. ಇದರಿಂದಾಗಿ ೧೯೩೯ ರಲ್ಲಿ ಸರಕಾರವು ಮಣಿಯಬೇಕಾಯಿತು.

ಹುಲಬನ್ನಿ ಸತ್ಯಾಗ್ರಹ :

ಸರಕಾರಿ ಅಡವಿಗೆ ಮೇಯಲು ಹೋಗುವ ಜಾನುವಾರುಗಳಿಗೆ ವಾರ್ಷಿಕ ತೆರಿಗೆ ಬಾಲಕ್ಕೆ ಎರಡಾಣೆಯಂತೆ ಇತ್ತು. ಆದರೆ ಜನರು ತೆರಿಗೆಯನ್ನು ಕೊಡದೆ ಪ್ರತಿಭಟನೆಯನ್ನು ವ್ಯಕ್ತಪಡಿಸುವುದೇ ಹುಲಬನ್ನಿ ಸತ್ಯಾಗ್ರಹವೆಂದು ಪ್ರಸಿದ್ಧವಾಯಿತು. ಸರಕಾರದವರು ಅನೇಕ ಜಾನುವಾರುಗಳನ್ನು ಹಿಡಿದು ಕೊಂಡವಾಡಕ್ಕೆ ಹಾಕಿದರೂ ಜನರು ಹೆದರಲಿಲ್ಲ. ಆ ಜಾನುವಾರುಗಳ ಲಿಲಾವಿನಲ್ಲಿ ಯಾರೂ ಭಾಗವಹಿಸದಂತೆ ಗುದ್ಲೆಪ್ಪನವರು ಮತ್ತು ಅವರ ಸಹಯೋಗಿ ಸತ್ಯಾಗ್ರಹಿಗಳು ವ್ಯವಸ್ಥೆ ಮಾಡಿರುತ್ತಿದ್ದರು.

ಧಾರವಾಡ ಜಿಲ್ಲೆಯ ಬಂಕಾಪುರ. ಶಿಗ್ಗಾಂವಿ. ಹಾವೇರಿ ಮುಂತಾದ ಕಡೆಗೆ ಹುಲಬನ್ನಿಯ ನಿರಾಕರಣವು ಸಾರ್ವತ್ರಿಕವಾಗಿ ನಡೆಯಿತು. ಹಾನಗಲ್ಲ ತಾಲೂಕಿನ ಸುಮಾರು ೨೦ ಹಳ್ಳಿಗಳಲ್ಲಿ ಹುಲಬನ್ನಿಯನ್ನು ಸಂಪೂರ್ಣ ನಿರಾಕರಿಸಲಾಯಿತು. ಹಾವೇರಿ ತಾಲೂಕಿನ ಆಲದ ಕಟ್ಟಿ. ಕಬ್ಬೂರ. ಸಂಗೂರ. ನಾಗನೂರ. ಬೆಂಚಿಹಳ್ಳಿ ಮುಂತಾದ ಗ್ರಾಮಗಳ ಜನರು ಹುಲಬನ್ನಿಯ ಲಿಲಾವನ್ನು ಹಿಡಿಯಲಿಲ್ಲ. ಹಾನಗಲ್ಲ ತಾಲೂಕಿನ ಬೊಮ್ಮನಹಳ್ಳಿಯವರೂ ಹುಲಬನ್ನಿಯನ್ನು ಸಂಪೂರ್ಣ ನಿರಾಕರಿಸಿದರು.

ಗುದ್ಲೆಪ್ಪನವರ ಬಂಧನ :

ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಗುದ್ಲೆಪ್ಪನವರು ಅನೇಕ ಕಡೆ ಭಾಷಣಗಳನ್ನು ಮಾಡಿ. ಬ್ರಿಟಿಷರ ವಿರುದ್ಧ ಜನರ ಸಂಘಟನೆ ಮಾಡುತ್ತ ೧೯೩೦ ರ ಜುಲೈದಲ್ಲಿ ಗುತ್ತಲಕ್ಕೆ ಬಂದರು.

ಅಲ್ಲಿ ಬೃಹತ್ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಸತ್ಯಾಗ್ರಹಿಗಳಾದ ಕೃ. ವೆಂ. ದೇಶಪಾಂಡೆ, ಕೃಷ್ಣಾಬಾಯಿ ಪಂಜೀಕರ, ದಿನಕರ ಗೋಪಾಳ ವಾಟವೆ ಅವರು ಜೊತೆಗಿದ್ದರು. ಈ ಮೊದಲೇ ಗುದ್ಲೆಪ್ಪನವರನ್ನು ಬಂಧಿಸಲು ವಾರಂಟ್ ಹೊರಡಿಸಲಾಗಿತ್ತು. ಆ ಮೇರೆಗೆ ಪೊಲೀಸರು ಗುತ್ತಲದಲ್ಲಿಯೇ ಅವರನ್ನು ಬಂಧಿಸಿದರು. ಇದು ಗುದ್ಲೆಪ್ಪನವರ ಹೋರಾಟದ ಜೀವನದಲ್ಲಿ ನಡೆದ ಪ್ರಥಮ ಬಂಧನ. ಅವರು ಮೂರು ತಿಂಗಳ ಶಿಕ್ಷೆ ಅನುಭವಿಸಿ ಬಿಡುಗಡೆಯಾದರು.

ಬಿಡುಗಡೆಯ ನಂತರ ಮತ್ತೆ ಚಳುವಳಿಯಲ್ಲಿ ಧುಮುಕಿದರು. ಅದೇ ವರ್ಷದ ಅಕ್ಟೋಬರ್‌ನಲ್ಲಿ ಎರಡನೇ ಬಾರಿ ಅವರನ್ನು ಬಂಧಿಸಲಾಯಿತು. ಮೂರು ತಿಂಗಳು ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿ ಡಿಸೆಂಬರ್ ೧೭ ರಂದು ಬಿಡುಗಡೆ ಹೊಂದಿದರು. ಹೊರಗೆ ಬಂದಾಗ ಶಿಷ್ಯ ಮಹಾದೇವಪ್ಪ ಮೈಲಾರ ಅವರು ಗುದ್ಲೆಪ್ಪನವರನ್ನು ಸ್ವಾಗತಿಸಿದರು.

ಗುದ್ಲೆಪ್ಪನವರಿಗೆ ವಿಧಿಸಲಾಗಿದ್ದ ಕಠಿಣ ಶಿಕ್ಷೆಯ ಅಂಗವಾಗಿ ಹಗಲಿನಲ್ಲಿ ಎಪ್ಪತ್ತು ಪೌಂಡ್ ಜೋಳ ಬೀಸಬೇಕಾಗಿತ್ತು. ಆದರೆ ಭೀಮ ಕಾಯದ ಬಲಿಷ್ಠರಾದ ಅವರು ಅದನ್ನು ಮೂರು ತಾಸಿನಲ್ಲೇ ಬೀಸಿ ಸಮಯ ಉಳಿಸಿಕೊಳ್ಳುತ್ತಿದ್ದರು. ಉಳಿದ ಅವಧಿಯಲ್ಲಿ ರಾಷ್ಟ್ರೀಯ ಮಹಾಪುರುಷರ ಜೀವನ ಚರಿತ್ರೆಗಳನ್ನು ಓದುತ್ತಿದ್ದರು.

ರೈತ ಪರಿಷತ್ತು :

ಸ್ವಾತಂತ್ರ್ಯ ಸಂಗ್ರಾಮವು ಗುರಿ ಮುಟ್ಟುವವರೆಗೂ ಅಬಾಧಿತವಾಗಿ ಸಾಗಬೇಕೆಂಬ ಮಹದುದ್ದೇಶ ಗುದ್ಲೆಪ್ಪನವರದಾಗಿತ್ತು. ಸಮಾಜದ ವಿವಿಧ ಸ್ತರಗಳ ಜನರು ಇದರಲ್ಲಿ ಭಾಗವಹಿಸಬೇಕು ಜೊತೆಗೆ ಗ್ರಾಮೀಣ ಭಾಗದ ರೈತರು ಬಹುಸಂಖ್ಯೆಯಲ್ಲಿರುವುದರಿಂದ ಅವರನ್ನೂ ಈ ಪವಿತ್ರ ಕಾರ್ಯದಲ್ಲಿ ತೊಡಗಿಸಲು ರಾಜಕೀಯ ಶಿಕ್ಷಣ ನೀಡಬೇಕಾಗಿತ್ತು. ಅದಕ್ಕಾಗಿ ರೈತರನ್ನು ಒಗ್ಗಡಿಸಿಕೊಂಡು ರೈತ ಪರಿಷತ್ತನ್ನು ಏರ್ಪಡಿಸಿದರು.

೧೯೩೧ ರ ಜನೆವರಿ ೧೦ ರಂದು ಬೃಹತ್ ಪ್ರಮಾಣದಲ್ಲಿ ನಡೆಯಲಿರುವ ಗುದ್ದಲೀ ಸ್ವಾಮಿ ಜಾತ್ರೆಯ ದಿನದಂದು ಹೊಸರಿತ್ತಿಯಲ್ಲಿ ಬೃಹತ್ ರೈತ ಪರಿಷತ್ತನ್ನು ಸಂಘಟಿಸಿದರು. ಸುತ್ತಮುತ್ತಲಿನ ಹಳ್ಳಿಗಳ ರೈತರು ಬಹುಸಂಖ್ಯೆಯಲ್ಲಿ ಭಾಗವಹಿಸಿದರು. ಕರ್ನಾಟಕದ ಅಂದಿನ ಕಾಂಗ್ರೆಸ್‌ನ ಪ್ರಥಮ ಶ್ರೇಣಿಯ ಮುಖಂಡರಾದ ಸಿದ್ದಪ್ಪ ಹೊಸಮನಿಯವರ ಅಧ್ಯಕ್ಷತೆಯಲ್ಲಿ ಎಂ. ಪಿ. ಪಾಟೀಲರು ರೈತ ಪರಿಷತ್ತನ್ನು ಉದ್ಘಾಟಿಸಿದರು. ಸರಕಾರವು ಈ ಪರಿಷತ್ತಿನಲ್ಲಿ ಭಾಷಣ ಮಾಡಬಾರದೆಂದು ಗುದ್ಲೆಪ್ಪನವರಿಗೆ ಪ್ರತಿಬಂಧಿಸಿದ್ದರು. ಆದರೆ ಅವರು ಇಂಥ ಬೆದರಿಕೆಯನ್ನು ಲೆಕ್ಕಿಸದೆ ಧೈರ್ಯದಿಂದ ರೈತರನ್ನುದ್ದೇಶಿಸಿ ಸ್ಫೂರ್ತಿಯುತ ಭಾಷಣ ಮಾಡಿದರು. ರೈತರು ರೊಚ್ಚಿಗೆದ್ದು ಗಲಭೆ ಮಾಡುವರೆಂದು ಭಾವಿಸಿ ಪೊಲೀಸರು ಗುದ್ಲೆಪ್ಪನವರನ್ನು ಬಂಧಿಸಲಿಲ್ಲ. ಆದರೂ ಪೊಲೀಸರು ತಮ್ಮ ಅಸಹಾಯಕತೆಯನ್ನು ತೋರ್ಪಡಿಸದೆ ಸ್ವಯಂ ಪ್ರೇರಣೆಯಿಂದ ಬಂಧಿತರಾಗಲು ಕೇಳಿಕೊಂಡರು. ಆದರೆ ಗುದ್ಲೆಪ್ಪನವರು ಸರಕಾರವು ನಿಷೇಧಿಸಿದ್ದ ಉಪ್ಪನ್ನು ತಯಾರಿಸಿ ಬಂಧಿತರಾದರು. ಮೂರು ತಿಂಗಳು ಶಿಕ್ಷೆ ವಿಧಿಸಲ್ಪಟ್ಟಿತು. ಗಾಂಧಿ - ಇರ್ವಿನ್ ಒಪ್ಪಂದದ ಮೇರೆಗೆ ಮಾರ್ಚ್ ೯ ರಂದು ಅವರ ಬಿಡುಗಡೆಯಾಯಿತು.

೧೯೩೧ ರಲ್ಲಿ ಸರದಾರ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಕರಾಚಿಯಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಗುದ್ಲೆಪ್ಪನವರು ಹೋಗಿಬಂದರು. ಅದೇ ವರ್ಷ ಅವರು ಪ್ರಥಮವಾಗಿ ಧಾರವಾಡ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದರು. ೧೯೩೧ ರ ಡಿಸೆಂಬರ್ ಕೊನೆಯ ವಾರದಲ್ಲಿ ಗುದ್ಲೆಪ್ಪನವರು ಜವಾಹರಲಾಲ್ ನೆಹರೂ ಅವರನ್ನು ಹುಬ್ಬಳ್ಳಿಗೆ ಕರೆಯಿಸಿ ರಾಷ್ಟ್ರೀಯ ಚಳುವಳಿಯನ್ನು ಇನ್ನಷ್ಟು ಪ್ರಬಲಗೊಳಿಸಿದರು.

ರಾಷ್ಟ್ರೀಯ ಕುಟುಂಬ :

ಗುದ್ಲೆಪ್ಪನವರಲ್ಲಿ ಹೋರಾಟದ ಕುರಿತು ಹೊಸ ದೃಷ್ಟಿಕೋನ ಮೂಡಿ ಬಂದಿತು. ಪೊಲೀಸರಿಂದ ಬಂಧಿತರಾಗಿ ಕಾರಾಗೃಹದಲ್ಲಿ ಕೊಳೆಯುವುದಕ್ಕಿಂತಲೂ. ಅವರ ಕಣ್ಣು ತಪ್ಪಿಸಿ ಭೂಗತರಾಗಿ ರಾಷ್ಟ್ರೀಯ ಚಳುವಳಿಗೆ ಬಹುಸಂಖ್ಯೆಯ ಜನರನ್ನು ಅಣಿಗೊಳಿಸುವುದೇ ಮುಖ್ಯವಾಯಿತು. ಆಗ ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಗುಪ್ತವಾಗಿ ಕರ್ನಾಟಕದ ತುಂಬೆಲ್ಲ ಸಂಚರಿಸಿ ವಿದೇಶಿ ವಸ್ತುಗಳ ಬಹಿಷ್ಕಾರ ಹಾಗೂ ಕಾಂಗ್ರೆಸ್ ಸಂಘಟನೆಗಾಗಿ ಜನರನ್ನು ಹುರಿದುಂಬಿಸಿದರು. ಅಲ್ಲಿದ್ದಾಗ ವೆಂಕಟಪತಯ್ಯನವರಂಥ ಹಿರಿಯ ಅವಿಶ್ರಾಂತ ಹೋರಾಟಗಾರರ ನಿಕಟ ಸಂಪರ್ಕ ಲಭಿಸಿ ಅವರಿಗೆ ಸ್ಫೂರ್ತಿ ನೀಡಿತು.

ಪೊಲೀಸರು ಗುದ್ಲೆಪ್ಪನವರನ್ನು ಬಂಧಿಸಲು ಪ್ರಯತ್ನಿಸಿ ವಿಫಲರಾದರು. ಅವರನ್ನು ಹಿಡಿದು ಕೊಟ್ಟವರಿಗೆ ಐದು ಸಾವಿರ ರೂಪಾಯಿಗಳ ಬಹುಮಾನ ಕೊಡುವುದಾಗಿ ಸಾರಿದರು. ಗುದ್ಲೆಪ್ಪನವರ ಅಡಗುತಾಣಗಳನ್ನು ತಿಳಿಯ ಬಯಸಿ ಅವರ ಕುಟುಂಬದವರನ್ನು ಪೀಡಿಸಿ. ಬಂಧನದ ಬೆದರಿಕೆ ಹಾಕಿದರು. ಹೊಸರಿತ್ತಿಯಿಂದ ದೂರದ ಮುಂಡರಗಿಯಲ್ಲಿದ್ದ ಶ್ರೀ ರಿತ್ತಿ ಅನ್ನದಾನ ಮರಿದೇವರನ್ನು (ಇವರು ಗುದ್ಲೆಪ್ಪನವರ ಅಣ್ಣ) ಸಹ ಪೀಡಿಸುವುದನ್ನು ಬಿಡಲಿಲ್ಲ. ಗುದ್ಲೆಪ್ಪನವರ ಅಣ್ಣಂದಿರು ಇದಾವುದಕ್ಕೂ ಅಂಜಲಿಲ್ಲ. ಪೊಲೀಸರು ಅಣ್ಣ ಸಂಗಪ್ಪನವರ ಕೈಗೆ ಗುದ್ಲೆಪ್ಪನವರ ಬಂಧನದ ವಾರಂಟ್ ನೀಡಿದಾಗ ಅವರೆದುರಿಗೇ ಆ ವಾರಂಟನ್ನು ಹರಿದುಹಾಕಿ ತಮ್ಮ ದೇಶಪ್ರೇಮವನ್ನು ಪ್ರಕಟಿಸಿದರು.

ನಂತರ ಗುದ್ಲೆಪ್ಪನವರು ಬಾಗಲಕೋಟೆಯಲ್ಲಿ ೧೯೩೨ ಮೇ ೨೭ ರಂದು ಸೇರುವ ರಾಜಕೀಯ ಪರಿಷತ್ತಿನಲ್ಲಿ ಬಂಧಿತನಾಗುವೆನೆಂದು ಮ್ಯಾಜಿಸ್ಟ್ರೇಟ ಅವರಿಗೆ ಪತ್ರ ಬರೆದು. ಅವರು ಅಲ್ಲಿ ಹುಡುಕುತ್ತಿದ್ದಾಗ ಹೊಸರಿತ್ತಿಗೆ ಹೋಗಿ. ಒಂದು ದಿನ ತಮ್ಮ ಮನೆಯಲ್ಲಿದ್ದು. ಅಲ್ಲಿದ್ದ ಆ ಪೊಲೀಸರೆದುರಿಗೆ ವೇಷ ಮರೆಯಿಸಿ ಬಾಗಲಕೋಟೆಗೆ ಹೋದರು. ಇದು ಪೊಲೀಸರೊಂದಿಗೆ ಕಣ್ಣು ಮುಚ್ಚಾಲೆ ಆಟ ಆಡಿದಂತಿತ್ತು.

ಗುದ್ಲೆಪ್ಪನವರ ಅಣ್ಣಂದಿರಾದ ಸಂಗಪ್ಪ. ಸಂಬನಬಸಪ್ಪ ಮತ್ತು ಮಹಾದೇವಪ್ಪನವರಲ್ಲದೆ ಅತ್ತಿಗೆ ಮುರಿಗೆಮ್ಮ (ಸಂಗಪ್ಪನವರ ಧರ್ಮಪತ್ನಿ). ಮಹಾದೇವಪ್ಪನವರ ಪುತ್ರ ಶಿವನಾಗಪ್ಪ. ಸಂಗನಬಸಪ್ಪನವರ ಹಿರಿಯ ಪುತ್ರ ವೀರಪ್ಪ ಹಾಗೂ ಸಮೀಪದ ಬಂಧುವಾದ ಚೆನ್ನಬಸಪ್ಪ ಹಳ್ಳಿಕೇರಿ ಮತ್ತು ಅವರ ಧರ್ಮಪತ್ನಿ ಗೌರಮ್ಮ (ಮೂರು ತಿಂಗಳ ಹಸುಳೆಯಾದ ಚೆನ್ನಮ್ಮಳೊಂದಿಗೆ) ಇವರೆಲ್ಲರನ್ನೂ ಬಂಧಿಸಿ ಆರು ತಿಂಗಳಿಗಿಂತ ಹೆಚ್ಚಿನ ಕಾಲ ಸೆರೆಮನೆಯಲ್ಲಿಟ್ಟರು. ಇವರೆಲ್ಲರೂ ಸತ್ಯಾಗ್ರಹದಲ್ಲಿ ಭಾಗವಹಿಸಿದವರಾಗಿದ್ದರು. ವೀರಪ್ಪ ೧೩ ವಯಸ್ಸಿನವನಿದ್ದುದರಿಂದ ಅವರಿಗೆ ಹತ್ತು

ಛಡಿ ಏಟಿನ ಶಿಕ್ಷೆ ವಿಧಿಸಲ್ಪಟ್ಟಿತು. " ಇದಲ್ಲದೆ ಗುದ್ಲೆಪ್ಪನವರ ಮೂರು ಜನ ಅಣ್ಣಂದಿರು ಗಡಿ ಪಾರು ಶಿಕ್ಷೆಗೂ ಒಳಗಾಗಿದ್ದರು. ಅವರು ತಮಗೆ ವಿಧಿಸಿದ ದಂಡವನ್ನು ತಾವು ಕೈ ಎತ್ತಿ ಕೊಡುವ ಹೇಡಿಗಳಲ್ಲವೆಂದು ದಂಡ ಕೊಡಲು ನಿರಾಕರಿಸಿದ ವೀರರು. ಹೀಗೆ ಅವರು ಆಗ ತಮ್ಮ ಅಪಾರವಾದ ಹಣಕಾಸು, ದನಕರು, ದವಸಧಾನ್ಯ ಮತ್ತು ಇತರ ವಸ್ತುಗಳನ್ನು ಕಳೆದುಕೊಂಡು ತಮ್ಮ ವ್ಯಾಪಾರ, ವ್ಯವಸಾಯ ನೆಲಕಚ್ಚುವಂತಾದರೂ ವ್ಯಸನಪಡಲಿಲ್ಲ. " [೨೮] ಈ ರೀತಿಯಾಗಿ ಹಳ್ಳಿಕೇರಿ ಕುಟುಂಬವು ರಾಷ್ಟ್ರದ ಪವಿತ್ರ ಕಾರ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡು ' ರಾಷ್ಟ್ರೀಯ ಕುಟುಂಬ ' ವೆಂದು ಸ್ಮರಣೀಯವಾಯಿತು.

ಕರ್ನಾಟಕ ರಾಜಕೀಯ ಪರಿಷತ್ತು :

೧೯೩೦ - ೩೨ ರ ವರೆಗಿನ ರಾಷ್ಟ್ರೀಯ ಚಳುವಳಿಯು ಬಹಳ ಉಗ್ರವಾಗಿದ್ದಿತು. ಕಾಂಗ್ರೆಸ್ಸನ್ನು ಹತ್ತಿಕ್ಕಲು ಬ್ರಿಟಿಷ್ ಸರಕಾರವು ಅನೇಕ ಬಗೆಯ ಉಗ್ರ ಕ್ರಮಗಳನ್ನು ಕೈಕೊಳ್ಳುತ್ತಲಿತ್ತು. ಕಾಂಗ್ರೆಸ್ ಸಂಸ್ಥೆಯು ಅಕ್ರಮ ಸಂಸ್ಥೆ ಎಂದು ಘೋಷಿಸಿ, ಕಾಂಗ್ರೆಸ್ಸಿಗರನ್ನೆಲ್ಲ ಬಂಧಿಸಿ ಸೆರೆಮನೆಗೆ ತಳ್ಳಲಾರಂಭಿಸಿತು. ಅವರಿಗೆಲ್ಲ ಬಗೆಬಗೆಯ ಚಿತ್ರಹಿಂಸೆಯನ್ನು ಕೊಡಹತ್ತಿತು. ಕಾಂಗ್ರೆಸ್ಸು ಇದನ್ನು ಪಂಥಾಹ್ವಾನವೆಂದು ಸ್ವೀಕರಿಸಿತು. ೧೯೩೨ ರಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಅಕ್ರಮಗೊಳಿಸಿದ ಸಮಯದಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಐದನೆಯ ಸರ್ವಾಧಿಕಾರಿಯಾಗಿ ಗುದ್ಲೆಪ್ಪನವರು ಆಯ್ಕೆಯಾದರು. ಕಾರ್ನಾಡ ಸದಾಶಿವರಾವ ಅಧ್ಯಕ್ಷರಾಗಿದ್ದರು. ಆಗ ಪ್ರಾಂತಿಕ ಕಾಂಗ್ರೆಸ್ ಪ್ರಮುಖರಾಗಿದ್ದ ಮೊಹರೆ ಹನುಮಂತರಾಯರು, ಗುರುರಾವ ಜೋರಾಪುರ, ಶ್ರೀನಿವಾಸರಾವ ಮಂಗಳವೇಢೆ ಮೊದಲಾದವರನ್ನು ಗುದ್ಲೆಪ್ಪನವರು ಸಂಪರ್ಕಿಸಿ ೧೯೩೨ ರ ಮೇ ೨೭ ರಂದು ಬಾಗಲಕೋಟೆಯಲ್ಲಿ ಜರುಗಲಿರುವ ಕರ್ನಾಟಕದ ಏಳನೆಯ ರಾಜಕೀಯ ಪರಿಷತ್ತಿನ ಸಿದ್ಧತೆಯನ್ನು ವ್ಯವಸ್ಥಿತವಾಗಿ ನಡೆಸಿದರು. ಗುದ್ಲೆಪ್ಪನವರು ಗುಪ್ತವೇಷದಲ್ಲಿದ್ದು ಭೂಗತರಾಗಿ ನಾಡಿನ ಎಲ್ಲೆಡೆ ಸಂಚರಿಸಿ ಪ್ರಚಾರ ಕಾರ್ಯವನ್ನು ಯಶಸ್ವಿಗೊಳಿಸಿದರು.

ಸರಕಾರದವರು ಪರಿಷತ್ತನ್ನು ವಿಫಲಗೊಳಿಸಲು ಬಾಗಲಕೋಟೆಗೆ ಹೋದವರನ್ನೆಲ್ಲ ಬಂಧಿಸತೊಡಗಿದರು. ಆಯಾ ಭಾಗದ ಕಾಂಗ್ರೆಸ್ ಕಾರ್ಯಕರ್ತರನ್ನು ಗುರುತು ಹಿಡಿದು ಬಂಧಿಸುವುದಕ್ಕಾಗಿ ಆಯಾ ಭಾಗದ ಪೊಲೀಸರನ್ನು ಬಾಗಲಕೋಟೆಗೆ ಕಳಿಸಲಾಗಿತ್ತು. ಗುದ್ಲೆಪ್ಪನವರು ಗುಳೇದಗುಡ್ಡದಿಂದ ಬಾಗಲಕೋಟೆಗೆ ಬರುವಾಗ ಮಾರ್ಗದಲ್ಲಿ ಮೇ ೨೬ ರಂದು ಪೊಲೀಸರು ಅವರನ್ನು ಬಂಧಿಸಿ ಧಾರವಾಡಕ್ಕೆ ತಂದರು. ಆದರೂ ಬಾಗಲಕೋಟೆಯ ರಾಜಕೀಯ ಪರಿಷತ್ತು ಸಂಪೂರ್ಣವಾಗಿ ಯಶಸ್ವಿಯಾಯಿತು. ಅದರ ಹಿಂದಿನ ಶಕ್ತಿ ಗುದ್ಲೆಪ್ಪನವರಾಗಿದ್ದರು. ಧಾರವಾಡದ ಮ್ಯಾಜಿಸ್ಟ್ರೇಟ್ ಮೆಹರ್ ಅವರು ಜೂನ್ ೯ ರಂದು ೩೦ ತಿಂಗಳ ಶಿಕ್ಷೆ ವಿಧಿಸಿದರು. ಬೆಳಗಾವಿಯ ಹಿಂಡಲಗಿ ಜೇಲಿನಲ್ಲಿ ಶಿಕ್ಷೆ ಅನುಭವಿಸಿ ೧೯೩೪ ರ ಮೇ ತಿಂಗಳಿನಲ್ಲಿ ಅವರು ಬಿಡುಗಡೆ ಹೊಂದಿದರು.

ಇದೇ ಸಮಯದಲ್ಲಿ ಬೆಳಗಾವಿ, ವಿಜಾಪುರ, ಧಾರವಾಡ ಮುಂತಾದ ಕಡೆಗಳಿಂದ ಬಂದ ಕಾರ್ಯಕರ್ತರನ್ನು ಹಿಂಡಲಗಿ ಜೇಲಿನಲ್ಲಿಡಲಾಗಿತ್ತು. ಅವರಲ್ಲಿ ಹೆಸರಾಂತ ಹಿರಿಯ ಕಾರ್ಯಕರ್ತರೆಂದರೆ ಗಂಗಾಧರರಾವ ದೇಶಪಾಂಡೆ, ಡಿ. ಪಿ. ಕರಮರಕರ, ಆರ್. ಎಸ್. ಹುಕ್ಕೇರಿಕರ, ಆರ್. ಎಂ. ಪಟ್ಟಣಶೆಟ್ಟಿ, ವೆಂಕಟೇಶ ಮಾಗಡಿ, ಕೆ. ಎಫ್. ಪಾಟೀಲ,

ಟಿ. ಆರ್. ನೆಶ್ವಿ. ಸರದಾರ ವೀರನಗೌಡ ಪಾಟೀಲ ಮುಂತಾದವರು. ಆಗ ಅದೇ ಜೇಲಿನಲ್ಲಿದ್ದ ಸ್ವಾತಂತ್ರ್ಯ ಹೋರಾಟಗಾರ ಬಿ. ಎಂ. ಸಾಣಿಕೊಪ್ಪ ಅವರು ಭೂಗತರಾಗಿದ್ದ ಗುದ್ಲೆಪ್ಪನವರನ್ನು ನೋಡಲು ಬಂಧಿತರಾದ ಹೋರಾಟಗಾರರು. ಕೈದಿಗಳು ಎಷ್ಟೊಂದು ಕಾತುರರಾಗಿದ್ದರೆಂಬುದನ್ನು ಈ ರೀತಿ ಹೇಳುತ್ತಾರೆ : " ಹಳ್ಳಿಕೇರಿಯವರ ಸಂಘಟನಾ ಚಾತುರ್ಯ. ಧೈರ್ಯ. ಸಾಹಸಗಳು ಸುಪ್ರಸಿದ್ದ. ಅವರ ಇಡೀ ಕುಟುಂಬವೇ ಹೋರಾಟಗಾರ ಮನೆತನವಾಗಿ ಶಿಕ್ಷೆ, ದಂಡಗಳನ್ನು ಅನುಭವಿಸುವಲ್ಲಿ ಹೆಸರಾಗಿತ್ತು. ಗುದ್ಲೆಪ್ಪನವರನ್ನು ಹಿಡಿಯುವ ಸಲುವಾಗಿ ಬ್ರಿಟಿಷ್ ಸರಕಾರವು ಅವ್ಯಾಹತವಾಗಿ ಪ್ರಯತ್ನ ಮಾಡುತ್ತಲೇ ಇತ್ತು. ಜೇಲಿಗೆ ಬಂದ ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿಕೇರಿಯವರು ಮಾಡುತ್ತಿರುವ ಹೋರಾಟದ ಕತೆಗಳನ್ನು ಜೇಲಿನಲ್ಲಿ ಹೇಳುತ್ತಿದ್ದರು. ಅದೇ ರೀತಿ ಅವರನ್ನು ಸೆರೆ ಹಿಡಿಯುವುದರಲ್ಲಿ ಸರಕಾರ ಮಗ್ನವಾಗಿರುವುದನ್ನೂ ಮಾತನಾಡುತ್ತಿದ್ದರು. ಅವರನ್ನು ಯಾವುದೇ ಕ್ಷಣದಲ್ಲಿ ಹಿಡಿಯುವಲ್ಲಿ ಯಶಸ್ವಿಯಾಗಬಹುದೆಂದು ತಿಳಿಸಿದ್ದರು. ಈ ಸಮಾಚಾರದಂತೆ ಗುದ್ಲೆಪ್ಪನವರನ್ನು ಸರಕಾರವು ಸೆರೆಹಿಡಿದೇ ಬಿಟ್ಟಿತು. ಹಳ್ಳಿಕೇರಿಯವರನ್ನು ಸೆರೆಹಿಡಿದ ಸುದ್ದಿ ಬರುತ್ತಿರುವಂತೆ ಅವರನ್ನು ಬೆಳಗಾವಿಯ ಹಿಂಡಲಗಿ ಜೇಲಿಗೆ ತರುವ ವಿಚಾರವು ಜೇಲಿನಲ್ಲಿ ಎಲ್ಲ ಕಡೆ ಹರಡಿತು. ಹಳ್ಳಿಕೇರಿಯವರ ಬಗ್ಗೆ ಕುತೂಹಲವು ಕಾರ್ಯಕರ್ತರಲ್ಲಿ ಉಂಟಾಗಿತ್ತು. ಕಾಂಗ್ರೆಸ್ ಕಾರ್ಯಕರ್ತರಷ್ಟೇ ಅಲ್ಲದೆ ಜೇಲಿನಲ್ಲಿದ್ದ ಕೈದಿಗಳಿಗೂ ಅವರನ್ನು ನೋಡಬೇಕೆಂಬ ಕುತೂಹಲ. ಅವರನ್ನು ಜೇಲಿಗೆ ತಂದರೆಂಬ ಸುದ್ದಿ ಒಮ್ಮೆಂದೊಮ್ಮೆ ಜೇಲಿನಲ್ಲಿದ್ದವರಿಗೆ ಗೊತ್ತಾಯಿತು. ಜೇಲುವಾಸಿಗಳೆಲ್ಲ ಹಳ್ಳಿಕೇರಿಯವರನ್ನು ನೋಡಲು ತಮ್ಮ ತಮ್ಮ ಬರಾಕುಗಳಿಂದ ಓಡಿ ಹೊರಗೆ ನುಗ್ಗಿ ಗ್ರೌಂಡಿಗೆ ಬಂದರು. ಅವರು ಹಿರಿಯ ಕಾರ್ಯಕರ್ತರು. ಭೀಮಾಕಾರದ ಆ ವ್ಯಕ್ತಿತ್ವವು ಜನರ ಮೇಲೆ ತುಂಬ ಪ್ರಭಾವ ಬೀರುವಂತಿತ್ತು. ಜೇಲಿನ ನಿಯಮಗಳನ್ನೆಲ್ಲ ಧಿಕ್ಕರಿಸಿ ಕೈದಿಗಳು ಅವರನ್ನು ನೋಡಲು ಬಂದುದು ಹಳ್ಳಿಕೇರಿಯವರ ವ್ಯಕ್ತಿತ್ವ ಎಷ್ಟು ಆಕರ್ಷಕವಾಗಿತ್ತೆಂಬುದನ್ನು ಊಹಿಸಲು ಅವಕಾಶ ಒದಗಿಸುತ್ತದೆ. ರಾಜಕೀಯ ಕೈದಿಗಳು. ಅಪರಾಧಿ ಕೈದಿಗಳು ಅವರ ಸುತ್ತ ನೆರೆದರು. ಈ ಕೈದಿಗಳಲ್ಲಿ ಕರ್ನಾಟಕವಲ್ಲದೆ ಗುಜರಾತ. ಮಹಾರಾಷ್ಟ್ರ. ಸಿಂಧದಿಂದ ಬಂದವರಿದ್ದರು. " [೨೯]

ಈ ಬಾರಿ ಗುದ್ಲೆಪ್ಪನವರು ಜೈಲು ಶಿಕ್ಷೆ ಅನುಭವಿಸುವ ಸಂದರ್ಭದಲ್ಲಿ ಹರಿಜನರು ಮಾಡುತ್ತಿದ್ದ ಭಂಗಿ ಕೆಲಸವನ್ನು ಮೇಲಿನ ಜಾತಿಯವರೂ ಮಾಡಬೇಕೆಂದು ಹಟತೊಟ್ಟು ಸಮಾನತೆಯ ಪಾಠವನ್ನು ಸರ್ವರಿಗೂ ಕಲಿಸಲು ಪಣ ತೊಟ್ಟರು. ಅವರ ಈ ಬೇಡಿಕೆಗೆ ಜೇಲಿನ ಅಧಿಕಾರಿಗಳು ಅನುಮತಿ ಕೊಡಲಿಲ್ಲ. ಆಗ ಅವರು ೧೩ ದಿನಗಳ ವರೆಗೆ ಉಪವಾಸ ಸತ್ಯಾಗ್ರಹ ಕೈಕೊಂಡು ಅಧಿಕಾರಿಗಳ ಮನವೊಲಿಸಿ ತಾವೇ ಸ್ವತಃ ಭಂಗಿ ಕೆಲಸವನ್ನು ಮಾಡಿ ತೋರಿಸಿ ಇತರರಿಗೆ ಮಾದರಿಯಾದರು. ಈ ರೀತಿ ಜೇಲು ಗುದ್ಲೆಪ್ಪನವರಿಗೆ ಜೀವನ ಶಿಕ್ಷಣ ಶಾಲೆಯಾಗಿ ಪರಿಣಮಿಸಿತು.

ಹರಿಜನ ನಿಧಿ - ಗಾಂಧೀಜಿ ಪ್ರವಾಸ :

ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಗಾಗಿ ಪಣತೊಟ್ಟು ಕಾರ್ಯ ಮಾಡತೊಡಗಿದರು. ಈ ಸಮಸ್ಯೆಯನ್ನು ಸಮಾಜದಿಂದ ನಿರ್ಮೂಲನ ಮಾಡಲು ಹಾಗೂ ಹರಿಜನರ ಸರ್ವಾಂಗೀಣ ಪ್ರಗತಿಗೆ ದುಡಿಯುವ ಸಲುವಾಗಿ ' ಹರಿಜನ ಸೇವಕ ಸಂಘ ' ವನ್ನು ಸ್ಥಾಪಿಸಿದರು. ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಸಂಘಗಳು ದೇಶಾದ್ಯಂತ ಸ್ಥಾಪಿತವಾದವು. ಗಾಂಧೀಜಿಯವರು ಸೆರೆಮನೆಯಲ್ಲಿದ್ದುಕೊಂಡೇ ' ಹರಿಜನ ' ಎಂಬ ವಾರಪತ್ರಿಕೆಯನ್ನು ಪ್ರಕಟಿಸಿ ಅದರಲ್ಲಿ ಅಸ್ಪೃಶ್ಯರ

ಸಮಸ್ಯೆಗಳನ್ನು ವಿಶ್ಲೇಷಿಸುತ್ತ ದೇಶದೆಲ್ಲೆಡೆ ಆರಂಭವಾಗಿದ್ದ ಅಸ್ಪೃಶ್ಯತಾ ವಿರೋಧಿ ಆಂದೋಲನಕ್ಕೆ ಮಾರ್ಗದರ್ಶನ ನೀಡುತ್ತಿದ್ದರು.

ಹರಿಜನರ ಉನ್ನತಿ ಮತ್ತು ಅಸ್ಪೃಶ್ಯತೆಯ ನಿವಾರಣೆಗಾಗಿ ಗಾಂಧೀಜಿಯವರು ಹರಿಜನ ನಿಧಿ ಪ್ರವಾಸವನ್ನು ದೇಶಾದ್ಯಂತ ಕೈಕೊಂಡರು. ಕರ್ನಾಟಕದಲ್ಲಿ ೧೯೩೪ ಮತ್ತು ೧೯೩೭ ರಲ್ಲಿ ಎರಡು ಬಾರಿ ಪ್ರವಾಸ ಮಾಡಿದರು. ಮೊದಲನೆಯ ಸಲದ ಅವಧಿಯಲ್ಲಿ ಗುದ್ಲೆಪ್ಪನವರು ಜೇಲಿನಲ್ಲಿದ್ದರು. ಎರಡನೆಯ ಸಲದ ಪ್ರವಾಸದಲ್ಲಿ ಗುದ್ಲೆಪ್ಪನವರು ಗಾಂಧೀಜಿಯವರ ನೆರಳಾಗಿ ಕರ್ನಾಟಕದ ತುಂಬ ಸಂಚರಿಸಿದರು.

ಗುದ್ಲೆಪ್ಪನವರು ಈ ಮೊದಲೇ ಜೇಲುವಾಸದಲ್ಲಿದ್ದಾಗ ಸ್ವತಃ ಭಂಗಿ ಕೆಲಸ ಮಾಡಿ ಹರಿಜನರಷ್ಟೇ ಅಲ್ಲ ಮೇಲು ವರ್ಗದವರೂ ಈ ಕೆಲಸವನ್ನು ಮಾಡಬೇಕೆಂದು ಆದರ್ಶ ಹಾಕಿಕೊಟ್ಟಿದ್ದರು. ಇದು ಈ ಪ್ರವಾಸ ಕಾಲದಲ್ಲಿ ಹೋದಲ್ಲೆಲ್ಲ ಜನತೆಯಲ್ಲಿ ತಿಳಿವಳಿಕೆ ಕೊಡಲು ಸಹಕಾರಿಯಾಯಿತು.

ಭೂಗತರಾದ ಗುದ್ಲೆಪ್ಪನವರು :

೧೯೪೦ ರಲ್ಲಿ ಗುದ್ಲೆಪ್ಪನವರು ಮತ್ತು ಅವರ ಸಂಗಡಿಗರು ಮತ್ತೆ ಭೂಗತರಾಗಿ ಅಲ್ಲಲ್ಲಿ ಗುಡ್ಡಗಳಲ್ಲಿ ಅಡಗಿಕೊಂಡಿರುತ್ತಿದ್ದರು. ಅಂದಿನ ಘಟನೆಗಳ ಬಗ್ಗೆ ಹೊಸರಿತ್ತಿಯ ಪಂಚಪ್ಪ ಅಂಗಡಿಯವರು ಹೀಗೆ ನೆನಪಿಸಿಕೊಳ್ಳುತ್ತಾರೆ : " ನಾನು ಯಾರಿಗೂ ಗೊತ್ತಾಗದಂತೆ ಈ ಚಳುವಳಿಗಾರರಿಗೆ ಆಹಾರ ಒಯ್ದು ಕೊಡುತ್ತಿದ್ದೆ. ನಮ್ಮದು ವ್ಯಾಪಾರವಿತ್ತು. ಅವರಿಗೆಲ್ಲ ಚಿಮಣಿ ಎಣ್ಣೆ ಡಬ್ಬಿಗಳನ್ನು ಪೂರೈಸುತ್ತಿದ್ದೆ. " [೩೦]

ಹುಬ್ಬಳ್ಳಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಶ್ರೀಮತಿ ನೀಲಮ್ಮ ಚನ್ನಪ್ಪ ಭದ್ರಾಪುರ ಹೀಗೆ ವಿವರಿಸುತ್ತಾರೆ : " ನಾವು ಹುಬ್ಬಳ್ಳಿಯ ಕೇಶ್ವಾಪುರದಲ್ಲಿದ್ದೆವು. ನಮ್ಮ ಯಜಮಾನರಾದ ಚನ್ನಪ್ಪನವರು ಭೂಗತರಾಗಿದ್ದಾಗ ಗುದ್ಲೆಪ್ಪ ಹಳ್ಳಿಕೇರಿಯವರೊಂದಿಗೆ ರಾತ್ರಿ ಮನೆಗೆ ಬಂದು ಸ್ನಾನ ಊಟ ಮುಗಿಸಿಕೊಂಡು ರಾತ್ರಿಯೇ ಹೋಗುತ್ತಿದ್ದರು. ಒಂದು ದಿವಸ ವಿಜಾಪುರದ ಪಡಗಾನೂರ ಶಂಕರಗೌಡರು ಹಾಗೂ ಗುದ್ಲೆಪ್ಪ ಹಳ್ಳಿಕೇರಿಯವರು ಮಧ್ಯರಾತ್ರಿಯಲ್ಲಿ ಬಂದಿದ್ದರು. ಅವರಿಗೆ ಉಪಚರಿಸಿ ಕಳಿಸಿದೆವು. ನಾವು ಭೂಗತರಿಗೆ ಸಹಾಯ ಮಾಡುತ್ತೇವೆಂದು ತಿಳಿದು ಸರಕಾರದವರು ನಮ್ಮನ್ನು ಬಂಧಿಸಿ ಧಾರವಾಡದ ಜೇಲಿನಲ್ಲಿ ಒಂದು ತಿಂಗಳವರೆಗೆ ಇಟ್ಟು ನಂತರ ಬಿಡುಗಡೆ ಮಾಡಿದರು. " [೩೧]

ಗುದ್ಲೆಪ್ಪನವರು ತಮ್ಮ ಸಂಗಡಿಗರೊಂದಿಗೆ ಭೂಗತರಾಗಿದ್ದಾಗ ರಾತ್ರಿ ಹಳ್ಳಿಹಳ್ಳಿಗಳಿಗೆ ಹೋಗಿ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಬಿಂಬಿಸಿ ಯುವಕರನ್ನು ಹೋರಾಟಕ್ಕೆ ಹುರಿದುಂಬಿಸುತ್ತಿದ್ದರು. ರಂಗಕಲಾವಿದ ಚನಬಸಯ್ಯ ಹಿರೇಮಠ ಅವರು ಹೇಳುವಂತೆ. " ನವಲಗುಂದ ತಾಲೂಕಿನ ಕರ್ಲವಾಡ ಗ್ರಾಮದಲ್ಲಿ ರಾಮಣ್ಣ ಚವ್ವಣ್ಣವರ ಅವರ ಮನೆಯಲ್ಲಿ ಗುದ್ಲೆಪ್ಪ ಹಳ್ಳಿಕೇರಿ. ವೆಂಕಟೇಶ ಮಾಗಡಿ ಮತ್ತಿತರ ಸಂಗಡಿಗರು ರಾತ್ರಿ ಬಂದು ತರುಣರನ್ನು ಕೂಡಿಸಿ. ಚಳುವಳಿ ಮಾಡಲು ಪ್ರೇರೇಪಿಸಿ ಪ್ರತಿನಿತ್ಯ ಪ್ರಭಾತ ಫೇರಿ ಮಾಡುವಂತೆ ಹೇಳುತ್ತಿದ್ದರು. ನಾನು ಕೆಲ ಸ್ನೇಹಿತರು ಕೂಡಿ ಪ್ರಭಾತ ಫೇರಿ ಪ್ರಾರಂಭಿಸಿದೆವು. ಅದರಲ್ಲಿ ನೂರಾರು ಜನರು ಉತ್ಸಾಹದಿಂದ ಪಾಲ್ಗೊಂಡರು. ಗುದ್ಲೆಪ್ಪನವರ ಪ್ರೇರಣೆಯಿಂದ ರಾಮಣ್ಣ ಚವ್ವಣ್ಣವರ ಅವರು ಸಂಘಟನೆ ಮಾಡೋಣವೆಂದು ನಾಟಕ ಕಂಪನಿ ಪ್ರಾರಂಭಿಸಿದರು.

ಗರುಡ ಸದಾಶಿವರಾಯರು ಬರೆದ ' ಚೌತಿಯ ಚಂದ್ರ ' ಎಂಬ ನಾಟಕವನ್ನು ಹಚ್ಚಿದೆವು. ನಾನು ಜಾಂಬವಂತ, ನನ್ನ ತಮ್ಮ ಕೃಷ್ಣ, ರಾಮಣ್ಣ ಚವ್ವಣ್ಣವರ ನಾರದ, ವಿರುಪಾಕ್ಷಯ್ಯ ಹಿರೇಮಠ ನಾವೆಲ್ಲ ಸೇರಿ ಪಾತ್ರ ಮಾಡಿದೆವು. ದಿನವೂ ರಾತ್ರಿ ರಂಗತಾಲೀಮು ಮಾಡಿದೆವು. ಗುದ್ಲೆಪ್ಪ ಹಳ್ಳಿಕೇರಿ, ವೆಂಕಟೇಶ ಮಾಗಡಿ ಮುಂತಾದ ಚಳುವಳಿಗಾರರೆಲ್ಲ ವೇಷಾಂತರ ಮಾಡಿಕೊಂಡು ಬಂದು ಮರೆಯಲ್ಲಿ ಕುಳಿತುಕೊಳ್ಳುತ್ತಿದ್ದರು. ಆಗ ಪೊಲೀಸರ ಹಾವಳಿ ಬಹಳವಿತ್ತು. ಇವರೆಲ್ಲ ಚಳುವಳಿಗಾರರು ಹಗಲಿನಲ್ಲಿ ಬೆಣ್ಣೆ ಹಳ್ಳದ ದಂಡೆಯ ಕಂಟಿಗಳಲ್ಲಿ ಅಡಗುತ್ತಿದ್ದರು. ರಾತ್ರಿ ನಾಟಕ ತಾಲೀಮು ಚಾಲೂ ಮಾಡಿದಾಗ ಮರೆಯಲ್ಲಿ ಕೂತು ನೋಡುತ್ತಿದ್ದರು. ಒಂದು ದಿನ ಲಚ್ಚಪ್ಪ ಎಂಬವನೊಬ್ಬ ಪಿತೂರಿ ಮಾಡಿ ಪೊಲೀಸರಿಗೆ ಸತ್ಯಾಗ್ರಹಿಗಳು ಬಂದು ಹೋಗುವ ಕುರಿತು ವರದಿ ಮಾಡಿ, ಹಳ್ಳಿಯ ಯುವಕರೆಲ್ಲ ಚಳುವಳಿ ಚಾಲೂ ಮಾಡಾಕತ್ತಾರ ಎಂದು ಹೇಳಿದ. ಪೊಲೀಸರು ದಿನವೂ ಬಂದು ಸತ್ಯಾಗ್ರಹಿಗಳು ಎಲ್ಲಿದ್ದಾರೆಂದು ಹೇಳ್ರಿ ಅಂತಾ ನಮಗೆ ತೊಂದರೆ ಕೊಡಲಾರಂಭಿಸಿದರು. ಆದರೂ ಶ್ರಾವಣಮಾಸದಲ್ಲಿ ಬಸವೇಶ್ವರ ಜಾತ್ರೆ ಕಾಲಕ್ಕೆ ನಾಟಕ ಮಾಡಬೇಕೆಂದು ನಿರ್ಧರಿಸಲಾಯಿತು. "

" ನವಲಗುಂದಕ್ಕೆ ಹೋಗಿ ಪೋಲೀಸ ಠಾಣೆಯಿಂದ ಪ್ರಯಾಸಪಟ್ಟು ಪರವಾನಿಗೆ ತಂದೆವು. ನಾಟಕ ಆರಂಭವಾಯಿತು. ಊರಿನ ಹಾಗೂ ಪಕ್ಕದ ಹಳ್ಳಿಗಳಿಂದಲೂ ಬಹಳ ಜನ ನಾಟಕ ನೋಡಲು ಸೇರಿದ್ದರು. ಪಿತೂರಿಗಾರ ಲಚ್ಚಪ್ಪ ನವಲಗುಂದಕ್ಕೆ ಹೋಗಿ ಪೋಲೀಸರನ್ನು ಕರೆದುಕೊಂಡು ಬಂದ. ನಾಟಕ ಅರ್ಧ ಆಗಿತ್ತು. ಗುದ್ಲೆಪ್ಪ ಹಳ್ಳಿಕೇರಿ, ಲಿಂಗರಾಜ ಮುದ್ದಣ್ಣವರ ಮತ್ತು ಸಂಗಡಿಗರು ವೇಷ ಮರೆಸಿಕೊಂಡು ಕಂಬಳಿ ಹೊತ್ತುಕೊಂಡು ದೂರದಲ್ಲಿ ಕುಳಿತು ನಾಟಕ ನೋಡುತ್ತಿದ್ದರು. ರಾಮಣ್ಣ ಚವ್ವಣ್ಣವರ ಅವರ ನಾರದ ಪಾತ್ರ ಬಿಡಿಸಿ ಬೇರೆಯವರಿಗೆ ಕೊಟ್ಟು ಕಂಬಳಿ ಹೊಚ್ಚಿ ಒಂದು ಕಡೆ ಕೂಡಿಸಿದೆವು. ನಾವು ಗಡಿಬಿಡಿಯಿಂದ ನಾಟಕ ಮುಗಿಸಿದೆವು. ಇಂಥ ಸಂದಿಗ್ಧ ಸಮಯದಲ್ಲಿ ಗುದ್ಲೆಪ್ಪನವರು ನನ್ನ ಹತ್ತಿರ ಬಂದು, " ನೀವು ಸ್ವಾಮಿಗಳು. ಪೊಲೀಸರು ಹಿಡಕೊಂಡು ಹೋದ್ರ ಜೇಲಿಗೆ ಹಾಕ್ತಾರ. ಹಳ್ಳಿ ಊರಾಗ ನಿಮ್ಮನ್ನು ಕುಲದಿಂದ ಹೊರಗಿಡ್ತಾರ. ಕಾರಣ ನೀವು ಪಾರಾಗಿರಿ " ಎಂದರು. " ನಾವು ಹಚ್ಚಿಕೊಂಡ ಮುಖದ ಬಣ್ಣ ಹಾಗೆಯೇ ಇತ್ತು. ಹೆಬಸೂರಿಗೆ ಓಡಿ ಹೋದೆವು. ಅಲ್ಲಿ ಒಬ್ಬರು ಕೊಬ್ಬರಿ ಎಣ್ಣೆ ಕೊಟ್ಟರು. ಹಚ್ಚಿದ್ದ ಬಣ್ಣ ಅಳಿಸಿಕೊಂಡೆವು. ಅಲ್ಲಿಯ ಸ್ಟೇಷನ್ನಿನಿಂದ ರೇಲ್ವೆ ಹತ್ತಿ ಆಂಧ್ರದ ಆದವಾನಿಗೆ ಹೋದೆವು. ಗುದ್ಲೆಪ್ಪನವರೂ ಪೊಲೀಸರಿಗೆ ಸಿಗಲಿಲ್ಲ. ಪಾರಾಗಿ ಎಲ್ಲಿಯೋ ಹೋದರು "[೩೨] ಹೀಗೆ ನವಲಗುಂದ ತಾಲೂಕಿನ ಆರೇಕುರಹಟ್ಟಿ, ತುಪ್ಪದ ಕುರಹಟ್ಟಿ, ಹುಬ್ಬಳ್ಳಿ ತಾಲೂಕಿನ ಹೆಬಸೂರು ಮುಂತಾದ ಕಡೆಗಳಲ್ಲಿ ಗುದ್ಲೆಪ್ಪನವರು ಹಾಗೂ ಸಂಗಡಿಗರು ಗುಪ್ತವಾಗಿ ಬಂದು ಜನರನ್ನು ಚಳುವಳಿಗಾಗಿ ಸಂಘಟಿಸುತ್ತಿದ್ದರು.

ವೈಯಕ್ತಿಕ ಸತ್ಯಾಗ್ರಹ :

೧೯೩೯ ರ ಸಪ್ಟಂಬರ್‌ನಲ್ಲಿ ಎರಡನೆಯ ಮಹಾಯುದ್ಧ ಆರಂಭವಾಯಿತು. ಜರ್ಮನಿಯ ಹಿಟ್ಲರನು ಇಂಗ್ಲಂಡಿನ ಮೇಲೆ ಯುದ್ಧ ಸಾರಿದನು. ಆ ಯುದ್ಧದ ಬಿಸಿ ಭಾರತಕ್ಕೂ ತಟ್ಟದೇ ಇರಲಿಲ್ಲ. ಮಿತ್ರ ರಾಷ್ಟ್ರಗಳ ಪರವಾಗಿ ಬ್ರಿಟಿಷ್ ಸರಕಾರವು ಭಾರತದ ಜನತೆಯ ಅಭಿಪ್ರಾಯವನ್ನು ಕೇಳದೇ ಯುದ್ಧದಲ್ಲಿ ಭಾಗಿಯಾದ ಕಾರ್ಯವನ್ನು ಗಾಂಧೀಜಿ

ಉಗ್ರವಾಗಿ ಖಂಡಿಸಿದರು. " ಈ ಯುದ್ಧವು ಬ್ರಿಟನ್ ಹೇಳುವಂತೆ ಲೋಕಯುದ್ಧವಲ್ಲ. ಪ್ರಜಾಪ್ರಭುತ್ವಕ್ಕಾಗಿ ನಡೆದದ್ದೂ ಅಲ್ಲ. ಪ್ರಸ್ತುತ ಯುದ್ಧಕ್ಕೂ, ಭಾರತಕ್ಕೂ ಯಾವ ಸಂಬಂಧವೂ ಇಲ್ಲ. ಜರ್ಮನಿಗೂ ಇಂಗ್ಲಂಡಿಗೂ ದ್ವೇಷವಿದ್ದಂತೆ ಭಾರತಕ್ಕೂ ಜರ್ಮನಿಗೂ ದ್ವೇಷವಿಲ್ಲ. ಅಲ್ಲದೆ ಗುಲಾಮ ರಾಷ್ಟ್ರಗಳಿಗೆ ಸ್ವತಂತ್ರ ಅಭಿಪ್ರಾಯವಿರುವುದಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಕೊಡಲು ಒಪ್ಪಲಾರದ ಬ್ರಿಟನ್ ಪ್ರಜಾಪ್ರಭುತ್ವದ ತತ್ತ್ವೋಪದೇಶ ಮಾಡುವುದು ಶುದ್ಧ ಡಾಂಭಿಕತನ " ಎಂದೂ ಅಭಿಪ್ರಾಯಪಟ್ಟರು.

ತನಗೆ ಸಂಬಂಧವಿಲ್ಲದ ಯುದ್ಧಕ್ಕೆ ಸಹಾಯ ಮಾಡುವುದು ಕಾಂಗ್ರೆಸ್ಸಿಗೆ ಬೇಡವಾಗಿತ್ತು. ಅದು ಒಂದು ಗೊತ್ತುವಳಿ ಸ್ವೀಕರಿಸಿ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ಕೊಟ್ಟು ಅಧಿಕಾರದಿಂದ ಹೊರಬರಬೇಕೆಂದು ಕರೆಕೊಟ್ಟರು. ಎರಡು ವರ್ಷ ಮೂರು ತಿಂಗಳು ಆಡಳಿತ ನಡೆಸಿದ ಕಾಂಗ್ರೆಸ್ ಮಂತ್ರಿಮಂಡಲಗಳು ಪಕ್ಷದ ಕರೆಯ ಮೇರೆಗೆ ೧೯೩೯ ರ ಅಕ್ಟೋಬರ್ ಹಾಗೂ ನವಂಬರ್ ತಿಂಗಳಲ್ಲಿ ರಾಜೀನಾಮೆ ಕೊಟ್ಟವು. ಯುದ್ಧಕ್ಕೆ ಸಹಾಯ ಮಾಡದೇ ಸುಮ್ಮನೇ ಕೂಡುವ ಹೇಡಿತನವನ್ನು ತೋರಿಸದೆ ಅದಕ್ಕೆ ವಿರೋಧ ಮಾಡಬೇಕೆಂದು ನಿರ್ಣಯ ಸ್ವೀಕರಿಸಿ ವೈಯಕ್ತಿಕ ಸತ್ಯಾಗ್ರಹವನ್ನು ಆರಂಭಿಸಿತು.

ಮುಂಬಯಿ ಪ್ರಾಂತದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರದಿಂದ ಹೊರಬಂದುದರಿಂದ ಗುದ್ಲೆಪ್ಪ ಹಳ್ಳಿಕೇರಿಯವರು ಕಾಂಗ್ರೆಸ್ ಕರೆಯ ಮೇರೆಗೆ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಲು ನಿರ್ಧರಿಸಿದರು. ಈ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಬೇಕಾದರೆ ಕೆಲವು ನಿಯಮಗಳಿದ್ದವು. ಅವು ಯಾವುವೆಂದರೆ, " ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಕೂಗಬೇಕು, ರಾಷ್ಟ್ರಧ್ವಜವನ್ನು ಕೈಯಲ್ಲಿ ಹಿಡಿದು ವಂದೇ ಮಾತರಂ ಎಂದು ಉದ್ಘೋಷಣೆ ಮಾಡಬೇಕು, ಖಾದಿ ಧರಿಸುತ್ತಿರಬೇಕು, ಸತ್ಯವನ್ನು ನುಡಿಯುತ್ತಿರಬೇಕು, ಬೀಡಿ - ಸಿಗರೇಟು ಸೇದುತ್ತಿರಬಾರದು, ಮದ್ಯಪಾನ ಮಾಡುತ್ತಿರಬಾರದು. ಸ್ವತಃ ನೂಲುತ್ತಿರಬೇಕು. ಕಾಂಗ್ರೆಸ್ಸಿನ ಆದೇಶಗಳನ್ನು ಪಾಲಿಸಬೇಕು ಮುಂತಾದ ನಿಯಮಗಳಿಗೆ ಒಪ್ಪಿ ಸತ್ಯಾಗ್ರಹ ಮಾಡುವ ವ್ಯಕ್ತಿ ಸಹಿ ಮಾಡಿ ಅರ್ಜಿಯನ್ನು ಗಾಂಧೀಜಿಯವರಿಗೆ ಕಳಿಸಬೇಕು. ಅವರಿಂದ ಅನುಮತಿ ದೊರೆತರೆ ಮಾತ್ರ ಸತ್ಯಾಗ್ರಹ ಮಾಡಲು ಸಾಧ್ಯವಾಗುತ್ತಿತ್ತು. "[೩೩]

ಒಪ್ಪಿಗೆ ದೊರೆತ ನಂತರ ತಾನು ಸತ್ಯಾಗ್ರಹ ಮಾಡುವ ಸ್ಥಳ, ಭಾಷಣ ಇತ್ಯಾದಿ ವಿವರಗಳನ್ನು ಸರಕಾರಕ್ಕೆ ತಿಳಿಸಬೇಕಾಗುತ್ತಿತ್ತು. ತಾತ್ವಿಕ ತಳಹದಿಯ ಮೇಲೆ ನಡೆಸುವ ಈ ಸತ್ಯಾಗ್ರಹದಲ್ಲಿ ಕಾಂಗ್ರೆಸ್ಸಿನ ಎಲ್ಲ ಸದಸ್ಯರಿಗೂ ಭಾಗವಹಿಸುವ ಅವಕಾಶವಿರಲಿಲ್ಲ. ನಿಷ್ಠಾವಂತ ಕಾಂಗ್ರೆಸ್ಸಿಗರು ಗಾಂಧೀಜಿಯವರಿಂದ ಅನುಮತಿ ಪಡೆದ ನಂತರವೇ ಸತ್ಯಾಗ್ರಹದಲ್ಲಿ ಭಾಗವಹಿಸಲು ಅವಕಾಶವಿತ್ತು.

ಗುದ್ಲೆಪ್ಪನವರ ಮಿತ್ರ ಬಿ. ಎಚ್. ಪಾಟೀಲರು ನೆನಪಿಸಿಕೊಂಡ ಪ್ರಸಂಗವಿದು : " ಈ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲಿಚ್ಚಿಸಿ ಗುದ್ಲೆಪ್ಪನವರು ಗಾಂಧೀಜಿಯವರ ಅನುಮತಿ ಕೇಳಲು ಹೋದರು. ಸತ್ಯಾಗ್ರಹಿಗಳತ್ತ ಲೀಲಾವಿನೋದಮೂರ್ತಿಯಂತೆ ನೋಡುತ್ತ ಕುಳಿತಿದ್ದ ಗಾಂಧೀಜಿಯವರನ್ನು ಕಂಡು ಹಳ್ಳಿಕೇರಿಯವರಿಗೆ ಹುಡುಗ ಬುದ್ಧಿ ಕೆರಳಿತು. ಗಾಂಧೀಜಿಯವರನ್ನು ಕುರಿತು, " ಎಲ್ಲರನ್ನು ಪ್ರೇರೇಪಿಸಿ ಅವರಿಂದ ಸತ್ಯಾಗ್ರಹ ಮಾಡಿಸುತ್ತ ಅವರನ್ನು ಜೇಲಿಗೆ ಕಳಿಸುತ್ತಿರುವಿರಿ. ಅವರೆಲ್ಲರಿಗಿಂತ ಪಕ್ಕಾ ಗುನ್ಹೆಗಾರರು ನೀವಿರುವಿರಿ. " ಎಂದು ಪ್ರಶ್ನಿಸಿಯೇ ಬಿಟ್ಟರು.

ತಾನು ಕೇಳಬೇಕಾದ ಪರವಾನಿಗೆಯನ್ನು ಮರೆತರು. ಗಾಂಧೀಜಿಯವರಿಗೆ ಈ ಧೀರ ಪ್ರಶ್ನೆ ಬಹು ಸೊಗಸೆನ್ನಿಸಿತು. " ಹೌದು. ನಾನು ಬರಿಯ ಗುನ್ಹೆಗಾರನಲ್ಲ. ಪೊಲೀಸರು ನನ್ನನ್ನು ಬೆನ್ನಟ್ಟಿ ಮುಟ್ಟಲು ಬೇಸರವಾಗುವಷ್ಟು ಮೊಂಡು ಗುನ್ಹೆಗಾರ " ಎಂದು ಉತ್ತರಿಸಿದರಂತೆ. ಅನಂತರ ಗುದ್ಲೆಪ್ಪನವರು ತಾವು ವೈಯಕ್ತಿಕ ಸತ್ಯಾಗ್ರಹ ಮಾಡಲು ಪರವಾನಿಗೆ ಕೇಳಿದರಂತೆ. ಆಗ ಗಾಂಧೀಜಿ, " ನಿನ್ನನ್ನು ಮೀಸಲು ಯಾದಿಯಲ್ಲಿ ಸೇರಿಸಿರುವೆನು. ತಲೆಯನ್ನು ಕಡಿದುಕೊಟ್ಟು ದೇಶದೇವಿಯ ಸೇವೆ ಮಾಡಬಲ್ಲವರ ಸಾಲಿನಲ್ಲಿ ನಿನ್ನ ಹೆಸರಿದೆ. "[೩೪] ಎಂದು ಹೇಳಿ ಪರವಾನಿಗೆ ಕೊಟ್ಟರು.

ಈ ಸತ್ಯಾಗ್ರಹದಲ್ಲಿ ಪ್ರಮುಖರಾಗಿ ಕರ್ನಾಟಕದಿಂದ ವಿಶೇಷವಾಗಿ ಧಾರವಾಡ. ಹಾವೇರಿ ಭಾಗಗಳಿಂದ ಅಸಂಖ್ಯ ಕಾರ್ಯಕರ್ತರನ್ನು ಅಣಿಗೊಳಿಸಿದರು ಆಗ ಧಾರವಾಡ ಜಿಲ್ಲೆಯಲ್ಲಿ ಮೊರಾರ್ಜಿ ದೇಸಾಯಿ ಮತ್ತು ಗುದ್ಲೆಪ್ಪನವರು ಕೂಡಿಕೊಂಡು ಪ್ರವಾಸ ಮಾಡಿ ಸತ್ಯಾಗ್ರಹಿಗಳಲ್ಲಿ ಉತ್ಸಾಹ ತುಂಬಿದರು. ಗುದ್ಲೆಪ್ಪನವರು ಸ್ವತಃ ಈ ಸತ್ಯಾಗ್ರಹದಲ್ಲಿ ಭಾಗಿಯಾಗಿ ಒಂದು ವರ್ಷ ಜೇಲು ಶಿಕ್ಷೆ ಅನುಭವಿಸಿದರು.

ಚಲೇಜಾವ್ ಚಳುವಳಿ :

ವೈಯಕ್ತಿಕ ಸತ್ಯಾಗ್ರಹದ ನಂತರ ಕಾಂಗ್ರೆಸ್ಸಿಗೆ ೧೯೪೨ ರಲ್ಲಿ ಚಲೇಜಾವ್ ಚಳುವಳಿಯನ್ನು ಪ್ರಾರಂಭಿಸುವುದು ಅನಿವಾರ್ಯವಾಯಿತು. ಕಾಂಗ್ರೆಸ್ಸನ್ನು ಹೇಗಾದರೂ ಮಾಡಿ ಮನವೊಲಿಸಿ ದ್ವಿತೀಯ ಮಹಾಯುದ್ಧದಲ್ಲಿ ಭಾರತೀಯರ ಬೆಂಬಲ ಪಡೆಯಬೇಕೆಂದು ಬ್ರಿಟಿಷರು ಬಯಸಿದರು. ಭಾರತೀಯರಿಗೆ ಹೆಚ್ಚಿನ ಹಕ್ಕು ಬಾಧ್ಯತೆಗಳನ್ನು ಕೊಡುವುದರ ಸಲುವಾಗಿ ವಿಚಾರಣೆ ಮಾಡಲು ಸರ್ ಸ್ಟ್ಯಾಫೋರ್ಡ್ ಕ್ರಿಪ್ಸ್‌ರ ಆಯೋಗವನ್ನು ಕಳಿಸಿದರು. ಗಾಂಧೀಜಿ ಬಯಸುತ್ತಿದ್ದ ಪರತಂತ್ರ ರಾಷ್ಟ್ರಗಳು ಯುದ್ಧದ ನಂತರ ಸ್ವತಂತ್ರವಾಗುವವೆಂಬ ಆಶ್ವಾಸನೆಯು ಕ್ರಿಪ್ಸ್‌ರ ಕೊಡುಗೆಯಲ್ಲಿ ಇರಲಾರದ್ದರಿಂದ ಆ ಕ್ರಿಪ್ಸ್‌ರ ಕೊಡುಗೆಯನ್ನು ಕಾಂಗ್ರೆಸ್ ನಿರಾಕರಿಸಿತು. ಇದರಿಂದ ಬ್ರಿಟಿಷ್ ಸರಕಾರದವರು ಭಾರತೀಯರ ಮೇಲೆ ದಬ್ಬಾಳಿಕೆಯನ್ನು ಮತ್ತಷ್ಟು ತೀವ್ರಗೊಳಿಸಿದರು.

ಪರಿಸ್ಥಿತಿಯನ್ನು ವಿಮರ್ಶೆ ಮಾಡಲು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನ ೧೯೪೨ ಅಗಸ್ಟ್ ೭ ಮತ್ತು ೮ ರಂದು ಮುಂಬಯಿಯ ಗವಾಲಿಯಾ ಟ್ಯಾಂಕ್ ಮೈದಾನದಲ್ಲಿ ಜರುಗಿತು. ಅಧಿವೇಶನದಲ್ಲಿ ಸ್ವೀಕರಿಸಿದ ಗೊತ್ತುವಳಿಯ ಸಾರ ಇಂತಿದೆ :

ಬ್ರಿಟಿಷ ಸಾಮ್ರಾಜ್ಯವಾದಿ ಹಾಗೂ ಸರ್ವಾಧಿಕಾರಿ ನೀತಿಯ ವಿರುದ್ಧ ಬಂಡೆದ್ದು ಭಾರತೀಯರು ತಮ್ಮ ಅಭಿಮತದಂತೆ ನಡೆದುಕೊಳ್ಳುವ ಕಾಲ ಈಗ ಸನ್ನಿಹಿತವಾಗಿದೆ. ಆದುದರಿಂದ ವಿಸ್ತಾರ ತಳಹದಿಯ ಮೇಲೆ ರಾಷ್ಟ್ರವ್ಯಾಪಿ ಅಹಿಂಸಾತ್ಮಕ ಹೋರಾಟ ಆರಂಭಿಸಬೇಕೆಂದು ಕಾಂಗ್ರೆಸ್ ಕಾರ್ಯಸಮಿತಿ ನಿರ್ಣಯಿಸುತ್ತದೆ. ಈ ಹೋರಾಟ ನಿಶ್ಚಯವಾಗಿಯೂ ಮಹಾತ್ಮಾ ಗಾಂಧೀಜಿಯವರ ಮುಂದಾಳುತನದಲ್ಲಿ ನಡೆಯಬೇಕು ಎಂದು ನಿರ್ಧರಿಸಿತು. ಗಾಂಧೀಜಿ ಗೊತ್ತುವಳಿ ಕುರಿತು ಮಾತನಾಡಿ. " ಭಾರತೀಯರೆ ಮಾಡಿರಿ ಇಲ್ಲವೆ ಮಡಿಯಿರಿ " ಎಂದರು. ಬ್ರಿಟೀಷರಿಗೆ " ಕ್ವಿಟ್ ಇಂಡಿಯಾ – ಚಲೇಜಾವ್ " ಎಂದು ಉದ್ಘೋಷಿಸಿದರು. ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಕೊನೆಯ ಅಂಕ. ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯಬೇಡಿರಿ ಎಂದು ಜನರಿಗೆ ಕರೆಕೊಟ್ಟರು. ಜನರು ಪ್ರಚಂಡ ಕರತಾಡನಗಳಿಂದ

ಈ ಘೋಷಣೆಯನ್ನು ಬೆಂಬಲಿಸಿದರು. ಸರಕಾರವು ಅಂದೇ ಮಹಾತ್ಮಾ ಗಾಂಧೀಜಿ, ಜವಾಹರಲಾಲ್ ನೆಹರೂ, ಮೌಲಾನಾ ಆರಝಾದ್, ಸರದಾರ ವಲ್ಲಭಭಾಯಿ ಪಟೇಲ್, ರಾಜೇಂದ್ರ ಪ್ರಸಾದ, ಆಚಾರ್ಯ ಕೃಪಲಾನಿ ಮತ್ತಿತರ ನಾಯಕರನ್ನು ಹಾಗೂ ಅವರ ಅನುಯಾಯಿಗಳನ್ನು ಬಂಧಿಸಿತು.

ಅಗಸ್ಟ್ ೯ ರಂದು ಸಂಜೆ ಗಾಂಧೀಜಿಯವರು ಭಾಷಣ ಮಾಡಬೇಕಾಗಿದ್ದ ಕಾರ್ಯಕ್ರಮದಲ್ಲಿ ಕಸ್ತೂರಬಾ ಗಾಂಧಿ ಪಾಲ್ಗೊಳ್ಳಲು ಬಂದಾಗ ಅವರನ್ನು ಬಂಧಿಸಿ ಗಾಂಧೀಜಿಯವರನ್ನಿಟ್ಟಿದ್ದ ಪುಣೆಯ ಆಗಾಖಾನ್ ಅರಮನೆಯಲ್ಲಿ ಬಂಧನದಲ್ಲಿರಿಸಿದರು. ಕೇಂದ್ರ ಕಾಂಗ್ರೆಸ್ ಕಾರ್ಯಸಮಿತಿ ಹಾಗೂ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳನ್ನು ಸರಕಾರವು ನಿಷೇಧಿಸಿತು. ಅಲಹಾಬಾದದಲ್ಲಿನ ಕಾಂಗ್ರೆಸ್ ಕೇಂದ್ರ ಕಚೇರಿಯನ್ನು ಪೊಲೀಸರು ವಶಪಡಿಸಿಕೊಂಡರು. ಕಾಂಗ್ರೆಸ್‌ನ ಫಂಡನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಪತ್ರಿಕೆಗಳ ಮೇಲೆ ನಿರ್ಬಂಧಗಳನ್ನು ಹಾಕಲಾಯಿತು. ಗಾಂಧೀಜಿಯವರ ' ಹರಿಜನ ' ಪತ್ರಿಕೆಯ ಪ್ರಕಟನೆಯನ್ನು ನಿಲ್ಲಿಸಲಾಯಿತು.

ಬ್ರಿಟಿಷರ ಈ ದಮನಕಾರಿ ಕೃತ್ಯ ಭಾರತೀಯರ ರಾಷ್ಟ್ರೀಯತೆಯ ಜ್ವಾಲೆಯನ್ನು ದೇಶಾದ್ಯಂತ ಹಬ್ಬುವಂತೆ ಮಾಡಿತು. ಹರತಾಳಗಳು ನಡೆದವು. ಕಾರ್ಮಿಕರು ಕೆಲಸ ಬಿಟ್ಟು ಮುಷ್ಕರ ಆರಂಭಿಸಿದರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ತೊರೆದರು. ಚಳುವಳಿ ಹಿಂಸಾರೂಪ ತಾಳಿತು. ರೈಲು ನಿಲ್ದಾಣ, ಅಂಚೆ ಕಚೇರಿ, ಪೊಲೀಸ್ ಠಾಣೆಗಳಿಗೆ ಮುತ್ತಿಗೆ ಹಾಕಿ ದೂರವಾಣಿ ಮತ್ತು ರೈಲು ಸಂಪರ್ಕ ಕಡಿದು ಹಾಕಲಾಯಿತು. ಸರಕಾರಿ ಕಟ್ಟಡಗಳು ಅಗ್ನಿಗೆ ಆಹುತಿಯಾದವು.

" ಕಾಂಗ್ರೆಸ್ಸಿನ ಯಾವುದೇ ಅಧಿವೇಶನವನ್ನು ತಪ್ಪಿಸಿಕೊಳ್ಳದ ಗುದ್ಲೆಪ್ಪನವರಿಗೆ ಸ್ವಾತಂತ್ರ್ಯದ ಅಂತಿಮ ಸಮರದ ಕಹಳೆಯೂದಿದ ಮುಂಬಯಿ ಅಧಿವೇಶನಕ್ಕೆ ಕಾರಣಾಂತರಗಳಿಂದ ಹೋಗುವದಾಗಲಿಲ್ಲ. ಆಗ ಅವರು ಧಾರವಾಡದಲ್ಲಿದ್ದರು. ಅಗಸ್ಟ್ ಎಂಟರ ರಾತ್ರಿ ತಮ್ಮ ಅಣ್ಣ ಸಂಗನಬಸಪ್ಪನವರ ಪುತ್ರ ವಿರುಪಾಕ್ಷಪ್ಪನವರ ಕೊಠಡಿಯಲ್ಲಿ ತಂಗಿದ್ದ ಅವರು ಮರುದಿನ ಬೆಳಿಗ್ಗೆ (ಅಗಸ್ಟ್ ೯) ತಾವು ಪ್ರಧಾನ ಕಾರ್ಯದರ್ಶಿಯಾಗಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಚೇರಿಯ ಗತಿ ಏನಾಗಿದೆಯೆಂದು ತಿಳಿದುಕೊಳ್ಳಲು ವಿರುಪಾಕ್ಷಪ್ಪನವರೊಂದಿಗೆ ಹೋದಾಗ ಕಚೇರಿಗೆ ಬೀಗಮುದ್ರೆ ಜಡಿದಿದ್ದರು. ಪೊಲೀಸರು ಅವರನ್ನು ನೋಡುತ್ತಲೇ ಧಾವಿಸಿ ಬಂದು ತಮ್ಮ ವಶಕ್ಕೆ ತೆಗೆದುಕೊಂಡರು. ಈ ಚಳುವಳಿ ಮುಗಿಯುವವರೆಗೆ ಗುದ್ಲೆಪ್ಪನವರನ್ನು ಹಿಂಡಲಗಿ ಜೇಲಿನಲ್ಲಿ ಸ್ಥಾನಬದ್ಧ ಕೈದಿಯನ್ನಾಗಿ ಇರಿಸಲಾಗಿತ್ತು." [೩೯] ಸರಕಾರವು ಎರಡು ವರ್ಷಗಳ ಸಶ್ರಮ ಶಿಕ್ಷೆ ವಿಧಿಸಿತು. ಗಾಂಧೀಜಿಯವರ ಬಿಡುಗಡೆಯೊಂದಿಗೆ ಸಾರ್ವತ್ರಿಕವಾಗಿ ಬಂಧಿತರನ್ನು ಬಿಡುಗಡೆ ಮಾಡಿದಾಗ ಗುದ್ಲೆಪ್ಪನವರನ್ನೂ ೧೯೪೪ ರ ಮೇ ೬ ರಂದು ಮುಕ್ತಗೊಳಿಸಲಾಯಿತು. ಸರದಾರ ವೀರನಗೌಡ ಪಾಟೀಲ, ಶಂಕರಗೌಡ ಪಾಟೀಲ ಅದರಗುಂಚಿ ಹಾಗೂ ಅಭಿಮಾನಿಗಳು ಸೇರಿ ಹುಬ್ಬಳ್ಳಿ ರೈಲು ನಿಲ್ದಾಣಕ್ಕೆ ಹೋಗಿ ಗುದ್ಲೆಪ್ಪನವರನ್ನು ಹಾಗೂ ಅವರ ಸಂಗಡಿಗರಾದ ವೆಂಕಟೇಶ ಮಾಗಡಿ, ಪವಾರ ಮಾಸ್ತರ ಹಾಗೂ ಬಿ. ಎಚ್. ಪಾಟೀಲ ಅವರನ್ನು ಮಾಲೆ ಹಾಕಿ ಸ್ವಾಗತಿಸಿದರು.

ಈ ಚಲೇಜಾವ್ ಚಳುವಳಿಯಲ್ಲಿ ಗುದ್ಲೆಪ್ಪನವರಿಗೆ ತಮ್ಮ ಬಂಧನದಿಂದಾಗಿ ಸಕ್ರಿಯವಾಗಿ ಭಾಗವಹಿಸಲಾಗಲಿಲ್ಲ. 'ಮಾಡು ಇಲ್ಲವೆ ಮಡಿ' ಎಂಬ ಘೋಷಣೆಯನ್ನು ತನಗೆ ಕೃತಿ ರೂಪದಲ್ಲಿ

ತರಲಿಕ್ಕಾಗಲಿಲ್ಲವಲ್ಲ ಎಂದು ಅವರು ವ್ಯಸನಪಟ್ಟರು. ಅವರು ಸೆರೆಮನೆಯಲ್ಲಿದ್ದುಕೊಂಡೇ ಸ್ವಾತಂತ್ರ್ಯದ ಈ ಅಂತಿಮ ಸಂಗ್ರಾಮದಲ್ಲಿ ಧುಮುಕಲು ಜನರನ್ನು ಉತ್ತೇಜಿಸಿ, ಕಾವಲಿಗಿದ್ದ ಪೊಲೀಸರ ಮೂಲಕವೇ ಸಂದೇಶಗಳನ್ನು ಗುಪ್ತವಾಗಿ ಹೊರಕ್ಕೆ ಕಳಿಸುತ್ತಿದ್ದರು.

ಗುದ್ಲೆಪ್ಪನವರ ಶಿಷ್ಯ ಮಹಾದೇವಪ್ಪ ಮೈಲಾರರು ಧಾರವಾಡ ಜಿಲ್ಲೆಯ ಹೊಸರಿತ್ತಿ ಭಾಗವನ್ನು ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು, ತನ್ನ ಸಂಗಡಿಗರೊಂದಿಗೆ ಹಪ್ತೆ ಲೂಟಿ ಮಾಡುವ, ಚಾವಡಿ ಸುಡುವ ಕಾರ್ಯದಲ್ಲಿ ತೊಡಗಿದರು.

ಗುದ್ಲೆಪ್ಪನವರ ಸಂಗಡಿಗ ವೆಂಕಟೇಶ ಮಾಗಡಿಯವರು ತಿಳಿಸುವಂತೆ, " ಹುಬ್ಬಳ್ಳಿಯಲ್ಲಿ ೧೯೪೨ ಅಗಸ್ಟ್ ೯ ರಂದು ಗಾಂಧೀಜಿಯವರ ಬಂಧನದ ಸುದ್ದಿಯು ಟಾರು ರಸ್ತೆಗಳ ಮೇಲೆ ಸುಣ್ಣದಿಂದ ಬೆಳಗಾಗುವ ಮೊದಲೇ ಬರೆಯಲ್ಪಟ್ಟಿತ್ತು. " [೩೬] ೧೯೪೨ ರ ಅಗಸ್ಟ ೧೪ ರಂದು ಹುಬ್ಬಳ್ಳಿಯಲ್ಲಿ ಲ್ಯಾಮಿಂಗ್ಟನ್ ಪ್ರೌಢಶಾಲೆಯಿಂದ ಹೊರಟ ಭಾರೀ ಪ್ರತಿಭಟನಾ ಮೆರವಣಿಗೆಗೆ ಪೊಲೀಸರು ಅಡ್ಡಿಪಡಿಸಿ ಮೆರವಣಿಗೆಕಾರರ ಕೈಯಲ್ಲಿದ್ದ ತ್ರಿವರ್ಣ ಧ್ವಜಗಳನ್ನು ಕಸಿದುಕೊಂಡಾಗ ಪರಿಸ್ಥಿತಿ ಉದ್ವಿಗ್ನವಾಯಿತು. ಅಲ್ಲಲ್ಲಿ ಕಲ್ಲೆಸೆತ, ಬುಡಮೇಲು ಕೃತ್ಯಗಳು ನಡೆದವು.

ಅಗಸ್ಟ ೧೫ ರಂದು ಗಾಂಧೀಜಿಯವರ ಕಾರ್ಯದರ್ಶಿ ಮಹದೇವ ದೇಸಾಯಿಯವರು ನಿಧನರಾದ ಸುದ್ದಿಯು ದೇಶದ ಎಲ್ಲೆಡೆ ಹರಡಿತು. ಹುಬ್ಬಳ್ಳಿ - ಧಾರವಾಡಗಳಲ್ಲಿ ಹರತಾಳಕ್ಕೆ ಪ್ರೇರಣೆ ನೀಡಿತು. ಹಿಂದೆಂದೂ ನಡೆಯದಂತಹ ಜನಜಂಗುಳಿಯ ಕ್ರೋಧ ಪ್ರದರ್ಶನ, ಇದರಿಂದ ಪೊಲೀಸರು ಲಾಠೀ ಚಾರ್ಜ್, ಗೋಲೀಬಾರ್ ನಡೆಸಿ ರಕ್ತಪಾತ ಹಾಗೂ ಸಾವುಗಳಿಗೆ ಕಾರಣವಾಗುವ ಘಟನೆಗಳು ನಡೆದವು.

" ಐದಾರು ಸಾವಿರ ಜನರಿರುವ ಒಂದು ಮೆರವಣಿಗೆಯು ಹುಬ್ಬಳ್ಳಿಯ ಕೊಪ್ಪೀಕರ ರಸ್ತೆಯಿಂದ ದುರ್ಗದ ಬೈಲಿನ ಕಡೆ ಸಾಗಲು ಪೋಲೀಸ ಸ್ಟೇಶನ್ ಬಳಿ ಬಂದ ಅದನ್ನು ಪೋಲೀಸರು ತಡೆದರು. ....ಸ್ಟೇಶನ್‌ಗೆ ಅಪಾಯ ಸಂಭವಿಸಬಹುದೆಂದು ಗೋಳೀಬಾರ್‌ಗೆ ಆಜ್ಞೆ ನೀಡಲಾಯಿತು. ಇದರಿಂದ ಒಬ್ಬರು ಸತ್ತು ಒಂಬತ್ತು ಜನಕ್ಕೆ ಗಾಯಗಳಾದವು. ತೀರಿಕೊಂಡವನು ಹದಿಹರೆಯದವನಾದ ಹೈಸ್ಕೂಲ ವಿದ್ಯಾರ್ಥಿ ನಾರಾಯಣ ಮಹಾದೇವ ಡೋಣಿ, ಈತ ಕರ್ನಾಟಕದ ಕ್ವಿಟ್ ಇಂಡಿಯಾ ಚಳುವಳಿಯ ಪ್ರಥಮ ಹುತಾತ್ಮರಲ್ಲಿ ಒಬ್ಬ. " [೩೭]

ಹುಬ್ಬಳ್ಳಿಯ ಗೋಳೀಬಾರ್ ಘಟನೆಯಿಂದ, ಪೋಲೀಸರ ದಮನಕಾರಿ ಪ್ರವೃತ್ತಿಯಿಂದ ರೋಷಗೊಂಡ ಗುದ್ಲೆಪ್ಪನವರು ಜೇಲಿನಲ್ಲಿದ್ದುಕೊಂಡೇ ಪ್ರೇರಣಕಾರಿ ಸಂದೇಶಗಳನ್ನು, ಭವಿಷ್ಯದಲ್ಲಿ ಮಾಡಬೇಕಾದ ಕಾರ್ಯಕ್ರಮಗಳ ಯೋಜನೆಗಳನ್ನು ಪತ್ರರೂಪದಲ್ಲಿ ಕಾವಲಿದ್ದ ಪೋಲೀಸರ ಮುಖಾಂತರ ತಮ್ಮ ಸಂಗಡಿಗರಿಗೆ ತಲುಪುವಂತೆ ಮಾಡಿದರು.

ಗುದ್ಲೆಪ್ಪನವರ ನಾಯಕತ್ವದ ' ಭಾರತೀಯ ತರುಣ ಸಂಘ ' ದ ಸದಸ್ಯರಾದ ಕೆ. ಎಫ್. ಪಾಟೀಲರು ಧಾರವಾಡ ಜಿಲ್ಲೆಯಾದ್ಯಂತ ಚಳುವಳಿ ಹರಡುವಂತೆ ಮಾಡಲು ನಾಲ್ಕು ಗುಂಪುಗಳನ್ನು ಸಂಘಟಿಸಿ ಹಿರೇಕೆರೂರ, ರಾಣೆಬೆನ್ನೂರ, ಹಾವೇರಿ ಮೊದಲಾದ ಕ್ಷೇತ್ರಗಳಲ್ಲಿ ಚಳುವಳಿ ಹರಡುವಂತೆ ಪ್ರೇರೇಪಿಸಿದರು. ಪಾಟೀಲರು ಬ್ಯಾಡಗಿಯಲ್ಲಿ ಸದಾನಂದ

ಮುದ್ರಣಾಲಯದ ಕಾರ್ಯ ಸಾಗಿಸುತ್ತಿದ್ದಾಗ ಗುದ್ಲೆಪ್ಪನವರಿಂದ ಗುಪ್ತ ಸಂದೇಶಗಳು ಬರುತ್ತಿದ್ದವು. ಆ ಮೇರೆಗೆ ಅವರು ಚಲೇಜಾವ್ ಚಳುವಳಿಯನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋದರು.

ಹೀಗೆ ಗುದ್ಲೆಪ್ಪನವರು ಜೇಲಿನಲ್ಲಿರುವಾಗ ಸುಮ್ಮನೆ ಕೂಡದೆ ತಮ್ಮ ಸಂಗಡಿಗರೊಡನೆ, ಭಾರತೀಯ ತರುಣ ಸಂಘದ ಸದಸ್ಯರೊಡನೆ ಸಂಪರ್ಕ ಕಲ್ಪಿಸಿಕೊಂಡು ಜೇಲಿನಿಂದಲೇ ಚಳುವಳಿಯು ಉಗ್ರಸ್ವರೂಪ ಹೊಂದಲು ಸ್ಫೂರ್ತಿ ನೀಡಿದರು.

ಜೇಲಿನಲ್ಲಿ ಉಪವಾಸ ಸತ್ಯಾಗ್ರಹ :

೧೯೪೩ ರಲ್ಲಿ ವೈಸ್‌ರಾಯ್ ಅವರು ' ಅರಾಜಕತೆಗೆ ಕಾಂಗ್ರೆಸ್ ಕಾರಣವಾಗಿದೆ ' ಎಂಬ ೮೬ ಪುಟಗಳ ಪುಸ್ತಕವನ್ನು ಪ್ರಕಟಿಸಿದರು. ' ಹಿಂಸಾ ಕೃತ್ಯಗಳನ್ನು ನಾನೆಂದಿಗೂ ಪುರಸ್ಕರಿಸಲಾರೆ ! ' ಎಂಬ ಗಾಂಧೀಜಿಯವರ ಹೇಳಿಕೆಯನ್ನು ಈ ಪುಸ್ತಕದಲ್ಲಿ ಪ್ರಶ್ನಿಸಲಾಗಿತ್ತು. ಆಗ ಗಾಂಧೀಜಿಯವರು ' ನಾನು ಹಿಂಸಾ ಕೃತ್ಯಗಳನ್ನು ಎಂದೂ ಪ್ರೋತ್ಸಾಹಿಸಲಿಲ್ಲ, ಯಾವ ಪ್ರಚೋದನೆಯನ್ನೂ ನೀಡಲಿಲ್ಲ. ಸರಕಾರದ ನಡತೆಯೇ ಜನರಲ್ಲಿ ಅಂಥ ಮನೋಭಾವವನ್ನು ಬೆಳೆಸಲು ಕಾರಣವಾಗಿದೆ ' ಎಂದು ಸ್ಪಷ್ಟೀಕರಣ ನೀಡಿದರು. ಇದನ್ನು ವೈಸ್‌ರಾಯ್ ಒಪ್ಪಲಿಲ್ಲ. ಫೆಬ್ರುವರಿ ೧೦ ರಿಂದ ಗಾಂಧೀಜಿ ಪುಣೆಯ ಬಳಿಯ ಯರವಡಾ ಜೇಲಿನಲ್ಲಿದ್ದಾಗ ಉಪವಾಸ ಪ್ರಾರಂಭಿಸಿ ೨೧ ದಿನಗಳ ನಂತರ ಮಾರ್ಚ್ ೩ ರಂದು ಮುಕ್ತಾಯಗೊಳಿಸಿದರು.

ಗಾಂಧೀಜಿಯವರ ತತ್ತ್ವಗಳ ಆರಾಧಕರಾದ ಗುದ್ಲೆಪ್ಪನವರೂ ಸಹ ಬೆಳಗಾವಿ ಬಳಿಯ ಹಿಂಡಲಗಿ ಜೇಲಿನಲ್ಲಿ ೨೧ ದಿನಗಳ ಉಪವಾಸ ಮಾಡಿ ಗಾಂಧಿ ನಿಷ್ಠೆಯನ್ನು ವ್ಯಕ್ತಪಡಿಸಿದರು. ಒಂದು ವರ್ಷ ಹತ್ತು ತಿಂಗಳು ಹಿಂಡಲಗಿ ಜೇಲಿನಲ್ಲಿದ್ದರು. ಆಗ ಅವರ ಅಭಿಮಾನಿಗಳು, ರಾಷ್ಟ್ರೀಯವಾದಿಗಳು ಮೇಲಿಂದ ಮೇಲೆ ಅವರನ್ನು ಭೆಟ್ಟಿಯಾಗಲು ಬಹುಸಂಖ್ಯೆಯಲ್ಲಿ ಬರತೊಡಗಿದ್ದರಿಂದ ಜೇಲಿನ ಅಧಿಕಾರಿಗಳು ಗುದ್ಲೆಪ್ಪನವರನ್ನು ಮಹಾರಾಷ್ಟ್ರದ ಠಾಣಾ ಜೇಲಿಗೆ ಸ್ಥಳಾಂತರಿಸಿದರು.

ಹೊಸರಿತ್ತಿಯಲ್ಲಿ ಗೋಲೀಬಾರ್ :

ಗುದ್ಲೆಪ್ಪನವರ ಗರಡಿಯಲ್ಲಿ ತಯಾರಾದ ಕ್ರಾಂತಿಕಾರಿ ಶಿಷ್ಯ ಮಹಾದೇವ ಮೈಲಾರ ಅವರು ತಮ್ಮ ಹನ್ನೆರಡು ಜನ ಸಂಗಡಿಗರೊಂದಿಗೆ ಕೊಗನೂರಿನ ಗೋಣೆಪ್ಪ ಕಮತ ಅವರ ಮದುವೆ ದಿಬ್ಬಣದವರಂತೆ ಅಲಂಕಾರ ಮಾಡಿದ ಚಕ್ಕಡಿಯಲ್ಲಿ ಶಸ್ತ್ರಸಹಿತವಾಗಿ ಕುಳಿತು ೧೯೪೩ ರ ಮಾರ್ಚ ೩೧ ರ ಮಧ್ಯರಾತ್ರಿ ಹೊರಟು ಎಪ್ರಿಲ ೧ ರ ಬೆಳಗಿನ ಜಾವ ಹೊಸರಿತ್ತಿಗೆ ಬಂದರು. ಈಗಾಗಲೇ ೭೪ ಹಫ್ತಾ ಲೂಟಿ ಮಾಡಿ ೭೫ ನೇ ಹಫ್ತಾ ಲೂಟಿ ಮಾಡುವ ಯೋಜನೆ ಹಾಕಿದರು. ಈ ಘಟನೆಯನ್ನು ಪ್ರತ್ಯಕ್ಷದರ್ಶಿಗಳಾದ ಪಂಚಪ್ಪ ಅಂಗಡಿ ಮತ್ತು ಬಿ. ಎಂ. ಮೆಣಸಿನಕಾಯಿ ಈ ರೀತಿ ವಿವರಿಸುತ್ತಾರೆ : " ಹೊಸರಿತ್ತಿಯ ವಿರಭದ್ರ ದೇವರ ಗುಡಿಯಲ್ಲಿ ಕಂದಾಯ ವಸೂಲಿ ಕಚೇರಿಯನ್ನು ಸ್ಥಾಪಿಸಲಾಗಿತ್ತು. ಹಣದ ಪೆಟ್ಟಿಗೆಯನ್ನು ಒಬ್ಬ ಪೋಲೀಸ ಕಾವಲು ಮಾಡುತ್ತಿದ್ದ. ಇನ್ನೊಬ್ಬನು ಸಸಿಹದಲ್ಲಿ ಕುಳಿತಿದ್ದ. ಉಳಿದ ಪೋಲೀಸರು ಪ್ರಾತಃರ್ವಿಧಿಗಳನ್ನು ತೀರಿಸಿಕೊಂಡು ಬರಲು ಪಕ್ಕದ ವರದಾ ನದಿಗೆ ಹೋಗಿದ್ದರು. ಈ ಸಮಯ

ಸಾಧಿಸಿ ಮಹದೇವಪ್ಪನವರು ತಮ್ಮ ಸಂಗಡಿಗರೊಂದಿಗೆ ಕಾವಲಿದ್ದ ಪೋಲೀಸನ ಮೇಲೆ ಆಕ್ರಮಣ ಮಾಡಿದರು. ಗರ್ಭಗುಡಿಯ ಒಳಗೆ ಅಡಗಿದ್ದ ಇಬ್ಬರು ಪೋಲೀಸರು ಗುಂಡು ಹಾರಿಸಿದರು."

"ಈ ಗದ್ದಲ ಕೇಳಿ ನದಿಯ ಕಡೆಗೆ ಹೋಗಿದ್ದ ಉಳಿದ ಪೊಲೀಸರು ಗುಂಡು ಹಾರಿಸುತ್ತ ದೇವಸ್ಥಾನದ ಹತ್ತಿರ ಬಂದರು. ಪರಸ್ಪರ ನಡೆದ ಘರ್ಷಣೆಯಲ್ಲಿ ಪೊಲೀಸರು ಹಾರಿಸಿದ ಗುಂಡು ಮಹದೇವಪ್ಪ ಅವರ ಎದೆಗೆ ಬಡಿದು ಅಲ್ಲಿಯೇ ಅಸುನೀಗಿ ಹುತಾತ್ಮರಾದರು. ಇವರ ಸಹಚರರಾದ ತಿರಕಪ್ಪ ಮಡಿವಾಳರ ಮತ್ತು ವೀರಯ್ಯ ಹಿರೇಮಠ ಅವರಿಗೂ ಗುಂಡುಗಳು ತಾಕಿ ಅವರು ಪ್ರಾಣಬಿಟ್ಟು ಹುತಾತ್ಮರಾದರು." [೩೮] ಭಾರತಾಂಬೆಯ ಬಿಡುಗಡೆಗಾಗಿ ಈ ವೀರಯೋಧರು ತಮ್ಮ ಬಲಿದಾನವಿತ್ತು ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಚಿರಸ್ಥಾಯಿಯಾದರು.

ಹಳ್ಳಿಗಳಿಗೂ ಹಬ್ಬಿದ ಚಳುವಳಿ :

ಪ್ರಾರಂಭದಲ್ಲಿ ಕೇವಲ ನಗರಗಳಲ್ಲಿರುವ ಸುಶಿಕ್ಷಿತರಿಗೆ ಮಾತ್ರ ಸೀಮಿತವಾಗಿದ್ದ ಸ್ವಾತಂತ್ರ್ಯ ಚಳುವಳಿ ಹಳ್ಳಿಗಳಿಗೂ ಹಬ್ಬಿತು. ಧಾರವಾಡ, ಹಾವೇರಿ ಭಾಗದ ಹಳ್ಳಿಗಳಿಗೆ ಚಳುವಳಿ ವಿಸ್ತಾರಗೊಳ್ಳಲು ಗುದ್ಲೆಪ್ಪನವರು ಹಾಗೂ ಅವರ ಸಂಗಡಿಗರು ಕೈಕೊಂಡ ಪ್ರಯತ್ನ, ಪರಿಶ್ರಮ ಅಮೋಘವಾದುದು. ರಾಜ್ಯದ ಅನೇಕ ಹಳ್ಳಿಗಳಿಗೆ ಭೇಟಿ ಕೊಟ್ಟು ತಮ್ಮ ಭಾಷಣ, ಮಾರ್ಗದರ್ಶನಗಳ ಮೂಲಕ ಜನರನ್ನು ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಪ್ರಮುಖರಲ್ಲಿ ಗುದ್ಲೆಪ್ಪನವರೂ ಒಬ್ಬರು.

ಗುದ್ಲೆಪ್ಪನವರು ಸ್ಥಾಪಿಸಿದ ಹೊಸರಿತ್ತಿಯಲ್ಲಿಯ ಗಾಂಧಿ ಆಶ್ರಮದ ಚಟುವಟಿಕೆಗಳ ಪ್ರಭಾವದಿಂದ ಸುತ್ತಲಿನ ಗ್ರಾಮಗಳು ' ಗಾಂಧಿ ಗ್ರಾಮ ' ಗಳಾದವು. ಗುದ್ಲೆಪ್ಪನವರು ಹಳ್ಳಿಗಳ ಜನರಲ್ಲಿ ಖಾದಿಯ ಬಗ್ಗೆ ಅಭಿಮಾನ ಮೂಡಿಸಿ, ಖಾದಿಧಾರಿಗಳಾಗುವಂತೆ ಮಾಡಿದರು. ಶಿಸ್ತು, ಸಂಘಟನೆ, ಗ್ರಾಮನೈರ್ಮಲ್ಯ, ಅಸ್ಪೃಶ್ಯತಾ ನಿವಾರಣೆ, ಪ್ರಾಥಮಿಕ ಆರೋಗ್ಯ ಚಿಕಿತ್ಸೆ, ರಾಷ್ಟ್ರೀಯ ಶಿಕ್ಷಣ, ವಯಸ್ಕರ ಶಿಕ್ಷಣ, ಮಹಿಳಾ ಜಾಗೃತಿ, ರೈತ ಜಾಗೃತಿ ಮುಂತಾದ ವಿಧಾಯಕ ಕಾರ್ಯಗಳು ನಡೆಯುವಂತೆ ಮಾಡಿದರು. ಬೀಡಿ - ಸಿಗರೇಟು, ಸರೆ - ಸಿಂದಿ ಮುಂತಾದ ದುಶ್ಚಟಗಳ ನಿವಾರಣೆ ಇತ್ಯಾದಿ ಸಾಮಾಜಿಕ ಕಾರ್ಯಗಳನ್ನು ಮಾಡಿಸಿ, ಹಳ್ಳಿಗಳಲ್ಲಿ ಉತ್ತಮ ವಾತಾವರಣ ಮೂಡಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಬಹು ಸಂಖ್ಯೆಯ ಹಳ್ಳಿಗರು ಪಾಲ್ಗೊಳ್ಳುವಂತೆ ಮಾಡಿದರು.

ಜಾಗೃತಗೊಂಡ ಹಳ್ಳಿಗಳ ರೈತರು ಕಂದಾಯ ಕೊಡದಂತೆ ಮಾಡುವುದು, ಹುಲಬನ್ನಿ ಕೊಡದೆ ಸರಕಾರಿ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಲು ಬಿಡುವುದು, ಸಿಂದಿ ಗಿಡಗಳನ್ನು ಕಡಿದು ಹಾಕುವುದು ಮುಂತಾದ ಚಟುವಟಿಕೆಗಳನ್ನು ಮಾಡಿ ಸರಕಾರಕ್ಕೆ ಬಿಸಿ ಮುಟ್ಟಿಸಿದರು.

ಚಳುವಳಿಗಾರರು ಊರೂರಿಗೆ ಹೋಗಿ ಹಳ್ಳಿಗರ ಸಹಾಯದಿಂದ ಚಾವಡಿಗಳನ್ನು, ಶಾನುಭೋಗರ ದಫ್ತರುಗಳನ್ನು, ಅಂಚೆ ಪೆಟ್ಟಿಗೆಗಳನ್ನು, ರೈಲು ಸಿಲ್ವಾಣಗಳನ್ನು ಹಾಗೂ ಸಿಂದಿ ಗಡಂಗಗಳನ್ನು ಸುಡುತ್ತಿದ್ದರು. ಸಿಂದಿ ಕಪಾಲಿ ಹರಿಯುವುದು, ಕಂದಾಯದ ಹಣವನ್ನು ಲೂಟಿ ಮಾಡುವುದು, ಪೋಲೀಸರ ಬಂದೂಕುಗಳನ್ನು ಕಸಿದುಕೊಂಡು ನಿರಾಯುಧರನ್ನಾಗಿ ಮಾಡುವುದು ಮುಂತಾದ ಚಟುವಟಿಕೆಗಳಿಂದ ಸರಕಾರದ ಆಡಳಿತವನ್ನು ನಿಷ್ಕ್ರಿಯಗೊಳಿಸುತ್ತಿದ್ದರು.

ಗುದ್ಲೆಪ್ಪನವರು ತಮ್ಮ ಜೊತೆಗೆ ಖ್ಯಾತ ರಾಷ್ಟ್ರೀಯ ಕೀರ್ತನಕಾರ ಕಳ್ಳಿ ತಿಪ್ಪಣ್ಣ ಶಾಸ್ತ್ರಿಯವರನ್ನು ಕರೆದುಕೊಂಡು ಅನೇಕ ಕಡೆ ಸಂಚರಿಸಿ, ಅವರ ಕೀರ್ತನೆಗಳಿಂದ ಜನರಲ್ಲಿ ರಾಷ್ಟ್ರಾಭಿಮಾನವನ್ನು ಮೂಡಿಸುತ್ತಿದ್ದರು. ತಿಪ್ಪಣ್ಣ ಶಾಸ್ತ್ರಿಗಳು ರಾಷ್ಟ್ರ ಮುಖಂಡರನ್ನು ಪಾಂಡವರಿಗೆ ಹೋಲಿಸಿ ಮಾಡಿದ ಒಂದು ಕೀರ್ತನೆಯ ಸಾರ ಹೀಗಿದೆ : ಶ್ರೀ ಕೃಷ್ಣನು ಕುರುಕ್ಷೇತ್ರ ಯುದ್ಧದಲ್ಲಿ ಅಹಿಂಸಾವಾದಿಯೇ ಆಗಿದ್ದೇನೆಂದು ಹೇಳಿದ. ಬಾಣ, ಬತ್ತಳಿಕೆಗಳನ್ನು ಹಿಡಿಯಲಿಲ್ಲ. ಗಾಂಧೀಜಿಯವರು ಆತನ ತತ್ವವನ್ನೇ ಹಿಡಿದರು. ಬಾಬು ರಾಜೇಂದ್ರ ಪ್ರಸಾದರನ್ನು ಧರ್ಮರಾಜನಿಗೆ ಹೋಲಿಸುತ್ತಿದ್ದರು. ವಲ್ಲಭಭಾಯಿ ಪಟೇಲರನ್ನು ಭೀಮನಿಗೆ ಹೋಲಿಸಿ ವರ್ಣಿಸುತ್ತಿದ್ದರು. ಜವಾಹರಲಾಲ ನೆಹರೂ ಅವರನ್ನು ಅರ್ಜುನನಿಗೆ ಹೋಲಿಸಿ ಇಬ್ಬರ ಗುಣಾದಿಗಳನ್ನು ಸ್ವಾರಸ್ಯಕರವಾಗಿ ಹೇಳುತ್ತಿದ್ದರು. ಆಚಾರ್ಯ ವಿನೋಬಾ ಅವರನ್ನು ನಕುಲನಿಗೂ, ಮಹಾದೇವಭಾಯಿ ದೇಸಾಯಿ ಅವರನ್ನು ಸಹದೇವನಿಗೂ ಹೋಲಿಸಿ, ಸರೋಜಿನಿ ನಾಯ್ಡು ಅವರನ್ನು ಕುಂತಿದೇವಿಗೂ ಹೋಲಿಸಿ ಹೇಳಿ ಜನಮನವನ್ನು ಆಕರ್ಷಿಸುತ್ತಿದ್ದರು. ಹರಿಜನೋದ್ಧಾರ, ಖಾದಿ ಪ್ರಚಾರ, ಪಾನ ಪ್ರತಿಬಂಧ ಮುಂತಾದ ವಿಚಾರಗಳು ರಾಷ್ಟ್ರೀಯ ಕೀರ್ತನಗಳಲ್ಲಿ ಬಿಂಬಿತವಾಗುತ್ತಿದ್ದವು.

ಇಂಥ ರಾಷ್ಟ್ರೀಯ ಕೀರ್ತನೆಗಳಿಂದ ಉತ್ಸಾಹಿತರಾದ ಹಳ್ಳಿಗಳ ಜನರು ಸ್ವಾತಂತ್ರ್ಯ ಮತ್ತು ಗಾಂಧಿಪರ ಘೋಷಣೆಗಳನ್ನು ಕೂಗುತ್ತಿದ್ದರು. ಪ್ರಭಾವಿತಗೊಂಡ ಜನರು ಚಳುವಳಿಯಲ್ಲಿ ಹುಮ್ಮಸ್ಸಿನಿಂದ ಪಾಲ್ಗೊಳ್ಳುತ್ತಿದ್ದರು. ಈ ರೀತಿಯಾಗಿ ಚಳುವಳಿಯು ಹಳ್ಳಿಗಳಿಗೂ ವಿಸ್ತರಿಸಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರು :

ಸ್ವಾತಂತ್ರ್ಯ ಚಳುವಳಿಯಲ್ಲಿ ಸಹಸ್ರ ಸಹಸ್ರ ಜನರು ಧೈರ್ಯ ಸಾಹಸಗಳಿಂದ ಹೋರಾಡಿ ಭಾರತಮಾತೆಯನ್ನು ಬಂಧನದಿಂದ ಮುಕ್ತಗೊಳಿಸಲು ಪ್ರಯತ್ನಿಸಿದರು. ಮನೆಯ ಹೊಸ್ತಿಲನ್ನೂ ದಾಟದ ಹಲವಾರು ಮಹಿಳೆಯರು ಈ ಮಹಾನ್ ಕಾರ್ಯದಲ್ಲಿ ತಾವೇನೂ ಕಡಿಮೆಯಿಲ್ಲವೆನ್ನುವಂತೆ ಭಾಗವಹಿಸಿ ಕಷ್ಟಕಾರ್ಪಣ್ಯಗಳನ್ನು ಎದುರಿಸಿಯೂ ಯಶಸ್ವಿಯಾದರು. ಕುಟುಂಬದ ನಿರ್ವಹಣೆಯ ಜೊತೆಗೆ ದೇಶ ಕಟ್ಟುವ ಕಾರ್ಯದಲ್ಲಿ ತಮ್ಮನ್ನು ಸಮರ್ಪಣಾ ಭಾವದಿಂದ ತೊಡಗಿಸಿಕೊಂಡುದುದು ವೈಶಿಷ್ಟ್ಯಪೂರ್ಣವಾಗಿದೆ.

ಗುದ್ಲೆಪ್ಪನವರ ' ಗಾಂಧಿ ಆಶ್ರಮ ' ದ ಪ್ರಭಾವದಿಂದ ಪ್ರೇರಿತರಾಗಿ ಹೊಸರಿತ್ತಿ ನಾಡಿನ ಅನೇಕ ಹಳ್ಳಿಗಳ ಸುಶಿಕ್ಷಿತ, ಅಶಿಕ್ಷಿತ ಮಹಿಳೆಯರೆಲ್ಲ ರಾಷ್ಟ್ರೀಯ ಕಾರ್ಯದಲ್ಲಿ ಭಾಗವಹಿಸಿದರು. ಅವರಲ್ಲಿ ಪ್ರಮುಖರಾದವರು :

ಹೊಸರಿತ್ತಿಯ ಗಂಗಾದೇವಿ ಗುದ್ಲೆಪ್ಪ ಹಳ್ಳಿಕೇರಿ, ಮುರಿಗೆವ್ವ ಸಂಗಪ್ಪ ಹಳ್ಳಿಕೇರಿ, ಗೌರವ್ವ ಚನ್ನಬಸಪ್ಪ ಹಳ್ಳಿಕೇರಿ, ಕುಮಾರಿ ಚನ್ನಮ್ಮ ಚನ್ನಬಸಪ್ಪ ಹಳ್ಳಿಕೇರಿ, ಬಸಮ್ಮ ಸಂಗನಬಸಪ್ಪ ಹಳ್ಳಿಕೇರಿ, ಭಾಗೀರಥಿಬಾಯಿ ಕುಬೇರಪ್ಪ ಬಡಿಗೇರ, ಜಾನಕವ್ವ ಚಂದ್ರಪ್ಪ ಏಕಬೋಟೆ, ಕಮಲಾಬಾಯಿ ಫಕೀರಪ್ಪ, ನಾಗಮ್ಮ ಯಲ್ಲಪ್ಪ ನರಗುಂದ, ಗೌರವ್ವ ಪುಟ್ಟಪ್ಪ ಅಂಬಿಗೇರ, ರುಕ್ಮಿಣಿಬಾಯಿ ಮ. ಕ್ಷೀರಸಾಗರ, ಕರ್ಜಗಿಯ ಗೌರಮ್ಮ ಸಿದ್ದಲಿಂಗಪ್ಪ ಹಿರೇಮಠ, ರುದ್ರವ್ವ ಬಸವಣ್ಣೆಪ್ಪ, ಯಲ್ಲವ್ವ ದ್ಯಾಮಣ್ಣ, ಅಗಡಿಯ ಗಂಗವ್ವ ಯಮನಪ್ಪ ಮಡಿವಾಳರ, ಕೊರಡೂರಿನ ಯಲ್ಲವ್ವ ಬಸಪ್ಪ ಅಡರಕಟ್ಟಿ, ಕೋಳೂರಿನ ಪದ್ಮವ್ವ ದೊಡ್ಡಹೋಳಗಿ, ನೆಗಳೂರಿನ ಬಸಮ್ಮ ತಾವರೆ, ಈರಮ್ಮ ತಾವರೆ [೬೯] ಪ್ರಮುಖರು.

ಹಾಲಗಿಯ ಅಂಬವ್ವ ಕಾಕಡೆ. ಪುಟ್ಟವ್ವ ಅಂಗಡಿ. ಭಾಗವ್ವ ಜಾಧವ. ಭವಾನೆವ್ವ ಹೀರಪ್ಪ ಡಿಸಾಲೆ. ಅಂಬವ್ವ ಹನುಮಂತಪ್ಪ ಹಳ್ಳಿಗುಡಿ. ಭರಮವ್ವ ಸಂಗಪ್ಪ ಹಡಪದ. ಹೀರಮಾ ಕಾಲೇಸಾಹೇಬ ನದಾಫ. ಕಡಿಯವ್ವ ಹನಮಂತಪ್ಪ ಮುದ್ದಿ. ಭೀಮವ್ವ ಚಂದುಸಾಬ ವಾಲೀಕಾರ. ನಾಗವ್ವ ರಾಮಣ್ಣ ಉಂಡಿ. ಗಂಗವ್ವ ಯಮುನಪ್ಪ ಮಡಿವಾಳರ ಇವರೆಲ್ಲ ಹಾವೇರಿ ತಾಲೂಕ ಕಚೇರಿ ಮುಂದೆ ಕಾಯ್ದೆ ಭಂಗ ಚಳುವಳಿ ಮಾಡಿದರು. ಈ ಹುಡಿಗೆಯರ ವಯಸ್ಸು ಇಪ್ಪತ್ತರ ಒಳಗಿತ್ತು. ಇವರೆಲ್ಲ ಚಳುವಳಿ ಮಾಡಿದ್ದಕ್ಕೆ ಎರಡೆರಡು ತಿಂಗಳು ಶಿಕ್ಷೆಯಾಯಿತು.

೧೯೪೩ ಮಾರ್ಚ ೩೧ ರಂದು ಹಗಲು ಹೊತ್ತಿನಲ್ಲಿಯೇ ಹಾಲಗಿ - ಮರೋಳದ ನಾಲ್ವರು ರೈತ ಕುಟುಂಬದ ಯುವತಿಯರು ಪುರುಷವೇಷ ಧರಿಸಿ, ಮನೆಯವರಿಗೆ ಹೇಳದೆ ಹಾವೇರಿಗೆ ಬಂದು ತಾಲೂಕ ಕಚೇರಿಯ ಮೇಲೆ ರಾಷ್ಟ್ರಧ್ವಜ ಹಾರಿಸಿ ' ಭಾರತ ಮಾತಾ ಕೀ ಜೈ '. ' ವಂದೇ ಮಾತರಂ ' ಎಂದು ಘೋಷಿಸಿ ತಹಸೀಲ್ದಾರರಿಗೆ ಖಾದಿ ಟೊಪ್ಪಿಗೆ ಧರಿಸುವಂತೆ ಒತ್ತಾಯಿಸಿ ಬಂಧನಕ್ಕೊಳಗಾದುದು ಅವರ ರಾಷ್ಟ್ರಾಭಿಮಾನದ ಪರಾಕಾಷ್ಠೆಯನ್ನು ಸಾರುತ್ತದೆ.

೧೯೪೩ ರ ಏಪ್ರಿಲ್ ೧ ರಂದು ಮಹಾದೇವಪ್ಪ ಮೈಲಾರರು ಹುತಾತ್ಮರಾದ ದಿನವೇ ಶ್ರೀಮತಿ ಅಂಬವ್ವ ಅಂಗಡಿ ನೇತೃತ್ವದ ಹತ್ತು ಹನ್ನೆರಡು ಮಹಿಳೆಯರು ಮತ್ತು ಹುಡುಗರ ತಂಡವು ಹಾವೇರಿಯ ನ್ಯಾಯಾಲಯ ಪ್ರಾರಂಭವಾಗುವ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಹೋಗಿ ' ಭಾರತ ಮಾತಾ ಕೀ ಜೈ, ಮಹಾತ್ಮಾ ಗಾಂಧಿ ಕೀ ಜೈ ' ಎಂದು ಘೋಷಿಸುತ್ತ ರಾಷ್ಟ್ರಧ್ವಜವನ್ನು ಕೈಯಲ್ಲಿಯೇ ಹಾರಿಸಿದರು. ನ್ಯಾಯಾಲಯವನ್ನು ಪ್ರವೇಶಿಸಿದ ತಂಡದಲ್ಲಿಯ ಒಬ್ಬರು ನ್ಯಾಯಪೀಠವೇರಿ ಬ್ರಿಟಿಷ್ ಸರಕಾರವನ್ನು ಆರೋಪಿ ಎಂದು ತೀರ್ಮಾನಿಸಿ. ಅವರು ಕೂಡಲೇ ದೇಶ ಬಿಟ್ಟು ಹೋಗಬೇಕೆಂದು ತೀರ್ಮಾನಿಸಿದರು. ಜೈಕಾರ ಹಾಕಿದರು. ಪೊಲೀಸರು ತಕ್ಷಣವೇ ಇವರೆಲ್ಲರನ್ನು ಬಂಧಿಸಿದರು.

ಗುದ್ಲೆಪ್ಪನವರ ಧರ್ಮಪತ್ನಿ ಗಂಗಾದೇವಿಯವರು ಗಾಂಧೀಜಿಯವರ ದರ್ಶನ ಮಾಡಲು ಪೋಲಿಯೋ ಪೀಡಿತ ತಮ್ಮ ಮಗು ಪ್ರೇಮಾಳೊಂದಿಗೆ ವರ್ಧಾಕ್ಕೆ ಹೋಗಿದ್ದರು. ಗಾಂಧೀಜಿಯವರೆದುರು ತಾವೂ ಜೇಲುವಾಸಕ್ಕೆ ಹೋಗುವ ಇಚ್ಛೆ ವ್ಯಕ್ತಪಡಿಸಿದಾಗ ಗಾಂಧೀಜಿಯವರು. ' ಈ ಮಗುವನ್ನು ಯಾರ ಹತ್ತಿರ ಬಿಟ್ಟು ಹೋಗುತ್ತೀ ? ' ಎಂದರು. ಆಗ ' ತಾಯಿ ಹತ್ತಿರ ತವರಿನಲ್ಲಿ ಬಿಟ್ಟು ಹೋಗುತ್ತೇನೆ ' ಎನ್ನಲು, ಗಾಂಧೀಜಿ ' ಬೇಡ ನಾನು ನಿನಗೆ ಜೇಲು ವಾಸಕ್ಕೆ ಪರವಾನಿಗೆ ಕೊಡಲಾರೆ. ಏಕೆಂದರೆ ಈ ಅಂಗವಿಕಲ ಮಗುವಿನ ಆರೈಕೆಯೇ ಒಂದು ಜೇಲು ' ಅಂದರು. ಹೀಗಾಗಿ ಗಂಗಾದೇವಿಯವರು ಜೇಲಿಗೆ ಹೋಗಲಿಲ್ಲ.[೪೦] ಆದರೂ ಹೊಸರಿತ್ತಿಯ ಗಾಂಧಿ ಆಶ್ರಮದಲ್ಲಿದ್ದುಕೊಂಡು ಗಾಂಧಿ ತತ್ವ ಪ್ರಣೀತ ವಿಧಾಯಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಮಹಿಳೆಯರು ಹಳ್ಳಿಗಳಲ್ಲಿ ಪ್ರಭಾತ ಫೇರಿ ಮಾಡುತ್ತ ಘೋಷಣೆಗಳನ್ನು ಕೂಗಿ ದೇಶಭಕ್ತಿಗೀತೆಗಳನ್ನು ಹಾಡುತ್ತಿದ್ದರು.

" ಕಸ್ತೂರಿ ಬಾಯಿಯವರೇ ಕಮಲಾದೇವಿಯರೇ ಸರೋಜಿನಿ ನಾಯ್ಡು
ಇವರ್‍ಯಾರೇ ನಾವು ಚಳುವಳಿ ಮಾಡುವವರೇ ।
ಚಳುವಳಿ ಮಾಡುವವರೇ ತಿಳಿಯನು ಹೇಳುವವರೇ ತಿಳಿಸಿ ಸ್ವರಾಜ್ಯ
ತರುವವರೇ ನಾವು ಚಳುವಳಿ ಮಾಡುವವರೇ ।
ದಂಡವ ಕೊಡದವರೇ ಝಂಡಾ ಮೆರೆಸುವವರೇ ಬಂಡೆಪ್ಪಿ ಸರಕಾರ
ಓಡಿಸುವವರೇ ನಾವು ಚಳುವಳಿ ಮಾಡುವವರೇ । "

ಈ ರೀತಿ ಹಾಡುತ್ತ ಜನತೆಯಲ್ಲಿ ವಿಶೇಷವಾಗಿ ಮಹಿಳೆಯರಲ್ಲಿ ಜಾಗೃತಿ ಮೂಡಿಸುತ್ತಿದ್ದರು.

ಗುದ್ಲೆಪ್ಪ ಹಳ್ಳಿಕೇರಿ, ಮಹಾದೇವಪ್ಪ ಮೈಲಾರ, ನಿಂಗಪ್ಪ ಕೂಗನೂರ, ಗುಡ್ಡಪ್ಪ ಅಗಸರ ಅವರುಗಳ ನೇತೃತ್ವದಲ್ಲಿ ಶ್ರೀಮತಿ ಸುಶೀಲಮ್ಮ ಕದರಗಾರ ಮತ್ತಿತರ ಮಹಿಳೆಯರು ಜನರನ್ನು ಸಂಘಟಿಸಲು ಕಾಂಗ್ರೆಸ್ ಧ್ವಜವನ್ನು ಕೈಯಲ್ಲಿ ಹಿಡಿದುಕೊಂಡು ಸ್ವಾತಂತ್ರ್ಯ ಗೀತೆಗಳನ್ನು ಹಾಡುತ್ತ ಹೊಸರಿತ್ತಿ, ಕೊರಡೂರು, ಮೋಟೆಬೆನ್ನೂರು, ಹಾಲಗಿ, ಅಗಡಿ, ಕೋಗನೂರು, ಕೊಂಚಿಗೇರಿ ಮುಂತಾದ ಹಳ್ಳಿಗಳಿಗೆ ಹೋಗುತ್ತಿದ್ದರು. "ಕೊನೆಗೆ ಭಾಷಣ ನಡೆದಾಗ ಚಳುವಳಿಗಾರರಿಗೂ – ಬ್ರಿಟಿಷ ಅಧಿಕಾರಿಗಳಿಗೂ ಜಗಳ, ಹೊಡೆದಾಟ, ಲಾಠಿ ಚಾರ್ಜ್ ಆಗ್ತಿದ್ವು. ಆಗ ನಾವು ಭಾರತ ಮಾತಾ ಕೀ ಜೈ, ಗಾಂಧಿ ಮಹಾತ್ಮಾ ಕೀ ಜೈ, ಇಂಕಿಲಾಬ್ ಜಿಂದಾಬಾದ್, ವಂದೇ ಮಾತರಂ ಘೋಷಣೆ ಕೂಗ್ತಿದ್ವಿ. ನಮ್ಮೊಡನೆ ಹಳ್ಳಿ ಜನರೂ ಧ್ವನಿ ಕೂಡಿಸುತ್ತಿದ್ದರು. ಆಗ ಗೌಡ - ಕುಲಕರ್ಣಿಗಳಿಗೆ ಮುಖಭಂಗ ಆಗ್ತಿತ್ತು. ಮಹಿಳಾ ಹೋರಾಟಗಾರರನ್ನು ಊರಿನ ಒಂದು ಕೋಣ್ಯಾಗ ಕೂಡುಹಾಕಿ ಬಾಗಿಲಕ್ಕ ಬೀಗ ಹಾಕ್ತಿದ್ರು. ಚಳುವಳಿಗಾರರನ್ನು ಜೇಲಿಗೆ ಹಾಕ್ತಿದ್ರು. ಹಿಂಗ ಮಾಡಿದಂಗೆಲ್ಲಾ ಹೆಚ್ಚು ಹೆಚ್ಚು ಚಳುವಳಿಗಾರರು ಘೋಷಣೆ ಕೂಗಿ ಜೇಲ ಸೇರ್‍ತಿದ್ರು." ೮೧

ಶ್ರೀಮತಿ ದೇವಕ್ಕ ರಮಾನಂದ ಮನ್ನಂಗಿ ಅವರು ತಮ್ಮ ಅಕ್ಕ ಗೌರಮ್ಮ ಹಾಗೂ ಮಾವ ಚನ್ನಬಸಪ್ಪ ಹಳ್ಳಿಕೇರಿ ಅವರೊಂದಿಗೆ ಹೊಸರಿತ್ತಿಯಲ್ಲಿದ್ದರು. ಗುದ್ಲೆಪ್ಪನವರ ಮಾರ್ಗದರ್ಶನದ ಮೇರೆಗೆ ಹೆಚ್ಚಿನ ರಾಷ್ಟ್ರೀಯ ಶಿಕ್ಷಣ ಪಡೆಯಲು ವರ್ಧಾ ಮಹಿಳಾ ಆಶ್ರಮಕ್ಕೆ ಸೇರಿದರು. ಅಲ್ಲಿ ರಾಷ್ಟ್ರೀಯ ಶಿಕ್ಷಣ ಹಾಗೂ ಮುಂಬಯಿಯಲ್ಲಿ ಮಾಂಟೆಸ್ಸರಿ ಶಿಕ್ಷಣ ತರಬೇತಿ ಪಡೆದು ಹೊಸರಿತ್ತಿ ಆಶ್ರಮಕ್ಕೆ ಬಂದರು. ಅಲ್ಲಿ ರಾಷ್ಟ್ರೀಯ ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷಣ ಕೊಡುತ್ತ ಹಳ್ಳಿಗಳಲ್ಲಿ ಹೆರಿಗೆ ಶುಶ್ರೂಷೆ ಕಾರ್ಯ ಕೈಕೊಂಡು ಗ್ರಾಮೀಣ ಭಾಗದ ಜನರಿಗೆ ಆದರದ 'ಅಕ್ಕ'ಳಾಗಿ ಜನಪ್ರಿಯವಾದರು.

ಅನೇಕ ದಂಪತಿಗಳು ಹೊಸರಿತ್ತಿಯ ಗಾಂಧಿ ಆಶ್ರಮದಲ್ಲಿ ವಾಸಿಸುತ್ತ ರಾಷ್ಟ್ರೀಯ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಕೆಲವು ಮಹಿಳೆಯರು ಕೌಟುಂಬಿಕ ಜವಾಬ್ದಾರಿಗಳನ್ನು ಹೊತ್ತುಕೊಂಡು ತಮ್ಮ ಗಂಡಂದಿರಿಗೆ ಚಳುವಳಿಯಲ್ಲಿ ಪಾಲ್ಗೊಳ್ಳಲು ಸ್ಫೂರ್ತಿ ನೀಡುತ್ತಿದ್ದರು. ಭೂಗತ ಸ್ವಾತಂತ್ರ್ಯ ಹೋರಾಟಗಾರರಿಗೆ ಕಠಿಣ ಪ್ರಸಂಗಗಳಲ್ಲಿಯೂ ಜಾಗರೂಕತೆಯಿಂದ ಊಟೋಪಚಾರದ ವ್ಯವಸ್ಥೆಯನ್ನು ಮಾಡುತ್ತಿದ್ದರು. ಎಲ್ಲ ಮಹಿಳೆಯರು ನೇರವಾಗಿ ಜೇಲುವಾಸವನ್ನು ಅನುಭವಿಸದೇ ಇದ್ದರೂ ಹಿನ್ನೆಲೆಯಲ್ಲಿದ್ದುಕೊಂಡು ಗುಪ್ತವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು.

ಸ್ವಾತಂತ್ರ್ಯದ ಹಾದಿಯಲ್ಲಿ :

೧೯೪೫ ರಲ್ಲಿ ಬ್ರಿಟನ್ನಿನಲ್ಲಿ ಲೇಬರ್ ಪಕ್ಷವು ಅಧಿಕಾರಕ್ಕೆ ಬಂದ ನಂತರ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ನಿರ್ಣಯಿಸಿ. ಆ ಬಗ್ಗೆ ಪರಿಶೀಲನೆ ಮಾಡಲು ಲಾರ್ಡ್ ಪ್ಯಾಥಿಕ್ ಲಾರೆನ್ಸ್ ಅಧ್ಯಕ್ಷತೆಯಲ್ಲಿ ಕ್ಯಾಬಿನೆಟ್ ಆಯೋಗವನ್ನು ೧೯೪೬ ರ ಮಾರ್ಚ್ ೨೪ ರಂದು ಭಾರತಕ್ಕೆ ಕಳಿಸಿತು. ಘಟನಾ ಸಮಿತಿಯ ಮೂಲಕ ಭಾರತೀಯರೂ ತಮ್ಮ ಸಂವಿಧಾನ ರಚಿಸಿಕೊಳ್ಳಬಹುದೆಂದೂ ಆಯೋಗವು ತತ್ವಶಃ ಒಪ್ಪಿಕೊಂಡದ್ದರಿಂದ ೧೯೪೬ ರ ಜುಲೈನಲ್ಲಿ ಘಟನಾ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಗಳಿಸಿತು. ಜವಾಹರಲಾಲ ನೆಹರೂ ನೇತೃತ್ವದಲ್ಲಿ ಮಧ್ಯಂತರ ಸರಕಾರ ಅಸ್ತಿತ್ವಕ್ಕೆ ಬಂದಿತು. ಅದೇ ವರ್ಷದ ಡಿಸೆಂಬರ್ ೯ ರಂದು ಘಟನಾ ಸಭೆ ದೆಹಲಿಯಲ್ಲಿ ಸೇರಿತು. ಮುಸ್ಲಿಂ ಲೀಗ್ ಸಭೆಯನ್ನು ಬಹಿಷ್ಕರಿಸಿ ಸ್ವತಂತ್ರ ಪಾಕಿಸ್ತಾನಕ್ಕಾಗಿ ಆಗ್ರಹಿಸಿ ಹೋರಾಟವನ್ನು ಪ್ರಾರಂಭಿಸಿತು.

೧೯೪೭ ಮಾರ್ಚ ೨೪ ರಂದು ಲಾರ್ಡ್ ಮೌಂಟ್ ಬ್ಯಾಟನ್ನರು ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದರು. ದೇಶದ ಅನೇಕ ಮುಖಂಡರೊಡನೆ ಚರ್ಚಿಸಿ ಭಾರತದ ವಿಭಜನೆಯನ್ನು ಒಳಗೊಂಡ ಹೊಸ ಯೋಜನೆಯನ್ನು ಬ್ರಿಟಿಷ್ ಸಂಸತ್ತಿಗೆ ಕಳಿಸಿದರು. ಅದು ೧೯೪೭ ರ ಜುಲೈ ೪ ರಂದು ಭಾರತ ಸ್ವಾತಂತ್ರ್ಯ ಕಾಯ್ದೆಯನ್ನು ಅಂಗೀಕರಿಸಿತು. ಅದರ ಮೇರೆಗೆ ದೇಶ ವಿಭಜನೆಯಾಗಿ ೧೯೪೭ ರ ಅಗಸ್ಟ್ ೧೫ ರಂದು ಭಾರತ ಮತ್ತು ಪಾಕಿಸ್ತಾನವೆಂಬ ಎರಡು ಸ್ವತಂತ್ರ ರಾಷ್ಟ್ರಗಳು ಉದಯಿಸಿದವು.

ಅಖಂಡ. ಸ್ವತಂತ್ರ ಭಾರತಕ್ಕಾಗಿ ಅವಿರತವಾಗಿ ಹೋರಾಡಿದ್ದ ಗುದ್ಲೆಪ್ಪನವರಿಗೆ ದೇಶವಿಭಜನೆಯು ನೋವನ್ನು ತಂದಿತು. ಆದರೂ ಗಾಂಧೀಜಿಯವರ ನೇತೃತ್ವದಲ್ಲಿ ತಮ್ಮಂಥ ಅನೇಕ ಸ್ವಾತಂತ್ರ್ಯಯೋಧರ ಅವಿಶ್ರಾಂತ ಹೋರಾಟದ ಫಲವಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದುದು ಗುದ್ಲೆಪ್ಪನವರಿಗೆ ಸಂತೋಷ ಸಂಭ್ರಮವನ್ನುಂಟುಮಾಡಿತು.

ಧಾರವಾಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಗುದ್ಲೆಪ್ಪ ಹಳ್ಳಿಕೇರಿಯವರಿಂದ ೧೯೪೭ ರ ಅಗಸ್ಟ್ ೧೫ ರಂದು ಭಾರತ ಸ್ವಾತಂತ್ರ್ಯದ ರಾಷ್ಟ್ರಧ್ವಜಾರೋಹಣವು ಹುಬ್ಬಳ್ಳಿಯ ದುರ್ಗದ ಬೈಲಿನಲ್ಲಿ ಬೃಹತ್ ಜನಸ್ತೋಮದ ನಡುವೆ ಹರ್ಷೋದ್ಗಾರಗಳ ಮಧ್ಯೆ ನಡೆಯಿತು.

ಹೀಗೆ ಗುದ್ಲೆಪ್ಪನವರು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಯಾವುದೇ ರೀತಿಯ ವೈಯಕ್ತಿಕ ಆಸೆ ಆಕಾಂಕ್ಷೆಗಳಿಲ್ಲದೆ ನಿಸ್ವಾರ್ಥ ಭಾವನೆಯಿಂದ ಅವಿಶ್ರಾಂತವಾಗಿ ದಿಟ್ಟತನದಿಂದ ಹೋರಾಡಿ ಯಶಸ್ವಿಯಾದರು. ಆರ್ಥಿಕವಾಗಿ ಸಬಲವಾಗಿದ್ದ ಮನೆತನವು ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷರ ದಂಡನೆಗಳಿಂದ ತೀರಾ ಸಂಕಷ್ಟಕ್ಕೆ ಸಿಲುಕಿದರೂ ಎದೆಗುಂದದೆ ಕುಟುಂಬದವರೆಲ್ಲರನ್ನೂ ಚಳುವಳಿಯಲ್ಲಿ ತೊಡಗಿಸಿ ಮಾದರಿಯಾದರು. ತನ್ಮೂಲಕ ನಾಡಿನ ನಾನಾ ಭಾಗದ ಜನರನ್ನೂ ಸಂಘಟಿಸಿ ಹೋರಾಟಕ್ಕೆ ಅಣಿಗೊಳಿಸಿದರು. ಈ ರೀತಿಯಾಗಿ ಗುದ್ಲೆಪ್ಪನವರು ಭಾರತ ಮಾತೆಯ ಸೇವೆಗಾಗಿ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು.

ಟಿಪ್ಪಣಿಗಳು

ಗುದ್ಲೆಪ್ಪ ಹಳ್ಳಿಕೇರಿ

೧. Basavaraj K. R., **History and Culture of Karnataka** (Dharwad : Chalukya Publications, 1984) p. 352

೨. ದಾನಿ ಸುರೇಂದ್ರ., (ಸಂ.) **ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಸಂಗ್ರಾಮ** (ಹುಬ್ಬಳ್ಳಿ : ಬುರ್ಲಿಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ. ೧೯೯೬) ಪು. ೨೦೭ - ೨೦೯

೩. ಸಿದ್ದವ್ವನಹಳ್ಳಿ ಕೃಷ್ಣಶರ್ಮ., **ಗಾಂಧಿ ಮತ್ತು ಕರ್ನಾಟಕ** (ಬೆಂಗಳೂರು : ಗಾಂಧಿ ಸ್ಮಾರಕ ನಿಧಿ. ೧೯೭೦) ಪು. ೧೧೮

೪. ಶೇಷಾದ್ರಿ ಬಿ., ಚಂದ್ರಶೇಖರ ಟಿ. ಆರ್., (ಸಂ.) **ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ** (ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ೧೯೯೮) ಪು. ೪೩

೫. Halappa G. S., (ed) **History of Freedom Movement in Karnataka,** Vol - II (Bangalore : Government of Mysore, 1964) p. 310

೬. ಹಿರೇಮಠ ಚನಬಸಯ್ಯ ನೂರೊಂದಯ್ಯ., ರಂಗ ಕಲಾವಿದರು. ಹುಬ್ಬಳ್ಳಿ., ವಾಸ : ಗೋಕರ್ಣ. ವಯಸ್ಸು : ೮೫. ೨೮ - ೧೦ - ೨೦೦೦ ರಂದು ಸಂದರ್ಶನದಲ್ಲಿ ಹೇಳಿದುದು.

೭. ಪಟ್ಟಣಶೆಟ್ಟಿ ಸಿದ್ದಲಿಂಗ., **ಹಳ್ಳಿಕೇರಿ ಗುದ್ಲೆಪ್ಪನವರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೨೦೦೦. ತೃ. ಮು.) ಪು. ೩೨

೮. **ಕರ್ನಾಟಕದಲ್ಲಿಯ ಸತ್ಯಾಗ್ರಹದ ವರದಿಯು** (೧೯೩೦ - ೩೧). (ಧಾರವಾಡ : ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿ. ೧೯೩೧) ಪು. ೪೦

೯. ದಾನಿ ಸುರೇಂದ್ರ., (ಸಂ.) **ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಸಂಗ್ರಾಮ** (ಹುಬ್ಬಳ್ಳಿ : ಬುರ್ಲಿಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ. ೧೯೯೬) ಪು. ೯೦

೧೦. ಸದಾಶಿವ ಕೆ., **ಭಾರತದ ಸ್ವಾತಂತ್ರ್ಯ ಹೋರಾಟ** (ಮೈಸೂರು : ಪ್ರಿಯದರ್ಶಿನಿ ಪ್ರಕಾಶನ. ೧೯೯೬) ಪು. ೨೦೨ ಮತ್ತು ೨೦೩

೧೧. Halappa G. S., (ed) **History of Freedom Movement in Karnataka,** Vol - II (Bangalore : Government of Mysore, 1964) p. 546 and 547

೧೨. ಮೆಣಸಿನಕಾಯಿ ಬಿ. ಎಂ., ಮಾಜಿ ಲೋಕಸಭಾ ಸದಸ್ಯರು. ಹಾವೇರಿ. ವಯಸ್ಸು : ೭೬. ೪ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೩. ಕುಲಕರ್ಣಿ ಗೋಪಣ್ಣ., ಮುಖ್ಯಾಧ್ಯಾಪಕರು. ಗಾಂಧಿ ಗ್ರಾಮೀಣ ಗುರುಕುಲ. ಹೊಸರಿತ್ತಿ. ವಯಸ್ಸು : ೭೦. ೨ - ೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೪. ಹರಕಂಗಿ ಪರಮೇಶ್ವರಗೌಡ ನಿಂಗನಗೌಡ., ಸ್ವಾತಂತ್ರ್ಯಯೋಧರು. ನೆಗಳೂರು. ಜಿ. : ಹಾವೇರಿ. ವಯಸ್ಸು : ೭೫. ೩ - ೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೫. ಅರುಣಾ ನರೇಂದ್ರ., ' ಸ್ವಾತಂತ್ರ್ಯ ಹೋರಾಟಗಾರ್ತಿ ಸುಶೀಲಮ್ಮ ಕದರಗಾರ '. ವಿಜಯ ಕರ್ನಾಟಕ. ೩ - ೬ - ೨೦೦೧

೧೬. ಹಳ್ಳಿಕೇರಿ ಗಂಗಾದೇವಿ., ಗುದ್ಲೆಪ್ಪನವರ ಧರ್ಮಪತ್ನಿ. ಹುಬ್ಬಳ್ಳಿ. ವಯಸ್ಸು : ೮೪. ೨೨ - ೧೦ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೭. ಹಳ್ಳಿಕೇರಿ ದೀನಬಂಧು., ಗುದ್ಲೆಪ್ಪನವರ ಹಿರಿಯ ಪುತ್ರ. ಹುಬ್ಬಳ್ಳಿ. ವಯಸ್ಸು : ೬೦. ೨೦ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೮. ಸಿದ್ದವ್ವನಹಳ್ಳಿ ಕೃಷ್ಣಶರ್ಮ., (ಸಂ.) **ಗಾಂಧಿ ಮತ್ತು ಕರ್ನಾಟಕ** (ಬೆಂಗಳೂರು : ಗಾಂಧಿ ಸ್ಮಾರಕ ನಿಧಿ. ೧೯೭೦) ಪು. ೩೨೮

೧೯. ಕುಲಕರ್ಣಿ ಆರ. ಜಿ., ' ಶ್ರೀ ಜಿ. ಎಸ್. ಹಳ್ಳಿಕೇರಿಯವರು '. ಗೋಕಾಕ ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪು. ೭೦

೨೦. ಮೆಣಸಿನಕಾಯಿ ಬಿ. ಎಂ., ಮಾಜಿ ಲೋಕಸಭಾ ಸದಸ್ಯರು, ಹಾವೇರಿ, ವಯಸ್ಸು : ೭೬. ೪ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೧. ಹರಕಂಗಿ ಪರಮೇಶ್ವರಗೌಡ ನಿಂಗನಗೌಡ., ಸ್ವಾತಂತ್ರ್ಯಯೋಧರು, ನೆಗಳೂರು, ಜಿ. : ಹಾವೇರಿ, ವಯಸ್ಸು : ೭೫, ೩ -೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೨. ಸದಾಶಿವ ಕೆ., **ಭಾರತದ ಸ್ವಾತಂತ್ರ್ಯ ಹೋರಾಟ** (ಮೈಸೂರು : ಪ್ರಿಯದರ್ಶಿನಿ ಪ್ರಕಾಶನ, ೧೯೯೬) ಪು. ೨೧೭

೨೩. ದೇಸಾಯಿ ಗೋವಿಂದಮೂರ್ತಿ., ' ಅಸಹಕಾರ ಆಂದೋಲನ '. ರಾಮಸ್ವಾಮಿ ಎಸ್. ಆರ್. (ಸಂ.) **ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು** (ಬೆಂಗಳೂರು : ರಾಷ್ಟ್ರೋತ್ಥಾನ ಸಾಹಿತ್ಯ, ೧೯೯೮, ದ್ವಿ. ಮು.) ಪು. ೧೮೪

೨೪. **ಕರ್ನಾಟಕದಲ್ಲಿಯ ಸತ್ಯಾಗ್ರಹದ ವರದಿಯು** (೧೯೩೦ - ೩೧)., (ಧಾರವಾಡ : ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿ, ೧೯೩೧) ಪು. ೧೦

೨೫. ಅದೇ. ಪು. ೪೬

೨೬. ಹಾರನಹಳ್ಳಿ ರಾಮಸ್ವಾಮಿ., ಸ್ವಾತಂತ್ರ್ಯಯೋಧರು, ಅಧ್ಯಕ್ಷರು, ಆಡಳಿತ ಸುಧಾರಣಾ ಆಯೋಗ, ಬೆಂಗಳೂರು, ವಯಸ್ಸು : ೭೮, ೧೭ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೭. Halappa G. S., (ed) **History of Freedom Movement in Karnataka,** Vol - II (Bangalore : Government of Mysore, 1964) p. 615

೨೮. ಹಳ್ಳಿಕೇರಿ ವ್ಹಿ. ಎಸ್., ' ಶೂರ ಸ್ವಾತಂತ್ರ್ಯ ಸೇನಾನಿ ಲಿಂ. ಶ್ರೀ ಗುದ್ಲೆಪ್ಪನವರು ಹಳ್ಳಿಕೇರಿ '. ಚುರ್ಚಿಹಾಳಮಠ ಸಿ. ಎಂ., (ಪ್ರ. ಸಂ.) ಯಾಳಗಿ ಮಹಾಲಿಂಗ., (ಸಂ.) **ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ** (ಮುಂಡರಗಿ : ಮುಂಡರಗಿ ತಾಲೂಕ ಸ್ವಾತಂತ್ರ್ಯಯೋಧರ ಸಂಘ, ೧೯೯೯) ಪು. ೮೩೩

೨೯. ಕಂಬಿ ವ್ಹಿ. ಎಸ್., **ಬಿ. ಎಂ. ಸಾಣಿಕೊಪ್ಪ : ಸ್ವಾತಂತ್ರ್ಯ ಸಮರ ಮತ್ತು ನಂತರ** (ಧಾರವಾಡ : ಶ್ರೀ ವಿದ್ಯಾ ಪ್ರಕಾಶನ, ೧೯೯೧) ಪು. ೭೧ ಮತ್ತು ೭೨

೩೦. ಅಂಗಡಿ ಪಂಚಪ್ಪ ಗುರುಬಸಪ್ಪ., ವ್ಯಾಪಾರಸ್ಥರು, ಹೊಸರಿತ್ತಿ, ವಯಸ್ಸು : ೮೭. ೩ - ೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೩೧. ಭದ್ರಾಪೂರ ನೀಲಮ್ಮ ಚನ್ನಪ್ಪ., ಸ್ವಾತಂತ್ರ್ಯಯೋಧೆ, ಹುಬ್ಬಳ್ಳಿ, ವಯಸ್ಸು : ೮೩. ೮ - ೧೧ ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೩೨. ಹಿರೇಮಠ ಚನಬಸಯ್ಯ ನೂರೊಂದಯ್ಯ., ರಂಗಕಲಾವಿದರು, ಹುಬ್ಬಳ್ಳಿ, ವಾಸ : ಗೋಕರ್ಣ, ವಯಸ್ಸು : ೮೫. ೨೮ - ೧೦ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೩೩. ಚುರ್ಚಿಹಾಳಮಠ ಸಿ. ಎಂ., ಸ್ವಾತಂತ್ರ್ಯಯೋಧರು ಮತ್ತು ಮಾಜಿ ವಿಧಾನಸಭಾ ಸದಸ್ಯರು, ಮುಂಡರಗಿ, ವಯಸ್ಸು : ೭೮. ೨೭ - ೮ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೩೪. ಪಾಟೀಲ ಬಿ. ಎಚ್., ' ಹಳ್ಳಿಗರ ಹಳ್ಳಿಕೇರಿಯವರು '. ಗೋಕಾಕ ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಸಮಿತಿ, ಕಾಂಗ್ರೆಸ್ ಭವನ, ೧೯೬೬) ಪು. ೧೮೫ ಮತ್ತು ೧೮೬

೩೫. ಹಳ್ಳಿಕೇರಿ ವ್ಹಿ. ಎಸ್., ' ಶೂರ ಸ್ವಾತಂತ್ರ್ಯ ಸೇನಾನಿ ಲಿಂ. ಶ್ರೀ ಗುದ್ಲೆಪ್ಪನವರು ಹಳ್ಳಿಕೇರಿ '. ಚುರ್ಚಿಹಾಳಮಠ ಸಿ. ಎಂ., (ಪ್ರ. ಸಂ.). ಯಾಳಗಿ ಮಹಾಲಿಂಗ (ಸಂ.) **ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ** (ಮುಂಡರಗಿ : ಮುಂಡರಗಿ ತಾಲೂಕ ಸ್ವಾತಂತ್ರ್ಯಯೋಧರ ಸಂಘ, ೧೯೯೯) ಪು. ೮೩೪

೩೬. ಕಾಮತ ಸೂರ್ಯನಾಥ., **ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ** (ಹುಬ್ಬಳ್ಳಿ : ಲೋಕಶಿಕ್ಷಣ ಟ್ರಸ್ಟ್, ಗ್ರಂಥಮಾಲೆ, ೧೯೯೨) ಪು. ೧೮

೩೭. ಅದೇ. ಪು. ೩೫

೩೮. ಅಂಗಡಿ ಪಂಚಪ್ಪ ಗುರುಬಸಪ್ಪ.. ವ್ಯಾಪಾರಸ್ಥರು. ಹೊಸರಿತ್ತಿ. ವಯಸ್ಸು : ೮೭. ೩ - ೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

ಮೆಣಸಿನಕಾಯಿ ಬಿ. ಎಂ.. ಮಾಜಿ ಲೋಕಸಭಾ ಸದಸ್ಯರು. ಹಾವೇರಿ. ವಯಸ್ಸು : ೭೬. ೪ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೩೯. ದಾನಿ ಸುರೇಂದ್ರ.. (ಸಂ.) **ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಸಂಗ್ರಾಮ** (ಹುಬ್ಬಳ್ಳಿ : ಬುರ್ಲಿಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ. ೧೯೯೬) ಪು. ೬೭ ಮತ್ತು ೬೮

೪೦. ಹಳ್ಳಿಕೇರಿ ಗಂಗಾದೇವಿ.. ಗುದ್ಲೆಪ್ಪನವರ ಧರ್ಮಪತ್ನಿ. ಹುಬ್ಬಳ್ಳಿ. ವಯಸ್ಸು : ೮೪. ೨೨ - ೧೦ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೪೧. ಅರುಣಾ ನರೇಂದ್ರ.. ' ಸ್ವಾತಂತ್ರ್ಯ ಹೋರಾಟಗಾರ್ತಿ ಸುಶೀಲಮ್ಮ ಕದರಗಾರ '. ವಿಜಯ ಕರ್ನಾಟಕ. ೩ - ೬ - ೨೦೦೧

ಅಧ್ಯಾಯ ಮೂರು

ಕರ್ನಾಟಕ ಏಕೀಕರಣ ಮತ್ತು ಇತರ ಹೋರಾಟಗಳ ನೇತೃತ್ವ

ಅಧ್ಯಾಯ ಮೂರು

ಕರ್ನಾಟಕ ಏಕೀಕರಣ ಮತ್ತು ಇತರ ಹೋರಾಟಗಳ ನೇತೃತ್ವ

ದೇಶದ ಉತ್ಕರ್ಷಕ್ಕಾಗಿ, ನಾಡಿನ ಏಳಿಗೆಗಾಗಿ ಹೋರಾಟ ಅನಿವಾರ್ಯವಾದಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರು ಅಲ್ಲಿ ಇರಲೇಬೇಕು. ಗಾಂಧೀಜಿಯವರ ಪ್ರಭಾವದಿಂದ ಪ್ರೇರಿತರಾದ ಗುದ್ಲೆಪ್ಪನವರು ಬ್ರಿಟಿಷರ ವಿರುದ್ಧ ಅಹರ್ನಿಶ ಹೋರಾಡಿ, ಅವರಿಗೆ ಸಿಂಹಸ್ವಪ್ನವಾಗಿ ಯಶಸ್ಸು ಸಾಧಿಸಿದ ವೀರಯೋಧರು. ಕನ್ನಡ ನಾಡು ನುಡಿಗೆ ಜನತೆಗೆ ಅನ್ಯಾಯವಾದಲ್ಲಿ ಅದನ್ನು ಪ್ರತಿಭಟಿಸಲು ಜನರನ್ನು ಸಂಘಟಿಸಿ ಮುಂಚೂಣಿಯಲ್ಲಿ ನಿಂತು ಮಾರ್ಗದರ್ಶನ ಮಾಡುತ್ತ ಹೋರಾಟಕ್ಕೆ ಅಣಿಗೊಳಿಸಿ ತಾವೂ ಸ್ವತಃ ಹೋರಾಡಿದರು. ಹೀಗೆ ಗುರಿ ಸಾಧಿಸುವಲ್ಲಿ ಅಚಲವಾದ ಛಲ ಗುದ್ಲೆಪ್ಪನವರದಾಗಿತ್ತು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಂತೂ ಅಧ್ವರ್ಯುವಾಗಿ ನಿಂತು ದಿಟ್ಟತನದಿಂದ ಹೋರಾಡಿದ ಕೆಚ್ಚೆದೆಯ ಧೀರರು ಅವರು. ಜವಾಬ್ದಾರಿ ಸರಕಾರದ ರಚನೆಗಾಗಿ ಮೈಸೂರ ಚಲೋ ಚಳುವಳಿ, ಹೈದರಾಬಾದ ವಿಮೋಚನೆ, ಗೋವಾ ವಿಮೋಚನೆ ಹಾಗೂ ಮಹಾಜನ ಆಯೋಗದ ಬಗೆಗಿನ ಹೋರಾಟ ಹೀಗೆ ಎಲ್ಲ ಹೋರಾಟಗಳಲ್ಲಿಯೂ ಅವರದು ಸಿಂಹಪಾಲು ಇದ್ದದ್ದೇ. ಇದರಿಂದಾಗಿ 'ಹಲವು ಹೋರಾಟಗಳ ಕಲಿ ಹಳ್ಳಿಕೇರಿ' ಎಂದರೆ ಉತ್ಪ್ರೇಕ್ಷೆಯಲ್ಲ.

ಕರ್ನಾಟಕ ಏಕೀಕರಣ ಚಳುವಳಿ :

ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಆಸ್ಥಾನ ಕವಿ ಶ್ರೀ ವಿಜಯನು ೯ ನೇ ಶತಮಾನದಷ್ಟು ಹಿಂದೆಯೇ ತನ್ನ ಕೃತಿ 'ಕವಿರಾಜ ಮಾರ್ಗ'ದಲ್ಲಿ ಹೇಳಿದಂತೆ ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ವಿಶಾಲವಾಗಿ ಹಬ್ಬಿತ್ತು. ಬ್ರಿಟಿಷ ಆಡಳಿತ ಕಾಲದಲ್ಲಿ ಅದು ಬೇರೆ ಬೇರೆ ಪ್ರಾಂತಗಳಲ್ಲಿ ಹರಿದು ಹಂಚಿಹೋಗಿತ್ತು. ಹೀಗಾಗಿ ಕನ್ನಡ ಭಾಷಿಕರ ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಅಸಾಧ್ಯವಾಗಿತ್ತು.

"ಬ್ರಿಟಿಷರ ಆಡಳಿತದಲ್ಲಿ ಕನ್ನಡ ಮಾತನಾಡುವ ಜನ ೨೦ ಆಡಳಿತ ಘಟಕಗಳಲ್ಲಿ ಹಂಚಿಹೋಗಿದ್ದರು. ಈ ಘಟಗಳು ಇಂತಿವೆ : ೧. ಮೈಸೂರು ಸಂಸ್ಥಾನ, ೨. ನೀಲಗಿರಿ, ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು, ಕೊಳ್ಳೇಗಾಲ, ಹೊಸೂರು ಮತ್ತು ಮಡಕಶಿರಾ ತಾಲೂಕುಗಳು. ಈ ಕನ್ನಡ ಪ್ರದೇಶಗಳುಳ್ಳ ಮದ್ರಾಸ್ ಪ್ರಾಂತ. ೩. ಉತ್ತರ ಕನ್ನಡ, ಬೆಳಗಾವಿ, ಧಾರವಾಡ ಮತ್ತು ವಿಜಾಪುರ ಜಿಲ್ಲೆಗಳು, ದಕ್ಷಿಣ ಮತ್ತು ಉತ್ತರ ಸೊಲ್ಲಾಪುರ, ಮಂಗಳವೇಢೆ ಮತ್ತು

ಇತರ ಕನ್ನಡ ಪ್ರದೇಶಗಳುಳ್ಳ ಮುಂಬಯಿ ಪ್ರಾಂತ, ೪. ಕೊಡಗು (ಪ್ರಧಾನ ಆಯುಕ್ತರ ಆಡಳಿತದಲ್ಲಿದ್ದುದು), ೫. ಕಲ್ಬುರ್ಗಿ, ಬೀದರ ಹಾಗೂ ರಾಯಚೂರು ಈ ಕನ್ನಡ ಜಿಲ್ಲೆಗಳನ್ನುಳ್ಳ ಹೈದರಾಬಾದ್ ಸಂಸ್ಥಾನ ೬. ರಾಯಬಾಗ, ಕಟಕೋಳ, ತೊರಗಲ್ಲು ಮತ್ತು ಇತರ ಕನ್ನಡ ಪ್ರದೇಶಗಳುಳ್ಳ ಕೊಲ್ಲಾಪುರ ಸಂಸ್ಥಾನ, ೭. ಸಾಂಗಲಿ ಸಂಸ್ಥಾನದ ತೇರದಾಳ, ಶಹಾಪುರ, ದೊಡ್ಡವಾಡ ಮತ್ತು ಶಿರಹಟ್ಟಿಗಳಂತಹ ಅಧೀನ ಪ್ರದೇಶಗಳು, ೮. ಮಿರಜ ಸಂಸ್ಥಾನ ಮತ್ತು ಲಕ್ಷ್ಮೇಶ್ವರದಂತಹ ಆಧೀನ ಪ್ರದೇಶಗಳು, ೯. ಕಿರಿ ಮಿರಜ ಸಂಸ್ಥಾನದ (ಬುಧಗಾವ) ಮತ್ತು ಗುಡಗೇರಿಯಂತಹ ಆಧೀನ ಪ್ರದೇಶಗಳು, ೧೦ ಹಿರಿ ಕುರಂದವಾಡ ಸಂಸ್ಥಾನ, ೧೧. ಕಿರಿ ಕುರಂದವಾಡ ಅಥವಾ ವಡಗಾಂವ ಸಂಸ್ಥಾನ, ೧೨. ಕುಂದಗೋಳ, ಚಿಪ್ಪಲಕಟ್ಟಿ ಮುಂತಾದವುಗಳನ್ನೊಳಗೊಂಡ ಜಮಖಂಡಿ ಸಂಸ್ಥಾನ, ೧೩. ಮುಧೋಳ ಸಂಸ್ಥಾನ, ೧೪. ಜತ್ತ ಸಂಸ್ಥಾನ, ೧೫. ಅಕ್ಕಲಕೋಟೆ ಸಂಸ್ಥಾನ, ೧೬. ಔಂಧ ಸಂಸ್ಥಾನಕ್ಕೆ ಸೇರಿದ್ದ ಗುಣದಾಳ ಗ್ರಾಮ ಸಮೂಹ, ೧೭. ರಾಮದುರ್ಗ ಸಂಸ್ಥಾನ, ೧೮. ಸೊಂಡೂರು ಸಂಸ್ಥಾನ, ೧೯. ಸವಣೂರು ಸಂಸ್ಥಾನ, ೨೦. ಕೇಂದ್ರ ಸರಕಾರದ ನೇರ ನಿಯಂತ್ರಣದಲ್ಲಿದ್ದ ಬೆಂಗಳೂರು, ಬೆಳಗಾವಿ ಮತ್ತು ಬಳ್ಳಾರಿ ದಂಡು ಪ್ರದೇಶಗಳು. "[೧] ಇವನ್ನು ಬ್ರಿಟಿಷರು ಆಡಳಿತದ ಅನುಕೂಲಕ್ಕಾಗಿ ಐದು ವಿಭಾಗಗಳನ್ನಾಗಿ ಮಾಡಿದ್ದರು. ಅವು ೧. ಮುಂಬಯಿ ಕರ್ನಾಟಕ. ೨. ಮೈಸೂರು ಕರ್ನಾಟಕ. ೩. ಹೈದರಾಬಾದ ಕರ್ನಾಟಕ, ೪. ಮದರಾಸು ಕರ್ನಾಟಕ. ೫. ಕೊಡಗು.

ಮೈಸೂರನ್ನು ಹೊರತುಪಡಿಸಿ ಉಳಿದ ಸಂಸ್ಥಾನಗಳ ರಾಜರು ಮರಾಠಿ ಭಾಷಿಕರೇ ಆಗಿದ್ದುದರಿಂದ ಆಯಾ ಪ್ರದೇಶಗಳ ಆಡಳಿತ ಭಾಷೆ ಸಹಜವಾಗಿ ಮರಾಠಿಯಾಗಿತ್ತು. ಮುಂಬಯಿ ಪ್ರಾಂತದಲ್ಲಿ ಮರಾಠಿ ಮತ್ತು ಹೈದರಾಬಾದ ಸಂಸ್ಥಾನದಲ್ಲಿ ಉರ್ದು ಮತ್ತು ಮರಾಠಿ ಭಾಷೆಗೆ ಪ್ರಾಮುಖ್ಯತೆಯಿತ್ತು. ಮದರಾಸು ಪ್ರಾಂತಕ್ಕೆ ಸೇರಿದ ಭಾಗಗಳಲ್ಲಿ ಕನ್ನಡವು ತೆಲುಗು ಮತ್ತು ತಮಿಳು ಭಾಷೆಗಳೊಂದಿಗೆ ಸ್ಪರ್ಧಿಸಬೇಕಾಗಿತ್ತು.

ಹೀಗೆ ಅನ್ಯಭಾಷೆಗಳ ಪ್ರಾಬಲ್ಯದಿಂದ ಕನ್ನಡತನ ಕಾಣದಾಗಿತ್ತು. ಅದಕ್ಕಾಗಿ ಕನ್ನಡ ಪ್ರದೇಶ. ಭಾಷೆ. ಸಂಸ್ಕೃತಿ. ಜನಜೀವನ ಸುವ್ಯವಸ್ಥಿತವಾಗಿ ಸಮೃದ್ಧಿಯಾಗಿ ಅಭಿವೃದ್ಧಿಗೊಳ್ಳಬೇಕಾದುದು ಅವಶ್ಯವಾಗಿತ್ತು. ಆದುದರಿಂದ ಪ್ರತ್ಯೇಕ ರಾಜ್ಯದ ನಿರ್ಮಾಣಕ್ಕಾಗಿ ಜನಮನ ಸಜ್ಜಾಯಿತು.

ಡೆಪ್ಯೂಟಿ ಚನ್ನಬಸಪ್ಪನವರು ೧೮೫೬ ರ ಸುಮಾರಿಗೆ ಮುಂಬಯಿ ಪ್ರಾಂತದಲ್ಲಿ ಗುಜರಾತಿ ಮತ್ತು ಮರಾಠಿ ಪಠ್ಯ ಪುಸ್ತಕಗಳಿಗೆ ಸಮನಾಗಿ ಕನ್ನಡದಲ್ಲಿಯೂ ಪಠ್ಯ ಪುಸ್ತಕಗಳನ್ನು ರಚಿಸಿ ಕನ್ನಡ ಪಂಡಿತರುಗಳಿಗೆ ಪ್ರೋತ್ಸಾಹ ನೀಡಿದರು. ಲೆಕ್ಕಪತ್ರಗಳು. ಅಂಕಿ ಮಗ್ಗಿಗಳನ್ನು ಕನ್ನಡದಲ್ಲೇ ಬರೆಯಲು ಉತ್ತೇಜಿಸಿದರು. ಇವರ ಪ್ರಾಮಾಣಿಕ ಪ್ರಯತ್ನದಿಂದಾಗಿ ಕನ್ನಡ ಶಾಲೆಗಳು ಹೆಚ್ಚಾದವು. ಮರಾಠಿಯು ಪ್ರಾಬಲ್ಯವಾಗಿದ್ದ ಆ ಕಾಲದಲ್ಲಿ ಇಂಥ ಕನ್ನಡ ಪರ ಕಾರ್ಯಗಳ ಮೂಲಕ ಕನ್ನಡಿಗರಲ್ಲಿ ಜಾಗೃತಿ ಮಾಡಿದರು.

೧೮೯೦ ರ ಜುಲೈ ೨೦ ರಂದು ಹಲವು ಅಭಿಮಾನಿಗಳ ಸಹಕಾರದೊಂದಿಗೆ ಧಾರವಾಡದಲ್ಲಿ ರಾ. ಹ. ದೇಶಪಾಂಡೆಯವರು ' ಕರ್ನಾಟಕ ವಿದ್ಯಾವರ್ಧಕ ಸಂಘ ' ವನ್ನು ಸ್ಥಾಪಿಸಿದರು. ಈ ಸಂಘವು ಕನ್ನಡ ಗ್ರಂಥಗಳ

ಹಾಗೂ ' ವಾಗ್ಭೂಷಣ ' ಎಂಬ ಮಾಸಪತ್ರಿಕೆಯ ಪ್ರಕಟನೆಯ ಮೂಲಕ ಕನ್ನಡ ಜಾಗೃತಿ ಮಾಡಿತು. ಸಂಘವು ೧೯೧೭ ರ ಅಕ್ಟೋಬರ ೭ ರಂದು ಕರ್ನಾಟಕ ಏಕೀಕರಣದ ಕುರಿತಾಗಿ ಗೊತ್ತುವಳಿಯನ್ನು ಸರ್ವಾನುಮತದಿಂದ ಸ್ವೀಕರಿಸಿತು.

೧೯೧೫ ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಮುಂದೆ ಅದನ್ನು ' ಕನ್ನಡ ಸಾಹಿತ್ಯ ಪರಿಷತ್ತು ' ಎಂದು ಕರೆಯಲಾಯಿತು. ಪರಿಷತ್ತು ತನ್ನ ಆರಂಭ ಕಾಲದ ಉದ್ದೇಶಗಳಾದ ಭಾಷೋನ್ನತಿ, ಗ್ರಂಥಾಭಿವೃದ್ಧಿ ಗಳ ಜೊತೆಗೆ ನಂತರದ ಕಾಲದಲ್ಲಿ ಕರ್ನಾಟಕ ಏಕೀಕರಣ ವಿಷಯದಲ್ಲೂ ಆಸಕ್ತಿ ವಹಿಸಿತು. ' ಕನ್ನಡ ನುಡಿ ' ಹಾಗೂ ' ಸಾಹಿತ್ಯ ಪರಿಷತ್ ಪತ್ರಿಕೆ ' ಗಳ ಮೂಲಕ ಕರ್ನಾಟಕದ ಅನೇಕ ಸಾಹಿತಿಗಳು ಕನ್ನಡದ ಹಲವಾರು ಸಮಸ್ಯೆಗಳ ಕುರಿತು ಬರೆಯುತ್ತ ಏಕೀಕರಣಕ್ಕೆ ಶ್ರಮಿಸಿದರು.

೧೯೧೬ ರಲ್ಲಿ ಧಾರವಾಡದ ಗದಿಗೆಯ್ಯ ಹೊನ್ನಾಪುರಮಠರ ಮನೆಯಲ್ಲಿ ಸೇರಿ ಆಲೂರು ವೆಂಕಟರಾಯರು, ಕಡಪಾ ರಾಘವೇಂದ್ರರಾಯರು, ನರಗುಂದಕರರು ಒಟ್ಟಾಗಿ ಸ್ಥಾಪಿಸಿದ ' ಕರ್ನಾಟಕ ಸಭಾ ' ಏಕೀಕರಣವನ್ನೇ ಪ್ರಧಾನ ವಿಷಯವನ್ನಾಗಿ ಮಾಡಿಕೊಂಡು ತನ್ನ ಕಾರ್ಯ ಆರಂಭಿಸಿತು.

೧೯೨೦, ಎಪ್ರೀಲನಲ್ಲಿ ನಾಗಪುರದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನವು ಭಾಷಾವಾರು ಪ್ರಾಂತ ರಚನೆ ಮತ್ತು ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ರಚನೆಗೆ ಸಮ್ಮತಿಸಿತು. ಇದರಿಂದ ಕರ್ನಾಟಕ ಏಕೀಕರಣ ಹೋರಾಟಕ್ಕೆ ಉತ್ತೇಜನ ದೊರೆಯಿತು. " ರಾಜಕೀಯೇತರವಾಗಿ ಕೇವಲ ಸಾಹಿತಿಗಳು ಮತ್ತು ಕನ್ನಡಾಭಿಮಾನಿಗಳ ಸಂಸ್ಥೆಯಾಗಿದ್ದ ' ಕರ್ನಾಟಕ ಸಭಾ ' ೧೯೨೪ ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಜೊತೆ ಸೇರಿ ' ಅಖಿಲ ಕರ್ನಾಟಕ ಏಕೀಕರಣ ಸಂಘ ' ಆಯಿತು. ಸಂಘದಲ್ಲಿ ಕಾಂಗ್ರೆಸ್ಸಿಗರಲ್ಲದ ಜನರೂ ಇದ್ದರು. ಕರ್ನಾಟಕ ಏಕೀಕರಣ ಸಂಘ ಕಾಂಗ್ರೆಸ್‌ನ ಬೆಂಬಲವನ್ನೂ ಪಡೆಯಿತು. " ೨

ಬೆಳಗಾವಿಯಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಕನ್ನಡ ಮತ್ತು ಕರ್ನಾಟಕಾಭಿಮಾನಿಗಳು ೧೯೨೪ ರ ಡಿಸೆಂಬರ ೨೫ ರಂದು ಅಖಿಲ ಕರ್ನಾಟಕ ಏಕೀಕರಣ ಪರಿಷತ್ತನ್ನು ಏರ್ಪಡಿಸಿದರು. ಅದರ ಅಧ್ಯಕ್ಷತೆಯನ್ನು ಮುಂಬಯಿ ವಿಧಾನ ಪರಿಷತ್ತಿನ ಉಪಸಭಾಪತಿಯಾಗಿದ್ದ ಸಿದ್ದಪ್ಪ ಕಂಬಳಿ ವಹಿಸಿದ್ದರು. ಯುವಕ ಗುದ್ಲೆಪ್ಪನವರು ಆ ಸಭೆಯಲ್ಲಿ ಪಾಲ್ಗೊಂಡಿದ್ದರು.

ಭಾರತದಲ್ಲಿಯ ಎಲ್ಲ ರಾಜಕೀಯ ಪಕ್ಷಗಳು ನಿರ್ಣಯಿಸಿದಂತೆ ಮೋತಿಲಾಲ ನೆಹರು ಅಧ್ಯಕ್ಷತೆಯ ಸಮಿತಿಯು ೧೯೨೮ ರಲ್ಲಿ ಸಲ್ಲಿಸಿದ ವರದಿಯಲ್ಲಿ ಭಾರತಕ್ಕೆ ಸಂಯುಕ್ತ ಪದ್ಧತಿಯನ್ನು ಮತ್ತು ಪೂರ್ಣ ಸ್ವರಾಜ್ಯವನ್ನು ಶಿಫಾರಸು ಮಾಡಿತ್ತು. ಅದರಲ್ಲಿ ಪ್ರಾಂತಗಳ ರಚನೆಯ ಅಗತ್ಯತೆಯೂ ಸೇರಿತ್ತು. ಇದು ಪ್ರತ್ಯೇಕ ಭಾಷಾವಾರು ಪ್ರಾಂತಗಳ ರಚನೆಗಾಗಿ ಹೋರಾಡುತ್ತಿದ್ದವರಿಗೆ ಹೆಚ್ಚಿನ ಬಲ ತಂದುಕೊಟ್ಟಿತು.

೧೯೩೫ ರ ಕಾಯ್ದೆಯ ಮೇರೆಗೆ ೧೯೩೬ ರಲ್ಲಿ ಜರುಗಿದ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಭಾಷಾವಾರು ಪ್ರಾಂತಗಳ ರಚನೆಯನ್ನು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿ ಪ್ರಚಾರ ಮಾಡತೊಡಗಿತು. ಹೀಗೆ ಭಾರತ ಸ್ವಾತಂತ್ರ್ಯ ಚಳುವಳಿ ಹಾಗೂ ಭಾಷಾವಾರು ಪ್ರಾಂತಗಳ ರಚನೆಯ ಬೇಡಿಕೆ ಒಂದಕ್ಕೊಂದು ಹತ್ತಿರ ಬಂದು ಪರಸ್ಪರ ಪೂರಕ ಮತ್ತು ಪೋಷಕವಾದವು.

ಉತ್ತಮ ಗ್ರಂಥಗಳನ್ನು ಓದುವ ಅಭಿರುಚಿಯುಳ್ಳ ಗುದ್ಲೆಪ್ಪನವರಿಗೆ ಕನ್ನಡದ ಕವಿಗಳಾದ ಕುವೆಂಪು, ದ. ರಾ. ಬೇಂದ್ರೆ ಹಾಗೂ ಇತರ ಲೇಖಕರ ಬಗೆಗೆ ತುಂಬಾ ಆದರವಿತ್ತು. ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅವರಲ್ಲಿ ಅತ್ಯಂತ ಆಸಕ್ತಿ ಅಭಿಮಾನವಿತ್ತು. ಕ್ರಿಯಾಶೀಲ ರಾಜಕಾರಣಿಯಾಗಿ ನಿರಂತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೂ ಸಹ ವಿಶ್ರಾಂತಿಯ ಅವಧಿಯಲ್ಲಿಯೇ ಕನ್ನಡ ಸಾಹಿತ್ಯ ಕೃತಿಗಳನ್ನು ಓದುವ ಅಭಿರುಚಿ ಅವರದಾಗಿತ್ತು.

ಕನ್ನಡ ನಾಡು ನುಡಿಯ ಅಭಿವೃದ್ಧಿಯಾಗಬೇಕಾದರೆ ನಾಡಿನ ಏಕೀಕರಣವಾಗದೆ ಗತ್ಯಂತರವಿಲ್ಲವೆಂಬ ಅಭಿಪ್ರಾಯಕ್ಕೆ ಗುದ್ಲೆಪ್ಪನವರು ಬಂದರು. ಅವರು ಭಾರತ ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಕರ್ನಾಟಕ ಏಕೀಕರಣ ಆಂದೋಲನದ ನೇತೃತ್ವವನ್ನೂ ವಹಿಸಿಕೊಂಡರು. ರಾಷ್ಟ್ರೀಯತೆಗೆ ಪ್ರಾಂತೀಯತೆ ಪೂರಕವಾಗಿ ನಾಡಿನ, ತನ್ಮೂಲಕ ರಾಷ್ಟ್ರದ ಸಮಗ್ರತೆ ಮತ್ತು ಸಮೃದ್ಧಿಯನ್ನು ತರುವಂತಹದಾಗಿರಬೇಕು ಎಂಬ ಸದಾಶಯ ಅವರದಾಗಿತ್ತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯತೆಯನ್ನು ಗ್ರಾಮೀಣ ಜನರಲ್ಲಿ ಬಿಂಬಿಸಿದರು. ಅದರಂತೆ ಕನ್ನಡ ನಾಡು ನುಡಿಯ ಬಗೆಗಿನ ಅಭಿಮಾನವನ್ನು ಜನತೆಯ ಮನೋಭೂಮಿಕೆಯಲ್ಲಿ ಜಾಗೃತಗೊಳಿಸಿದರು.

" ೧೯೩೬ ರಲ್ಲಿ ಬೆಳಗಾವಿಯಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ ಪರಿಣಾಮಕಾರಿಯಾಗಿ ಮತ್ತು ಪ್ರಭಾವಪೂರ್ಣವಾಗಿ ಜರುಗಿತು. ನಂತರ ೧೯೩೭ ರ ಅಕ್ಟೋಬರ ೧೦ ರಂದು ' ಕರ್ನಾಟಕ ಏಕೀಕರಣ ದಿನ ' ವೆಂದು ಅತ್ಯಂತ ಉತ್ಸಾಹ ಮತ್ತು ಸ್ಫೂರ್ತಿಯಿಂದ ಆಚರಿಸಲಾಯಿತು. ಈ ಚಳುವಳಿಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಪ್ರಮುಖರೆಂದರೆ ಎಸ್. ನಿಜಲಿಂಗಪ್ಪ, ಗುದ್ಲೆಪ್ಪ ಹಳ್ಳಿಕೇರಿ, ಜಿನರಾಜ ಹೆಗಡೆ ಮತ್ತು ಕೆ. ಆರ್. ಕಾರಂತ. ಇವರಿಗೆ ಇತರ ಎಲ್ಲ ರಾಜಕೀಯ ಮತ್ತು ಸಾಮಾಜಿಕ ಕಾರ್ಯಕರ್ತರು ಸಂಪೂರ್ಣ ಬೆಂಬಲ ಕೊಟ್ಟರು. "[೩]

ಧಾರ್ ಆಯೋಗದ ವರದಿ :

ಕರ್ನಾಟಕ ಮತ್ತು ಆಂಧ್ರದ ನಾಯಕರ ಬೇಡಿಕೆಯನ್ನು ಪರಿಶೀಲಿಸಿ ಘಟನಾ ಸಮಿತಿಯು ೧೯೪೮ ರ ಜೂನ್ ೧೭ ರಂದು ಪ್ರಕಟನೆ ಹೊರಡಿಸಿ ಭಾಷಾವಾರು ಪ್ರಾಂತಗಳ ರಚನೆಗೆ ಸಂಬಂಧಿಸಿದಂತೆ ವರದಿ ನೀಡಲು ಧಾರ್ ಆಯೋಗವನ್ನು ನೇಮಿಸಿತು. ಆಯೋಗವು ಆ ವರ್ಷದ ಡಿಸೆಂಬರ್ ೧೦ ರಂದು ಕೊಟ್ಟ ವರದಿಯಲ್ಲಿ ಐದು ನಿರ್ಣಯಗಳನ್ನು ನೀಡಿತು. ೧. ಭಾರತದ ರಾಷ್ಟ್ರೀಯ ಹಿತಕ್ಕೆ ವಿಘಾತಕವಾದ ಪ್ರಾಂತ ರಚನೆಯನ್ನು ಕೈಕೊಳ್ಳ ಕೂಡದು. ೨. ಕೇಂದ್ರ ಸರಕಾರವು ಪ್ರಾಂತೀಯ ಆಡಳಿತ ಸಮಸ್ಯೆಗಳನ್ನು ಬಗೆಹರಿಸಬೇಕು. ೩. ಪ್ರಸ್ತುತ ಪ್ರಾಂತಗಳ ಪುನರ್ ರಚನೆ

ಗಂಭೀರವಾದುದಲ್ಲ. ೪. ಮುಂದೆ ಅನುಕೂಲವಾದಾಗ ಭಾಷೆಯ ಜೊತೆಗೆ ಇನ್ನಿತರ ಅಂಶಗಳನ್ನು ಪರಿಗಣಿಸಿ ಪ್ರಾಂತರಚನೆ ಮಾಡಬಹುದು. ೫. ಪ್ರಾಂತಾಡಳಿತದ ಸಮಸ್ಯೆಗಳನ್ನು ನಿವಾರಿಸಲು ಕೇಂದ್ರದಲ್ಲಿಯೇ ಯೋಗ್ಯ ಅಧಿಕಾರಿಗಳನ್ನು ನೇಮಿಸಬೇಕು.

ಧಾರ್ ಸಮಿತಿಯ ವರದಿಯು ಭಾಷಾವಾರು ಪ್ರಾಂತರಚನೆಗೆ ಪ್ರತಿಕೂಲವಾದುದರಿಂದ ಎಲ್ಲೆಡೆಯೂ ಜನರು ಪ್ರತಿಭಟನೆ ವ್ಯಕ್ತಪಡಿಸಿದರು.

" ೧೯೪೮ ರಲ್ಲಿ ಏಕೀಕರಣಕ್ಕಾಗಿ ಕೇಂದ್ರ ಸರಕಾರದ ಮೇಲೆ ಒತ್ತಡ ತರಲು ಗುದ್ಲೆಪ್ಪನವರ ನೇತೃತ್ವದ ಸರ್ವಪಕ್ಷಗಳ ಮುಖಂಡರ ನಿಯೋಗವೊಂದು ದೆಹಲಿಗೆ ತೆರಳಿತು. ಅಲ್ಲಿ ಪ್ರಧಾನಮಂತ್ರಿ ಜವಾಹರಲಾಲ ನೆಹರೂ ಮತ್ತು ಜಿ. ವಿ. ಮಾವಳಂಕರ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಅವರುಗಳು ಏಕೀಕರಣದ ಕುರಿತು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆ ನೀಡಿದರು. "[೪] ಎಂದು ಆಯೋಗದ ಜೊತೆಗೆ ಹೋಗಿದ್ದ ಕಾಂಗ್ರೆಸ್ ಕಾರ್ಯಕರ್ತ ಸಿ. ಜೆ. ಕಮಲಾನಿ ಹೇಳುತ್ತಾರೆ.

ಜೆ. ವಿ. ಪಿ. ಸಮಿತಿ :

ಧಾರ್ ಆಯೋಗದ ವರದಿಯ ವಿರುದ್ಧ ಜನರು ಪ್ರತಿಭಟನೆ ವ್ಯಕ್ತಪಡಿಸಿದ್ದನ್ನು ಗಮನಿಸಿದ ಕಾಂಗ್ರೆಸ್ ೧೯೪೮ ರ ಡಿಸೆಂಬರ ೧೮ ಮತ್ತು ೧೯ ರಂದು ಜೈಪುರದಲ್ಲಿ ಜರುಗಿದ ಅಧಿವೇಶನದಲ್ಲಿ ಮೂವರು ಸದಸ್ಯರ ಸಮಿತಿ ರಚಿಸಿ ಭಾಷಾವಾರು ಪ್ರಾಂತಗಳ ರಚನೆಯ ಬಗ್ಗೆ ವರದಿ ಸಲ್ಲಿಸಲು ಕೇಳಿಕೊಂಡಿತು. ಈ ಸಮಿತಿಯಲ್ಲಿ ಜವಾಹರಲಾಲ ನೆಹರು, ವಲ್ಲಭಭಾಯಿ ಪಟೇಲ ಹಾಗೂ ಪಟ್ಟಾಭಿ ಸೀತಾರಾಮಯ್ಯ ಇದ್ದರು. ಇದಕ್ಕೆ ಜೆ. ವಿ. ಪಿ. ಸಮಿತಿ ಎಂದು ಕರೆಯಲಾಯಿತು.

೧೯೪೯ ರ ಎಪ್ರೀಲ ೧ ರಂದು ಪ್ರಕಟವಾದ ಈ ಸಮಿತಿಯ ವರದಿಯಲ್ಲಿ ಆಂಧ್ರ ಪ್ರಾಂತ ರಚನೆಯ ನಿರ್ಮಾಣಕ್ಕೆ ಒಲವು ತೋರಿ ಅನಂತರ ಇತರೆ ಯಾವುದೇ ಪ್ರಾಂತ ರಚನೆಯ ವಿಷಯವನ್ನು ವಿಚಾರಿಸಬಹುದೆಂದು ತಿಳಿಸಿತು. ಈ ವರದಿಯಿಂದ ಕರ್ನಾಟಕದ ಜನತೆಗೆ ಬಹಳ ಅಸಂತೋಷ ಉಂಟಾಯಿತು. ಇದರಿಂದ ಏಕೀಕರಣ ಇನ್ನಷ್ಟು ದೂರ ಹೋಗುತ್ತಿದೆಯೇನೋ ಎಂಬ ಭಾವನೆಯಿಂದ ಹೋರಾಟಗಾರರೆಲ್ಲ ಇದನ್ನು ಖಂಡಿಸಿದರು. ೧೯೪೯ ಮೇ ೮ ರಂದು ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಸಭೆ ಸೇರಿ ತನಗಾದ ನಿರಾಸೆಯನ್ನು ವ್ಯಕ್ತಪಡಿಸಿತು.

ಗುಲಬರ್ಗಾದಲ್ಲಿ ಏಕೀಕರಣ ಪರಿಷತ್ತು :

ಗುಲಬರ್ಗಾದಲ್ಲಿ ೧೯೪೯ ಮಾರ್ಚ್ ೬ ರಂದು ಕರ್ನಾಟಕ ಏಕೀಕರಣ ಪರಿಷತ್ತು ಕೊನೆಯ ಬಾರಿ (೧೨ ನೇ ಪರಿಷತ್ತು) ಸಮಾವೇಶಗೊಂಡಿತ್ತು. ಅದೇ ಕಾಲಕ್ಕೆ ಉತ್ತಂಗಿ ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ೩೨ ನೆಯ ಕನ್ನಡ ಸಾಹಿತ್ಯ ಸಮ್ಮೇಳನವೂ ಗುಲಬರ್ಗಾದಲ್ಲಿಯೇ ಜರುಗಿ (೧೯೪೯ ರ ಮಾರ್ಚ್ ೫ ರಿಂದ ೭ ರ ವರೆಗೆ) ಕರ್ನಾಟಕ ಏಕೀಕರಣದ ಕುರಿತು ನಿರ್ಣಯ ಸ್ವೀಕರಿಸಿತು.

" ಕೊನೆಯ ಕರ್ನಾಟಕ ಏಕೀಕರಣ ಪರಿಷತ್ತು ಕೆ. ಬಿ. ಜಿನರಾಜ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ ೬ ರಂದು ಸಮಾವೇಶಗೊಂಡಾಗ ಕರ್ನಾಟಕದ ಬಹುತೇಕ ರಾಜಕೀಯ ನಾಯಕರು, ಸಾಹಿತಿಗಳು, ಕಲಾವಿದರು ಅದರಲ್ಲಿ ಪಾಲ್ಗೊಂಡಿದ್ದರು. ೫ ನೇ ತಾರೀಖು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಒಂದು ಸಾವಿರದಷ್ಟೂ ಜನ ಇರಲಿಲ್ಲ. ಆದರೆ ಆರನೆಯ ತಾರೀಖಿನ ಏಕೀಕರಣ ಅಧಿವೇಶನಕ್ಕೆ ಐದು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರೆಂದು ' ನುಡಿ ' ಪತ್ರಿಕೆಯ ವರದಿ ತಿಳಿಸುತ್ತದೆ. " [೫]

ಕನ್ನಡಿಗರ ಪ್ರಮುಖ ಗುರಿ ಕರ್ನಾಟಕ ಏಕೀಕರಣವೇ ಆಗಿದ್ದುದರಿಂದ ಬಹು ಸಂಖ್ಯೆಯ ಕನ್ನಡಿಗರು ಸಂಘಟನೆಯ ಮೂಲಕ ಬಲವನ್ನು ಪ್ರದರ್ಶಿಸಿ ಕೇಂದ್ರ ಸರಕಾರದ ಗಮನ ಸೆಳೆಯುವ ಉದ್ದೇಶ ಇಲ್ಲಿ ವ್ಯಕ್ತವಾಗುತ್ತದೆ.

" ಕರ್ನಾಟಕ ಏಕೀಕರಣಕ್ಕಿದ್ದ ಬಹು ದೊಡ್ಡ ಸಂವಿಧಾನಾತ್ಮಕ ತೊಡಕು ದೇಶೀಯ ಸಂಸ್ಥಾನಗಳ ಅಸ್ತಿತ್ವ. ಅವು ಭಾರತ ಒಕ್ಕೂಟದಲ್ಲಿ ಲೀನವಾಗುವ ತನಕ ಕರ್ನಾಟಕ ಏಕೀಕರಣವಾಗುವ ಸಂಭವ ಇರಲಿಲ್ಲ. ೧೯೪೪ ರ ಗುಲ್ಬರ್ಗಾ ಏಕೀಕರಣ ಪರಿಷತ್ತಿನ ಸಂದರ್ಭಕ್ಕೆ ಆ ಅಡಚಣೆ ಇರಲಿಲ್ಲವಾದರೂ ಘಟನಾತ್ಮಕ ಆಡಳಿತ ಮುಖ್ಯರಾಗಿ ಮೈಸೂರು ಮಹಾರಾಜರಿರಬೇಕು ಎಂಬ ಮೈಸೂರು ಸಂಸ್ಥಾನಿಕರ ಬೇಡಿಕೆಯೇ ಪ್ರಮುಖ ವಿವಾದವಾಗಿತ್ತು. ಟಿ. ಸುಬ್ರಹ್ಮಣ್ಯಂ ಮಂಡಿಸಿ, ನೆಸ್ವಿ, ಹಳ್ಳಿಕೇರಿ ಗುದ್ಲೆಪ್ಪ ಅವರು ಬೆಂಬಲಿಸಿ, ಕೋ. ಚನ್ನಬಸಪ್ಪ, ಸರ್ದಾರ ಶರಣಗೌಡ ಇನಾಂದಾರ್ ಮುಂತಾದವರು ಪ್ರತಿಭಟಿಸಿ ಪಾಟೀಲ ಪುಟ್ಟಪ್ಪನವರು ತಿದ್ದುಪಡಿ ತಂದ ಗೊತ್ತುವಳಿಯು ಮತಕ್ಕೆ ಹಾಕಿದಾಗ ಸ್ವೀಕೃತವಾಯಿತು. " [೬]

ದಾವಣಗೆರೆ ಸಮ್ಮೇಳನ :

ಏಕೀಕರಣದ ಹೋರಾಟಕ್ಕೆ ಯುವಕರ ಬೆಂಬಲ ಅಗತ್ಯವೆಂದು ಮನಗಂಡು ಕರ್ನಾಟಕ ಯುವಕ ಪರಿಷತ್ತಿನ ಆಶ್ರಯದಲ್ಲಿ ೧೯೪೪ ರ ಜುಲೈ ೭ ಮತ್ತು ೮ ರಂದು ಕರ್ನಾಟಕ ಏಕೀಕರಣ ಸಮ್ಮೇಳನ ದಾವಣಗೆರೆಯಲ್ಲಿ ಜರುಗಿತು.

ಕೆ. ಎಂ. ರುದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ನೇತಾಜಿ ಸುಭಾಸ ಚಂದ್ರ ಭೋಸರ ಅಣ್ಣ ಶರತ್‌ಚಂದ್ರ ಭೋಸರು ಸಮ್ಮೇಳನ ಉದ್ಘಾಟಿಸಿ ಕರ್ನಾಟಕ ಪ್ರಾಂತ ನಿರ್ಮಾಣದ ಚಳುವಳಿಗೆ ಬಂಗಾಳದ ಯುವಕರ ಬೆಂಬಲವನ್ನೂ ದೊರಕಿಸಿಕೊಡುವ ಭರವಸೆ ನೀಡಿದರು. ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಗುದ್ಲೆಪ್ಪನವರು ಏಕೀಕರಣದ ಈ ಚಳುವಳಿಯಲ್ಲಿ ಯುವಕರು ಕ್ರಿಯಾಶೀಲರಾಗಿ ಪಾಲ್ಗೊಂಡು ಯಶಸ್ವಿಗೊಳಿಸಲು ಕರೆಕೊಟ್ಟರು.

ಹೈದರಾಬಾದಿನಲ್ಲಿ ವಿದ್ಯಾರ್ಥಿಗಳ ಸಮ್ಮೇಳನ :

ಗುದ್ಲೆಪ್ಪನವರು ಏಕೀಕರಣಕ್ಕಾಗಿ ಹೋರಾಡಲು ಅನೇಕ ಕಡೆ ದಣಿವರಿಯದೆ ಪ್ರವಾಸ ಮಾಡಿ ಯುವಕರನ್ನು, ವಿದ್ಯಾರ್ಥಿಗಳನ್ನು ತಮ್ಮ ಸ್ಫೂರ್ತಿಯುತ ಭಾಷಣಗಳ ಮೂಲಕ ಹುರಿದುಂಬಿಸುತ್ತಿದ್ದರು. ಗುಲಬರ್ಗಾದ ಚನ್ನಬಸಪ್ಪ ಕುಳಗೇರಿ ಅವರು ಹೀಗೆ ಹೇಳುತ್ತಾರೆ : " ಹೈದರಾಬಾದಿನ ಜಿ. ಎಸ್. ಮೇಲುಕೋಟೆ ಅವರ ಮನೆಯಲ್ಲೇ ಕನ್ನಡ

ವಿದ್ಯಾರ್ಥಿಗಳ ಒಂದು ಸಮ್ಮೇಳನ ನಡೆಯಿತು. ಆ ಸಮ್ಮೇಳನಕ್ಕೆ ಬಂದಿದ್ದ ಗುದ್ಲೆಪ್ಪ ಹಳ್ಳಿಕೇರಿ ಅವರು ಮಾಡಿದ ಇಂಗ್ಲೀಷ - ಕನ್ನಡ ಭಾಷೆಗಳ ಭಾಷಣ ಅತ್ಯಂತ ಪರಿಣಾಮಕಾರಿಯಾಗಿತ್ತು. ಅಲ್ಲಿ ಸೇರಿದ್ದ ವಿದ್ಯಾರ್ಥಿಗಳೆಲ್ಲರೂ ಕನ್ನಡಿಗರೆಲ್ಲ ಒಂದು ರಾಜ್ಯವಾಗಿ ಒಂದುಗೂಡುವುದಕ್ಕಾಗಿ ಹೋರಾಡಲು ಪ್ರತಿಜ್ಞೆ ಮಾಡಿದರು." ೭

ಎಸ್. ನಿಜಲಿಂಗಪ್ಪ ಮತ್ತು ಗುದ್ಲೆಪ್ಪನವರ ಪ್ರೇರಣೆಯಿಂದ ಬೀದರಿನ ಆರ್. ವಿ. ಬಿಡಪ ಅವರು ಏಕೀಕರಣ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಬೀದರ. ಗುಲಬರ್ಗಾ ಮತ್ತು ರಾಯಚೂರು ಕರ್ನಾಟಕಕ್ಕೆ ಸೇರಬೇಕೆಂದು ಹೋರಾಟ ನಡೆಸಿದರು. ೮

೧೯೫೩ ರಲ್ಲಿ ಜನೆವರಿಯಲ್ಲಿ ಹೈದರಾಬಾದಿನ ನಾನಲನಗರದಲ್ಲಿ ನಡೆದ ಕಾಂಗ್ರೆಸ್‌ನ ಮಹಾ ಅಧಿವೇಶನದಲ್ಲಿ ಕರ್ನಾಟಕ ರಾಜ್ಯ ನಿರ್ಮಾಣದ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವದೆಂದೂ ಕನ್ನಡ ಜನತೆ ನಿರೀಕ್ಷಿಸಿತ್ತು. ಆದರೆ ದಿಲ್ಲಿಯ ಚರ್ಚೆ ಮತ್ತು ನಿರ್ಧಾರಗಳು ತದ್ವಿರುದ್ಧವಾಗಿ ನಡೆದವು. ಆಂಧ್ರದ ಹೊರತಾಗಿ ಇನ್ನಾವ ಭಾಷಾವಾರು ರಾಜ್ಯ ರಚನೆಯನ್ನೂ ಸದ್ಯಕ್ಕೆ ಕೈಕೊಳ್ಳಲಾಗುವದಿಲ್ಲ ಎಂದು ಕಾಂಗ್ರೆಸ್ ನಿರ್ಣಯ ಸ್ವೀಕರಿಸಿತು.

ಈ ನಿರ್ಣಯವನ್ನು ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಅನೇಕ ಪ್ರಮುಖ ನಾಯಕರು ಪ್ರತಿಭಟಿಸಿದರು. ಅವರಲ್ಲಿ ಗುದ್ಲೆಪ್ಪನವರು ಪ್ರಮುಖರು. ಗುದ್ಲೆಪ್ಪನವರು ಯಾವುದೇ ಸಮಸ್ಯೆಯ ಪರಿಹಾರಕ್ಕೆ ದಿಢೀರನೆ ನಿರ್ಧಾರಕ್ಕೆ ಬರದೇ ಸಮಾಧಾನ ಚಿತ್ತದಿಂದ ಆಲೋಚಿಸಿ. ಯೋಜನಾಬದ್ಧವಾಗಿ ಬಗೆಹರಿಸುವ ಉಪಾಯ ಅವರಲ್ಲಿತ್ತು.

ಹೊಸರಿತ್ತಿಯಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು – ರೈತ ಪರಿಷತ್ತು :

ಸ್ವಾತಂತ್ರ್ಯ ಪೂರ್ವದಲ್ಲಿ ಗುದ್ಲೆಪ್ಪನವರು ಸ್ವಗ್ರಾಮವಾದ ಹೊಸರಿತ್ತಿಯ ಗುದ್ದಲಿ ಸ್ವಾಮಿ ಜಾತ್ರೆಯ ಕಾಲಕ್ಕೆ ರೈತ ಪರಿಷತ್ತನ್ನು ಸಂಘಟಿಸಿ ರೈತರಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಮಾಡುತ್ತಿದ್ದರು. ಸ್ವಾತಂತ್ರ್ಯಾನಂತರವೂ ತಮ್ಮ ಮತ್ತೊಂದು ಮಹತ್ವದ ಗುರಿಯಾದ ಕರ್ನಾಟಕ ಏಕೀಕರಣಕ್ಕಾಗಿ ಗ್ರಾಮೀಣ ರೈತರಲ್ಲಿ ಜನಜಾಗೃತಿಯುಂಟಾಗಬೇಕೆಂದು ಬಯಸಿ ರೈತ ಪರಿಷತ್ತಿನ ಪರಂಪರೆಯನ್ನು ಮುಂದುವರಿಸಿದರು.

ಹೊಸರಿತ್ತಿಯ ವರದಾ ನದಿ ತೀರದ ಬಯಲಿನಲ್ಲಿ ೧೯೫೨ ಡಿಸೆಂಬರ ೨೨ ರಂದು ಗುದ್ಲೆಪ್ಪನವರು ರೈತ ಪರಿಷತ್ತನ್ನು ಸಂಘಟಿಸಿದ್ದರು. ಕನ್ನಡ ಭಾಷೆಯನ್ನಾಡುವ ಎಲ್ಲ ಜಿಲ್ಲೆಗಳಿಂದ ಬಂದ ರೈತರು ಇದರಲ್ಲಿ ಪಾಲ್ಗೊಂಡಿದ್ದರು.

ಅದೇ ಭವ್ಯ ಮಂಟಪದಲ್ಲಿ ಕರ್ನಾಟಕ ಏಕೀಕರಣ ಪರಿಷತ್ತನ್ನೂ ಗುದ್ಲೆಪ್ಪನವರು ಸಂಘಟಿಸಿದ್ದರು. ಮುಂಬಯಿ. ಹೈದರಾಬಾದ. ಮದ್ರಾಸ್. ಕೇರಳ. ಮೈಸೂರು ಭಾಗದ ಜಿಲ್ಲೆಗಳ ಕನ್ನಡಿಗ ಗಣ್ಯರು ಉಪಸ್ಥಿತರಿದ್ದರು. ದಾವಣಗೆರೆಯ ಶ್ರೀಮತಿ ಸಿದ್ದಮ್ಮ ಬಳ್ಳಾರಿ ಅಧ್ಯಕ್ಷರಾಗಿದ್ದ ಈ ಪರಿಷತ್ತನ್ನು ಗದುಗಿನ ದಾನಶೂರ ಬಸರಿಗಿಡದ ವೀರಪ್ಪನವರು ಉದ್ಘಾಟಿಸಿದರು.

ಈ ಸಮ್ಮೇಳನದಿಂದಾಗಿ ಕರ್ನಾಟಕದ ರೈತರಲ್ಲಿ. ರೈತ ಮಹಿಳೆಯರಲ್ಲಿ ಏಕೀಕರಣದ ಅವಶ್ಯಕತೆಯು ಮನದಟ್ಟಾಯಿತು.

ಕರ್ನಾಟಕದ ಏಕೀಕರಣ ವಿಳಂಬವಾಗುತ್ತಿರುವುದನ್ನು ಪ್ರತಿಭಟಿಸಿ ಕೇಂದ್ರ ಸರಕಾರದ ಮೇಲೆ ಒತ್ತಾಯ ತರಲು ಗುದ್ಲೆಪ್ಪನವರು ಹೊಸಮನಿ ಸಿದ್ಧಪ್ಪನರನ್ನೊಡಗೂಡಿ ಹಾವೇರಿಯಲ್ಲಿ ರೈಲು ತಡೆ ಚಳುವಳಿ ಮಾಡಿದರು. ಅದೇ ರೀತಿ ಹುಬ್ಬಳ್ಳಿ, ಅಣ್ಣಿಗೇರಿ ಮುಂತಾದ ಕಡೆ ರೈಲು ತಡೆ ಚಳುವಳಿ ಕೈಕೊಂಡರು.

ಆಮರಣ ಉಪವಾಸ ನಿಲ್ಲಿಸಿದುದು :

೧೯೫೨ ಅಗಸ್ಟ ೨೫ ರಂದು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡದಲ್ಲಿ ನಾರಾಯಣ ಪೈ ಅವರು ಕರ್ನಾಟಕ ಏಕೀಕರಣಕ್ಕಾಗಿ ಆಗ್ರಹಿಸಿ ಆಮರಣ ಉಪವಾಸ ಕೈಕೊಂಡಿದ್ದರು. ಉಪವಾಸದ ೯ ನೇ ದಿನದಂದು ಗುದ್ಲೆಪ್ಪನವರೊಂದಿಗೆ ಎಸ್. ನಿಜಲಿಂಗಪ್ಪ, ಚನ್ನಪ್ಪ ಭದ್ರಾಪೂರ, ವೆಂಕಟೇಶ ಮಾಗಡಿ, ವ್ಹಿ. ಬಿ. ಶಾಸ್ತ್ರೀಮಠ, ಶಂಕರಗೌಡ ಪಾಟೀಲ ಅದರಗುಂಚಿ ಇವರುಗಳು ಅಲ್ಲಿಗೆ ತೆರಳಿದರು. ಏಕೀಕರಣದ ಬಗ್ಗೆ ನಾವೆಲ್ಲ ಕೂಡಿ ಹೋರಾಡೋಣ ಎಂದು ಮನವೊಲಿಸಿ ಹಣ್ಣಿನ ರಸ ಕೊಟ್ಟು ಉಪವಾಸ ನಿಲ್ಲಿಸಿದರು.

ಏಕೀಕರಣಕ್ಕಾಗಿ ವಿಳಂಬ ನೀತಿ ಅನುಸರಣೆಯ ವಿರುದ್ಧ ಪ್ರತಿಭಟಿಸಿ ಹುಬ್ಬಳ್ಳಿ ತಾಲೂಕ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶಂಕರಗೌಡ ಪಾಟೀಲರು ತಮ್ಮ ಸ್ವಗ್ರಾಮವಾದ ಹುಬ್ಬಳ್ಳಿ ತಾಲೂಕಿನ ಅದರಗುಂಚಿಯ ಕಲ್ಮೇಶ್ವರ ದೇವಸ್ಥಾನದಲ್ಲಿ ೧೯೫೩ ಮಾರ್ಚ ೨೮ ರಂದು ಆಮರಣ ಉಪವಾಸವನ್ನು ಕೈಕೊಂಡರು.

ಈ ಘಟನೆಯು ಗುದ್ಲೆಪ್ಪನವರು ಸ್ಥಾಪಿಸಿದ ' ನವಯುಗ ' ಹಾಗೂ ಎಲ್. ಎಸ್. ಪಾಟೀಲರ ' ತರುಣ ಕರ್ನಾಟಕ ' ದಿನಪತ್ರಿಕೆಗಳಲ್ಲಿ ಪ್ರಚಾರ ಪಡೆದು ನಾಡಿನಲ್ಲೆಲ್ಲ ಜನಜಾಗೃತಿಯುಂಟಾಗಿ ಶಂಕರಗೌಡರನ್ನು ಕಾಣಲು ದಿನದಿಂದ ದಿನಕ್ಕೆ ಜನಸಂದಣಿಯು ಹೆಚ್ಚಾಗುತ್ತಿತು. ಗುದ್ಲೆಪ್ಪನವರು ಮತ್ತು ಅವರ ಧರ್ಮಪತ್ನಿ ಶ್ರೀಮತಿ ಗಂಗಾದೇವಿಯವರು ಶಂಕರಗೌಡರ ಯೋಗಕ್ಷೇಮ ವಿಚಾರಿಸಿ, ಹೋರಾಟದ ಮುಂದಿನ ಯೋಜನೆಗಾಗಿ ಚರ್ಚಿಸುತ್ತಿದ್ದರು.

ಸೊಲ್ಲಾಪುರದ ಶ್ರೀಮತಿ ಜಯದೇವಿತಾಯಿ ಲಿಗಾಡೆ ಅವರು ಉಪವಾಸದ ಬೆಂಬಲಾರ್ಥವಾಗಿ ತಮ್ಮ ರಕ್ತಾಂಕಿತದ ಪತ್ರ ಬರೆದರು. ಇಂಥ ಅನೇಕ ರಕ್ತಾಂಕಿತ ಪತ್ರಗಳು ಶಂಕರಗೌಡರಿಗೆ ಬಂದವು. ನಾಡಿನ ನಾನಾ ಭಾಗದ ಮುಖಂಡರು ಆಗಮಿಸಿ ಭೇಟಿಯಾಗಿ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿದರು. ಬೆಳಗಾವಿ. ವಿಜಾಪುರ. ಗುಲಬರ್ಗಾ. ರಾಯಚೂರು. ಬಳ್ಳಾರಿ ಜಿಲ್ಲಾ ಹಾಗೂ ತಾಲೂಕ ಕಾಂಗ್ರೆಸ್ ಸಮಿತಿಗಳು ಇವರಿಗೆ ಬೆಂಬಲಾರ್ಥವಾಗಿ ಠರಾವುಗಳನ್ನು ಪಾಸು ಮಾಡಿ ಕಳಿಸಿದ್ದವು.

ಉಪವಾಸದ ಬೆಂಬಲಾರ್ಥವಾಗಿ ಏಪ್ರಿಲ್ ೧೪ ರಂದು ಕೆ. ಎಸ್. ಪಾಟೀಲರ ಅಧ್ಯಕ್ಷತೆಯಲ್ಲಿ ಅಂದಾನೆಪ್ಪ ದೊಡ್ಡಮೇಟಿಯವರೂ. ೧೫ ರಂದು ಮಳಿಯೆ ಗೋವರ್ಧನರಾಯರ ಅಧ್ಯಕ್ಷತೆಯಲ್ಲಿ ತಲ್ಲೂರ ರಾಯನಗೌಡರೂ.

೧೬ ರಂದು ಕೆ. ಎಸ್. ಪಾಟೀಲರ ಅಧ್ಯಕ್ಷತೆಯಲ್ಲಿ ಶಾಂತಿನಾಥ ಇಂಗಳೆಯವರೂ. ೧೭ ರಂದು ಗುದ್ಲೆಪ್ಪ ಹಳ್ಳಿಕೇರಿ ಅಧ್ಯಕ್ಷತೆಯಲ್ಲಿ ವಿಜಾಪುರದ ರಾಜಾರಾಮ ದುಬೆ, ಬಾಗಲಕೋಟೆಯ ಪಿ. ಎಂ. ನಾಡಗೌಡರು, ಸರದಾರ ವೀರನಗೌಡ ಪಾಟೀಲ, ಮುಗುಟಖಾನ ಹುಬ್ಬಳ್ಳಿಯ ಚಿನ್ಮಯಸ್ವಾಮಿ ಓಂಕಾರಮಠ ಮುಂತಾದವರು ಸಾರ್ವಜನಿಕ ಬಾಷಣ ಮಾಡಿದರು. ಇದರಿಂದಾಗಿ ಜನರಲ್ಲಿ ಏಕೀಕರಣಕ್ಕೋಸ್ಕರ ಕ್ರಾಂತಿಯೇಳುವ ಸ್ಥಿತಿ ಬಂದೊದಗಿತು.

ಆಗ ಕೆ. ಪಿ. ಸಿ. ಸಿ. ಯ ಪ್ರಧಾನ ಕಾರ್ಯದರ್ಶಿಗಳೂ ಹಾಗೂ ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಗುದ್ಲೆಪ್ಪನವರ ಮೇಲೆ ಹೆಚ್ಚಿನ ಜವಾಬ್ದಾರಿಯಿತ್ತು. ಮುಂಬಯಿ ಪ್ರಾಂತ ಅಸೆಂಬ್ಲಿ ಅಧಿವೇಶನವು ಏಪ್ರಿಲ್ ೧೬ ಕ್ಕೂ, ದೆಹಲಿಯ ಸಂಸತ್ ಅಧಿವೇಶನವು ಏಪ್ರಿಲ್ ೧೭ ಕ್ಕೂ ಮುಕ್ತಾಯವಾಗುತ್ತಿತ್ತು. ಹೀಗಾಗಿ ಸಂಸತ್ ಹಾಗೂ ಅಸೆಂಬ್ಲಿ ಸದಸ್ಯರುಗಳು ಪಾಲ್ಗೊಳ್ಳುವಂತೆ ಮಾಡಲು ಏಪ್ರಿಲ್ ೧೯ ರಂದು ಹುಬ್ಬಳ್ಳಿಯ ಟೌನ್ ಹಾಲ್‌ದಲ್ಲಿ ಮಧ್ಯಾಹ್ನ ಒಂದು ಗಂಟೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಸಭೆಯನ್ನು ಸಂಸತ್ತಿನ ಸದಸ್ಯರೂ ಹಾಗೂ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಗುದ್ಲೆಪ್ಪನವರು ಕರೆದರು.

ಅಂದಿನ ಐತಿಹಾಸಿಕ ಸಭೆಯ ನಿರ್ಣಯ ತಿಳಿದುಕೊಳ್ಳಲು ನಗರಗಳ ಜನರ ಜೊತೆಗೆ ಹಳ್ಳಿ ಹಳ್ಳಿಗಳಿಂದ ಜನರು ಚಕ್ಕಡಿಗಳಲ್ಲಿ ಬಂದರು. ಏಕೀಕರಣದ ವಿಳಂಬ ಪ್ರತಿಭಟಿಸಿ ಚಕ್ಕಡಿಗಳಿಗೆ ಕಪ್ಪು ಬಾವುಟ ಕಟ್ಟಿದ್ದರು. ಹುಬ್ಬಳ್ಳಿಯ ತುಂಬ ಜನಸಾಗರ ಸೇರಿತ್ತು. ಚಹಾದ ಅಂಗಡಿಗಳಲ್ಲಿ ಚಹಾ - ನೀರು ಸಿಗದಂತಾಯಿತು. ನಾಯಕರ ಹಾಗೂ ಕಾಂಗ್ರೆಸ್‌ನ ಸ್ಪಷ್ಟ ನಿರ್ಣಯವನ್ನು ತಿಳಿಯಬಯಸಿದ ಜನರು ಟೌನ್‌ಹಾಲ್ ಸುತ್ತ ಸೇರಿ, ಕ್ಷೋಭೆಗೊಂಡು ಹಿಂಸಾಚಾರಕ್ಕಿಳಿದರು. ಕಲ್ಲು ತೂರಿ ಟೌನ್‌ಹಾಲ್‌ನ ಕಿಟಕಿಯ ಕಾಜುಗಳನ್ನು ಒಡೆದು ಕಾಂಗ್ರೆಸ್‌ನ ಜೀಪನ್ನು ಸುಟ್ಟರು. ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದರು. ಹೆದರದ ಜನ ಮುಖಂಡರತ್ತ ಕಲ್ಲುಗಳನ್ನು ತೂರಿ ಗಾಯಗೊಳಿಸಿದರು. ಸಂಸತ್ ಸದಸ್ಯ ತಿ. ರು. ನೆಶ್ವಿ ಅವರ ಹಣೆಗೆ ಕಲ್ಲೇಟು ಬಿದ್ದು ರಕ್ತ ಸುರಿಯಿತು. ನಿಜಲಿಂಗಪ್ಪನವರಿಗೂ ಪೆಟ್ಟು ಬಿತ್ತು, ಹಾಗೂ ಕೆಲವು ಮುಖಂಡರಿಗೂ ಚಿಕ್ಕ ಪುಟ್ಟ ಗಾಯಗಳಾದವು.

ಟೌನ್‌ಹಾಲ್‌ನಿಂದ ಹೊರಬಂದು ಜನರನ್ನು ಸ್ವಾಂತನಗೊಳಿಸುವ ಧೈರ್ಯ ಯಾರಿಗೂ ಇರಲಿಲ್ಲ. ಆದರೆ ಗುದ್ಲೆಪ್ಪನವರು ಧೈರ್ಯದಿಂದ ಹೊರಗೆ ಬಂದು ಪೊಲೀಸ್ ವಾಹನದ ಮೇಲೆ ನಿಂತು ಕಾಂಗ್ರೆಸ್‌ನ ನಿರ್ಣಯದ ಪ್ರತಿಯನ್ನು ಕೈಯಲ್ಲಿ ಎತ್ತಿ ಹಿಡಿದು ಜನರಿಗೆ ತಿಳಿಹೇಳಿದರು. " ಕಾಂಗ್ರೆಸ್ಸು ಏಕೀಕರಣದ ಪರವಾಗಿ ನಿರ್ಣಯ ಸ್ವೀಕರಿಸಿದೆ. ಕೂಡಲೇ ಶಂಕರಗೌಡರ ಉಪವಾಸ ಬಿಡಿಸಿ ಬರುತ್ತೇನೆ. " ಎಂದು ಜನರಿಗೆ ಭರವಸೆ ಕೊಟ್ಟರು. ಆಗ ಜನಸಂದಣಿ ಶಾಂತವಾಯಿತು. ಆದರೆ ಒಳಗಿದ್ದ ಮುಖಂಡರನ್ನು ಜನರು ಹೊರಗೆ ಬಿಡಲಿಲ್ಲ.

ಅಂದೇ ರಾತ್ರಿ ಎಂಟು ಗಂಟೆಗೆ ಗುದ್ಲೆಪ್ಪನವರು ತಮ್ಮೊಂದಿಗೆ ಅನೇಕ ಮುಖಂಡರನ್ನು ಕರೆದುಕೊಂಡು ಅದರಗುಂಚಿಗೆ ಹೋಗಿ ಕಾಂಗ್ರೆಸ್‌ನ ಠರಾವಿನ ನಕಲೊಂದನ್ನು ಶಂಕರಗೌಡರ ಕೈಯಲ್ಲಿ ಕೊಟ್ಟು ಮತ್ತೊಂದು ನಕಲನ್ನು ತಮ್ಮ ಕೈಯಲ್ಲಿ ಹಿಡಿದು ಕಲ್ಮೇಶ್ವರ ದೇವಸ್ಥಾನದ ಎದುರು ನೆರೆದಿದ್ದ ಸಾವಿರಾರು ಜನರ ಮುಂದೆ ಓದಿ ಹೇಳಿದರು. ಆ ಠರಾವು ಹೀಗಿದೆ :

" ತಾರೀಖು : ೧೯- ೪-೧೯೫೩ ಹಾಜರಿದ್ದ ಸದಸ್ಯರ ಸಂಖ್ಯೆ ೧೪. ಕೆ. ಪಿ. ಸಿ. ಸಿ. ಠರಾವು ನಂ. - ೨

ಕರ್ನಾಟಕ ಪ್ರಾಂತ ರಚನೆ ವಿಲಂಬವಾಗುತ್ತಿರುವುದನ್ನು ಪ್ರತಿಭಟಿಸಿ ಈ ಕಾರ್ಯಕಾರಿ ಸಮಿತಿಯು ಕನ್ನಡ ಜನತೆಯೊಡಗೂಡಿ ಪ್ರಬಲವಾಗಿ ಒತ್ತಾಯಿಸುತ್ತದೆ. ಕೇಂದ್ರ ಸರಕಾರವು ಕರ್ನಾಟಕ ಪ್ರಾಂತ ಸರಕಾರವನ್ನು ೬ ತಿಂಗಳೊಳಗಾಗಿ ರಚಿಸುತ್ತೇವೆಂದು ಹೇಳಿಕೆ ಕೊಡಬೇಕು. ಹೇಳಿಕೆಯಂತೆ ಕಾರ್ಯ ಕೈಕೊಂಡ ಬಗ್ಗೆ ವಿವರ ತಿಳಿಸಬೇಕು. ತಿಳಿಸದೇ ಹೋದಲ್ಲಿ ೬ ತಿಂಗಳ ನಂತರ ಕರ್ನಾಟಕದಿಂದ ಆರಿಸಿ ಹೋದ ಪಾರ್ಲಿಮೆಂಟರಿ ಸದಸ್ಯರು ಹಾಗೂ ಮಂತ್ರಿಗಳು ಮತ್ತು ಮುಂಬಯಿ ಸರಕಾರದ ವಿಧಾನ ಸಭೆಗೆ ಕರ್ನಾಟಕದಿಂದ ಆರಿಸಿ ಹೋದ ವಿಧಾನಸಭಾ ಸದಸ್ಯರು ಹಾಗೂ ಮಂತ್ರಿಗಳು ರಾಜೀನಾಮೆ ನೀಡಿ ಹೊರಬಂದು ಶಾಲೆ - ಕಾಲೇಜುಗಳನ್ನು ಮುಚ್ಚಿಸಿ ಶಾಂತಿಯುತ ಉಗ್ರ ಹೋರಾಟ ಕೈಕೊಳ್ಳಬೇಕು. ಕರ್ನಾಟಕ ಪ್ರಾಂತ ರಚನೆಯ ಬೇಡಿಕೆಯನ್ನು ಸೂಚಿಸಿ ಶ್ರೀ ಶಂಕರಗೌಡರು ಆಮರಣ ಉಪವಾಸ ಕುಳಿತಿದ್ದು, ಈ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಶ್ರೀ ಶಂಕರಗೌಡರಿಗೆ ಗೌರವಾಭಿನಂದನೆಯನ್ನು ಸಲ್ಲಿಸುತ್ತದೆ. ಮಾನ್ಯ ಶ್ರೀ ಶಂಕರಗೌಡರು ತಕ್ಷಣ ಉಪವಾಸ ಬಿಡಬೇಕೆಂದು ವಿನಂತಿಸುತ್ತದೆ. ಈ ಕಾರ್ಯಕಾರಿ ಸಮಿತಿಯ ಬೇಡಿಕೆಗಳಿಗೆ ಪರಮಾತ್ಮನು ಕೃಪೆದೋರಲೆಂದು ಈ ಕಮೀಟಿಯು ಪ್ರಾರ್ಥಿಸುವುದು.

ಸೂಚಕರು : ಬಿ. ಎಂ. ಪೈ (ಕಾರವಾರ)

ಅನುಮೋದಕರು : ಶಿವನಗೌಡ ಗಜಪತಿ (ಬೆಳಗಾಂವ)

ಗುದ್ಲೆಪ್ಪನವರು ಶಂಕರಗೌಡರಿಗೆ ಹೇಳುತ್ತ. ನಿಶ್ಚಿಯವರ ತಲೆಗೆ ಜನರು ಗಾಯ ಮಾಡಿದ್ದಾರೆ. ನಮ್ಮ ಮುಖಂಡರು ಉಳಿಯಬೇಕಾದರೆ ನೀವು ಉಪವಾಸ ಬಿಡಿರಿ. ಎಲ್ಲ ಮುಖಂಡರು ಟೌನ್‌ಹಾಲ್‌ನಲ್ಲಿ ಸಿಕ್ಕುಬಿಟ್ಟಿದ್ದಾರೆ. ಉದ್ರಿಕ್ತ ಜನ ಬಿಡದೇ ನಿಂತು ಬಿಟ್ಟಿದ್ದಾರೆ ಎಂದು ಹೇಳಿದ ಮೇಲೆ ಮುಖಂಡರ ಮೇಲಿದ್ದ ಭಕ್ತಿ ಆದರದಿಂದ ಶಂಕರಗೌಡರು ಉಪವಾಸ ಬಿಡಲು ಒಪ್ಪಿದರು. ಆಗ ಕೂಡಿದ ಜನ ಕರ್ನಾಟಕ ಮಾತೆಗೆ ಜಯಕಾರ ಹಾಕಿದರು. ಉಪವಾಸ ಸತ್ಯಾಗ್ರಹದ ವ್ಯವಸ್ಥಾಪಕರಾದ ರಾಯಪ್ಪ ಅಂಚಟಗೇರಿ ಹಾಗೂ ಚನ್ನಪ್ಪ ಭದ್ರಾಪೂರ ಅವರು ಮೋಸಂಬಿ ರಸವನ್ನು ತೆಗೆದು ಗುದ್ಲೆಪ್ಪನವರ ಕೈಯಲ್ಲಿ ಕೊಟ್ಟರು. ಅವರು ಪ್ರಮುಖರ ಹಸ್ತ ಮುಟ್ಟಿಸಿ ಹುಬ್ಬಳ್ಳಿಯ ಶ್ರೀ ಹನ್ನೆರಡು ಮಠದ ಸ್ವಾಮಿಗಳ ಕೈಯಲ್ಲಿ ಕೊಟ್ಟರು. ಶ್ರೀಗಳಿಂದ ಹಣ್ಣಿನ ರಸ ಕುಡಿದು ಶಂಕರಗೌಡರು ತಾವು ಕೈಕೊಂಡ ೨೩ ದಿನಗಳ ಆಮರಣ ಉಪವಾಸವನ್ನು ಮುಕ್ತಾಯಗೊಳಿಸಿದರು. " [೯]

ಗುದ್ಲೆಪ್ಪನವರು ಶಂಕರಗೌಡರ ತಂದೆ ಗೌಡಪ್ಪಗೌಡರನ್ನು ತಮ್ಮ ಕಾರಿನಲ್ಲಿ ಹುಬ್ಬಳ್ಳಿಯ ಟೌನ್‌ಹಾಲ್‌ನ ಮುಂದೆ ಕರೆತಂದರು. ಅಲ್ಲಿ ಗೌಡಪ್ಪಗೌಡರಿಂದ ತಮ್ಮ ಪುತ್ರ ಶಂಕರಗೌಡರು ಉಪವಾಸ ಬಿಟ್ಟಿದ್ದಾರೆಂದು ಕಾರಿನ ಮೇಲೆ ನಿಲ್ಲಿಸಿ ಹೇಳಿಸಿದರು. ಆಗ ನೆರೆದ ಜನಸಂದಣಿ ಸಮಾಧಾನದಿಂದ ತೆರಳಿತು. ಕರ್ನಾಟಕ ಏಕೀಕರಣವಾಗಲು ಈ ಘಟನೆಯು ಪ್ರಮುಖ ತಿರುವು ನೀಡಿತು.

" ಈ ಘಟನೆಯನ್ನು ಅಮೇರಿಕೆಯ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ಮೂರು ಕಾಲಂ ಸುದ್ದಿ ಬರೆದು. ಭಾರತದ ನಕ್ಷೆ ಹಾಕಿ ಅದರಲ್ಲಿ ಹುಬ್ಬಳ್ಳಿಯನ್ನು ತೋರಿಸಿ ವರದಿ ಮಾಡಿತು. " [೧೦]

ಮರುದಿನ ಏಪ್ರಿಲ ೨೦ ರ ಬೆಳಿಗ್ಗೆ ೧೦ ಗಂಟೆಗೆ ಪ್ರಾಂತಿಕ ಕಾಂಗ್ರೆಸ್‌ನ ಸಭೆ ಹುಬ್ಬಳ್ಳಿಯಲ್ಲಿ ಸೇರಿತು. ೧೩೦ ಜನ ಸದಸ್ಯರು ಉಪಸ್ಥಿತರಿದ್ದು. ಒಂದಿನ ದಿನದ ಕಾರ್ಯಕಾರಿ ಸಭೆಯ ಠರಾವನ್ನೇ ಪಾಸು ಮಾಡಿ. ಅದರ ಪ್ರತಿಯನ್ನು ಪಕ್ಷದ ಕೇಂದ್ರೀಯ ವರಿಷ್ಠ ಮಂಡಳಿಗೆ ಕಳಿಸಿಕೊಟ್ಟರು.

ಶಂಕರಗೌಡರು ಕೇಂದ್ರವು ಕರ್ನಾಟಕ ಪ್ರಾಂತ ರಚನೆಯನ್ನು ಕೈಕೊಳ್ಳುವವರೆಗೂ ಸ್ವಗ್ರಾಮ ಅದರಗುಂಚಿಗೆ ಹೋಗುವದಿಲ್ಲವೆಂದು ಪ್ರತಿಜ್ಞೆ ಮಾಡಿ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣಕ್ಕೆ ಹೋಗಿ ನೆಲೆಸಿದರು. ೧೯೫೩ ಅಕ್ಟೋಬರ ೧೪ ರಂದು ಪ್ರಧಾನಮಂತ್ರಿ ಜವಾಹರಲಾಲ ನೆಹರೂ ಅವರಿಂದ ಪ್ರಾಂತಿಕ ಕಾಂಗ್ರೆಸ್‌ಗೆ ಬಂದ ಪತ್ರದಲ್ಲಿ ಭಾಷಾವಾರು ಪ್ರಾಂತಗಳನ್ನು ರಚಿಸಲು ಕೇಂದ್ರ ಸರಕಾರ ಕ್ರಮ ಕೈಕೊಂಡಿದ್ದು. ಆ ಕುರಿತು ಆಯೋಗವೊಂದನ್ನು ನೇಮಿಸಲಾಗುವದು. ತಿಂಗಳೊಪ್ಪತ್ತಿನಲ್ಲಿಯೇ ಸದಸ್ಯರುಗಳ ಹೆಸರನ್ನು ಪ್ರಕಟಿಸುತ್ತದೆ ಎಂದು ಆ ಪತ್ರದಲ್ಲಿ ಬರೆಯಲಾಗಿತ್ತು. ಆ ಪತ್ರ ಬಂದ ಮರುದಿನವೇ ಪ್ರಾಂತಿಕ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಗುದ್ಲೆಪ್ಪನವರು ಗೋಕರ್ಣಕ್ಕೆ ಬಂದು ಆನಂದದಿಂದ ಪಂಡಿತ ನೆಹರೂರವರ ಪತ್ರವನ್ನು ತೋರಿಸಿದರು. ಅಂದು ಕುಮಟಾ ತಾಲೂಕ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಜಯರಾಮ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿತ್ತು. ಆ ಸಭೆಯಲ್ಲಿ ಗುದ್ಲೆಪ್ಪನವರು ಕರ್ನಾಟಕ ಏಕೀಕರಣದ ಕುರಿತು ಮಾತನಾಡಿ ಪ್ರಧಾನಿ ನೆಹರೂರವರು ಆಯೋಗ ನೇಮಿಸುವುದಾಗಿ ಪತ್ರದಲ್ಲಿ ಬರೆದ ವಿಷಯವನ್ನು ಜನರೆದುರು ಹೇಳಿದರು. ಸಭೆ ಮುಗಿಯಿತು. ನಂತರ ಜಯರಾಮ ಭಟ್ಟರು ಗುದ್ಲೆಪ್ಪನವರನ್ನು ಕುರಿತು ಶ್ರೀ ಮಹಾಬಲೇಶ್ವರ ದರ್ಶನಕ್ಕೆ ತಾವು ಬರುವಿರೆಂದು ವ್ಯವಸ್ಥೆ ಮಾಡಿಸಿರುವುದಾಗಿ ಹೇಳಿದರು. ಆಗ ಗುದ್ಲೆಪ್ಪನವರು 'ಜಯರಾಮ ಭಟ್ಟರೇ ಇದೇ ಈಗ ಸಾವಿರಾರು ಮಹಾಬಲೇಶ್ವರರನ್ನೇ ದರ್ಶನ ಮಾಡಿಸಿದ್ದೀರಿ. ಇದೇ ನನಗೆ ಆನಂದ ಇಷ್ಟು ಸಾಲದೇ' ಎಂದರು. ಗುದ್ಲೆಪ್ಪನವರು ಜನತೆಯೇ ಜನಾರ್ದನನೆಂದು ನಂಬಿ ನಡೆದವರು.[೧೧]


ಮೈಸೂರಿಗರ ಮನವೊಲಿಸಿದುದು :

ಕರ್ನಾಟಕ ಏಕೀಕರಣ ಹೋರಾಟದ ಕಾಲಕ್ಕೆ ಮೊದಮೊದಲು ಏಕೀಕರಣವನ್ನು ವಿರೋಧಿಸುತ್ತಿದ್ದ ಮೈಸೂರು ಸಂಸ್ಥಾನದ ಮುಖಂಡರ ಮನವೊಲಿಸುವಲ್ಲಿ ಗುದ್ಲೆಪ್ಪನವರ ಪಾತ್ರ ಪ್ರಮುಖವಾಗಿತ್ತು. ಮೈಸೂರಿನ ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರನ್ನು ೧೯೫೪ ಫೆಬ್ರುವರಿ ೮ ರಂದು ಹುಬ್ಬಳ್ಳಿಗೆ ಬರಮಾಡಿಕೊಂಡು ಏಕೀಕರಣ ಅವಶ್ಯಕತೆಯನ್ನು ಬಿಂಬಿಸಿ. ಅದು ಬೇಗ ಆಗಲೆಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಸಭೆಗಳನ್ನು ಏರ್ಪಡಿಸಿ ಅವರಿಗೆ ಮನವಿಗಳನ್ನು ಕೊಡಲಾಯಿತು.

ಗುದ್ಲೆಪ್ಪನವರು ಕೆ. ಹನುಮಂತಯ್ಯನವರನ್ನು ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಕರೆದೊಯ್ದು ಏಕೀಕರಣಕ್ಕಾಗಿ ಜನ ಎಷ್ಟು ಆತುರಪಡುತ್ತಿದ್ದಾರೆಂಬುದನ್ನು ಅವರಿಗೆ ಮನಗಾಣಿಸಿದರು.



ಗುದ್ಲೆಪ್ಪನವರ ನೇತೃತ್ವದಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಆಗ್ರಹಿಸಿ
ಹಳೆಹುಬ್ಬಳ್ಳಿ ಕಿಲ್ಲೆಯಿಂದ ಹೊರಟ ಮೆರವಣಿಗೆ



ಮೈಸೂರಿನ ಮುಖ್ಯಮಂತ್ರಿ ಕೆ. ಹನುಮಂತಯ್ಯ ಅವರೊಂದಿಗೆ ಗುದ್ಲೆಪ್ಪನವರು.
ಇದೇ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕೆ ಆಗ್ರಹಿಸಿ ಶ್ರೀಮತಿ ನೀಲಮ್ಮ ಮತ್ತು
ಚನ್ನಪ್ಪ ಛಬ್ಬಾಪೂರ ದಂಪತಿಗಳು ಹುಬ್ಬಳ್ಳಿಯ ಹರಿಜನ ಕಾಲನಿಯಲ್ಲಿ ಮನವಿ ಅರ್ಪಿಸಿದರು. ೧೯೫೪

ಕಾರವಾರ ಕರ್ನಾಟಕದ್ದು :

ಕರ್ನಾಟಕ ಏಕೀಕರಣಕ್ಕಾಗಿ ಗುದ್ಲೆಪ್ಪನವರು ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಜನರನ್ನು ಜಾಗೃತಗೊಳಿಸುತ್ತಿದ್ದರು. " ತಾವೇ ಸ್ಥಾಪಿಸಿದ ' ನವಯುಗ ' ದಿನಪತ್ರಿಕೆಯಲ್ಲಿ ಗುದ್ಲೆಪ್ಪನವರು ಕಾರವಾರಕ್ಕೆ ಹೋದಾಗಿನ ಭಾವಚಿತ್ರ ಪ್ರಕಟವಾಗಿತ್ತು. ೧೯೫೪ - ೫೫ ಇರಬಹುದು. ಕಾರವಾರಕ್ಕೆ ಕರ್ನಾಟಕ ಏಕೀಕರಣ ಪ್ರಚಾರಕ್ಕಾಗಿ ಹಳ್ಳಿಕೇರಿಯವರು ಹೋದಾಗಿನ ಸುದ್ದಿಯೂ ಪ್ರಕಟವಾಗಿತ್ತು. ಆ ಕಾಲಕ್ಕೆ ಮಹಾರಾಷ್ಟ್ರದ ' ಮರಾಠಾ ' ಪತ್ರಿಕೆಯು ಪಿ. ಕೆ. ಅತ್ರೆಯವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. ಅದರ ಸಂಪಾದಕೀಯದ ಮೇಲ್ಭಾಗದಲ್ಲಿ ' ಕೋಲ್ಮಿಂಚಿ ' ನ ರೀತಿಯಲ್ಲಿ ' ಕಾರವಾರ, ಸುಪಾ, ಹಳಿಯಾಳ, ಖಾನಾಪೂರ, ಬೆಳಗಾಂವ, ನಿಪ್ಪಾಣಿ ಹೇ ಸಗಳ ಮಿಳೂನ ಅಖಂಡ ಮಹಾರಾಷ್ಟ್ರ ಝಾಲಾಚ ಪಾಹಿಜೆ (ಕಾರವಾರ, ಸುಪಾ, ಹಳಿಯಾಳ, ಖಾನಾಪೂರ, ಬೆಳಗಾಂವ, ನಿಪ್ಪಾಣಿ ಈ ಎಲ್ಲವೂ ಸೇರಿ ಅಖಂಡ ಮಹಾರಾಷ್ಟ್ರ ಆಗಲೇಬೇಕು) ' ಎಂಬ ಘೋಷಣೆಯನ್ನು ಪ್ರಕಟಿಸುತ್ತಿತ್ತು.

ಕಾರವಾರ ಮತ್ತಿತರ ಪ್ರದೇಶಗಳು ಕರ್ನಾಟಕದ ಭಾಗಗಳೇ ಆಗಿವೆ ಎಂಬುದನ್ನು ಪ್ರಚಾರ ಮಾಡಿ, ಜನರಲ್ಲಿ ಕನ್ನಡದ ಬಗೆಗೆ ಅಭಿಮಾನವನ್ನು ತುಂಬುವುದಕ್ಕಾಗಿ ಗುದ್ಲೆಪ್ಪನವರು ಆಯಾ ಭಾಗಗಳಲ್ಲಿ ಸಂಚರಿಸಿ, ಕನ್ನಡಿಗರನ್ನು ಜಾಗೃತಗೊಳಿಸುತ್ತಿದ್ದರು. " (೨)

ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು (ಅ. ಕ. ರಾ. ನಿ.) ಮುಂತಾದ ಸಂಘ, ಸಂಸ್ಥೆಗಳು ಕರ್ನಾಟಕ ರಾಜ್ಯ ನಿರ್ಮಾಣಕ್ಕಾಗಿ ಅಲ್ಲಲ್ಲಿ ಸಭೆ, ಸಮ್ಮೇಳನ ಮಾಡಿ ಒತ್ತಾಯಿಸುತ್ತಲಿದ್ದವು. ಈ ಮುನ್ನವೇ ಬಳ್ಳಾರಿಯು ಕನ್ನಡಿಗರ ಮತ್ತು ತೆಲುಗರ ಮಧ್ಯೆ ವಾದಗ್ರಸ್ತವಾಗಿ ಉಳಿದಿತ್ತು. ಈ ಸಮಸ್ಯೆಯನ್ನು ಬಿಡಿಸಬೇಕಾಗಿತ್ತು.

ಬಳ್ಳಾರಿಯ ಹೋರಾಟ .

೧೯೨೦ ರಲ್ಲಿ ನಾಗಪುರದಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ ಅಧಿವೇಶನದಲ್ಲಿ ನಿರ್ಣಯಿಸಿದಂತೆ ಭಾಷಾವಾರು ಪ್ರಾಂತಿಕ ಕಾಂಗ್ರೆಸ್ ಸಮಿತಿಗಳನ್ನು ರಚಿಸಲು ಅವಕಾಶ ದೊರೆಯಿತು. ೧೯೨೧ ರಲ್ಲಿ ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿ ಹಾಗೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ರಚನೆಯ ಸಂದರ್ಭದಲ್ಲಿ ಬಳ್ಳಾರಿಯು ಯಾವ ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ ಸೇರಬೇಕೆಂಬ ಸಮಸ್ಯೆ ಉದ್ಭವವಾಯಿತು. ಆಂಧ್ರದವರು ತಮಗೆ ಸೇರಬೇಕೆಂದೂ, ಕರ್ನಾಟಕದವರು ತಮಗೆ ಸೇರಬೇಕೆಂದೂ ವಾದಿಸತೊಡಗಿದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಈ ವಿವಾದವನ್ನು ಇತ್ಯರ್ಥ ಮಾಡಲು ಎನ್. ಸಿ. ಕೇಳ್ಕರ ಅವರನ್ನು ಕೇಳಿಕೊಂಡರು. ಅವರು ಜಿಲ್ಲೆಯ ಭಾಷಾವಾರು ಜನಸಂಖ್ಯೆಯನ್ನು ಪರಿಶೀಲಿಸಿ, ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕನ್ನೊಳಗೊಂಡು ಪಶ್ಚಿಮದ ತಾಲೂಕುಗಳಾದ ಶಿರುಗುಪ್ಪ, ಹೊಸಪೇಟೆ, ಹಡಗಲಿ, ಹರಪನಹಳ್ಳಿ, ಕೂಡ್ಲಿಗಿ, ಸೊಂಡೂರು, ಈ ಆರು ತಾಲೂಕುಗಳು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಯಲ್ಲಿರಬೇಕೆಂದೂ ಪೂರ್ವದ ತಾಲೂಕುಗಳಾದ ಆದವಾನಿ, ಆಲೂರು, ರಾಯದುರ್ಗ ಈ ಮೂರು ತಾಲೂಕುಗಳು ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಯಲ್ಲಿರಬೇಕೆಂದೂ ನಿರ್ಣಯವಿತ್ತರು.

" ೧೯೫೨ ರ ಚುನಾವಣೆಯಲ್ಲಿ ಬಳ್ಳಾರಿ ವಿಧಾನಸಭಾ ಕ್ಷೇತ್ರದಿಂದ ಕನ್ನಡಪರ ಅಭ್ಯರ್ಥಿಯು ಸೋತು ತೆಲುಗು ಪರ ಅಭ್ಯರ್ಥಿಯು ಆಯ್ಕೆಯಾಗಿದ್ದರು. ಜನಗಣತಿ ಕಾಲದಲ್ಲಿ ನಡೆಯಿತೆನ್ನಲಾದ ಅಪ್ರಾಮಾಣಿಕ ಚಟುವಟಿಕೆಗಳು ತೆಲುಗುಪರವಾಗಿದ್ದವು. ಆದರೆ ಬಳ್ಳಾರಿ ಜಿಲ್ಲೆಯು ತೆಲುಗರ ಮತ್ತು ಕನ್ನಡಿಗರ ಪಣದ ವಸ್ತುವಾಗಿತ್ತು. " ೧೩

ಆಂಧ್ರಪ್ರದೇಶ ರಚನೆಯ ಬಗ್ಗೆ ವರದಿ ಸಲ್ಲಿಸಲು ರಾಜಸ್ಥಾನದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ವಾಂಛೂ ಅವರನ್ನು ಕೇಂದ್ರ ಸರಕಾರವು ೧೯೫೩ ಜನೇವರಿ ೫ ರಂದು ನೇಮಿಸಿತು. ಬಳ್ಳಾರಿ ಜಿಲ್ಲೆಯ ಮೂರು ತಾಲೂಕುಗಳನ್ನು (ಆಲೂರು. ಆದವಾನಿ. ರಾಯದುರ್ಗ) ಆಂಧ್ರಕ್ಕೆ ಸೇರಿಸಬಹುದಾದರೂ ಅಲ್ಲಿಯೂ ಕನ್ನಡಿಗರ ಸಂಖ್ಯೆ ತೀರ ಗೌಣವಾಗಿಲ್ಲವೆಂದು ಅವರು ತಿಳಿಸಿದರು. ಆದರೆ ಬಳ್ಳಾರಿ ನಗರ ಮತ್ತು ತಾಲೂಕಿನ ಹೊಸ ಸಮಸ್ಯೆಯನ್ನು ಬಗೆಹರಿಸಲಿಲ್ಲ.

ಬಳ್ಳಾರಿ ಪ್ರಶ್ನೆ ಬಗೆಹರಿಸಲು ಕೇಂದ್ರ ಸರಕಾರವು ಹೈದರಾಬಾದಿನ ಮುಖ್ಯ ನ್ಯಾಯಾಧೀಶ ಎಲ್. ಎಸ್. ಮಿಶ್ರಾ ಅವರನ್ನು ೧೯೫೩ ಎಪ್ರಿಲ ೨೧ ರಂದು ನೇಮಿಸಿತು. ಮಿಶ್ರಾ ಅವರು ಬಳ್ಳಾರಿಯಲ್ಲಿ ಕಾರ್ಯಾಲಯ ತೆರೆದು ವಿಚಾರಣೆ ಪ್ರಾರಂಭಿಸಿದರು. ಬಳ್ಳಾರಿ ತಾಲೂಕಿನ ಬಗ್ಗೆ ಮನವಿಗಳನ್ನು ಸ್ವೀಕರಿಸಿದರು. ಅಂಕಿ ಅಂಶ ಸಂಗ್ರಹಣೆಗಾಗಿ ಅಧಿಕಾರಿಯನ್ನು ನೇಮಿಸಲಾಯಿತು. ೧೯೫೩ ಮೇ ೧ ರಿಂದ ೮ ರ ವರೆಗೆ ವಿಚಾರಣೆ ನಡೆಯಿತು.

ಆ ಸಂದರ್ಭದಲ್ಲಿ ಗುದ್ಲೆಪ್ಪನವರು ತಮ್ಮ ಸಂಗಡಿಗರೊಂದಿಗೆ ಬಳ್ಳಾರಿ ನಗರ ಮತ್ತು ತಾಲೂಕಿನಲ್ಲಿ ಸಂಚರಿಸಿದರು. ಕನ್ನಡಿಗರ ಮತ್ತು ತೆಲುಗರ ಅಂಕಿ ಅಂಶ ಸಂಗ್ರಹ ಮಾಡುತ್ತಿರುವ ಅಧಿಕಾರಿಗಳ ಜೊತೆಗೆ ಅಲ್ಲಲ್ಲಿ ಸಂಚರಿಸಿ ಅವರ ಕಾರ್ಯ ವೈಖರಿಯನ್ನು ಗಮನಿಸತೊಡಗಿದರು. ಹುಬ್ಬಳ್ಳಿಯಲ್ಲಿಯ ತಮ್ಮದೇ ಆದ ' ನವಯುಗ ' ದಿನಪತ್ರಿಕೆಯ ಉಪಸಂಪಾದಕರಾಗಿದ್ದ ಹುಚ್ಚೇಶ್ವರ ಮೇದಿಯವರನ್ನು ತಮ್ಮ ಜೊತೆಗೆ ಕರೆದುಕೊಂಡು ಹೋಗಿದ್ದರು. ಆ ಸಂದರ್ಭದ ಸಂಗತಿಗಳನ್ನು ಮೇದಿಯವರು ಹೀಗೆ ಹೇಳುತ್ತಾರೆ :

" ನಾನು ' ನವಯುಗ ' ದಿನಪತ್ರಿಕೆಯ ಸಂಪಾದಕ ಮಂಡಲಿಯಲ್ಲಿದ್ದಾಗ ಗುದ್ಲೆಪ್ಪನವರು ಸ್ವತಃ ಕಾರ್ಯಾಲಯಕ್ಕೆ ಬಂದು ' ಈಗ ಭಾಷಾವಾರು ಗಣತಿ ನಡೆಯುತ್ತಿದೆ. ಬಳ್ಳಾರಿಗೆ ಹೋಗಿ ಮಾಹಿತಿ ಪಡೆದುಕೊಂಡು ' ನವಯುಗ ' ದಲ್ಲಿ ಪ್ರಕಟಿಸಬೇಕು ' ಎಂದು ಹೇಳಿ ಬಳ್ಳಾರಿಗೆ ನನ್ನನ್ನು ಕರೆದುಕೊಂಡು ಹೋದರು. ಬಳ್ಳಾರಿಯಲ್ಲಿ ತೆಲುಗರು ಕನ್ನಡಿಗರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದರು. ಅಲ್ಲಿ ಹೆಚ್ಚಾಗಿ ಮಂಗಳೂರಿನ ಕಡೆಯವರ ಚಹಾದ ಅಂಗಡಿಗಳಿದ್ದವು. ಆಂಧ್ರದವರು (ತೆಲುಗರು) ಆ ಅಂಗಡಿಗಳಿಗೆ ಹೋಗಿ ತಿಂಡಿ ತಿಂದು ದುಡ್ಡು ಕೊಡದೆ ಹಾಗೆಯೇ ಹೋಗುತ್ತಿದ್ದರು. ಈ ತಕರಾರು ಗುದ್ಲೆಪ್ಪ ಹಳ್ಳಿಕೇರಿಯವರ ಕಡೆಗೆ ಬಂತು. ದುಡ್ಡು ಕೊಡದೆ ಹೋಗುವವರನ್ನು ಹಿಡಿದು ಕೂಡಿಸಿರಿ. ನಾನು ಬಂದು ಪೋಲೀಸರ ವಶಕ್ಕೆ ಒಪ್ಪಿಸುತ್ತೇನೆ ಎಂದು ಗುದ್ಲೆಪ್ಪನವರು ಅಂಗಡಿಯವರಿಗೆ ಧೈರ್ಯ ಹೇಳುತ್ತಿದ್ದರು. ಒಂದು ಗಂಟೆಯಲ್ಲಿ ಅಂಥವರನ್ನು ಪೋಲೀಸರ ವಶಕ್ಕೆ ಒಪ್ಪಿಸಿಬಿಟ್ಟರು. ನಂತರ ಅಂತಹ ಪ್ರವೃತ್ತಿ ಕಡಿಮೆಯಾಯಿತು.

ಗಣತಿ ನಡೆದಾಗ ಮದ್ರಾಸಿನಿಂದ ಗಣತಿ ಅಧಿಕಾರಿಗಳು ಬಂದರು. ತೆಲುಗರಿಗೆ ಕನ್ನಡಿಗರು ಎಂದು ಬರೆದಿದ್ದರು. ಕನ್ನಡಿಗರಿಗೆ ತೆಲುಗರು ಎಂದು ಬರೆದಿದ್ದರು. ಇದನ್ನು ತಪಾಸಣೆ ಮಾಡಲು ಅವರು ಬಂದಿದ್ದರು. ಮುಂಡ್ಲೂರು ಗಂಗಪ್ಪ ಎಂಬ ತೆಲುಗು ಮುಖಂಡರಿದ್ದರು. ನಾವು ಅಧಿಕಾರಿಯೊಂದಿಗೆ ತಪಾಸಣೆ ಮಾಡಲು ಹೋದಲ್ಲೆಲ್ಲ ಅವರೂ ಬರುತ್ತಿದ್ದರು. ಒಬ್ಬ ಮುದುಕಿಯ ಬಳಿ ಹೋಗಿ ನಿನ್ನ ಹೆಸರೇನು ? ನಿನಗೆಷ್ಟು ಮಕ್ಕಳು ? ಎಂದು ನಾವು ಕೇಳಿದೆವು. ಆಕೆ ಶುದ್ಧ ಕನ್ನಡದಲ್ಲಿಯೇ ಉತ್ತರಿಸಿದಳು. ಅಷ್ಟೊತ್ತಿಗೆ ಗಣತಿ ಅಧಿಕಾರಿ ತಪಾಸಣೆಗೆ ಬಂದರು. ಮುಂಡ್ಲೂರು ಗಂಗಪ್ಪ ಆ ಮುದುಕಿಗೆ ಸನ್ನೆ ಮಾಡಿದರು. ಅಧಿಕಾರಿ ಕೇಳಿದ ಪ್ರಶ್ನೆಗಳಿಗೆಲ್ಲ ತೆಲುಗಿನಲ್ಲಿಯೇ ಉತ್ತರಿಸಿದಳು. ನಮ್ಮ ಕನ್ನಡ ಮುಖಂಡರಿಗೆ ವಿಷಾದವೆನಿಸಿತು,

ಕುಡತಿನಿ ಎಂಬ ಗ್ರಾಮಕ್ಕೆ ಹೋದೆವು. ಅಲ್ಲಿ ವೈಶ್ಯರ ಮನೆಯಿತ್ತು. ಅವರನ್ನು ತೆಲುಗರು ಎಂದು ಬರೆದಿರುವ ಸುದ್ದಿ ಬಂತು. ನಾವು ಹೋದೆವು. ಮನೆಯಲ್ಲಿ ಒಬ್ಬ ಹೆಣ್ಣುಮಗಳಿದ್ದಳು. ಆಕೆಯ ಯಜಮಾನರು ಬಳ್ಳಾರಿಗೆ ಹೋಗಿದ್ದರು. ಆಕೆಗೆ ಹೆಸರು ಇತ್ಯಾದಿ ಕೇಳಿದೆವು. ಆಕೆ ಸ್ವಚ್ಛ ಕನ್ನಡದಲ್ಲಿಯೇ ಮಾತಾಡಿದಳು. ತೆಲುಗು ಮಾತಾಡಲು ಬರುವುದಾಗಿ ಹೇಳಿದಳು. ಅಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆಲ್ಲ ಕನ್ನಡದಲ್ಲಿಯೇ ಉತ್ತರಿಸಲು ಹೇಳಿದೆವು. ಗಣತಿ ಅಧಿಕಾರಿ ' ತೆಲುಗು ಬರುತ್ತದೆಯೇ ? ' ಎಂದು ಕೇಳಲು ಆಕೆ ' ಇಲ್ಲ ' ಎಂದಳು. ಆದರೂ ಗಣತಿ ಮಾಡಿದ ಶಾನುಭೋಗರು ' ತೆಲುಗು ' ಎಂದು ಬರೆದಿದ್ದರು. ಗಣತಿ ಅಧಿಕಾರಿ ಶಾನುಭೋಗರನ್ನು ಕರೆಯಿಸಿ ' ನಿನ್ನನ್ನು ಸಸ್ಪೆಂಡ್ ಮಾಡಬೇಕು, ದಂಡ ಹಾಕಬೇಕು ' ಎಂದು ಗದರಿಸಿದರು. ನಾವು ಹೇಳಿದೆವು ' ಅದೆಲ್ಲ ಬೇಡ. ತೆಲುಗರ ಚಿತಾವಣೆಯಿಂದ ಹಾಗೆ ಮಾಡಿದ್ದಾರೆ. ಆದರೆ ಇದು ಕನ್ನಡ ಪ್ರದೇಶವೆಂದು ನೀವು ಟಿಪ್ಪಣಿ ಹಾಕಿದರೆ ಸಾಕು ' ಎಂದು ಆಗ್ರಹಿಸಿದೆವು. " [೧೪]

ಆಮೇಲೆ ಗುದ್ಲೆಪ್ಪನವರು ಎಸ್. ನಿಜಲಿಂಗಪ್ಪ. ಅಂದಾನೆಪ್ಪ ದೊಡ್ಡಮೇಟಿ, ಎಸ್. ಆರ್. ಕಂಠಿ ಹಾಗೂ ಜಿಲ್ಲೆಯ ಗಣ್ಯರಾದ ಮ. ಮ. ಪಾಟೀಲ. ಕೆ. ಚೆನ್ನಬಸವನಗೌಡ. ಕೋ. ಚೆನ್ನಬಸಪ್ಪ. ಅಲ್ಲಂ ಕರಿಬಸಪ್ಪ ಮುಂತಾದವರೊಡನೆ ಮಿಶ್ರಾ ಅವರನ್ನು ಭೆಟ್ಟಿಯಾಗಿ ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರಬೇಕೆಂದು ಮನವಿ ಸಲ್ಲಿಸಿ ಆಗ್ರಹಿಸಿದರು. ಆದರೆ ಮಿಶ್ರಾ ಅವರು ಬಳ್ಳಾರಿ ಜಿಲ್ಲೆಯನ್ನು ಘಟಕವಾಗಿ ಇರಿಸದೆ ತಾಲೂಕನ್ನು ಘಟಕವಾಗಿರಿಸಿಕೊಂಡು ಆದವಾನಿ. ಆಲೂರು. ರಾಯದುರ್ಗ ತಾಲೂಕುಗಳನ್ನು ಆಂಧ್ರಕ್ಕೆ ಸೇರಿಸಲು ಶಿಫಾರಸು ಮಾಡಿದರು. ಇದನ್ನು ಕೇಂದ್ರ ಸರಕಾರವು ಸ್ವೀಕರಿಸಿತು. ತತ್ಫಲವಾಗಿ ೧೯೫೩ ಅಕ್ಟೋಬರ ೨ ರಂದು ಬಳ್ಳಾರಿಯು ಮೈಸೂರಿನಲ್ಲಿ ವಿಲೀನವಾಯಿತು.

ಮೈಸೂರು ಶಾಸನ ಸಭೆಗೆ ಬಳ್ಳಾರಿಯಿಂದ ಆಯ್ಕೆ ಆಗಿ ಹೋಗಿದ್ದ ತೆಲುಗುಪರವಾಗಿದ್ದ ಮುಂಡ್ಲೂರು ಗಂಗಪ್ಪನವರು ತೆಲುಗು ಕನ್ನಡ ಭಾಷಾ ಸಮಸ್ಯೆಯನ್ನು ಮುಂದೆ ಮಾಡಿ ಒಂದು ಆಹ್ವಾನ ಕೊಟ್ಟರು. " ಬಳ್ಳಾರಿ ವಿಧಾನಸಭಾ ಸ್ಥಾನಕ್ಕೆ ಮತ್ತೊಮ್ಮೆ ಚುನಾವಣೆ ನಡೆಯಲಿ. ಯಾವ ಭಾಷೆಯ ಪರವಾಗಿರುವ ಅಭ್ಯರ್ಥಿ ಆಯ್ಕೆಯಾಗುತ್ತಾನೆಯೋ ಬಳ್ಳಾರಿ ಅವರ ಪರವಾಗಿ ಸೇರಲಿ " ಎಂದು ಶಾಸಕ ಸ್ಥಾನಕ್ಕೆ ರಾಜೀನಾಮೆಯಿತ್ತು ಉಪಚುನಾವಣೆಗೆ ಅವಕಾಶ ಮಾಡಿಕೊಟ್ಟರು.

ತೆಲುಗರ ಪರವಾಗಿ ಮುಂಡ್ಲೂರು ಗಂಗಪ್ಪನವರೇ ಅಭ್ಯರ್ಥಿಯಾಗಿ ನಿಂತರು. ಕನ್ನಡಿಗರ ಪರವಾಗಿ ಹರಗಿನಡೋಣಿ ಸಣ್ಣಬಸವನಗೌಡರು ಅಭ್ಯರ್ಥಿಗಳಾಗಿ ಸ್ಪರ್ಧಿಸಿದರು. ೧೯೫೭ ಜೂನ ೧೦ ರಂದು ಚುನಾವಣೆ ನಡೆಯಿತು. ಭಾಷೆಯನ್ನೇ ಪ್ರಾಮುಖ್ಯವಾಗಿಟ್ಟುಕೊಂಡು ನಡೆದ ಐತಿಹಾಸಿಕ ಚುನಾವಣೆ ಇದಾಯಿತು.

ಈ ಚುನಾವಣೆಯ ಕುರಿತು ಸರದಾರ ಶರಣಗೌಡ ಇನಾಂದಾರರ ಅಭಿಪ್ರಾಯವಿದು : " ಆಂಧ್ರದ ಅಭ್ಯರ್ಥಿಯ ಪರವಾಗಿ ಸಂಜೀವ ರೆಡ್ಡಿ ಮತ್ತು ಗೋಪಾಲ ರೆಡ್ಡಿ ಅವರೂ ಪ್ರಚಾರ ಮಾಡಿದರು. ಕನ್ನಡ ಅಭ್ಯರ್ಥಿಯ ಪರವಾಗಿ ಕೊನೆಕೊನೆಯ ದಿನಗಳಲ್ಲಿ ನಿಜಲಿಂಗಪ್ಪ ಮತ್ತು ಹಳ್ಳಿಕೇರಿ ಗುದ್ಲೆಪ್ಪ ಅವರು ಮಾತ್ರ ಪ್ರಚಾರ ಮಾಡಿದರು. ಉಳಿದ ಮುಖಂಡರು ಯಾರೂ ಬರಲಿಲ್ಲ. ಚುನಾವಣೆಯಲ್ಲಿ ನಮ್ಮ ಕನ್ನಡದ ಅಭ್ಯರ್ಥಿ ಮೂರು ಸಾವಿರ ಮತಗಳ ಅಂತರದಿಂದ ಗೆದ್ದರು. "[೧೫]

ಬಳ್ಳಾರಿಯು ಕರ್ನಾಟಕದಲ್ಲಿ ಉಳಿಯಲು ಈ ಚುನಾವಣೆಯ ಗೆಲುವು ಮಹತ್ವದ ಕಾರಣವಾಯಿತು. ಹೀಗೆ ಗುದ್ಲೆಪ್ಪನವರು ಬಳ್ಳಾರಿ ಕರ್ನಾಟಕದಲ್ಲಿ ಉಳಿಯಲು ಸ್ವತಃ ಹೋರಾಡಿ ಇತರರನ್ನು ಹೋರಾಟಕ್ಕೆ ಅಣಿಗೊಳಿಸಿ ಬೆಂಬಲಿಸುವಲ್ಲಿ ಯಶಸ್ವಿಯಾದರು.

ಗಡಿಭಾಗದಲ್ಲಿ ಜಾಗೃತಿ :

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಅಂಕಲಿ ಭಾಗದಲ್ಲಿ ಮರಾಠಿಗರ ಉಪಟಳ ಹೆಚ್ಚಾಗಿತ್ತು. ಇಂಥ ಸಂದಿಗ್ಧ ಸಮಯದಲ್ಲಿ ಕರ್ನಾಟಕ ಏಕೀಕರಣ ಮತ್ತು ಕನ್ನಡದ ಉದ್ಧಾರವನ್ನು ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡು ಬಸವಪ್ರಭು ಕೋರೆ ಮತ್ತು ಅವರ ಸ್ನೇಹಿತರು ಅಂಕಲಿಯಲ್ಲಿ ೧೯೫೭ ಜನೆವರಿ ೧೦ ರಂದು ಇಪ್ಪತ್ತೈದು ಸಹಸ್ರ ಜನರ ಬೃಹತ್ ಸಮಾವೇಶ ಏರ್ಪಡಿಸಿದರು. ಆ ಸಭೆಗೆ ಎಸ್. ನಿಜಲಿಂಗಪ್ಪನವರು ಉದ್ಘಾಟಕರಾಗಿ, ಚನ್ನಬಸಪ್ಪ ಅಂಬಲಿ ಅಧ್ಯಕ್ಷರಾಗಿ, ಗುದ್ಲೆಪ್ಪ ಹಳ್ಳಿಕೇರಿ ಮುಖ್ಯ ಅತಿಥಿಗಳಾಗಿದ್ದರು.

ಕನ್ನಡ ನಾಡು ನುಡಿಯ ಮಹತ್ವ ಕುರಿತು ಮಾತನಾಡಿದ ಗುದ್ಲೆಪ್ಪನವರ ಸಿಂಹವಾಣಿ ಜನರನ್ನು ಜಾಗೃತಗೊಳಿಸಿತು. ಉತ್ಸಾಹ ಮೂಡಿಸಿತು. ಗಡಿಭಾಗದಲ್ಲಿ ಜರುಗಿದ ಬೃಹತ್ ಐತಿಹಾಸಿಕ ಸಮಾವೇಶ ಇದಾಗಿತ್ತು.

ರಾಜ್ಯ ಪುನರ್ರಚನಾ ಆಯೋಗ :

ಪ್ರಧಾನಮಂತ್ರಿ ಜವಾಹರಲಾಲ ನೆಹರೂ ಅವರು ೧೯೫೩ ಡಿಸೆಂಬರ ೨೨ ರಂದು ಲೋಕಸಭೆಯಲ್ಲಿ ಭಾರತದ ರಾಜ್ಯಗಳ ಪುನರ್ರಚನೆಗಾಗಿ ಫಜಲ್ ಅಲಿ ಅಧ್ಯಕ್ಷತೆಯಲ್ಲಿ ವರಿಷ್ಠ ಸಮಿತಿಯನ್ನು ನೇಮಿಸುವುದಾಗಿ ಘೋಷಿಸಿದರು. ಕನ್ನಡಿಗರಿಗಷ್ಟೇ ಅಲ್ಲ, ಭಾರತದ ಇನ್ನಿತರ ಭಾಷಿಕರ ಸಂಕಲ್ಪ ಸಿದ್ಧಿಸುವ ಕಾಲ ಸನ್ನಿಹಿತವಾಯಿತೆಂದು ಸಮಾಧಾನಪಡುವಂತಾಯಿತು. ೧೯೫೩ ಡಿಸೆಂಬರ್ ೨೯ ರಂದು ಅಧಿಕೃತವಾಗಿ ಒರಿಸ್ಸಾ ರಾಜ್ಯಪಾಲರಾಗಿದ್ದ ಫಜಲ್ ಅಲಿ ಅಧ್ಯಕ್ಷತೆಯಲ್ಲಿ ರಾಜ್ಯ ಪುನರ್ರಚನಾ ಆಯೋಗದ ರಚನೆಯನ್ನು ಪ್ರಕಟಿಸಲಾಯಿತು. ರಾಜ್ಯಸಭಾ ಸದಸ್ಯರಾಗಿದ್ದ ಹೃದಯನಾಥ ಕುಂಜ್ರು, ಈಜಿಪ್ತಿನಲ್ಲಿ ಭಾರತದ ರಾಯಭಾರಿಗಳಾಗಿದ್ದ ಕೆ. ಎಂ. ಪಣಿಕ್ಕರ ಸದಸ್ಯರಾಗಿದ್ದರು.

೧೯೫೪ ರ ಎಪ್ರೀಲ ತಿಂಗಳಲ್ಲಿ ಆಯೋಗವು ಕರ್ನಾಟಕಕ್ಕೆ ಬಂದಾಗ ಎಲ್ಲ ಪ್ರಮುಖ ನಗರ ಹಾಗೂ ಗಡಿ ಪ್ರದೇಶಗಳಲ್ಲಿ ಸಹಸ್ರಾರು ಜನರಿಂದ ಆಯೋಗಕ್ಕೆ ಮನವಿ. ಅಭಿಪ್ರಾಯಗಳನ್ನು ಸಲ್ಲಿಸಲು ಗುದ್ಲೆಪ್ಪನವರು ಅವಿಶ್ರಾಂತವಾಗಿ ಸಂಚರಿಸಿದರು. ಕನ್ನಡ ಜನಕ್ಕೆ ತಮ್ಮದೇ ಆದ ನಾಡು ' ಕರ್ನಾಟಕ ' ವಾಗಬೇಕಾದುದರ ಅಗತ್ಯತೆಯನ್ನು ಆಯೋಗಕ್ಕೆ ಮನವರಿಕೆ ಮಾಡಿಕೊಟ್ಟರು.

ರಾಜ್ಯ ಪುನರ್ರಚನಾ ಆಯೋಗವು ತನ್ನ ವರದಿಯನ್ನು ೧೯೫೫ ಅಕ್ಟೋಬರ ೧೦ ರಂದು ಕೇಂದ್ರ ಸರಕಾರಕ್ಕೆ ಒಪ್ಪಿಸಿತು. ಆಯೋಗದ ವರದಿಯನ್ನು ಕೇಂದ್ರ ಸರಕಾರವು ಕೆಲವು ಮಾರ್ಪಾಟುಗಳನ್ನು ಮಾಡಿ ರಾಜ್ಯಗಳ ನಿರ್ಮಾಣವನ್ನು ಮಾಡಿತು.

' ಮೈಸೂರು ' ಎಂದು ನಾಮಕರಣಗೊಂಡ ರಾಜ್ಯದಲ್ಲಿ ಈ ಭಾಗಗಳು ಸೇರಿದವು : ೧. ಮೈಸೂರು ರಾಜ್ಯ ಇಡಿಯಾಗಿ ೨. ಮುಂಬಯಿ ರಾಜ್ಯದ ವಿಜಾಪೂರ. ಧಾರವಾಡ. ಉತ್ತರ ಕನ್ನಡ ಮತ್ತು ಬೆಳಗಾವಿ (ಚಂದಗಡ ತಾಲೂಕನ್ನು ಬಿಟ್ಟು) ಜಿಲ್ಲೆಗಳು. ೩. ಹೈದರಾಬಾದ ರಾಜ್ಯದ ಗುಲಬರ್ಗಾ ಜಿಲ್ಲೆ (ಕೋಡಂಗಲ್ ಮತ್ತು ತಾಂಡೂರ ತಾಲೂಕಗಳನ್ನು ಬಿಟ್ಟು). ರಾಯಚೂರು ಜಿಲ್ಲೆ (ಅಲಂಪುರ ಮತ್ತು ಗದ್ವಾಲ ತಾಲೂಕುಗಳನ್ನು ಬಿಟ್ಟು) ಮತ್ತು ಬೀದರ ಜಿಲ್ಲೆಯ ಬೀದರ. ಭಾಲ್ಕಿ. ಔರಾದ ಮತ್ತು ಹುಮನಾಬಾದ ತಾಲೂಕುಗಳು ಬಸವಕಲ್ಯಾಣವನ್ನು ನಂತರ ಸೇರಿಸಲಾಯಿತು.

ಆ ಮೇರೆಗೆ ೧೯೫೬ ನವಂಬರ ೧ ರಂದು ' ಮೈಸೂರು ರಾಜ್ಯ ' ವು ಅಸ್ತಿತ್ವಕ್ಕೆ ಬಂದಿತು. ' ಕರ್ನಾಟಕ ' ಎಂಬ ಹೆಸರಿನ ಬದಲಾಗಿ ' ಮೈಸೂರು ' ಆದದ್ದು. ಅಕ್ಕಲಕೋಟ. ಸೊಲ್ಲಾಪುರ. ಕಾಸರಗೋಡ ಮುಂತಾದ ಕನ್ನಡ ಪ್ರದೇಶಗಳು ಕರ್ನಾಟಕದ ಹೊರಗೆ ಉಳಿದದ್ದು ಗುದ್ಲೆಪ್ಪನವರಿಗೆ ವ್ಯಥೆಯನ್ನುಂಟು ಮಾಡಿತು. ಆದರೂ ತಮ್ಮ ಅವಿರತ ಹೋರಾಟಕ್ಕೆ ಫಲ ದೊರೆತುದಕ್ಕಾಗಿ ಅವರು ಸಂತೃಪ್ತಿ ಪಟ್ಟುಕೊಳ್ಳಬೇಕಾಯಿತು.

ಏಕೀಕರಣ ಸಾಧಿಸಿದ ಗುದ್ಲೆಪ್ಪನವರು :

ಏಕೀಕರಣದ ವಿಷಯದಲ್ಲಿ ಜನನಾಯಕ ಗುದ್ಲೆಪ್ಪನವರ ವೀರಧೀರ ವ್ಯಕ್ತಿತ್ವದ ಪ್ರಭಾವವನ್ನು ಕುರಿತು ವಿ. ಕೃ. ಗೋಕಾಕ ಅವರು ಚಿತ್ರಿಸುವ ಪರಿ ಇದು : " ಕರ್ನಾಟಕ ರಾಜ್ಯದ ನಿರ್ಮಾಪಕರಲ್ಲಿ ಅವರ ಸ್ಥಾನ ಗಣ್ಯವಾದುದು. ಅವರು ಹೂಡಿದ ಆಂದೋಲನವಿಲ್ಲದೆ ಹೋಗಿದ್ದರೆ ಏಕೀಕರಣಕ್ಕೆ ಇಷ್ಟು ಬೇಗನೆ ರೆಕ್ಕೆ ಬರುತ್ತಿರಲಿಲ್ಲ. ಭಾಷಾ ರಾಜ್ಯವನ್ನು ಸ್ಥಾಪಿಸುವ ವಿಚಾರವನ್ನು ಪರಿಶೀಲಿಸಲು ಸಮಿತಿ ಕರ್ನಾಟಕಕ್ಕೆ ಬಂದಾಗ ಹಳ್ಳಿಕೇರಿಯವರು ಸಮಿತಿಗೆ ಕರ್ನಾಟಕದ ಭೀಮಸೇನರಾಗಿ ಕಂಡರು. ಅವರೊಡನೆ ಮೇರೆವರಿಯುವ ಜನಸಮುದ್ರವನ್ನು ನೋಡಿ ಪಣಿಕ್ಕರರು ಏಕೀಕರಣವಿಲ್ಲದೆ ಗತಿಯಿಲ್ಲವೆಂದು ಉದ್ಗರಿಸಿದರು. ಏಕೀಕರಣಕ್ಕಾಗಿ ಅನೇಕ ಜನನಾಯಕರು ತ್ರಿಕರಣಪೂರ್ವಕವಾಗಿ ದುಡಿದಿದ್ದಾರೆ. ಆದರೆ ಏಕೀಕರಣದ ಇತಿಹಾಸದಲ್ಲಿ ಹಳ್ಳಿಕೇರಿಯವರ ಪ್ರವೇಶವೆಂದರೆ ಕ್ಷಾತ್ರತೇಜದ ಪ್ರವೇಶ. ಅವಿಸ್ಮರಣೀಯ ಪ್ರವೇಶ ಹಾಗೂ ಪಾತ್ರವದು. " [೧೬]

ರಾಜ್ಯ ಪುನರ್‌ರಚನಾ ಆಯೋಗದ ಸದಸ್ಯರಾಗಿದ್ದ ಕೆ. ಎಂ. ಪಣಿಕ್ಕರ ಅವರು ತಾವು ಹೋದಲ್ಲೆಲ್ಲ ಗುದ್ಲೆಪ್ಪನವರು ಜನರನ್ನು ಸಂಘಟಿಸಿ ಆಯೋಗದ ಮುಂದೆ ಮನವಿ ಸಲ್ಲಿಸುವಲ್ಲಿ ತೋರಿದ ಆಸಕ್ತಿ. ತಮಗೆ ನೀಡಿದ ಸಹಕಾರಗಳಿಂದಾಗಿ ಆಕರ್ಷಿತರಾಗಿ ಗುದ್ಲೆಪ್ಪನವರ ಆಪ್ತ ಮಿತ್ರರಾದರು.

ಪಣಿಕ್ಕರರು ಹಳ್ಳಿಕೇರಿಯವರನ್ನು ಮಲೆಯಾಳ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಆಮಂತ್ರಣವಿತ್ತು ಕರೆಸಿ. ಅವರಿಗೊಂದು ಪುಷ್ಪ ಮಾಲೆಯನ್ನು ಅರ್ಪಿಸಬೇಕೆಂದಾಗ. ತನಗೆ ಖಂಡಿತ ಬೇಡ ಎಂದು ಹಳ್ಳಿಕೇರಿಯವರು ಜಾರಲು ಪ್ರಯತ್ನಿಸಿದಾಗ ಪಣಿಕ್ಕರರು. " ಹಳ್ಳಿಕೇರಿಯವರೇ. ತಾವು ಕರ್ನಾಟಕದ ಉದ್ದಕ್ಕೂ ಅಲ್ಲಲ್ಲಿ ಸಭೆಗಳನ್ನು ಸೇರಿಸಿ ಜನರನ್ನು ನೆರೆಯಿಸಿ ನನಗೆ ಮಾಡಿದ ಸತ್ಕಾರ - ತೊಡಿಸಿದ ಅನಂತ ಹೂಮಾಲೆಗಳಿಗೆ ನಾನು ಪ್ರೇಮದಿಂದ ಅರ್ಪಿಸುವ ಒಂದು ಹೂಮಾಲೆಯು ಹೆಚ್ಚೋ ? ಅದಾಗದು ನಿರಾಕರಿಸಬೇಡಿ " ಎಂದು ಆಗ್ರಹದಿಂದ ಅದನ್ನು ಕೊರಳಿಗೆ ಹಾಕಿದರು.[೧೭]

" ಕರ್ನಾಟಕ ಏಕೀಕರಣ, ಕರ್ನಾಟಕದ ಬಗ್ಗೆ ನಿಸ್ಸೀಮ ಅಭಿಮಾನ. ಅವರಲ್ಲಿ ಬಾಕಿ ಎಲ್ಲರಿಗಿಂತಲೂ ಒಂದು ತೂಕ ಜಾಸ್ತಿ. " ಎಂದು ಮಾಜಿ ಮುಖ್ಯಮಂತ್ರಿ. ರಾಷ್ಟ್ರ ಧುರೀಣ ಎಸ್. ನಿಜಲಿಂಗಪ್ಪನವರು ತಮ್ಮೊಡನೆ ಬಲಗೈಯಾಗಿ ಕಾರ್ಯ ಮಾಡಿದ ಗುದ್ಲೆಪ್ಪ ಹಳ್ಳಿಕೇರಿ ಅವರ ಬಗ್ಗೆ ಹೃದಯ ತುಂಬಿ ಹೇಳಿದ ಮಾತುಗಳಿವು. ಮುಂದುವರಿದು. " ಕರ್ನಾಟಕದ ಏಕೀಕರಣದ ಪ್ರಯತ್ನಕ್ಕೆ, ಪ್ರಚಾರಕ್ಕೆ ಹೆಚ್ಚು ದುಡಿದವರೆಂದರೆ ಹಳ್ಳಿಕೇರಿ ಗುದ್ಲೆಪ್ಪನವರು. ಅದರಲ್ಲೂ ಫಜಲ್ ಅಲಿ ಕಮೀಶನ್ ಭಾಷಾವಾರು ಪ್ರಾಂತಗಳ ನಿರ್ಮಾಣದ ಬಗ್ಗೆ ಏರ್ಪಾಟಾದಾಗ ಅವರು. ಆ ಕಮೀಟಿಯವರು ಕರ್ನಾಟಕದಲ್ಲೆಲ್ಲ ಪ್ರವಾಸ ಮಾಡಿದರು. ಆ ಕಾಲದಲ್ಲಿ ಅವರು ಹೋದ ಕಡೆಯಲ್ಲೆಲ್ಲ ಹಳ್ಳಿಕೇರಿ ಗುದ್ಲೆಪ್ಪನವರ ಚಟುವಟಿಕೆ ಅತ್ಯಂತ ಪರಿಣಾಮಕಾರಿಯಾಗಿತ್ತು. ಜನಗಳನ್ನು ಹುರಿದುಂಬಿಸಿ ಕಮೀಟಿಯ ಮುಂದೆ ಸಾಕಷ್ಟು ವಿಚಾರಗಳನ್ನು ತಿಳಿಸುವಲ್ಲಿ ಹಳ್ಳಿಕೇರಿಯವರ ಪ್ರಯತ್ನ ಅತ್ಯಂತ ದೊಡ್ಡದು. "[೧೮] ಎನ್ನುತ್ತಾರೆ.

ಕನ್ನಡ ನಾಡಿನ ತುಂಬೆಲ್ಲ ಮಿಂಚಿನ ಸಂಚಾರ ಕೈಕೊಂಡು ಜನರನ್ನು ಸಂಘಟಿಸುತ್ತ ತಮ್ಮ ಉದ್ಬೋಧಕ ಭಾಷಣಗಳ ಮೂಲಕ ನಾಡು-ನುಡಿಯ ಬಗೆಗೆ ಅಭಿಮಾನ ತುಂಬಿ ಉತ್ಸಾಹದಿಂದ ಆಂದೋಲನದಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಮಾಂತ್ರಿಕ ಶಕ್ತಿ ಗುದ್ಲೆಪ್ಪನವರದು. ಏಕೀಕರಣ ಸಾಧಿಸಿದ ಮಹಾನ್ ಶಿಲ್ಪಿಗಳಲ್ಲಿ ಅವರ ಹೆಸರು ಅಗ್ರಪಂಕ್ತಿಯಲ್ಲಿದೆ. ಗುದ್ಲೆಪ್ಪನವರು ಕಂಡ ಕನಸಾದ ' ಕರ್ನಾಟಕ ' ಎಂಬ ನಾಡಿನ ಹೆಸರು ೧೯೭೩ ನವಂಬರ ೧ ರಂದು ಅಧಿಕೃತವಾಗಿ ಜಾರಿಗೆ ಬಂದಿತು.

ಜವಾಬ್ದಾರಿ ಸರಕಾರಕ್ಕಾಗಿ ಮೈಸೂರು ಚಲೋ :

ಕೆಲವು ಸಂಸ್ಥಾನಗಳು ಭಾರತ ಒಕ್ಕೂಟದಲ್ಲಿ ಸೇರದೇ ಉಳಿದಿದ್ದವು. ಮೈಸೂರು ಸಂಸ್ಥಾನವೂ ಅವುಗಳಲ್ಲಿ ಒಂದು. ಮೈಸೂರು ಅರಮನೆಯ ಮೇಲೆ ರಾಷ್ಟ್ರಧ್ವಜ ಹಾರಲಿಲ್ಲ. ಜನರು ಜವಾಬ್ದಾರಿ ಸರಕಾರ ರಚಿಸುವದಕ್ಕಾಗಿ ಸಂಸ್ಥಾನದ ಆಡಳಿತದೊಂದಿಗೆ ಸಂಘರ್ಷಕ್ಕಿಳಿಯಬೇಕಾಯಿತು.

ಚಳುವಳಿ, ಸತ್ಯಾಗ್ರಹಗಳು ಅನಿವಾರ್ಯವಾದವು. ಆಗ ಜಯಚಾಮರಾಜ ಒಡೆಯರ ಅವರು ಮಹಾರಾಜರಾಗಿದ್ದರು. ಆರ್ಕಾಟ ರಾಮಸ್ವಾಮಿ ಮೊದಲಿಯಾರ ದಿವಾನರಾಗಿದ್ದರು. ತಂಬೂಚೆಟ್ಟಿ ಮಹಾರಾಜರ ಆಪ್ತ ಕಾರ್ಯದರ್ಶಿಗಳಾಗಿದ್ದರು. ಜವಾಬ್ದಾರಿ ಸರಕಾರಕ್ಕಾಗಿ ಇವರೆಲ್ಲರೊಡನೆ ನಡೆಸಿದ ಸಂಧಾನಗಳು ವಿಫಲವಾದವು. ಆದುದರಿಂದ ಮೈಸೂರು ಕಾಂಗ್ರೆಸ್ಸು ಜವಾಬ್ದಾರಿ ಸರಕಾರ ರಚನೆಗೆ ಕಟಿಬದ್ಧವಾಯಿತು. ಸಾರ್ವಜನಿಕ ಸಭೆ ಸತ್ಯಾಗ್ರಹಗಳನ್ನು ನಡೆಸಿತು. ಕೆ. ಸಿ. ರೆಡ್ಡಿ, ಎಸ್. ನಿಜಲಿಂಗಪ್ಪ ಮುಂತಾದವರ ನೇತೃತ್ವದಲ್ಲಿ ಚಳುವಳಿ ತೀವ್ರವಾಯಿತು. ಬೇರೆ ಬೇರೆ ಕಡೆಗಳಿಂದ ಬರುತ್ತಿದ್ದ ಸತ್ಯಾಗ್ರಹಿಗಳನ್ನು ಬಂಧಿಸಿ, ದೂರಪ್ರದೇಶಕ್ಕೆ ಕಳಿಸಲಾರಂಭಿಸಿದರು. ಜನರನ್ನು ನಿಯಂತ್ರಿಸಲು ಲಾಠೀ ಪ್ರಹಾರ, ಗೋಳೀಬಾರ್ ನಡೆದವು. ಕೆಲವರು ಪ್ರಾಣ ತೆತ್ತರು, ನೂರಾರು ಜನರು ಗಾಯಗೊಂಡರು. ಮೈಸೂರು ಚಲೋ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಫಕೀರಪ್ಪ ಹವಳದ ತಮ್ಮ ಅನುಭವವನ್ನು ಹೀಗೆ ಹೇಳುತ್ತಾರೆ :

" ಮುಂಡರಗಿಯ ಗಾಂಧಿ ಚೌಕಿನಲ್ಲಿ ಹಿರಿಯ ರಾಷ್ಟ್ರೀಯ ನಾಯಕರಾಗಿದ್ದ ಎಸ್. ನಿಜಲಿಂಗಪ್ಪನವರು, ಹಳ್ಳಿಕೇರಿ ಗುದ್ಲೆಪ್ಪನವರು ಭಾಷಣ ಮಾಡಿ ಮೈಸೂರು ಸತ್ಯಾಗ್ರಹದಲ್ಲಿ ಸ್ವಾತಂತ್ರ್ಯಯೋಧರು ಪಾಲ್ಗೊಳ್ಳುವಂತೆ ಕರೆ ನೀಡಿದರು. ಡಾ. ಸಿ. ಎಂ. ಚುರ್ಚಿಹಾಳಮಠರ ನೇತೃತ್ವದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಲು ತಂಡಗಳು ಸಿದ್ಧವಾಗಿದ್ದವು. ಆ ತಂಡಗಳಲ್ಲಿ ೩ - ೪ ಭಾಗಗಳನ್ನಾಗಿ ಮಾಡಿ ಸರದಿಯ ಪ್ರಕಾರ ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಯೋಜಿಸಲಾಗಿತ್ತು. ಡಾ. ಸಿ. ಎಂ. ಚುರ್ಚಿಹಾಳಮಠ ಹಾಗೂ ಷಣ್ಮುಖಪ್ಪ ನಾಗನೂರ ಅವರ ನಾಯಕತ್ವದಲ್ಲಿ ಪ್ರಥಮ ತಂಡ ತೆರಳಿ ಸತ್ಯಾಗ್ರಹ ಮಾಡಿ ದಾವಣಗೆರೆ ಸೆರೆಮನೆಯನ್ನು ಸೇರಿತ್ತು. ಅನಂತರ ಮತ್ತೊಂದು ತಂಡ ಹೊರಟಿತು. ಅದರಲ್ಲಿ ಹವಳದ ಫಕೀರಪ್ಪ, ತಮ್ಮಣ್ಣಾಚಾರ್ಯ ಕಟ್ಟಿ, ಬಸಲಿಂಗಯ್ಯ ಮಠದ, ಶಿವಪ್ಪ ಕವಲೂರ, ವಿರುಪಾಕ್ಷಪ್ಪ ಹವಳದ ಮೊದಲಾದವರಿದ್ದರು. ಆಗ ಜಿಲ್ಲಾಧ್ಯಕ್ಷರಾಗಿದ್ದ ಹಳ್ಳಿಕೇರಿ ಗುದ್ಲೆಪ್ಪನವರ ಆದೇಶವನ್ನು ಪಡೆದುಕೊಂಡು ಈ ತಂಡಗಳು ಮುನ್ನುಗ್ಗಿದವು. ಈ ತಂಡ ರಾಣೆಬೆನ್ನೂರ ಶಿಬಿರ ಸೇರಿ ಅಲ್ಲಿಂದ ದಾವಣಗೆರೆಗೆ ತೆರಳಿ ತಾಲೂಕ ಕಚೇರಿಯ ಮುಂದೆ ಸತ್ಯಾಗ್ರಹ ನಡೆಸಿದಾಗ ಇವರ ಮೇಲೆ ಪೊಲೀಸರು ಲಾಠಿ ಚಾರ್ಜ ಮಾಡಿದರು. ಈ ಸಂದರ್ಭದಲ್ಲಿ ಫಕೀರಪ್ಪನವರಿಗೆ ಹೊಡೆತಗಳೂ ಬಿದ್ದವು. ಓರ್ವ ಪೊಲೀಸನ ಲಾಠಿಯ ಹೊಡೆತ ಇವರ ಮೊಣಕಾಲಿಗೆ ಬಿದ್ದು ಚಿಪ್ಪುಗಳು ಮೂರು ತುಣುಕುಗಳಾದವು. ಕೊನೆಗೆ ಪೊಲೀಸರು ಈ ಸತ್ಯಾಗ್ರಹಿಗಳನ್ನೆಲ್ಲ ಸೆರೆಮನೆಗೆ ಸಾಗಿಸಿದರು. " [೧೯]

ಶಂಕರಯ್ಯ ಗಂಧದ, ಅಂದಪ್ಪ ದೇಸಾಯಿ ದಾವಣಗೆರೆ ಸೆರೆಮನೆ ಕಂಡರು. ಪಂಚಾಕ್ಷರಯ್ಯ ಗುರುಪಾದಮಠ ಅವರಿಗೆ ಮೈಸೂರು ಪೊಲೀಸರಿಂದ ಲಾಠೀ ಏಟು ಬಿದ್ದು ಆಸ್ಪತ್ರೆಯಲ್ಲಿ ಉಪಚಾರ ಪಡೆಯಬೇಕಾಯಿತು.

ನಲವತ್ತೆರಡು ದಿನಗಳವರೆಗೆ ಸತತವಾಗಿ ನಡೆದ ಚಳುವಳಿಯಿಂದ ಸರಕಾರದ ಕಾರ್ಯಕಲಾಪಗಳು ಸ್ಥಗಿತವಾದವು. ತತ್ಪರಿಣಾಮವಾಗಿ ಕಾಂಗ್ರೆಸ್ಸಿನ ನಾಯಕರೊಂದಿಗೆ ಒಪ್ಪಂದವಾಗಿ ಮೈಸೂರು ಮಹಾರಾಜರು ಕೈದಿಗಳನ್ನು ಬಿಡುಗಡೆ ಮಾಡಿ, ಕಾಂಗ್ರೆಸ್ ಜವಾಬ್ದಾರಿ ಸರಕಾರವನ್ನು ವಹಿಸಿಕೊಳ್ಳಲು ಅನುಮತಿಯಿತ್ತರು. ೧೯೪೭ ಅಕ್ಟೋಬರ್ ೨೪ ರಂದು ಕೆ. ಸಿ. ರೆಡ್ಡಿ ಮುಖ್ಯಮಂತ್ರಿಯಾಗಿದ್ದ ಜವಾಬ್ದಾರಿ ಸರಕಾರ ಅಸ್ತಿತ್ವಕ್ಕೆ ಬಂದಿತು.

ಹೈದರಾಬಾದ ವಿಮೋಚನಾ ಹೋರಾಟ :

ಸ್ವಾತಂತ್ರ್ಯಾ ನಂತರ ಹೈದರಾಬಾದ ಸಂಸ್ಥಾನದ ನಿಜಾಮರು ಭಾರತ ಒಕ್ಕೂಟದಲ್ಲಿ ಸೇರಲಿಚ್ಛಿಸದೆ ಸ್ವತಂತ್ರವಾಗಿ ವರ್ತಿಸತೊಡಗಿದರು. ಸಂಸ್ಥಾನವು ಜವಾಬ್ದಾರಿ ಸರಕಾರ ರಚಿಸಿ ಭಾರತ ಒಕ್ಕೂಟದಲ್ಲಿ ಒಂದಾಗಬೇಕೆಂದು ಹೈದರಾಬಾದ ಸ್ಟೇಟ್ ಕಾಂಗ್ರೆಸ್ಸು ಸ್ವಾಮಿ ರಮಾನಂದತೀರ್ಥರ ನೇತೃತ್ವದಲ್ಲಿ ಅಹಿಂಸಾತ್ಮಕ ಚಳುವಳಿ ಪ್ರಾರಂಭಿಸಿತು. ಗುದ್ಲೆಪ್ಪನವರು ಈ ಕಾಂಗ್ರೆಸ್ ಸಂಘಟನೆಗೆ ಧೈರ್ಯ ನೀಡಿ ಬೆಂಬಲ ವ್ಯಕ್ತಪಡಿಸಿದರು.

ನಿಜಾಮ ಸರಕಾರವು ಅಹಿಂಸಾತ್ಮಕ ಶಾಂತಿಯುತ ಹೋರಾಟಕ್ಕೆ ಮಣಿಯಲಿಲ್ಲ. ಪ್ರತಿಯಾಗಿ ಚಳುವಳಿಯನ್ನು ಹತ್ತಿಕ್ಕಲು ಕಾಸೀಂ ರಜ್ವಿಯ ರಜಾಕಾರರ ತಂಡಗಳಿಗೆ ನಿಜಾಮರು ಬೆಂಬಲ ನೀಡಿದರು. ರಜಾಕಾರರು ಹಿಂದುಗಳ ಆಸ್ತಿ - ಪಾಸ್ತಿ ಲೂಟಿ. ಸ್ತ್ರೀಯರ ಮಾನಭಂಗ. ಮುಗ್ಧ ಮಕ್ಕಳನ್ನು ಕೊಲ್ಲುವುದು ಮುಂತಾದ ದೌರ್ಜನ್ಯ ಕೃತ್ಯಗಳಲ್ಲಿ ತೊಡಗಿದರು.

ಸ್ವಾಮಿ ರಮಾನಂದ ತೀರ್ಥ ಮತ್ತು ಕೆಲವು ಕಾಂಗ್ರೆಸ್ ಮುಖಂಡರು. ಸಂಸ್ಥಾನದ ಜನತೆ ನಿಜಾಮರ ದೌರ್ಜನ್ಯಗಳ ವಿರುದ್ಧ ಉಗ್ರ ಹೋರಾಟ ಮಾಡಬೇಕಾಯಿತು. ರಜಾಕಾರರನ್ನು ಬಗ್ಗು ಬಡಿಯಲು ಅಲ್ಲಲ್ಲಿ ಆಂದೋಲನ ಶಿಬಿರಗಳನ್ನು ಸ್ಥಾಪಿಸಲಾಯಿತು. ವಿದ್ಯಾರ್ಥಿಗಳು. ಕಾರ್ಮಿಕರು. ರೈತರು. ಎಲ್ಲ ವರ್ಗದ ಜನರು ಶಿಬಿರಗಳಲ್ಲಿ ಸ್ವಯಂ ಸೇವಕರಾಗಿ ಸೇರಿ ಹೋರಾಟದಲ್ಲಿ ಧುಮುಕಿದರು.

ಮುಂಡರಗಿಯಲ್ಲಿಯೂ ಅಳವಂಡಿ ಶಿವಮೂರ್ತಿ ಸ್ವಾಮಿಗಳು ಶಿಬಿರಾಧಿಪತಿಗಳಾಗಿದ್ದ ಶಿಬಿರವೊಂದು ಸ್ಥಾಪಿತವಾಗಿತ್ತು. ಇದರಡಿಯಲ್ಲಿ ೧೧ ಶಿಬಿರಗಳಿದ್ದವು. ಅದರಲ್ಲಿರುವ ಶಿಬಿರಾರ್ಥಿಗಳಿಗೆ ಸೈನಿಕ ತರಬೇತಿಯನ್ನು ಕೊಡಲಾಗುತ್ತಿತ್ತು.

ಡಾ. ಸಿ. ಎಂ. ಚುರ್ಚಿಹಾಳಮಠ ಮುಂತಾದವರು ಗೃಹ ರಕ್ಷಕ. ಗ್ರಾಮ ರಕ್ಷಕ ದಳದ ಶಿಕ್ಷಣ ಪಡೆದುಕೊಂಡು ಕಾದಿಟ್ಟ ಸ್ವಯಂ ಸೇವಕರ ಪಡೆಗಳನ್ನು ರಚಿಸಿದ್ದರು. ಇವರು ಗ್ರಾಮ ರಕ್ಷಣೆ. ಶಿಬಿರದ ಕಾರ್ಯಾಚರಣೆಯಲ್ಲಿ ಭಾಗವಹಿಸುವದಲ್ಲದೆ ರಜಾಕಾರರ ದಾಳಿಯನ್ನು ಎದುರಿಸಲು ಸನ್ನದ್ಧರಾಗಿದ್ದರು.

ರಜಾಕಾರರಿಂದ ಜನರ ಮೇಲೆ ಆಗುತ್ತಿರುವ ದೌರ್ಜನ್ಯ ಹಿಂಸಾಚಾರಗಳನ್ನು ತಡೆಗಟ್ಟಲು ಶಿಬಿರಾರ್ಥಿಗಳು ಹೋರಾಡಿದರು. ಸಾವು ನೋವುಗಳನ್ನು ಅನುಭವಿಸಿದರು. ಇಂಥ ಶಿಬಿರಗಳಿಗೆ. ಶಿಬಿರಾರ್ಥಿಗಳಿಗೆ ನೈತಿಕ. ಆರ್ಥಿಕ ಬೆಂಬಲ ನೀಡಿದ ಕರ್ನಾಟಕದ ಗಡಿ ಜಿಲ್ಲೆಗಳ ನಾಯಕರಲ್ಲಿ ಗುದ್ಲೆಪ್ಪನವರು ಪ್ರಮುಖರು.

ಹೈದರಾಬಾದ ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದ ಸ್ವಾತಂತ್ರ್ಯಯೋಧ ಡಾ. ಸಿ. ಎಂ. ಚುರ್ಚಿಹಾಳಮಠ ಅವರು ಅಂದಿನ ತಮ್ಮ ಅನುಭವವನ್ನು ಹೀಗೆ ನೆನಪಿಸಿಕೊಂಡರು. " ಈ ವಿಮೋಚನಾ ಹೋರಾಟದಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರೂ ಭಾಗವಹಿಸಿದ್ದರು. ಮುಂಡರಗಿಯಲ್ಲಿ ಸ್ಥಾಪಿಸಿದ ಶಿಬಿರಕ್ಕೆ ಆಗಾಗ್ಗೆ ಭೇಟಿ ಕೊಟ್ಟು ಶಿಬಿರಾರ್ಥಿಗಳಿಗೆ ತಮ್ಮ ಭಾಷಣಗಳಿಂದ ಧೈರ್ಯ ತುಂಬಿ ಉತ್ತೇಜಿಸಿ ಮಾರ್ಗದರ್ಶನ ಮಾಡುತ್ತಿದ್ದರು. ಸಾವು ಗುದ್ಲೆಪ್ಪ ಹಳ್ಳಿಕೇರಿ

ಹಾಗೂ ಅಂದಾನಪ್ಪ ದೊಡ್ಡಮೇಟಿಯವರೊಂದಿಗೆ ಕುಕನೂರ, ದ್ಯಾಂಪುರ ಮುಂತಾದ ಊರುಗಳಿಗೆ ಹೋಗಿದ್ದೆವು. ಅಲ್ಲಿ ಈ ನಾಯಕರು ಜನರಲ್ಲಿ ಜಾಗೃತಿಯನ್ನುಂಟು ಮಾಡಿದರು. " [೨೦]

ಹೈದರಾಬಾದ ಪ್ರಾಂತ ಕಾಂಗ್ರೆಸ್ಸು ನಿಜಾಮರ ನಿರಂಕುಶ ಆಡಳಿತ ಕೊನೆಗೊಳಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ತಿಳಿಸಿ ಭಾರತ ಸರಕಾರದ ಮೇಲೆ ಒತ್ತಡ ತಂದಿತು. ಕೊನೆಗೆ ಭಾರತ ಸರಕಾರದ ಗೃಹ ಮಂತ್ರಿ, ಉಕ್ಕಿನ ಮನುಷ್ಯ ಸರದಾರ ವಲ್ಲಭಭಾಯಿ ಪಟೇಲ ಅವರು ೧೯೪೮ ಸಪ್ಟಂಬರ ೧೩ ರಂದು ' ಆಪರೇಶನ್ ಪೋಲೋ ' ಕಾರ್ಯಾಚರಣೆಗೆ ಆದೇಶವಿತ್ತರು. ಭಾರತದ ಸೈನಿಕರು ನಿಜಾಮ ಸೈನಿಕರನ್ನು, ರಜಾಕಾರರನ್ನು ಬಗ್ಗು ಬಡಿದರು. ನಿಜಾಮರು ಸಪ್ಟಂಬರ ೧೭ರಂದು ಸೋತು ಶರಣಾದರು. ೧೮ ರಂದು ಹೈದರಾಬಾದ ಸಂಸ್ಥಾನ ವಿಲೀನವಾಗಿ ಎಲ್ಲೆಡೆ ತ್ರಿವರ್ಣ ಧ್ವಜ ರಾರಾಜಿಸಿತು.

ಗೋವಾ ವಿಮೋಚನಾ ಚಳುವಳಿ :

ಅಲ್ಬುಕರ್ಕನು ೧೫೧೦ ರಲ್ಲಿ ಗೋವಾವನ್ನು ಪೋರ್ತುಗೀಜರ ವಸಾಹತುವಾಗಿ ಮಾಡಿದನು. ಬಿಜಾಪುರದ ಆದಿಲಶಹ ಮತ್ತು ಮರಾಠರು ಅನೇಕ ಸಲ ದಾಳಿ ಮಾಡಿದರೂ ಗೋವಾ ಪೋರ್ತುಗೀಜರ ವಶದಲ್ಲಿಯೇ ಉಳಿಯಿತು.

ಗಾಂಧೀಜಿಯವರ ಕರೆಯಂತೆ ಬ್ರಿಟಿಷರ ವಿರೋಧವಾಗಿ ಭಾರತದಲ್ಲಿ ಪ್ರಾರಂಭವಾದ ಅಹಿಂಸಾತ್ಮಕ ರಾಷ್ಟ್ರೀಯ ಚಳುವಳಿಯು ಗೋವಾಕ್ಕೂ ಹರಡಿತು. ೧೯೩೦ ರಲ್ಲಿ ಸ್ಥಾಪಿತವಾದ ಗೋವಾ ಕಾಂಗ್ರೆಸ್ ಸಮಿತಿಯು ಕೈಕೊಂಡ ಚಳುವಳಿಗಳನ್ನು ಪೋರ್ತುಗೀಜ ಸರಕಾರವು ಉಗ್ರವಾಗಿ ದಮನ ಮಾಡಿತು.

ಭಾರತ ಸ್ವಾತಂತ್ರ್ಯಾನಂತರ ಗೋವಾ ವಿಮೋಚನೆಗಾಗಿ ಅನೇಕ ಸುತ್ತಿನ ಮಾತುಕತೆಗಳು ಭಾರತ ಮತ್ತು ಪೋರ್ತುಗೀಜ ಸರಕಾರಗಳ ನಡುವೆ ನಡೆದರೂ ಯಶ ಸಿಗಲಿಲ್ಲ. ಇದರಿಂದಾಗಿ ೧೯೫೫ ರ ಅಗಸ್ಟ್‌ನಲ್ಲಿ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಲು ಭಾರತದ ಬೇರೆ ಬೇರೆ ಪ್ರಾಂತಗಳಿಂದ ಗೋವಾಕ್ಕೆ ಬಂದ ಸತ್ಯಾಗ್ರಹಿಗಳು ಶಾಂತಿಯುತವಾಗಿ ಪ್ರತಿಭಟನೆ ನಡೆಸಿದರು. ಪೋರ್ತುಗೀಜ ಸೈನಿಕರು ಸತ್ಯಾಗ್ರಹಿಗಳಲ್ಲಿ ಕೆಲವರನ್ನು ಗುಂಡಿಕ್ಕಿ ಕೊಂದರು, ಅನೇಕರು ಗಾಯಗೊಂಡರು, ಉಳಿದವರನ್ನು ಜೈಲಿಗೆ ತಳ್ಳಿದರು.

ಗುದ್ಲೆಪ್ಪನವರು ಗೋವಾ ವಿಮೋಚನೆಯ ಬಗ್ಗೆ ಆಸಕ್ತಿ ತಾಳಿದರು. ಅನೇಕ ಕಾರ್ಯಕರ್ತರು ಮತ್ತು ಅನುಯಾಯಿಗಳನ್ನು ಸತ್ಯಾಗ್ರಹ ಮಾಡಲು ಪ್ರೇರೇಪಿಸಿ ಕಳಿಸುತ್ತಿದ್ದರು. ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪನವರು ಹೇಳುವಂತೆ, " ಗುದ್ಲೆಪ್ಪನವರು ಮತ್ತು ನಾವು ಕಾರ್ಯಕರ್ತರನ್ನು ಗೋವಾ ವಿಮೋಚನಾ ಚಳುವಳಿಯಲ್ಲಿ ಪಾಲ್ಗೊಳ್ಳಲು ಕರೆದುಕೊಂಡು ಗೋವಾದ ಗಡಿಯವರೆಗೆ ಹೋಗಿ ಕಳಿಸಿ ಬರುತ್ತಿದ್ದೆವು. " [೨೧]

ಗುದ್ಲೆಪ್ಪನವರು ಹುಬ್ಬಳ್ಳಿ, ಧಾರವಾಡ, ಹಾವೇರಿ ಮುಂತಾದ ಕಡೆಗಳ ಜನರನ್ನು ಒಗ್ಗೂಡಿಸಿ ವಾಹನಗಳಲ್ಲಿ ಕರೆದುಕೊಂಡು ಗೋವಾದ ಗಡಿಯವರೆಗೂ ಹೋಗಿ ಬಂದರು.

ಪೋರ್ತುಗೀಜ ಸೈನಿಕರು ಗೋವಾದ ಗಡಿಯ ಭಾರತದ ಹಳ್ಳಿಗಳನ್ನು ಲೂಟಿ ಮಾಡಲಾರಂಭಿಸಿದರು. ಇದನ್ನು ತಡೆಗಟ್ಟಿ ಗೋವಾವನ್ನು ವಿಮೋಚನೆಗೊಳಿಸಲು ನಿರ್ಧರಿಸಿದ ಭಾರತದ ಸೈನಿಕರು ಪೋರ್ತುಗೀಜರ ಆಡಳಿತ ಕೇಂದ್ರವಾಗಿದ್ದ ಗೋವೆಯ ಪಣಜಿಯನ್ನು ೧೯೬೧ ರ ಡಿಸೆಂಬರ್ ೧೭ - ೧೮ ರ ಮಧ್ಯರಾತ್ರಿ ಸುತ್ತುವರಿದು ಹೋರಾಡಿತು. ಅಲ್ಲಿದ್ದ ಪೋರ್ತುಗೀಜ ಸೈನ್ಯವು ಭಾರತೀಯ ಸೈನ್ಯಕ್ಕೆ ಶರಣಾಗತವಾಯಿತು. ಪೋರ್ತುಗೀಜರ ಆಳ್ವಿಕೆಯಿಂದ ಗೋವಾ ವಿಮೋಚನೆಗೊಂಡು ಭಾರತದಲ್ಲಿ ಸೇರ್ಪಡೆಯಾಯಿತು. ಇದರಿಂದ ಭಾರತದ ನೆಲದಲ್ಲಿದ್ದ ವಿದೇಶಿಯರ ವಸಾಹತು ಆಡಳಿತ ಕೊನೆಗೊಂಡಿತು.

ಮಹಾಜನ ವರದಿ :

ರಾಜ್ಯ ಪುನರ್‌ರಚನೆ ಆದ ನಂತರ ನಿಪ್ಪಾಣಿ. ಬೆಳಗಾವಿ. ಸಂಕೇಶ್ವರ. ಖಾನಾಪುರ ಭಾಗಗಳು ಕನ್ನಡ ನಾಡಿನಲ್ಲಿ ಉಳಿದದ್ದು ಮರಾಠಿಗರಿಗೆ ಸರಿ ಕಾಣದೆ ಆ ಭಾಗಗಳನ್ನು ಮರಳಿ ಪಡೆಯಬೇಕೆಂಬ ದುರುದ್ದೇಶದಿಂದ ಉಪಟಳ ಆರಂಭಿಸಿದರು. ರಾಜ್ಯಕ್ಕೆ ಬರಬೇಕಾಗಿದ್ದ ಅನೇಕ ಕನ್ನಡ ಪ್ರದೇಶಗಳು ಮಹಾರಾಷ್ಟ್ರದಲ್ಲಿ ಉಳಿದಿದ್ದರೂ. ಕನ್ನಡದ ನೆಲವನ್ನು ಕಬಳಿಸುವ ಹೊಂಚನ್ನು ಮರಾಠಿಗರು ಹಾಕಿದ್ದರು.

ಮರಾಠಿಗರ ಉಪಟಳವನ್ನು ನಿಗ್ರಹಿಸಿ ಗಡಿ ಭಾಗದ ಕನ್ನಡಿಗರಲ್ಲಿ ಜಾಗೃತಿ ಉಂಟು ಮಾಡಲು ಗುದ್ಲೆಪ್ಪನವರು ಆ ಭಾಗದ ಮುಖಂಡರಾಗಿದ್ದ ಅಪ್ಪಣ್ಣಗೌಡ ಪಾಟೀಲ. ಅಣ್ಣು ಗುರೂಜಿ ಮುಂತಾದವರೊಂದಿಗೆ ಸಾವಿರಾರು ಜನ ಕಾರ್ಯಕರ್ತರೊಡಗೂಡಿ ಚಳುವಳಿ ಮಾಡಿದರು. ಬೆಳಗಾವಿ. ಸಂಕೇಶ್ವರ. ನಿಪ್ಪಾಣಿಗಳು ಚಳುವಳಿಯ ಕೇಂದ್ರಗಳಾದವು. ನಿಪ್ಪಾಣಿಯತ್ತ ಹೆಚ್ಚು ಒತ್ತು ಕೊಟ್ಟ ಗುದ್ಲೆಪ್ಪನವರು. ಅದು ಕರ್ನಾಟಕದ ಅವಿಭಾಜ್ಯ ಅಂಗವೆಂದು ಪ್ರತಿಪಾದಿಸಿದರು. ಆ ಭಾಗದಲ್ಲಿ ಕನ್ನಡ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು. ಕಾಲೇಜುಗಳನ್ನು ಕಟ್ಟಲು ಪ್ರೇರಣೆ ನೀಡಿ. ಮಕ್ಕಳಿಗೆ ಕಡ್ಡಾಯವಾಗಿ ಕನ್ನಡದಲ್ಲಿ ಶಿಕ್ಷಣ ಕೊಡಿಸುವಂತೆ ಜನರಲ್ಲಿ ಪ್ರಜ್ಞೆ ಮೂಡಿಸಿದರು.

ಆದರೂ ಮರಾಠಿಗರು ತಮಗೆ ಅನ್ಯಾಯವಾಗಿದೆ ಎಂದು ಹುಯಿಲೆಬ್ಬಿಸಿದರು. ಕನ್ನಡಿಗರಿಗಂತೂ ಸಾಕಷ್ಟು ಅನ್ಯಾಯವಾಗಿದ್ದರೂ ಅದನ್ನು ಗಮನಿಸದೆ ಮರಾಠಿಗರು ಕೇಂದ್ರ ಸರಕಾರದ ಮೇಲೆ ಒತ್ತಡ ತರಲಾರಂಭಿಸಿದರು. ಆಗ ಕೇಂದ್ರ ಸರಕಾರವು ೧೯೬೬ ಅಕ್ಟೋಬರ್ ೨೫ ರಂದು ನ್ಯಾಯಾಧೀಶ ಮೆಹರಚಂದ ಮಹಾಜನ ಅವರ ಏಕಸದಸ್ಯತ್ವದ ಆಯೋಗವನ್ನು ನೇಮಿಸಿತು. ಈ ಆಯೋಗವು ಕರ್ನಾಟಕ. ಮಹಾರಾಷ್ಟ್ರ ಹಾಗೂ ಕೇರಳ ರಾಜ್ಯಗಳ ನಡುವಿನ ಗಡಿ ವಿವಾದಗಳ ಕುರಿತು ವರದಿ ಒಪ್ಪಿಸುವ ಉದ್ದೇಶ ಹೊಂದಿತ್ತು. ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ವ್ಹಿ. ಪಿ. ನಾಯಕ ಅವರು ಈ ಆಯೋಗ ನೀಡುವ ವರದಿಗೆ ತಾವು ಬದ್ಧರೆಂದು ೧೯೬೭ ಸಪ್ಟಂಬರ್ ೧೪ ರಂದು ಹೇಳಿದರು. ಕೇಂದ್ರವು ಮಹಾರಾಷ್ಟ್ರ ಸರಕಾರಕ್ಕೆ ಮಣೆದಿದೆ ಎಂದು ಕನ್ನಡಿಗರು ಆಯೋಗದ ವಿರುದ್ಧ ಸಿಡಿದೆದ್ದರು.

" ಮುಗಿದು ಹೋದ ಬೆಳಗಾವಿ ಸಮಸ್ಯೆಯನ್ನು ಕೇಂದ್ರ ಮತ್ತೆ ಎತ್ತಿದುದನ್ನು ಪ್ರತಿಭಟಿಸಲು ಗುದ್ಲೆಪ್ಪ ಹಳ್ಳಿಕೇರಿಯವರು ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಬಹುದೊಡ್ಡ ಪ್ರತಿಭಟನಾ ರ್‍ಯಾಲಿಯನ್ನು ಸಂಘಟಿಸಿದರು.

ರೈಲು ಮತ್ತು ರಸ್ತೆ ತಡೆಗಳಂತಹ ಪ್ರತಿಭಟನೆಗಳನ್ನು ಆಯೋಜಿಸಿದರು. ಗುದ್ಲೆಪ್ಪ ಹಳ್ಳಿಕೇರಿ ಅವರ ವೀರ ಕರೆಗೆ ಕನ್ನಡಿಗರಿಂದ ಪ್ರಚಂಡ ಪ್ರತಿಕ್ರಿಯೆ ವ್ಯಕ್ತವಾಯಿತು. ಗುದ್ಲೆಪ್ಪನವರಿಗೆ ಬೆಂಬಲಿಗರಾಗಿ ಸಹಸ್ರಾರು ಜನ ಸತ್ಯಾಗ್ರಹಿಗಳಾಗಿ ಸೇರಿದರು. ಬೆಳಗಾಂವಿ. ಬಳ್ಳಾರಿ ಮತ್ತು ಗುಲಬರ್ಗಾ ಕೇಂದ್ರ ಕಾರಾಗೃಹಗಳು ಸತ್ಯಾಗ್ರಹಿಗಳಿಂದ ತುಂಬಿ ಹೋದವು. ' ಕೇಂದ್ರವು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ನನ್ನ ಶವದ ಮೇಲೆ ಕೊಡಲಿ ' ಎಂದು ಗುದ್ಲೆಪ್ಪನವರು ಗರ್ಜಿಸಿದರು. ಇದರಿಂದಾಗಿ ಪ್ರತಿ ಹಳ್ಳಿಯೂ ಪ್ರತಿಭಟನೆಯ ಕೇಂದ್ರವಾಗುವಂತಾಯಿತು. ವರಕವಿ ದ. ರಾ. ಬೇಂದ್ರೆ ಅವರು ಗುದ್ಲೆಪ್ಪನವರ ಕುರಿತು ' ಈ ಗಡಿ ಇದ್ದಾಗ ಗಡಿ ಚಿಂತೆ ನಮಗ್ಯಾಕ ? ' ಎಂದರು. " [೨೨]

ಯಾವುದೇ ಸಮಸ್ಯೆ ಇರಲಿ. ಅದನ್ನು ಬಿಡಿಸಲು ಧೈರ್ಯದಿಂದ ಮುನ್ನುಗ್ಗುವ ಸ್ವಭಾವ. ಹಿಡಿದ ಕೆಲಸವನ್ನು ಅಚಲವಾದ ನಿಷ್ಠೆಯಿಂದ ಮಾಡುವ ಛಲ ಇವುಗಳಿಂದಾಗಿ ಗುದ್ಲೆಪ್ಪನವರ ನಾಯಕತ್ವದಲ್ಲಿ ಜನತೆಗೆ ಅಪಾರ ನಂಬಿಗೆ. ಶ್ರದ್ಧೆ ಇದ್ದವು. ಅಂತೆಯೇ ಅವರು ಕೈಯೆತ್ತಿ ಕರೆದರೆ ಸಹಸ್ರ ಸಹಸ್ರ ಜನ ಬಂದು ಸೇರುತ್ತಿದ್ದರು. ಗುದ್ಲೆಪ್ಪನವರಿಂದ ಪ್ರೇರಿತರಾದ ಆಯಾ ಭಾಗದ ಮುಖಂಡರು ಗುದ್ಲೆಪ್ಪನವರ ಮುಂದಾಳತನವನ್ನು ಬಯಸುತ್ತಿದ್ದರು.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಭಾಗದಲ್ಲಿ ಮಹಾಜನ ಆಯೋಗದ ವಿರುದ್ಧ ನಡೆದ ಪ್ರತಿಭಟನಾ ಪ್ರದರ್ಶನದ ನಿದರ್ಶನವನ್ನು ಗಮನಿಸಬಹುದು :

" ಮಹಾಜನ ಆಯೋಗವೇ ನಮಗೆ ಬೇಕಿಲ್ಲವೆಂದು ಜನತೆ ಕೂಗತೊಡಗಿತು. ಬೆಳಗಾವಿಯಿಂದ ಅನೇಕ ಕನ್ನಡ ಚಳುವಳಿ ನಾಯಕರು ಮುಂದೆ ಬಂದರು. ಬೆಂಗಳೂರಿನಿಂದಲೂ ಮುಖಂಡರು ಧಾವಿಸಿದರು. ಅಪ್ಪಣ್ಣಗೌಡ ಪಾಟೀಲ. ಅಣ್ಣು ಗುರೂಜಿ. ಗುದ್ಲೆಪ್ಪನವರು ಹಳ್ಳಿಕೇರಿ ಮೊದಲಾದ ನೇತಾರರು ನಿಪ್ಪಾಣಿಯಲ್ಲಿ ತಳವೂರಿದರು. ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಬೆಂಗಳೂರಿನಿಂದ ಧಾವಿಸಿ ಬಂದು ಗಡಿ ಭಾಗದ ಚಳುವಳಿಯಲ್ಲಿ ಭಾಗವಹಿಸಿದರು. ಬೆಳಗಾವಿಯಿಂದ ಶ್ರೀಮತಿ ಆಶಾಬಾಯಿ ಪೊದ್ದಾರ. ಸಂಕೇಶ್ವರದಿಂದ ಶ್ರೀಮತಿ ಅಹಲ್ಯಾದೇವಿ ಅಪ್ಪಣ್ಣಗೌಡ ಪಾಟೀಲ ಮೊದಲಾದವರು ಮಾರ್ಗದರ್ಶಕರಾದರು. ಮಹಾರಾಷ್ಟ್ರ ಮತ್ತು ಕರ್ನಾಟಕಕ್ಕೆ ಸಂಬಂಧಿಸಿದಂತೆ ಬೆಳಗಾಂವಿ. ನಿಪ್ಪಾಣಿಗಳನ್ನು ಬಿಟ್ಟುಕೊಡದಿರಲು. ಜೀವವನ್ನೇ ಪಣಕ್ಕಿಟ್ಟು ಹೋರಾಡಲು ಪ್ರತಿಜ್ಞೆ ಮಾಡಿದರು.... ಗೋಕಾಕ. ಬೈಲಹೊಂಗಲ. ಖಾನಾಪೂರ. ಸದಲಗಾ. ಭೋಜ. ಬೆಡಕಿಹಾಳ. ಚಿಕ್ಕೋಡಿ. ಹುಕ್ಕೇರಿಗಳಿಂದ ಸಾವಿರ ಸಾವಿರ ಸಂಖ್ಯೆಯಲ್ಲಿ ಕನ್ನಡ ಜನತೆ ಬಂದು ಕೂಡಿತು. ಶಾಲಾ. ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಪಾಲ್ಗೊಂಡರು. "

" ಹೀಗೆ ಹಮ್ಮಿಕೊಂಡ ಕನ್ನಡ ವೀರರ ಬೃಹತ್ ಚಳುವಳಿ ಮರಾಠಿಗರಿಗೆ ದಿಗಿಲುಂಟು ಮಾಡಿತು. ೧೫ - ೨೦ ಸಾವಿರಕ್ಕೂ ಮಿಕ್ಕಿದ. ನಿಪ್ಪಾಣಿಯ ಓಣಿಯಲ್ಲಿ ಗಸ್ತು ತಿರುಗುವ. ಎಲ್ಲಿ ನೋಡಿದಲ್ಲಿ ಕನ್ನಡ ಕಹಳೆ ಮೊಳಗಿಸುವ ಕನ್ನಡ ವೀರರಿಂದ ಅವರಿಗೆ ಮುಖಭಂಗವಾಯಿತು. " [೨೩]

ಈ ಎಲ್ಲ ಪ್ರತಿಭಟನೆಗಳ ಮಧ್ಯದಲ್ಲಿಯೇ ಮಹಾಜನ ಅವರು ಸಮೀಕ್ಷೆ ಆರಂಭಿಸಿದರು. ಅವರು ಕಾರವಾರಕ್ಕೆ ಹೋದಾಗ ಗುದ್ಲೆಪ್ಪನವರ ನೇತೃತ್ವದಲ್ಲಿ ಸಿ. ಜೆ. ಕಮಲಾಸಿ ಮುಂತಾದ ಕಾರ್ಯಕರ್ತರು ಮನವಿ ಕೊಟ್ಟು. ಕಾರವಾರ

ಕನ್ನಡಿಗರಿಗೇ ಸೇರಿದ್ದೆಂದು ಪ್ರತಿಪಾದಿಸಿದರು. ಆ ಭಾಗದ ಅನೇಕ ಸಂಘ ಸಂಸ್ಥೆಗಳಿಂದಲೂ ಮನವಿಗಳನ್ನು ಸಲ್ಲಿಸಲು ಪ್ರೇರಣೆ ನೀಡಿದರು. ನಿಪ್ಪಾಣಿ, ಬೆಳಗಾವಿ, ಸೊಲ್ಲಾಪುರ, ಅಕ್ಕಲಕೋಟೆ ಮುಂತಾದ ಭಾಗಗಳಲ್ಲಿ ಸಂಚರಿಸಿ ಅಲ್ಲಿಯ ಜನರಿಂದ ಆ ಭಾಗಗಳು ಕನ್ನಡ ನಾಡಿಗೇ ಸೇರಬೇಕೆಂದು ಆಯೋಗಕ್ಕೆ ಮನವಿಗಳನ್ನು ಸಲ್ಲಿಸಲು ಪ್ರೇರೇಪಿಸಿದರು.

ಹೀಗೆ ಎಲ್ಲೆಡೆಗೆ ತೆರಳಿ ಮಾಹಿತಿ ಸಂಗ್ರಹಿಸಿದ ಮಹಾಜನ ಅವರು ೧೯೬೭ ರ ಅಗಸ್ಟ್ ೨೫ ರಂದು ವರದಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿದರು. ವರದಿಯ ಪ್ರಕಾರ ಬೆಳಗಾವಿಯು ಕನ್ನಡದ ನೆಲವೆಂದು ಹೇಳಿದರೂ ನಿಪ್ಪಾಣಿ ಮತ್ತು ಖಾನಾಪುರಗಳನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಗಿತ್ತು. ಕಾಸರಗೋಡನ್ನು ಕೇರಳದಿಂದ ಕರ್ನಾಟಕಕ್ಕೆ ಸೇರಿಸುವಂತೆ ಸೂಚಿಸಲಾಗಿತ್ತು. ಈ ವರದಿಯನ್ನು ಕೇರಳ ಮತ್ತು ಮಹಾರಾಷ್ಟ್ರಗಳು ತಿರಸ್ಕರಿಸಿದವು. ಕರ್ನಾಟಕವು ತನ್ನ ಕೆಲ ಪ್ರದೇಶಗಳನ್ನು ಕಳೆದುಕೊಂಡರೂ ವರದಿಯನ್ನು ಒಪ್ಪಿಕೊಂಡಿತು.

ಮಹಾಜನ ಆಯೋಗದ ವರದಿಯನ್ನು ಜಾರಿಗೊಳಿಸುವಂತೆ ಕೇಂದ್ರ ಸರಕಾರವನ್ನು ಆಗ್ರಹಿಸಿ ಕರ್ನಾಟಕದೆಲ್ಲೆಡೆ ಚಳುವಳಿಗಳು ಜರುಗಿದವು. ಗುದ್ಲೆಪ್ಪನವರ ನೇತೃತ್ವದಲ್ಲಿ ಅನೇಕ ಕಾರ್ಯಕರ್ತರು ಹುಬ್ಬಳ್ಳಿಯ ಅಶೋಕನಗರ ರೇಲ್ವೆ ಗೇಟ ಬಳಿ ಬೃಹತ್ ಪ್ರಮಾಣದ ಪ್ರತಿಭಟನೆ ನಡೆಸಿತು. ಕಂಬಿಗಳ ಮೇಲೆ ಕುಳಿತು ರೈಲು ಸಂಚಾರ ಸ್ಥಗಿತಗೊಳಿಸಿದರು. ಚಳುವಳಿಗಾರರನ್ನುದ್ದೇಶಿಸಿ ಗುದ್ಲೆಪ್ಪನವರು ಮಹಾಜನ ವರದಿ ಜಾರಿಗೊಳಿಸಬೇಕೆಂದು ಭಾಷಣ ಮಾಡಿದರು. ಅದೇ ರೀತಿ ಘಟಪ್ರಭಾದಲ್ಲಿಯೂ ರೈಲು ತಡೆಯು ಗುದ್ಲೆಪ್ಪನವರ ನೇತೃತ್ವದಲ್ಲಿ ಜರುಗಿತು. ಅಪ್ಪಣ್ಣಗೌಡ ಪಾಟೀಲ, ಚನ್ನಪ್ಪ ವಾಲಿ, ಎ. ಆರ್. ಪಂಚಗಾವಿ, ಕರಲಿಂಗಣ್ಣವರ ಮುಂತಾದವರು ಪಾಲ್ಗೊಂಡಿದ್ದರು. ಹೀಗೆ ಅನೇಕ ಕಡೆಗಳಲ್ಲಿ ಗುದ್ಲೆಪ್ಪನವರ ನೇತೃತ್ವದಲ್ಲಿ ವರದಿಯ ಜಾರಿಗೆ ಚಳುವಳಿಗಳು ಜರುಗಿದವು.

ಮಾಜಿ ವಿಧಾನ ಪರಿಷತ್ ಸದಸ್ಯ ವಾಯ್. ಎಸ್. ಪಾಟೀಲ ಅವರು ಹೀಗೆ ಹೇಳುತ್ತಾರೆ : " ಮಹಾಜನ ವರದಿಯ ಜಾರಿಗೆ ಆಗ್ರಹಿಸಿ ಗುದ್ಲೆಪ್ಪನವರ ನೇತೃತ್ವದಲ್ಲಿ ದೆಹಲಿಗೆ ಸರ್ವಪಕ್ಷಗಳ ೧೫ ಜನ ಸದಸ್ಯರ ನಿಯೋಗ ತೆರಳಿತು. ಅದರಲ್ಲಿ ನಾನು ಜನಸಂಘವನ್ನು ಪ್ರತಿನಿಧಿಸಿದ್ದೆ. ದಿಲ್ಲಿಯಲ್ಲಿ ಎಲ್ಲ ಪಕ್ಷಗಳ ಮುಖಂಡರನ್ನು ಭೇಟಿಯಾಗಿ ವರದಿಯನ್ನು ಬೇಗನೇ ಜಾರಿಗೊಳಿಸಬೇಕು ಮತ್ತು ಬೆಳಗಾವಿ ಎಂದೆಂದಿಗೂ ಕರ್ನಾಟಕದ್ದೇ ಎಂದು ಮನವರಿಕೆ ಮಾಡಿಕೊಟ್ಟೆವು. " [೨೪]

ಇಷ್ಟಾದರೂ ಮಹಾಜನ ವರದಿ ಜಾರಿಗೊಳ್ಳಲಿಲ್ಲ. ಮಹಾರಾಷ್ಟ್ರ, ಕೇರಳಗಳೊಂದಿಗಿನ ಕರ್ನಾಟಕದ ಗಡಿ ಸಮಸ್ಯೆಯು ಬಗೆಹರಿಯದೇ ಉಳಿಯಿತು.

ಈ ರೀತಿಯಾಗಿ ಜನನಾಯಕ ಗುದ್ಲೆಪ್ಪನವರು ದೇಶದ ಮತ್ತು ರಾಜ್ಯದ ಹಿತಕ್ಕಾಗಿ ತಮ್ಮನ್ನು ಹಲವು ಹೋರಾಟಗಳಲ್ಲಿ ತೊಡಗಿಸಿಕೊಂಡರು. ಈ ಎಲ್ಲ ಹೋರಾಟಗಳಲ್ಲಿ ಗುದ್ಲೆಪ್ಪನವರ ನಾಯಕತ್ವದ ವಿವಿಧ ಲಕ್ಷಣಗಳು ಕಂಡುಬರುತ್ತವೆ.

ಟಿಪ್ಪಣಿಗಳು

೧. ಕಾಮತ. ಸೂರ್ಯನಾಥ ಯು.. (ಪ್ರ. ಸಂ.) **ಕರ್ನಾಟಕ ರಾಜ್ಯ ಗ್ಯಾಝೆಟೀಯರ್**, ಭಾಗ - ೧ (ಬೆಂಗಳೂರು : ಕರ್ನಾಟಕ ರಾಜ್ಯ ಸರಕಾರ, ೧೯೮೪) ಪು. ೨೯೩ ಮತ್ತು ೨೯೪

೨. ಗೋಪಾಲರಾವ್ ಎಚ್. ಎಸ್.. **ಕರ್ನಾಟಕ ಏಕೀಕರಣ ಇತಿಹಾಸ** (ಬೆಂಗಳೂರು : ನವಕರ್ನಾಟಕ ಪ್ರಕಾಶನ. ೧೯೯೬) ಪು. ೮೦ ಮತ್ತು ೮೧

೩. Halappa G. S., (ed) **History of Freedom Movement in Karnataka** (Bangalore : Government of Mysore, 1964) p. 423

೪. ಕಮಲಾನಿ ಸಿ. ಜೆ.. ಸಮಾಜ ಕಾರ್ಯಕರ್ತರು. ಧಾರವಾಡ. ವಯಸ್ಸು ೬೩ : ೨೪. ೬ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದುದು.

೫. ಗೋಪಾಲರಾವ್ ಎಚ್. ಎಸ್.. **ಕರ್ನಾಟಕ ಏಕೀಕರಣ ಇತಿಹಾಸ** (ಬೆಂಗಳೂರು : ನವಕರ್ನಾಟಕ ಪ್ರಕಾಶನ. ೧೯೯೬) ಪು. ೧೭೪

೬. ಅದೇ. ಪು. ೧೭೬

೭. ಅದೇ. ಪು. ೩೬೯ ಮತ್ತು ೩೭೦

೮. ಕವಂಟೆ ಎಸ್. ಎಚ್.. ' ಹೈದರಾಬಾದ ಕರ್ನಾಟಕ : ವೀರಶೈವ ನಾಯಕರು ಮತ್ತು ಏಕೀಕರಣ '. ಕಲಬುರ್ಗಿ ಎಂ. ಎಂ.. ಪಾಟೀಲ ಎಸ್. ಎಚ್. (ಸಂ.) **ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ - ಲಿಂಗಾಯತರ ಪಾತ್ರ** (ಗದಗ : ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ. ೧೯೯೮) ಪು. ೭೬

೯. ಪಾಟೀಲ ಕೆ. ಎಸ್.. **ನನ್ನ ದಿನಚರಿ** (ಅದರಗುಂಚಿ ಶಂಕರಗೌಡರ ದಿನಚರಿ) (ಬೆಂಗಳೂರು : ವ್ಹಿ. ಬಿ. ಶಾಸ್ತ್ರೀಮಠ. ಕರ್ನಾಟಕ ಸ್ವಾತಂತ್ರ್ಯಯೋಧರ ಪ್ರಧಾನ ಕಾರ್ಯದರ್ಶಿಗಳು. ೧೯೯೪) ಪು. ೬೧ ಮತ್ತು ೬೨

೧೦. ಗೋಪಾಲರಾವ್ ಎಚ್. ಎಸ್.. **ಕರ್ನಾಟಕ ಏಕೀಕರಣ ಇತಿಹಾಸ** (ಬೆಂಗಳೂರು : ನವಕರ್ನಾಟಕ ಪ್ರಕಾಶನ. ೧೯೯೬) ಪು. ೩೧೨ ಮತ್ತು ೩೧೩

೧೧. ಪಾಟೀಲ ಕೆ. ಎಸ್.. **ನನ್ನ ದಿನಚರಿ** (ಅದರಗುಂಚಿ ಶಂಕರಗೌಡರ ದಿನಚರಿ) (ಬೆಂಗಳೂರು : ವ್ಹಿ. ಬಿ. ಶಾಸ್ತ್ರೀಮಠ. ಕರ್ನಾಟಕ ಸ್ವಾತಂತ್ರ್ಯಯೋಧರ ಪ್ರಧಾನ ಕಾರ್ಯದರ್ಶಿಗಳು. ೧೯೯೪). ಪು. ೬೩ ಮತ್ತು ೬೪

೧೨. ಹಂಡಿಗಿ ಸಂಗಮೇಶ. ' **ಕನ್ನಡಿಗರಲ್ಲಿ ಜಾಗೃತಿ ಮೂಡಿಸಿದ ಹಳ್ಳಿಕೇರಿಯವರು** ' (ಅಪ್ರಕಟಿತ ಲೇಖನ)

೧೩. ಗೋಪಾಲರಾವ್ ಎಚ್. ಎಸ್.. **ಕರ್ನಾಟಕ ಏಕೀಕರಣ ಇತಿಹಾಸ** (ಬೆಂಗಳೂರು : ನವಕರ್ನಾಟಕ ಪ್ರಕಾಶನ. ೧೯೯೬) ಪು. ೧೯೦ ಮತ್ತು ೧೯೧

೧೪. ಮೋದಿ ಹುಚ್ಚೇಶ್ವರ. ಸ್ವಾತಂತ್ರ್ಯಯೋಧರು ಮತ್ತು ಸಂಪಾದಕರು " ಕನ್ನಡಿಗ " ವಾರಪತ್ರಿಕೆ. ಹುಬ್ಬಳ್ಳಿ. ವಯಸ್ಸು : ೭೮. ೧೪-೨-೧೯೯೯ ರಂದು ಸಂದರ್ಶನದಲ್ಲಿ ಹೇಳಿದುದು.

೧೫. ಗೋಪಾಲರಾವ್ ಎಚ್. ಎಸ್.. **ಕರ್ನಾಟಕ ಏಕೀಕರಣ ಇತಿಹಾಸ** (ಬೆಂಗಳೂರು : ನವಕರ್ನಾಟಕ ಪ್ರಕಾಶನ. ೧೯೯೬) ಪು. ೩೩೩

೧೬. ಗೋಕಾಕ ವಿ. ಕೃ. . " ಹೊಸರಿತ್ತಿಯಿಂದ ಬೆಂಗಳೂರಿಗೆ ". ಗೋಕಾಕ ವಿ. ಕೃ. ಮತ್ತು ಇತರರು. (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ. ಷಷ್ಟ್ಯಬ್ದಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೯೬). ಪು. ೨೭ ಮತ್ತು ೨೮

೧೭. ಮಳಿಯೆ ಗೋವರ್ಧನರಾವ್. ' ಹಳ್ಳಿಕೇರಿಯವರ ತುಂಬು ಬಾಳು ' ಅದೇ. ಪುಟ ೧೩೨ - ೧೩೩

೧೮. ನಿಜಲಿಂಗಪ್ಪ ಎಸ್.. ಮಾಜಿ ಮುಖ್ಯಮಂತ್ರಿಗಳು. ಚಿತ್ರದುರ್ಗ. ವಯಸ್ಸು : ೯೬ : ೨೪ - ೧೦ - ೧೯೯೮ ರಂದು ಸಂದರ್ಶನದಲ್ಲಿ ಹೇಳಿದುದು.

೧೯. ಚುರ್ಚಿಹಾಳಮಠ ಸಿ. ಎಂ.. (ಪ್ರ. ಸಂ.) ಯಾಳಗಿ. ಮಹಾಲಿಂಗ (ಸಂ.) **ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ** (ಮುಂಡರಗಿ : ಮುಂಡರಗಿ ತಾಲೂಕ ಸ್ವಾತಂತ್ರ್ಯಯೋಧರ ಸಂಘ. ೧೯೯೯) ಪು. ೫೫

೨೦. ಚುರ್ಚಿಹಾಳಮಠ ಸಿ. ಎಂ.. ಸ್ವಾತಂತ್ರ್ಯಯೋಧರು ಮತ್ತು ಮಾಜಿ ಶಾಸಕರು. ಮುಂಡರಗಿ. ವಯಸ್ಸು : ೭೮. ೨೭ - ೮ - ೨೦೦೦ ರಂದು ಸಂದರ್ಶನದಲ್ಲಿ ಹೇಳಿದುದು.

೨೧. ಪಾಟೀಲ ಪುಟ್ಟಪ್ಪ. ಸಂಪಾದಕರು 'ಪ್ರಪಂಚ'. 'ವಿಶ್ವವಾಣಿ'. ಹುಬ್ಬಳ್ಳಿ: ವಯಸ್ಸು : ೭೯. ೨೨ - ೧೦ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೨. Shintri Sarojini B. and Raghavendra Rao K., **The Iron Man of Karnataka : Hallikeri Gudleppa** (Dharwad : Dakshina Bharat Hindi Prachar Sabha, Karnataka, 2000) p. 39

೨೩. ಹಂಜಿ ಎಸ್. ವಾಯ್.. **ಶ್ರೀ ಅಪ್ಪಣ್ಣಗೌಡರು** (ಹುಬ್ಬಳ್ಳಿ : ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ. ಮೂರುಸಾವಿರಮಠ. ೧೯೮೫) ಪು. ೧೩೯ ಮತ್ತು ೧೪೦

೨೪. ಪಾಟೀಲ ವಾಯ್. ಎಸ್.. ಮಾಜಿ ವಿಧಾನ ಪರಿಷತ್ ಸದಸ್ಯರು. ಧಾರವಾಡ. ವಯಸ್ಸು : ೭೫. ೧೬ - ೭ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದುದು.

ಅಧ್ಯಾಯ ನಾಲ್ಕು

ಕಾಂಗ್ರೆಸ್ ಸಂಘಟನೆ - ಶಕ್ತಿ ಸಂವರ್ಧನೆ

ಅಧ್ಯಾಯ ನಾಲ್ಕು

ಕಾಂಗ್ರೆಸ್ ಸಂಘಟನೆ - ಶಕ್ತಿ ಸಂವರ್ಧನೆ

ಭಾರತೀಯರಲ್ಲಿ ರಾಜಕೀಯದ ಪರಿಜ್ಞಾನವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದಂತಹ ಸಂಘಟನೆ ಕಾಂಗ್ರೆಸ್. ಕಾಂಗ್ರೆಸ್ಸು ೧೮೮೫ ರಲ್ಲಿ ಸ್ಥಾಪಿತವಾದಾಗ ಮತ್ತು ನಂತರ ಕೆಲವರ್ಷಗಳ ವರೆಗೆ ಅದು ಸುಶಿಕ್ಷಿತರು, ಉನ್ನತ ವರ್ಗದವರು ಮಾತ್ರ ಅದರಲ್ಲಿದ್ದರು. ಬ್ರಿಟಿಷ ಆಡಳಿತದಲ್ಲಿ ಸುಧಾರಣೆ, ಆಡಳಿತದಲ್ಲಿ ಪಾಲ್ಗೊಳ್ಳಲು ಸುಶಿಕ್ಷಿತ ಭಾರತೀಯರಿಗೆ ಅವಕಾಶ ಕೊಡುವಂತೆ ಮನವಿಗಳ ಮೂಲಕ ಆಗ್ರಹಿಸುವ ಕಾರ್ಯವನ್ನು ಅದು ಮಾಡುತ್ತಿತ್ತು.

ಲೋಕಮಾನ್ಯ ಬಾಲಗಂಗಾಧರ ಟಿಳಕರ ಜನಪರ ನಿಲುವಿನಿಂದ ಕಾಂಗ್ರೆಸ್ಸು ಸಾಮಾನ್ಯ ಜನರ ಹತ್ತಿರ ಬರಲಾರಂಭಿಸಿತು. ತದನಂತರ ೧೯೧೫ ರಲ್ಲಿ ಗಾಂಧೀಜಿಯವರ ಆಗಮನದಿಂದ ಕಾಂಗ್ರೆಸ್ಸು ಹೆಚ್ಚು ಹೆಚ್ಚು ಸಾಮಾನ್ಯ ಜನರನ್ನು ಆಕರ್ಷಿಸಲಾರಂಭಿಸಿತು. ಗಾಂಧೀಜಿಯವರ ಜಾತ್ಯತೀತ ಮನೋಭಾವ, ಜನಸಾಮಾನ್ಯರ ಬಗೆಗಿನ ಅಪಾರ ಕಾಳಜಿ, ಸ್ವಾತಂತ್ರ್ಯಪರ ನಿಲುವು ಮುಂತಾದವುಗಳಿಂದ ಕಾಂಗ್ರೆಸ್ ಸಂಘಟನೆ ಜನಪ್ರಿಯವಾಗಹತ್ತಿತು.

ನಾಗಪುರದಲ್ಲಿ ೧೯೨೦ ರಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ನಿರ್ಣಯದ ಮೇರೆಗೆ ಪ್ರತ್ಯೇಕ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ರಚನೆಗೆ ಒತ್ತು ನೀಡಲಾಯಿತು. ತತ್ಫಲವಾಗಿ ಅದೇ ವರ್ಷ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ರಚಿತವಾಗಿ ಗದಗ ನಗರದಲ್ಲಿ ತನ್ನ ಕೇಂದ್ರ ಕಚೇರಿಯನ್ನು ಹೊಂದಿ ಕಾರ್ಯಾರಂಭಿಸಿತು.

೧೯೨೪ ರಲ್ಲಿ ಬೆಳಗಾವಿಯಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಕರ್ನಾಟಕದ ಬ್ರಾಹ್ಮಣೇತರ ತರುಣರನ್ನು ಆಕರ್ಷಿಸಿತು. ಗುದ್ಲೆಪ್ಪ ಹಳ್ಳಿಕೇರಿ ಅವರು ಕಾಂಗ್ರೆಸ್ ಸದಸ್ಯತ್ವವನ್ನು ಹೊಂದಿ ಅಧಿವೇಶನಕ್ಕೆ ಸ್ವಯಂ ಸೇವಕರಾಗಿ ಹೋಗಿ ಶಿಸ್ತುಬದ್ಧ ಸೈನಿಕನಂತೆ ಕಾರ್ಯ ಮಾಡಿದರು.

ನಂತರದ ದಿನಗಳಲ್ಲಿ ತರುಣ ಗುದ್ಲೆಪ್ಪನವರು ಬ್ರಾಹ್ಮಣೇತರರನ್ನು ಪ್ರೇರೇಪಿಸಿ ಕಾಂಗ್ರೆಸ್ ಸಂಘಟನೆಗೆ ಸೇರುವಂತೆ ಮಾಡಿ ನಗರ ಪ್ರದೇಶಗಳಿಂದ ಹಳ್ಳಿಗಳ ವರೆಗೆ ಕಾಂಗ್ರೆಸ್ಸು ಹಬ್ಬುವಂತೆ ಮಾಡಿದ ಪ್ರಮುಖರು. ಇದು ಗುದ್ಲೆಪ್ಪನವರು ಮಾಡಿದಂತಹ ಶ್ಲಾಘನೀಯವಾದ ರಾಷ್ಟ್ರೀಯ ಸೇವೆಯಾಗಿದೆ. ತಾವೇ ಸ್ಥಾಪಿಸಿದ ಭಾರತೀಯ ತರುಣ ಸಂಘ ಹಾಗೂ ಸ್ವಗ್ರಾಮ ಹೊಸರಿತ್ತಿಯ ಗಾಂಧಿ ಆಶ್ರಮದ ಮೂಲಕ ಕಾಂಗ್ರೆಸ್ ಸಂಘಟನೆಗೆ ಭದ್ರವಾದ ಬುನಾದಿಯನ್ನು ಹಾಕಿದರು.

ಹಳ್ಳಿಗಳಿಗೂ ಹಬ್ಬಿದ ಕಾಂಗ್ರೆಸ್ಸು :

ಗುದ್ಲೆಪ್ಪನವರು ಕಾಂಗ್ರೆಸ್ ಸದಸ್ಯರನ್ನು ಮಾಡಲು ಹಳ್ಳಿ ಹಳ್ಳಿಗೆ ಹೋಗುತ್ತಿದ್ದರು. ಅವರ ಸಹಕಾರ್ಯಕರ್ತ ವೆಂಕಟೇಶ ಮಾಗಡಿ ಅವರು ಕಾಂಗ್ರೆಸ್ ಪ್ರಚಾರ ಕಾರ್ಯದ ಕುರಿತು ತಮ್ಮ ಅನುಭವವನ್ನು ಹೀಗೆ ಹೇಳುತ್ತಾರೆ : " ಒಂದು ದಿನ ನಾವಿಬ್ಬರೂ ನಮ್ಮ ಬಟ್ಟೆ ಹಾಸಿಗೆಗಳನ್ನು. ಭಾರವಾಗಿದ್ದ ಬಗಲ ಚೀಲಗಳನ್ನು ಹಾಕಿಕೊಂಡು ಗದಗದಿಂದ ಮುಳಗುಂದ ಲಕ್ಷ್ಮೇಶ್ವರ ಮಾರ್ಗವಾಗಿ ಬೇಸಿಗೆಯ ಬಿಸಿಲಲ್ಲಿ ಇಡೀ ದಿನ ನಡೆಯುತ್ತ ರಾತ್ರಿ ದಡ್ಡೂರಲ್ಲಿ ಉಳಿದು ಮುಂದೆ ಹೊಸರಿತ್ತಿಗೆ ಕಾಲ್ನಡಿಗೆಯಿಂದಲೇ ಹೋಗಿ ಮುಟ್ಟಿದ್ದು ಇನ್ನೂ ಚೆನ್ನಾಗಿ ನೆನಪಿದೆ. ಈ ದಿನಗಳಲ್ಲಿ ನಮಗೆ ಯಾರದೋ ಮನೆಯ ಜೋಳದ ರೊಟ್ಟಿಗಳು. ಕರಿಂಡಿ. ಮೊಸರು ಇವೇ ಪಕ್ವಾನ್ನಗಳಾಗಿದ್ದವು. ವರ್ಷಾನುಗಟ್ಟಲೆ ಹಾಗೆಯೇ ಕಾಲಹಾಕಿ ಪ್ರಚಾರ ಮಾಡಿದೆವು. " ೧

ಹೀಗೆ ಗುದ್ಲೆಪ್ಪನವರು ಊರೂರಿಗೆ ಹೋಗಿ 'ವ್ಹಿಲೇಜ ಕಾಂಗ್ರೆಸ್ ಕಮೀಟಿ' (ಗ್ರಾಮ ಕಾಂಗ್ರೆಸ್ ಸಮಿತಿ) ಗಳನ್ನು ಸ್ಥಾಪಿಸಿ. ಜನರನ್ನು ರಾಷ್ಟ್ರೀಯ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ಆಗಾಗ್ಗೆ ರಾಷ್ಟ್ರೀಯ ಧುರೀಣರನ್ನು ಬರಮಾಡಿಕೊಂಡು ಅವರಿಂದ ಜನರಿಗೆ ರಾಷ್ಟ್ರದ ವಿದ್ಯಮಾನಗಳನ್ನು ತಿಳಿಸಿಕೊಡುತ್ತಿದ್ದರು. ಗುದ್ಲೆಪ್ಪನವರು ದೇಶದ ರಾಜಕೀಯ. ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಹಾಗೂ ಕಾಂಗ್ರೆಸ್ಸಿನ ಗೊತ್ತುಗುರಿಗಳ ಕುರಿತು ಜನರಿಗೆ ತಿಳಿವಳಿಕೆ ನೀಡುತ್ತ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಿದ್ದರು. ಹೀಗೆ ಹಳ್ಳಿಯ ರೈತರು. ಅಶಿಕ್ಷಿತರು. ಬಡವರು. ಕೂಲಿಕಾರರು ಇವರೆಲ್ಲ 'ವ್ಹಿಲೇಜ ಕಾಂಗ್ರೆಸ್ ಕಮೀಟಿ'ಯಲ್ಲಿ ಸದಸ್ಯತ್ವವನ್ನು ಪಡೆದುಕೊಳ್ಳುವಂತಾಯಿತು. ಇದರಿಂದ ಕಾಂಗ್ರೆಸ್ಸು ಸಮಾಜವ್ಯಾಪಿ ಸ್ವರೂಪವನ್ನು ಪಡೆದುಕೊಂಡಿತು.

ಕಾಂಗ್ರೆಸ್ಸಿನಲ್ಲಿ ಪದಾಧಿಕಾರಿಯಾಗಿ ಸೇವೆ :

ಕಾಂಗ್ರೆಸ್ ಸಂಘಟನೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಗುದ್ಲೆಪ್ಪನವರು ೧೯೩೧ ರಲ್ಲಿ ಕರಾಚಿಯಲ್ಲಿ ನಡೆದ ವಲ್ಲಭಭಾಯಿ ಪಟೇಲರು ಅಧ್ಯಕ್ಷರಾಗಿದ್ದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿದ್ದರು. ಉತ್ತರ ಭಾರತದ ದಿಲ್ಲಿ. ಆಗ್ರಾ ಮುಂತಾದ ಮುಖ್ಯ ಸ್ಥಳಗಳನ್ನು ಸಂದರ್ಶಿಸಿ ಬಂದರು. ಅದೇ ವರ್ಷ ಮೇ ತಿಂಗಳಲ್ಲಿ ಧಾರವಾಡ ಜಿಲ್ಲಾ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ಕಾರ್ಯಾರಂಭಿಸಿದರು. ಅಂದಿನಿಂದ ಕಾಂಗ್ರೆಸ್ ಪದಾಧಿಕಾರಗಳು ಅವರನ್ನು ಬಿಡಲಿಲ್ಲ. ಕಾಂಗ್ರೆಸ್ ಸಂಘಟನೆ ಮತ್ತು ಶಕ್ತಿ ಸಂವರ್ಧನೆಗೆ ಮತ್ತಷ್ಟು ಪುಷ್ಟಿ ದೊರೆಯುವಂತಾಯಿತು. ೧೯೩೧ ರ ಡಿಸೆಂಬರ್ ಕೊನೆಯ ವಾರದಲ್ಲಿ ಜವಾಹರಲಾಲ ನೆಹರೂ ಅವರನ್ನು ಹುಬ್ಬಳ್ಳಿಗೆ ಬರಮಾಡಿಕೊಂಡರು.

ಕಾರ್ನಾಡ ಸದಾಶಿವರಾಯರು ಅಧ್ಯಕ್ಷರಾಗಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಿಗೆ ಗುದ್ಲೆಪ್ಪನವರು ಸರ್ವಾಧಿಕಾರಿಯಾಗಿದ್ದರು. ೧೯೩೨ ರ ಮೇ ತಿಂಗಳ ೨೭ ರಂದು ಬಾಗಲಕೋಟೆಯಲ್ಲಿ ಜರುಗಿದ ಕರ್ನಾಟಕದ ಏಳನೆಯ ರಾಜಕೀಯ ಪರಿಷತ್ತನ್ನು. ಅಲ್ಲಿಯ ಪ್ರಮುಖರಾದ ಮೊಹರೆ ಹನುಮಂತರಾಯರು. ಜೋರಾಪುರ ಗುರುರಾಯರು. ಮಂಗಳವೇಢೆ ಶ್ರೀನಿವಾಸರಾಯರು ಮುಂತಾದವರನ್ನು ಸಂಪರ್ಕಿಸಿ. ಸಂಘಟಿಸಿ. ಪ್ರಚಾರಕಾರ್ಯವನ್ನು ಪೂರೈಸಿದರು.

ಆಗ ಸರಕಾರವು ಕಾಂಗ್ರೆಸ್ ಸಂಸ್ಥೆಯನ್ನು ಅಕ್ರಮಗೊಳಿಸಿದ್ದರೂ ನಾಯಕ ಗುದ್ಲೆಪ್ಪನವರು ಕೆಲವು ಮುಖಂಡರ ಸಹಕಾರದಿಂದ ಈ ರಾಜಕೀಯ ಪರಿಷತ್ತನ್ನು ಏರ್ಪಡಿಸಿದುದು ಸಾಹಸವೇ ಸರಿ. ಪರಿಷತ್ತು ನಡೆಯುವ ಸಂದರ್ಭದಲ್ಲಿಯೇ ಗುದ್ಲೆಪ್ಪನವರ ಬಂಧನವಾದರೂ ಅದು ಯಶಸ್ವಿಯಾಗಿ ಜರುಗುವಲ್ಲಿ ಅವರ ನಾಯಕತ್ವದ ಸಂಘಟನೆ ಮತ್ತು ಪ್ರಚಾರ ಕಾರ್ಯಗಳೇ ಕಾರಣವಾಗಿದ್ದವು.

ಗುದ್ಲೆಪ್ಪನವರು ೧೯೩೪ ರಿಂದ ೧೯೩೮ ರ ವರೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಜಂಟಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಈ ಅವಧಿಯಲ್ಲಿ ಅವರು ಪಡೆದುಕೊಂಡ ರಾಜಕೀಯ ಜ್ಞಾನ ಅಸದೃಶವಾಗಿತ್ತು.

೧೯೩೭ ರ ವಿಧಾನಸಭಾ ಚುನಾವಣೆ :

ಮುಂಬಯಿ ವಿಧಾನಸಭೆಗೆ ೧೯೩೭ ರ ಫೆಬ್ರುವರಿಯಲ್ಲಿ ಚುನಾವಣೆ ನಡೆಯಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅಧಿಕಾರ ವಹಿಸಿಕೊಳ್ಳಬೇಕೆಂದು ಚುನಾವಣಾ ಕಣಕ್ಕಿಳಿಯಿತು. ಧಾರವಾಡ ಜಿಲ್ಲೆಯ ಉತ್ತರ ಭಾಗದಿಂದ ಅಂದಾನಪ್ಪ ದೊಡ್ಡಮೇಟಿ, ಕೆ. ಬಿ. ದುಂದೂರ ವಕೀಲರು, ವೀರನಗೌಡ ಪಾಟೀಲ ಅಭ್ಯರ್ಥಿಗಳಾಗಿದ್ದರು. ದಕ್ಷಿಣ ಭಾಗದಿಂದ ತಿ. ರು. ನೆಸ್ವಿ, ಎಸ್. ಎಸ್. ಕರಗುದರಿ, ನಾಗಮ್ಮ ಪಾಟೀಲರು ಅಭ್ಯರ್ಥಿಗಳಾಗಿದ್ದರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಜಂಟಿ ಕಾರ್ಯದರ್ಶಿಯಾಗಿದ್ದ ಗುದ್ಲೆಪ್ಪನವರು ಧಾರವಾಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಹೊಸಮನಿ ಸಿದ್ಧಪ್ಪನವರೊಂದಿಗೆ ಚುನಾವಣಾ ಪ್ರಚಾರ ಕಾರ್ಯವನ್ನು ಭರದಿಂದ ಕೈಕೊಂಡರು. ಸ್ವತಃ ಜವಾಹರಲಾಲ ನೆಹರೂ ಅವರು ಚುನಾವಣಾ ಪ್ರಚಾರಾರ್ಥ ಧಾರವಾಡ ಜಿಲ್ಲೆಗೆ ಬಂದು ಭಾಷಣ ಮಾಡಿದರು. ವೀರನಗೌಡ ಪಾಟೀಲರೊಬ್ಬರನ್ನುಳಿದು ಎಲ್ಲರೂ ಪ್ರಚಂಡ ಜಯ ಗಳಿಸಿದರು.

೧೯೩೮ ರ ಜನೆವರಿ ೧೬ ರಂದು ರಾಣೆಬೆನ್ನೂರಿನಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಚುನಾವಣೆ ನಡೆಯಿತು. ಆಗ ಗಂಗಾಧರರಾವ ದೇಶಪಾಂಡೆ ಅಧ್ಯಕ್ಷರಾದರು. ತರುಣ ಗುದ್ಲೆಪ್ಪನವರು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಈ ಸನ್ನಿವೇಶವು ಗುದ್ಲೆಪ್ಪನವರ ನಾಯಕತ್ವ ಪ್ರಬಲಗೊಳ್ಳಲು ಸದವಕಾಶವನ್ನು ಒದಗಿಸಿತು.

ಅವರು ತಮ್ಮ ಕರ್ತೃತ್ವಶಕ್ತಿ ಹಾಗೂ ಅಪಾರ ಪರಿಶ್ರಮದಿಂದ ಕಾಂಗ್ರೆಸ್ ಸಂಘಟನೆಯನ್ನು ಬಲಗೊಳಿಸುವ ಮೂಲಕ ಅಖಿಲ ಭಾರತ ಮಟ್ಟದ ಕಾಂಗ್ರೆಸ್ ಮುಖಂಡರ ಗಮನ ಸೆಳೆದರು. ಅದರಿಂದಾಗಿ ಗುದ್ಲೆಪ್ಪನವರು ೧೯೪೦ ರಲ್ಲಿಯೇ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ತಮ್ಮ ಸೇವಾ ಕ್ಷೇತ್ರವನ್ನು ವಿಸ್ತರಿಸಿಕೊಂಡು ಜೀವಿತಾವಧಿಯವರೆಗೂ ಕಾಂಗ್ರೆಸ್ ಸಂಘಟನೆಯನ್ನು ಮಾಡಿದರು.

ಗುದ್ಲೆಪ್ಪನವರು ೧೯೪೬ ರಲ್ಲಿ ಪ್ರಥಮ ಸಲ ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಅಂದಿನಿಂದ ೧೯೬೦ ರ ವರೆಗೆ ಅವ್ಯಾಹತವಾಗಿ ಅವಿರೋಧವಾಗಿ ೧೪ ವರ್ಷಗಳ ಕಾಲ ಅವರೇ ಅಧ್ಯಕ್ಷರಾಗಿ ದಾಖಲೆಯನ್ನೇ ನಿರ್ಮಿಸಿದರು. ಇದು ಕಾಂಗ್ರೆಸ್ ಸಂಸ್ಥೆಯ ಸಮರ್ಥ ಸಂಘಟನೆಗೆ ಮತ್ತು ದಕ್ಷ ಆಡಳಿತಕ್ಕೆ ಗುದ್ಲೆಪ್ಪನವರ ನಾಯಕತ್ವದ ಅನಿವಾರ್ಯತೆ ಮತ್ತು ಅವಶ್ಯಕತೆಯನ್ನು ಎತ್ತಿ ತೋರಿಸುತ್ತದೆ.

ಉತ್ತರ ಕರ್ನಾಟಕದಲ್ಲಿ ಜನಪ್ರಿಯ ನಾಯಕರಾಗಿ ರೂಪುಗೊಂಡಿದ್ದ ಗುದ್ಲೆಪ್ಪನವರು ೧೯೪೬ ರಲ್ಲಿ ಎಸ್. ನಿಜಲಿಂಗಪ್ಪನವರನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಿನ ಅಧ್ಯಕ್ಷರನ್ನಾಗಿ ಮಾಡುವಲ್ಲಿ ವಿಶೇಷವಾಗಿ ಶ್ರಮಿಸಿದರು.

ಗುದ್ಲೆಪ್ಪನವರು ಪ್ರಥಮ ಬಾರಿಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ವರ್ಷವೇ ಅಂದರೆ ೧೯೪೬ ರಲ್ಲಿ ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಭಾಗವಹಿಸಬೇಕೆಂಬ ನಿರ್ಣಯವನ್ನು ಮನ್ನಿಸಿ, ಜಿಲ್ಲೆಯ ತುಂಬ ಸಂಚರಿಸಿ ಕಾಂಗ್ರೆಸ್ ಪ್ರಚಾರ ಮಾಡಿದರು. ಅವರ ಪರಿಶ್ರಮ, ಮುತ್ಸದ್ದಿತನ, ಚಾಣಾಕ್ಷತನಗಳ ಫಲವಾಗಿ ಕಾಂಗ್ರೆಸ್ ಪಕ್ಷವು ಪ್ರಚಂಡ ಬಹುಮತದಿಂದ ಆಯ್ಕೆಯಾಯಿತು.

೧೯೪೬ ರ ವಿಧಾನಸಭಾ ಚುನಾವಣೆ :

ಮುಂಬಯಿ ವಿಧಾನಸಭೆಗೆ ೧೯೪೬ ಮಾರ್ಚ ಮೊದಲ ವಾರದಲ್ಲಿ ಚುನಾವಣೆ ಜರುಗಿತು. ಧಾರವಾಡ ಜಿಲ್ಲಾ ಉತ್ತರ ಭಾಗಕ್ಕೆ ೪, ದಕ್ಷಿಣ ಭಾಗಕ್ಕೆ ೩ ಸ್ಥಾನಗಳಿದ್ದವು. ದಕ್ಷಿಣ ಭಾಗಕ್ಕೆ ಕಾಂಗ್ರೆಸ್ಸಿನ ವೀರನಗೌಡ ಪಾಟೀಲ, ಕೆ. ಎಫ್. ಪಾಟೀಲ ಹಾಗೂ ರಾಣೆಬೆನ್ನೂರ ಮೀಸಲು ಕ್ಷೇತ್ರಕ್ಕೆ ಮಹಿಳಾ ಅಭ್ಯರ್ಥಿಯಾಗಿ ಸಾಂಬ್ರಾಣಿ ಎಲ್ಲಮ್ಮ ಸ್ಪರ್ಧಿಸಿದ್ದರು. ಉತ್ತರ ಭಾಗಕ್ಕೆ ಅಂದಾನಪ್ಪ ದೊಡ್ಡಮೇಟಿ, ತಿ. ರು. ನೆಸ್ವಿ ಹಾಗೂ ಇನ್ನೀರ್ವರು ಕಾಂಗ್ರೆಸ್ ಹುರಿಯಾಳಾಗಿ ಸ್ಪರ್ಧಿಸಿದ್ದರು. ಧಾರವಾಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಗುದ್ಲೆಪ್ಪನವರು ತಾವು ಸ್ಪರ್ಧಿಸದೇ ಪ್ರಚಾರ ಕಾರ್ಯ ಕೈಕೊಂಡರು. ತುರುಸಿನಿಂದ ನಡೆದ ಚುನಾವಣೆಯ ಫಲಿತಾಂಶವು ಮಾರ್ಚ ೧೧ ರಂದು ಪ್ರಕಟವಾಯಿತು. ಕಾಂಗ್ರೆಸ್ ಅಭ್ಯರ್ಥಿಗಳು ಅತ್ಯಧಿಕ ಮತಗಳ ಅಂತರದಿಂದ ವಿಜಯ ಸಾಧಿಸಿದ್ದರು. ಇದಕ್ಕೆ ಗುದ್ಲೆಪ್ಪನವರ ಸಂಘಟನೆ, ಪ್ರಚಾರ ವೈಖರಿ ಹಾಗೂ ನಾಯಕತ್ವವೇ ಕಾರಣವಾಗಿದ್ದವು.

ಕಾರ್ಯಕರ್ತ ಮತ್ತು ನಾಯಕ ಈ ಎರಡರ ಅದ್ಭುತ ಸಂಗಮ ಅವರಾಗಿದ್ದರು. ಸಂಘಟನಾ ಸಾಮರ್ಥ್ಯ ಮತ್ತು ಅನುಸರಿಸುವ ವಿಧಾನಗಳು ಅತ್ಯುತ್ತಮವಾಗಿದ್ದವು. ಅಂತೆಯೇ ಕಾಂಗ್ರೆಸ್ ಸಂಘಟನೆಯಲ್ಲಿ ಅವರು ಶಕ್ತಿಯ ಶಿಖರವಾದರು. ಕಾಂಗ್ರೆಸ್ಸಿನ ಶಕ್ತಿ ಸಂವರ್ಧನೆಗೆ ಕಾರಣಕರ್ತರಾದರು. ವಿಧೇಯ ಕಾರ್ಯಕರ್ತರಾಗಿ ಗುದ್ಲೆಪ್ಪನವರು ದೇಶಕ್ಕೆ ಮತ್ತು ಕಾಂಗ್ರೆಸ್ಸಿಗೆ ಸಲ್ಲಿಸಿದ ಕಳಂಕರಹಿತ ಅನುಪಮ ಸೇವೆಯಿಂದಾಗಿ ಮತ್ತೆ ೧೯೫೦ ರಿಂದ ೧೯೫೫ ರ ವರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ಮಾಡಿದರು. ಈ ಅಧಿಕಾರಾವಧಿಯಲ್ಲಿ ಅವರು ನಿಸ್ವಾರ್ಥ ಮತ್ತು ಶ್ರದ್ಧಾನಿಷ್ಠ ಕಾರ್ಯಕರ್ತರಾಗುವುದರೊಂದಿಗೆ ಸಮರ್ಥ ನಾಯಕರಾಗಿ ಹೆಸರಾದರು. ಕರ್ನಾಟಕದಲ್ಲಿ ಜರುಗಿದ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ಮುಖ್ಯವಾಗಿ ಅವರ ಅಸಾಧಾರಣ ಪ್ರಯತ್ನ ಪರಿಶ್ರಮಗಳೇ ಕಾರಣವೆಂದರೆ ಅತಿಶಯೋಕ್ತಿಯೆನಿಸದು.

ಜನರನ್ನು ಕಟ್ಟಿಕೊಂಡು ಕೆಲಸ ಮಾಡುವ ಗುಣವು ಗುದ್ಲೆಪ್ಪನವರಿಗೆ ರಕ್ತಗತವಾಗಿ ಬಂದಿತ್ತು. ಎಲ್ಲಿಯೋ ಒಂದು ಕಡೆ ಕುಳಿತುಕೊಂಡು ಕೇವಲ ಆದೇಶ ಮಾಡುವ ನಾಯಕ ಅವರಾಗಿರಲಿಲ್ಲ. ಜನರ ಮಧ್ಯದಲ್ಲಿಯೇ ಹೋಗಿ ತಾವೂ ಅವರೊಂದಿಗೆ ಬೆರೆತು ಸ್ವತಃ ಕಾರ್ಯ ಮಾಡಿ, ಅನುಯಾಯಿಗಳೂ ಅದನ್ನು ಅನುಸರಿಸುವಂತೆ ಮಾಡುವ



ಎಸ್. ನಿಜಲಿಂಗಪ್ಪನವರೊಂದಿಗೆ ಗುದ್ಲೆಪ್ಪನವರು.



ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ನಾಡಾರ ಅವರೊಂದಿಗೆ ಅಂದಾನಪ್ಪ ಕುಂದರಗಿ.
ಗುದ್ಲೆಪ್ಪನವರು. ಕೊಳ್ಳೂರು ಮಲ್ಲಪ್ಪ ಹಾಗೂ ಮುಖ್ಯಮಂತ್ರಿ ಬಿ. ಡಿ. ಜತ್ತಿ

ಕರ್ತೃತ್ವಶಾಲಿ ನಾಯಕರಾಗಿದ್ದರು. ಅಂತೆಯೇ ಅನುಯಾಯಿಗಳ ಪಾಲಿಗೆ ಅವರೊಬ್ಬ ಆದರ್ಶ ನಾಯಕರಾಗಿ ಬೆಳೆದು ಬಂದರು. ಜನರು ಹಿಂದೆ ಮುಂದೆ ನೋಡದೆ ಅವರಲ್ಲಿ ಸಂಪೂರ್ಣ ನಂಬಿಗೆಯಿಡುವಂತಾಯಿತು. ಹೀಗಾಗಿ ಕಾಂಗ್ರೆಸ್ಸು ನಾಡಿನಲ್ಲಿ ಬಲಾಢ್ಯವಾಗಿ ಬೆಳೆದು ಬರುವಲ್ಲಿ ಗುದ್ಲೆಪ್ಪನವರ ಪಾತ್ರ ಅತ್ಯಂತ ಪ್ರಮುಖವಾಗಿತ್ತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

" ೧೯೪೪ ರಿಂದೀಚೆಗೆ ಉತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ ಎಂದರೆ ಹಳ್ಳಿಕೇರಿ, ಹಳ್ಳಿಕೇರಿ ಎಂದರೆ ಕಾಂಗ್ರೆಸ್ ಎನ್ನುವಂತೆ ಅವರ ಹಿಡಿತ ಬೆಳೆದಿದೆ. ಅಖಂಡ ಕರ್ನಾಟಕದ ರಚನೆಯಾದ ನಂತರ ಹಳೆಯ ಮೈಸೂರಿನಲ್ಲೂ ಅವರ ಕೀರ್ತಿ ಹರಡಿದೆ. ' ಕರ್ನಾಟಕದ Strong man ಎಂದರೆ ಹಳ್ಳಿಕೇರಿಯವರೇ ' ಎಂದು ಬೆಂಗಳೂರು, ಮೈಸೂರುಗಳಲ್ಲಿ ಜನರು ಹೇಳುತ್ತಾರೆ. "[೨] ಎಂದು ವಿಧಾನ ಪರಿಷತ್ ಸದಸ್ಯರಾಗಿದ್ದ ಖ್ಯಾತ ಕಾದಂಬರಿಕಾರ ಬಸವರಾಜ ಕಟ್ಟೀಮನಿ ಅವರು ಹೇಳಿದುದು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಗುದ್ಲೆಪ್ಪನವರು ಕೈಕೊಂಡ ಕಾಂಗ್ರೆಸ್ ಸಂಘಟನೆಯ ಕುರಿತು ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಹೀಗೆ ಹೇಳುತ್ತಾರೆ : " ನಾನು ಮೈಸೂರನ್ನೊಳಗೊಂಡ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷನಾದೆ. ಅದಕ್ಕೆ ಮೊದಲು ಸಾಧಾರಣವಾಗಿ ಧಾರವಾಡ ಕಡೆಯವರೆ ಅಧ್ಯಕ್ಷರಾಗುತ್ತಿದ್ದರು. ಸಮಿತಿಯ ಮುಖ್ಯ ಕಾರ್ಯಾಲಯ ಹುಬ್ಬಳ್ಳಿಯಲ್ಲಿತ್ತು. ಸಾಕಷ್ಟು ಆಲೋಚನೆ ಮಾಡಿ ಹುಬ್ಬಳ್ಳಿಯವರೆ ಪ್ರಧಾನ ಕಾರ್ಯದರ್ಶಿಯಾದರೆ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯುವವೆಂದು ತಿಳಿದು. ತೀರ್ಮಾನಿಸಿ ನಾನು ಗುದ್ಲೆಪ್ಪ ಹಳ್ಳಿಕೇಯವರನ್ನು ಆ ಸ್ಥಾನಕ್ಕೆ ನೇಮಿಸಿಕೊಂಡೆ. ಗುದ್ಲೆಪ್ಪನವರು ಮೊಟ್ಟಮೊದಲಾಗಿ ಸಮಿತಿಗೆ ಹೊಸ ಶಕ್ತಿಯನ್ನು ಹೊಸ ಪ್ರಭಾವವನ್ನುಂಟು ಮಾಡಬೇಕೆಂಬ ಉದ್ದೇಶದಿಂದ ಕರ್ನಾಟಕದಲ್ಲೆಲ್ಲ ನನ್ನ ಪ್ರವಾಸವನ್ನೇರ್ಪಡಿಸಿದರು. ಅವರು ಏರ್ಪಡಿಸಿದ ಪ್ರವಾಸಗಳು ಅತ್ಯಂತ ಯಶಸ್ವಿಯಾಗಿದ್ದವು. ನನಗಿಂತ ಮೊದಲೇ ಅವರು ಹೋಗಿ ಎಲ್ಲ ಏರ್ಪಾಡುಗಳನ್ನು ಮಾಡಿ ಕಾಂಗ್ರೆಸ್ ಸಭೆಗಳು ಅತ್ಯಂತ ಯಶಸ್ವಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು. ಅದಲ್ಲದೆ ಸಮಿತಿಯಲ್ಲಿ ಹಣವೂ ಇರಲಿಲ್ಲ. ಆದ್ದರಿಂದ ಪ್ರತಿಯೊಂದು ಸ್ಥಳದಲ್ಲಿಯೂ ಒಂದು ಸಾವಿರ ರೂಪಾಯಿಗೆ ಕಡಿಮೆಯಿಲ್ಲದಂತೆ ಹಣವನ್ನು ಜನಗಳು ಕೊಡುವಂತೆ ಮಾಡುತ್ತಿದ್ದರು. ಹೀಗಾಗಿ ಸಮಿತಿಯಲ್ಲಿ ಸಾಕಷ್ಟು ಹಣವೂ ಸಂಗ್ರಹವಾಯಿತು. ಒಂದು ಮಾತಿನಲ್ಲಿ ಹೇಳಬೇಕೆಂದರೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ನಿಜವಾಗಿ ಶಕ್ತಿಯುತವಾಯಿತು. ಅದಕ್ಕೆ ಗುದ್ಲೆಪ್ಪನವರ ಕೊಡುಗೆ ದೊಡ್ಡದು.

ಗುದ್ಲೆಪ್ಪನವರು ಕರ್ನಾಟಕಕ್ಕೆ ಎಸಗಿದ ಸೇವೆ ಮಿಗಿಲಾದದ್ದು. ಒಂದು ರೀತಿಯಲ್ಲಿ ಎಲ್ಲರಿಗಿಂತಲೂ ಒಂದು ತೂಕ ಹೆಚ್ಚಾದದ್ದೇ ಎಂದು ನನ್ನ ಅಭಿಪ್ರಾಯ. ನಾನಂತೂ ಅವರನ್ನು. ಅವರು ನನಗೆ ನೀಡಿದ ಸಹಕಾರ, ಸಹಾಯವನ್ನು ಎಂದೂ ಮರೆಯಲಾರೆ. ಕರ್ನಾಟಕವೂ ಮರೆಯುವುದಿಲ್ಲ. ದಕ್ಷತೆ. ನಿಷ್ಠೆ ಗುದ್ಲೆಪ್ಪನವರ ಹುಟ್ಟುಗುಣಗಳು. ಅದರ ಜೊತೆಯಲ್ಲಿ ಅವರು ಕಾಂಗ್ರೆಸ್ಸಿಗೆ ಕಾಂಗ್ರೆಸ್ಸಿಗನಾಗಿ ಸಲ್ಲಿಸಿದ ಸೇವೆ ಹೊಗಳತಕ್ಕದ್ದು. "[೩] ಎಂದು ಎಸ್. ನಿಜಲಿಂಗಪ್ಪನವರು ಕೃತಜ್ಞತೆಯಿಂದ ಸ್ಮರಿಸಿದರು.

ಗುದ್ಲೆಪ್ಪನವರು ಧಾರವಾಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಿಸ್ವಾರ್ಥ. ಸೇವಾನಿಷ್ಠ ಕಾರ್ಯಕರ್ತರನ್ನು ಆಯ್ದು ತಾಲೂಕ ಕಾಂಗ್ರೆಸ್ ಸಮಿತಿಗಳಿಗೆ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಿದರು. ಹುಬ್ಬಳ್ಳಿ ತಾಲೂಕ ಕಾಂಗ್ರೆಸ್ ಸಮಿತಿಗೆ ಅದರಗುಂಚಿಯ ಶಂಕರಗೌಡ ಪಾಟೀಲರನ್ನು ಅಧ್ಯಕ್ಷರನ್ನಾಗಿಯೂ ಹುಬ್ಬಳ್ಳಿಯ ಚನ್ನಪ್ಪ ಭದ್ರಾಪೂರ ಅವರನ್ನು ಕಾರ್ಯದರ್ಶಿಯನ್ನಾಗಿಯೂ ನೇಮಕ ಮಾಡಿದರು. ಗುದ್ಲೆಪ್ಪನವರ ಪ್ರೇರಣೆ ಪ್ರೋತ್ಸಾಹದಿಂದ ಅವರು ಬೆಂಗಳೂರು ಮತ್ತು ಗದಗ ರಸ್ತೆಗುಂಟ ಇರುವ ಹಳ್ಳಿಗಳಲ್ಲಿ ಹೋಗಿ ಸಂಘಟನೆ ಮಾಡಿ ಪ್ರತಿ ಸೋಮವಾರಕ್ಕೊಮ್ಮೆ ಶ್ರಮದಾನದ ಮೂಲಕ ಹೆದ್ದಾರಿಗಳಿಗೆ ಕೂಡು ರಸ್ತೆಗಳನ್ನು ನಿರ್ಮಿಸಿ ಇತರರಿಗೆ ಮಾದರಿ ಹಾಕಿಕೊಟ್ಟರು.

೧೯೫೦ ರಲ್ಲಿ ಗ್ರಾಮ ಪಂಚಾಯತಿ ಚುನಾವಣೆಗಳು ನಡೆದವು. ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಕಾಂಗ್ರೆಸ್ಸು ಭಾಗವಹಿಸುವ ಕುರಿತು ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯಲ್ಲಿಯೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯಲ್ಲಿಯೂ ಚರ್ಚಿಸಿ ಮಾದರಿಗಾಗಿ ಒಂದು ತಾಲೂಕನ್ನು ತೆಗೆದುಕೊಂಡು ಅದರ ಪರಿಣಾಮವನ್ನು ನೋಡಿ ಮುಂದೆ ವಿಚಾರಿಸಬೇಕೆಂದು ನಿರ್ಣಯಿಸಲಾಯಿತು. ಆ ಪ್ರಕಾರ ಹುಬ್ಬಳ್ಳಿ ತಾಲೂಕನ್ನು ಸೂಚಿಸಿದ್ದರು. ಧಾರವಾಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಗುದ್ಲೆಪ್ಪನವರ ಆದೇಶದಂತೆ ಅದರಗುಂಚಿಯ ಶಂಕರಗೌಡ ಪಾಟೀಲ, ಚನ್ನಪ್ಪ ಭದ್ರಾಪೂರ ಹಾಗೂ ಕುಸುಗಲ್ಲಿನ ಎಂ. ಆರ್. ಪಾಟೀಲ ವಕೀಲರು ತಾಲೂಕಿನ ಹಳ್ಳಿಗಳಲ್ಲಿ ಸಂಚರಿಸಿ ಸದಸ್ಯರನ್ನು ಅವಿರೋಧವಾಗಿ ಆರಿಸಲು ಶ್ರಮಿಸಿದರು. "೮೭ ಹಳ್ಳಿಗಳಲ್ಲಿ ೧೮ ಹಳ್ಳಿಗಳು ಅವಿರೋಧವಾಗಿ ಕಾಂಗ್ರೆಸ್ ಪ್ರಭಾವದಿಂದಲೇ ಪಂಚಾಯತಿಗಳ ಸ್ಥಾಪನೆ ಮಾಡಿದ್ದವು. ೩೯ ಹಳ್ಳಿಗಳ ಚುನಾವಣೆಯಾಗಿ ಕಾಂಗ್ರೆಸಿನ ನಿಚ್ಚಳ ಬಹುಮತವಾಗಿ ಒಟ್ಟು ೫೭ ಹಳ್ಳಿಗಳ ಪಂಚಾಯತಿಗಳು ಕಾಂಗ್ರೆಸ್ಸಿನ ಕಕ್ಷೆಯಲ್ಲಿ ಸ್ಥಾಪಿತವಾಗಿ ಕಾರ್ಯ ಪ್ರಾರಂಭಿಸಿದವು. ೨೯ ಹಳ್ಳಿಗಳು ಸ್ವತಂತ್ರವಾಗಿ ಉಳಿದಿದ್ದವು. ಕೆಲವು ತಿಂಗಳುಗಳ ಮೇಲೆ ೧೭ ಹಳ್ಳಿಗಳು ಕಾಂಗ್ರೆಸ್ ಬಿಟ್ಟರೆ ಕಾಂಗ್ರೆಸ್ ಸರಕಾರದಿಂದ ಹೆಚ್ಚಿನ ಸವಲತ್ತು ಸಿಗಲಾರದೆಂದು ತಿಳಿದು ಕಾಂಗ್ರೆಸ್ ಪಕ್ಷದಲ್ಲಿ ಸೇರಿಕೊಂಡು ತಾಲೂಕ ಕಾಂಗ್ರೆಸ್ ಸಮಿತಿಗೆ ಒಪ್ಪಿಗೆಯ ಮನವಿಯನ್ನು ಸಲ್ಲಿಸಿದ್ದವು."[೪] ಹೀಗೆ ತಾಲೂಕಿನ ಹಳ್ಳಿಗಳು ಕಾಂಗ್ರೆಸ್ ಆಡಳಿತಕ್ಕೆ ಒಳಪಟ್ಟವು. ಪ್ರಜಾಪ್ರಭುತ್ವದ ಮಾದರಿಯಲ್ಲಿ ಆಡಳಿತವನ್ನು ವಿಕೇಂದ್ರೀಕರಿಸುವ ಅಂಗವಾಗಿ ಗ್ರಾಮ ಮಟ್ಟದಲ್ಲಿಯೂ ಕಾಂಗ್ರೆಸ್ಸು ಪಾಲ್ಗೊಳ್ಳಬೇಕೆಂಬ ಇಚ್ಛೆ ಗುದ್ಲೆಪ್ಪನವರದಾಗಿತ್ತು.

೧೯೫೧ ರಲ್ಲಿ ಪುರುಷೋತ್ತಮದಾಸ ತಂಡನ್ ಅವರು ಅಧ್ಯಕ್ಷರಾಗಿದ್ದ ಹೈದರಾಬಾದದ ನಾನಲನಗರದಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಗುದ್ಲೆಪ್ಪನವರು ಪಾಲ್ಗೊಂಡಿದ್ದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ತಂಡನ್‌ರು ಕಾಂಗ್ರೆಸ್ ಸಂಘಟನೆಗಾಗಿ ಕರ್ನಾಟಕದಲ್ಲಿ ಸಂಚಾರ ಕೈಕೊಂಡರು. ಆಗ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಗುದ್ಲೆಪ್ಪನವರು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ. ಶಿರಸಿ. ಸಿದ್ದಾಪೂರ. ಕುಮಟಾ. ಗೋಕರ್ಣ. ಕಾರವಾರ. ದಾಂಡೇಲಿ. ದಕ್ಷಿಣ ಕನ್ನಡದ ಮಂಗಳೂರು ಹಾಗೂ ಬೆಳಗಾವಿ. ನಿಪ್ಪಾಣಿ ಮುಂತಾದೆಡೆಗಳಲ್ಲಿ ತಂಡನ್‌ರೊಂದಿಗೆ ಸಂಘಟನೆಗಾಗಿ ಸಂಚರಿಸಿದರು.

ಹಾವೇರಿಯ ಶಾಸಕರಾದುದು :

ಸ್ವಾತಂತ್ರ್ಯಾನಂತರ ೧೯೫೨ ರಲ್ಲಿ ವಿಧಾನಸಭಾ ಮತ್ತು ಲೋಕಸಭಾ ಸ್ಥಾನಕ್ಕಾಗಿ ಪ್ರಥಮ ಸಾರ್ವತ್ರಿಕ ಚುನಾವಣೆಗಳು ಜರುಗಿದವು. ಗುದ್ಲೆಪ್ಪನವರು ಮುಂಬಯಿ ವಿಧಾನಸಭೆಯ ಹಾವೇರಿ ಮತಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಅವರ ವಿರುದ್ಧ ಹಾವೇರಿ ನಗರಸಭೆಯ ಅಧ್ಯಕ್ಷರೂ ಆಗರ್ಭ ಶ್ರೀಮಂತರೂ ಆಗಿದ್ದ ಗುರುಶಾಂತಪ್ಪ ಮಾಗಾವಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಜನಪ್ರಿಯ ವ್ಯಕ್ತಿಯಾಗಿದ್ದ ಮಾಗಾವಿಯವರು ಆ ವರೆಗಿನ ಅನೇಕ ಚುನಾವಣೆಗಳಲ್ಲಿ ಜಯಶಾಲಿಯಾಗುತ್ತಲೇ ಬಂದಿದ್ದರು. ಗುದ್ಲೆಪ್ಪನವರ ಪರವಾಗಿ ಶಿಸ್ತಿನ ಮತ್ತು ಸಮರ್ಪಣಾ ಮನೋಭಾವದ ಕಾರ್ಯಕರ್ತರ ತಂಡಗಳೇ ಇದ್ದವು. ಕಾಂಗ್ರೆಸ್ಸಿನ ಅಸಂಖ್ಯ ಉತ್ಸಾಹಿ ಯುವಕರ ಬೆಂಬಲವಿತ್ತು.

ಗುದ್ಲೆಪ್ಪನವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿ ನಿಂತು ಹೋರಾಡಿದುದು, ಕರ್ನಾಟಕ ಏಕೀಕರಣಕ್ಕಾಗಿ ಅವಿಶ್ರಾಂತ ಹೋರಾಟ ಕೈಕೊಂಡಿದುದು, ಧಾರವಾಡ ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷವನ್ನು ಪ್ರಬಲವಾಗಿ ಸಂಘಟಿಸಿದುದು ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದುದು ಮುಂತಾದ ಸೇವಾ ಚಟುವಟಿಕೆಗಳಿಂದ ಜನಮನವನ್ನು ಆಕರ್ಷಿಸಿದ್ದರು. ಹೀಗಾಗಿ ಅವರ ಕಡೆಗೆ ಜನತೆಯ ಒಲವು ಹೆಚ್ಚಾಗಿತ್ತು.

ಕಾಂಗ್ರೆಸ್ಸಿನ ಜಿಲ್ಲಾ ಅಧ್ಯಕ್ಷರಾಗಿದ್ದ ಗುದ್ಲೆಪ್ಪನವರ ಮೇಲೆ ಹೆಚ್ಚಿನ ಜವಾಬ್ದಾರಿಯಿತ್ತು. ಜಿಲ್ಲೆಯ ಲೋಕಸಭಾ ಕ್ಷೇತ್ರ ಹಾಗೂ ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಪ್ರಚಾರ ಕೈಕೊಂಡು ತಾವು ಸ್ಪರ್ಧಿಸಿದ್ದ ಹಾವೇರಿ ಮತಕ್ಷೇತ್ರದಲ್ಲಿಯೂ ಪ್ರಚಾರ ಕಾರ್ಯ ಕೈಕೊಂಡು ಎಲ್ಲ ಕಡೆಗೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಗುರುತರ ಹೊಣೆ ಗುದ್ಲೆಪ್ಪನವರ ಮೇಲಿತ್ತು. ಓಗಾಗಿ ಅವರು ಅಹೋರಾತ್ರಿ ಅವಿಶ್ರಾಂತವಾಗಿ ಬಿರುಸಿನ ಪ್ರಚಾರ ಕೈಕೊಂಡರು. ಅವರಲ್ಲಿದ್ದ ಅಸದೃಶ ಸಂಘಟನಾ ಸಾಮರ್ಥ್ಯದ ಅನುಭವ ಮತ್ತು ನಾಯಕತ್ವದ ವಿವಿಧ ಗುಣಗಳು ನೆರವಿಗೆ ಬಂದವು.

ಗುದ್ಲೆಪ್ಪನವರು ಚುನಾವಣಾ ಪ್ರಚಾರ ಕಾರ್ಯವನ್ನು ಭರದಿಂದ ಕೈಕೊಂಡರು. ಹಳ್ಳಿ ಹಳ್ಳಿಗಳಿಗೆ ಭೇಟ್ಟಿ ಕೊಟ್ಟು ಕಾಂಗ್ರೆಸ್‌ನ ತತ್ವಗಳನ್ನು ಜನರಿಗೆ ತಿಳಿಯಪಡಿಸಿದರು. ಆಗರ್ಭ ಶ್ರೀಮಂತರಾಗಿದ್ದ ಮಾಗಾವಿಯವರೆ ಗೆಲ್ಲುತ್ತಾರೆಂದು ಎಲ್ಲ ಕಡೆಯೂ ಸುದ್ದಿ ಹಬ್ಬಿ ಅವರು ಗೆದ್ದ ಮೇಲೆ ಭವ್ಯ ಮೆರವಣಿಗೆ ಮಾಡಬೇಕೆಂದು ಆನೆಯನ್ನು ತರಿಸಿದ್ದರು. ಪೇಟೆಯಲ್ಲಿಯ ಹೂವುಗಳೆಲ್ಲವನ್ನೂ ಖರೀದಿಸಿದ್ದರು. ಇಂಥ ಸಂದರ್ಭದಲ್ಲಿ ಗುದ್ಲೆಪ್ಪನವರ ನೇತೃತ್ವದಲ್ಲಿ ಕಾಂಗ್ರೆಸ್ಸಿನ ನಿಷ್ಠಾವಂತ ಕಾರ್ಯಕರ್ತರು ಎದೆಗುಂದದೆ, ದಣಿವರಿಯದೆ ಪ್ರಚಾರ ಮಾಡಿದರು.

ಅತ್ಯಂತ ತುರುಸಿನ ಸ್ಪರ್ಧೆಯ ಕ್ಷೇತ್ರವಾಗಿದ್ದ ಹಾವೇರಿಯ ಕಡೆಗೆ ಎಲ್ಲರ ಗಮನವಿತ್ತು. ಮತದಾನದ ನಂತರ ಹಾವೇರಿಯಲ್ಲಿಯೇ ಮತಗಳ ಎಣಿಕೆ ನಡೆಯಿತು. ಗುದ್ಲೆಪ್ಪನವರು ವಿಜಯಿಯಾದರು. ಜೊತೆಗೆ ಜಿಲ್ಲೆಯ ಎಲ್ಲ

ಕಡೆ ಕಾಂಗ್ರೆಸ್ ಪ್ರಚಂಡ ಜಯ ಗಳಿಸಿತು. ಇವೆಲ್ಲ ಗುದ್ಲೆಪ್ಪನವರ ಸಮರ್ಥ ನಾಯಕತ್ವ ಹಾಗೂ ಸಂಘಟನಾ ಸಾಮರ್ಥ್ಯಕ್ಕೆ ದೊರೆತ ಜನಮನ್ನಣೆಯಾಗಿತ್ತು.

ಚುನಾವಣಾ ಫಲಿತಾಂಶದ ಮರುದಿನ ಸೋತಿದ್ದ ಗುರುಶಾಂತಪ್ಪ ಮಾಗಾವಿ ಅವರ ಮನೆಗೆ ಹೋದ ಗುದ್ಲೆಪ್ಪನವರು ಇದು ನನ್ನ ಗೆಲುವು ಅಲ್ಲ. ನಿಮ್ಮದೇ ಗೆಲುವು. ಇನ್ನು ಮೇಲೆ ನಾವು ನೀವು ಕೂಡಿಕೊಂಡು ಈ ಕ್ಷೇತ್ರದ ಅಭಿವೃದ್ಧಿ ಮಾಡೋಣ ಎಂದು ಹೇಳಿ ಮಾಗಾವಿ ಅವರಿಗೆ ಹೂಮಾಲೆ ಹಾಕಿ ತಮ್ಮ ನಿರ್ವ್ಯಾಜ ಪ್ರೀತಿ ಅಭಿಮಾನವನ್ನು ವ್ಯಕ್ತಪಡಿಸಿದರು.

ಶಾಸಕರಾದೊಡನೆ ಅವರು ದೀನದಲಿತರ ಉದ್ಧಾರಕ್ಕಾಗಿ ಮತ್ತು ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಶ್ರಮಿಸಿದರು. ತಮ್ಮ ಕ್ಷೇತ್ರದ ಹಳ್ಳಿ ಹಳ್ಳಿ ಗಳಿಗೆ ಸಂಚರಿಸಿ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿ ಜನಪರ ಕಾರ್ಯಗಳನ್ನು ಕೈಕೊಂಡರು.

ಮೊರಾರ್ಜಿಯವರೊಂದಿಗೆ ವಿರಸ :

ಮೊರಾರ್ಜಿ ದೇಸಾಯಿ ಅವರು ೧೯೫೨ ರ ಮುಂಬಯಿ ವಿಧಾನ ಸಭೆಯ ಸೂರತ ಮತಕ್ಷೇತ್ರದಲ್ಲಿ ಸೋತಿದ್ದರು. ಆದರೆ ಕಾಂಗ್ರೆಸ್ ವರಿಷ್ಠ ಮಂಡಳಿಯು ಹೇಗಾದರೂ ಮಾಡಿ ಮೊರಾರ್ಜಿ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಲು ನಿರ್ಧರಿಸಿತು. ಮೊರಾರ್ಜಿಯವರ ಈ ರೀತಿಯ ಪ್ರವೇಶವನ್ನು ಗುದ್ಲೆಪ್ಪನವರು ವಿರೋಧಿಸಿದರು. ಚುನಾವಣೆಯಲ್ಲಿ ಸೋತವರನ್ನು ಹಿಂಬಾಗಿಲಿನಿಂದ ಕರೆತಂದು ಮುಖ್ಯಮಂತ್ರಿಯನ್ನಾಗಿ ಮಾಡುವುದು ಪ್ರಜಾಪ್ರಭುತ್ವ ತತ್ವಕ್ಕೆ ವ್ಯತಿರಿಕ್ತವಾದುದು ಎಂದು ಖಡಾಖಂಡಿತವಾಗಿ ಹೇಳಿದ ಗುದ್ಲೆಪ್ಪನವರು ಇದು ಮುಂಬಯಿ ವಿಧಾನ ಸಭೆಗೆ ಆಯ್ಕೆ ಹೊಂದಿದ ಸದಸ್ಯರಿಗೆ ಹಾಗೂ ಇಡೀ ರಾಜ್ಯಕ್ಕೆ ಅಪಮಾನವೆಂದು ಪ್ರಬಲವಾಗಿ ಪ್ರತಿಭಟಿಸಿದರು. ಅವರ ಈ ಹೇಳಿಕೆ ಕನ್ನಡ, ಮರಾಠಿ, ಇಂಗ್ಲೀಷ ಮುಂತಾದ ಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾಯಿತು. ಇದು ಗುದ್ಲೆಪ್ಪನವರಿಗೆ ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ಇದ್ದ ಬಲವಾದ ನಿಷ್ಠೆಯನ್ನು ತೋರಿಸುತ್ತದೆ.

ಆದರೂ ಕಾಂಗ್ರೆಸ್ ವರಿಷ್ಠ ಮಂಡಳಿಯ ಇಚ್ಛೆಯ ಮೇರೆಗೆ ಮೊರಾರ್ಜಿ ಮುಖ್ಯಮಂತ್ರಿಯಾದರು. ಸತ್ಯಪ್ರತಿಪಾದನೆ ಮಾಡಿದ ಗುದ್ಲೆಪ್ಪನವರು ಕೊನೆಯವರೆಗೂ ಮೊರಾರ್ಜಿಯವರ ವಿರೋಧ ಕಟ್ಟಿಕೊಳ್ಳಬೇಕಾಯಿತು.

೧೯೫೭ ರಲ್ಲಿ ಅಂದಿನ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪುರುಷೋತ್ತಮದಾಸ ತಂಡನ್ ಅವರು ಗುದ್ಲೆಪ್ಪನವರನ್ನು ಬೆಂಬಲಿಸಿದರೂ ಕೂಡ ಮೊರಾರ್ಜಿ ಗುಂಪಿನ ಪ್ರಾಬಲ್ಯದಿಂದಾಗಿ ವಿರೋಧ ವ್ಯಕ್ತಪಟ್ಟು ಗುದ್ಲೆಪ್ಪನವರಿಗೆ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಸಿಗಲಿಲ್ಲ. ಇದೇ ರೀತಿ ಹಲವು ಬಾರಿ ಅವರಿಗೆ ವಿಧಾನಸಭಾ ಚುನಾವಣೆಗೆ ನಿಲ್ಲಲು ಅವಕಾಶ ನಿರಾಕರಿಸಲ್ಪಟ್ಟಿತು. ಇವೆಲ್ಲ ಗುದ್ಲೆಪ್ಪನವರ ರಾಜಕೀಯ ಏಳ್ಗೆಯನ್ನು ಸಹಿಸದ ಮೊರಾರ್ಜಿಯವರ ಸೇಡಿನ ಮನೋಭಾವನೆಯ ಪರಿಣಾಮವಾಗಿತ್ತು.

ತಮಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ದೊರೆಯದಿದ್ದರೂ ತಮ್ಮದೇ ಆದ ಧಾರವಾಡ ಜಿಲ್ಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಪ್ರಚಂಡ ಜಯ ಲಭಿಸುವಂತೆ ಗುದ್ಲೆಪ್ಪನವರು ಶ್ರಮಿಸಿದರು. ತತ್ವನಿಷ್ಠರಾದ ಅವರು ಕಾಂಗ್ರೆಸ್ ಪಕ್ಷವನ್ನು ಸಂಘಟಿಸುತ್ತ ಅದರ ಶಕ್ತಿ ಸಂವರ್ಧನೆಗೆ ಕಾರಣರಾದರು. ೧೯೫೭ ರ ವಿಧಾನ ಸಭಾ ಚುನಾವಣೆಯಲ್ಲಿ ಜಿಲ್ಲೆಯ ೧೭ ಸ್ಥಾನಗಳಲ್ಲಿ ೧೬ ಸ್ಥಾನ ಕಾಂಗ್ರೆಸ್‌ಗೆ ದೊರೆತವು. ಇದು ಅಂದಿನ ಧಾರವಾಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಗುದ್ಲೆಪ್ಪನವರ ನಾಯಕತ್ವ ಮತ್ತು ಶಿಸ್ತಿನ ಸಂಘಟನೆಗೆ ಸಾಕ್ಷಿಯಾಗಿತ್ತು.

ಬೆಂಗಳೂರಿನಲ್ಲಿ ಕಾಂಗ್ರೆಸ್ ಅಧಿವೇಶನ :

ನಿಷ್ಠಾವಂತ ಕಾಂಗ್ರೆಸ್ಸಿಗರಾದ ಗುದ್ಲೆಪ್ಪನವರು ೧೯೨೪ ರಲ್ಲಿ ಬೆಳಗಾವಿಯಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಿಂದ ಹಿಡಿದು ಮುಂದೆ ದೇಶದ ಎಲ್ಲೆಡೆ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಗಳಿಗೆ ಹೋಗಿ ಬರುವ ವಾಡಿಕೆಯನ್ನು ಇಟ್ಟುಕೊಂಡಿದ್ದರು.

೧೯೬೦ ಜನವರಿ ೧೧ ರಿಂದ ೧೭ ರ ವರೆಗೆ [೫] ಬೆಂಗಳೂರಿನಲ್ಲಿ ನಡೆದ ನೀಲಂ ಸಂಜೀವರಡ್ಡಿ ಅಧ್ಯಕ್ಷತೆಯ ಅಖಿಲ ಭಾರತ ಕಾಂಗ್ರೆಸ್‌ನ ಅಧಿವೇಶನದ ಯಶಸ್ಸಿಗೆ ಕಾರಣರಾದ ಪ್ರಮುಖರಲ್ಲಿ ಗುದ್ಲೆಪ್ಪನವರೂ ಒಬ್ಬರು. ಪ್ರಧಾನಮಂತ್ರಿ ಜವಾಹರಲಾಲ ನೆಹರೂ, ಇಂದಿರಾ ಗಾಂಧಿ, ಯು. ಎನ್. ಧೇಬರ್, ಸುಚೇತಾ ಕೃಪಲಾನಿ ಮುಂತಾದ ಧುರೀಣರು ಈ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು.

ಅಧಿವೇಶನದ ಭೋಜನ ಸಮಿತಿಯ ಸಂಪೂರ್ಣ ಜವಾಬ್ದಾರಿ ಗುದ್ಲೆಪ್ಪನವರದಾಗಿತ್ತು. ಪೂರ್ವಭಾವಿಯಾಗಿ ಸ್ವಯಂಸೇವಕರಿಗೆ ಶಿಬಿರಗಳನ್ನು ತೆರೆದು ಸೂಕ್ತ ತರಬೇತಿ ನೀಡಿ ಅಧಿವೇಶನವು ಸುವ್ಯವಸ್ಥಿತವಾಗಿ ಮತ್ತು ಶಿಸ್ತಿನಿಂದ ನಡೆಯುವಂತೆ ಮಾಡಿದರು.

ಜನೆವರಿ ೧೭ ರಂದು ಜರುಗಿದ ಬಹಿರಂಗ ಅಧಿವೇಶನದಲ್ಲಿ ಗುದ್ಲೆಪ್ಪನವರು ಅಸ್ಖಲಿತವಾಗಿ ಕನ್ನಡದಲ್ಲಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ಅದನ್ನು ತಮ್ಮ ದಿನಚರಿಯಲ್ಲಿ ಉಲ್ಲೇಖಿಸಿದ್ದಾರೆ.

ಚುನಾವಣಾ ಸಂಘಟನೆ :

ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರ ಚುನಾವಣೆಯ ಬಗ್ಗೆ ೧೯೬೦ ಜುಲೈ ೧೭ ರಂದು ಹುಬ್ಬಳ್ಳಿಯಲ್ಲಿ ಡಾ. ನಾರಾಯಣರಾವ ಕಬ್ಬೂರ ಅವರೊಂದಿಗೆ ಗುದ್ಲೆಪ್ಪನವರು ಮಾತುಕತೆ ನಡೆಸಿದರು. ವೆಂಕಟೇಶ ಮಾಗಡಿ, ತಿ. ರು. ನೆಸ್ವಿ ಮಾತನಾಡಿದರು. ರಾಜಿ ಮಾತುಕತೆಯಾಗಿ ಆ ಪ್ರಕಾರ ಮರುದಿನ ದಿನಾಂಕ ೧೮ ರಂದು ಸಿದ್ದಪ್ಪ ಸಿಂಧೂರ ಅವರನ್ನು ಸರ್ವಾನುಮತದಿಂದ ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಈ ಸರ್ವಾನುಮತದ ಆಯ್ಕೆ ಸಂಧಾನ ಚತುರ ಗುದ್ಲೆಪ್ಪನವರ ಪ್ರಯತ್ನದಿಂದಾಯಿತು.

೧೯೬೦ ಅಕ್ಟೋಬರ ೧೪ ರಿಂದ ೨೨ ರ ವರೆಗೆ ಧಾರವಾಡ ಜಿಲ್ಲೆಯ ಎಲ್ಲ ತಾಲೂಕ ಬೋರ್ಡ್ ಚುನಾವಣೆಗಳಲ್ಲಿ ಹಾಗೂ ೧೯೬೩ ರಲ್ಲಿ ಜರುಗಿದ ಜಿಲ್ಲಾ ಅಭಿವೃದ್ಧಿ ಮಂಡಳಿಯ ಚುನಾವಣೆಯಲ್ಲಿಯೂ ಗುದ್ಲೆಪ್ಪನವರು ಕಾಂಗ್ರೆಸ್



ಹುಬ್ಬಳ್ಳಿಯ ಸಾರ್ವಜನಿಕ ಸಮಾರಂಭದಲ್ಲಿ ಪ್ರಧಾನಿ ಜವಾಹರಲಾಲ ನೆಹರೂ, ಶ್ರೀಮತಿ ಇಂದಿರಾಗಾಂಧಿ, ಹುಬ್ಬಳ್ಳಿಯ ನಗರ ಸಭಾಧ್ಯಕ್ಷ ಹಾಜಿ ಹನಸಿ ಮತ್ತು ಗುದ್ಲೆಪ್ಪನವರು. ೧೯೫೯



ಬೆಂಗಳೂರಿನಲ್ಲಿ ಜರುಗಿದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಪ್ರಧಾನಿ ನೆಹರೂ ಅವರನ್ನು ಗುದ್ಲೆಪ್ಪನವರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ೧೯೬೦

ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿ ಕಾಂಗ್ರೆಸ್‌ನ ಜಯಭೇರಿಗೆ ಕಾರಣರಾದರು. ಈ ರೀತಿ ಚುನಾವಣೆಗಳ ಸಂಘಟನೆಯಲ್ಲಿ ತಮ್ಮ ಪ್ರಭಾವಶಾಲಿ ಪಾತ್ರ ವಹಿಸಿ ಕಾಂಗ್ರೆಸ್ಸನ್ನು ಜನಪ್ರಿಯಗೊಳಿಸಿದರು.

ಕಾಂಗ್ರೆಸ್ಸಿನಲ್ಲಿ ಗುಂಪುಗಾರಿಕೆ :

ಮೂರನೆಯ ವಿಧಾನಸಭಾ ಚುನಾವಣೆಗಳ ಪೂರ್ವಭಾವಿಯಾಗಿ ಅಭ್ಯರ್ಥಿಗಳ ಆಯ್ಕೆಯ ವಿಷಯದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಹಲವು ಅನಾರೋಗ್ಯಕರ ಬೆಳವಣಿಗೆಗಳು ಉಂಟಾದವು. ಎಸ್. ನಿಜಲಿಂಗಪ್ಪನವರು ಸಾಧ್ಯವಾದಷ್ಟು ಹೆಚ್ಚು ತಮ್ಮ ಗುಂಪಿನ ಅಭ್ಯರ್ಥಿಗಳಿಗೆ ಸ್ಥಾನ ದೊರಕಿಸಲು ಪ್ರಯತ್ನಿಸುತ್ತಿದ್ದಾರೆಂದು ವರದಿಯಾಯಿತು. ಕಾಂಗ್ರೆಸ್ಸಿನಲ್ಲಿಯೇ ಮೂರು ಗುಂಪುಗಳು ಕಾರ್ಯ ಮಾಡುತ್ತಿದ್ದುದು ಕಂಡುಬಂದಿತು. ಅವು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಎಸ್. ನಿಜಲಿಂಗಪ್ಪನವರ. ಮುಖ್ಯಮಂತ್ರಿ ಬಿ. ಡಿ. ಜತ್ತಿಯವರ ಹಾಗೂ ಲೋಕಸಭಾ ಸದಸ್ಯ ಕೆ. ಹನುಮಂತಯ್ಯನವರ ಗುಂಪುಗಳಾಗಿದ್ದವು. ಅವುಗಳಲ್ಲಿ ನಿಜಲಿಂಗಪ್ಪನವರ ಹಾಗೂ ಜತ್ತಿಯವರ ಗುಂಪುಗಳು ಮಾತ್ರ ಪ್ರಬಲವಾಗಿದ್ದವು.

ಎಸ್. ನಿಜಲಿಂಗಪ್ಪನವರ ಗುಂಪಿನಲ್ಲಿ ಗುದ್ಲೆಪ್ಪ ಹಳ್ಳಿಕೇರಿ. ಎಂ. ವಿ. ರಾಮರಾವ. ಎಂ. ವಿ. ಕೃಷ್ಣಪ್ಪ. ವೀರೇಂದ್ರ ಪಾಟೀಲ. ದೇವರಾಜ ಅರಸ. ಎಸ್. ಆರ್. ಕಂಠಿ. ರಾಮಕೃಷ್ಣ ಹೆಗಡೆ ಮುಂತಾದ ಪ್ರಮುಖರಿದ್ದರು. ಬಿ. ಡಿ. ಜತ್ತಿಯವರ ಗುಂಪಿನಲ್ಲಿ ಮಾಲಿ ಮರಿಯಪ್ಪ. ವೆಂಕರಡ್ಡಿ ಹೂಲಿ. ಶ್ರೀನಿವಾಸ ರೆಡ್ಡಿ. ಗ್ರೇಸ ಠಕ್ಕರ ಮತ್ತು ಜೆ. ಎಚ್. ಶಮಸುದ್ದೀನ ಪ್ರಮುಖರಾಗಿದ್ದರು. ಜತ್ತಿಯವರು ಮುಂಬಯಿ ಕರ್ನಾಟಕ ಭಾಗದವರಾದುದರಿಂದ ಆ ಭಾಗದವರ ಬಲ ಅವರಿಗಿತ್ತು.

ಇವೆರಡೂ ಗುಂಪುಗಳ ಮಧ್ಯೆ ಐಕ್ಯತೆ ಮೂಡಿಸುವಲ್ಲಿ ಗುದ್ಲೆಪ್ಪನವರು ಅತ್ಯಂತ ಪ್ರಮುಖ ಪಾತ್ರ ವಹಿಸಿ ಯಶಸ್ವಿಯಾದರು. ಅದರಿಂದ ಅವರಿಗೆ ಅತ್ಯಂತ ಆನಂದವಾಯಿತು. ಈ ಕುರಿತು ತಮ್ಮ ದಿನಚರಿಯಲ್ಲಿ ೧೯೬೧ ಫೆಬ್ರುವರಿ ೧೯ ರಂದು ಹೀಗೆ ಉಲ್ಲೇಖಿಸಿದ್ದಾರೆ : " Today is good day.... Talks of unity were successful " (ಇಂದು ಸುದಿನ.... ಐಕ್ಯತೆಯ ಮಾತುಗಳು ಯಶಸ್ವಿಯಾದವು). ನಿಜಲಿಂಗಪ್ಪ ಮತ್ತು ಜತ್ತಿಯವರಿಗೆ ಒಕ್ಕಟ್ಟಿನಿಂದ ಕಾರ್ಯ ಮಾಡಲು ಸಲಹೆ ಮಾಡಲಾಯಿತು. " ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಐಕ್ಯತೆಯಿಂದ ಮತ್ತು ಕ್ರಿಯಾಶೀಲವಾಗಿ ಕಾರ್ಯ ಮಾಡಬೇಕೆಂಬುದು ಗುದ್ಲೆಪ್ಪನವರ ಅಭಿಲಾಷೆಯಾಗಿತ್ತು.

ಎಸ್. ನಿಜಲಿಂಗಪ್ಪನವರು ೧೯೬೨ ರ ವಿಧಾನಸಭಾ ಚುನಾವಣೆಯಲ್ಲಿ ಹೊಸದುರ್ಗ ಮತಕ್ಷೇತ್ರದಲ್ಲಿ ಸೋತರು. ನಂತರ ಅವರು ಬಾಗಲಕೋಟೆ ಮತಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗುವಲ್ಲಿ ಹಾಗೂ ೧೯೬೭ ರಲ್ಲಿ ಶಿಗ್ಗಾವಿ ವಿಧಾನಸಭಾ ಮತಕ್ಷೇತ್ರದಿಂದಲೂ ಅವಿರೋಧವಾಗಿ ಆಯ್ಕೆಯಾಗುವಲ್ಲಿ ಗುದ್ಲೆಪ್ಪನವರದೂ ಅಪಾರ ಪರಿಶ್ರಮವಿರುವುದನ್ನು ಮರೆಯುವಂತಿಲ್ಲ.

೧೯೬೭ ರಲ್ಲಿಯೇ ಗುದ್ಲೆಪ್ಪನವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ ಕಾಂಗ್ರೆಸ್ ಸಂಘಟನೆಗೆ ಹೆಚ್ಚಿನ ಬಲ ತಂದುಕೊಟ್ಟರು.

ಮುಖಂಡತ್ವಕ್ಕಾಗಿ ಪೈಪೋಟಿ :

ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ೧೯೬೮ ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದುದರಿಂದ ಮುಖ್ಯಮಂತ್ರಿ ಸ್ಥಾನ ತೆರವಾಯಿತು. ಆ ಸ್ಥಾನಕ್ಕೆ ಪೈಪೋಟಿ ಆರಂಭವಾಗಿ ಕಾಂಗ್ರೆಸ್ಸಿನಲ್ಲಿ ನಿಜಲಿಂಗಪ್ಪನವರ ಮತ್ತು ಬಿ. ಡಿ. ಜತ್ತಿಯವರ ಗುಂಪುಗಳಾದವು. ತತ್ಪರಿಣಾಮವಾಗಿ ನಿಜಲಿಂಗಪ್ಪ ಗುಂಪಿನ ವೀರೇಂದ್ರ ಪಾಟೀಲ ಮತ್ತು ಜತ್ತಿ ಅವರು ಮುಖಂಡತ್ವಕ್ಕೆ ಸ್ಪರ್ಧಿಗಿಳಿದರು. ಆಗ ಮುಂಬಯಿ ಕರ್ನಾಟಕದ ಮುಖಂಡರಲ್ಲಿ ಎರಡು ಗುಂಪುಗಳಾಗಿ ಒಂದು ವಿರೇಂದ್ರ ಪಾಟೀಲರನ್ನು ಇನ್ನೊಂದು ಜತ್ತಿಯವರನ್ನು ಬೆಂಬಲಿಸಿದವು. ಈ ಅವಧಿಯಲ್ಲಿ ಜತ್ತಿಯವರನ್ನು ಬೆಂಬಲಿಸುತ್ತ, " ಇನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ದಕ್ಷ. ಸಮರ್ಥ ಹಾಗೂ ಭದ್ರ ಆಡಳಿತವನ್ನು ನಿರ್ವಹಿಸುವ ನಾಯಕನನ್ನು ಆಯ್ಕೆ ಮಾಡುವ ಪ್ರಶ್ನೆ ಈಗ ಉಂಟಾಗಿದೆ. ನಮ್ಮ ನಾಯಕ ಶ್ರೀ ನಿಜಲಿಂಗಪ್ಪನವರು ಮುಂದುವರಿದಿದ್ದರೆ ಈ ಪ್ರಶ್ನೆ ಉಂಟಾಗುತ್ತಿರಲಿಲ್ಲ. ಶ್ರೀ ನಿಜಲಿಂಗಪ್ಪನವರಿಗೆ ವಿಧಾನ ಮಂಡಲದ ಎಲ್ಲ ಸದಸ್ಯರ ಬೆಂಬಲವಿದೆಯೆಂಬುದು ನಿಸ್ಸಂಶಯ. ಆದರೆ ಈಗ ಅವರು ಆ ಸ್ಥಾನವನ್ನು ಬಿಟ್ಟಿರುವುದರಿಂದ ಆ ಸ್ಥಾನಕ್ಕೆ ಯೋಗ್ಯ, ಅನುಭವಿಕ ವ್ಯಕ್ತಿ ಬರಬೇಕು. ಆ ವ್ಯಕ್ತಿಯೆಂದರೆ ಶ್ರೀ ಜತ್ತಿಯವರಲ್ಲದೆ ಬೇರೆ ಯಾರೂ ಇಲ್ಲ. "[೬] ಎಂದು ಸ್ಪಷ್ಟಪಡಿಸಿದರು.

ಜತ್ತಿಯವರ ಗುಂಪು ಸಂಪೂರ್ಣವಾಗಿ ಕೇಂದ್ರ ವರಿಷ್ಠ ಮಂಡಳಿಯ ಇಚ್ಛೆಯನ್ನು ಅವಲಂಬಿಸಿತ್ತು. ವೀರೇಂದ್ರ ಪಾಟೀಲರ ಗುಂಪು ಸಂಪೂರ್ಣವಾಗಿ ನಿಜಲಿಂಗಪ್ಪನವರನ್ನು ಅವಲಂಬಿಸಿತ್ತು.

ಕಾಂಗ್ರೆಸ್ ಪಕ್ಷದ ಶಾಸಕರ ಸಭೆಯ ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶಂಕರ ದಯಾಳ ಶರ್ಮಾ ಅವರು ಸದಸ್ಯರ ಅಭಿಮತವನ್ನು ಗುಪ್ತ ಮತದಾನದಿಂದ ತಿಳಿದುಕೊಂಡು ವೀರೇಂದ್ರ ಪಾಟೀಲರಿಗೆ ಪ್ರಚಂಡ ಬಹುಮತದ ಬೆಂಬಲವಿದೆಯೆಂದು ಪ್ರಕಟಿಸಿದರು. ಆಗ ರಾಜ್ಯದ ಲೋಕೋಪಯೋಗಿ ಖಾತೆ ಸಚಿವರಾಗಿದ್ದ ವೀರೇಂದ್ರ ಪಾಟೀಲರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿತರಾದರು. ಆಹಾರ ಸಚಿವ ಬಿ. ಡಿ. ಜತ್ತಿಯವರು ವೀರೇಂದ್ರ ಪಾಟೀಲರ ಹೆಸರನ್ನು ಸೂಚಿಸಿದರು. ಗುದ್ಲೆಪ್ಪ ಹಳ್ಳಿಕೇರಿಯವರು ಅನುಮೋದಿಸಿದರು.

" ನನಗಿಂತ ವಯಸ್ಸಿನಲ್ಲಿ ಇಪ್ಪತ್ತು ವರ್ಷ ಕಿರಿಯರಾಗಿರುವ ಶ್ರೀ ವೀರೇಂದ್ರ ಪಾಟೀಲರು ಬಹುಜನ ಶಾಸಕರ ಇಚ್ಛೆಯಂತೆ ಅವರು ನಾಯಕರಾಗಬೇಕೆಂಬ ಸೂಚನೆಯನ್ನು ಹಾರ್ದಿಕವಾಗಿ ಅನುಮೋದಿಸುವೆ ಎಂದು ಶ್ರೀ ಹಳ್ಳಿಕೇರಿಯವರು ಹೇಳಿದರು. ಜವಾಬ್ದಾರಿ ಹೊರಲು ಯುವಕರು ಮುಂದಾಗಬೇಕೆಂಬ ಹಿರಿಯ ನಾಯಕ ಶ್ರೀ ನಿಜಲಿಂಗಪ್ಪನವರ ಇಚ್ಛೆಯನ್ನು ಶ್ರೀ ವೀರೇಂದ್ರ ಪಾಟೀಲರು ನೆರವೇರಿಸಿ. ರಾಜ್ಯಕ್ಕೆ. ರಾಷ್ಟ್ರಕ್ಕೆ ನೆಮ್ಮದಿ ಕೊಡಲಿ ಎಂದು ಶ್ರೀ ಹಳ್ಳಿಕೇರಿಯವರು ಆಶಿಸಿದರು. "[೭]

ವೀರೇಂದ್ರ ಪಾಟೀಲರು ೧೯೬೮ ಮೇ ೨೯ ರಂದು ರಾಜ್ಯದ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಗುದ್ಲೆಪ್ಪನವರು ಅವರಿಗೆ ಸಂಪೂರ್ಣ ಸಹಕಾರ ಕೊಟ್ಟರು.

ಗುದ್ಲೆಪ್ಪನವರು ಜತ್ತಿಯವರ ಗುಂಪಿನಲ್ಲಿದ್ದರೂ ವ್ಯಕ್ತಿ. ಗುಂಪಿನ ನಿಷ್ಠೆಗಿಂತ ಪಕ್ಷದ ನಿಷ್ಠೆ ಪ್ರಮುಖ ಎಂಬುದನ್ನು ಇದು ವ್ಯಕ್ತಪಡಿಸುತ್ತದೆ.

ಕಾಂಗ್ರೆಸ್ ವಿಭಜನೆ :

೧೯೬೯ ರಲ್ಲಿ ಜರುಗಿದ ರಾಷ್ಟ್ರಪತಿ ಚುನಾವಣೆಯಲ್ಲಿ ಹಿರಿಯ ಕಾಂಗ್ರೆಸ್ಸಿಗರಿಗೂ ಮತ್ತು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರಿಗೂ ಭಿನ್ನಮತವುಂಟಾಯಿತು. ತತ್ಪರಿಣಾಮವಾಗಿ ಕಾಂಗ್ರೆಸ್ಸು ಸಂಸ್ಥಾ ಕಾಂಗ್ರೆಸ್ ಹಾಗೂ ಆಡಳಿತ ಕಾಂಗ್ರೆಸ್ ಎಂದು ಇಬ್ಭಾಗವಾಯಿತು. ನಿಜಲಿಂಗಪ್ಪನವರ ಅಧ್ಯಕ್ಷತೆಯ ಸಂಸ್ಥಾ ಕಾಂಗ್ರೆಸ್‌ಗೆ ಗುದ್ಲೆಪ್ಪನವರು ವಿಧೇಯರಾಗಿ ಉಳಿದರು. ೧೯೭೧ ರಲ್ಲಿ ಜರುಗಿದ ಮಧ್ಯಂತರ ಲೋಕಸಭಾ ಚುನಾವಣೆಗಳಲ್ಲಿ ಗುದ್ಲೆಪ್ಪನವರು ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿಗಳ ಪ್ರಚಾರ ಕಾರ್ಯ ನಿರ್ವಹಿಸಿದರು. ವಿಶೇಷವಾಗಿ ಧಾರವಾಡ ಜಿಲ್ಲೆಯಲ್ಲಿ ಅಪಾರ ಪರಿಶ್ರಮ ವಹಿಸಿದರು.

ಚುನಾವಣೆಯ ಗಾಳಿಯೇ ಬೇರೆಯಾಗಿತ್ತು. ನಿಜಲಿಂಗಪ್ಪನವರ ನೇತೃತ್ವದ ಸಂಸ್ಥಾ ಕಾಂಗ್ರೆಸ್ಸು ತನ್ನ ಎಲ್ಲ ಇಪ್ಪತ್ತೇಳು ಲೋಕಸಭಾ ಸ್ಥಾನಗಳನ್ನು ಕಳೆದುಕೊಂಡಿತು. ಅದು ೧೯೭೨ ರ ರಾಜ್ಯ ವಿಧಾನ ಸಭಾ ಚುನಾವಣೆಗಳಿಗೆ ದಾರಿ ಮಾಡಿಕೊಟ್ಟಿತು. ಈ ಸಂದರ್ಭವನ್ನು ಗುದ್ಲೆಪ್ಪನವರು ತಮ್ಮ ಜೀವಿತದಲ್ಲಿ ಬರೆದ ದಿನಚರಿಯ ಕೊನೆಯ ಪುಟಗಳಲ್ಲಿ ಹೀಗೆ ವಿವರಿಸಿದ್ದಾರೆ :

1971 March 10 Wednesday

" Counting of votes in mid-term election to 5th Lok Sabha started today throughout India.

I took castor oil purgative at 5 - 30 a. m. today for getting myself X-rayed (Intervenous). I went to Hospital at 11 a. m. and returned at 2 p. m......

Since afternoon we began to know the trend and the directions of the wind. By evening we got the Radio News that Congress (R) was leading in all 27 L. S. constituencies of our state. I began to surprise we would lose all 27 seats. I had a telephonic contact with C. M. (Veerendra Patil) to know about the future course of action. "

[೧೯೭೧ ಮಾರ್ಚ್ ೧೦ ಬುಧವಾರ

" ಐದನೆಯ ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಯ ಮತಗಳ ಎಣಿಕೆಯು ಇಂದು ಭಾರತವಾದ್ಯಂತ ಪ್ರಾರಂಭವಾಯಿತು. ಎಕ್ಸರೇ ತೆಗೆಸುವುದಕ್ಕಾಗಿ ಇಂದು ಬೆಳಿಗ್ಗ ೫ - ೩೦ ಗಂಟೆಗೆ ನಾನು ಜುಲಾಬಿಗಾಗಿ ಔಡಲ ಎಣ್ಣೆ ತೆಗೆದುಕೊಂಡೆ. ನಾನು ಮುಂಜಾನೆ ೧೧ ಗಂಟೆಗೆ ಆಸ್ಪತ್ರೆಗೆ ಹೋಗಿ ೨ ಗಂಟೆಗೆ ಮರಳಿದೆ.....

ಅಪರಾಹ್ನದಿಂದ ಒಲವು ಮತ್ತು ಗಾಳಿ ಯಾವ ದಿಕ್ಕಿಗಿದೆ ಎಂಬುದು ಗೊತ್ತಾಗತೊಡಗಿತು. ಸಾಯಂಕಾಲದ ಹೊತ್ತಿಗೆ ನಮ್ಮ ರಾಜ್ಯದ ಎಲ್ಲ ೨೭ ಲೋಕಸಭಾ ಕ್ಷೇತ್ರಗಳಲ್ಲಿ ಆಡಳಿತ ಕಾಂಗ್ರೆಸ್ ಮುಂದಿದೆ ಎಂದು ನಮಗೆ ರೇಡಿಯೋ ಸುದ್ದಿಯಿಂದ ತಿಳಿಯಿತು. ನಾವು ೨೭ ಸ್ಥಾನಗಳನ್ನು ಕಳೆದುಕೊಳ್ಳುತ್ತೇವೆಂದು ಅಚ್ಚರಿ ಎನಿಸತೊಡಗಿತು. ಮುಂದಿನ ಕ್ರಮ ಏನೆಂಬುದನ್ನು ತಿಳಿದುಕೊಳ್ಳಲು ಮುಖ್ಯಮಂತ್ರಿಗಳೊಂದಿಗೆ (ಶ್ರೀ ವೀರೇಂದ್ರ ಪಾಟೀಲ) ದೂರವಾಣಿಯ ಮೂಲಕ ಸಂಪರ್ಕಿಸಿದೆ.]

1971 March 11 Thrusday

" By noon of today we came to know that we have more or less lost cent per cent L. S. seats in our state. It is the case in almost all the states. Congress (O) has done creditably well only in Gujarat with 12 seats to its credit. Other states excepting Kerala and some other states have lost more than 90 P. C. seats. P. M. Indiraji is on her way to secure 2/3 Majority. Mid-term elections brought so many persons and parties to their senses. "

[೧೯೭೧ ಮಾರ್ಚ್ ೧೧ ಗುರುವಾರ

" ಇಂದು ಮಧ್ಯಾಹ್ನದ ಹೊತ್ತಿಗೆ ನಾವು ನಮ್ಮ ರಾಜ್ಯದಲ್ಲಿ ಹೆಚ್ಚು ಕಡಿಮೆ ನೂರಕ್ಕೆ ನೂರರಷ್ಟು ಲೋಕಸಭಾ ಸ್ಥಾನಗಳನ್ನು ಕಳೆದುಕೊಳ್ಳುತ್ತೇವೆ ಎಂಬುದಾಗಿ ತಿಳಿದು ಬಂದಿತು. ಬಹುತೇಕ ಎಲ್ಲ ರಾಜ್ಯಗಳಲ್ಲಿಯೂ ಇದೇ ಸ್ಥಿತಿ. ೧೨ ಸ್ಥಾನಗಳನ್ನು ದೊರಕಿಸುವದರೊಂದಿಗೆ ಗುಜರಾತ ರಾಜ್ಯದಲ್ಲಿ ಮಾತ್ರ ಸಂಸ್ಥಾ ಕಾಂಗ್ರೆಸ್ ಚೆನ್ನಾಗಿ ಯಶ ಸಾಧಿಸಿದೆ. ಕೇರಳ ಮತ್ತು ಇತರ ಕೆಲವು ರಾಜ್ಯಗಳನ್ನು ಹೊರತುಪಡಿಸಿ ಉಳಿದ ರಾಜ್ಯಗಳಲ್ಲಿ ಪ್ರತಿಶತ ೯೦ ಕ್ಕೂ ಹೆಚ್ಚು ಸ್ಥಾನಗಳನ್ನು ಸಂಸ್ಥಾ ಕಾಂಗ್ರೆಸ್ ಕಳೆದುಕೊಂಡಿದೆ. ಪ್ರಧಾನಿ ಇಂದಿರಾಜಿಯವರು ೨/೩ ಬಹುಮತ ಪಡೆಯುವ ಹಾದಿಯಲ್ಲಿದ್ದಾರೆ. ಈ ಮಧ್ಯಂತರ ಚುನಾವಣೆಗಳು ಅನೇಕ ವ್ಯಕ್ತಿಗಳಿಗೆ ಮತ್ತು ಪಕ್ಷಗಳಿಗೆ ಅರಿವನ್ನು ಮೂಡಿಸಿತು.]

ಸಂಸ್ಥಾ ಕಾಂಗ್ರೆಸ್‌ನ ಕರ್ನಾಟಕದ ಹಿರಿಯ ಮುಖಂಡರಾಗಿದ್ದ ಗುದ್ಲೆಪ್ಪನವರಿಗೆ ಚುನಾವಣೆಯಲ್ಲಿ ತಮ್ಮ ಪಕ್ಷವು ಹೊಂದಿದ ಪರಾಭವದಿಂದ ದೊಡ್ಡ ಆಘಾತವಾದಂತಾಯಿತು. ಆಗ ಅವರ ಆರೋಗ್ಯವೂ ಅಷ್ಟು ಚೆನ್ನಾಗಿರಲಿಲ್ಲ. ಚುನಾವಣಾ ಫಲಿತಾಂಶದ ನಂತರ ರಾಜಕೀಯ ಪರಿಸ್ಥಿತಿ. ಕಾಂಗ್ರೆಸ್ಸಿಗರ ತೀವ್ರ ಒಳಜಗಳಗಳು ಗುದ್ಲೆಪ್ಪನವರಿಗೆ ನೋವು ತಂದವು.

Counting of votes of Midterm Election to 5th Lok Sabha started to day throughout India.

10 WEDNESDAY

I took a castor oil purgative at 5-30 AM today for getting myself X Rayed. (Intervenous). I went to Hospital at 11 AM and returned at 2 PM. Kamalaxi Couple were invited for Lunch to celebrate the 1st Conception of Smt Kamalaxi. Since afternoon we began to know the trend and the direction of the wind. By evening we got the Radio News that Congress (R) was leading in all 27 L.S. constituencies of our state. I began to surmise we would lose all 27 Seats. I had a telephonic contact with CM to know about the future course of action.

11 THURSDAY

By noon of today we came to know that we have more or less lost cent percent L.S. seats in our state. It is the case in almost all the states. Congress (O) has done creditably well only in Gujarat with 12 seats to its credit. Other states excepting Kerala and some other states have lost more than 90 pc seats. PM Indiraji is on her way to secure 2/3 Majority. Midterm Elections brought so many persons and parties to their senses.

This is a Restricted Holiday.

12 FRIDAY

Before 9 AM today, Shri Magadi and Kamalaxi came to my house.

13 SATURDAY

ಸಂಸ್ಥಾ ಕಾಂಗ್ರೆಸ್ಸಿನಿಂದ ಅನೇಕರು ಆಡಳಿತ ಕಾಂಗ್ರೆಸ್ಸಿಗೆ ಪಕ್ಷಾಂತರ ಮಾಡಹತ್ತಿದರು. ಆಗ ಗುದ್ಲೆಪ್ಪನವರ ಸಲಹೆ ಕೇಳಿದ ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಗೆ. " ನೀವಿನ್ನೂ ಯುವಕರು. ನಿಮಗೆ ಹೆಚ್ಚು ಸೇವೆ ಮಾಡಲು ಅವಕಾಶವಿದೆ. ವಯಸ್ಸಿದೆ; ದೇಶ. ರಾಜಕೀಯಗಳ ದೃಷ್ಟಿಯಿಂದ ನಿಮ್ಮ ಒಳ್ಳೆಯದನ್ನು ನೀವೇ ನಿರ್ಧರಿಸಿರಿ. ನಾನು ಮಾತ್ರ ತತ್ವ. ಪಕ್ಷ ಬಿಟ್ಟು ಹೋಗಲಾರೆ. "[೮] ಎಂದು ಸೂಚ್ಯವಾಗಿ ಹೇಳಿದರು.

ಗುದ್ಲೆಪ್ಪನವರು ೧೯೭೧ ಮಾರ್ಚ ೧೭ ರಂದು ಪತ್ನಿ ಗಂಗಾದೇವಿ ಹಾಗೂ ಪುತ್ರ ಡಾ. ದೀನಬಂಧು ಅವರೊಂದಿಗೆ ಬೆಂಗಳೂರಿಗೆ ಹೋದರು. ಅಲ್ಲಿ ಅನೇಕ ಸಂಸ್ಥಾ ಕಾಂಗ್ರೆಸ್ಸಿಗರು ಆಡಳಿತ ಕಾಂಗ್ರೆಸ್ಸಿಗೆ ಪಕ್ಷಾಂತರ ಮಾಡತೊಡಗಿದ್ದರು. ಡಿ. ದೇವರಾಜ ಅರಸ ಅವರು ಗುದ್ಲೆಪ್ಪನವರ ಹತ್ತಿರ ಬಂದು. " ನೀವು ನಿಮ್ಮ ಸಂಗಡಿಗರು ಸಂಸ್ಥಾ ಕಾಂಗ್ರೆಸ್ಸಿನಿಂದ ಆಡಳಿತ ಕಾಂಗ್ರೆಸ್ಸಿಗೆ ಸೇರಿರಿ. ನಿಮಗೆ ಪ್ರಮುಖ ಸ್ಥಾನ ಲಭಿಸುವುದು "[೯] ಎಂದು ಹೇಳಿದರು. ಅಧಿಕಾರದ ಉನ್ನತ ಪೀಠ ಎದುರಿಗಿದ್ದರೂ ಅದರ ಆಮಿಷಕ್ಕೊಳಗಾಗದೆ ಗುದ್ಲೆಪ್ಪನವರು ತಮ್ಮ ತತ್ವನಿಷ್ಠೆಯ ತಳಹದಿಯನ್ನು ಸಡಿಲುಗೊಳಿಸಿಕೊಳ್ಳಲಿಲ್ಲ. ಪಕ್ಷನಿಷ್ಠೆಯನ್ನು ತೊರೆಯದ ಗುದ್ಲೆಪ್ಪನವರು ಅವಕಾಶವಾದಿ ರಾಜಕೀಯಕ್ಕೆ ಬಲಿ ಬೀಳದೆ ಆದರ್ಶವಾದಿಯಾಗಿಯೇ ಉಳಿದರು.

ಗುದ್ಲೆಪ್ಪನವರು ತಮ್ಮ ಎಳೆವಯದಲ್ಲಿಯೇ ಗಾಂಧಿ ಪ್ರಭಾವದಿಂದ ಶುದ್ಧ ತತ್ವಗಳಿಂದೊಡಗೂಡಿದ ಕಾಂಗ್ರೆಸ್ ಸೇರಿ ಅದನ್ನು ಹಳ್ಳಿಹಳ್ಳಿಗಳಲ್ಲಿ ಸಂಘಟಿಸಿ ಜನಪ್ರಿಯಗೊಳಿಸಿ ಅದರ ಶಕ್ತಿ ಸಂವರ್ಧನೆಗೆ ಕಾರಣರಾದರು. ಪರಿಶುದ್ಧ ರಾಜಕೀಯ ಜೀವನ ಸಾಗಿಸಿದ ಅವರು ತತ್ವಭ್ರಷ್ಟರಾಗದೆ ಇಳಿವಯದಲ್ಲಿಯೂ ಕಾಂಗ್ರೆಸ್ಸಿನ ಮಾದರಿ ನಾಯಕರಾಗಿಯೇ ಉಳಿದರು.

ಮಹಿಳೆಯರಿಗೆ ಪ್ರೋತ್ಸಾಹ :

ಕಾಂಗ್ರೆಸ್ ಸಂಘಟನೆಯಲ್ಲಿ ಮಹಿಳೆಯರೂ ಪಾಲ್ಗೊಂಡು ಸೇವೆ ಸಲ್ಲಿಸಬೇಕು. ಅವರಲ್ಲಿ ರಾಜಕೀಯ ಪ್ರಜ್ಞೆಯನ್ನು ಮೂಡಿಸಬೇಕು ಎಂಬ ಸದಾಶಯದಿಂದ ಅನೇಕ ಮಹಿಳೆಯರನ್ನು ಸಕ್ರಿಯ ರಾಜಕಾರಣಕ್ಕೆ ಬರಲು ಗುದ್ಲೆಪ್ಪನವರು ಪ್ರೋತ್ಸಾಹಿಸಿದರು.

ಶ್ರೀಮತಿ ಗೌರಾದೇವಿ ಇಂಚಲಮಠ ಅವರು ಕಾಂಗ್ರೆಸ್ ಮಹಿಳಾ ವಿಭಾಗದ ಧಾರವಾಡ ಜಿಲ್ಲಾ ಸಂಚಾಲಕಿಯಾಗಲು ಗುದ್ಲೆಪ್ಪನವರ ಪ್ರೋತ್ಸಾಹವೇ ಕಾರಣ. ಪಾರ್ಶಿ ಮಹಿಳೆ ಶ್ರೀಮತಿ ಎಸ್. ಎಸ್. ಬಾಟ್ಲಿವಾಲಾ ಹಾಗೂ ಕ್ರಿಶ್ಚಿಯನ್ ಮಹಿಳೆ ಶ್ರೀಮತಿ ವಾಯಲೆಟ್ ಹಂಫ್ರಿಜ್ ಹೀಗೆ ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲ ಧರ್ಮದ ಮಹಿಳೆಯರು ಕಾಂಗ್ರೆಸ್ ಸಂಘಟನೆಯ ಮೂಲಕ ಸಮಾಜ ಸೇವೆಯಲ್ಲಿ ತೊಡಗಲು ಪ್ರೇರಣೆ ಪ್ರೋತ್ಸಾಹ ನೀಡಿದರು. ಇದು ಮಾನವತಾವಾದಿ ಗುದ್ಲೆಪ್ಪನವರ ಸರ್ವಧರ್ಮ ಸಮಭಾವವನ್ನು ವ್ಯಕ್ತಪಡಿಸುತ್ತದೆ.

ಹಿರಿಯ ಸ್ವಾತಂತ್ರ್ಯಯೋಧೆ ಶ್ರೀಮತಿ ನೀಲಮ್ಮ ಭದ್ರಾಪೂರ ಹೀಗೆ ಹೇಳುತ್ತಾರೆ : " ಗುದ್ಲೆಪ್ಪ ಹಳ್ಳಿಕೇರಿ ಅವರ ಪ್ರೋತ್ಸಾಹದಿಂದ ಹುಬ್ಬಳ್ಳಿಯ ಓಣಿಗಳಲ್ಲಿ ಮಹಿಳೆಯರನ್ನು ಸಂಘಟಿಸಿ ಕಾಂಗ್ರೆಸ್ಸಿನ ಒಂದು ಭಾಗವಾಗಿ ಮಹಿಳಾ

ಮಂಡಳಗಳನ್ನು ರಚಿಸಿ ಕೆಲಸ ಮಾಡತೊಡಗಿದೆವು. ಅವರದು ಶಿಸ್ತಿನ ಜೀವನ. ಕಾಂಗ್ರೆಸ್ ಸಭೆಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಿಸಿ ಯಾವ ಸಂಕೋಚವಿಲ್ಲದೆ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರು. "[೧೦] ಈ ರೀತಿಯಾಗಿ ಅವರು ಮಹಿಳೆಯರಿಗೆ ಕಾಂಗ್ರೆಸ್ಸಿನಲ್ಲಿ ವಿಶೇಷ ಪಾತಿನಿಧ್ಯ ಕೊಡುತ್ತಿದ್ದರು.

ಸಮಾಜ ಕಾರ್ಯಕರ್ತೆ ಹುಬ್ಬಳ್ಳಿಯ ಶ್ರೀಮತಿ ಶಾಂತಕ್ಕ ಮಠದ ಹೀಗೆ ಹೇಳುತ್ತಾರೆ: "ಗುದ್ಲೆಪ್ಪ ಹಳ್ಳಿಕೇರಿಯವರು ನನ್ನನ್ನು ಧಾರವಾಡ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯೆಯನ್ನಾಗಿ ಮಾಡಿದರು. ಮುಂದೆ ೧೯೫೧ ರಲ್ಲಿ ಮಹಿಳಾ ವಿಭಾಗದ ಜಿಲ್ಲಾ ಸಂಚಾಲಕಿಯನ್ನಾಗಿ ನಂತರ ರಾಜ್ಯಮಟ್ಟದ ಸಂಚಾಲಕಿಯಾಗುವಂತೆಯೂ ಪ್ರೋತ್ಸಾಹ ನೀಡಿದರು. ಹೀಗೆ ನನ್ನನ್ನು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಮತ್ತು ನಾನು ಆ ಕ್ಷೇತ್ರಗಳಲ್ಲಿ ಹೆಚ್ಚಿನ ಹುದ್ದೆ ವಹಿಸಿಕೊಂಡು ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟು ಪ್ರೋತ್ಸಾಹಿಸಿದವರೆ ಗುದ್ಲೆಪ್ಪ ಹಳ್ಳಿಕೇರಿಯವರು "[೧೧] ಎಂದು ಕೃತಜ್ಞತೆಯಿಂದ ನೆನೆಯುತ್ತಾರೆ.

ಮಾಜಿ ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ರವೀನಾ ಸಿ. ಕಮಲಾನಿ ಹೀಗೆ ನೆನಪಿಸಿಕೊಳ್ಳುತ್ತಾರೆ : "ನನ್ನಂತಹ ಉಚ್ಚ ಶಿಕ್ಷಣ ಪಡೆದ ಮಹಿಳೆಯರು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮುಂದೆ ಬಂದು ಸೇವೆ ಸಲ್ಲಿಸಬೇಕೆನ್ನುವ ಅಭಿಲಾಷೆ ಗುದ್ಲೆಪ್ಪ ಹಳ್ಳಿಕೇರಿಯವರದಾಗಿತ್ತು. ನನ್ನ ಪತಿ ಸಿ. ಜೆ. ಕಮಲಾನಿಯವರು ಹಳ್ಳಿಕೇರಿಯವರ ಅನುಯಾಯಿಯಾಗಿ ಗಾಢವಾದ ಸಂಪರ್ಕ ಹೊಂದಿದ್ದರು. ನಾನು ಮೂಲತಃ ಮಧ್ಯಪ್ರದೇಶದ ಭೂಪಾಳದವಳು. ನಾನು ಮದುವೆಯಾಗಿ ಧಾರವಾಡಕ್ಕೆ ಬಂದಾಗ ನನಗೆ ಕನ್ನಡ ಬರುತ್ತಿರಲಿಲ್ಲ. ಹಳ್ಳಿಕೇರಿಯವರು ನನಗೆ ಕನ್ನಡ ಮಾತನಾಡಲಷ್ಟೇ ಅಲ್ಲ, ಓದಲು ಬರೆಯಲೂ ಕಲಿಯಬೇಕೆಂದು ಆಗ್ರಹಿಸುತ್ತಿದ್ದರು. ಆ ಪ್ರಕಾರ ನಾನು ಕನ್ನಡ ಓದು, ಬರಹ ಕಲಿತೆ. ಮುಂದೆ ನನ್ನನ್ನು ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯ ಸ್ಕೂಲ್ ಬೋರ್ಡ್ ಸದಸ್ಯಳನ್ನಾಗಿ, ಹೆಲ್ತ್ ಸೋಶಿಯಲ್ ವರ್ಕರ್ಸ್ ಬೋರ್ಡ್ ಹಾಗೂ ಹ್ಯಾಂಡಿಕ್ಯಾಪ್ಡ್ ಬೋರ್ಡ್ ಸದಸ್ಯಳನ್ನಾಗಿಯೂ ನೇಮಕ ಮಾಡುವಲ್ಲಿ ಅವರ ಸಹಕಾರವಿತ್ತು. ಮುಂದೆ ನಾನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯಳಾಗಿ ಹಾಗೂ ವಿಧಾನ ಪರಿಷತ್ತಿನ ಸದಸ್ಯಳಾಗಿ ಸೇವೆ ಸಲ್ಲಿಸಿದೆ. ಇವೆಲ್ಲದಕ್ಕೂ ಮೂಲ ಪ್ರೇರಕ ಶಕ್ತಿ ಗುದ್ಲೆಪ್ಪ ಹಳ್ಳಿಕೇರಿಯವರಾಗಿದ್ದರು. ಹೀಗೆ ನಾನು ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಸೇವೆ ಸಲ್ಲಿಸುವಲ್ಲಿ ಅವರು ನನಗೆ ಸದಾ ಮಾರ್ಗದರ್ಶಕರಾಗಿದ್ದರು. "[೧೨] ಎಂದ ಗುದ್ಲೆಪ್ಪನವರ ಬಗ್ಗೆ ಗೌರವಭಾವದಿಂದ ಹೇಳಿದರು.

ಗುದ್ಲೆಪ್ಪನವರು ಸ್ವಾತಂತ್ರ್ಯಪೂರ್ವದಲ್ಲಿ ಹೊಸರಿತ್ತಿಯಲ್ಲಿ ಸ್ಥಾಪಿಸಿದ ಗಾಂಧಿ ಆಶ್ರಮದಲ್ಲಿಯೇ ಅನೇಕ ಮಹಿಳೆಯರಿಗೆ ಆಸ್ಪದವಿತ್ತರು. ಸ್ವಾತಂತ್ರ್ಯ ಚಳುವಳಿ, ಪಕ್ಷ ಸಂಘಟನೆ ಹಾಗೂ ವಿಧಾಯಕ ಕಾರ್ಯಗಳಲ್ಲಿ ತೊಡಗಲು ಪ್ರೋತ್ಸಾಹವಿತ್ತರು. ಸ್ವಾತಂತ್ರ್ಯಾನಂತರವೂ ಕರ್ನಾಟಕ ಏಕೀಕರಣ ಹಾಗೂ ಪಕ್ಷ ಸಂಘಟನೆಯಲ್ಲಿ ಪಾಲ್ಗೊಂಡು ಸೇವೆ ಸಲ್ಲಿಸುವಂತೆ ಹಲವಾರು ಮಹಿಳೆಯರಿಗೆ ಉತ್ತೇಜನ ನೀಡಿದರು.

ಗುದ್ಲೆಪ್ಪನವರ ಕಾಂಗ್ರೆಸ್ ಸಂಘಟನೆ –ಮಹನೀಯರು ಕಂಡಂತೆ :

ಕಾಂಗ್ರೆಸ್ಸಿನ ಸಂಘಟನೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಗುದ್ಲೆಪ್ಪನವರ ಕುರಿತು ವಿವಿಧ ಮಹನೀಯರು ವ್ಯಕ್ತಪಡಿಸಿದ ಅಭಿಪ್ರಾಯಗಳು ಇಂತಿವೆ:

ಮಾಜಿ ಮುಖ್ಯಮಂತ್ರಿ ಎಸ್. ಆರ್. ಕಂಠಿ ಅವರು. " ಉತ್ತರ ಕರ್ನಾಟಕದಲ್ಲಿ ಗುದ್ಲೆಪ್ಪನವರು ಅತ್ಯಂತ ಪ್ರಭಾವಶಾಲಿಯಾದ ಏಕೈಕ ನಾಯಕರಾಗಿದ್ದಾರೆ..... ಅವರಂಥ ಸಂಘಟನಾ ಚಾತುರ್ಯ ನಮ್ಮಲ್ಲಿ ಯಾರಿಗೂ ಇಲ್ಲ "[೧೩] ಎಂದಿದ್ದಾರೆ.

ಕೇಂದ್ರ ಸರಕಾರದ ಮಾಜಿ ಸಚಿವೆ ಶ್ರೀಮತಿ ಸರೋಜಿನಿ ಮಹಿಷಿ ಅವರು. " ಕಾಂಗ್ರೆಸ್ ಸಂಸ್ಥೆಯ ಕಾರ್ಯ ಹಾಗೂ ಜನಸಂಪರ್ಕ ಗುದ್ಲೆಪ್ಪನವರಲ್ಲಿ ರಕ್ತಗತವಾಗಿವೆ. ಕಾಡು ಹಳ್ಳಿಯಿಂದ ದಿಲ್ಲಿಯವರೆಗೆ ಸಂಪರ್ಕವಿಟ್ಟುಕೊಂಡ ಅವರಿಗೆ ವಿವಿಧ ಮಟ್ಟಗಳಲ್ಲಿ ಜನತೆಯ ಮನಸ್ಸಿನ ಮುಖಗಳ ಅರಿವಿದೆ "[೧೪] ಎನ್ನುತ್ತಾರೆ.

ವಿಧಾನ ಪರಿಷತ್ ಸದಸ್ಯ ಮಳಿಯೆ ಗೋವರ್ಧನರಾವ್ ಅವರು ಗುದ್ಲೆಪ್ಪನವರೊಡನೆ ತಮಗಿರುವ ಹಾರ್ದಿಕ ಸಂಬಂಧವನ್ನು ಈ ರೀತಿ ಹೇಳುತ್ತಾರೆ : " ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ. ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಗಳಲ್ಲಿ ಗುದ್ಲೆಪ್ಪನವರು ತಮ್ಮ ಆಪ್ತ ಕಾರ್ಯದರ್ಶಿಯಾಗಿ ಮುಖ್ಯವಾಗಿ ಪ್ರಚಾರ ಕಾರ್ಯದರ್ಶಿ (Publicity secretary) ಯಾಗಿ ನನ್ನನ್ನು ನೇಮಿಸಿದರು. ಗುದ್ಲೆಪ್ಪನವರ ಹತ್ತುಗಡೆಯ ಹಿರಿಮೆ ನನಗೆ ೧೯೪೪ ರಿಂದ ೧೯೬೭ ರ ವರೆಗೂ ಎಡೆಬಿಡದೆ ದೊರೆಯಿತು. "[೧೫]

ಪತ್ರಕರ್ತ ತಿ. ಸಿದ್ದಪ್ಪ ಅವರು ಹೀಗೆ ಹೇಳುತ್ತಾರೆ : " ಕರ್ನಾಟಕ ಕಾಂಗ್ರೆಸ್ಸಿನ ಇನ್ನೊಂದು ಹೆಸರು ಶ್ರೀ ಗುದ್ಲೆಪ್ಪ ಹಳ್ಳಿಕೇರಿ..... ಗಾಂಧೀಜಿಯಿಂದಲೇ ಕಾಂಗ್ರೆಸ್ಸಿನ ಸೇವೆಗೆ ಅಭಿಷಿಕ್ತರಾದರು ಶ್ರೀ ಹಳ್ಳಿಕೇರಿ. ಅವರು ಸ್ವಯಂಸೇವಕರಾಗಿ. ಪದಾಧಿಕಾರಿಯಾಗಿ. ಕಾಂಗ್ರೆಸ್ಸಿನ ಸರ್ವಸ್ವವಾಗಿ ಚುನಾವಣೆಯ ಜಯಭೇರಿಗೆ ಕಾರಣರಾಗಿ ದುಡಿದರು. ಶ್ರೀಸಾಮಾನ್ಯನಿಗೆ ಕಾಂಗ್ರೆಸ್ಸಿನ ಸಾರವನ್ನು ಸಾರಿದವರು ಅವರು. "[೧೬]

ಇನ್ನೋರ್ವ ಪತ್ರಕರ್ತ ರಾ. ವೆ. ಕರಗುದರಿ ಹೇಳುವಂತೆ. " ಗುದ್ಲೆಪ್ಪನವರು ಎಂತಹ ಪರಿಸ್ಥಿತಿಗಳಲ್ಲಿಯೂ ತಲೆಯೆತ್ತಿ ನಿಲ್ಲುವ ಶಕ್ತಿಯುಳ್ಳವರಾದ್ದರಿಂದ ಅವರು ಮುಂದಾಳಾಗಿಯೇ ಅಷ್ಟೇ ಏಕೆ ಮುಂದಾಳುಗಳನ್ನು ನಿರ್ಮಿಸುವ ಶಕ್ತಿಯುಳ್ಳ ವ್ಯಕ್ತಿಯಾದರು. "[೧೭]

ಸಾಹಿತಿ ಚಂದ್ರಶೇಖರ ಪಾಟೀಲ ಹೀಗೆ ಹೇಳುತ್ತಾರೆ. " ಗುದ್ಲೆಪ್ಪನವರಿಗೆ ಹೇಳಿಕೊಳ್ಳುವಂತಹ ಯಾವ ಅಧಿಕಾರವೂ ಇಲ್ಲ. ಆದರೆ ಅವರು ಎಂ. ಎಲ್. ಎ. ಗಳನ್ನು ಮಾಡಿದ್ದಾರೆ. ಮಂತ್ರಿಗಳನ್ನು ತಯಾರಿಸಿದ್ದಾರೆ. ಮಂತ್ರಿ ನಿವಾಸಗಳೆದುರು ಕಾರುಗಳು ಸಾಲುಸಾಲಾಗಿ ನಿಂತಿರುವುದು ನಮ್ಮ ಪ್ರಜಾಪ್ರಭುತ್ವದಲ್ಲಿ ಸೋಜಿಗದ ನೋಟವೇನಲ್ಲ: ಆದರೆ ಗುದ್ಲೆಪ್ಪನವರ ಮನೆಯೆದುರು ಅದೇ ಮಂತ್ರಿಗಳ ಕಾರುಗಳೇ ಸಾಲು ಸಾಲಾಗಿ ನಿಂತಿರುವುದು

ಸೋಜಿಗವೇ; ಆದರೆ ನಿಜವೇ. "[೧೮] ಗುದ್ಲೆಪ್ಪನವರು ಮಂತ್ರಿಗಳೂ ಆಗಿರಲಿಲ್ಲ. ಮುಖ್ಯಮಂತ್ರಿಗಳೂ ಆಗಿರಲಿಲ್ಲ. ಆದರೆ ಆ ಎಲ್ಲ ಅಧಿಕಾರಕ್ಕಿಂತಲೂ ಅವರ ವ್ಯಕ್ತಿತ್ವದ ಪ್ರಭಾವ ಹಾಗೂ ಸಂಘಟನಾ ಸಾಮರ್ಥ್ಯಗಳನ್ನು ಇಲ್ಲಿ ಕಾಣಬಹುದು.

ಮಾಜಿ ಸಚಿವ ಬಿ. ಎಸ್. ಪಾಟೀಲ (ಮನಗೂಳಿ) ಅವರು ತಾವು ಯುವಕರಾಗಿದ್ದಾಗ ಗುದ್ಲೆಪ್ಪನವರು ಮಾರ್ಗದರ್ಶನ ಮಾಡಿದುದನ್ನು ಹೀಗೆ ನೆನಪಿಸುತ್ತಾರೆ: " ಜನರಿಂದ ದೂರ ಹೋಗಬೇಡಿರಿ. ಜನರ ನಿಕಟ ಸಂಪರ್ಕದಲ್ಲಿ ನೀವಿರಬೇಕು. ಅವರ ಬೇಕು - ಬೇಡಗಳನ್ನು ನೀವು ಈಡೇರಿಸಬೇಕು. ಅಂದರೆ ಮಾತ್ರ ನಿಮ್ಮ ರಾಜಕೀಯ ಜೀವನ ಯಶಸ್ಸು ಗಳಿಸುತ್ತದೆ ಎಂದು ಹಿತವಚನ ಹೇಳುತ್ತಿದ್ದರು."[೧೯]

ಮಾಜಿ ಸಚಿವ ಟಿ. ಎನ್. ನರಸಿಂಹಮೂರ್ತಿ ಹೇಳುವಂತೆ. " ಗುದ್ಲೆಪ್ಪನವರು ಅತ್ಯಂತ ಹಳೆಯ ಕಾಂಗ್ರೆಸ್ ನಾಯಕರು. ಮಹಾತ್ಮಾ ಗಾಂಧೀಜಿಯವರ ಸಂಪರ್ಕದಲ್ಲಿ ಬಂದ ವ್ಯಕ್ತಿಗಳವರು. ಕಾಂಗ್ರೆಸ್ಸು ಮತ್ತು ಹಳ್ಳಿಕೇರಿ ಗುದ್ಲೆಪ್ಪನವರು ಎಂದರೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅವರು ಕಾಂಗ್ರೆಸ್ಸಿನಲ್ಲಿ ಅತೀ ಎತ್ತರದ ಸ್ಥಾನದಲ್ಲಿದ್ದವರನ್ನೆಲ್ಲ ಆಕರ್ಷಣೆ ಮಾಡಿದಂತಹ ಮಹಾನ್ ವ್ಯಕ್ತಿ. "[೨೦] ಹೀಗೆ ಗುದ್ಲೆಪ್ಪನವರು ತಮ್ಮ ಸಮಕಾಲೀನರ ಹಾಗೂ ಯುವ ಕಾರ್ಯಕರ್ತರ ಪ್ರೀತ್ಯಾದರಗಳಿಗೆ ಪಾತ್ರರಾದ ಮೇರು ವ್ಯಕ್ತಿಗಳಾಗಿದ್ದರು.

ಗುದ್ಲೆಪ್ಪನವರು ಮುಂಬಯಿ ಕರ್ನಾಟಕ ಮತ್ತು ನಂತರದ ಏಕೀಕೃತ ಕರ್ನಾಟಕದ ಹಳ್ಳಿ. ತಾಲೂಕ. ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿಯೂ ಕಾಂಗ್ರೆಸ್ ಪಕ್ಷದ ಸಂಘಟನೆಯನ್ನು ವ್ಯಾಪಕವಾಗಿ ಮಾಡಿದರು. ತರುಣ ವಯದಲ್ಲಿಯೇ ಅವರು ಕಾಂಗ್ರೆಸ್ ಸೇರಿದುದಲ್ಲದೆ ಬ್ರಾಹ್ಮಣೇತರ ತರುಣರನ್ನೂ ಆಕರ್ಷಿಸಿ ಕಾಂಗ್ರೆಸ್ಸಿನ ನೆಲೆಗಟ್ಟನ್ನು ವಿಸ್ತಾರಗೊಳಿಸಿದರು.

ಹೀಗೆ ಗುದ್ಲೆಪ್ಪನವರ ಕಾಂಗ್ರೆಸ್ ಸಂಘಟನೆಯ ಕ್ಷೇತ್ರಕಾರ್ಯ ಸ್ವಗ್ರಾಮ ಹೊಸರಿತ್ತಿಯಿಂದ ಪ್ರಾರಂಭವಾಗಿ ರಾಜ್ಯಾದ್ಯಂತ ಹಬ್ಬಿತ್ತು. ರಾಷ್ಟ್ರಮಟ್ಟದ ನಾಯಕರ ಸಂಪರ್ಕವನ್ನು ಹೊಂದಿ ಅವರುಗಳನ್ನು ಬರಮಾಡಿಕೊಂಡು ರಾಜ್ಯದಲ್ಲಿ ಪ್ರವಾಸ ಏರ್ಪಡಿಸಿ ಕಾಂಗ್ರೆಸ್ಸಿನ ಸಂಘಟನೆಯಲ್ಲಿ ನವಚೈತನ್ಯ ತುಂಬಿದರು. ಕಾಂಗ್ರೆಸ್‌ನ ಉನ್ನತ ನಾಯಕರ ಪ್ರಶಂಸೆಗೆ ಪಾತ್ರರಾದರು.

ನಾಯಕನಲ್ಲಿರಬೇಕಾದ ಒಂದು ಮಹತ್ವದ ಗುಣ ಎಂದರೆ ಸಂಘಟನಾ ಶಕ್ತಿ. ಈ ಶಕ್ತಿ ಗುದ್ಲೆಪ್ಪನವರಲ್ಲಿ ಸಂಪೂರ್ಣವಾಗಿ ಕಂಡುಬರುತ್ತದೆ. ಭಾರತ ಸ್ವಾತಂತ್ರ್ಯ ಚಳುವಳಿ. ಕರ್ನಾಟಕ ಏಕೀಕರಣ ಹಾಗೂ ಕಾಂಗ್ರೆಸ್ ಪಕ್ಷ ಇವು ಅವರಿಗೆ ಸಂಘಟನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅವಕಾಶವನ್ನು ಒದಗಿಸಿಕೊಟ್ಟವು. ಇಂತಹ ಸನ್ನಿವೇಶದಲ್ಲಿ ಸಂಘಟನಾಶಕ್ತಿಯ ಮುಖಾಂತರ ಗುದ್ಲೆಪ್ಪನವರು ಒಬ್ಬ ಅಪ್ರತಿಮ ನಾಯಕರಾಗಿ ಗೋಚರಿಸಿದರು.

ಟಿಪ್ಪಣಿಗಳು

೧. ಮಾಗಡಿ. ವೆಂಕಟೇಶ. " ನಾನು ಕಂಡ ಹಳ್ಳಿಕೇರಿಯವರು ". ಗೋಕಾಕ. ವಿ. ಕೆ ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪು. ೧೫೭

೨. ಕಟ್ಟಿಮನಿ. ಬಸವರಾಜ.. " ನಾನು ಕಂಡ ಹಳ್ಳಿಕೇರಿಯವರು ". ಅದೇ ಪು. ೮೩

೩. ನಿಜಲಿಂಗಪ್ಪ. ಎಸ್.. ಮಾಜಿ ಮುಖ್ಯಮಂತ್ರಿಗಳು. ಚಿತ್ರದುರ್ಗ. ವಯಸ್ಸು : ೯೬. ೨೪ - ೧೦ - ೧೯೯೮ ರಂದು ಸಂದರ್ಶನದಲ್ಲಿ ಹೇಳಿದುದು.

೪. ಪಾಟೀಲ. ಕೆ. ಎಸ್.. **ನನ್ನ ದಿನಚರಿ** (ಅದರಗುಂಚಿ ಶಂಕರಗೌಡರ ದಿನಚರಿ) (ಬೆಂಗಳೂರು : ವ್ಹಿ. ಬಿ. ಶಾಸ್ತ್ರಿಮಠ. ಕರ್ನಾಟಕ ಸ್ವಾತಂತ್ರ್ಯ ಯೋಧರ ಪ್ರಧಾನ ಕಾರ್ಯದರ್ಶಿಗಳು. ೧೯೯೪) ಪು. ೪೧

೫. ಗುದ್ಲೆಪ್ಪನವರ ೧೯೬೦ ರ ದಿನಚರಿ.

೬. ಸಂಯುಕ್ತ ಕರ್ನಾಟಕ. ೨೧ - ೫ - ೧೯೬೮.

೭. ಅದೇ. ೨೪ - ೫ - ೧೯೬೮.

೮. ಪಟ್ಟಣಶೆಟ್ಟಿ. ಸಿದ್ಧಲಿಂಗ.. **ಹಳ್ಳಿಕೇರಿ ಗುದ್ಲೆಪ್ಪನವರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ. ೨೦೦೦. ತೃ. ಮು.) ಪು. ೧೨೬

೯. ಅದೇ. ಪು. ೧೨೫

೧೦. ಭದ್ರಾಪೂರ. ನೀಲಮ್ಮ. ಚನ್ನಪ್ಪ.. ಸ್ವಾತಂತ್ರ್ಯಯೋಧೆ. ಹುಬ್ಬಳ್ಳಿ. ವಯಸ್ಸು : ೮೩. ೮ - ೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೧. ಮಠದ ಶಾಂತಕ್ಕ.. ಸಮಾಜ ಕಾರ್ಯಕರ್ತೆ. ಹುಬ್ಬಳ್ಳಿ. ವಯಸ್ಸು : ೭೦. ೬ - ೬ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೨. ಕಮಲಾನಿ. ರವೀನಾ. ಚಂದ್ರು.. ಮಾಜಿ ವಿಧಾನ ಪರಿಷತ್ ಸದಸ್ಯೆ. ಧಾರವಾಡ. ವಯಸ್ಸು : ೬೫. ೨೪ - ೬ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದುದು.

೧೩. ಕಂಠಿ. ಎಸ್. ಆರ್.. " ಶ್ರೀ ಹಳ್ಳಿಕೇರಿಯವರು ". ಗೋಕಾಕ. ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪು. ೧೬೨

೧೪. ಮಹಿಷಿ. ಸರೋಜಿನಿ.. " ಶ್ರೀ ಹಳ್ಳಿಕೇರಿಯವರು ". ಅದೇ. ಪು. ೧೧೧.

೧೫. ಮಳಿಯೆ. ಗೋವರ್ಧನರಾವ್.. " ಹಳ್ಳಿಕೇರಿಯವರ ತುಂಬು ಬಾಳು ". ಅದೇ. ಪು. ೧೩೦.

೧೬. ಸಿದ್ದಪ್ಪ. ತಿ.. " ಜನಸೇವಕ ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರು ". ಅದೇ. ಪು. ೮೫

೧೭. ಕರಗುದರಿ. ರಾ. ವೆ.. " ಕರ್ತೃತ್ವಶಾಲಿ ಗುದ್ಲೆಪ್ಪನವರು ". ಅದೇ. ಪು. ೧೧೪.

೧೮. ಪಾಟೀಲ. ಚಂದ್ರಶೇಖರ.. " ಶ್ರೀ ಹಳ್ಳಿಕೇರಿ ಗುದ್ಲೆಪ್ಪನವರು ". ಅದೇ. ಪು. ೧೧೮.

೧೯. ಪಾಟೀಲ. ಬಿ. ಎಸ್.. ಮಾಜಿ ಸಚಿವರು. ಮನಗೂಳಿ. ತಾ : ಬಸವನ ಬಾಗೇವಾಡಿ. ಜಿ : ವಿಜಾಪುರ. ವಯಸ್ಸು : ೭೧. ೧೯ - ೮ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದುದು.

೨೦. ನರಸಿಂಹಮೂರ್ತಿ. ಟಿ. ಎನ್.. ಮಾಜಿ ಸಚಿವರು ಮತ್ತು ಅಧ್ಯಕ್ಷರು ರಾಜ್ಯ ಹಣಕಾಸು ಆಯೋಗ. ಬೆಂಗಳೂರು. ವಯಸ್ಸು : ೬೩. ೧೮- ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

ಅಧ್ಯಾಯ ಐದು

ಸಾರ್ವಜನಿಕ ಸೇವೆಯಲ್ಲಿ ನಾಯಕತ್ವ

ಅಧ್ಯಾಯ ಐದು

ಸಾರ್ವಜನಿಕ ಸೇವೆಯಲ್ಲಿ ನಾಯಕತ್ವ

ಗುದ್ಲೆಪ್ಪ ಹಳ್ಳಿಕೇರಿಯವರು ನಿಷ್ಕಾಪೂರ್ಣ ಸಮರ್ಪಣಾಭಾವದ ಸೇವೆಯಿಂದ ದೇಶದ ಸ್ವಾತಂತ್ರ್ಯ ಹಾಗೂ ಕರ್ನಾಟಕ ಏಕೀಕರಣದ ಜೊತೆಗೆ ಅನೇಕ ಚಳುವಳಿಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಕಾರ್ಯ ನಿರ್ವಹಿಸಿದರು. ಆಳವಾದ ಅನುಭವ, ಸಾಧನೆ, ಜನಸಂಪರ್ಕ ಇವುಗಳಿಂದ ಸುಭದ್ರ ಕರ್ನಾಟಕ ನಿರ್ಮಾಣಕ್ಕಾಗಿ ತಮ್ಮ ಸೇವೆಯನ್ನು ಮೀಸಲಿರಿಸಿದರು. ಅವರು ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಉಪಾಧ್ಯಕ್ಷರಾಗಿ ರಾಷ್ಟ್ರದ ಮಹಾ ವ್ಯಕ್ತಿಗಳಿಂದ ಗೌರವಾನ್ವಿತರಾಗಿದ್ದರೂ ಪ್ರಥಮತಃ ತಾವೊಬ್ಬ ದೇಶದ ಸೇವಕ ಹಾಗೂ ಗಾಂಧೀಜಿಯವರ ಅನುಯಾಯಿ ಎಂಬುದನ್ನು ಮರೆಯಲಿಲ್ಲ.

ರಾಜಕೀಯ ರಂಗದಲ್ಲಿದ್ದುಕೊಂಡೇ ನಾಡಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಮೋಘ ಕೊಡುಗೆಗಳನ್ನು ಸಲ್ಲಿಸಿ ಅವರು ತುಂಬ ಜನಪ್ರಿಯರಾದರು. ಗುದ್ಲೆಪ್ಪನವರು ಜಾತಿ ಮತ ಪಂಥ ಭೇದವೆಣಿಸದೆ ಮಾನವೀಯತೆಯ ಕಾರಣಕ್ಕಾಗಿಯೇ ದುಡಿದರು. ರಾಜಕೀಯದಲ್ಲಿ ಜಾತೀಯತೆ ಬರದಂತೆ ಪ್ರಯತ್ನಿಸಿದರು. ಜಾತ್ಯತೀತತೆ ಅವರ ನೀತಿ ಸೂತ್ರವಾಗಿತ್ತು.

ಜನಸೇವೆಯೇ ಜನಾರ್ದನ ಸೇವೆ ಎಂದು ನಂಬಿದ್ದ ಗುದ್ಲೆಪ್ಪನವರು ಅನೇಕ ಕಡೆಗಳಲ್ಲಿ ಈ ಅಭಿಪ್ರಾಯವನ್ನು ಹೇಳುತ್ತಿದ್ದರು. " ನನಗೆ ಕಲ್ಲುದೇವರ ಮೇಲೆ ಎಳ್ಳಷ್ಟು ವಿಶ್ವಾಸವಿರುವದಿಲ್ಲ. ಅತ್ಯಂತ ಕಡುಬಡವ ಮತ್ತು ದೀನದಲಿತರೇ ನನ್ನ ದೇವರು. ಅವರ ಸರ್ವಾಂಗೀಣ ಉನ್ನತಿಗಾಗಿ ಹಗಲಿರುಳೂ ದುಡಿಯುವದರಲ್ಲಿಯೇ ನಾನು ದೇವರನ್ನು ಕಾಣುವೆ. ಅವರ ಸೇವೆ ನನಗೆ ಮೋಕ್ಷದ ಅಡಿಗಲ್ಲು." [೧] ಇದರಿಂದ ದೀನದುರ್ಬಲ ಜನರ ಕುರಿತು ಗುದ್ಲೆಪ್ಪನವರ ಕಳಕಳಿ ಎಷ್ಟಿತ್ತೆಂಬುದು ಗೋಚರವಾಗುತ್ತದೆ.

ಗುದ್ಲೆಪ್ಪನವರೇ ಹೇಳಿದಂತೆ ಅವರ ಬದುಕಿನ ಧ್ಯೇಯ ಇದಾಗಿತ್ತು :

" ನನ್ನ ಕ್ರಿಯಾಶಕ್ತಿ ತನ್ನ ತೀವ್ರತೆಯನ್ನು ಎಂದು ಕಳೆದುಕೊಳ್ಳುವುದೋ ಅಂದೇ ಆ ಗಳಿಗೆಯಲ್ಲೇ ನನಗೆ ಮರಣ ಬರಲಿ." (ಇದು ಹೊಸರಿತ್ತಿ ಗಾಂಧಿ ಗ್ರಾಮೀಣ ಗುರುಕುಲದಲ್ಲಿಯ ಅವರ ಸಮಾಧಿಯ ಮೇಲೆ ಶಿಲಾಶಾಸನಸ್ಥವಾಗಿದೆ).

ಜನಸೇವೆಗಾಗಿ ಸತತ ಕ್ರಿಯಾಶೀಲರಾಗಿರುವವರಿಗೆ ಮಾತ್ರ ಜೀವನದ ಸಾರ್ಥಕ್ಯ. ಕ್ರಿಯಾಹೀನವಾದರೆ ಇದ್ದೂ ಸತ್ತಂತೆ. ಅಂಥ ನಿಷ್ಕ್ರಿಯ ಬದುಕು ತಮ್ಮದಾಗಬಾರದೆಂಬುದೇ ಗುದ್ಲೆಪ್ಪನವರ ಆಶಯವಾಗಿತ್ತು. ಇದು ಬಸವಣ್ಣನವರ ' ಕಾಯಕವೇ ಕೈಲಾಸ ' ವೆಂಬ ಜೀವನ ತತ್ವವನ್ನು ನೆನಪಿಸುತ್ತದೆ.

೧. ಸಾಮಾಜಿಕ ಸೇವೆ

೧೯೨೮ ರಲ್ಲಿಯೇ ಗುದ್ಲೆಪ್ಪನವರು ಸ್ವಗ್ರಾಮ ಹೊಸರಿತ್ತಿಯಲ್ಲಿ ಗಾಂಧಿ ಆಶ್ರಮ ಸ್ಥಾಪಿಸಿದರು. ಆಶ್ರಮದ ಮೂಲಕ ಖಾದಿ ಮತ್ತು ಗ್ರಾಮೋದ್ಯೋಗಗಳ ಉತ್ಪಾದನೆ ಜೊತೆಗೆ ಪ್ರಸಾರ ಕಾರ್ಯವನ್ನು ವ್ಯಾಪಕವಾಗಿ ಮಾಡಿದರು. ಗಾಂಧಿ ವಾಚನಾಲಯ ಮತ್ತು ಗಾಂಧಿ ಚಿಕಿತ್ಸಾಲಯಗಳನ್ನು ಸ್ಥಾಪಿಸಿ ಗ್ರಾಮೀಣ ಜನರ ಓದುವ ಅಭಿರುಚಿ ಹಾಗೂ ಆರೋಗ್ಯದ ರಕ್ಷಣೆಗೆ ವಿಶೇಷ ಗಮನವಿತ್ತರು. ಪ್ರತಿವರ್ಷ ಗುದ್ದಲಿಸ್ವಾಮಿ ಜಾತ್ರೆಯ ಕಾಲಕ್ಕೆ ರೈತ ಪರಿಷತ್ತನ್ನು ಏರ್ಪಡಿಸಿ ತಜ್ಞರಿಂದ ಕೃಷಿ ಚಟುವಟಿಕೆಗಳ ಕುರಿತು ಮಾಹಿತಿ ಒದಗಿಸುತ್ತಿದ್ದರು. ಅಲ್ಲಿ ಬೃಹತ್ ಪ್ರಮಾಣದಲ್ಲಿ ದನಗಳ ಜಾತ್ರೆ ನಡೆಯುತ್ತಿತ್ತು. ಆಗ ರೈತರಿಗೆ ಪಶುಸಂಗೋಪನೆ ಕುರಿತು ತಿಳಿವಳಿಕೆ ಕೊಡಿಸುತ್ತಿದ್ದರು.

ಗುದ್ಲೆಪ್ಪನವರು ೧೯೫೮ ರಿಂದ ೧೯೬೧ ರ ವರೆಗೆ ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾಗಿದ್ದರು. ಚಿತ್ರದುರ್ಗದ ಎಚ್. ಸಿ. ರಡ್ಡಿ ಕಾರ್ಯದರ್ಶಿಗಳಾಗಿದ್ದರು. ಆ ಸಂದರ್ಭದಲ್ಲಿ ಗುದ್ಲೆಪ್ಪನವರು ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಅಂದಿನ ಕೇಂದ್ರ ಆಹಾರ ಸಚಿವ ಬಾಬು ಜಗಜೀವನರಾಮ ಅವರೊಂದಿಗೆ ಚರ್ಚಿಸಿ ಪರಿಹಾರೋಪಾಯಗಳನ್ನು ಸೂಚಿಸುತ್ತಿದ್ದರು. [೨]

ನರಗುಂದದಲ್ಲಿ ೧೯೬೦ ಜನೆವರಿ ೨ ರಂದು ಜರುಗಿದ ರೈತ ಪರಿಷತ್ತಿನ ಅಧ್ಯಕ್ಷತೆ ವಹಿಸಿ ಗುದ್ಲೆಪ್ಪನವರು ರೈತರನ್ನುದ್ದೇಶಿಸಿ ಭಾಷಣ ಮಾಡಿದರು.[೩]

ಪ್ರಾಂತಿಕ ಪೂರೈಕೆ ಸಮಿತಿ. ಪಾನನಿರೋಧ ಸಮಿತಿ. ಲಂಚ ನಿರೋಧ ಸಮಿತಿ. ಧಾರವಾಡ ಜಿಲ್ಲಾ ಗ್ರಾಮಾಭಿವೃದ್ಧಿ ಮಂಡಲ ಮುಂತಾದ ರಾಜಕೀಯ ಹಾಗೂ ವಿಧಾಯಕ ಸಮಿತಿಗಳಲ್ಲಿಯೂ ಗುದ್ಲೆಪ್ಪನವರ ಪ್ರಮುಖ ಪಾತ್ರವಿತ್ತು.

ಬರಪೀಡಿತರಿಗೆ ನೆರವು :

೧೯೪೬ ರಲ್ಲಿ ಹೊಸರಿತ್ತಿ ಭಾಗದಲ್ಲಿ ಭೀಕರ ಬರಗಾಲ ಉಂಟಾದಾಗ ಬಡವರಿಗೆ ಕೆಂಪುಜೋಳ. ಬರಗ ಮುಂತಾದ ಧಾನ್ಯವನ್ನು ಸರಕಾರದಿಂದ ' ಡೋಲಿನ ಕಾಳು ' ಎಂದು ಕೊಡುತ್ತಿದ್ದರು. ಗೌಡರು ಮತ್ತು ಶಾನಭೋಗರು ಇದರ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು. ಸರಕಾರ ಕೊಟ್ಟ ಕಾಳನ್ನು ಅವರು ಸರಿಯಾಗಿ ಹಂಚದೆ ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಅಂದಿನ ಘಟನೆಯನ್ನು ಸ್ವಾತಂತ್ರ್ಯಯೋಧ ಪರಮೇಶ್ವರಗೌಡ ಹರಕಂಗಿ ಹೀಗೆ ನೆನಪಿಸಿಕೊಳ್ಳುತ್ತಾರೆ: " ಕಾಳಿನ ದುರುಪಯೋಗವಾಗುತ್ತಿರುವುದನ್ನು ಗುದ್ಲೆಪ್ಪ ಹಳ್ಳಿಕೇರಿ ಅವರ ಗಮನಕ್ಕೆ ತಂದೆನು. ಗುದ್ಲೆಪ್ಪನವರು ಹಾವೇರಿಯಿಂದ ಅಸಿಸ್ಟಂಟ್ ಕಮೀಶ್ನರ್ ಅವರನ್ನು ಕಾರಿನಲ್ಲಿ ಕರೆದುಕೊಂಡು ನೆಗಳೂರಿಗೆ ಹೊರಟರು. ಆಗ ಬರಗಾಲ ಕಾಮಗಾರಿಯಡಿಯಲ್ಲಿ ರಸ್ತೆ ಕೆಲಸ ನಡೆದಿತ್ತು. ಬಸಾಪೂರ ಎಂಬ ಹಳ್ಳಿಯಿಂದ ಕೂಲಿ ಮಾಡುವ

ಜನರು ಹೆಗಲ ಮೇಲೆ ಗುದ್ದಲಿ ಹೊತ್ತು, ಕೈಯಲ್ಲಿ ರೊಟ್ಟಿ ಹಿಡಿದುಕೊಂಡು ತಿನ್ನುತ್ತ ಕೆಲಸಕ್ಕೆ ಹೊರಟಿದ್ದರು. ಈ ದೃಶ್ಯವನ್ನು ನೋಡಿ ಆ ಅಧಿಕಾರಿಯು ' ಇದು ಆಹ್ಲಾದಕರ ಮತ್ತು ಆರೋಗ್ಯಕ್ಕೆ ಒಳ್ಳೆಯದು ಅಂದರು. ' ಇದನ್ನು ಕೇಳಿ ಗುದ್ಲೆಪ್ಪನವರಿಗೆ ಕೋಪ ಬಂದಿತು. ' ಏನು ಸಾಹೇಬರೆ. ಅವರು ಆರೋಗ್ಯದ ದೃಷ್ಟಿಯಿಂದ ತಿನ್ನುತ್ತ ಹೊರಟಿಲ್ಲ. ಕೆಲಸದ ಮೇಲೆ ಹೋಗಿ ತಿನ್ನುತ್ತ ಕುಳಿತರೆ ವ್ಯರ್ಥ ಸಮಯ ಕಳೆದು ಕೂಲಿ ಕಡಿಮೆ ಸಿಗುವುದೆಂದು ತಿಳಿದು ದಾರಿಗುಂಟ ತಿನ್ನುತ್ತ ಹೊರಟಿದ್ದಾರೆ ' ಎಂದರು.

ಇದರಿಂದ ಬಡವರ ಬಗ್ಗೆ ಅಂತಃಕರಣವುಳ್ಳ ಗುದ್ಲೆಪ್ಪನವರಿಗೆ ಬಡವರ ಹೃದಯದ ಅನಿಸಿಕೆಗಳ ಅರಿವಾಗಿತ್ತೆಂಬುದು ವಿದಿತವಾಗುತ್ತದೆ. ಇದನ್ನು ಆ ಅಧಿಕಾರಿಗೆ ತಮ್ಮ ಮಾತುಗಳಿಂದ ತಿಳಿಸಿಕೊಟ್ಟರು. ನಂತರ ನೆಗಳೂರ ಚಾವಡಿಗೆ ಬಂದು ಜನರನ್ನು ವಿಚಾರಿಸಿದ ಆ ಅಧಿಕಾರಿಯು ಗೌಡ ಶಾನುಭೋಗರನ್ನು ಅಮಾನತುಗೊಳಿಸಿ ಪರ್ಯಾಯ ವ್ಯವಸ್ಥೆಯನ್ನು ಮಾಡಿದರು. "[೪]

ಟೆನೆನ್ಸಿ ಕಾಯ್ದೆಗೆ ಬೆಂಬಲ :

ಭೂಮಾಲಿಕರ ಜಮೀನುಗಳನ್ನು ಸಾಗುವಳಿ ಮಾಡುವ ರೈತರೇ ಆ ಜಮೀನಿನ ಒಡೆಯರೆಂದು ಮುಂಬಯಿ ಟೆನೆನ್ಸಿ ಕಾಯ್ದೆಯು ಹೇಳಿತು. ಆ ಪ್ರಕಾರ ಉಳುವವನೇ ಹೊಲದ ಒಡೆಯ ಎಂದು ಮುಂಬಯಿ ಸರಕಾರ ಸಾರಿತು. ರೈತ ಹಿತಾಕಾಂಕ್ಷಿಗಳಾದ ಗುದ್ಲೆಪ್ಪನವರು ಈ ಕಾಯ್ದೆಯನ್ನು ಬೆಂಬಲಿಸಿದರು.

" ಹಾವೇರಿ ತಾಲೂಕಿನ ಗಳಗನಾಥ ಗ್ರಾಮದಲ್ಲಿ ಜಮೀನುದಾರರಿದ್ದರು. ಆಗ ಟೆನೆನ್ಸಿ ಕಾಯ್ದೆ ಜಾರಿಗೆ ಬಂದಿತ್ತು. ಗುದ್ಲೆಪ್ಪನವರು ಆ ಗ್ರಾಮಕ್ಕೆ ಹೋಗಿ ಜಮೀನುದಾರರ ಹೊಲ ಉಳುಮೆ ಮಾಡುತ್ತಿದ್ದ ರೈತರ ಸಭೆ ಕರೆದು ' ನೀವೆಲ್ಲ ರೈತರು ಕಟ್ಟಿಗೆಯ ಹೊರೆಯಂತೆ ಒಕ್ಕಟ್ಟಾಗಿರಬೇಕು. ಬೇರೆ ಬೇರೆಯಾದರೆ ಜಮೀನುದಾರರು ನಿಮ್ಮನ್ನು ಕಟ್ಟಿಗೆ ಮುರಿದಂತೆ ಮುರಿಯುತ್ತಾರೆ. ' ಎಂದು ಹೇಳಿ ರೈತರಿಗೆ ಒಕ್ಕಟ್ಟಾಗಿರಲು ತಿಳಿಸಿದರು. "[೫] ಈ ಪ್ರಸಂಗವು ರೈತರ ಬಗೆಗೆ ಗುದ್ಲೆಪ್ಪನವರಿಗಿರುವ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.

೧೯೫೬ ಡಿಸೆಂಬರ ೧ ರಂದು ಧಾರವಾಡ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ. ವಿಧಾನಸಭಾ ಹಾಗೂ ವಿಧಾನ ಪರಿಷತ್ ಸದಸ್ಯರ ಸಭೆಯನ್ನು ಜಿಲ್ಲಾಧ್ಯಕ್ಷ ಗುದ್ಲೆಪ್ಪನವರು ಹುಬ್ಬಳ್ಳಿಯಲ್ಲಿ ಕರೆದಿದ್ದರು. ಸಭೆಗೆ ಮೈಸೂರು ರಾಜ್ಯದ ಶಿಕ್ಷಣ ಸಚಿವ ಕಡಿದಾಳ ಮಂಜಪ್ಪನವರು ಆಗಮಿಸಿದ್ದರು. ಮುಂಬಯಿ ಟೆನೆನ್ಸಿ ಕಾಯ್ದೆಯನ್ನು ರದ್ದುಗೊಳಿಸುವ ಪ್ರಯತ್ನಗಳನ್ನು ಬಹುಸಂಖ್ಯೆಯ ಸದಸ್ಯರು ವಿರೋಧಿಸಿದರು.

ಮುಂಬಯಿ ಟೆನೆನ್ಸಿ ಕಾಯ್ದೆಯು ಪ್ರಗತಿಪರವಾಗಿರುತ್ತದೆ. ಇದರಿಂದ ರೈತರಿಗೆ ಲಾಭವಿರುತ್ತದೆ. ಇಂಥ ಕಾಯ್ದೆಯನ್ನು ರದ್ದುಗೊಳಿಸುವುದು ಸರಿಯಲ್ಲ. ಹೀಗೆ ರದ್ದುಗೊಳಿಸಿದ್ದಾದರೆ ಕರ್ನಾಟಕದಲ್ಲಿಯ ಕಾಂಗ್ರೆಸ್ಸಿನ ಪ್ರತಿಷ್ಠೆಗೆ ಧಕ್ಕೆ ಬರಬಹುದೆಂದು ಗುದ್ಲೆಪ್ಪನವರ ಮುಖಂಡತ್ವದಲ್ಲಿ ಪಾಲ್ಗೊಂಡ ಎಲ್ಲರೂ ತಮ್ಮ ಅಭಿಪ್ರಾಯ ಹೇಳಿದರು. ಮಂಜಪ್ಪನವರು ಕೂಡ ಈ ಕಾಯ್ದೆಗೆ ತಮ್ಮ ಬೆಂಬಲವಿದೆಯೆಂದೂ ಹಾಗೂ ಈ ವಿಷಯವನ್ನು ಮಂತ್ರಿಮಂಡಳದ ಮುಂದೆ ಇಡುವುದಾಗಿಯೂ ಆಶ್ವಾಸನೆಯಿತ್ತರು.[೬]

ಹೀಗೆ ಗುದ್ಲೆಪ್ಪನವರು ವೆಂಕಟೇಶ ಮಾಗಡಿ ಮತ್ತು ಸರದಾರ ವೀರನಗೌಡ ಪಾಟೀಲ ಅವರ ಸಹಾಯದಿಂದ ಶಾಸಕರನ್ನು ಸಂಘಟಿಸಿ ನವ ಮೈಸೂರು ರಾಜ್ಯದಲ್ಲಿ ಈ ಕಾರ್ಯ ಜಾರಿಗೆ ತರಲು ಬೆಂಬಲವಿತ್ತರು.

ಇಂಥ ಪ್ರಗತಿಪರ ಧೋರಣೆಗಳನ್ನು ಕಾಂಗ್ರೆಸ್ಸು ಸ್ವೀಕರಿಸುವಂತೆ ಮಾಡುವ ಮೂಲಕ ಜನಸಾಮಾನ್ಯರ ಕಲ್ಯಾಣಕ್ಕಾಗಿ ಶ್ರಮಿಸುವಲ್ಲಿ ಗುದ್ಲೆಪ್ಪನವರ ಪಾತ್ರ ಪ್ರಮುಖವಾಗಿತ್ತು.

ದಲಿತರ ಮತ್ತು ಹಿಂದುಳಿದವರ ಏಳಿಗೆಗಾಗಿ ಕಾಳಜಿ :

ಗಾಂಧೀಜಿಯವರ ಉದಾತ್ತ ತತ್ವಗಳಂತೆ ಗುದ್ಲೆಪ್ಪನವರು ತಮ್ಮ ಮದುವೆಯನ್ನು ಹರಿಜನಕೇರಿಯಲ್ಲಿಯೇ ಮಾಡಿಕೊಂಡರು. ಸ್ವಾತಂತ್ರ್ಯ ಚಳುವಳಿಯ ಕಾಲಕ್ಕೆ ಜೇಲಿನಲ್ಲಿದ್ದಾಗ ಭಂಗಿ ಕೆಲಸವನ್ನೂ ಮಾಡಿದರು. ಇದು ದಲಿತರ ಮತ್ತು ಹಿಂದುಳಿದವರ ಬಗ್ಗೆ ಅವರಿಗಿರುವ ಅಪಾರವಾದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.

೧೯೩೧ ರಲ್ಲಿ ಹೊಸರಿತ್ತಿಯ ಜಾತ್ರೆಯ ಕಾಲಕ್ಕೆ ಊರಿನ ಹೊರಭಾಗದಲ್ಲಿ ನಲವತ್ತು ಗುಡಿಸಲುಗಳಿದ್ದವು. ಅಲ್ಲಿ ಡೊಂಬರ ಜಾತಿಯ ತರುಣಿಯರು ವೇಶ್ಯಾವೃತ್ತಿ ಮಾಡುತ್ತಿದ್ದರು. ಗುದ್ಲೆಪ್ಪನವರ ಅನುಮತಿಯಂತೆ ಗಾಂಧಿ ಆಶ್ರಮದ ಸ್ವಯಂ ಸೇವಕರು ಆ ಗುಡಿಸಲುಗಳ ಮುಂದೆ ಹೋಗಿ ಹೀನ ಉದ್ಯೋಗ ನಿಲ್ಲಿಸಬೇಕೆಂದು ರಾತ್ರಿ ಧರಣಿ ಸತ್ಯಾಗ್ರಹ ನಡೆಸಿದರು. ಒಂದು ರಾತ್ರಿ ಆ ವೃತ್ತಿ ನಿಂತಿತು. ಮರುದಿನ ಬೆಳಿಗ್ಗೆ ನಲವತ್ತು ಜನ ತರುಣಿಯರು ಆಶ್ರಮದ ಮುಂದೆ ಬಂದು ತಮ್ಮ ಉದ್ಯೋಗ ನಿಂತಿತು. ಉಪಜೀವನಕ್ಕೆ ತೊಂದರೆಯಾಗಿದೆ ಎಂದು ದುಃಖಿಸಹತ್ತಿದರು. ಆಗ ಗುದ್ಲೆಪ್ಪನವರು ಪ್ರತಿಯೊಬ್ಬರಿಗೂ ಒಂದೊಂದು ಚರಖಾ ಕೊಡಿಸಿ ಗೌರವದಿಂದ ಸ್ವಾವಲಂಬಿ ಜೀವನ ಸಾಗಿಸಲು ಅನುವು ಮಾಡಿಕೊಟ್ಟರು.

ಸ್ವಾತಂತ್ರ್ಯಯೋಧೆ ಶ್ರೀಮತಿ ನೀಲಮ್ಮ ಭದ್ರಾಪೂರ ಹೇಳುವಂತೆ. " ಹುಬ್ಬಳ್ಳಿಯಲ್ಲಿ ಈಗ ನಗರ ಸಾರಿಗೆ ಬಸ್ ನಿಲ್ದಾಣವಿದ್ದ ಸ್ಥಳದಲ್ಲಿ ಹರಿಜನರು. ಮುಸಲ್ಮಾನರು ಗುಡಿಸಲು ಹಾಕಿಕೊಂಡಿದ್ದರು. ಅವನ್ನೆಲ್ಲ ನಗರಸಭೆಯವರು ಕೆಡವಿಸಹತ್ತಿದಾಗ ಗುದ್ಲೆಪ್ಪನವರು ನನ್ನ ಪತಿ ಚನ್ನಪ್ಪ ಭದ್ರಾಪೂರರೊಂದಿಗೆ ಹೋಗಿ ಜನರಿಗೆ ಇರಲು ಮೊದಲು ಸ್ಥಳ ಕೊಟ್ಟು ಆ ಮೇಲೆ ಗುಡಿಸಲು ಕೆಡವಲು ನಗರಸಭೆಯವರಿಗೆ ಹೇಳಿದರು. ನಂತರ ಕುಲಕರ್ಣಿ ಹಕ್ಕಲದಲ್ಲಿ ಪ್ಲಾಟ್ ಮಾಡಿ ಪ್ರಥಮ ಬಾರಿಗೆ ಜನತಾ ಮನೆಗಳನ್ನು ನಿರ್ಮಿಸಿ ಆ ಜನರಿಗೆ ಹಂಚಿಸಿದರು. ಅದರಂತೆ ಭಾರತ ಮಿಲ್ ಹಿಂದೆ ಬಯಲು ಜಾಗದಲ್ಲಿ ಡೊಂಬರು. ದಾಸರು. ಕುಂಚಿಕೊರವರು ಮುಂತಾದ ಬಡಜನರು ಗುಡಿಸಲು ಹಾಕಿಕೊಂಡಿದ್ದರು. ಅವರಿಗೆ ಆ ಸ್ಥಳದಲ್ಲಿ ಉಚಿತವಾಗಿ ಜಾಗ ಹಂಚಿಸಿ ಮನೆ ಮಾಡಿಕೊಳ್ಳಲು ಗುದ್ಲೆಪ್ಪನವರು ಅನುಕೂಲ ಮಾಡಿಕೊಟ್ಟರು. ಅದನ್ನು ' ಪುಕ್ಕಟ ನಗರ ' ಅಥವಾ ' ಗಿರಣಿ ಚಾಳ ' ಎಂದು ಕರೆಯುತ್ತಾರೆ. " [೭]

" ಹುಬ್ಬಳ್ಳಿಯ ನಮ್ಮ ಹರಿಜನ ಬಾಲಿಕಾಶ್ರಮಕ್ಕೆ ಅಡಿಗೆ ಮಾಡಲು ಗುದ್ಲೆಪ್ಪನವರು ಹೊಸರಿತ್ತಿಯ ಗಾಂಧಿ ಆಶ್ರಮದಿಂದ ಫಕ್ಕೀರವ್ವಳನ್ನು. ನೂಲುವ ನೇಯುವದಕ್ಕಾಗಿ ಬಸಪ್ಪ ನರಗುಂದ ಎಂಬವರನ್ನು ಅವರ ಕುಟುಂಬ ಸಮೇತ ಕಳಿಸಿಕೊಟ್ಟಿದ್ದರು. ಹರಿಜನರ ಬಾಲಿಕಾಶ್ರಮದಲ್ಲಿ ಸೇವೆ ಮಾಡಲು ಬಹಳ ಜನ ಹಿಂಜರಿಯುತ್ತಿದ್ದರು. ಅಂತಹದರಲ್ಲಿ

ಗುದ್ಲೆಪ್ಪನವರು ಇವರನ್ನು ಕಳಿಸಿ ನಮ್ಮ ಆಶ್ರಮದ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ಮಾಡಿದರು " [೮] ಎಂದು ಸ್ವಾತಂತ್ರ್ಯಯೋಧೆ ಶ್ರೀಮತಿ ನಾಗಮ್ಮ ಪಾಟೀಲ ನೆನಪಿಸಿಕೊಳ್ಳುತ್ತಾರೆ.

ಧಾರವಾಡ ಜಿಲ್ಲಾ ಪ್ರಥಮ ಹರಿಜನ ಪರಿಷತ್ತು ಗುದ್ಲೆಪ್ಪನವರ ಅಧ್ಯಕ್ಷತೆಯಲ್ಲಿ ೧೯೫೪ ರ ಜೂನ್ ೪ ರಂದು ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರಿನಲ್ಲಿ ನಡೆಯಿತು. ಆಗ ಅವರು ಮಾತನಾಡುತ್ತ, " ಸಾವಿರಾರು ವರುಷಗಳಿಂದ ಕೆಳಗೆ ಬಿದ್ದು ಅಸ್ಪೃಶ್ಯರೆನ್ನುವ ಅಪಖ್ಯಾತಿಯನ್ನು ಪಡೆದು ನಾಮ ನಿಶ್ಶೇಷರಾಗಿ ಹೋಗಿದ್ದ ಆರು ಕೋಟಿ ಜನರು ಘಟನೆ (ಸಂವಿಧಾನ) ಯಲ್ಲಿ ಸರಿಸಮಾನತೆಯನ್ನು ಸಂಪಾದಿಸಿದ್ದಾರೆ. ಘಟನೆಯಲ್ಲಿ ಲಭಿಸಿರುವ ಈ ಸರಿಸಮಾನತೆ ಇಂದು ಪ್ರತ್ಯಕ್ಷ ಜೀವನದಲ್ಲಿ ಒಡಮೂಡಿ ಕಾಣಬೇಕಾಗಿದೆ. ಶಾಸನದ ಸತ್ಯ ಹಾಗೂ ಜೀವನದ ಸತ್ಯ ಇವು ಬೇರೆ ಬೇರೆಯಾಗಿವೆ. ಶಾಸನದ ಸತ್ಯವು ಜೀವನದ ಸತ್ಯವಾಗಿ ಎಂದು ಪರಿವರ್ತನೆ ಹೊಂದುವುದೋ ಅಂದೇ ಹರಿಜನರ ಹಾಗೂ ಹಿಂದುಳಿದ ವರ್ಗದ ಜನರ ನಿಜವಾದ ಕಲ್ಯಾಣವಾಗುತ್ತದೆ " [೯] ಎಂದು ಹೇಳಿದರು. (ಈ ಭಾಷಣದ ಪೂರ್ಣ ವಿವರವನ್ನು ಅನುಬಂಧದಲ್ಲಿ ಕೊಡಲಾಗಿದೆ.)

೧೯೫೫ ರ ಫೆಬ್ರುವರಿ ೧೩ ರಂದು ಹಾನಗಲ್ಲದಲ್ಲಿ ನಡೆದ ಹರಿಜನ ಪರಿಷತ್ತನ್ನು ಉದ್ದೇಶಿಸಿ ಗುದ್ಲೆಪ್ಪನವರು ಭಾಷಣ ಮಾಡಿದರು. [೧೦] ಹೀಗೆ ಗುದ್ಲೆಪ್ಪನವರು ದಲಿತರ ಮತ್ತು ಹಿಂದುಳಿದವರ ಬಗ್ಗೆ ಅಪಾರವಾದ ಕಾಳಜಿ ಹೊಂದಿ ಅಸ್ಪೃಶ್ಯತಾ ನಿವಾರಣೆಗಾಗಿಯೂ ಶ್ರಮಿಸಿದರು.

ಕಳ್ಳಭಟ್ಟಿ ಸರಾಯಿ ತಯಾರಿಕೆ ನಿಲ್ಲಿಸಿದುದು :

ಮುಂಬಯಿ ಪಾನಪ್ರತಿಬಂಧಕ ಕಾಯ್ದೆ ಜಾರಿಯಲ್ಲಿದ್ದಾಗ ಧಾರವಾಡ ಜಿಲ್ಲೆಯಲ್ಲಿ ಗುದ್ಲೆಪ್ಪನವರು ಅಬಕಾರಿ ಸಚಿವ ಎಲ್. ಎಂ. ಪಾಟೀಲ ಮತ್ತು ಕೆ. ಎಫ್. ಪಾಟೀಲರೊಂದಿಗೆ ಪ್ರವಾಸ ಕೈಕೊಂಡರು. ಕಾಕೋಳ ಗ್ರಾಮದ ಪಕ್ಕದ ಕಾಡಿನಲ್ಲಿ ಕಳ್ಳಭಟ್ಟಿ ತಯಾರಿಸುತ್ತಿದ್ದ ವಿಷಯ ತಿಳಿದು ಅಲ್ಲಿಗೆ ಹೋದರು. ಅಲ್ಲಿ ಐವತ್ತು ಕಳ್ಳ ಭಟ್ಟಿಗಳನ್ನು ಒಂದೇ ಸ್ಥಳದಲ್ಲಿ ಕಂಡರು.

ಕಳ್ಳಭಟ್ಟಿ ತಯಾರಕರನ್ನು ಕರೆದು ಕಾನೂನಿಗೆ ವಿರುದ್ಧವಾದ ಮತ್ತು ಜನತೆಯ ಆರೋಗ್ಯಕ್ಕೆ ಹಾನಿಕರವಾದ ಈ ಕೆಲಸವನ್ನು ಬಿಡಲು ಹೇಳಿದರು. ಆಗ ಆ ಲಂಬಾಣಿ ಜನರು ತಮ್ಮ ಉಪಜೀವನಕ್ಕೆ ಅನ್ಯ ಮಾರ್ಗವಿಲ್ಲದೆ ಈ ಕೆಲಸ ಮಾಡುತ್ತಿರುವುದಾಗಿ ಹೇಳಿದರು. ಗುದ್ಲೆಪ್ಪನವರು ಹಾಗೂ ಕೆ. ಎಫ್. ಪಾಟೀಲರು ಆ ಜನರಿಗೆ ಸಾಗುವಳಿ ಮಾಡಲು ಸರಕಾರಿ ಜಮೀನು ಕೊಡಿಸುವುದಾಗಿ ಭರವಸೆ ಕೊಟ್ಟರು. ಆಗ ಆ ಜನರು ಕಳ್ಳಭಟ್ಟಿ ತಯಾರಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಮುಂದೆ ಅವರಿಗೆ ಸಾಗುವಳಿಗಾಗಿ ಜಮೀನು ದೊರೆಯಿತು.

ಖಾದಿ ಕಾರ್ಯ :

ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಕೈಸೂಲು, ಕೈಮಗ್ಗವಿತ್ತು. ಗಾಂಧೀಜಿಯವರು ಇದಕ್ಕೆ ಪುನರ್ಜನ್ಮ ಕೊಟ್ಟು ' ಖಾದಿ ' ಎಂದು ಹೆಸರಿಟ್ಟು ಜನಪ್ರಿಯಗೊಳಿಸಿದರು. ಸ್ವಾತಂತ್ರ್ಯಯೋಧರಿಗೂ ಖಾದಿಗೂ ಅವಿನಾಭಾವ

ಸಂಬಂಧವಿತ್ತು. ಹೀಗಾಗಿ ಖಾದಿಯು ಸ್ವಾತಂತ್ರ್ಯಯೋಧರ ಸಮವಸ್ತ್ರವೆನಿಸಿತು. ವೀರಶೈವರ ಅರವತ್ನಾಲ್ಕು ಶೀಲಗಳಲ್ಲಿ ಖಾದಿಯು ಇಪ್ಪತ್ತೊಂದನೆಯ ಶೀಲವಾಗಿತ್ತೆಂಬುದು ಗಮನಾರ್ಹ. ಖಾದಿಗಾಗಿ ದುಡಿದ ಮಹನೀಯರ ಅಗ್ರಪಂಕ್ತಿಯಲ್ಲಿ ಗುದ್ಲೆಪ್ಪನವರ ಹೆಸರು ಚಿರಸ್ಥಾಯಿಯಾಗಿವೆ.

" ಮನದ ತುಂಬ ಗಾಂಧಿ ತುಂಬಿ
ಜೀವನವೆಲ್ಲ ಖಾದಿ ನಂಬಿ
ದೀಪ ಹಚ್ಚಿ ಹೋದರು ಹಳ್ಳಿಕೇರಿಯವರು ॥
ಗುದ್ಲಿಹಾಕಿ ಹದಮಾಡಿ ಹಸನಾದ ಬೆಳೆ ಬೆಳೆದು
ಮನಸಿನಾಗ ನಿಂತಾರವರು ಗುದ್ಲೆಪ್ಪನವರು "

(ರಚನೆ : ಬಾಬಣ್ಣ ಸಾಣಿಕೊಪ್ಪ, ಹುಬ್ಬಳ್ಳಿ
ಹಾಡಿದವರು : ಚನ್ನಪ್ಪ ಅಂಗಡಿ, ಅಡವಿಸೋಮಾಪುರ)

ಗುದ್ಲೆಪ್ಪನವರು ಬದಕಿನುದ್ದಕ್ಕೂ ಗಾಂಧಿ ತತ್ವ ಮತ್ತು ಖಾದಿಯನ್ನೇ ಜೀವಾಳವಾಗಿಸಿಕೊಂಡು ನಡೆದವರು. ತನ್ಮೂಲಕ ನಾಡಿನ ಜನಕ್ಕೆ ಬೆಳಕಾದವರು. ಈ ಗೀ ಗೀ ಪದವನ್ನು ಜಾನಪದ ಗಾಯಕರು ಹಾಡಿ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಗುದ್ಲೆಪ್ಪನವರ ಕುಟುಂಬದವರೆಲ್ಲರೂ ಖಾದಿ ಬಟ್ಟೆಯನ್ನೇ ತೊಡುತ್ತಿದ್ದರು. ಅವರು ಧಾರವಾಡ ಜಿಲ್ಲೆಯ ಪ್ರತಿಹಳ್ಳಿ ಪಟ್ಟಣಗಳಿಗೆ ಹೋಗಿ ಖಾದಿ ಪ್ರಸಾರ ಮಾಡುತ್ತಿದ್ದರು. ೧೯೨೭ ಮತ್ತು ೧೯೩೦ ರ ಮಧ್ಯೆ ಅವರೊಬ್ಬರೇ ಧಾರವಾಡದಲ್ಲಿ ಮನೆಮನೆಗೆ ಹೋಗಿ ಅಧಿಕಾರಿಗಳ, ಪ್ರಾಧ್ಯಾಪಕರ, ಜಮೀನುದಾರರ ಹಾಗೂ ರೈತರ ಮನವೊಲಿಸಿ ಖಾದಿ ಬಟ್ಟೆ ಧರಿಸುವಂತೆ ಮಾಡುತ್ತಿದ್ದರಲ್ಲದೆ ಸಾರ್ವಜನಿಕ ಸಮಾರಂಭಗಳಲ್ಲೂ ಧರಿಸುವಂತೆ ಪ್ರೇರಣೆ ನೀಡುತ್ತಿದ್ದರು.

ಸ್ವಗ್ರಾಮ ಹೊಸರಿತ್ತಿಯಲ್ಲಿ ಸ್ಥಾಪಿಸಿದ ಗಾಂಧಿ ಆಶ್ರಮದ ಪ್ರಮುಖ ಉದ್ದೇಶ ಬೃಹತ್ ಪ್ರಮಾಣದಲ್ಲಿ ಖಾದಿ ಉತ್ಪಾದನೆ ಮತ್ತು ಪ್ರಸಾರ ಮಾಡುವ ಮೂಲಕ ಅದನ್ನು ಜನಪ್ರಿಯಗೊಳಿಸುವದಾಗಿತ್ತು. ಸ್ವತಃ ಗುದ್ಲೆಪ್ಪನವರು ತಮ್ಮ ವಿವಾಹ ಸಮಾರಂಭದಲ್ಲಿ ಮಖಮಲ್, ರೇಷ್ಮೆ, ಪಟ್ಟಪೀತಾಂಬರ, ಜರತಾರಿ ವಸ್ತ್ರಗಳನ್ನು ಬಳಸದೆ ಶುದ್ಧ ಖಾದಿ ಬಟ್ಟೆಗಳನ್ನೇ ಧರಿಸಿ ಖಾದಿ ಪ್ರೇಮದ ಪರಾಕಾಷ್ಠೆಯನ್ನು ವ್ಯಕ್ತಪಡಿಸಿದುದು ಇತರರಿಗೆ ಮಾದರಿಯಾಯಿತು.

ಹೊಸರಿತ್ತಿಯ ಗಾಂಧಿ ಆಶ್ರಮದ ವತಿಯಿಂದ ಹೊಸರಿತ್ತಿ, ಕೊರಡೂರು, ಶಿರಮಾಪುರ, ಯಲಗಚ್ಚು ಮುಂತಾದ ಹಳ್ಳಿಗಳಲ್ಲಿ ಖಾದಿ ಕಾರ್ಯ ಮಾಡಿಸಲಾಗುತ್ತಿತ್ತು. ಸುಮಾರು ಎರಡುನೂರು ಕುಟುಂಬಗಳು ಖಾದಿ ಗ್ರಾಮೋದ್ಯೋಗವನ್ನೇ ಅವಲಂಬಿಸಿ ಆರ್ಥಿಕ ಸ್ವಾವಲಂಬನದ ಜೀವನ ನಡೆಸುತ್ತಿದ್ದವು. ಈ ಪ್ರಯೋಗದ ಯಶಸ್ಸು ಕಂಡು ಗಾಂಧೀಜಿಯವರ ನಿಕಟವರ್ತಿಗಳಲ್ಲಿ ಒಬ್ಬರಾದ ಶಂಕರಲಾಲ ಬ್ಯಾಂಕರರು ಆಶ್ಚರ್ಯ ಮತ್ತು ಆನಂದ ವ್ಯಕ್ತಪಡಿಸಿದರು. ಚರಖಾ ಸಂಘಕ್ಕೆ ಅವರ ಸಲಹೆಯಂತೆ ಒಂದು ಯೋಜನೆ ಕಳುಹಿಸಿ ತಿಂಗಳಿಗೆ ೧೫೦ ರೂ. ಕೌಟುಂಬಿಕ

ನಿರ್ವಹಣಾ ವೆಚ್ಚ ನೀಡಬೇಕೆಂದು ಬರೆದಾಗ ಚರಖಾ ಸಂಘದಿಂದ ವಿಚಾರಣೆ ಕೇಳಿ ಪತ್ರ ಬಂದಿತು. ಆಶ್ರಮವೇ ನಮ್ಮ ಕುಟುಂಬವೆಂದು ಗುದ್ಲೆಪ್ಪನವರು ಉತ್ತರ ಬರೆದಾಗ ಈ ಕಲ್ಪನೆಯು ತಮಗೆ ಅತೀ ಮೆಚ್ಚುಗೆಯಾಯಿತೆಂದು ಗಾಂಧೀಜಿಯವರಿಂದ ಉತ್ತರ ಬಂದಿತು. ಈ ಯೋಜನೆ ಮಂಜೂರಾಯಿತು. ಮುಂದೆ ಪ್ರಸಿದ್ಧ ಗಾಂಧಿ ಪ್ರಣೀತ ಆರ್ಥಿಕ ತಜ್ಞರಾದ ಕಿಶೋರಿಲಾಲ ಮಶ್ರೂವಾಲಾ ಅವರು ಆಶ್ರಮಕ್ಕೆ ಭೆಟ್ಟಿ ಕೊಟ್ಟು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ದೇಶದ ಹಾಗೂ ರಾಜ್ಯದ ಅನೇಕ ಮುಖಂಡರು ಗಾಂಧಿ ಆಶ್ರಮಕ್ಕೆ ಬಂದು ಅಲ್ಲಿಯ ಚಟುವಟಿಕೆಗಳನ್ನು ಕಂಡು ಸಂತೋಷಪಟ್ಟರು. ಖಾದಿ ಸ್ವಾವಲಂಬನ ಕಾರ್ಯವು ಎಲ್ಲರ ಮನೆಮಾತಾಯಿತು. ಪ್ರತಿಯೊಂದು ಊರಲ್ಲಿ ಮನೆಮನೆಗೂ ಖಾದಿ ಪ್ರಚಾರವಾಯಿತು. ಎಲ್ಲರೂ ತಮ್ಮ ಮನೆಯ ಹತ್ತಿಯನ್ನು ಇಟ್ಟುಕೊಂಡು ತಾವೇ ನೂತು ಖಾದಿಧಾರಿಗಳಾದ ನೂರಾರು ಕುಟುಂಬಗಳನ್ನು ಈ ಭಾಗದಲ್ಲಿ ಕಾಣಬಹುದಿತ್ತು. ಹೀಗೆ ಹೊಸರಿತ್ತಿ ಗಾಂಧಿ ಆಶ್ರಮವು ಜನರಲ್ಲಿ ಖಾದಿಯ ಬಗ್ಗೆ ಅಭಿಮಾನ ಮೂಡಿಸಿತು.

ಕಾಂಗ್ರೆಸ್ಸಿನ ರಾಷ್ಟ್ರೀಯ ನಾಯಕರಾದ ಡಾ. ರಾಜೇಂದ್ರ ಪ್ರಸಾದ ಅವರು ಗಾಂಧಿ ಸ್ಮಾರಕ ನಿಧಿಯ ಸಂಗ್ರಹಕ್ಕಾಗಿ ಕರ್ನಾಟಕಕ್ಕೆ ಬಂದಿದ್ದರು. ಆಗ ಗುದ್ಲೆಪ್ಪನವರು ಗಾಂಧಿ ಸ್ಮಾರಕ ನಿಧಿ ಸಮಿತಿಯ ಧಾರವಾಡ ಜಿಲ್ಲಾ ಅಧ್ಯಕ್ಷರೂ ರಾಜ್ಯದ ಗಾಂಧಿ ಸ್ಮಾರಕ ನಿಧಿ ಸಮಿತಿಯ ಕಾರ್ಯದರ್ಶಿಗಳೂ ಆಗಿದ್ದರು. ಅಂದಿನ ಪ್ರಸಂಗವನ್ನು ಪತ್ರಕರ್ತ ಹುಚ್ಚೇಶ್ವರ ಮೇದಿ ಅವರು ಹೀಗೆ ವಿವರಿಸುತ್ತಾರೆ : " ನಾನು ' ನವಯುಗ ' ದಿನಪತ್ರಿಕೆಯಲ್ಲಿ ಉಪಸಂಪಾದಕನಾಗಿದ್ದಾಗ ಪ್ರತಿದಿನ ರಾತ್ರಿ ಹತ್ತುಗಂಟೆಯ ಸುಮಾರಿಗೆ ಗುದ್ಲೆಪ್ಪ ಹಳ್ಳಿಕೇರಿಯವರು ಪತ್ರಿಕಾ ಕಾರ್ಯಾಲಯಕ್ಕೆ ಬರುವದು ವಾಡಿಕೆ. ಅಂದು ರಾತ್ರಿ ಬಂದವರೆ, ' ಏನಪಾ ಮೇದಿ. ನಾಳೆ ನೀನು ತಯಾರಾಗು. ರಾಜೇಂದ್ರ ಪ್ರಸಾದ ಅವರು ಬರುತ್ತಾರೆ. ಗಾಂಧಿ ಸ್ಮಾರಕ ನಿಧಿ ಸಂಗ್ರಹಕ್ಕಾಗಿ ಮೂರು ದಿವಸ ಪ್ರವಾಸ ಮಾಡಬೇಕಾಗಿದೆ ' ಎಂದರು. ಮರುದಿನ ರಾಜೇಂದ್ರ ಪ್ರಸಾದರು ಬಂದಾಗ ಗುದ್ಲೆಪ್ಪನವರು ಹುಬ್ಬಳ್ಳಿಯ ಪ್ರಮುಖ ಜನರನ್ನೆಲ್ಲ ತಮ್ಮ ಮನೆಗೆ ಕರೆಯಿಸಿ ಗಾಂಧಿ ಸ್ಮಾರಕ ನಿಧಿಗೆ ಕಾಣಿಕೆ ಕೊಡಿಸಿದರು. ನಂತರ ರಾಜೇಂದ್ರ ಪ್ರಸಾದ ಅವರೊಂದಿಗೆ ಗುದ್ಲೆಪ್ಪನವರು, ನಾನು ಹಾಗೂ ವಿಜಾಪೂರದ ಫೋಟೋಗ್ರಾಫರ ನಾರಾಯಣರಾವ ಕುಲಕರ್ಣಿ ಬೆಳಗಾವಿಗೆ ಪ್ರಯಾಣಿಸಿದೆವು. ಅಲ್ಲಿ ಗಂಗಾಧರರಾವ ದೇಶಪಾಂಡೆಯವರ ಮನೆಗೆ ಹೋದೆವು. ಬೆಳಗಾವಿಯ ಪ್ರಮುಖ ಜನರು ನಿಧಿಗೆ ಸಹಾಯ ಮಾಡಿದರು. ಅಲ್ಲಿಂದ ವಿಜಾಪೂರ ಜಿಲ್ಲೆಯ ಪ್ರವಾಸಕ್ಕೆ ಹೊರಟೆವು. ಕೃಷ್ಣಾ ನದಿ ದಂಡೆಯ ಮೇಲಿನ ಕೊಲ್ಹಾರ ಗ್ರಾಮದ ಹತ್ತಿರ ಬಂದೆವು. ಹಳ್ಳಿಕೇರಿಯವರು ಇಲ್ಲಿ ಐದು ನಿಮಿಷ ಹೋಗೋಣ ಬನ್ನಿರಿ ಎಂದರು. ಇದು ಕಾರ್ಯಕ್ರದಲ್ಲಿ ಇಲ್ಲವೆಂದು ಪ್ರಸಾದರು ಅಂದರು. ಕಾರ್ಯಕ್ರಮದಲ್ಲಿ ಇಲ್ಲದಿದ್ದರೂ ನಿಮಗೆ ಅತ್ಯಂತ ಪ್ರಿತಿಯ ವಸ್ತು ತೋರಿಸುತ್ತೇನೆ ಬನ್ನಿರಿ ಎಂದರು ಗುದ್ಲೆಪ್ಪನವರು. ಆಗ ರಾಜೇಂದ್ರ ಪ್ರಸಾದರು ಸಮ್ಮತಿಸಿದರು.

ಸಾಯಂಕಾಲದ ಗೋಧೂಳಿ ಸಮಯದಲ್ಲಿ ನದಿ ದಂಡೆಯ ಮೇಲೆ ಅಲ್ಲಿ ಎರಡುನೂರು ಮಹಿಳೆಯರು ಚರಖಾದಿಂದ ನೂಲು ತೆಗೆಯುತ್ತಿದ್ದರು. ರೋಣಕ್ಕಿದ್ದ ಖಾದಿ ಕಾರ್ಯಕರ್ತ ಕೆ. ಎ. ವೆಂಕಟರಾಮಯ್ಯನವರು ಗುದ್ಲೆಪ್ಪನವರ ಸಲಹೆಯ ಮೇರೆಗೆ ಈ ಸಂಘಟನೆಯನ್ನು ಮಾಡಿದ್ದರು. ವಿಜಾಪೂರ, ಧಾರವಾಡ, ಬೆಳಗಾವಿ ಜಿಲ್ಲೆಯ

ಮಹಿಳೆಯರು ಅಲ್ಲಿ ನೂಲುತ್ತಿದ್ದರು. ರಾಜೇಂದ್ರ ಪ್ರಸಾದ ಅವರು ಅರ್ಧ ಗಂಟೆಯ ವರೆಗೆ ಅಲ್ಲಿದ್ದು ಚಟುವಟಿಕೆಗಳನ್ನು ಆಸಕ್ತಿಯಿಂದ ವೀಕ್ಷಿಸಿದರು. ಈ ದೃಶ್ಯ ನೋಡಿ ' ನಮ್ಮ ಭಾರತದ ಗೌರವಕ್ಕೆ ಕಳಸವಿಟ್ಟಂತೆ ' ಎಂದು ಉದ್ಗಾರ ತೆಗೆದರು. ಮಹಿಳೆಯರನ್ನುದ್ದೇಶಿಸಿ ' ನಿಮ್ಮೆಲ್ಲರನ್ನು ನೋಡಿ ಭಾರತ ಮಾತೆಯನ್ನು ನೋಡಿದಷ್ಟು ಸಂತೋಷವಾಯಿತು ' ಎಂದು ಪ್ರಶಂಸಿಸಿದರು. ನಾನು ಇಲ್ಲಿ ಬರದಿದ್ದರೆ ಬಹಳ ತಪ್ಪು ಮಾಡಿದಂತಾಗುತ್ತಿತ್ತು ಎಂದು ನುಡಿದು, ಗುದ್ಲೆಪ್ಪನವರಿಗೆ ಕೃತಜ್ಞತೆ ಹೇಳಿದರು. ಮುಂದೆ ವಿಜಾಪುರಕ್ಕೆ ಹೋಗಿ ನಂತರ ಬಳ್ಳಾರಿಗೆ ಹೋದೆವು. " ೧೧

ಖಾದಿಯ ಬಗೆಗೆ ಗುದ್ಲೆಪ್ಪನವರಿಗಿದ್ದ ಅಪಾರ ಶ್ರದ್ಧೆ ನಿಷ್ಠೆಯನ್ನು ಮನದಂದು ಸ್ವಾತಂತ್ರ್ಯಾನಂತರ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಅವರನ್ನು ೧೯೫೬ ರಲ್ಲಿ ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಪ್ರಥಮ ಅಧ್ಯಕ್ಷರನ್ನಾಗಿ ನೇಮಕ ಮಾಡಿದರು. ೧೯೬೧ ರ ವರೆಗೂ ಅವರು ಕಾರ್ಯ ಮಾಡಿದರು. ೧೯೫೭ ರ ಸಪ್ಟಂಬರ ೨೩ ರಂದು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಯು. ಎನ್. ಧೇಬರ್ ಅವರಿಂದ ಮಂಡಳಿ ಉದ್ಘಾಟಿತವಾಯಿತು. ಖ್ಯಾತ ಖಾದಿ ಕಾರ್ಯಕರ್ತ ಕೆ. ಎ. ವೆಂಕಟರಾಮಯ್ಯನವರನ್ನು ಮಂಡಳಿಯ ಕಾರ್ಯದರ್ಶಿಯನ್ನಾಗಿ ಗುದ್ಲೆಪ್ಪನವರು ನೇಮಿಸಿಕೊಂಡರು. ತಮ್ಮ ಅಪಾರವಾದ ಅನುಭವ ಮತ್ತು ವ್ಯಾಪಕವಾದ ಜನಸಂಪರ್ಕದಿಂದ ಗುದ್ಲೆಪ್ಪನವರು ರಾಜ್ಯದಲ್ಲಿ ಅನೇಕ ಕಡೆ ಖಾದಿ ಮತ್ತು ಗ್ರಾಮೋದ್ಯೋಗ ಸಂಘಗಳನ್ನು ತೆರೆಯುವಲ್ಲಿ ಸಫಲರಾದರು. ಹೀಗೆ ಮಂಡಳಿಗೆ ಭದ್ರವಾದ ತಳಹದಿಯನ್ನು ಹಾಕಿದರು.


ಅವರು ತಮ್ಮ ಅಧಿಕಾರಾವಧಿಯಲ್ಲಿ ರಾಜ್ಯದಲ್ಲಿ ೭೫೦ ಕುಶಲ ಕರ್ಮಿಗಳ ಸಹಕಾರ ಸಂಘಗಳನ್ನು ಸ್ಥಾಪಿಸುವ ಮೂಲಕ ಖಾದಿ ಮತ್ತು ಗ್ರಾಮೋದ್ಯೋಗಗಳ ಅಭಿವೃದ್ಧಿಗೆ ಕಾರಣರಾದುದು ಮಹತ್ಸಾಧನೆಯಾಗಿದೆ. ಇದರಿಂದ ದೇಶೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಗ್ರಾಮೀಣರು ಆರ್ಥಿಕ ಸ್ವಾವಲಂಬನೆ ಸಾಧಿಸಲು ಶಕ್ಯವಾಯಿತು. ಗುದ್ಲೆಪ್ಪನವರ ಅವಧಿಯಲ್ಲಿ ಎರಡು ದೊಡ್ಡ ಖಾದಿ ಗ್ರಾಮೋದ್ಯೋಗಗಳ ಪ್ರದರ್ಶನಗಳು ಏರ್ಪಟ್ಟವು. ಒಂದು ೧೯೫೮ ರ ಡಿಸೆಂಬರದಲ್ಲಿ ಬೆಂಗಳೂರಿನ ಸುಭಾಸ ನಗರದಲ್ಲಿನ ರಾಜ್ಯಮಟ್ಟದ ಪ್ರದರ್ಶನವನ್ನು ಕೇಂದ್ರ ಗೃಹಸಚಿವರಾಗಿದ್ದ ಗೋವಿಂದ ವಲ್ಲಭ ಪಂತ ಅವರೂ ಇನ್ನೊಂದು ೧೯೬೦ ರ ಜನವರಿಯಲ್ಲಿ ಬೆಂಗಳೂರಿನ ಸದಾಶಿವನಗರದಲ್ಲಿಯ ರಾಷ್ಟ್ರಮಟ್ಟದ ಪ್ರದರ್ಶನವನ್ನು ಮದ್ರಾಸ್‌ನ ಮುಖ್ಯಮಂತ್ರಿ ಕಾಮರಾಜ ನಾಡಾರ್ ಅವರೂ ಉದ್ಘಾಟಿಸಿದರು. ಇವೆರಡೂ ಪ್ರದರ್ಶನಗಳು ಗುದ್ಲೆಪ್ಪನವರ ಸಂಘಟನಾ ಸಾಮರ್ಥ್ಯದಿಂದ ಖಾದಿಯನ್ನು ಹೆಚ್ಚು ಜನಪ್ರಿಯಗೊಳಿಸಿದವು.

ಮಂಡಳಿಯ ಸಾಧನೆಗಳು ಜನರಿಗೆ ಸುಪರಿಚಿತವಾಗಲಿ ಎಂಬ ಸದುದ್ದೇಶದಿಂದ ಗುದ್ಲೆಪ್ಪನವರು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ ವ್ಹಿ. ಎಲ್. ಮೆಹ್ತಾ ಹಾಗೂ ಕೇಂದ್ರ ಆಹಾರ ಸಚಿವ ಎಸ್. ಕೆ. ಪಾಟೀಲ ಅವರುಗಳ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ವಿಶೇಷ ಸಮಾರಂಭಗಳನ್ನು ಏರ್ಪಡಿಸಿದರು.

ಗುದ್ಲೆಪ್ಪನವರು ೧೯೫೯ ರ ಫೆಬ್ರುವರಿ ೧೦ ರಿಂದ ೪ ದಿನಗಳ ವರೆಗೆ ಖಾದಿಯ ಪ್ರಚಾರಕ್ಕಾಗಿ ಪಾದಯಾತ್ರೆಯನ್ನು ಕೈಕೊಂಡರು. ೧೦ ರಂದು ಹಾವೇರಿ. ಕೆ. ಕೆ. ಪುರ. ಲಿಂಗದಹಳ್ಳಿ. ಕಲ್ಲಾಪುರ. ಹಂಸಭಾವಿ. ನೆಲೋಗಲ್ಲ. ೧೧ ರಂದು



ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ ಗುದ್ಲೆಪ್ಪನವರು ಅಂಬರ ಚರಖಾ ಸ್ಪರ್ಧೆಯನ್ನು ಉದ್ಘಾಟಿಸುತ್ತಿರುವುದು.



ಖಾದಿ ಪರಿಷತ್ತಿನಲ್ಲಿ ಮೊರಾರ್ಜಿ ದೇಸಾಯಿ ಹಾಗೂ ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ ವೈಕುಂಠಲಾಲ ಮೆಹ್ತಾ ಅವರೊಂದಿಗೆ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ ಗುದ್ಲೆಪ್ಪನವರು.

ಕಳ್ಳಿಹಾಳ, ಕಾಟೇನಹಳ್ಳಿ, ಅಗಡಿ, ಕುರುಬಗೊಂಡ, ಅಕ್ಕೂರು. ೧೨ ರಂದು ಕೋಳೂರು, ಹೊಸರಿತ್ತಿ ಮಾರ್ಗವಾಗಿ ಕರ್ಜಗಿ, ಕಳಸೂರು, ತೊಂಡೂರು, ಹೊಸಹಳ್ಳಿ, ತಳ್ಳಿಳ್ಳಿ, ಕಳಕೊಂಡ, ೧೩ ರಂದು ಶಿರಬಡಗಿ, ಜಲ್ಲಾಪೂರ, ಹಾನಗಲ್ಲ, ಕುಳೇನೂರ, ಕಬನೂರ, ಬೆನಕಟ್ಟಿಗಳಲ್ಲಿ ಪಾದಯಾತ್ರೆ ಮಾಡಿ ಖಾದಿಯ ಬಗ್ಗೆ ಜನರಲ್ಲಿ ಗೌರವಾದರ ಮೂಡುವಂತೆ ತಮ್ಮ ಭಾಷಣಗಳಿಂದ ತಿಳಿವಳಿಕೆ ನೀಡಿದರು.[೧೨]

೧೯೬೦ ಜನವರಿ ೨೧ ರಿಂದ ೩೦ ರ ವರೆಗೆ ಗುದ್ಲೆಪ್ಪನವರು ವಿಜಾಪುರದ ಆರ್. ಜಿ. ದುಬೆ ಅವರೊಂದಿಗೆ ಕೇರಳದಲ್ಲಿ ಖಾದಿ ಕಾರ್ಯವೀಕ್ಷಣೆ ಮತ್ತು ಪ್ರಚಾರದ ಪ್ರವಾಸ ಕೈಕೊಂಡರು. ಕಣ್ಣಾನೂರು, ಕಾಲಿಕತ್, ತಲ್ಲೀಚೇರಿ, ಪಾಲ್ಘಾಟ್, ತ್ರಿಚೂರ, ಎರ್ನಾಕುಲಂ, ಮಧುರೈ ಮುಂತಾದ ಕಡೆಗಳಲ್ಲಿ ಹತ್ತು ದಿನಗಳ ಪ್ರವಾಸ ಮಾಡಿದರು. ಈ ಪ್ರವಾಸವು ಸ್ಫೂರ್ತಿದಾಯಕವಾಗಿತ್ತೆಂದು ತಮ್ಮ ದಿನಚರಿಯಲ್ಲಿ ಬರೆದಿದ್ದಾರೆ.[೧೩]

೧೯೬೦ ಜೂನ್ ೨೬ ರಂದು ಗುದ್ಲೆಪ್ಪನವರು ಮದ್ರಾಸಕ್ಕೆ ಹೋಗಿ ಅಲ್ಲಿಯ ಖಾದಿ ಸಂಸ್ಥೆಗಳ ಚಟುವಟಿಕೆಗಳನ್ನು ವೀಕ್ಷಿಸಿದರು. ೨೮ ಕ್ಕೆ ಕಂಚೀಪುರಂಗೆ ಹೋಗಿ ಅಲ್ಲಿಯ ಮದ್ರಾಸ್ ರಾಜ್ಯ ಖಾದಿ ಖಾತೆಯ ರೇಷ್ಮೆ ಕೇಂದ್ರದ ಕಾರ್ಯಚಟುವಟಿಕೆಗಳನ್ನು ನೋಡಿ ಪ್ರಶಂಸಿಸಿದರು. ೨೯ ಕ್ಕೆ ಚಕ್ರವರ್ತಿ ರಾಜಗೋಪಾಲಾಚಾರಿಯವರ ತ್ರಿಚನಗೂಡು ಆಶ್ರಮಕ್ಕೆ ಭೆಟ್ಟಿ ನೀಡಿ ಬಂದರು.[೧೪]

ಗುದ್ಲೆಪ್ಪನವರು ಬೆಳಗಾವಿ ಜಿಲ್ಲೆಯ ಹುದಲಿಯ ಖಾದಿ ಮತ್ತು ಗ್ರಾಮೋದ್ಯೋಗ ಸಂಘಕ್ಕೂ ಸಂದರ್ಶನವಿತ್ತರು. ಮಹಾರಾಷ್ಟ್ರಕ್ಕೆ ಹೋಗಿ ಬೀದಿ ದೀಪ ಹಾಗೂ ಅಡುಗೆ ಮಾಡಲು ಬಳಸಲು ಬರುವ ಗೋಬರ ಗ್ಯಾಸ್ ಪ್ಲ್ಯಾಂಟ್‌ಗಳನ್ನು ವೀಕ್ಷಿಸಿದರು. ಚರ್ಮೋದ್ಯೋಗ ಕೇಂದ್ರಗಳಿಗೆ ಹೋಗಿ ಬಂದರು. ಅಹ್ಮದಾಬಾದ, ಗಾಂಧಿ ಗ್ರಾಮ, ಸಾಬರಮತಿ ಮುಂತಾದ ಕಡೆ ಹೋಗಿ ಬಂದು ಅಲ್ಲಿಯ ಯೋಜನೆಗಳನ್ನು ಕರ್ನಾಟಕದಲ್ಲಿ ಕಾರ್ಯಗತಗೊಳಿಸಿದರು.

ಗುದ್ಲೆಪ್ಪನವರು ತಮ್ಮ ಆತ್ಮೀಯರನ್ನು, ಸ್ನೇಹಿತರನ್ನು ಹಾಗೂ ತಮ್ಮೊಡನೆ ಸಂಪರ್ಕಕ್ಕೆ ಬಂದವರನ್ನು ಖಾದಿ ಧರಿಸುವಂತೆ ಮನವೊಲಿಸುತ್ತಿದ್ದರು. ಪತ್ರಕರ್ತ ಕೆ. ಶಾಮರಾವ್ ಅವರು ಹೀಗೆ ಹೇಳುತ್ತಾರೆ : " ಖಾದಿ ಮತ್ತು ಗ್ರಾಮೋದ್ಯೋಗವು ಹೆಚ್ಚು ಜನಪ್ರಿಯವಾಗಲು ಗುದ್ಲೆಪ್ಪ ಹಳ್ಳಿಕೇರಿಯವರ ಪರಿಶ್ರಮ ಕಾರಣ. ಅವರು ಮಾಡಿದಷ್ಟು ಕೆಲಸಗಳನ್ನು ಯಾರೂ ಮಾಡಲಿಲ್ಲ. ನಾನು 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ೧೯೩೬ - ೩೭ ರಲ್ಲಿ ಉಪಸಂಪಾದಕನಾಗಿ ಬೆಳಗಾವಿಯಲ್ಲಿ ಕೆಲಸ ಮಾಡುತ್ತಿದ್ದೆ. ಹಳ್ಳಿಕೇರಿಯವರು ಒಮ್ಮೆ ಬೆಳಗಾವಿಗೆ ಬಂದಾಗ ನನ್ನನ್ನು ಆತ್ಮೀಯತೆಯಿಂದ ಕರೆದುಕೊಂಡು ಖಾದಿ ಭಂಡಾರಕ್ಕೆ ಹೋದರು. ಅಲ್ಲಿದ್ದ ಮ್ಯಾನೇಜರರನ್ನು ಕರೆದು 'ಶಾಮಣ್ಣನಿಗೆ ಏನು ಬೇಕು ಕೊಡಿರಿ. ಅವನನ್ನು ಪೂರ್ತಿ ಖಾದಿಮಯ ಮಾಡಬೇಕು' ಎಂದರು. ಆಗ 'ನಾನು ಪೇಪರನವನು ಕಾಂಗ್ರೆಸ್ಸಿನವನಲ್ಲ. ನನ್ನನ್ನು ಯಾಕೆ ಖಾದಿಮಯ ಮಾಡ್ತೀರಿ' ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. 'ನೀನು ಕಾಂಗ್ರೆಸ್ಸಿನವನಾಗಿರಲಿ ಬಿಡಲಿ, ಖಾದಿ ಧರಿಸಲೇಬೇಕು' ಎಂದು ಹೇಳಿ ಎರಡು ಜೊತೆ ಜುಬ್ಬಾ ಧೋತರ ಕೊಡಿಸಿದರು. " ಎಂದು ಹೇಳಿದ ಶಾಮರಾವ್ ಅವರು ಮತ್ತೊಂದು ಘಟನೆ ನೆನಪಿಸಿಕೊಂಡರು :

" ಹಳ್ಳಿಕೇರಿಯವರು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರಾದಾಗ ಬೆಳಗಾವಿ ಜಿಲ್ಲೆಯ ಯಮಕನಮರಡಿಯ ರೈತನಿಗೆ ಹಣಕಾಸು ಮಂಜೂರು ಮಾಡುವದಿತ್ತು. ಆಗ ವೆಂಕಟರಾಮಯ್ಯನವರು ಆಯೋಗದ ಕಾರ್ಯದರ್ಶಿಯಾಗಿದ್ದರು. ' ರೈತನ ಸಾಲ ಎಷ್ಟಿದೆ ನೋಡು ' ಎಂದು ಕಾರ್ಯದರ್ಶಿಯವರಿಗೆ ಹೇಳಿ ಹಣಕಾಸು ಮಂಜೂರು ಮಾಡಿ ಸ್ವತಃ ಹಳ್ಳಿಕೇರಿಯವರು ಆ ರೈತನ ಊರಿಗೆ ಹೋಗಿ ಹಣ ಮುಟ್ಟಿಸಿ ಪಾವತಿ ತೆಗೆದುಕೊಂಡು ಬಂದರು. ಹೀಗೆ ಸ್ವತಃ ಬಡ ರೈತನ ಮನೆ ಬಾಗಿಲಿಗೆ ಹೋಗಿ ಯೋಜನೆಯ ಫಲವನ್ನು ಮುಟ್ಟಿಸಿ ಬರುವ ವ್ಯಕ್ತಿಗಳು ಎಷ್ಟು ಜನರಿದ್ದಾರೆ ? " [೧೫] ಎಂದರು.

ಆಯೋಗದ ಅಧ್ಯಕ್ಷರಾಗಿ ಗುದ್ಲೆಪ್ಪನವರು ಮಾಡಿದ ಪ್ರಗತಿಪರ ಕಾರ್ಯಗಳ ಬಗ್ಗೆ ಮಾಜಿ ಸಚಿವ ಹಾರನಹಳ್ಳಿ ರಾಮಸ್ವಾಮಿ ಅವರು ಹೀಗೆ ಹೇಳುತ್ತಾರೆ: " ಹಳ್ಳಿಕೇರಿಯವರು ಅಧ್ಯಕ್ಷರಾದ ಮೇಲೆ ಖಾದಿ ಕಾರ್ಯವನ್ನು ತುಂಬಾ ಪ್ರಗತಿಯಲ್ಲಿ ನಡೆಸಿಕೊಂಡು ಬಂದರು. ವಿಜಾಪುರ. ಬಾಗಲಕೋಟೆ ಹಾಗೂ ರಾಜ್ಯದ ಅನೇಕ ಕಡೆ ನೂಲುವ ನೇಯ್ಗೆ ಕೇಂದ್ರಗಳನ್ನು ತೆರೆದರು. ಖಾದಿಯ ಉತ್ಪನ್ನ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗುವಂತೆ ಮಾಡಿದರು. ಬಟ್ಟೆ ನೂಲುವುದು, ನೇಯುವುದು, ಎಣ್ಣೆ ತೆಗೆಯುವ ಗಾಣದ ಕೆಲಸ. ಸೋಪು ತಯಾರಿಸುವುದು ಹೀಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡರು. " [೧೬]

ಗುದ್ಲೆಪ್ಪನವರು ಸಭಾಪತಿಗಳಾಗಿದ್ದಾಗ ಅವರ ಆಪ್ತ ಸಹಾಯಕರಾಗಿದ್ದ ಬಿ. ಎನ್. ವೀರಭದ್ರಯ್ಯನವರು ಹೀಗೆ ವಿವರಿಸುತ್ತಾರೆ: " ಗುದ್ಲೆಪ್ಪ ಹಳ್ಳಿಕೇರಿಯವರ ಹತ್ತಿರವಿದ್ದ ನಾವೂ ಖಾದಿ ಧರಿಸಬೇಕಾಗಿ ಬಂತು. ಆಪ್ತ ಕಾರ್ಯದರ್ಶಿ. ಪ್ಯೂನ್. ಗನ್‌ಮ್ಯಾನ್. ಡ್ರೈವರ್ ಎಲ್ಲರಿಗೂ ಪದೇ ಪದೇ ಅವರು ಖಾದಿ ಧರಿಸಿ ಎನ್ನುತ್ತಿದ್ದರು. ನಮಗೆ ನಿರ್ವಹಣೆ ತೊಂದರೆಯಾದರೂ ಪ್ರತಿಯೊಬ್ಬರೂ ಖಾದಿ ಧರಿಸಿದೆವು, ಒಟ್ಟಾರೆ ಖಾದಿಮಯವಾಯಿತು. ಖಾದಿ ಧರಿಸಿದವರನ್ನು ಕಂಡರೆ ಅವರಿಗೆ ಬಹಳ ಪ್ರೀತಿ. ಖಾದಿ ಬಗ್ಗೆ ಅವರದು ಬಹಳ ಅಭಿಮಾನ. " [೧೭]

ಖಾದಿ ಪ್ರಿಯರಾದ ಗುದ್ಲೆಪ್ಪನವರು ತಮ್ಮ ಮಕ್ಕಳ ಮದುವೆಯನ್ನೂ ತಮ್ಮಂತೆ ರಾಷ್ಟ್ರೀಯ ವಿವಾಹವನ್ನಾಗಿ ಪರಿವರ್ತಿಸಿದ ರಾಷ್ಟ್ರಾಭಿಮಾನಿಗಳು. ಅವರ ಜೇಷ್ಠ ಪುತ್ರ ಡಾ. ದೀನಬಂಧು ಹೀಗೆ ಹೇಳುತ್ತಾರೆ : " ನಮ್ಮ ಅಕ್ಕ ಪ್ರೇಮಲತಾಳ ಮದುವೆಯು ಸಾಂಪ್ರದಾಯಿಕವಾಗಿರದೆ ರಾಷ್ಟ್ರೀಯ ವಿವಾಹವಾಗಿ ಪರಿಣಮಿಸಿತು. ತಂದೆಯವರು ಅಕ್ಕನ ವಿವಾಹಕ್ಕೆ ಮೊದಲೇ ಎರಡು ದಿವಸ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯನ್ನು ೧೯೫೫ ರ ಮೇ ತಿಂಗಳಲ್ಲಿ ಕರೆದರು. ಸಭೆ ಹುಬ್ಬಳ್ಳಿಯ ಬಿ. ವಿ. ಭೂಮರಡ್ಡಿ ಕಾಲೇಜಿನ ವಿಶಾಲ ಮೈದಾನದಲ್ಲಿ ಜರುಗಿತು. ಸಭೆ ಮುಗಿದ ನಂತರ ಕಾಂಗ್ರೆಸ್ ಕಾರ್ಯಕರ್ತರು ಅಕ್ಕನ ಮದುವೆಗಾಗಿ ಎರಡು ದಿವಸ ಹುಬ್ಬಳ್ಳಿಯಲ್ಲಿಯೇ ಉಳಿದರು. ಅವರೆಲ್ಲರ ಸಮ್ಮುಖದಲ್ಲಿಯೇ ಮದುಮಕ್ಕಳು ಖಾದಿ ಬಟ್ಟೆ ಧರಿಸಿ ರಾಷ್ಟ್ರಧ್ವಜದ ಕೆಳಗೆ ಪರಸ್ಪರ ಖಾದಿ ಮಾಲೆ ವಿನಿಮಯ ಮಾಡಿಕೊಂಡರು. ಇನ್ನೋರ್ವ ಸಹೋದರಿ ರಾಜೇಶ್ವರಿಯ ಮದುವೆಯೂ ಹೀಗೆಯೇ ಆಯಿತು. ನನ್ನ ಮದುವೆಯು ೧೯೬೦ ರ ಡಿಸೆಂಬರ್ ೨೦ ರಂದು ಜರುಗಿತು. ರಾಷ್ಟ್ರಧ್ವಜದ ಕೆಳಗೆ ನಾವು ಮದುಮಕ್ಕಳು ಖಾದಿ ಬಟ್ಟೆ ಧರಿಸಿಕೊಂಡು ಪರಸ್ಪರ ಖಾದಿ ಮಾಲೆ ವಿನಿಮಯ ಮಾಡಿಕೊಂಡೆವು. ತಂದೆಯವರು ಹಾಕಿಕೊಟ್ಟ ಈ ಪರಂಪರೆಯನ್ನೇ

ನಾವೂ ಮುಂದುವರಿಸಿದೆವು. ನಮ್ಮ ತಮ್ಮಂದಿರ ಹಾಗೂ ನನ್ನ ಮಗಳ ಮದುವೆಯನ್ನೂ ಖಾದಿಮಯವಾಗಿಯೇ ಮಾಡಿದೆವು. ನಾನು ಈಗಲೂ ಖಾದಿಯನ್ನೇ ಧರಿಸುತ್ತಿದ್ದೇನೆ. ಮನೆಯವರೆಲ್ಲ ಹೆಚ್ಚಾಗಿ ಖಾದಿಯನ್ನೇ ಬಳಸುತ್ತಿದ್ದಾರೆ." [೧೮]

ಗಾಂಧಿ ಪ್ರಭಾವಕ್ಕೆ ಒಳಗಾದ ಹಳೆಯ ತಲೆಮಾರಿನವರು ಇಂಥ ರಾಷ್ಟ್ರೀಯ ವಿವಾಹಗಳನ್ನು ಮಾಡುವುದು ಸಹಜವಾಗಿತ್ತು. ಆದರೆ ಅವರ ಮುಂದಿನ ಪೀಳಿಗೆಯವರೂ ಕೂಡ ಇಂಥ ವಿವಾಹ ನೆರವೇರಿಸಿದುದು ಅಪರೂಪ. ಈ ರಾಷ್ಟ್ರೀಯ ವಿವಾಹಗಳು ಅತ್ಯಂತ ಸರಳವಾಗಿ ಜರುಗುತ್ತಿರುವುದರಿಂದ ಆಡಂಬರ, ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ ಆರ್ಥಿಕ ಸಮತೋಲನವನ್ನು ಕಾಯ್ದುಕೊಂಡು ಬರುತ್ತಿದ್ದವೆಂಬುದನ್ನು ಮರೆಯುವಂತಿಲ್ಲ.

ಗುದ್ಲೆಪ್ಪನವರು ಸ್ಥಾಪಿಸಿದ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಖಾದಿ ಬಟ್ಟೆಗಳನ್ನೇ ಸಮವಸ್ತ್ರವನ್ನಾಗಿ ಧರಿಸುತ್ತಿದ್ದಾರೆ. ಸಿಬ್ಬಂದಿಯೂ ಸಹ ಖಾದಿಧಾರಿಗಳಾಗಿದ್ದಾರೆ. ಹೊಸರಿತ್ತಿ ಹಾಗೂ ಸುತ್ತಲಿನ ಹಳ್ಳಿಗಳಲ್ಲಿ ಖಾದಿ ಈಗಲೂ ಜನಪ್ರಿಯವಾಗಿದೆ.

ಶಿಬಿರಗಳು :

ಪ್ರಜಾಪ್ರಭುತ್ವದಲ್ಲಿ ನಾಗರಿಕತ್ವದ ಮಹತ್ವವನ್ನು ಜನರಲ್ಲಿ ಬಿಂಬಿಸುವ ಸಲುವಾಗಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಪ್ರಜಾಪ್ರಭುತ್ವದಲ್ಲಿ ನಾಗರಿಕರಿಗೆ ಎರಡು ಬಗೆಯ ಜ್ಞಾನ ಮತ್ತು ತರಬೇತಿ ಇರಬೇಕಾಗುತ್ತದೆ. ಮೊದಲನೆಯದಾಗಿ ಒಳ್ಳೆಯ ಪ್ರಜೆಯಾಗಿ ಕಾನೂನುಗಳಿಗೆ ವಿಧೇಯನಾಗಿರುವುದನ್ನು ಕಲಿಯಬೇಕಾಗುತ್ತದೆ. ಎರಡನೆಯದಾಗಿ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳದೇ ಪ್ರಭುತ್ವವಿರುವುದರಿಂದ ಕಾನೂನುಗಳನ್ನು ರಚಿಸುವ ಹಾಗೂ ಆಡಳಿತವನ್ನು ನಿಭಾಯಿಸುವದನ್ನು ತಿಳಿದಿರಬೇಕಾಗಿರುತ್ತದೆ.

ಈ ಉದ್ದೇಶಕ್ಕಾಗಿ ಏರ್ಪಡಿಸಿದ ಶಿಬಿರಗಳಲ್ಲಿ ಗುದ್ಲೆಪ್ಪನವರು ತಮ್ಮ ಉದ್ಬೋಧಕ ಭಾಷಣಗಳ ಮೂಲಕ ಮಾರ್ಗದರ್ಶನ ಮಾಡುತ್ತಿದ್ದರು. ಅಂದಿನ ಸಂದರ್ಭವನ್ನು ಮಾಜಿ ಸಚಿವ ಹಾರನಹಳ್ಳಿ ರಾಮಸ್ವಾಮಿ ಅವರು ಹೀಗೆ ನೆನಪಿಸುತ್ತಾರೆ: " ಸ್ವಾತಂತ್ರ್ಯ ಬಂದ ನಂತರ ಸಿಟಿಜನ್‌ಸಿಪ್ ಕಾಲೇಜ್ ಅಂತಾ ಬೆಳಗಾವಿಯಲ್ಲಿ ಶಿಬಿರ ಏರ್ಪಡಿಸಲಾಗಿತ್ತು. ಅಲ್ಲಿ ದೇಶವನ್ನು ಹೇಗೆ ಆಳಬೇಕು ? ನಾಗರಿಕರ ಕರ್ತವ್ಯಗಳೇನು ? ಇತ್ಯಾದಿ ತಿಳಿವಳಿಕೆಯನ್ನು ನಾಗರಿಕರಿಗೆ ಕೊಡುವುದೇ ಇದರ ಮುಖ್ಯ ಉದ್ದೇಶವಾಗಿತ್ತು. ಲಕ್ಷ್ಮೇಶ್ವರದಲ್ಲಿಯೂ ಇಂಥ ಶಿಬಿರ ಏರ್ಪಡಿಸಲಾಗಿತ್ತು. ಎರಡೂ ಕಡೆಗೆ ಗುದ್ಲೆಪ್ಪ ಹಳ್ಳಿಕೇರಿಯವರು ಬಂದು ನಾಗರಿಕರನ್ನುದ್ದೇಶಿಸಿ ಮಾರ್ಗದರ್ಶಕ ಉಪನ್ಯಾಸ ನೀಡಿದರು." [೧೯]

ಹುಬ್ಬಳ್ಳಿಯಲ್ಲಿ ಖ್ಯಾತ ನೇತ್ರತಜ್ಞ ಡಾ. ಎಂ. ಸಿ. ಮೋದಿ ಅವರಿಂದ ಬಡವರಿಗಾಗಿ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳು ಮೂರು ಬಾರಿ ಗುದ್ಲೆಪ್ಪನವರ ಅಧ್ಯಕ್ಷತೆಯಲ್ಲಿ ನಡೆದವು. ರೋಗಿಗಳಿಗೆ ಉಚಿತ ಊಟ ವಸತಿ ಮತ್ತು ಔಷಧೋಪಚಾರವನ್ನು ಗುದ್ಲೆಪ್ಪನವರು ಒದಗಿಸಿದರು. [೨೦]

ಗುದ್ಲೆಪ್ಪನವರು ಹಂಸಭಾವಿಯಲ್ಲಿ ಸಮಾಜ ಕಾರ್ಯಕರ್ತರ ಶಿಬಿರ ಏರ್ಪಡಿಸಿ ಯುವಕರಿಗೆ ತರಬೇತಿ ಕೊಟ್ಟು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿದರು.

ಸಂತ್ರಸ್ತರಿಗೆ ಸಹಾಯ :

ಜನರಿಗೆ ಆಪತ್ತು, ದುಃಖ, ತೊಂದರೆಗಳು ಬಂದಾಗ ಮಾನವೀಯ ಅಂತಃಕರಣದ ಮೇರು ಪುರುಷ ಗುದ್ಲೆಪ್ಪನವರು ಸಂತ್ರಸ್ತರ ನೆರವಿಗಾಗಿ ಸ್ವತಃ ಧಾವಿಸಿ ಹೋಗುತ್ತಿದ್ದರು. ೧೯೬೦ ರಲ್ಲಿ ವರದಾ ನದಿಯ ಮಹಾಪೂರದಿಂದ ಹಾವೇರಿ, ಶಿಗ್ಗಾಂವಿ ಹಾಗೂ ಹಾನಗಲ್ಲ ತಾಲೂಕುಗಳಲ್ಲಿ ಜನಜೀವನ ತುಂಬಾ ಹಾನಿಗೊಳಗಾಯಿತು. ಅನೇಕರು ಮನೆ ಮಾರು ಕಳೆದುಕೊಂಡರು. ಬೆಳೆದು ನಿಂತ ಫಸಲು ನಾಶವಾಯಿತು. ಆಗ ಗುದ್ಲೆಪ್ಪನವರು ತಕ್ಷಣವೇ ಹೋಗಿ ಎಲ್ಲ ಕಡೆ ಪ್ರವಾಸ ಮಾಡಿ ಜನರಿಗೆ ಸಾಂತ್ವನ ಹೇಳಿದರಲ್ಲದೆ ಬೇರೆ ಬೇರೆ ಸ್ಥಳಗಳಲ್ಲಿ ಸಂಚರಿಸಿ ಆಹಾರ ಧಾನ್ಯ, ನಿತ್ಯೋಪಯೋಗಿ ವಸ್ತುಗಳು, ಬಟ್ಟೆ ಬರೆ, ಹಾಸಿಗೆ ಹೊದಿಕೆಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿ ಸಂತ್ರಸ್ತರಿಗೆ ಒದಗಿಸಿದರು. ಸರಕಾರದಿಂದಲೂ ಸಕಾಲಿಕ ಸಹಾಯ ಸೌಕರ್ಯಗಳು ದೊರೆಯುವಂತೆ ಮಾಡಿದರು.

೧೯೬೨ ರಲ್ಲಿ ಭಾರತದ ಮೇಲೆ ಚೀನಾ ಆಕ್ರಮಣ ಮಾಡಿದಾಗ ಸೈನಿಕರಿಗೆ ಹಾಗೂ ಯುದ್ಧದಲ್ಲಿ ಮಡಿದ ಯೋಧರ ಕುಟುಂಬಗಳಿಗಾಗಿ ಹಣ, ಆಹಾರ ಸಾಮಗ್ರಿ, ಬಟ್ಟೆ ಬರೆ ಮುಂತಾದವುಗಳನ್ನು ಸಂಗ್ರಹಿಸಿ ಕೇಂದ್ರ ಸರಕಾರಕ್ಕೆ ಕಳಿಸಿಕೊಡುವಲ್ಲಿ ದೇಶಭಕ್ತ ಗುದ್ಲೆಪ್ಪನವರ ಪರಿಶ್ರಮ ಪ್ರಶಂಸನೀಯವಾಗಿತ್ತು.

೧೯೬೬ ಜನೆವರಿ ೩೦ ರಂದು ಮುಂಡರಗಿ ತಾಲೂಕಿನಲ್ಲಿ ಭೀಕರ ಬಿರುಗಾಳಿಯಿಂದಾಗಿ ಭಾರೀ ಆಲಿಕಲ್ಲುಗಳ ಮಳೆ ಸುರಿಯಿತು. ಆಲೂರು, ಚುರ್ಚಿಹಾಳ ಮುಂತಾದ ಹತ್ತಾರು ಹಳ್ಳಿಗಳಲ್ಲಿ ಜನಜೀವನ ಹಾನಿಗೊಳಗಾಯಿತು. ಮರುದಿನವೇ ಗುದ್ಲೆಪ್ಪನವರು ಆ ಪ್ರದೇಶಗಳಲ್ಲಿ ಸುತ್ತಾಡಿ ಸಂತ್ರಸ್ತರ ನೋವು, ಹಾನಿಗಳನ್ನು ಪ್ರತ್ಯಕ್ಷ ಕಂಡ ಅವರ ಕೋಮಲ ಹೃದಯ ಕರಗಿತು. ಕೂಡಲೇ ಮುಂಡರಗಿ ತಾಲೂಕಿನ ಸಹಾಯಧನ ಸಮಿತಿಯೊಂದನ್ನು ರಚಿಸಿ ಸಾರ್ವಜನಿಕರಿಂದ ಧನ ದಾನ್ಯ, ಬಟ್ಟೆ ಇತ್ಯಾದಿ ಸಂಗ್ರಹಿಸಿ ಎಲ್ಲರಿಗೂ ಹಂಚಿದರು. ಅಲ್ಲಿ ಆದ ಹಾನಿಯ ವಿವರಗಳನ್ನು ಸರಕಾರಕ್ಕೆ ಬರೆದು ಕಳಿಸಿದರು. ಸರಕಾರದಿಂದಲೂ ಎಲ್ಲ ಬಗೆಯ ಸಹಾಯ ದೊರಕುವಂತೆ ಮಾಡಿದರು. ಜನರ ಪ್ರೀತಿ ಗೌರವಗಳಿಗೆ ಪಾತ್ರರಾದರು.

" ಮುಂಡರಗಿ ಭಾಗದಲ್ಲಿ ೧೯೬೭ ರಲ್ಲಿ ಬರಗಾಲ ಉಂಟಾದಾಗ ಗುದ್ಲೆಪ್ಪನವರ ಪ್ರಯತ್ನದಿಂದಾಗಿ ಕಲಕೇರಿಯಿಂದ ಡಂಬಳಕ್ಕೆ ಹೋಗುವ ರಸ್ತೆಯನ್ನು ಬರಗಾಲ ಕಾಮಗಾರಿಯಡಿಯಲ್ಲಿ ನಿರ್ಮಿಸಲಾಯಿತು. ಆ ಭಾಗದ ಜನರು ಗೌರವದಿಂದ ಆ ರಸ್ತೆಗೆ ' ಹಳ್ಳಿಕೇರಿ ಗುದ್ಲೆಪ್ಪ ರಸ್ತೆ ' ಎಂದು ಹೆಸರಿಟ್ಟು ಕರೆಯತೊಡಗಿದರು. "[೨೦]

ಕಾರ್ಮಿಕರ ನಾಯಕ :

ಗುದ್ಲೆಪ್ಪನವರು ಕಾರ್ಮಿಕರ ಪರವಾಗಿ ಅನೇಕ ಕೆಲಸಗಳನ್ನು ಮಾಡಿದರು. ಮೈಸೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹುಬ್ಬಳ್ಳಿ ವಿಭಾಗದ ಕಾರ್ಮಿಕರ ಸಂಘವು ೧೯೫೭ ರ ಜನೆವರಿಯಲ್ಲಿ ಅವರ ನೇತೃತ್ವದಲ್ಲಿ ಸ್ಥಾಪಿತವಾಯಿತು. ಅವರೇ ಅದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ರಾಜ್ಯ ಸಂಘಗಳ ಕೇಂದ್ರ ಸಂಸ್ಥೆಯನ್ನು ಸಂಘಟಿಸಿದರು. ೧೯೬೭ ರಲ್ಲಿ ಈ ಕಾರ್ಮಿಕ ಸಂಘಟನೆಗಳ ರಾಜ್ಯದ ಅಧ್ಯಕ್ಷರಾದರು.

ಕಾರ್ಮಿಕರಿಗೆ ಬೋನಸ್ ಹಾಗೂ ವೇತನ ಹೆಚ್ಚಳ ಮಾಡಿಸಿದರು. ಸೇವಾವಧಿಯನ್ನು ೫೮ ವರ್ಷಗಳ ವರೆಗೆ ವಿಸ್ತರಿಸಲು ಶ್ರಮಿಸಿ ಯಶಸ್ವಿಯಾದರು. ವಿಭಾಗ ಸಂಘದ ಕಾರ್ಯಾಲಯಕ್ಕಾಗಿ ಜಾಗೆಯನ್ನು ದೊರಕಿಸಿಕೊಟ್ಟರು. ಹೀಗೆ ಕಾರ್ಮಿಕರ ಪರವಾಗಿ ಕಾರ್ಯನಿರ್ವಹಿಸಿ ಅವರ ಕಲ್ಯಾಣಕ್ಕಾಗಿ ಅವಿರತ ಶ್ರಮಿಸಿದರು.

೧೯೫೯ ರ ಜನೆವರಿ ೨೭ ರಂದು ವಿಜಾಪುರದಲ್ಲಿ ಜರುಗಿದ ಮೈಸೂರು ರಾಜ್ಯ ಸಾರಿಗೆ ಕಾರ್ಮಿಕರ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ, ಮರುದಿನ ಜಮಖಂಡಿ. ಚಿಕ್ಕೋಡಿ. ಹುಕ್ಕೇರಿಗಳಿಗೆ ತೆರಳಿ ಸಾರಿಗೆ ಕಾರ್ಮಿಕರ ಸಭೆ ಜರುಗಿಸಿ ಅವರ ಅಹವಾಲುಗಳನ್ನು ಸ್ವೀಕರಿಸಿದರು. ಸಮಸ್ಯೆಗಳಿಗೆ ಪರಿಹಾರ ದೊರಕಿಸಿದರು. [೨೨]


೧೯೭೧ ರ ಮಾರ್ಚ ೧ ರಂದು ಅನಾರೋಗ್ಯದ ಮಧ್ಯೆಯೂ ಹುಬ್ಬಳ್ಳಿಯಲ್ಲಿ ಸಂಜೆ ಸಾರಿಗೆ ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡಿದರು. [೨೩] ಹೀಗೆ ಆರೋಗ್ಯದ ತೊಂದರೆಗಳಿದ್ದರೂ ಅದನ್ನು ಗಮನಿಸದೆ ಕಾರ್ಮಿಕರ ಮಧ್ಯೆ ಬೆರೆತು ಅವರ ಹಿತಾಕಾಂಕ್ಷೆಗಳನ್ನು ಕೇಳುವ ತವಕ ಅವರದಾಗಿತ್ತು.

ಕಾರ್ಮಿಕರ ಹಿತಾಕಾಂಕ್ಷೆಗಳನ್ನು ಕಾಪಾಡಲು ಅವಿಶ್ರಾಂತವಾಗಿ ಶ್ರಮಿಸುವ ನೇತಾರ ಗುದ್ಲೆಪ್ಪನವರಾಗಿದ್ದರು. ಸಮಾಜ ಕಾರ್ಯಕರ್ತ ಕೊಟ್ರಪ್ಪ ಕುಂಬಿ ಅವರು ಹೀಗೆ ಹೇಳುತ್ತಾರೆ: " ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಲ್ಲಿ ಮತ್ತು ಅದರ ಸಂಘಗಳಲ್ಲಿ ಎರಡು ಗುಂಗುಗಳಾಗಿ ಘರ್ಷಣೆ ಉದ್ಭವಿಸಿದಾಗ ಉಭಯ ಗುಂಪುಗಳವರು ಅವರ ನಿವಾಸದಲ್ಲಿ ನೆರೆದಿದ್ದರು. ಈ ತಂಟೆಯನ್ನು ಬಗೆಹರಿಬೇಕಾದರೆ ರಾತ್ರಿ ಎರಡು ಗಂಟೆಯಾಯಿತು. ತಮ್ಮ ಆರೋಗ್ಯದ ಕಡೆಗೆ ಗಮನ ಕೊಡದೆ ಕಾರ್ಮಿಕರ ಕಲ್ಯಾಣವೇ ಅವರ ಉದ್ದೇಶವಾಗಿತ್ತೆಂಬುದು ಇದರಿಂದ ವಿದಿತವಾಗುತ್ತದೆ.

ಇನ್ನೊಂದು ಘಟನೆ ದಾಂಡೇಲಿಯ ಕಾಗದ ಕಾರ್ಖಾನೆಯ ಕಾರ್ಮಿಕರು ಮತ್ತು ಮಾಲಿಕರ ನಡುವೆ ತಂಟೆ ತಕರಾರುಗಳುಂಟಾಗಿ ಕಾರ್ಖಾನೆ ಮುಚ್ಚಿತ್ತು. ಕಾರ್ಮಿಕರು ಚಳುವಳಿ ನಡೆಸಿದ್ದರು. ಗುದ್ಲೆಪ್ಪನವರು ಅಲ್ಲಿಗೆ ಹೋಗಿ ಎರಡೂ ಕಡೆಯವರಿಗೂ ಒಪ್ಪಿಗೆಯಾಗುವ ವಿಚಾರಗಳನ್ನು ಹೇಳಿ ಕಾರ್ಮಿಕರ ಮತ್ತು ಮಾಲಿಕರ ನಡುವಿನ ತಂಟೆಯನ್ನು ಬಗೆಹರಿಸಿ ಕಾರ್ಖಾನೆ ಆರಂಭವಾಗುವಂತೆ ಮಾಡಿದರು. ಇದರಿಂದಾಗಿ ಅಲ್ಲಿಯ ಕಾರ್ಮಿಕರು ಹಾಗೂ ಮಾಲಿಕರು ಗುದ್ಲೆಪ್ಪನವರಿಗೆ ಕೃತಜ್ಞರಾದರು. " [೨೪] ಹೀಗೆ ಎಂತಹ ಜಟಿಲ ತಂಟೆ ತಕರಾರುಗಳು ಬಂದರೂ ಕೂಡ ಅವುಗಳನ್ನು ಚಾಣಾಕ್ಷತನದಿಂದ ಮತ್ತು ಹಾರ್ದಿಕ ಕಳಕಳಿಯಿಂದ ಬಗೆಹರಿಸುತ್ತಿದ್ದುದರಿಂದ ಅವರು ಸಂಧಾನ ಚತುರರೆನಿಸಿಕೊಂಡರು.



ಗುದ್ಲೆಪ್ಪ ಹಳ್ಳಿಕೇರಿ ಅವರು ಹಳ್ಳಿಗರನ್ನುದ್ದೇಶಿಸಿ ಮಾತನಾಡುತ್ತಿರುವುದು. ೧೯೬೫



ಮೈಸೂರು ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಪರಿಷತ್ತಿನಲ್ಲಿ ಸಂಘದ ಅಧ್ಯಕ್ಷ ಗುದ್ಲೆಪ್ಪನವರು.
ಬೆಂಗಳೂರು. ೨೨-೧-೧೯೬೨

೧೯೬೭ ರಲ್ಲಿ ದಕ್ಷಿಣ ಮಧ್ಯ ರೇಲ್ವೆಯ ಕಾರ್ಮಿಕ ಸಂಘದ ಅಧ್ಯಕ್ಷರಾಗಿಯೂ ಗುದ್ಲೆಪ್ಪನವರು ಕಾರ್ಯ ನಿರ್ವಹಿಸಿದರು. ಹೀಗೆ ಕಾರ್ಮಿಕರ ನೋವುಗಳಿಗೆ ಮತ್ತು ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಹುಬ್ಬಳ್ಳಿಯ ರೇಲ್ವೆ ವರ್ಕಶಾಪ್‌ನಲ್ಲಿ ಕೆಲವು ವಿಭಾಗಗಳು ಮತ್ತು ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸುತ್ತಿದ್ದುದನ್ನು ಪ್ರತಿಭಟಿಸಿ ಕೇಂದ್ರ ಸರಕಾರದ ಮೇಲೆ ಒತ್ತಡ ತಂದು ಅಂಥ ಕ್ರಮಗಳನ್ನು ನಿಲ್ಲಿಸಿದರು. ಜೊತೆಗೆ ರೇಲ್ವೆ ವರ್ಕಶಾಪ್‌ನ ಅಭಿವೃದ್ಧಿಗೆ ಹೆಚ್ಚು ಶ್ರಮಿಸಿದರು.

ಅಭಿವೃದ್ಧಿ ಕಾರ್ಯಗಳು :

ಗುದ್ಲೆಪ್ಪನವರು ಹಾವೇರಿ ಭಾಗದಲ್ಲಿ ಅನೇಕ ಜನೋಪಯೋಗಿ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡರು. ಮುಖ್ಯವಾಗಿ ಹೊಸರಿತ್ತಿ ಮತ್ತು ಕೊರಡೂರನ್ನು ಸಂಪರ್ಕಿಸಲು ವರದಾ ನದಿಗೆ ಬೃಹತ್ ಸೇತುವೆಯನ್ನು ನಿರ್ಮಿಸಲಾಯಿತು. ಇದು ೧೯೬೬ ರಲ್ಲಿ ಪ್ರಾರಂಭವಾಗಿ ೧೯೭೦ ರಲ್ಲಿ ಪೂರ್ಣಗೊಂಡಿತು. ಇದರಿಂದ ಸಾರಿಗೆ ಸಂಪರ್ಕಕ್ಕೆ ಹೆಚ್ಚು ಅನುಕೂಲವಾಯಿತು.

ಹೊಸರಿತ್ತಿಯಿಂದ ಹಾವೇರಿ ಮತ್ತು ಲಕ್ಷ್ಮೇಶ್ವರಕ್ಕೆ ಹೋಗಲು ಡಾಂಬರ ರಸ್ತೆಗಳ ನಿರ್ಮಾಣ ಮಾಡಿಸಿದರು. ಹೊಸರಿತ್ತಿಯಲ್ಲಿ ಪ್ರಾಥಮಿಕ ಶಾಲಾ ಕಟ್ಟಡ, ಪ್ರವಾಸಿ ಮಂದಿರ, ಪ್ರಾಥಮಿಕ ಆರೋಗ್ಯ ಕೇಂದ್ರ, ಪಶು ಚಿಕಿತ್ಸಾಲಯ, ಗ್ರಾಮ ಕೇಂದ್ರ, ಗ್ರಾಮ ಪಂಚಾಯತಿ ನಿರ್ಮಾಣಗೊಂಡವು. ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಿದರು.

ನೀರಾವರಿ ಮತ್ತು ಕೃಷಿಯ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸುತ್ತಿದ್ದ ಗುದ್ಲೆಪ್ಪನವರು ಅಕ್ಕೂರಿಗೆ ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸಿದರು. ಹೊಸರಿತ್ತಿ ಭಾಗದಲ್ಲಿ ಮಿಡತೆಗಳ ಹಾವಳಿಯಿಂದ ಬೆಳೆ ನಾಶವಾಗುತ್ತಿತ್ತು. ಇದನ್ನು ತಡೆಗಟ್ಟಲು ಹೆಲಿಕ್ಯಾಪ್ಟರ ಮೂಲಕ ಕೀಟನಾಶಕ ಪುಡಿ ಸಿಂಪಡಿಸುವ ವ್ಯವಸ್ಥೆ ಮಾಡಿ ಫಸಲನ್ನು ರಕ್ಷಿಸಲು ನೆರವಾದರು.

ಹುಬ್ಬಳ್ಳಿ - ಧಾರವಾಡ ಮಹಾನಗರ ಸಭೆಯ ಸ್ಥಾಪನೆಯಲ್ಲಿಯೂ ಗುದ್ಲೆಪ್ಪನವರು ಮಹತ್ವದ ಪಾತ್ರ ವಹಿಸಿದರು. ಹೀಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡು ಜನಕಲ್ಯಾಣಕ್ಕಾಗಿ ಶ್ರಮಿಸಿದರು.

೨. ಶೈಕ್ಷಣಿಕ ಸೇವೆ

ಶಿಕ್ಷಣವು ಚಾರಿತ್ರ್ಯ ನಿರ್ಮಿಸಿಕೊಳ್ಳಲು, ವ್ಯಕ್ತಿತ್ವ ರೂಪಿಸಿಕೊಳ್ಳಲು ಹಾಗೂ ಜ್ಞಾನ ವರ್ಧನೆಗೆ ಕಾರಣವಾಗಬಲ್ಲುದು. ಒಟ್ಟಿನ ಮೇಲೆ ಮಾನವನ ಸರ್ವಾಂಗೀಣ ವಿಕಾಸಕ್ಕೆ ಶಿಕ್ಷಣವೇ ತಳಹದಿ ಎಂಬುದು ಶಿಕ್ಷಣಪ್ರೇಮಿ ಗುದ್ಲೆಪ್ಪನವರ ಗುರಿಯಾಗಿತ್ತು.

ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕುವ ಪೂರ್ವದಲ್ಲಿಯೇ ತಮ್ಮ ಹಳ್ಳಿಯ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಮಕ್ಕಳ ಶೈಕ್ಷಣಿಕ ಏಳಿಗೆಗಾಗಿ ಹೊಸರಿತ್ತಿಯಲ್ಲಿ ೧೯೨೪ ರಲ್ಲಿ ಮಾಧ್ಯಮಿಕ ಶಾಲೆಯನ್ನು ಸ್ಥಾಪಿಸಿದರು. ಅವರ ಕಾರ್ಯಕ್ಷೇತ್ರ ವಿಸ್ತಾರಗೊಂಡು ಬೇರೆ ಬೇರೆ ಸ್ಥಳಗಳಿಗೆ ಪ್ರವಾಸ ಕೈಕೊಳ್ಳ ಬೇಕಾದುದರಿಂದಾಗಿ ಕೆಲಕಾಲದಲ್ಲಿ ಆ ಶಾಲೆ ನಿಂತು ಹೋಯಿತು.

ಗುದ್ಲೆಪ್ಪನವರು ಮುಂಬಯಿ ವಿಧಾನಸಭಾ ಸದಸ್ಯರಿದ್ದಾಗ ೧೯೫೨ ಆಗಸ್ಟ ೧೫ ರಂದು ಧಾರವಾಡದ ಶಿಕ್ಷಕರ ತರಬೇತಿ ಮಹಾವಿದ್ಯಾಲಯದಲ್ಲಿ ಜರುಗಿದ ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಹೋಗಿ ಗಾಂಧೀಜಿ ಪ್ರಣೀತ ಸ್ವಾವಲಂಬಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಭಾಷಣ ಮಾಡಿದರು : " ನೌಕರಿಗಾಗಿ ಶಿಕ್ಷಣ ಎಂಬ ಈ ತತ್ವವು ಈಗ ಹೋಗಬೇಕಾಗಿದೆ. ಪರಾವಲಂಬಿಗಳಾಗುವಂತೆ ಮಾಡುವ ಶಿಕ್ಷಣವು ಶಿಕ್ಷಣವಲ್ಲ. ಪ್ರತಿಯೊಬ್ಬನೂ ಶಿಕ್ಷಣ ಮುಗಿಸಿಕೊಂಡು ಬಂದ ನಂತರ ಸ್ವಾವಲಂಬಿಯಾಗಿರಬೇಕು. ಈ ತತ್ವವನ್ನು ಆಧಾರವಾಗಿಟ್ಟುಕೊಂಡು ಗಾಂಧೀಜಿಯವರು ಮೂಲ ಶಿಕ್ಷಣ ಪದ್ಧತಿ ಹಾಕಿಕೊಟ್ಟರು. ಈ ಶಿಕ್ಷಣವು ಅಕ್ಷರಶಃ ಕೃತಿಯಲ್ಲಿ ಬರಬೇಕು. ಅಂದರೆ ಮಾತ್ರ ವಿದ್ಯಾರ್ಥಿಗಳಲ್ಲಿ ಉದ್ಯೋಗದ ಜೊತೆಗೆ ಬೌದ್ಧಿಕ ಜ್ಞಾನವೂ ರಾಷ್ಟ್ರಾಭಿಮಾನವೂ ಬೆಳೆದು ಅವರು ಸ್ವತಂತ್ರ ರಾಷ್ಟ್ರದ ಯೋಗ್ಯ ನಾಗರಿಕರಾಗುವರು "[೨೫] ಎಂದು ಪ್ರತಿಪಾದಿಸಿದರು.

ಗುದ್ಲೆಪ್ಪನವರು ಧಾರವಾಡದ ಸರಕಾರಿ ಶಿಕ್ಷಕಿಯರ ತರಬೇತಿ ಮಹಾವಿದ್ಯಾಲಯದಲ್ಲಿ ಸಭೆಯೊಂದಕ್ಕೆ ಮುಖ್ಯ ಅತಿಥಿಗಳಾಗಿ ಹೋಗಿದ್ದರು. ಮಹಾಕವಿ ಕಾಳಿದಾಸನ ' ಅಭಿಜ್ಞಾನ ಶಾಕುಂತಲ ' ನಾಟಕದಲ್ಲಿಯ ಶಕುಂತಲೆಯ ಪಾತ್ರದ ಕುರಿತು ಭಾವಪೂರ್ಣ ಉಪನ್ಯಾಸ ನೀಡಿದರು. ಆಗ ಸಭೆಯಲ್ಲಿದ್ದ ಮಹಿಳೆಯರ ಕಣ್ಣುಗಳು ಹನಿಗೂಡಿದವು. ಅಧ್ಯಯನಶೀಲರಾದ ಅವರು ಕೇಳುಗರ ಹೃದಯಸ್ಪರ್ಶಿಯಾಗುವಂತೆ ಕನ್ನಡ, ಇಂಗ್ಲೀಷ ಮತ್ತು ಹಿಂದಿಯಲ್ಲಿಯೂ ಮಾತನಾಡುತ್ತಿದ್ದರು.[೨೬]

೧೯೬೦ ಆಗಸ್ಟ ೧೫ ರಂದು ಗುದ್ಲೆಪ್ಪನವರು ಹೊಸರಿತ್ತಿಯಲ್ಲಿ ನಾಡ ರಾಷ್ಟ್ರೀಯ ಶಿಕ್ಷಣ ಸಮಿತಿಯನ್ನು ಸ್ಥಾಪಿಸಿ ಅದರ ಆಶ್ರಯದಲ್ಲಿ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದರು. ೧೯೬೬ ರಲ್ಲಿ ಅದಕ್ಕೆ " ಶ್ರೀ ಜಿ. ವಿ. ಹಳ್ಳಿಕೇರಿ ಮಾಧ್ಯಮಿಕ ಶಾಲೆ " ಎಂದು ನಾಮಕರಣ ಮಾಡಲಾಯಿತು. ೧೯೮೦ ರಲ್ಲಿ " ಶ್ರೀ ಜಿ. ವಿ. ಹಳ್ಳಿಕೇರಿ ಸಂಯುಕ್ತ ಪದವಿಪೂರ್ವ ಕಾಲೇಜು " ಎಂದು ಪರಿವರ್ತಿತವಾಯಿತು. ಈ ಶಿಕ್ಷಣ ಸಂಸ್ಥೆಯು ೧೯೯೨ ರಿಂದ ಪ್ರಾಥಮಿಕ ಶಾಲೆಗಳನ್ನೂ ನಡೆಸುತ್ತಿದೆ.

ಶಿಕ್ಷಕರ ಹಿತೈಷಿ :

ನಾಳಿನ ನಾಗರಿಕರನ್ನು ರೂಪಿಸುವ ರೂವಾರಿಗಳಾದ ಶಿಕ್ಷಕರ ಬಗ್ಗೆ ಗುದ್ಲೆಪ್ಪನವರು ವಿಶೇಷ ಕಾಳಜಿ ವಹಿಸುತ್ತಿದ್ದರು. ಶಿಕ್ಷಕರು ನ್ಯಾಯಯುತ ಬೇಡಿಕೆಗಳಿಗಾಗಿ ಸತ್ಯಾಗ್ರಹ ಕೈಕೊಂಡಾಗ ಗುದ್ಲೆಪ್ಪನವರು ಮಧ್ಯಸ್ಥಿಕೆ ವಹಿಸಿ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟು ಬೇಡಿಕೆಗಳು ಈಡೇರುವಂತೆ ಮಾಡುತ್ತಿದ್ದರು. ಇದರಿಂದಾಗಿ ಶಿಕ್ಷಕರ ಗೌರವಾದರಕ್ಕೆ ಪಾತ್ರರಾಗಿದ್ದರು.

" ಶ್ರೀ ಗುದ್ಲೆಪ್ಪನವರು ಶಿಕ್ಷಣ ಪ್ರೇಮಿಗಳು. ಶಿಕ್ಷಕರ ಬಂಧುಗಳು. ಅನೇಕ ಶೈಕ್ಷಣಿಕ ಸಮ್ಮೇಳನಗಳಲ್ಲಿ ಅವರು ಭಾಗವಹಿಸಿದ್ದಾರೆ. ಅವರ ವಾಕ್‌ಝರಿ ನೂತನ ಸೆಲೆಗಳಾಗಿ ಪರಿಣಮಿಸಿ ಶಿಕ್ಷಕರ ಬಳಗವನ್ನೇ ತಮ್ಮವರನ್ನಾಗಿ ಮಾಡಿಕೊಳ್ಳಲು ಕಾರಣವಾಗಿದೆ. ಅವರ ಮಾತಿನ ಸೆಳವಿನಲ್ಲಿ ಅಗಾಧವಾದ ಆಕರ್ಷಕ ಶಕ್ತಿ ಹುದುಗಿದೆ. ಶಿಕ್ಷಕರ

ಬಂಧುಗಳೆಲ್ಲ ಗುದ್ಲೆಪ್ಪನವರ ನಾಯಕತ್ವದಲ್ಲಿ ದೃಢವಾದ ನಂಬಿಗೆಯುಳ್ಳವರಾಗಿದ್ದಾರೆ. ತಮ್ಮ ಹಿತೈಷಿಗಳೆಂದೂ ಅವರು ಪರಿಗಣಿಸಿದ್ದಾರೆ. "[೩೭]

ಹಾವೇರಿಯಲ್ಲಿ ಕಾಲೇಜು ಸ್ಥಾಪನೆ :

ಹಾವೇರಿ ಭಾಗದಲ್ಲಿ ಉಚ್ಚ ಶಿಕ್ಷಣಕ್ಕಾಗಿ ಕಾಲೇಜು ಸೌಕರ್ಯವಿರಲಿಲ್ಲ. ಆ ಭಾಗದ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣಕ್ಕಾಗಿ ಹುಬ್ಬಳ್ಳಿ ಇಲ್ಲವೆ ಧಾರವಾಡಕ್ಕೆ ಹೋಗಬೇಕಾಗುತ್ತಿತ್ತು. ಇದನ್ನರಿತ ಗುದ್ಲೆಪ್ಪನವರು ಕಾಲೇಜು ಸ್ಥಾಪನೆಯ ಹೊಳಹು ಹಾಕಿ ೧೯೬೦ ರಲ್ಲಿ ಅಂದಿನ ರಾಜ್ಯಪಾಲರಾಗಿದ್ದ ಜಯಚಾಮರಾಜ ಒಡೆಯರ ಅವರಿಂದ ಶಿಲಾನ್ಯಾಸವನ್ನು ನೆರವೇರಿಸಿದರು. ಮುಂದೆ ೧೯೬೩ ರಲ್ಲಿ ಕೇವಲ ಮೂರು ತಿಂಗಳ ಅವಧಿಯಲ್ಲಿ ಅವಿಶ್ರಾಂತವಾಗಿ ಸಂಚರಿಸಿ ಜನರಿಂದ ಮತ್ತು ಸಂಸ್ಥೆಗಳಿಂದ ಹಣ ಸಂಗ್ರಹಿಸಿ ಕೆ. ಎಲ್. ಇ. ಸಂಸ್ಥೆಗೆ ನೀಡಿ ಆರ್ಟ್ಸ್ ಮತ್ತು ಸಾಯನ್ಸ್ ಕಾಲೇಜು ಆರಂಭವಾಗುವಂತೆ ಮಾಡಿದರು. ಕಾಲೇಜಿಗೆ ನಿವೇಶನ, ಕಟ್ಟಡ, ಇತರೆ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಟ್ಟರು.

ಹಾವೇರಿ ಕಾಲೇಜಿನ ಪ್ರಾರಂಭೋತ್ಸವದಲ್ಲಿ ಅಧ್ಯಕ್ಷರಾಗಿ ಆಗಮಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ. ಸಿ. ಪಾವಟೆ ಅವರು ಮಾತನಾಡುತ್ತ, " ಮೂರು ತಿಂಗಳ ಹಿಂದೆ ನಾನು ಇದೇ ಮಾರ್ಗವಾಗಿ ಬೆಂಗಳೂರಿಗೆ ಹೋದೆ. ಆಗ ಇದೆಲ್ಲ ಬಯಲಾಗಿತ್ತು. ಇಂದು ಭವ್ಯ ಕಟ್ಟಡ ನಿರ್ಮಾಣವಾಗಿ, ಇಲ್ಲಿ ಕಾಲೇಜು ಆರಂಭವಾಗಿದೆ. ಅದು ಶ್ರೀ ಹಳ್ಳಿಕೇರಿಯವರ ಕರ್ತೃತ್ವ ಶಕ್ತಿಯ ಪ್ರತೀಕ "[೩೮] ಎಂದು ಪ್ರಶಂಸಿಸಿದರು.

ವಿಶ್ವವಿದ್ಯಾಲಯದ ಸಭೆಯಲ್ಲಿ ಸದಸ್ಯರೊಬ್ಬರು " ಹಾವೇರಿ ಕಾಲೇಜು ಸ್ಥಾಪನೆಗಾಗಿ ಕ್ಯಾಶ್ ಡಿಪಾಜಿಟ್ ಇಡಲು ಏಕೆ ಒತ್ತಾಯ ಪಡಿಸಲಿಲ್ಲ " ಎಂದು ಪ್ರಶ್ನಿಸಿದಾಗ. ಡಾ. ಪಾವಟೆಯವರು ಕೊಟ್ಟ ಉತ್ತರ ಮಾರ್ಮಿಕವಾಗಿತ್ತು. " ಶ್ರೀ ಹಳ್ಳಿಕೇರಿಯವರೇ ಡಿಪಾಜಿಟ್ ನಿಧಿಯಿದ್ದಂತೆ. ಅವರಿದ್ದ ಮೇಲೆ ಏನೂ ಬೇಕಿಲ್ಲ. ಅವರು ತಪ್ಪಿದಲ್ಲಿ ನಾನೇ ಜಾಮೀನು ! "[೩೯] ಎಂದರು. ಗುದ್ಲೆಪ್ಪನವರ ಬಗ್ಗೆ ಡಾ. ಪಾವಟೆಯವರಿಗಿದ್ದ ಅಪಾರ ವಿಶ್ವಾಸಕ್ಕೆ ಈ ಸಂಗತಿ ಸಾಕ್ಷಿಯಾಗಿದೆ.

ಗುದ್ಲೆಪ್ಪನವರಿಗೆ ಅರವತ್ತು ವರ್ಷಗಳು ತುಂಬಿದಾಗ ಏರ್ಪಡಿಸಿದ ಷಷ್ಠ್ಯಬ್ದಿ ಪೂರ್ತಿ ಸಮಾರಂಭದ ಸಮಯದಲ್ಲಿ ಕೆ. ಎಲ್. ಇ. ಸಂಸ್ಥೆಯು ಹಾವೇರಿ ಕಾಲೇಜಿಗೆ " ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ " ಎಂದು ನಾಮಕರಣ ಮಾಡಿ ಗುದ್ಲೆಪ್ಪನವರಿಗೆ ಗೌರವಪೂರ್ವಕ ಕೃತಜ್ಞತೆ ಸಲ್ಲಿಸಿತು.

ಬೆಂಗಳೂರಿನಲ್ಲಿಯ ಎಸ್. ನಿಜಲಿಂಗಪ್ಪ ಕಾಲೇಜು ಹಾಗೂ ೧೯೬೩ ರಲ್ಲಿಯೇ ರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್‌ರಿಂದ ಉದ್ಘಾಟಿಸಲ್ಪಟ್ಟ ' ಕಾಲೇಜ್ ಆಫ್ ಬಿಜಿನೆಸ್ ಮ್ಯಾನೇಜಮೆಂಟ್ ' ಎಂಬ ಎರಡು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿಯೂ ಗುದ್ಲೆಪ್ಪನವರು ವಹಿಸಿದ ಆಸಕ್ತಿ. ತೋರಿದ ಉತ್ಸಾಹ ಶ್ಲಾಘನೀಯ. ಧಾರವಾಡದಲ್ಲಿ ಕರ್ನಾಟಕ ಕೃಷಿ ಮಹಾವಿದ್ಯಾಲಯ (ಈಗ ಕೃಷಿ ವಿಶ್ವವಿದ್ಯಾಲಯವಾಗಿದೆ). ಹುಬ್ಬಳ್ಳಿಯಲ್ಲಿ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ. ಬೆಳಗಾವಿಯಲ್ಲಿ ಜವಾಹರಲಾಲ ನೆಹರೂ ವೈದ್ಯಕೀಯ ಮಹಾವಿದ್ಯಾಲಯ ಇವುಗಳ ಸ್ಥಾಪನೆಯಲ್ಲಿಯೂ ಗುದ್ಲೆಪ್ಪನವರು ಅಪಾರ ಪರಿಶ್ರಮ ಪಟ್ಟರು.

ಧಾರವಾಡದಲ್ಲಿಯ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಲ್ಲಿ ಗುದ್ಲೆಪ್ಪನವರ ಪಾತ್ರವಿತ್ತೆಂಬ ಬಗ್ಗೆ ದೀರ್ಘ ಕಾಲದ ವರೆಗೆ ಆ ವಿಶ್ವವಿದ್ಯಾಲಯದ ಸಿಂಡಿಕೇಟ ಸದಸ್ಯರಾಗಿದ್ದ ಸಿ. ಜೆ. ಕಮಲಾಪಿ ಹೀಗೆ ಹೇಳುತ್ತಾರೆ: " ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯ ಕುರಿತ ಮೊದಲ ನಿಯೋಗದಲ್ಲಿ ಗುದ್ಲೆಪ್ಪನವರಿದ್ದರು. ಮುಂಬಯಿಯಲ್ಲಿ ಎಂ. ಪಿ. ಪಾಟೀಲರ ಮನೆಯಲ್ಲಿ ಎಲ್ಲ ಶಾಸಕರು ಸೇರಿ ಸಭೆ ಮಾಡಿದರು. ನಂತರ ಎಲ್ಲರೂ ಕೂಡಿ ಮುಂಬಯಿ ಮುಖ್ಯಮಂತ್ರಿ ಬಿ. ಜಿ. ಖೇರ ಅವರಿಗೆ ಮನವಿ ಕೊಟ್ಟರು. "[೩೦] ಇಂಥ ಪ್ರಯತ್ನಗಳಿಂದಾಗಿ ಮುಂದೆ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು.

ಗುದ್ಲೆಪ್ಪನವರು ಕೆ. ಎಲ್. ಇ. ಶಿಕ್ಷಣ ಸಂಸ್ಥೆಯ ಸದಸ್ಯರಾಗಿ ನಿಕಟ ಸಂಪರ್ಕವಿಟ್ಟುಕೊಂಡು ಅನೇಕ ಶೈಕ್ಷಣಿಕ ಸಂಸ್ಥೆಗಳ ನಿರ್ಮಾಣಕ್ಕೆ ಉತ್ತೇಜನ ನೀಡಿದರು. ಮೈಸೂರು ಮತ್ತು ಬೆಂಗಳೂರು ಭಾಗಗಳಲ್ಲಿಯ ಹಲವು ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಿದರು.

ಹೊಸರಿತ್ತಿಯಲ್ಲಿ ಗುರುಕುಲ ಸ್ಥಾಪನೆ :

ಉದ್ದಿಮೆಗಳ ಜನಕ ಘನಶ್ಯಾಮದಾಸ ಬಿರ್ಲಾ ಅವರ ಜನ್ಮ ಸ್ಥಾನವಾದ ರಾಜಸ್ಥಾನದ ಪಿಲಾನಿ ಎಂಬ ಹಳ್ಳಿಯಲ್ಲಿರುವ ವಿದ್ಯಾ ಸಂಸ್ಥೆ ಹಾಗೂ ರವೀಂದ್ರನಾಥ ಠಾಕೂರರ ಶಾಂತಿನಿಕೇತನ - ವಿಶ್ವಭಾರತಿ ಮಾದರಿಯಂತೆ ಹೊಸರಿತ್ತಿಯಲ್ಲಿ ಗ್ರಾಮೀಣ ಮಕ್ಕಳಿಗೆ ಗಾಂಧಿ ತತ್ವ ಪ್ರಣೀತ ಸ್ವಾವಲಂಬಿ ಜೀವನ ಶಿಕ್ಷಣ ನೀಡುವ ' ಗುರುಕುಲ ' ವನ್ನು ಸ್ಥಾಪಿಸುವದು ಗುದ್ಲೆಪ್ಪನವರ ಹಿರಿಯಾಸೆಯಾಗಿತ್ತು.

೧೯೬೬ ರ ಜೂನ್ ೬ ರಂದು ಗುದ್ಲೆಪ್ಪನವರಿಗೆ ಅರವತ್ತು ವರ್ಷ ತುಂಬಿದಾಗ ತಮ್ಮ ಹುಟ್ಟು ಹಬ್ಬವನ್ನು ಇಂಥ ಗುರುಕುಲ ಸ್ಥಾಪಿಸಲು ಉದ್ದೇಶಿಸಿ ಆಚರಿಸುವದಾದರೆ ಮಾತ್ರ ತಮ್ಮ ಅಭ್ಯಂತರವಿಲ್ಲವೆಂದು ಹೇಳಿದ್ದರು.

ಕೇರಳದ ಕೊಚ್ಚಿನದಲ್ಲಿ ೧೯೬೮ ರಲ್ಲಿ ನಡೆದ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ರಜತ ಮಹೋತ್ಸವಕ್ಕೆ ಅಲ್ಲಿಯ ರಾಜ್ಯಪಾಲರ ಆಮಂತ್ರಣದ ಮೇರೆಗೆ ಗುದ್ಲೆಪ್ಪನವರು ಅತಿಥಿಯಾಗಿ ಹೋಗಿದ್ದರು. " ಕೇರಳ ಯಾತ್ರೆ ಕೈಕೊಂಡ ಯಜಮಾನ ಗುದ್ಲೆಪ್ಪನವರಿಗೆ ಕನ್ಯಾಕುಮಾರಿಯ ಮೂರು ಸಮುದ್ರಗಳ ಉದ್ಘೋಷದ ಮಧ್ಯದಲ್ಲೂ ಆತ್ಮಾನ್ವೇಷಣೆಯ ಹಂಬಲ. ನಾಡು ನುಡಿ. ದೀನ ದಲಿತರ. ಯುವ ಜನಾಂಗ. ರಾಷ್ಟ್ರ ಭವಿಷ್ಯಗಳನ್ನು ಕುರಿತು ಗಂಭೀರ ಚಿಂತನೆ ನಡೆಸುವ ಕಾತುರತೆ..... ಕೇರಳದ ಪಯಣ ಮುಗಿಸಿ ಕೊಚ್ಚಿನ ಕಡಲ ಕೊಲ್ಲಿಯ ಮಧ್ಯ ಇರುವ ಬೋಲ್ಗಾಟ್ ಗೆಸ್ಟ್‌ಹೌಸ್‌ಗೆ ಮರಳಿದಾಗ ಹಾದಿಯಲ್ಲಿ ಕಂಡ ಒಂದು ಮಿಶನರಿ ಹೈಸ್ಕೂಲು ನೆನಪಿಸುತ್ತ ನುಡಿದಿದ್ದರು. ' ನಮ್ಮ ದೇಶದಾಗ ಸಾಲಿ ಹೈಸ್ಕೂಲು ಕಾಲೇಜು ಎಲ್ಲಾ ಅವ. ನಮ್ಮ ಹಾವೇರ್‍ಯಾಗೂ ಒಂದು ಕಾಲೇಜು ಅದೆಲ್ಲಾ ಆತಲ್ಲ ಆದರ ಇದೆಲ್ಲ ಬರೆ ಆ ಬ್ರಿಟಿಶ್ ಶಿಕ್ಷಣದ್ದ ಕಾಪಿ:

' ನೋಡಪಾ ನಮಗೆ ಬೇಕಾಗಿರೋ ಶಿಕ್ಷಣಾನ ಬ್ಯಾರೇ ಆಗಬೇಕು. ಗುಜರಾತ ವಿದ್ಯಾಪೀಠ. ರಾಮಕೃಷ್ಣ ಆಶ್ರಮ ಇದರ ಶಿಸ್ತು ಮತ್ತು ವಿಧಾಯಕತನ ಇದ್ದು ನಮ್ಮದೊಂದು ವಿದ್ಯಾಲಯದ ಮಾದರೀನ ಬ್ಯಾರೇ ಇರಬೇಕು.



ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಭೇಟಿ ಇತ್ತಾಗ ಅವರೊಂದಿಗೆ ಗುದ್ಲೆಪ್ಪ ಹಳ್ಳಿಕೇರಿ, ಎಸ್. ಆರ್. ಕಂಠಿ, ಡಾ. ಡಿ. ಸಿ. ಪಾವಟೆ, ಎಸ್. ನಿಜಲಿಂಗಪ್ಪ, ಬಿ. ಡಿ. ಜತ್ತಿ, ಆರ್. ಆರ್. ದಿವಾಕರ ಅವರುಗಳನ್ನು ಕಾಣಬಹುದು. ೧೯೫೮



ರಾಷ್ಟ್ರಪತಿ ಝಾಕೀರ ಹುಸೇನ ಅವರೊಂದಿಗೆ ಗುದ್ಲೆಪ್ಪನವರು



ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲದ ಮಹಾದ್ವಾರ.



ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲ ಕಟ್ಟಡದ ಮುಂಭಾಗ

ಪ್ರಶಸ್ತ ಒಂದು ನೂರು ಎಕರೆ, ಕನಿಷ್ಠ ಐವತ್ತು ಎಕರೆ ಪರಭಾರೆ ಭೂಮಿ ಬೇಕು. ಅದರೊಳಗ ಒಕ್ಕಲುತನ, ಹೈನುಗಾರಿಕೆ, ಬಡಿಗತನ, ಕಮ್ಮಾರಿಕೆ ಒಂದು ಭಾಗ. ಸಾಹಿತ್ಯ, ಸಂಗೀತ, ಚಿತ್ರಕಲಾ, ಗೃಹ ವಿಜ್ಞಾನ ಇನ್ನೊಂದು ಭಾಗ. ನೂಲುವದು, ಬಟ್ಟೆ ನೇಯುವದು, ಡ್ರಾಯಿಂಗ್, ಡಿಜಾಯ್‌ಸಿಂಗ್ ಮತ್ತೊಂದು ಭಾಗ. ಇವರೊಳಗ ಬರೋ ವಿದ್ಯಾರ್ಥಿಗಳು ಮತ್ತು ಇಲ್ಲಿರೋ ಶಿಕ್ಷಕರು .ಯಾವುದಕ್ಕೂ ಹೊರಗ ಹೋಗತಕ್ಕದ್ದಲ್ಲ. ಎಲ್ಲ ಅವಶ್ಯಕತಾ ಇಲ್ಲೇ ಪೂರೈಸಿಕೊಳ್ಳೂದು. ಹನ್ನೊಂದು ವರ್ಷ ಶಿಕ್ಷಣ ಪಡೆದು. ಒಬ್ಬ ಹುಡುಗ ಹೊರಗ ಬಂದಾ ಅಂದರ ಅಂವಾ ಸ್ವತಂತ್ರವಾಗಿ ಬದಕೂದಕ್ಕ, ಸ್ವತಂತ್ರವಾಗಿ ವಿಚಾರಿಸೂದಕ್ಕ ಮತ್ತ ತನ್ನ ಯಾವದೇ ವೃತ್ತಿ ಇಡೀ ರಾಷ್ಟ್ರದ ವಿಕಾಸಕ್ಕ ಒಂದಲ್ಲ ಒಂದು ರೀತಿ ನೆರವು ಆಗೂದಕ್ಕ ಸಿದ್ಧ ಆಗಿರಬೇಕು. ಅಂದರ ಇಡೀ ಈ ನಮ್ಮ ವಿದ್ಯಾಲಯ ಒಂದು ಗುರುಕುಲ ಆಗಿರಬೇಕು. ಮತ್ತು ಅದು ಎಲ್ಲ ರೀತಿಯಿಂದ ಸ್ವಾವಲಂಬಿ ಆಗಿರಬೇಕು. ಶರಣರು ಹೇಳಿದ ಕಾಯಕ ತತ್ವ, ಅದರ ಆಚರಣೆ ಇದು ನಮ್ಮ ಗುರುಕುಲದ ಮೂಲ ಸೂತ್ರ ಆಗಬೇಕು. ನಮ್ಮ ಹೊಸರಿತ್ತಿಯೊಳಗ ಇರೋ ಗುರುಕುಲ ಇಡೀ ಭಾರತದೊಳಗಿನ ಒಂದು ಉನ್ನತ ಮಟ್ಟದ ಆದರ್ಶ ಗುರುಕುಲ ಆಗಬೇಕು ಅನ್ನೂದು ನನ್ನ ಹಂಬಲ. ನೋಡೋಣ, ನಮ್ಮ ಜನರ ಶಕ್ತಿ..... ದೇವರ ಇಚ್ಛಾ..... ' ಅಷ್ಟರಲ್ಲಿ ಅಂದು ಅಲ್ಲಿಯೇ ತಂಗಿದ್ದ ರಾಷ್ಟ್ರಪತಿ ಡಾ. ಝಕೀರ ಹುಸೇನರಿಂದ ಶ್ರೀ ಗುದ್ಲೆಪ್ಪನವರಿಗೆ ಕರೆ ಬಂದಿತು. ಗುರುಕುಲದ ಆದರ್ಶದಿಂದ ಹೊಳೆಯುತ್ತಿದ್ದ ಅವರ ಮುಖದಲ್ಲಿ ನಮ್ಮ ನಾಡಿನ ಯುವ ಜನಾಂಗದ ಆಶೋತ್ತರಗಳ ಪ್ರತಿಬಿಂಬ ಮೂಡಿತ್ತು. " [೩೧]

ಗುದ್ಲೆಪ್ಪನವರಿಗೆ ಅರವತ್ತು ವರ್ಷ ತುಂಬಿದಾಗ ಅಭಿಮಾನಿಗಳು, ಸ್ನೇಹಿತರು ೧೯೬೬ ರಲ್ಲಿ ಷಷ್ಟ್ಯಬ್ದಿ ಸಮಾರಂಭ ಏರ್ಪಡಿಸಿದರು. ಆಗ ಸಮರ್ಪಿಸಿದ ಒಂದೂವರೆ ಲಕ್ಷ ರೂಪಾಯಿಗಳ ಹಮ್ಮಿಣಿಯನ್ನು ಗ್ರಾಮೀಣ ಗುರುಕುಲದ ನಿರ್ಮಾಣಕ್ಕಾಗಿ ಗುದ್ಲೆಪ್ಪನವರು ತೆಗೆದಿರಿಸಿದರು.

೧೯೬೯ ಸಪ್ಟಂಬರ ೨೯ ರಂದು ಹೊಸರಿತ್ತಿಯಲ್ಲಿ ಗಾಂಧಿ ಗ್ರಾಮೀಣ ಗುರುಕುಲದ ಭೂಮಿಪೂಜಾ ಸಮಾರಂಭವು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಎಸ್. ನಿಜಲಿಂಗಪ್ಪನವರಿಂದ ನೆರವೇರಿತು. ಮುಖ್ಯಮಂತ್ರಿ ವೀರೇಂದ್ರ ಪಾಟೀಲ, ಶಿಕ್ಷಣ ಸಚಿವ ಕೆ. ವಿ. ಶಂಕರೇಗೌಡ ಹಾಗೂ ಎಸ್. ಆರ್. ಕಂಠಿ ಅವರು ಮುಖ್ಯ ಅತಿಥಿಗಳಾಗಿದ್ದರು.

ಗುದ್ಲೆಪ್ಪನವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಹಾಗೂ ವರ್ಧಾ ಪದ್ಧತಿಯ ಶಿಕ್ಷಣ ತಜ್ಞ ಎಂ. ಜಿ. ಹಂದ್ರಾಳ ಅವರ ನೆರವಿನಿಂದ ಗಾಂಧಿ ತತ್ವ ಪ್ರಣೀತ ಗ್ರಾಮೀಣ ಗುರುಕುಲದ ವಿಶೇಷ ಯೋಜನೆ ರೂಪಿಸಿ ಸರಕಾರಕ್ಕೆ ಕಳಿಸಿದರು.

೧೯೭೧ ರಲ್ಲಿ ಕರ್ನಾಟಕದಲ್ಲಿ ರಾಷ್ಟ್ರಪತಿ ಆಡಳಿತವಿತ್ತು. ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಗುದ್ಲೆಪ್ಪನವರು ಏಪ್ರಿಲ ೬ ರಂದು ವೆಲ್ಲೂರ ಆಸ್ಪತ್ರೆಯಿಂದ ರಾಜ್ಯಪಾಲರಾಗಿದ್ದ ಧರ್ಮವೀರ ಅವರಿಗೆ ಪತ್ರವೊಂದನ್ನು ಬರೆದು ಗಾಂಧಿ ಗ್ರಾಮೀಣ ಗುರುಕುಲದ ಕನಸು ತಮ್ಮ ಕೊನೆಯ ಆಸೆಯಾಗಿದ್ದು ಅದನ್ನು ಪೂರೈಸಲು ಸಹಕರಿಸಿರಿ



ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲದ ಮುಂದೆ ಇರುವ
ಗುದ್ಲೆಪ್ಪನವರ ಸಮಾಧಿಯ ಮೇಲೆ ಪ್ರತಿಷ್ಠಾಪಿಸಿದ ಅವರು ಕಂಚಿನ ಮೂರ್ತಿ.



ಹಾವೇರಿಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದ ಮುಂದೆ ಸ್ಥಾಪಿಸಿದ
ಅವರ ಕಂಚಿನ ಪುತ್ಥಳಿ.

ಎಂದಿದ್ದರು. ರಾಜ್ಯಪಾಲರು ಆ ಪತ್ರದ ಮೇಲೆ ' ಈ ಆಸೆಯನ್ನು ಈಡೇರಿಸಲಾಗುವದು ' ಎಂದು ಟಿಪ್ಪಣಿ ಹಾಕಿದ್ದರು. ಇದರ ಆಧಾರದ ಮೇಲೆ ಮುಂದೆ ಬಂದ ಮುಖ್ಯಮಂತ್ರಿ ಡಿ. ದೇವರಾಜ ಅರಸ ಅವರು ಹೊಸರಿತ್ತಿಯಲ್ಲಿ ಕೆಲಸ ನಡೆದದ್ದನ್ನು ಪ್ರತ್ಯಕ್ಷ ಕಂಡು ಕಟ್ಟಡ ನಿರ್ಮಾಣಕ್ಕಾಗಿ ನಾಲ್ಕು ಲಕ್ಷ ರೂಪಾಯಿಗಳನ್ನು ಎರಡು ಕಂತುಗಳಲ್ಲಿ ಮಂಜೂರು ಮಾಡಿದರು.

ಗುರುಕುಲದ ಕನಸು ಗುದ್ಲೆಪ್ಪನವರ ನಿಧನಾನಂತರ ನನಸಾಯಿತು. ಹೊಸರಿತ್ತಿ ಊರ ಹೊರ ವಲಯದ ೩೨ ಎಕರೆ ವಿಸ್ತಾರವಾದ ಭೂಮಿಯಲ್ಲಿ ನಿರ್ಮಾಣಗೊಂಡ ' ಗಾಂಧಿ ಗ್ರಾಮೀಣ ಗುರುಕುಲ ' ವನ್ನು ೧೯೮೪ ರ ಅಕ್ಟೋಬರ ೨ ಗಾಂಧಿ ಜಯಂತಿಯಂದು ಹಣಕಾಸು ಸಚಿವ ಎಸ್. ಆರ್. ಬೊಮ್ಮಾಯಿ ಉದ್ಘಾಟಿಸಿದರು. ಡಾ. ಚಿತ್ತರಂಜನ ಕಲಕೋಟಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಎಸ್. ಜಿ. ದೇಸಾಯಿ ಮುಖ್ಯ ಅತಿಥಿಗಳಾಗಿದ್ದರು.

ಗುದ್ಲೆಪ್ಪನವರು ಯೋಜಿಸಿದ ಸಾಮಾನ್ಯ ಶಿಕ್ಷಣದ ಜೊತೆಗೆ ಸ್ವಾವಲಂಬಿ ಶಿಕ್ಷಣದ ವಿವಿಧ ವಿಭಾಗಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ, ನೂಲು, ನೇಯ್ಗೆ, ಹೈನುಗಾರಿಕೆ ಮುಂತಾದವುಗಳಲ್ಲಿ ತರಬೇತಿ ಕೊಡಲಾಗುತ್ತಿದೆ. ೫ ರಿಂದ ೧೦ ನೇ ವರ್ಗದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಶುಲ್ಕವನ್ನು ಆಕರಿಸದೆ ಉಚಿತ ವಸತಿ, ಊಟ, ಉಪಹಾರ, ಬಟ್ಟೆ, ಪಠ್ಯಪುಸ್ತಕ ಒದಗಿಸಿ ರಾಜ್ಯದಲ್ಲಿಯೇ ವೈಶಿಷ್ಟ್ಯಪೂರ್ಣ ಗುರುಕುಲವಾಗಿ ಸುವಿಖ್ಯಾತವಾಗಿದೆ.

ಗುದ್ಲೆಪ್ಪನವರ ಜೇಷ್ಠ ಪುತ್ರ ಡಾ. ದೀನಬಂಧು ಹಳ್ಳಿಕೇರಿ ಅವರು " ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಸ್ಮಾರಕ ಪ್ರತಿಷ್ಠಾನ " ಸ್ಥಾಪಿಸಿ ಅದರ ಪ್ರಧಾನ ಧರ್ಮದರ್ಶಿಗಳಾಗಿ ಗುರುಕುಲಕ್ಕೆ ನವಚೈತನ್ಯ ತುಂಬಿದ್ದಾರೆ. ಗುರುಕುಲದ ಮುಖ್ಯಾಧ್ಯಾಪಕ ಗೋಪಣ್ಣ ಕುಲಕರ್ಣಿ, ಡಾ. ಚಿತ್ತರಂಜನ ಕಲಕೋಟಿ, ವೀರಣ್ಣ ಚಿಕ್ಕಿ, ಬಿ. ಜಿ. ಗೌರಿಮನಿ, ಆರ್. ಬಿ. ಮಾಮಲೇದೇಸಾಯಿ ಮುಂತಾದವರು ಗುರುಕುಲದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ.

ಹಿಂದಿ ಪ್ರಚಾರ :

ರಾಷ್ಟ್ರೀಯವಾದಿಗಳಾದ ಗುದ್ಲೆಪ್ಪನವರಿಗೆ ಹಿಂದಿ ಭಾಷೆಯ ಬಗ್ಗೆ ಉತ್ಕಟ ಅಭಿಮಾನವಿತ್ತು. ಕಾರಣ ಅದು ರಾಷ್ಟ್ರಭಾಷೆ. ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಗಳಲ್ಲಿ ಹಿಂದಿ ಪ್ರಚಾರವೂ ಒಂದಾಗಿತ್ತು. ಗಾಂಧಿ ನಿಷ್ಠ ಅನುಯಾಯಿಯಾಗಿದ್ದ ಗುದ್ಲೆಪ್ಪನವರು ಹೊಸರಿತ್ತಿಯಲ್ಲಿ ಸ್ಥಾಪಿಸಿದ್ದ ' ಗಾಂಧಿ ಆಶ್ರಮ ' ದಲ್ಲಿ ಆಶ್ರಮವಾಸಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಹಿಂದಿ ಕಲಿಸಲು ಶಿಕ್ಷಕರನ್ನು ನೇಮಿಸಿದ್ದರು.

ಗುದ್ಲೆಪ್ಪನವರು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದೊಂದಿಗೆ ಮೊದಲಿನಿಂದಲೂ ನಿಕಟ ಸಂಪರ್ಕವಿರಿಸಿಕೊಂಡಿದ್ದರು. ೧೯೬೪ ಎಪ್ರಿಲ ೩೦ ಹಾಗೂ ಮೇ ೧ ರಂದು ಎರಡು ದಿನಗಳ ವರೆಗೆ ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭಾದ ರಜತ ಮಹೋತ್ಸವ ಸಮಾರಂಭ ಜರುಗಿತು. ಇದರಂಗವಾಗಿ ಅಷ್ಟಮ ಅಖಿಲ ಕರ್ನಾಟಕ ಹಿಂದಿ ಪ್ರಚಾರ ಸಮ್ಮೇಳನ, ಅಖಿಲ ಭಾರತ ರಾಷ್ಟ್ರಭಾಷಾ ಸಮ್ಮೇಳನ, ಅಖಿಲ ಭಾರತೀಯ ದೇವನಾಗರಿ

ಪ್ರಚಾರ ಸಮ್ಮೇಳನ ಹಾಗೂ ಪ್ರಥಮ ಅಖಿಲ ಕರ್ನಾಟಕ ಹಿಂದಿ ಕವಿ ಸಮ್ಮೇಳನಗಳು ಜರುಗಿದವು. ಸಮಾರಂಭದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಗುದ್ಲೆಪ್ಪನವರು ಈ ಎಲ್ಲ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಸಂಘಟಿಸಿ ಯಶಸ್ವಿಗೊಳಿಸಿದರು.

೧೯೬೭ ರಲ್ಲಿ ಗುದ್ಲೆಪ್ಪನವರು ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾದ ಕರ್ನಾಟಕ ಪ್ರಾಂತೀಯ ಅಧ್ಯಕ್ಷರಾಗಿ ಕಾರ್ಯ ಮಾಡಿದರು. ಅವರ ಅಧಿಕಾರಾವಧಿಯಲ್ಲಿ ಹುಬ್ಬಳ್ಳಿ, ಧಾರವಾಡ ಹಾಗೂ ಬೆಂಗಳೂರುಗಳಲ್ಲಿ ಹಿಂದಿ ಮಾಧ್ಯಮ ಪ್ರೌಢ ಶಾಲೆಗಳು ಆರಂಭವಾದವು. 'ಭಾವ ಸಂಗಮ' ಎಂಬ ಮಾಲಿಕೆಯಲ್ಲಿ ಕನ್ನಡದಿಂದ ಹಿಂದಿಗೆ, ಹಿಂದಿಯಿಂದ ಕನ್ನಡಕ್ಕೆ ಪುಸ್ತಕಗಳನ್ನು ಅನುವಾದಿಸಿ ಪ್ರಕಟಿಸಲಾಯಿತು. ಹಿಂದಿ ಪ್ರಚಾರ ಸಭಾದ ಭವ್ಯವಾದ ಕಟ್ಟಡಗಳು ನಿರ್ಮಾಣಗೊಂಡವು.

ಇಂದು ಈ ಸಂಸ್ಥೆಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳು, ಹೋಮಿಯೋಪಥಿ ಕಾಲೇಜು ಮತ್ತು ಅದರಂಗವಾಗಿ ಅನೇಕ ಶಿಕ್ಷಣ ಸಂಸ್ಥೆಗಳು ರಾಜ್ಯದಲ್ಲಿವೆ. ಇಂದು ಆ ಸಂಸ್ಥೆಯು ಹೆಮ್ಮರವಾಗಿ ಬೆಳೆದಿದೆ.

೩. ಸಾಂಸ್ಕೃತಿಕ ಸೇವೆ

ಜನರಲ್ಲಿ ಉದಾತ್ತ ವಿಚಾರಗಳು ಮೂಡಿ ಉತ್ತಮ ಸಂಸ್ಕೃತಿ ನಿರ್ಮಾಣವಾಗಬೇಕು. ನಾಡಿನ ಸಾಂಸ್ಕೃತಿಕ ಹಿರಿಮೆ ಗರಿಮೆಗಳ ಅರಿವು ಅವರಿಗಾಗಬೇಕು. ಅದರಿಂದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಿಳಿದು ಜನರು ಒಳ್ಳೆಯ ನಾಗರಿಕರಾಗಬೇಕೆಂಬ ಹಿರಿಯಾಸೆ ಗುದ್ಲೆಪ್ಪನವರದಾಗಿತ್ತು. ಈ ನಿಟ್ಟಿನಲ್ಲಿ ಅವರು ಶಕ್ತಿಮೀರಿ ಪ್ರಯತ್ನಿಸಿದರು.

ಗುದ್ಲೆಪ್ಪನವರು ಲಂಡನ್ನಿನ ಏಶಿಯನ್ ಮ್ಯೂಜಿಕ್ ಸರ್ಕಲ್‌ನ ಉಪಾಧ್ಯಕ್ಷರಾಗಿ, ಹುಬ್ಬಳ್ಳಿಯ ಕನ್ನಡ ಸಂಘದ ಆಜೀವ ಸದಸ್ಯರಾಗಿ ಹಾಗೂ ಇನ್ನೂ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಗಣನೀಯ ಸಾಧನೆ ಮಾಡಿದ್ದಾರೆ.

ಪತ್ರಿಕಾ ರಂಗ :

ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಪಾತ್ರ ಅತ್ಯಂತ ಮಹತ್ವದ್ದು. ಅವು ಜನರ ಮತ್ತು ಸರಕಾರದ ಮಧ್ಯದ ಸುವರ್ಣ ಸೇತುವೆಯಾಗಿ ಸಮಾಜದ ಸರ್ವಾಂಗೀಣ ಪ್ರಗತಿಯನ್ನು ಪ್ರತಿಬಿಂಬಿಸುವ ದರ್ಪಣವಾಗಿ ಹಾಗೂ ಜನತೆಯ ಸಾಮಾನ್ಯ ಜ್ಞಾನ ವಿಕಾಸದ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತವೆ.

ಗುದ್ಲೆಪ್ಪನವರು ಸ್ನೇಹಿತರೊಂದಿಗೆ ಸಭೆ ಸೇರಿ ವಿಚಾರ ವಿನಿಮಯ ಮಾಡಿ ಸ್ವತಂತ್ರ, ನಿಷ್ಪಕ್ಷಪಾತ ಹಾಗೂ ಜಾತ್ಯತೀತ ನಿಲುವುಗಳನ್ನು ಹೊಂದಿದ ಸುಂದರವಾದ ಒಂದು ದಿನಪತ್ರಿಕೆಯನ್ನು ಪ್ರಾರಂಭಿಸಲು ೧೯೪೭ ಜನೆವರಿಯಲ್ಲಿ ನಿರ್ಧರಿಸಿದರು. ಸಭೆಯಲ್ಲಿ ಎಂ. ಪಿ. ಪಾಟೀಲ, ಅಣ್ಣಾಸಾಹೇಬ ಲಠ್ಠೆ, ಕೆ. ಎಸ್. ಪಾಟೀಲ, ಅಂದಾನಪ್ಪ ದೊಡ್ಡಮೇಟಿ,

ಸರದಾರ ವೀರನಗೌಡ ಪಾಟೀಲ ಹಾಗೂ ತಿ. ರು. ನೆಸ್ವಿ ಉಪಸ್ಥಿತರಿದ್ದರು. ಪತ್ರಿಕೆಗೆ ' ನವಯುಗ ' ಎಂಬ ಔಚಿತ್ಯಪೂರ್ಣ ಹೆಸರನ್ನಿಡಲಾಯಿತು.


ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ದಿನವೇ ೧೯೪೭ ರ ಅಗಸ್ಟ ೧೫ ರಂದು ' ನವಯುಗ ' ಪತ್ರಿಕೆಯ ಪ್ರಥಮ ಸಂಚಿಕೆ ಪ್ರಕಟವಾಯಿತು. ತಿ. ರು. ನೆಸ್ವಿ. ತಿ. ಸಿದ್ದಪ್ಪ. ಜಿ. ಆರ್. ಪಾಂಡೇಶ್ವರ. ಮಳಿಯೆ ಗೋವರ್ಧನರಾವ್. ಪಾಟೀಲ ಪುಟ್ಟಪ್ಪ ಅವರು ಸಂಪಾದಕ ಮಂಡಳಿಯ ಪ್ರಮುಖರಾಗಿ ಸೇವೆ ಸಲ್ಲಿಸಿದರು. ಹುಚ್ಚೇಶ್ವರ ಮೇದಿ. ಪ. ಲೋ. ಬಂಕಾಪೂರ. ಆರ್. ಎಸ್. ಚಕ್ರವರ್ತಿ. ಪಿ. ಆರ್. ಕಂಠಿ. ವಿರೂಪಾಕ್ಷಪ್ಪ ಹಳ್ಳಿಕೇರಿ ಅವರು ಉಪಸಂಪಾದಕರಾಗಿದ್ದರು.

' ನವಯುಗ ' ವು ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡಿತು. ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸದಸ್ಯ ಶಂಕರರಾವ್‌ದೇವ್ ಅವರು ' ದಕ್ಷಿಣ ಸಂಸ್ಥಾನಗಳ ಒಕ್ಕೂಟ ' ರಚನೆಗಾಗಿ ಪ್ರಯತ್ನಿಸಿದಾಗ ' ನವಯುಗ 'ವು ಅದನ್ನು ಖಂಡಿಸಿ ಲೇಖನಗಳನ್ನು ಪ್ರಕಟಿಸಿತು. ಹೈದರಾಬಾದ ವಿಮೋಚನಾ ಹೋರಾಟದ ಕಾಲದಲ್ಲಿ ಕಾಸೀಂ ರಜ್ವಿ ನೇತೃತ್ವದ ರಜಾಕಾರರ ಹಾವಳಿಯನ್ನು ಬಗ್ಗುಬಡಿಯಲು ಜನತೆಗೆ ಪ್ರೇರಣೆ ನೀಡಿತು. ಜಮಖಂಡಿ ಸಂಸ್ಥಾನದ ' ಪ್ರಜಾಪರಿಷತ್ ' ಪರವಾಗಿ ಹೋರಾಟ ನಡೆಸಿತು. ಮೈಸೂರು ಸಂಸ್ಥಾನದ ಪ್ರಜೆಗಳು ' ಜವಾಬ್ದಾರಿ ಸರಕಾರದ ರಚನೆ ' ಗಾಗಿ ನಡೆಸಿದ ಆಂದೋಲನವನ್ನು ಪ್ರೋತ್ಸಾಹಿಸಿತು. ಬಳ್ಳಾರಿಯು ಕರ್ನಾಟಕಕ್ಕೆ ಸೇರಬೇಕೆಂದು ಕನ್ನಡಿಗರು ಮಾಡಿದ ಹೋರಾಟವನ್ನು ಬೆಂಬಲಿಸಿತು.

ಗುದ್ಲೆಪ್ಪನವರು ಹುಬ್ಬಳ್ಳಿ ವಾಸ್ತವ್ಯದಲ್ಲಿದ್ದಾಗ ' ನವಯುಗ ' ದಿನಪತ್ರಿಕೆ ಕಾರ್ಯಾಲಯಕ್ಕೆ ನಿಯಮಿತವಾಗಿ ಬಂದು ಮೇಲ್ವಿಚಾರಣೆಯನ್ನು ಮಾಡುತ್ತಿದ್ದರು. ಟೆಲಿಪ್ರಿಂಟರ್‌ನಲ್ಲಿ ಬರುತ್ತಿದ್ದ ಇಂಗ್ಲೀಷ ಸುದ್ದಿಗಳನ್ನು ಆಗಾಗ್ಗೆ ಕನ್ನಡಕ್ಕೆ ಅನುವಾದಿಸುತ್ತಿದ್ದರು. ಅನೇಕ ಸಾರಿ ರಾತ್ರಿ ಬಹಳ ಹೊತ್ತಿನವರೆಗೂ ಪತ್ರಿಕೆಯ ಮುದ್ರಣದ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುತ್ತಿದ್ದರು. ತಮ್ಮ ಪ್ರವಾಸದಲ್ಲಿದ್ದಾಗ ಕಾರ್ಯಕ್ರಮಗಳ ವರದಿಗಳನ್ನು ತಾವೇ ಸ್ವತಃ ಬರೆದು ಕೊಡುತ್ತಿದ್ದರು. ಅಲ್ಲದೆ ಅನೇಕ ಲೇಖನಗಳನ್ನು ಬರೆದು ' ನವಯುಗ ' ದಲ್ಲಿ ಪ್ರಕಟಿಸಿದರು. ಮುಖ್ಯವಾಗಿ ಗಾಂಧೀಜಿಯವರು ನಿಧನರಾದಾಗ ೧೯೪೮ ರ ಫೆಬ್ರುವರಿ ೧೨ ರಂದು ' ಜಗದ್ವಂದ್ಯ ಬಾಪೂಜಿ ' ಎಂಬ ಲೇಖನ ಬರೆದರು. ತಾವು ೧೯೫೪ ರಲ್ಲಿ ಕೈಕೊಂಡ ಚೀನಾ ಪ್ರವಾಸದ ಅನುಭವವನ್ನು ಲೇಖನಗಳ ರೂಪದಲ್ಲಿ ಬರೆದರು.

' ನವಯುಗ ' ದ ಅಭಿವೃದ್ಧಿಗಾಗಿ ಗುದ್ಲೆಪ್ಪನವರು ಅನೇಕ ಕಡೆಗಳಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ನೆರವಾಗುತ್ತಿದ್ದರು. ಮುಂದೆ ೧೯೫೮ ರಲ್ಲಿ ಕಾರಣಾಂತರಗಳಿಂದ ಪತ್ರಿಕೆಯ ಪ್ರಕಟನೆಯು ನಿಂತಿತು.

ಗುದ್ಲೆಪ್ಪನವರು ತಾವು ಸ್ಥಾಪಿಸಿದ ' ನವಯುಗ ' ದಿನಪತ್ರಿಕೆಯು ನಿಂತು ಹೋದ ಬಳಿಕ ಅವರಲ್ಲಿಯ ಪತ್ರಿಕೋದ್ಯಮ ಪ್ರವೃತ್ತಿಯು ಸುಪ್ತವಾಗಿಯೇ ಇತ್ತು. ಅದು ಮತ್ತೆ ೧೯೬೭ ರಲ್ಲಿ ವ್ಯಕ್ತವಾಯಿತು. ಆಗ



Regd. No. 5121

ಕೊನೆಯ ಪತ್ರಿಕೆ

ನವಯುಗ

NAVAYUGA KANNADA DAILY HUBLI.

ಸಂಪಾದಕರು:—ತಿ. ರಾ. ಶೆಟ್ಟಿ ಎಂ. ಎಲ್. ಎ.

ಫೋನ ನಂ, ೫೪ | ತಾರಿನ ವಿಳಾಸ: "ಯುಗ"

ಸಂಪುಟ ೨] ಹುಬ್ಬಳ್ಳಿ | ಶನಿವಾರ | ತಾ| ೧೨—೨—೪೯ 12-2-49 | ಬೆಲೆ ೧ ಆಣೆ | [ಸಂಚಿಕೆ [illegible]

ಕೂಲಿಕಾರರಿಗೆ ಒಡೆಯರು ಪ್ರಾವ್ಹಿಡೆಂಟ ಫಂಡಿನ ವ್ಯವಸ್ಥೆ ಮಾಡಬೇಕು

ಪ್ರಿವ್ಹಿ ಕೌನ್ಸಿಲ್ಲಿನ ಅಧಿಕಾರವನ್ನು ಫೆಡರಲ್ಲ ಕೋರ್ಟಿಗೆ ಕೊಡಬೇಕು

ಅಂತರ್ಜಾತೀಯ ವಿವಾಹಗಳಿಗೆ ಸರಕಾರದ ಮನ್ನಣೆ ಅವಶ್ಯ

ಭಾರತ ಪಾರ್ಲಿಮೆಂಟಿನ ಈ ದಿನದ ಕಾರ್ಯಕಲಾಪ

ಹೊಸದಿಲ್ಲಿ ೧೧.... ಈ ದಿನ ಭಾರತ ಪಾರ್ಲಿಮೆಂಟು ಐದೇ ನಿಮಿಷಗಳಲ್ಲಿ ಶ್ರೀ ಆರ್. ಕೆ. ಸಿಧ್ವಾನ ಮಂಡಿಸಿದ ಒಂದು ಗೊತ್ತುವಳಿಯನ್ನು ಸ್ವೀಕರಿಸಿದ್ದು ಅದರ ಇತಿಹಾಸದಲ್ಲಿಯೇ ಪ್ರಥಮ ಉದಾಹರಣೆಯಾಗಿದೆ. ಗಂಡನು ಎರಡನೆ ಲಗ್ನವನ್ನು ಗೊತ್ತುಮಾಡಿಕೊಂಡಿದ್ದರೆ ಅಥವಾ ಉಪಪತ್ನಿಯುಳ್ಳವನಾಗಿದ್ದರೆ ಹೆಂಡತಿಯು ಅವನಿಂದ ಬೇರೆಯಾಗಿದ್ದು ಜೀವನಾಂಶವನ್ನು ಕೇಳಬಹುದಾಗಿದೆಂಬುದಾಗಿ ಇಂಡಿಯನ್ ಪೆನಲ್ ಕೋಡಿನಲ್ಲಿ ತಿದ್ದುಪಡೆಯನ್ನು ಮಂಡಿಸಿದ್ದರು.

ಕೆಲವು ವರ್ಗದ ಕೂಲಿಕಾರರಿಗೆ ಒಡೆಯರು ಪ್ರಾವ್ಹಿಡೆಂಟ ಫಂಡ [ಸಹಾಯಧನ]ವನ್ನು ಏರ್ಪಡಿಸಬೇಕೆಂಬ ಹಾಗೂ ಒತ್ತಾಯದಿಂದ ಕೆಲಸಕ್ಕೆಗೆಡು [illegible] ... [illegible]

ಭಾರತದಿಂದ ಫೋಟೋ-ಟೆಲಿಗ್ರಾಮ

ಮುಂಬಯಿ ೧೧.... ನ್ಯೂಯಾರ್ಕ [illegible] ಗ್ರೇಟಬ್ರಿಟನ್ ಆಸ್ಟ್ರೇಲಿಯಾ, ಇಜಿಪ್ತ, ಫ್ರಾನ್ಸ್ ಮತ್ತು ಆಫ್ರಿಕೆಗಳಿಗೆ ಭಾರತದಿಂದ ಫೋಟೋ-ಟೆಲಿಗ್ರಾಮುಗಳನ್ನು ಸ್ವೀಕರಿಸಲಾಗುವದೆಂದು ಭಾರತದ [illegible] ಪ್ರಕಟನೆ ಹೊರಟಿದೆ.

ದರಗಳು ಫೋಟೊ-ಟೆಲಿಗ್ರಾಮುಗಳ [illegible] ಬೇರೆ ಬೇರೆಯಾಗಿದೆ.

ಅ. ಪ್ರೆ.

ನವಯುಗ ಪತ್ರಿಕೆ

ಬೆಂಗಳೂರಿನಲ್ಲಿ ' ಮಹಾತ್ಮಾ ಗಾಂಧಿ ಸ್ಮಾರಕ ಸಹಕಾರಿ ವೃತ್ತ ಪತ್ರಿಕಾ ಸಂಘ ' ಸ್ಥಾಪಿಸಿ ತನ್ಮೂಲಕ ' ಜನಮತ ' ವಾರಪತ್ರಿಕೆಯನ್ನು ಪ್ರಾರಂಭಿಸಿ ಅದರ ವ್ಯವಸ್ಥಾಪಕ ಸಂಪಾದಕರಾಗಿ ಕಾರ್ಯ ಮಾಡಿದರು. ಎಸ್. ಎಂ. ಸಾಗರ, ತಿ. ಸಿದ್ದಪ್ಪ ಮತ್ತಿತರರು ಈ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಸೇವೆ ಸಲ್ಲಿಸಿದರು.

೧೯೭೧ ರಲ್ಲಿ ಗುದ್ಲೆಪ್ಪನವರು ನಿಧನರಾಗುವವರೆಗೂ ' ಜನಮತ ' ವಾರಪತ್ರಿಕೆಯು ಯಶಸ್ವಿಯಾಗಿ ನಡೆದು ಮುಂದೆ ಅದರ ಪ್ರಕಟಣೆ ನಿಂತಿತು.

ವಿದೇಶ ಪ್ರವಾಸ :

ಗುದ್ಲೆಪ್ಪನವರು ಮುಂಬಯಿ ವಿಧಾನ ಸಭೆಯ ಸದಸ್ಯರಾಗಿದ್ದಾಗ ೧೯೫೪ ರ ಸಪ್ಟೆಂಬರ ತಿಂಗಳಿನಲ್ಲಿ ಭಾರತೀಯ ನಿಯೋಗದ ಸದಸ್ಯರಾಗಿ " ಹಿಂದೀ ಚೀನೀ ಭಾಈ ಭಾಈ " ಯೋಜನೆಯ ಅಂಗವಾಗಿ ಚೀನಾ ದೇಶಕ್ಕೆ ಹೋಗಿದ್ದರು. ಅರವತ್ತು ದಿನಗಳ ತಮ್ಮ ಪ್ರವಾಸದ ಅವಧಿಯಲ್ಲಿ ಚೀನದ ಔದ್ಯಮೀಕರಣ, ಕೃಷಿ ಪ್ರಗತಿ ಹಾಗೂ ಜನಜೀವನವನ್ನು ಅಧ್ಯಯನ ಮಾಡಿದರು. ಅಲ್ಲಿಯ ತಮ್ಮ ಅನುಭವಗಳನ್ನು ಲೇಖನ ರೂಪದಲ್ಲಿ ಬರೆದು ತಮ್ಮದೇ ಆದ ' ನವಯುಗ ' ದಿನಪತ್ರಿಕೆಯಲ್ಲಿ ಪ್ರಕಟಿಸಿದರು.

೧೯೬೦ ರ ಎಪ್ರಿಲ ತಿಂಗಳಿನಲ್ಲಿ ಭಾರತೀಯ ಸಂಸದೀಯ ನಿಯೋಗದ ಸದಸ್ಯರಾಗಿ ಪಶ್ಚಿಮ ಜರ್ಮನಿ, ಇಂಗ್ಲಂಡ, ಫ್ರಾನ್ಸ್ ಮತ್ತು ಈಜಿಪ್ತ ದೇಶಗಳಿಗೆ ಸಂದರ್ಶನವಿತ್ತರು. ಸಾಹಿತ್ಯ ಪ್ರಿಯರಾದ ಅವರು ಮಹಾಕವಿ ಶೆಕ್ಸ್‌ಪೀಯರನ ಜನ್ಮಸ್ಥಳ ಇಂಗ್ಲಂಡಿನ ಸ್ಟ್ರಾಟಫೋರ್ಡ್ ನೋಡಲು ಮರೆಯಲಿಲ್ಲ. ನಿಯೋಗದಲ್ಲಿ ಎಸ್. ಆರ್. ಕಂಠಿ, ಜೆ. ಇಮಾಮ, ರಾಜಾರಾಮ ದುಬೆ ಮುಂತಾದವರು ಇದ್ದರು.

ಕನಕದಾಸ ಚತುಶ್ಶತಮಾನೋತ್ಸವ :

ಕನ್ನಡ ನಾಡಿನ ದಾಸವರೇಣ್ಯರಲ್ಲಿ ಒಬ್ಬರಾದ ಕನಕದಾಸರ ಜೀವನ ಮತ್ತು ಸಾಹಿತ್ಯದ ಕುರಿತು ಜನರಿಗೆ ವಿಶೇಷ ಪರಿಚಯವಾಗಬೇಕೆಂಬ ಸದುದ್ದೇಶದಿಂದ ಕನಕದಾಸರ ಆರಾಧ್ಯ ದೈವ ಆದಿಕೇಶವನ ಪವಿತ್ರ ಕ್ಷೇತ್ರ ಕಾಗಿನೆಲೆಯಲ್ಲಿ ಕನಕದಾಸರ ಚತುಶ್ಶತಮಾನೋತ್ಸವವನ್ನು ೧೯೬೫ ರಲ್ಲಿ ಗುದ್ಲೆಪ್ಪನವರು ಸಂಘಟಿಸಿದರು.

ಗುದ್ಲೆಪ್ಪನವರು ಸ್ವಾಗತಾಧ್ಯಕ್ಷರಾಗಿ. ಪತ್ರಕರ್ತ ಹುಚ್ಚೇಶ್ವರ ಮೇದಿ ಕಾರ್ಯದರ್ಶಿಗಳಾಗಿ ಸ್ಥಳೀಯರ ಸಹಕಾರದಿಂದ ಈ ಉತ್ಸವವನ್ನು ಕಾಗಿನೆಲೆ ಮತ್ತು ಬಾಡ ಗ್ರಾಮಗಳಲ್ಲಿ ಅದ್ದೂರಿಯಿಂದ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಕಾಗಿನೆಲೆಯ ಆದಿಕೇಶವ ದೇವಾಲಯದ ಜೀರ್ಣೋದ್ಧಾರ ಹಾಗೂ ಹಾವೇರಿಯಿಂದ ಕಾಗಿನೆಲೆ ವರೆಗಿನ ೧೫ ಕಿ. ಮೀ. ರಸ್ತೆಯ ಡಾಂಬರೀಕರಣವನ್ನು ಮಾಡಿಸಿದರು. ಸಾರ್ವಜನಿಕರ ತಿಳಿವಳಿಕೆಗಾಗಿ ಒಂದು ಕೈಪಿಡಿಯನ್ನೂ ಪ್ರಕಟಿಸಿದರು.



ಗುದ್ಲೆಪ್ಪನವರು ಮತ್ತು ಹಿಂದೀ ಚೀನಿ ಭಾಈ ಭಾಈ ನಿಯೋಗದ ಸದಸ್ಯರು. ಚೀನಾದ ಶಾಂಘಾಯಿನಲ್ಲಿ. ೧೯೫೪



ಭಾರತೀಯ ಸಂಸದೀಯ ನಿಯೋಗದ ಸದಸ್ಯರಾದ ಗುದ್ಲೆಪ್ಪನವರು ಮಹಾಕವಿ ಶೇಕ್ಸ್‌ಪಿಯರನ ಜನ್ಮಸ್ಥಳ
ಇಂಗ್ಲಂಡಿನ ಸ್ಟ್ರಾಟ್‌ಫೋರ್ಡ್‌ನ ಮನೆಯ ಮುಂದೆ ನಿಂತಿರುವುದು.
ಎಸ್. ಆರ್. ಕಂಠಿ. ಜೆ. ಇಮಾಮ. ಆರ್. ಜಿ. ದುಬೆ ಅವರೊಂದಿಗೆ ಇದ್ದಾರೆ. ೧೯೬೦



ಕಾಗಿನೆಲೆಯಲ್ಲಿ ಜರುಗಿದ ಕನಕದಾಸ ಚತುಶ್ಶತಮಾನೋತ್ಸವದಲ್ಲಿ ಹುಮಾಯೂನ ಕಬೀರ ಅವರೊಂದಿಗೆ ಗುದ್ಲೆಪ್ಪನವರು ಹಾಗೂ ಡಾ. ದ. ರಾ. ಬೇಂದ್ರೆ. ೧೯೬೫



ಉಪರಾಷ್ಟ್ರಪತಿ ವಿ. ವಿ. ಗಿರಿ ಅವರೊಂದಿಗೆ ಗುದ್ಲೆಪ್ಪನವರು. ೫-೯-೧೯೬೭

ಈ ವಿಜೃಂಭಣೆಯ ಸಮಾರಂಭಕ್ಕೆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಬಿ. ಡಿ. ಜತ್ತಿ, ಕೇಂದ್ರ ಶಿಕ್ಷಣ ಸಚಿವ ಹುಮಾಯೂನ ಕಬೀರ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ. ಸಿ. ಪಾವಟೆ, ವರಕವಿ ದ. ರಾ. ಬೇಂದ್ರೆ, ಲಂಡನ್ನಿನ ಏಶಿಯನ್ ಮ್ಯೂಜಿಕ್ ಸರ್ಕಲ್ ಅಧ್ಯಕ್ಷ ಅಯ್ಯನದೇವ ಅಂಗಡಿ, ಕಲಾವಿದೆ ಸೋನಾಲ್ ಪಕ್ವಾಸಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಕೆ. ಎಸ್. ಧರಣೇಂದ್ರಯ್ಯ, ಲಿಂಗರಾಜ ಮುದ್ದಣ್ಣವರ, ಖಿಲಂದರ ದಾಸನಕೊಪ್ಪ ಮುಂತಾದ ಗಣ್ಯರು ಪಾಲ್ಗೊಂಡಿದ್ದರು. ಸಿದ್ಧಗಂಗಾಮಠದ ಶ್ರೀ ಶಿವಕುಮಾರಸ್ವಾಮಿಗಳು ಹಾಗೂ ಧಾರವಾಡ ಮುರುಘಾಮಠದ ಶ್ರೀ ಮಹಾಂತಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು.

ಈ ಸಮಾರಂಭದಿಂದ ಕನಕದಾಸರ ಬಗ್ಗೆ ಹಾಗೂ ಕಾಗಿನೆಲೆ ಕ್ಷೇತ್ರದ ಬಗ್ಗೆ ಜನಸಾಮಾನ್ಯರಿಗೆ ಹೆಚ್ಚು ಪರಿಚಯವಾಗುವಂತಾಯಿತು. ಇದು ಗುದ್ಲೆಪ್ಪನವರ ಸಮರ್ಥ ಸಂಘಟನೆ ಹಾಗೂ ಸಾಹಿತ್ಯಾಭಿಮಾನದ ಪ್ರತೀಕವಾಗಿದೆ.

ಷಷ್ಟ್ಯಬ್ದಿ ಸಮಾರಂಭ :

ರಾಷ್ಟ್ರಕ್ಕಾಗಿ, ನಾಡು ನುಡಿಯ ಏಳಿಗೆಗಾಗಿ ದಣಿವರಿಯದೆ ಅವಿರತವಾಗಿ ಗುದ್ಲೆಪ್ಪನವರಿಗೆ ೧೯೬೬ ಜೂನ್ ೬ ರಂದು ಅರವತ್ತು ವರ್ಷಗಳು ತುಂಬಿದವು. ಆಗ ಅವರ ಅನುಯಾಯಿಗಳು ಹಾಗೂ ಅಭಿಮಾನಿಗಳು ಶಿಕ್ಷಣ ಸಚಿವ ಎಸ್. ಆರ್. ಕಂಠಿ ಅವರ ಅಧ್ಯಕ್ಷತೆಯಲ್ಲಿ ಷಷ್ಟ್ಯಬ್ದಿ ಸಮಾರಂಭ ಸಮಿತಿ ರಚಿಸಿಕೊಂಡು ಕನ್ನಡ ನಾಡಿನ ವಿವಿಧೆಡೆಗಳಲ್ಲಿ ವೈಭವಯುತವಾಗಿ ಷಷ್ಟ್ಯಬ್ದಿ ಸಮಾರಂಭಗಳನ್ನು ಆಚರಿಸಿ ತಮ್ಮ ಗೌರವಾದರಗಳನ್ನು ಸಲ್ಲಿಸಿದರು.


ಸ್ವಗ್ರಾಮ ಹೊಸರಿತ್ತಿಯಲ್ಲಿ ಏರ್ಪಟ್ಟ ಮುಖ್ಯ ಸಮಾರಂಭದಲ್ಲಿ ಶಿಕ್ಷಣ ಸಚಿವ ಎಸ್. ಆರ್. ಕಂಠಿ, ಗೃಹಸಚಿವ ಆರ್. ಎಂ. ಪಾಟೀಲ, ಅಂದಾನಪ್ಪ ಕುಂದರಗಿ, ವರಕವಿ ದ. ರಾ. ಬೇಂದ್ರೆ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ. ಸಿ. ಪಾವಟೆ, ಜಾನಪದ ಗಾಯಕ ಹುಕ್ಕೇರಿ ಬಾಳಪ್ಪ, ಸಮಾಜ ಕಾರ್ಯಕರ್ತ ಆರ್. ಬಿ. ಮಾಮಲೇದೇಸಾಯಿ ಮುಂತಾದವರು ಪಾಲ್ಗೊಂಡು ಗುದ್ಲೆಪ್ಪನವರಿಗೆ ಗೌರವ ಸಲ್ಲಿಸಿದರು. ತುಮಕೂರು ಸಿದ್ಧಗಂಗಾಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹಾಗೂ ಧಾರವಾಡ ಮುರುಘಾಮಠದ ಶ್ರೀ ಮಹಾಂತಸ್ವಾಮಿಗಳು ಸಾನ್ನಿಧ್ಯವಹಿಸಿ ಆಶೀರ್ವದಿಸಿದರು.

ಇದೇ ಸಂದರ್ಭದಲ್ಲಿ 'ರತ್ನಶಿಖಾ' ಅಭಿನಂದನ ಗ್ರಂಥವನ್ನು ಡಾ. ವಿ. ಕೃ. ಗೋಕಾಕ, ಪ್ರೊ. ಗ. ಸ. ಹಾಲಪ್ಪ, ಪ್ರಾಚಾರ್ಯ ರಾ. ಯ. ಧಾರವಾಡಕರ, ಡಾ. ದ. ರಾ. ಬೇಂದ್ರೆ, ಡಾ. ಡಿ. ಎಸ್. ಕರ್ಕಿ ಅವರುಗಳ ಸಂಪಾದಕತ್ವದಲ್ಲಿ ಪ್ರಕಟಿಸಿ ಗುದ್ಲೆಪ್ಪನವರಿಗೆ ಸಮರ್ಪಿಸಲಾಯಿತು.

ಹೀಗೆ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಾಪೂರ, ಕಾರವಾರ, ಮಂಗಳೂರು, ಮಡಿಕೇರಿ, ಧರ್ಮಸ್ಥಳ, ಬೆಂಗಳೂರು, ಮೈಸೂರು ಮುಂತಾದ ಸ್ಥಳಗಳಲ್ಲಿ ಅಭಿಮಾನಿಗಳು ಗುದ್ಲೆಪ್ಪನವರ ಷಷ್ಟ್ಯಬ್ದಿ ಸಮಾರಂಭಗಳನ್ನೇರ್ಪಡಿಸಿ ಗೌರವ ಸಲ್ಲಿಸಿದರು.



ಹೊಸರಿತ್ತಿಯಲ್ಲಿ ಜರುಗಿದ ಗುದ್ಲೆಪ್ಪನವರ ಷಷ್ಟ್ಯಬ್ದಿ ಸಮಾರಂಭದಲ್ಲಿ ವರಕವಿ ಡಾ. ದ. ರಾ. ಬೇಂದ್ರೆ ಮಾತನಾಡುತ್ತಿರುವುದು.
ಗುದ್ಲೆಪ್ಪನವರು, ಆರ್. ಬಿ. ಮಾಮಲೆ ದೇಸಾಯಿ, ಎಸ್. ಎಲ್. ಪಾಟೀಲ, ಜಾನಪದ ಗಾಯಕ ಹುಕ್ಕೇರಿ ಬಾಳಪ್ಪ ಮತ್ತು
ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ. ಸಿ. ಪಾವಟೆ ಅವರುಗಳನ್ನು ಕಾಣಬಹುದು. ೬-೬-೧೯೬೬



ಬೆಂಗಳೂರಿನ ವಿಧಾನ ಸೌಧದಲ್ಲಿ ಜರುಗಿದ ಗುದ್ಲೆಪ್ಪನವರ ಷಷ್ಟ್ಯಬ್ದಿ ಸಮಾರಂಭದಲ್ಲಿ
ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಮಾತನಾಡುತ್ತಿದ್ದಾರೆ.
ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ ಅಲಿ ಅವರನ್ನು ಕಾಣಬಹುದು. ೧೯೬೬

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ. ಡಿ. ಜತ್ತಿ ಅವರು 'ರತ್ನಶಿಖಾ' ಅಭಿನಂದನ ಗ್ರಂಥಕ್ಕೆ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ: " ಗುದ್ಲೆಪ್ಪನವರ ಸ್ವಾತಂತ್ರ್ಯ ಹೋರಾಟದ ಕಥೆಯು ಕನ್ನಡ ನಾಡಿನಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಉಜ್ವಲ ಇತಿಹಾಸವಾಗಿದೆ.... ಗುದ್ಲೆಪ್ಪನವರು ಅಧಿಕಾರವಿರಲಿ. ಇಲ್ಲದಿರಲಿ ಜನತೆಯನ್ನು ಹಚ್ಚಿಕೊಂಡವರು. ಖಾದಿ ಚಳುವಳಿ. ಕಾಂಗ್ರೆಸ್ ಸಂಘಟನೆ. ಹಿಂದಿ ಪ್ರಚಾರ. ಗಡಿ ಹೋರಾಟ ಮೊದಲಾದ ಯಾವ ಕಾರ್ಯದಲ್ಲಿ ಧುಮುಕಿದರೂ ದೃಢವಾದ ಹೆಜ್ಜೆಯನ್ನಿಟ್ಟು ಹಿಂದೆ ಬೀಳದಂತೆ ಹೋರಾಡಿದ್ದಾರೆ." ಇದು ಗುದ್ಲೆಪ್ಪನವರಿಗೆ ಬಿ. ಡಿ. ಜತ್ತಿ ಅವರು ಸಲ್ಲಿಸಿದ ನುಡಿ ಗೌರವವಾಗಿದೆ.

ಧಾರ್ಮಿಕ ರಂಗ :

ಗುದ್ಲೆಪ್ಪನವರು ಹುಟ್ಟಿ ಬೆಳೆದ ಹೊಸರಿತ್ತಿಯ ಶ್ರೀ ಗುದ್ದಲಿಸ್ವಾಮಿ ಮಠ ಹಾಗೂ ಶ್ರೀ ರಾಘವೇಂದ್ರಸ್ವಾಮಿ ಮಠಗಳ ಪ್ರಭಾವದಿಂದ ಅವರಲ್ಲಿ ಧರ್ಮಸಮನ್ವಯ ದೃಷ್ಟಿ ನೆಲೆಗೊಂಡಿತ್ತು. ಹೀಗಾಗಿ ಅವರು ಎಲ್ಲ ಧರ್ಮಗಳ ಜನರೊಂದಿಗೆ ಬೆರೆತುಕೊಂಡು ಅವರ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಅವರ ಕೆಲಸಗಳನ್ನು ಭೇದ ಭಾವವೆಣಿಸದೆ ಮಾಡಿಕೊಡುತ್ತಿದ್ದರು. ಈ ಜಾತ್ಯತೀತತೆಯ ಭಾವನೆಯಿಂದಾಗಿ ಗುದ್ಲೆಪ್ಪನವರು ಸರ್ವಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದರು.

ವಿದ್ಯಾರ್ಥಿ ದೆಸೆಯಿಂದಲೇ ಧಾರವಾಡದ ಮುರುಘಾಮಠದ ಸಂಪರ್ಕವನ್ನು ಹೊಂದಿ ಅವರು ತಮ್ಮ ಜೀವಿತಾವಧಿಯವರೆಗೂ ಭಕ್ತಿ ಶ್ರದ್ಧೆಗಳಿಂದ ನಡೆದುಕೊಂಡರು. ಹುಬ್ಬಳ್ಳಿಯ ಮೂರುಸಾವಿರಮಠದ ಗುರುಸಿದ್ಧೇಶ್ವರ ಜಿನ್ನಿಂಗ್ ಪ್ರೆಸ್ಸಿನ ಆವರಣದಲ್ಲಿಯ ಎರಡು ಕೋಣೆಯ ಚಿಕ್ಕದಾದ ಕಪ್ಪು ಹಂಚಿನ ಮನೆಯಲ್ಲಿಯೇ ೧೯೪೭ ರಿಂದ ೧೯೬೨ ರ ವರೆಗೆ ಒಟ್ಟು ೧೫ ವರ್ಷಗಳ ವರೆಗೆ ವಾಸಿಸಿದ್ದರು. ಆ ಅವಧಿಯಲ್ಲಿಯೇ ಗುದ್ಲೆಪ್ಪನವರು ರಾಜ್ಯ ರಾಜಕೀಯದ ಪ್ರಮುಖರಲ್ಲೊಬ್ಬರಾಗಿ ರಾಷ್ಟ್ರದ ಗಣ್ಯಮಾನ್ಯ ಮುಖಂಡರುಗಳ ಸಂಪರ್ಕವನ್ನು ಹೊಂದಿ ಅವರಲ್ಲನೇಕರನ್ನು ಹುಬ್ಬಳ್ಳಿಗೆ ಬರಮಾಡಿಕೊಂಡು ಸಭೆ ಸಮಾರಂಭವೇರ್ಪಡಿಸಿ ತಾವಿದ್ದ ಪುಟ್ಟ ಮನೆಯಲ್ಲಿಯೇ ಅವರಿಗೆಲ್ಲ ಆದರಾತಿಥ್ಯ ನೀಡಿದರು. ಮೂರುಸಾವಿರ ಮಠದ ಜಗದ್ಗುರುಗಳ ಕೃಪಾಪಾತ್ರರಾಗಿ ಮಠದ ಉನ್ನತಿಗಾಗಿ ಸೇವಕನಂತೆ ದುಡಿದರು.

೧೯೫೩ ರಲ್ಲಿ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಶ್ರೀಪಾದಂಗಳವರ ಪ್ರಥಮ ಪರ್ಯಾಯ ಮಹೋತ್ಸವದಲ್ಲಿ ಗುದ್ಲೆಪ್ಪನವರು ಪಾಲ್ಗೊಂಡಿದ್ದರು. ಅಂದಿನಿಂದಲೂ ಶ್ರೀಗಳವರೊಂದಿಗೆ ನಿಕಟವಾದ ಸಂಪರ್ಕವನ್ನಿರಿಸಿಕೊಂಡಿದ್ದರು.

ನವಲಗುಂದ ಗವಿಮಠದಲ್ಲಿ ಪ್ರತಿವರ್ಷ ನಡೆಯುತ್ತಿದ್ದ ಸರ್ವಧರ್ಮ ಸಮ್ಮೇಳನಗಳಲ್ಲಿ ಆಗಾಗ್ಗೆ ಭಾಗವಹಿಸಿ ಶ್ರೀ ಬಸವಲಿಂಗ ಮಹಾಸ್ವಾಮಿಗಳ ಕೃಪೆಗೂ ಪಾತ್ರರಾಗಿದ್ದರು. ಅದೇ ರೀತಿ ಬೆಳಗಾವಿಯ ನಾಗನೂರು ಮಠ. ಚಿತ್ರದುರ್ಗದ ಮುರುಘರಾಜೇಂದ್ರ ಮಠ. ತುಮಕೂರಿನ ಸಿದ್ಧಗಂಗಾಮಠ. ಮೈಸೂರಿನ ಸುತ್ತೂರ ಮಠ. ಊಟಿಯ

ಪಟ್ಟದ ಮಠ ಮುಂತಾದ ರಾಜ್ಯದ ಮತ್ತು ಹೊರರಾಜ್ಯಗಳ ಮಠಮಾನ್ಯಗಳೊಂದಿಗೆ ಸಂಪರ್ಕವನ್ನು ಹೊಂದಿದ್ದರು. ಆಗಾಗ್ಗೆ ಪಾಂಡಿಚೇರಿಯ ಅರವಿಂದಾಶ್ರಮಕ್ಕೆ ಹೋಗಿ ಪೂಜ್ಯ ಮಾತಾಜಿಯವರ ದರ್ಶನಾಶೀರ್ವಾದ ಪಡೆದುಕೊಂಡು ಬರುತ್ತಿದ್ದರು.

ಸರ್ವಧರ್ಮ ಸಮನ್ವಯ ದೃಷ್ಟಿಯುಳ್ಳ ಗುದ್ಲೆಪ್ಪನವರು ಜಾತಿ ಮತ ಪಂಥವೆಂಬ ಭೇದ ಭಾವವಿಲ್ಲದೆ ಸರ್ವರನ್ನೂ ಮಾನವೀಯ ಅಂತಃಕರಣದಿಂದ ನೋಡುತ್ತಿದ್ದರು. ಹುಬ್ಬಳ್ಳಿಯಲ್ಲಿ ಆಗಾಗ್ಗೆ ನಡೆಯುತ್ತಿದ್ದ ಹಿಂದೂ - ಮುಸ್ಲಿಂ ಗಲಭೆಗಳ ಸಮಯದಲ್ಲಿ ಗುದ್ಲೆಪ್ಪನವರ ಮುಖಂಡತ್ವದಲ್ಲಿ ಅವರ ಮನೆಯಲ್ಲಿಯೇ ಶಾಂತಿ ಸಮಿತಿ ಸಭೆಗಳು ಜರುಗುತ್ತಿದ್ದವು. ಉಭಯ ಧರ್ಮಗಳ ಗಣ್ಯರು ಭಾಗವಹಿಸುತ್ತಿದ್ದರು. ಹೀಗೆ ನಗರದಲ್ಲಿ ಶಾಂತಿ ನೆಲೆಸಲು ಗುದ್ಲೆಪ್ಪನವರು ನೆರವಾಗುತ್ತಿದ್ದರು.

ಮಾನವೀಯತೆಯು ನಾಯಕತ್ವದಲ್ಲಿರಬೇಕಾದ ಒಂದು ಗುಣ. ಅಂತಹ ಮಾನವೀಯತೆಯು ಗುದ್ಲೆಪ್ಪನವರಲ್ಲಿತ್ತು. ಈ ಮಾನವೀಯತೆಯ ತುಡಿತದಿಂದಾಗಿ ಅವರು ಅನೇಕ ಸಾರ್ವಜನಿಕ ಕ್ಷೇತ್ರಗಳ ಮುಖಾಂತರ ದೀನ ದಲಿತರ, ಹಿಂದುಳಿದವರ ಅಭಿವೃದ್ಧಿಗಾಗಿ ಸಮರ್ಪಣ ಮನೋಭಾವದಿಂದ ಪರಿಶ್ರಮಿಸಿದ್ದಾರೆ. ೧೯೪೭ ರಿಂದ ೧೯೬೨ ರ ವರೆಗೆ ನಿರಂತರ ೧೫ ವರ್ಷಗಳ ಕಾಲ ಸಾಮಾನ್ಯರು ವಾಸಿಸುವಂತಹ ಎರಡು ಕೋಣೆಗಳ ಕಪ್ಪು ಹಂಚಿನ ಚಿಕ್ಕ ಮನೆಯಲ್ಲಿಯೇ ತಮ್ಮ ದೊಡ್ಡ ಸಂಸಾರದೊಂದಿಗೆ ಇದ್ದು, ರಾಷ್ಟ್ರೀಯ ನಾಯಕರುಗಳನ್ನು ಅಲ್ಲಿಯೇ ಬರಮಾಡಿಕೊಂಡಿದ್ದರು. ಈ ಮಾನವೀಯತೆಯ ಸ್ಪಂದನಕ್ಕೆ ಅವರು ವಾಸಿಸಿದ ಎರಡು ಕೋಣೆಗಳ ಚಿಕ್ಕ ಮನೆಯೇ ಸಾಕ್ಷಿ.

ಗುದ್ಲೆಪ್ಪನವರ ನಾಯಕತ್ವವು ಸಿರಿ ಸಂಪತ್ತುಗಳನ್ನು ಮೀರಿ ನಿಂತು ಬಡವರ ಬಗ್ಗೆ ಕಳಕಳಿಯಿಂದ ಕೂಡಿತ್ತು. ಬಸವಣ್ಣ, ಗಾಂಧೀಜಿಯವರಂತೆ ಸಾಮಾನ್ಯರ ಜೀವನವನ್ನು ನಡೆಸಿ ಉದಾತ್ತ ಧ್ಯೇಯಗಳಡಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಗುದ್ಲೆಪ್ಪನವರ ನಾಯಕತ್ವವನ್ನು ಅವರ ಗುಣಗಳು, ಸಂಘಟನೆ, ಜನಾಕರ್ಷಣೆ ಇವುಗಳ ಮುಖಾಂತರ ಕಾಣಬಹುದು. ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಮತ್ತಿತರ ಚಳುವಳಿಗಳಲ್ಲಿ ಅವರ ರಾಜಕೀಯ ಸಂಘಟನೆಯ ನಾಯಕತ್ವದ ಮುಖವನ್ನು ಕಂಡರೆ, ಸಾರ್ವಜನಿಕ ಸೇವೆಯಲ್ಲಿ ದಯಾಪೂರಿತ ಮಾನವೀಯತೆಯಿಂದ ಕೂಡಿದ ನಾಯಕತ್ವದ ಗುಣವನ್ನು ಕಾಣಬಹುದು. ಗುದ್ಲೆಪ್ಪನವರ ನಾಯಕತ್ವಕ್ಕೆ ಅನೇಕ ಮುಖಗಳುಂಟು. ಆ ಮುಖಗಳ ಮೌಲ್ಯಗಳನ್ನು ಆ ಕ್ಷೇತ್ರಗಳ ಕಾರ್ಯಾಚರಣೆಯಲ್ಲಷ್ಟೇ ಕಾಣಬಹುದು. ಅವರು ಒಬ್ಬ ಧೀಮಂತ ನಾಯಕರೂ ಆಜಾನುಬಾಹುಗಳಾಗಿದ್ದರೂ ಅವರ ಹೃದಯ ಹೂವಿಗಿಂತಲೂ ಮೃದುವಾಗಿ ಬಡವರ ಹಾಗೂ ಸಾಮಾನ್ಯರ ಬಗ್ಗೆ ಕಳಕಳಿಯಿಂದ ಕೂಡಿತ್ತು.

ಗುದ್ಲೆಪ್ಪನವರು ಹಲವು ಹೋರಾಟಗಳಲ್ಲಿ ತೊಡಗಿಯೂ ಹೊಣೆಗಾರಿಕೆಯ ಉನ್ನತ ಅಧಿಕಾರವನ್ನು ಹೊಂದಿದ್ದರೂ ನೈಜ ಜನ ಸೇವಕರಾಗಿ ಸಾರ್ವಜನಿಕ ಬದುಕಿನ ಸರ್ವಾಂಗೀಣ ಪ್ರಗತಿಗಾಗಿ ಬಹುಮುಖ ಸೇವೆಯನ್ನು ಸಲ್ಲಿಸಿ ನಾಡಿನ ಇತಿಹಾಸದಲ್ಲಿ ಅವಿಸ್ಮರಣೀಯ ಅಧ್ಯಾಯವನ್ನು ದಾಖಲಿಸಿದ್ದಾರೆ. ತನ್ಮೂಲಕ ಜನಮಾನಸದಲ್ಲಿ ತಮ್ಮ ನಾಯಕತ್ವದ ಹಿರಿಮೆ ಗರಿಮೆಗಳನ್ನು ಉಳಿಸಿದ್ದಾರೆ.

ಟಿಪ್ಪಣಿಗಳು

೧. ಕುಂದರಗಿ. ಅಂದಾನಪ್ಪ. ವೀರಬಸಪ್ಪ.. " ಉಕ್ಕಿನಾಳು ". ಗೋಕಾಕ ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪು. ೬೦

೨. ಮಹಾಜನ ಶೆಟ್ಟರ.. ಜಿ. ಎಸ್.. ಪ್ರಾಚಾರ್ಯರು ಕೆ. ಎಲ್. ಇ. ಪಾಲಿಟೆಕ್ನಿಕ್. ಹುಬ್ಬಳ್ಳಿ. ವಯಸ್ಸು : ೫೯. ೨೪ - ೬ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದ್ದುದು.

೩. ಗುದ್ಲೆಪ್ಪನವರ ೧೯೬೦ ರ ದಿನಚರಿ.

೪. ಹರಕಂಗಿ. ಪರಮೇಶ್ವರಗೌಡ. ಸಿಂಗನಗೌಡ.. ಸ್ವಾತಂತ್ರ್ಯಯೋಧರು. ನೆಗಳೂರು. ತಾ.. ಜಿ. : ಹಾವೇರಿ. ವಯಸ್ಸು : ೭೫. ೩ - ೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೫. ಹರಕಂಗಿ ಅವರೇ ಹೇಳಿದ್ದು.

೬. ಸಂಯುಕ್ತ ಕರ್ನಾಟಕ ೨ - ೧೨ - ೧೯೫೬.

೭. ಭದ್ರಾಪೂರ. ನೀಲಮ್ಮ. ಚನ್ನಪ್ಪ.. ಸ್ವಾತಂತ್ರ್ಯಯೋಧೆ.. ಹುಬ್ಬಳ್ಳಿ. ವಯಸ್ಸು : ೮೩. ೮ - ೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೮. ಪಾಟೀಲ. ನಾಗಮ್ಮ. ವೀರನಗೌಡ.. ಸ್ವಾತಂತ್ರ್ಯಯೋಧೆ ಮತ್ತು ಮಾಜಿ ವಿಧಾನಸಭಾ ಸದಸ್ಯರು. ಹುಬ್ಬಳ್ಳಿ. ವಯಸ್ಸು : ೯೬. ೨೨-೧೨-೨೦೦೦ದಂದು ಸಂದರ್ಶನದಲ್ಲಿ ಹೇಳಿದುದು.

೯. ' ಪ್ರಪಂಚ ' ವಾರಪತ್ರಿಕೆ ೯ - ೬ - ೧೯೫೪, ಸಂಪುಟ : ೧. ಸಂಚಿಕೆ : ೧೪. ಪು. ೧೧

೧೦. ಗುದ್ಲೆಪ್ಪನವರ ೧೯೫೯ ರ ದಿನಚರಿ

೧೧. ಮೇದಿ. ಹುಚ್ಚೇಶ್ವರ.. ಸ್ವಾತಂತ್ರ್ಯಯೋಧರು ಮತ್ತು ಸಂಪಾದಕರು ' ಕನ್ನಡಿಗ ' ವಾರಪತ್ರಿಕೆ. ಹುಬ್ಬಳ್ಳಿ. ವಯಸ್ಸು : ೭೮. ೧೪ - ೨ - ೧೯೯೯ ರಂದು ಸಂದರ್ಶನದಲ್ಲಿ ಹೇಳಿದುದು.

೧೨. ಗುದ್ಲೆಪ್ಪನವರ ೧೯೫೯ ರ ದಿನಚರಿ

೧೩. ಗುದ್ಲೆಪ್ಪನವರ ೧೯೬೦ ರ ದಿನಚರಿ

೧೪. ಅದೇ.

೧೫. ಶಾಮರಾವ್ ಕೆ.. ವ್ಯವಸ್ಥಾಪಕ ಸಂಪಾದಕರು ' ಸಂಯುಕ್ತ ಕರ್ನಾಟಕ ' ದಿನಪತ್ರಿಕೆ. ಬೆಂಗಳೂರು. ವಯಸ್ಸು : ೮೬. ೧೭ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೬. ಹಾರನಹಳ್ಳಿ ರಾಮಸ್ವಾಮಿ.. ಮಾಜಿ ಸಚಿವರು ಮತ್ತು ಅಧ್ಯಕ್ಷರು ಆಡಳಿತ ಸುಧಾರಣಾ ಆಯೋಗ. ಬೆಂಗಳೂರು. ವಯಸ್ಸು : ೭೮. ೧೭ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೭. ವೀರಭದ್ರಯ್ಯ. ಬಿ. ಎನ್.. ನಿವೃತ್ತ ಉಪಕಾರ್ಯದರ್ಶಿ ವಿಧಾನ ಸೌಧ. ಬೆಂಗಳೂರು. ವಯಸ್ಸು : ೬೮. ೧೮ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೮. ಹಳ್ಳಿಕೇರಿ ದೀನಬಂಧು.. ಗುದ್ಲೆಪ್ಪನವರ ಹಿರಿಯ ಪುತ್ರ ಮತ್ತು ಶಸ್ತ್ರಚಿಕಿತ್ಸಾ ತಜ್ಞರು. ಹುಬ್ಬಳ್ಳಿ. ವಯಸ್ಸು : ೫೯. ೨೦ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೧೯. ಹಾರನಹಳ್ಳಿ ರಾಮಸ್ವಾಮಿ.. ಮಾಜಿ ಸಚಿವರು ಮತ್ತು ಅಧ್ಯಕ್ಷರು ಆಡಳಿತ ಸುಧಾರಣಾ ಆಯೋಗ. ಬೆಂಗಳೂರು. ವಯಸ್ಸು : ೭೮. ೧೭ - ೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೦. ಭದ್ರಾಪೂರ. ನೀಲಮ್ಮ. ಚನ್ನಪ್ಪ.. ಸ್ವಾತಂತ್ರ್ಯಯೋಧೆ. ಹುಬ್ಬಳ್ಳಿ. ವಯಸ್ಸು : ೮೩. ೮ - ೧೧ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೧. ಚುರ್ಚಿಹಾಳಮಠ. ಸಿ. ಎಂ.. ಸ್ವಾತಂತ್ರ್ಯಯೋಧರು ಮತ್ತು ಮಾಜಿ ವಿಧಾನಸಭಾ ಸದಸ್ಯರು. ಮುಂಡರಗಿ. ವಯಸ್ಸು : ೭೮. ೨೭ - ೮ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೨. ಗುದ್ಲೆಪ್ಪನವರ ೧೯೫೫ ರ ದಿನಚರಿ

೨೩. ಗುದ್ಲೆಪ್ಪನವರ ೧೯೬೧ ರ ದಿನಚರಿ

೨೪. ನಾಯ್ಕರ ಚಂದ್ರಮೌಳಿ.. **ಛಲದಂಕಮಲ್ಲ ಹಳ್ಳಿಕೇರಿ ಗುದ್ಲೆಪ್ಪನವರು** (ಬೆಂಗಳೂರು : ಕನ್ನಡ ಪುಸ್ತಕ ಪ್ರಾಧಿಕಾರ. ೧೯೯೯) ಪು. ೭೮ ಮತ್ತು ೭೯

೨೫. ' ಜೀವನ ಶಿಕ್ಷಣ ' ಮಾಸಪತ್ರಿಕೆ. ಅಗಸ್ಟ ೧೯೯೮. ಪು. ೭

೨೬. ಧರಣೆಪ್ಪನವರ. ಪಿ. ಎಸ್.. ನಿವೃತ್ತ ಶಿಕ್ಷಕರು. ಹುಬ್ಬಳ್ಳಿ. ವಯಸ್ಸು : ೬೯. ೨೯ - ೮ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದುದು.

೨೭. ಹಂದ್ರಾಳ ಮಹಾಂತೇಶ. " ಕರ್ಮವೀರ ಶ್ರೀ ಗುದ್ಲೆಪ್ಪನವರು ". ಗೋಕಾಕ. ವಿ. ಕೆ. ಮತ್ತು ಇತರರು (ಸಂ.) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿಪೂರ್ತಿ ಸಮಾರಂಭ ಸಮಿತಿ. ಕಾಂಗ್ರೆಸ್ ಭವನ. ೧೯೬೬) ಪು. ೧೨೨

೨೮. ಅದೇ. ಪು. ೧೨೩

೨೯. ಅದೇ. ಪು. ೧೨೩

೩೦. ಕಮಲಾಸಿ. ಸಿ. ಜೆ.. ಮಾಜಿ ಸಿಂಡಿಕೇಟ ಸದಸ್ಯರು. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ವಯಸ್ಸು : ೭೩. ೨೪ - ೬ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದುದು.

೩೧. ಹಕಾರಿ. ದೇವೇಂದ್ರಕುಮಾರ.. " ಒಂದು ನೆನಪು : ಚಿಂತನಶೀಲ ಗುದ್ಲೆಪ್ಪ ". ಸಂಯುಕ್ತ ಕರ್ನಾಟಕ. ೬ - ೬ - ೧೯೮೧

ಅಧ್ಯಾಯ ಆರು

ವಿಧಾನ ಪರಿಷತ್ತಿನ ಸಭಾಪತಿ

ಅಧ್ಯಾಯ ಆರು

ವಿಧಾನ ಪರಿಷತ್ತಿನ ಸಭಾಪತಿ

ಗುದ್ಲೆಪ್ಪ ಹಳ್ಳಿಕೇರಿ ಅವರು ೧೯೫೨ ರಲ್ಲಿಯೇ ಮುಂಬಯಿ ವಿಧಾನ ಸಭೆಯ ಸದಸ್ಯರಾಗಿ ಆಯ್ಕೆಗೊಂಡು ಸಂಸದೀಯ ವ್ಯವಸ್ಥೆಗೆ ಪರಿಚಿತರಾಗಿ ಅನುಭವ ಪಡೆದಿದ್ದರು.

ಮೈಸೂರು ರಾಜ್ಯ ಏಕೀಕರಣಗೊಂಡ ನಂತರ ರಾಜ್ಯಸಭೆ ಮತ್ತು ವಿಧಾನ ಪರಿಷತ್ತುಗಳಿಗೆ ಅಭ್ಯರ್ಥಿಗಳ ಆಯ್ಕೆಗಾಗಿ ೧೯೬೧ ಫೆಬ್ರುವರಿ ೨೪ ರಂದು ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಗುದ್ಲೆಪ್ಪನವರ ಹೆಸರು ವಿಧಾನ ಪರಿಷತ್ತಿಗೆ ಸ್ಪರ್ಧಿಸಲು ಸರ್ವಾನುಮತದಿಂದ ಸೂಚಿತವಾಯಿತು.[೧] ಅದೇ ವರ್ಷ ನಡೆದ ಉಪಚುನಾವಣೆಯಲ್ಲಿ ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದರು. ೧೯೬೬ ರಲ್ಲಿ ಎರಡನೆಯ ಸಲ ಸ್ಥಾನೀಯ ಪ್ರಾಧಿಕಾರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಸದಸ್ಯರಾಗಿ ಅವಿರೋಧವಾಗಿ ಪುನರಾಯ್ಕೆಯಾದರು.

ಮೊದಲ ಸಲ ಆಯ್ಕೆಯಾದಾಗ ಹೆಚ್ಚುಕಾಲ ಸಭಾಪತಿಯಾಗಿ ಕಾರ್ಯ ಮಾಡಿದರು. ಹೀಗಾಗಿ ಭಾಷಣ ಮಾಡುವ ಅವಕಾಶಗಳು ಸ್ವಾಭಾವಿಕವಾಗಿ ಇರುತ್ತಿರಲಿಲ್ಲ. ಎರಡನೆಯ ಸಲ ಪುನರಾಯ್ಕೆಗೊಂಡು ಸದಸ್ಯರಾಗಿ ಮಾಡಿದ ಮುಖ್ಯ ಭಾಷಣಗಳ ಅವತರಣಿಕೆಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಗಡಿ ಸಮಸ್ಯೆ :

೧೯೬೬ ಜುಲೈ ೨೯ ರಂದು ವಿಧಾನ ಪರಿಷತ್ತಿನಲ್ಲಿ ಕರ್ನಾಟಕದ ಗಡಿಯ ಕುರಿತು ಗುದ್ಲೆಪ್ಪನವರು ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆ. ಈ ಸುದೀರ್ಘವಾದ ಭಾಷಣವು ಅವರ ಸ್ವತಂತ್ರ ಹಾಗೂ ಧೀರೋದಾತ್ತ ನಾಯಕತ್ವವನ್ನು ತೋರ್ಪಡಿಸುತ್ತದೆ. ಕರ್ನಾಟಕದ ಗಡಿ ಮತ್ತು ಭಾಷೆಯ ಬಗ್ಗೆ ಅವರಿಗಿರುವ ಕಳಕಳಿಯನ್ನು, ಅಭಿಮಾನವನ್ನು ಸ್ಪಷ್ಟಪಡಿಸುತ್ತದೆ. ಗುದ್ಲೆಪ್ಪನವರ ನಾಯಕತ್ವದ ವಿವಿಧ ಮುಖಗಳ ಪರಿಚಯ ಮಾಡಿಕೊಡುವುದರಿಂದ ಈ ಭಾಷಣದ ಆಯ್ದ ಅವತರಣಿಕೆಗಳನ್ನು ಇಲ್ಲಿ ಕೊಡಲಾಗಿದೆ.

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕರ್ನಾಟಕದ ಗಡಿ ವಿಷಯದ ಬಗ್ಗೆ ಒಂದು ಆಯೋಗ ನೇಮಿಸುವ ನಿರ್ಣಾಯ ಕೈಕೊಂಡಿತು. ಆ ನಿರ್ಣಯದ ಪ್ರತಿಕ್ರಿಯೆಯಾಗಿ ಈ ಚರ್ಚೆಯಲ್ಲಿ ಭಾಗವಹಿಸಿ ಗುದ್ಲೆಪ್ಪನವರು

ಬೆಳಗಾವಿ. ನಿಪ್ಪಾಣಿ. ಸೊಲ್ಲಾಪುರ. ದಕ್ಷಿಣ ಸೊಲ್ಲಾಪುರ. ಅಕ್ಕಲಕೋಟೆ. ಕಾಸರಗೋಡು. ಬಳ್ಳಾರಿ. ಆಲೂರು. ಆದವಾನಿ ಇವುಗಳು ಕರ್ನಾಟಕದ ಅವಿಭಾಜ್ಯ ಅಂಗಗಳು ಎಂಬುದನ್ನು ವಿಧಾನ ಪರಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಿದರು :

" ....ಫಜಲ ಅಲಿ ಆಯೋಗದ ವರದಿಯ ಮೇರೆಗೆ ರಾಜ್ಯಗಳು ನಿರ್ಮಾಣವಾದವು. ಆಗ ಕನ್ನಡ ನಾಡಿಗೆ ಬರಬೇಕಾಗಿದ್ದ ಕೆಲವು ಭಾಗಗಳು ಕೇರಳಕ್ಕೆ ಹೋದವು. ಕೆಲವು ತಮಿಳುನಾಡಿಗೆ ಹೋದವು. ಕೆಲ ಭಾಗ ಆಂಧ್ರಕ್ಕೂ ಹೋಯಿತು. ಗಡಿ ಭಾಗದಲ್ಲಿಯ ಜನರು ಒಂದೇ ಭಾಷೆಯನ್ನು ಆಡುತ್ತಾರೆಂದು ಹೇಳಲಿಕ್ಕಾಗುವುದಿಲ್ಲ. ಪ್ರತಿಯೊಂದು ಗಡಿಯಲ್ಲಿಯೂ ಸಾಮಾನ್ಯವಾಗಿ ಎರಡು ಭಾಷೆಗಳನ್ನಾದರೂ ಆಡತಕ್ಕ ಜನರು ಇರುವುದು ಸ್ವಾಭಾವಿಕ.... ಕರ್ನಾಟಕವನ್ನು ಕಟ್ಟುವ ಕೆಲಸದಲ್ಲಿ ನಾನು ಕಿಂಚಿತ್ ಸೇವೆಯನ್ನು ಸಲ್ಲಿಸಿದ್ದೇನೆ. ಕರ್ನಾಟಕದ ಎಲ್ಲಾ ಭಾಗಗಳಲ್ಲೂ ತಿರುಗಾಡಿದ್ದೇನೆ. ಬಳ್ಳಾರಿ ವಿಷಯವಾಗಿ ಇಲ್ಲಿ ಹೆಚ್ಚಿಗೆ ಪ್ರಸ್ತಾಪ ಮಾಡದೇ ಇದ್ದರೂ ಏನೇನು ಎಲ್ಲೆಲ್ಲಿ ತೊಂದರೆಗಳಿವೆ ಎಂಬುದು ನನಗೆ ಪೂರ್ಣವಾಗಿ ಗೊತ್ತಿರುತ್ತದೆ. ಕೊನೆಗೆ ಪಾರ್ಲಿಮೆಂಟಿನಲ್ಲಿ ಪ್ರತಿಯೊಂದು ರಾಜ್ಯದ ಗಡಿಯ ಬಗ್ಗೆ ಒಂದು ಆ್ಯಕ್ಟ್ ಪಾಸಾದ ಮೇಲೆ ಕಾಸರಗೋಡು ಸಂಪೂರ್ಣವಾಗಿ ಕನ್ನಡ ಪ್ರಾಂತವಾಗಿದ್ದರೂ ಅದು ಕೇರಳಕ್ಕೆ ಹೋಯಿತು. ಅದನ್ನು ಕಂಡು ನನಗೆ ಸಾಕಷ್ಟು ದುಃಖವಾಯಿತು. ಅದೇ ಪ್ರಕಾರ ಸೊಲ್ಲಾಪುರ. ದಕ್ಷಿಣ ಸೊಲ್ಲಾಪುರ. ಅಕ್ಕಲಕೋಟೆ ಪ್ರಾಂತಗಳು ಮಹಾರಾಷ್ಟ್ರಕ್ಕೆ ಹೋದವು. ಇಷ್ಟಾದರೂ ಸಹ ಕರ್ನಾಟಕ ರಾಜ್ಯದ ಗಡಿಯೊಳಗೆ ಸೇರಬೇಕಾದ ಪ್ರಾಂತಗಳು ಸಂಪೂರ್ಣವಾಗಿ ಸೇರದೆ ಹೋದವು..... ಕಾಸರಗೋಡಿನಲ್ಲಿ ಶೇ. ೯೭ ರಷ್ಟು ಕನ್ನಡ ಭಾಷೆ ಮಾತನಾಡತಕ್ಕ ಜನರು ಇರುವುದರಿಂದ ಆ ಪ್ರದೇಶ ಕರ್ನಾಟಕಕ್ಕೆ ಬರಬೇಕಾಗುತ್ತದೆಂದು ಆಗಲೇ ಈ ಪ್ರಶ್ನೆ ಪುನಃ ಬಂದಿತ್ತು. ಆ ಪ್ರಕಾರ ಕಾಸರಗೋಡು ನಮಗೆ ಬರುವುದು ಸಹಜ. ಸೊಲ್ಲಾಪುರ. ಅಕ್ಕಲಕೋಟೆ. ಆಲೂರು. ಆದವಾನಿ ಈ ಪ್ರಾಂತಗಳು ಸಹ ಆಂದೋಳನವಿಲ್ಲದೆಯೇ ನಮಗೆ ಸೇರಬೇಕೆಂಬ ನಿರ್ಣಯವೂ ಕೂಡ ಚರ್ಚೆಗೆ ಬಂತು.... "[೨]

ವಿಧಾನ ಪರಿಷತ್ತಿನ ಈ ಚರ್ಚೆಯಲ್ಲಿ ಮುಂದುವರಿಯುತ್ತ ಗುದ್ಲೆಪ್ಪನವರು ಮಹಾರಾಷ್ಟ್ರದವರ ಪ್ರಾದೇಶಿಕ ವಿಸ್ತರಣೆಯ ಆಕ್ರಮಣಕಾರಿ ಪ್ರವೃತ್ತಿಯನ್ನು ಖಂಡಿಸಿ ತಮ್ಮ ವಿಚಾರವನ್ನು ಹೇಳುತ್ತಾರೆ :

" ಕರ್ನಾಟಕದ ಗಡಿಯಲ್ಲಿರತಕ್ಕ ಪ್ರತಿಯೊಂದು ಅಂಗುಲ ಭೂಮಿಯು ಕನ್ನಡಿಗರಿಗೇ ಬೇಕು. ಆಂಧ್ರವಾಗಲಿ ಕೇರಳವಾಗಲಿ ಅಥವಾ ಮಹಾರಾಷ್ಟ್ರವಾಗಲಿ ಅವರಿಗೆ ನಮ್ಮ ಭಾಗದ ಭೂಮಿಯಲ್ಲಿ ಒಂದು ಅಂಗುಲ ಭೂಮಿಯನ್ನೂ ಸಹ ನಾವು ಕೊಡುವುದಿಲ್ಲವೆಂಬುದಾಗಿ ಈಗ ತೀರ್ಮಾನ ಮಾಡಬೇಕಾಗಿದೆ.... ಮೇ ೨೩ ನೇ ತಾರೀಖಿನ ದಿವಸ ವರ್ಕಿಂಗ್ ಕಮಿಟಿಯವರು ಮುಂಬಯಿನಲ್ಲಿ ಒಂದು ಎಮರ್ಜನ್ಸಿ ಮೀಟಿಂಗ್ ಕರೆದರು. ಅಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಸಮಸ್ಯೆ ಪುನಃ ಬಂತು. ನಮ್ಮ ಕರ್ನಾಟಕಕ್ಕೆ ಮುಖ್ಯವಾದಂಥ ಭಾಗ ಬೆಳಗಾವಿ. ನಿಪ್ಪಾಣಿ. ಕಾರವಾರ ಪ್ರಾಂತಗಳು ನಮಗೆ ಸೇರಬೇಕೆಂದು ಮಹಾರಾಷ್ಟ್ರದ ನಾಯಕರು ಕೇಳಿದರು. ಕಾರವಾರ ಮಹಾರಾಷ್ಟ್ರ ಗಡಿಯಲ್ಲಿ ಇಲ್ಲವೇ ಇಲ್ಲ. ಅವರು ಕೇವಲ ಗೋವೆ ಹೋಗುತ್ತದೆಂದು ಇದ್ದರು. ಕೊಂಕಣಿ ಭಾಷೆ ಮಹಾರಾಷ್ಟ್ರದ ಉಪಭಾಷೆ ಎಂದು ಹೇಳಿದ್ದೂ ಸಹ ಸುಳ್ಳು. ಆದ್ದರಿಂದ ಅವರಿಗೆ ಯಾವ ಕಾಲಕ್ಕೂ ಏನೇನೂ ಹಕ್ಕು ಇಲ್ಲವೆಂಬ ಮಾತನ್ನು ಅವರು ಒಪ್ಪಿಕೊಳ್ಳಬೇಕು. ಗೋವೆಯ ಮೂಲಕ ರಸ್ತೆ ಹೋಗಬಹುದು ಎಂಬ ಒಂದು ಕಾರಣದಿಂದ ಅವರು ಕಾರವಾರ ವಿಚಾರವಾಗಿ

ಮಾತನಾಡುತ್ತಿದ್ದಾರೆ. ಅವರಿಗೆ ನಿಜವಾಗಿ ಕಣ್ಣು ಇರತಕ್ಕದ್ದು ನಿಪ್ಪಾಣಿ ಮತ್ತು ಬೆಳಗಾವಿ ಮೇಲೆ.... ೧೦೦ ಕ್ಕೆ ೬೦ ಭಾಗ ಜನರು ಮರಾಠಿ ಭಾಷೆಯನ್ನು ಮಾತನಾಡುವವರು ೬ - ೮ ಮೈಲಿ ಒಳಗೆ ಕರ್ನಾಟಕದಲ್ಲಿದ್ದರೆ ಅಂಥ ಹಳ್ಳಿಗಳನ್ನು ಮಹಾರಾಷ್ಟ್ರಕ್ಕೆ ಕಳುಹಿಸುವುದಕ್ಕೂ ಮತ್ತು ೧೦೦ ಕ್ಕೆ ೬೦ ಭಾಗ ಜನರು ಕನ್ನಡವನ್ನು ಮಾತನಾಡುವವರು ಮಹಾರಾಷ್ಟ್ರದಲ್ಲಿ ೬ - ೮ ಮೈಲಿ ಒಳಗೆ ಇದ್ದರೆ ಅಂಥವನ್ನು ಕರ್ನಾಟಕಕ್ಕೆ ಕಳುಹಿಸುವುದಕ್ಕೂ ನಾವು ಒಪ್ಪಿದ್ದೇವೆ. ಆದರೆ ಅದಕ್ಕೆ ಅವರು ಹೇಳುತ್ತಾರೆ. ನಮಗೆ ಸಣ್ಣ ಪುಟ್ಟ ಹಳ್ಳಿಗಳು ಬೇಕಾಗಿಲ್ಲ. ನಮಗೆ ಬೇಕಾಗಿರುವಂಥಾದ್ದು ಬೆಳಗಾವಿ ನಗರ ಮತ್ತು ನಿಪ್ಪಾಣಿ. ನಿಪ್ಪಾಣಿಯು ಸುವರ್ಣದಂತಹ ಭೂಮಿ. ಆದಕಾರಣ ಇವುಗಳ ಮೇಲೆ ಅವರ ಕಣ್ಣು ಇದೆ. ಅವುಗಳನ್ನು ಏನಾದರೂ ಮಾಡಿ ಕಬಳಿಸಬೇಕೆಂದು ಕಳೆದ ಹತ್ತು ವರ್ಷಗಳಿಂದ ಆಂದೋಳನವನ್ನು ಖಾಯಂ ಆಗಿ ನಡೆಸಿಕೊಂಡು ಬಂದಿದ್ದಾರೆ." [೩]

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕೈಕೊಂಡ ಏಕಸದಸ್ಯ ಆಯೋಗ ನೇಮಿಸುವ ತೀರ್ಮಾನವನ್ನು ವಿರೋಧಿಸಿ ಜನರು ಯಾವ ರೀತಿ ಪ್ರತಿಭಟನೆ ನಡೆಸಿದ್ದರೆಂಬುದನ್ನು ಗುದ್ಲೆಪ್ಪನವರು ವಿಧಾನ ಪರಿಷತ್ತಿನಲ್ಲಿ ಸ್ಪಷ್ಟವಾಗಿ ವಿವರಿಸುತ್ತಾರೆ.:

"ಕಾಂಗ್ರೆಸ್ ವರ್ಕಿಂಗ್ ಕಮೀಟಿಯವರು ಮೈಸೂರು ಮತ್ತು ಮಹಾರಾಷ್ಟ್ರ ಗಡಿಯ ಸಂಬಂಧದಲ್ಲಿ ಏಕಸದಸ್ಯ ಆಯೋಗ ನೇಮಿಸುತ್ತೇವೆಂದು ತೀರ್ಮಾನ ತೆಗೆದುಕೊಂಡ ನಂತರ ಅದರ ವಿರುದ್ಧ ಜನಗಳು ಸ್ಫೂರ್ತಿಯಿಂದ ಬೆಳಗಾವಿ, ಧಾರವಾಡ ಸ್ವಲ್ಪ ಹೆಚ್ಚು ಕಡಿಮೆ ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲರೂ ಕೂಡ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದರು. ಏಕ ಸದಸ್ಯ ಆಯೋಗವನ್ನು ರಚಿಸುವುದಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು.... ಮಹಾರಾಷ್ಟ್ರದವರು ಸಾಮ್ರಾಜ್ಯ ಮನೋವೃತ್ತಿಯನ್ನಿಟ್ಟುಕೊಂಡಿದ್ದಾರೆ. ರಾಜ್ಯವನ್ನು ವಿಸ್ತರಣೆ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ." [೪]

ಗುದ್ಲೆಪ್ಪನವರು ಕಾಂಗ್ರೆಸ್‌ನ ಬಲಾಢ್ಯ ನಾಯಕಿಯೂ ಹಾಗೂ ಪ್ರಧಾನಿಯೂ ಆದ ಶ್ರೀಮತಿ ಇಂದಿರಾ ಗಾಂಧಿ ಅವರ ವರ್ತನೆಯನ್ನು ವಿಧಾನ ಪರಿಷತ್ತಿನಲ್ಲಿ ಬಹಿರಂಗವಾಗಿ ಧೈರ್ಯದಿಂದ ಟೀಕಿಸಿದ್ದಾರೆ. ಕನ್ನಡ ನಾಡಿನ ಗಡಿಗಳ ಬಗ್ಗೆ ಅವರಿಗಿರುವ ಕಳಕಳಿಯನ್ನು ಕೆಳಗಿನ ಅವತರಣಿಕೆಯಲ್ಲಿ ಕಾಣಬಹುದು :

"ನಾವು ಅನೇಕ ಜನಗಳು ಮುಂಬಯಿನಲ್ಲಿ ಮಹಾ ಪ್ರಧಾನಿಗಳನ್ನು (ಶ್ರೀಮತಿ ಇಂದಿರಾ ಗಾಂಧಿ) ಭೇಟಿ ಮಾಡಿದಾಗ ನಾವು ಏನು ಕೇಳಿಕೊಂಡರೂ ಸಹ ಅವರ ಕಿವಿಗಳು ನಮ್ಮ ಕಡೆ ಇರುತ್ತಲೇ ಇರಲಿಲ್ಲ. ಈಗ ೧೦ ವರ್ಷಗಳಿಂದಲೂ ಒಂದೇ ಸಮನಾಗಿ ಮಹಾರಾಷ್ಟ್ರದವರು ಆಂದೋಳನವನ್ನು ಮಾಡುತ್ತಿದ್ದಾರೆ. ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಆದ್ದರಿಂದ ಈ ಗಡಿ ಪ್ರಶ್ನೆ ಜೀವಂತವಾಗಿದೆ. ಅದನ್ನು ಬಗೆಹರಿಸಬೇಕೆಂದು ಹೇಳಿದರು. ಏರೋಡ್ರೋಮಿಗೆ ಹೋದರೂ ಕೂಡ ಅದೇ ಮಾತನ್ನು ಹೇಳುತ್ತಿದ್ದರು. ಇವೊತ್ತಿನ ದಿವಸ ನಾವು ಈ ಬಗ್ಗೆ ಹೇಳುವುದಾದರೆ ಕರ್ನಾಟಕದ ಗಡಿಯ ಪ್ರಶ್ನೆಗಳು ಇತ್ಯರ್ಥವಾಗಿವೆ. ಕನ್ನಡಿಗರ ಬೇಡಿಕೆಗಳು ಇನ್ನೂ ಏಷ್ಟೋ ಉಳಿದಿವೆ. ಕರ್ನಾಟಕಕ್ಕೆ ಸೇರಬೇಕಾದ ಅನೇಕ ಕನ್ನಡ ಭಾಗಗಳು ಇನ್ನೂ ಹಾಗೆಯೇ ಹೊರಗಡೆ ಉಳಿದಿವೆ. ಆದರೂ ಕೂಡ ನಾವು

ಆ ಬಗ್ಗೆ ಆಂದೋಳನವನ್ನು ಮಾಡಿಲ್ಲ. ಪಾರ್ಲಿಮೆಂಟಿನಲ್ಲಿ ಒಮ್ಮೆ ಈ ಬಗ್ಗೆ ತೀರ್ಮಾನವಾಗಿದೆ. ನಾವು ಮತ್ತೆ ಅದರ ಮೇಲೆ ಆಂದೋಳನವನ್ನು ಮಾಡುವುದು ಯೋಗ್ಯವಲ್ಲ. ರಾಷ್ಟ್ರವನ್ನು ಕಟ್ಟುವುದಕ್ಕೆ ಅದು ಅಡ್ಡಿ ಬರುತ್ತದೆ ಎನ್ನುವ ಉದ್ದೇಶದಿಂದ ಇಲ್ಲಿಯ ತನಕ ಜನಗಳು ತಮ್ಮ ಬೇಡಿಕೆಯ ಬಗ್ಗೆ ಮುಖಂಡರ ಮುಖಾಂತರವಾಗಲೀ ನಮ್ಮ ಸರಕಾರದಲ್ಲಿಯಾಗಲೀ ಅಂಥ ಒಂದು ಆಂದೋಳನವನ್ನು ಮಾಡಿಲ್ಲ. ಮಾಡುವುದಕ್ಕೆ ಹೊರಟೂ ಇಲ್ಲ." [೫]

ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಮಹಾರಾಷ್ಟ್ರದ ಪರವಾಗಿದ್ದರೂ ಗುದ್ಲೆಪ್ಪನವರು ಕನ್ನಡದ ಪರವಾಗಿ ಹೇಳಬೇಕಾದ ವಿಷಯವನ್ನು ಭಯಭೀತಿಯಿಲ್ಲದೆ ಹೇಳುತ್ತಾರೆ. ಈ ಹೇಳಿಕೆ ಅವರ ಸ್ವತಂತ್ರ ಮತ್ತು ದಿಟ್ಟ ನಾಯಕತ್ವದ ಗುಣಗಳನ್ನು ಎತ್ತಿ ತೋರಿಸುತ್ತದೆ. ಇದು ಕೆಳಗಿನ ಭಾಷಣದ ಅವತರಣಿಕೆಯಲ್ಲಿ ಸ್ಪಷ್ಟವಾಗುತ್ತದೆ :

"ಅನಂತರ ಗಡಿ ಆಯೋಗದ ಬಗ್ಗೆ ಕರ್ನಾಟಕದ ಪ್ರತಿಕ್ರಿಯೆಯನ್ನು ಕಾಂಗ್ರೆಸ್ ವರಿಷ್ಠರಿಗೆ ತಿಳಿಸುವುದಕ್ಕೆ ಜುಲೈ ನಾಲ್ಕನೆಯ ತಾರೀಖು ನಾವು ದಿಲ್ಲಿಗೆ ಹೋಗಿದ್ದಾಗ ಮಹಾಪ್ರಧಾನಿಯವರು ಕರ್ನಾಟಕ ಮತ್ತು ಮಹಾರಾಷ್ಟ್ರದವರ ಭಾವನೆಯನ್ನು ಅಳೆಯಲು ಬೇರೆ ಬೇರೆ ಅಳತೆಗೋಲನ್ನು ಇಡುತ್ತಿದ್ದರು. ಮಹಾರಾಷ್ಟ್ರದವರು ಈಗ ಸುಮಾರು ೧೦ ವರ್ಷಗಳಿಂದಲೂ ಏರೋಡ್ರೋಮಿನಲ್ಲಿಯಾಗಲಿ. ಬೇರೆ ಯಾವ ಸ್ಥಳದಲ್ಲಿಯಾಗಲಿ ಮಹಾರಾಷ್ಟ್ರಕ್ಕೆ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಪ್ರಧಾನಿಗಳೂ ಬಂದಾಗ ಆಂದೋಳನವನ್ನು ಮಾಡಿಸಿದ್ದಾರೆ. ಅವರು ೧೦ ವರ್ಷಗಳಿಂದಲೂ ಆಂದೋಳನವನ್ನು ಮಾಡಿರುವುದರಿಂದ ಅವರ ಪ್ರಶ್ನೆ ಜೀವಂತವಾಗಿದೆ. ಗಡಿ ವಿವಾದ ಇದೆ. ಆದ್ದರಿಂದ ಇವೊತ್ತು ಆ ಪ್ರಶ್ನೆಯನ್ನು ಎತ್ತಲೇಬೇಕಾಯಿತು. ಮಹಾರಾಷ್ಟ್ರದವರು ಬಹಳ ಕಷ್ಟಪಟ್ಟು ರಾಷ್ಟ್ರಕ್ಕಾಗಿ ತ್ಯಾಗ ಮಾಡಿದಂತಹ ಜನಗಳು. ಅವರು ಉಪವಾಸ ಮಾಡುತ್ತಾರೆ. ಅವರ ಬೇಡಿಕೆ ನ್ಯಾಯವಾಗಿದೆ. ಅದರಲ್ಲಿ ವಾದ ಇದೆ. ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿಗಳಲ್ಲಿ ಬೆಳಗಾವಿ ಮತ್ತು ನಿಪ್ಪಾಣಿ ನಿಮ್ಮದೇ ಆದರೆ ಆಯೋಗದ ಮುಂದೆ ಆ ವಾದವನ್ನು ಮಂಡಿಸಲು ಏಕೆ ಹೆದರುತ್ತೀರಿ ? ಮೈಸೂರಿನ ನಿಲುವು ದುರ್ಬಲವಾದುದರಿಂದ ಮೈಸೂರಿನವರು ಆಯೋಗ ಬೇಡವೆಂದು ಚಳುವಳಿ ನಡೆಸುತ್ತಿದ್ದಾರೆಂದು ಸ್ಪಷ್ಟವಾಗಿ ಮಹಾಪ್ರಧಾನಿ ಇಂದಿರಾ ಗಾಂಧಿಯವರು ನಮಗೆ ಹೇಳಿದರು.... ಬೆಳಗಾವಿ. ನಿಪ್ಪಾಣಿ ಮತ್ತು ಕಾರವಾರ ಕನ್ನಡಿಗರದೇ ಆಗಿದ್ದುದರಿಂದ ಕನ್ನಡಿಗರು ತಮ್ಮದಾಗಿರುವ ತಮ್ಮ ಮನೆಯನ್ನು ತಮ್ಮ ಮನೆ ಎಂದು ಹೇಳುವ ಅಗತ್ಯ ಇರಲಿಲ್ಲ. ಬೆಳಗಾವಿ. ನಿಪ್ಪಾಣಿ ಮತ್ತು ಕಾರವಾರಗಳು ಕನ್ನಡಿಗರಿಗೆ ಸೇರಿದ ಪ್ರದೇಶಗಳೆಂದು ಪಾರ್ಲಿಮೆಂಟಿನಲ್ಲಿ ಕೂಡ ನಿರ್ಣಯವಾಗಿದೆ.... ನ್ಯಾಯವನ್ನು ತೋರಿಸಿಕೊಡುವುದಾದರೆ ನಾವು ಸಹಕಾರ ಕೊಡುತ್ತೇವೆ. ಕನ್ನಡಿಗರಿಗೆ ಕಬಳಿಸುವ ಬುದ್ಧಿ ಇಲ್ಲ. ಇರುವುದನ್ನು ಉಳಿಸಿಕೊಳ್ಳಬೇಕು. ನ್ಯಾಯವಾಗಿ ಬರಬೇಕಾದುದನ್ನು ಪಡೆಯಬೇಕು ಎನ್ನುವುದೇ ನಮ್ಮ ಇಚ್ಛೆ." [೬]

ಚರ್ಚೆಯಲ್ಲಿ ಭಾಗವಹಿಸುತ್ತ ಆಯೋಗದ ನೇಮಕಾತಿಯ ವಿರುದ್ಧದ ಪ್ರದರ್ಶನದ ವ್ಯಾಪಕತೆಯ ಚಿತ್ರಣವನ್ನು ವಿಧಾನ ಪರಿಷತ್ ಸದಸ್ಯರ ಮುಂದಿಡುತ್ತ ಈ ರೀತಿ ಹೇಳುತ್ತಾರೆ :

"ಯಾವಾಗ ಮಧ್ಯರಾತ್ರಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಈ ಗಡಿ ಸಮಸ್ಯೆಯ ಬಗ್ಗೆ ಏಕಸದಸ್ಯ ಆಯೋಗವನ್ನು ರಚನೆ ಮಾಡುತ್ತೇವೆಂದು ನಿರ್ಣಯವನ್ನು ಮಾಡಿದರೊ ಅದರ ಮಾರನೆಯ ದಿವಸವೇ ಆ ಆಯೋಗದ

ವಿರುದ್ಧ ಇಡೀ ಕರ್ನಾಟಕದಲ್ಲಿ ಬೃಹದಾಕಾರವಾದ ಚಳುವಳಿಯು ಪ್ರಾರಂಭವಾಯಿತು. ಆ ಚಳುವಳಿಯಲ್ಲಿ ಸಣ್ಣ ಹೆಣ್ಣುಮಕ್ಕಳು ಸಹ ಭಾಗವಹಿಸಿದ್ದರು. ಆಗ ನಡೆದಂತಹ ಚಳುವಳಿ ಹಿಂದೆ ಯಾವಾಗಲೂ ಆಗಿರಲಿಲ್ಲ. ಮಹಾತ್ಮಾ ಗಾಂಧಿಯವರ ಕಾಲದಲ್ಲಿ ಉಪ್ಪಿನ ಸತ್ಯಾಗ್ರಹ. ಕ್ವಿಟ್ ಇಂಡಿಯಾ ಚಳುವಳಿಗಳಂತೆ ಕನ್ನಡ ನಾಡಿನ ಪ್ರತಿಯೊಂದು ಹಳ್ಳಿ ಮತ್ತು ಪಟ್ಟಣಗಳಲ್ಲಿಯೂ ನಡೆಯಿತು. ೫೦ ಸಾವಿರ ಜನ ಚಳುವಳಿಯಲ್ಲಿ ಭಾಗವಹಿಸಿದವರ ಪೈಕಿ ಅರ್ಧ ಹೆಣ್ಣು ಮಕ್ಕಳನ್ನೇ ನಾವು ನೋಡಿದ್ದೇವೆ. ಇಂಥ ಉಕ್ಕಿನಂತಹ ಆಂದೋಳನವನ್ನು ಮಾಡಿದ್ದು ಸ್ವಲ್ಪ ಮಟ್ಟಿಗೆ ಕಾಂಗ್ರೆಸ್ ನಾಯಕರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಿದೆ." ೭

ಕಾಂಗ್ರೆಸ್ ವರಿಷ್ಠರನ್ನು ಪ್ರಶ್ನಿಸುವಂಥ ಧೈರ್ಯ ಭಾರತೀಯ ಕಾಂಗ್ರೆಸ್ಸಿಗರಲ್ಲಿ ಕೆಲವರಲ್ಲಷ್ಟೇ ಇತ್ತು. ಅಂಥವರಲ್ಲಿ ಗುದ್ಲೆಪ್ಪನವರೂ ಒಬ್ಬರು. ಈ ಮಾತನ್ನು ಈ ಕೆಳಗಿನ ಅವತರಣಿಕೆ ಸ್ಪಷ್ಟಪಡಿಸುತ್ತದೆ.

" ಈ ಆಯೋಗ ನೇಮಿಸುವಂಥ ಪ್ರಸಂಗ ಹೇಗೆ ಬಂತು ಎಂದು ನೋಡಿದರೆ ಈ ಕಾರ್ಯದೊಳಗೆ ಇವೊತ್ತು ಅಧಿಕಾರ ಪಕ್ಷದ ಕಾಂಗ್ರೆಸ್ಸಿನ ವರಿಷ್ಠರಾಗಲಿ ಅಥವಾ ಭಾರತ ಸರಕಾರದವರೇ ಆಗಲಿ ನ್ಯಾಯ ನಿಷ್ಠರಾಗಿ ನಡೆಯುವುದಕ್ಕಿಂತ ಒತ್ತಾಯ ನಿಷ್ಠರಾಗಿ ಎತ್ತ ಕಡೆ ಒತ್ತಾಯ ಬರುತ್ತದೋ. ಎತ್ತ ಕಡೆಯಿಂದ ಹೆಚ್ಚು ಜನರು ನೂಕು ನುಗ್ಗಲು ಮಾಡುತ್ತಾ ಇದ್ದಾರೋ. ಅಂತಹವರ ಕಡೆಗೆ ವಾಲುತ್ತಾರೆ ಎನ್ನುವ ಮಾತನ್ನು ತೋರಿಸಿಕೊಟ್ಟರು." ೮

ಪ್ರಾದೇಶಿಕ ಸಮಗ್ರತೆಯ ವಿಷಯವಾಗಿ ನಾಯಕರುಗಳು ಪಕ್ಷಭೇದವಿಲ್ಲದೆ ಯಾವ ರೀತಿ ಒಗ್ಗಟ್ಟಿನಿಂದ ಕಾರ್ಯ ಮಾಡಬೇಕು ಎಂಬುದರ ಬಗ್ಗೆ ಗುದ್ಲೆಪ್ಪನವರು ಈ ಕೆಳಗಿನಂತೆ ಹೇಳುತ್ತಾರೆ :

" ....ನಮ್ಮ ಮಾನ್ಯ ಮುಖ್ಯಮಂತ್ರಿಯವರು (ಶ್ರೀ ಎಸ್. ನಿಜಲಿಂಗಪ್ಪ) ಸಮಿತಿಯನ್ನು ನೇಮಿಸುವುದಾದರೂ ಅದು ಕೇವಲ ಸಣ್ಣ ಪುಟ್ಟ ಹೊಂದಾಣಿಕೆಗಳಿಗೆ ಮಾತ್ರ ಎಂದು ಹೇಳಿದ್ದಾರೆ.... ಕನ್ನಡಿಗರಾದ ನಾವು ನಮ್ಮ ನಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಬೆಳಗಾವಿ ಸಲುವಾಗಿ ಒಬ್ಬರು. ಕಾಸರಗೋಡಿನ ಸಲುವಾಗಿ ಇನ್ನೊಬ್ಬರು ಹಾಗೂ ಮತ್ತೊಂದರ ಸಲುವಾಗಿ ಮತ್ತೊಬ್ಬರು. ಯಾವ ಪಕ್ಷದವರೇ ಇರಲಿ. ಯಾವ ಪಂಗಡವೇ ಇರಲಿ. ಯಾವ ರಾಜಕೀಯವೇ ಇರಲಿ. ಎಲ್ಲವನ್ನು ಬಿಟ್ಟು. ಮಹಾರಾಷ್ಟ್ರದವರು ಹೇಗೆ ಎಲ್ಲರೂ ಭೇದ ಭಾವವನ್ನು ಬಿಟ್ಟು ಒಗ್ಗಟ್ಟಿನಿಂದ ನಮ್ಮ ಪ್ರದೇಶವನ್ನು ಕಬಳಿಸಬೇಕೆಂದು ಹೋರಾಡುತ್ತಿದ್ದಾರೋ ಅದೇ ರೀತಿ ನಾವೆಲ್ಲರೂ ಒಂದೇ ಮನಸ್ಸಿನಿಂದ. ಒಂದೇ ದೃಷ್ಟಿಯಿಂದ ಹೋರಾಡಬೇಕು. ನಮಗೆ ಮಾತ್ರ ಅವರ ಒಂದು ಇಂಚು ಜಾಗ ಕೂಡ ಬೇಡ. ಆದರೆ ನಮ್ಮದನ್ನು ಮಾತ್ರ ಬೇರೆಯವರಿಗೆ ಬಿಟ್ಟುಕೊಡುವುದಕ್ಕೆ ಆಗುವುದಿಲ್ಲ." ೯

ಗಡಿ ಸಮಸ್ಯೆಯನ್ನು ಪ್ರಾದೇಶಿಕ ದೃಷ್ಟಿಯಿಂದ ನೋಡದೇ ಸಮಗ್ರ ಭಾರತದ ಹಿನ್ನೆಲೆಯಲ್ಲಿ ನೋಡಬೇಕೆಂದು ಗುದ್ಲೆಪ್ಪನವರು ವಿಧಾನ ಪರಿಷತ್ತಿನಲ್ಲಿ ತಮ್ಮ ಅಭಿಪ್ರಾಯವನ್ನು ಪ್ರತಿಪಾದಿಸುತ್ತಾರೆ :

" ' Vigilence is the eternal price of liberty ' ಎಂಬ ನಾಣ್ಣುಡಿಯನ್ನು ಕನ್ನಡಿಗರು ಮನಗಂಡು ನಮ್ಮ ಗಡಿಯನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಸದಾ ಸಿದ್ಧರಾಗಿರಬೇಕು. ಅಹೋರಾತ್ರಿ ದಿವಸದಲ್ಲಿ ೨೪ ಗಂಟೆಗಳೂ

ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕನ್ನಡ ನಾಡ ಗಡಿಯನ್ನು ಕಾವರೇನೇ ಈ ನಾಡನ್ನು ಉಳಿಸಿಕೊಳ್ಳಲು ಸಾಧ್ಯವಿದೆ.... ಒಂದು ಸವಾಲು ತಮ್ಮ ಮುಂದಿಡುತ್ತೇನೆ. ನಮಗೆ ಯಾವುದೇ ಕಮೀಶನ್ನೂ ಬೇಕಾಗಿಲ್ಲವೆಂದೇ ಆಶಯ. ಒಂದು ವೇಳೆ ಹಾಗೆ ಮಾಡಬೇಕೆಂದಿದ್ದರೆ. ಈಗ ಬಂಗಾಳ - ಬಿಹಾರಗಳ ಗಡಿ ಪ್ರಶ್ನೆ ಇದೆ. ಒರಿಸ್ಸಾ - ಬಿಹಾರಗಳ ಗಡಿ ಪ್ರಶ್ನೆ ಇದೆ. ಅವುಗಳನ್ನೆಲ್ಲ ಸೇರಿಸಿಕೊಂಡು ೧೯೫೩ ರಲ್ಲಿ ಫಜಲಾಲಿ ಕಮೀಶನ್ನು ಏನು ನೇಮಕವಾಗಿತ್ತೋ ಅದಕ್ಕಿಂತ ಹೆಚ್ಚು ಅಧಿಕಾರ ವ್ಯಪ್ತಿಯನ್ನು ಕೊಟ್ಟು, ಇಡೀ ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲೂ ಒಂದೇ ವಿಧವಾದ ರೀತಿಯಲ್ಲಿ ಗಡಿವಿವಾದಗಳು ತೀರ್ಮಾನವಾಗುವ ಹಾಗೆ ಒಂದು ಕಮೀಶನ್ ನೇಮಕ ಮಾಡಬಹುದೇ ಹೊರತು ಕೇವಲ ಮರಾಠಿ ಜನರು ಕೇಳುತ್ತಿದ್ದಾರೆಂಬ ಕಾರಣದ ಮೇಲೆ ಈ ಹೊತ್ತು ನೀವು ಒಂದು ಕಮೀಶನ್ ನೇಮಿಸುವುದಾದರೆ ಅದನ್ನು ನಾವು ಪ್ರತಿಭಟಿಸದೆ ವಿಧಿಯಿಲ್ಲ. ಮೊದಲು ಈ ಕಮೀಶನ್ನಿನ ವ್ಯಾಪ್ತಿಯಲ್ಲಿ ಕೇರಳವನ್ನು ಸೇರಿಸಿರಲಿಲ್ಲ. ಕೇರಳ - ಕರ್ನಾಟಕದ ಲಕ್ಷವೇ ಅವರಿಗಿರಲಿಲ್ಲ. ಮುಖ್ಯಮಂತ್ರಿಗಳ ಒತ್ತಾಯದ ಮೇಲೆ ಅದನ್ನು ಸೇರಿಸಿದರು." [೧೦]

ಕನ್ನಡದ ಗಡಿಯ ರಕ್ಷಣೆಗಾಗಿ ಕನ್ನಡಿಗರು ಹೋರಾಟಕ್ಕೆ ಸಿದ್ಧರಾಗಿ. ಕಷ್ಟ ಕಾರ್ಪಣ್ಯ ಬಂದರೂ ಎದೆಗುಂದದೆ ಮುನ್ನಡೆಯಬೇಕೆಂದು ಗುದ್ಲೆಪ್ಪನವರು ಕರೆ ಕೊಡುತ್ತಾರೆ :

".... ಆಯೋಗವನ್ನು ನೇಮಕ ಮಾಡುವ ಬಗ್ಗ ನನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ. ಒಬ್ಬ ಕನ್ನಡಿಗ ಜೀವಂತವಾಗಿರುವವರೆಗೂ ನಿಪ್ಪಾಣಿ. ಬೆಳಗಾವಿ ಇವುಗಳನ್ನು ತೆಗೆದುಕೊಳ್ಳಲು ಕನ್ನಡಿಗರ ಹೆಣದ ಮೇಲೆ ಸಾಗಬೇಕು. ಮತ್ತು ಅದೇ ಪ್ರಕಾರವಾಗಿ ಕನ್ನಡ ರಾಜ್ಯದಲ್ಲಿರುವ ಎಲ್ಲ ಭಾಗಗಳನ್ನೂ ಉಳಿಸಿಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದೇನೆ. ಈ ಮಾತನ್ನು ಕರ್ನಾಟಕದ ಎರಡೂವರೆ ಕೋಟಿ ಜನತೆಯ ವತಿಯಿಂದ ಹೇಳಿದ್ದೇನೆ. ಅಧಿಕಾರದಲ್ಲಿರುವ ಪಕ್ಷ ಸಹ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮಾಡಿದ ನಿರ್ಣಯದ ವಿರುದ್ಧ ನ್ಯಾಯವನ್ನು ಕಾಪಾಡುವುದಕ್ಕೆ ಹೋರಾಡಬೇಕಾಗುತ್ತದೆ. ಆ ಹೋರಾಟ ಬಂದರೆ ಕೇವಲ ಒಂದು ದಿವಸ ಶಿಕ್ಷೆ. ಅರ್ಧ ದಿವಸ ಶಿಕ್ಷೆ ಕೊಡುವಂಥದ್ದು ಆಗಲಾರದು. ಅದಕ್ಕಿಂತ ಹೆಚ್ಚಿನ ತ್ಯಾಗ. ಬಲಿದಾನ ಮಾಡಬೇಕಾದಂಥ ಪ್ರಸಂಗ ಒದಗೀತು ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ನಮ್ಮಲ್ಲಿರುವ ಭಾಗಗಳನ್ನು ಉಳಿಸಿಕೊಂಡು. ನಮಗೆ ನ್ಯಾಯವಾಗಿ ಬರಬೇಕಾಗಿರುವ ಕನ್ನಡ ಭಾಗಗಳನ್ನು ಪಡೆಯುವುದಕ್ಕೆ ಎಲ್ಲರೂ ಸಿದ್ಧರಾಗಬೇಕಾಗಿದೆ." [೧೧]

ಈ ರೀತಿಯಾಗಿ ಗುದ್ಲೆಪ್ಪನವರು ಕನ್ನಡ ಗಡಿಗಳ ಹಿತದೃಷ್ಟಿಯಿಂದ ತಮ್ಮ ಸ್ಪಷ್ಟವಾದ ನಿಲುವನ್ನು ವಿಧಾನ ಪರಿಷತ್ ವೇದಿಕೆಯ ಮೂಲಕ ಎರಡುವರೆ ಕೋಟಿ ಕನ್ನಡಿಗರಿಗೆ. ಕಾಂಗ್ರೆಸ್ಸಿನ ವರಿಷ್ಠರಿಗೆ ಹಾಗೂ ಮಹಾರಾಷ್ಟ್ರೀಯರಿಗೆ ತಿಳಿಯಪಡಿಸುತ್ತಾರೆ. ಈ ಭಾಷಣವು ಕನ್ನಡಿಗರ ಭಾವನೆ ಮತ್ತು ಆಶಯಗಳ ಪ್ರತಿಬಿಂಬವಾಗಿದೆ.

ಮಹಾಜನ ವರದಿ :

ಕರ್ನಾಟಕ. ಮಹಾರಾಷ್ಟ್ರ ಹಾಗೂ ಕೇರಳ ರಾಜ್ಯಗಳ ನಡುವಿನ ಗಡಿವಿವಾದಗಳ ಕುರಿತು ವರದಿ ಸಲ್ಲಿಸಲು ಕೇಂದ್ರ ಸರಕಾರವು ೧೯೬೬ ಅಕ್ಟೋಬರ ೨೫ ರಂದು ನ್ಯಾಯಾಧೀಶ ಮೆಹರಚಂದ ಮಹಾಜನ ಅವರ ಏಕಸದಸ್ಯತ್ವದ ಆಯೋಗವನ್ನು ನೇಮಿಸಿತು. ಈ ಆಯೋಗವು ೧೯೬೭ ಅಗಸ್ಟ ೨೫ ರಂದು ವರದಿಯನ್ನು ಸಲ್ಲಿಸಿತು.

ಮಹಾರಾಷ್ಟ್ರದ ಆಗ್ರಹದ ಮೇರೆಗೆ ನೇಮಕಗೊಂಡ ಈ ಆಯೋಗದ ವರದಿಯನ್ನು ಮಹಾರಾಷ್ಟ್ರ ಮತ್ತು ಕೇರಳಗಳು ಒಪ್ಪಿಕೊಳ್ಳಲಿಲ್ಲ. ಆದರೆ ಕರ್ನಾಟಕವು ಮಾತ್ರ ಒಪ್ಪಿಕೊಂಡಿತು.

ಮಹಾಜನ ಆಯೋಗದ ವರದಿಯ ಕುರಿತು ವಿಧಾನ ಪರಿಷತ್ತಿನಲ್ಲಿ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ೧೯೬೭ ಡಿಸೆಂಬರ್ ೮ ರಂದು ಗುದ್ಲೆಪ್ಪನವರು ಮಾಡಿದ ಭಾಷಣದ ಅವತರಣಿಕೆಗಳು ಹೀಗಿವೆ :

" .... ಕಳೆದ ಎರಡು ದಿವಸಗಳಿಂದಲೂ ಮಹಾಜನ ಆಯೋಗದ ವರದಿಯ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ವಿಷಯದಲ್ಲಿ ಕರ್ನಾಟಕ ಸರಕಾರ ಮತ್ತು ಜನತೆಯ ನಿಲುಮೆ ಏನಿರಬೇಕೆಂಬ ಬಗ್ಗೆ ಈಗಾಗಲೇ ನಮ್ಮ ಸರಕಾರ ಮತ್ತು ನಮ್ಮ ನಾಯಕರು ಹೇಳಿದ ಹಾಗೆ ನಮಗೆ ಯಾವ ರೀತಿಯ ಅನ್ಯಾಯವಾಗಿದ್ದರೂ ಸಹ ನಾವು ಅನೇಕ ರೀತಿಯಿಂದ ಆರ್ಥಿಕ ಹಾನಿಗೊಳಗಾಗಿದ್ದರೂ ಸಹ ಒಮ್ಮೆ ನಮ್ಮ ಇಡೀ ಕನ್ನಡ ಜನತೆ ವಿರೋಧ ಮಾಡಿತ್ತು. ನಾವು ಈಗ ಈ ಆಯೋಗದ ನೇಮಕವನ್ನು ಒಪ್ಪಿಕೊಂಡ ಮೇಲೆ ಅವರು ಒಪ್ಪಿಸಿದಂಥ ವರದಿಯನ್ನು ಅವಾರ್ಡ್ ಎಂದು ಭಾವಿಸಿ ಒಪ್ಪಿಗೆಯನ್ನು ನೀಡಿ ಸ್ವೀಕರಿಸಬೇಕೆಂದು ನಮ್ಮ ಸರಕಾರ ಮತ್ತು ನಮ್ಮ ನಾಯಕರು ಹೇಳಿದ್ದನ್ನು ಇಡೀ ಕನ್ನಡ ಜನತೆ ಇವೊತ್ತಿನ ದಿವಸ ಒಪ್ಪುತ್ತಾ ಇದೆ.... " [೧೨]

ಮಹಾರಾಷ್ಟ್ರೀಯರ ಪ್ರಾದೇಶಿಕ ವಿಸ್ತರಣಾ ನೀತಿಯನ್ನು ಖಡಾಖಂಡಿತವಾಗಿ ಟೀಕಿಸುತ್ತ ಗುದ್ಲೆಪ್ಪನವರು ಈ ರೀತಿ ಹೇಳಿದರು :

" ಮಹಾರಾಷ್ಟ್ರ ರಾಜ್ಯ ಸ್ಥಾಪನೆಯಾದ ಮೇಲೆ ಅವರಿಗೆ ಸಮಾಧಾನವಾಗಲಿಲ್ಲ.... ಇವೊತ್ತಿನ ದಿವಸ ಬೆಳಗಾವಿ ಸಹ ತಮಗೆ ಸೇರಬೇಕೆಂದು ಕೇಳುತ್ತಿದ್ದಾರೆ. ಕೇವಲ ಬೆಳಗಾವಿ ಅವರಿಗೆ ಸೇರಿದರೆ ಸಮಾಧಾನವಾಗುವದಿಲ್ಲ. ಕಾರವಾರ, ಬೀದರಗಳನ್ನು ಅವರಿಗೆ ಕೊಟ್ಟರೂ ಸಹ ಸಮಾಧಾನವಾಗುವದಿಲ್ಲ. ಹಿಂದೆ ಮುಂಬಯಿ ಸರಕಾರದ ಸ್ಪೀಕರ ಆಗಿದ್ದ ಶ್ರೀ ಡಿ. ಕೆ. ಕುಂಟೆ ಅವರು ಅಳ್ನಾವರ ಸ್ಟೇಶನ್ನಿಗೆ ಬಂದಿದ್ದರು. ಅಲ್ಲಿರುವ ಅರಣ್ಯ ಸಂಪತ್ತನ್ನು, ದೊಡ್ಡ ದೊಡ್ಡ ಕಟ್ಟಿಗೆಯ ಡಿಪೋಗಳನ್ನು ನೋಡಿ ಆ ಭಾಗಗಳೆಲ್ಲ ನಮಗೆ ಸೇರಬೇಕೆಂದರು. ಅಲ್ಲಿಂದ ಮುಂದೆ ಅವರು ಧಾರವಾಡಕ್ಕೆ ಬಂದು, ಅಲ್ಲಿ ಕಟ್ಟುತ್ತಿದ್ದ ದೊಡ್ಡ ದೊಡ್ಡ ಯುನಿವರ್ಸಿಟಿ ಕಟ್ಟಡಗಳನ್ನು ನೋಡಿ ಧಾರವಾಡವೂ ಸಹ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಹೇಳಿದರು.... ಯಾವುದಾದರೂ ಒಳ್ಳೆಯ ಪ್ರದೇಶವಿದ್ದರೆ, ಒಳ್ಳೆಯ ಅರಣ್ಯ ಸಂಪತ್ತು ಇದ್ದರೆ ಆ ಭಾಗವೆಲ್ಲ ತಮಗೇ ಸೇರಬೇಕೆಂದು ವಾದ ಮಾಡುತ್ತಾರೆ.... ಯಾವ ಒಂದು ಕಮೀಟಿಯನ್ನೇ ಮಾಡಲಿ, ಯಾವ ಒಂದು ಕಮೀಶನ್ ನೇಮಕ ಮಾಡಲಿ ಆ ಮೂಲಕ ತಮಗೆ ಮಾತ್ರ ಅನುಕೂಲವಾಗಬೇಕೆನ್ನುವುದು ಇವರ ವಾದ.... " [೧೩]

ಮಹಾರಾಷ್ಟ್ರದ ನಾಯಕರ ದ್ವಂದ್ವ ನೀತಿಯನ್ನು ಗುದ್ಲೆಪ್ಪನವರು ಉಗ್ರವಾಗಿ ಟೀಕಿಸುತ್ತಾರೆ :

" ಕಾಂಗ್ರೆಸ್ ವರ್ಕಿಂಗ್ ಕಮೀಟಿಯಲ್ಲಿ ಶ್ರೀ ಚವ್ಹಾಣ, ಶ್ರೀ ನಾಯಕ ಅವರು ಏಕ ಸದಸ್ಯ ಆಯೋಗದ ತೀರ್ಮಾನವನ್ನು ಸಂಬಂಧಪಟ್ಟ ಎಲ್ಲರೂ ಒಪ್ಪಿಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿದ್ದರು. ಅದರಂತೆ ಏಕ ಸದಸ್ಯ

ಆಯೋಗ ನೇಮಕವಾಯಿತು. ಕಾಂಗ್ರೆಸ್ ವರ್ಕಿಂಗ್ ಕಮೀಟಿಯಲ್ಲಿದ್ದ ಆಗಿನ ಗೃಹಮಂತ್ರಿ ಶ್ರೀ ನಂದಾರವರು. ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ನಾಯಕ ಅವರು. ಮಹಾರಾಷ್ಟ್ರದ ಗೃಹಮಂತ್ರಿಗಳಾದ ಶ್ರೀ ದೇಸಾಯಿ ಮತ್ತು ಮಹಾರಾಷ್ಟ್ರದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಇನ್ನೂ ಮುಂತಾದ ದೊಡ್ಡ ದೊಡ್ಡ ಮುಖಂಡರುಗಳು ಏಕಸದಸ್ಯ ಆಯೋಗದ ನೇಮಕಕ್ಕೆ ಘಂಟಾಘೋಷವಾಗಿ ಒಪ್ಪಿಕೊಂಡು. ಇವೊತ್ತಿನ ದಿವಸ ಅದೇ ನಾಯಕರು ತಿಪ್ಪರಲಾಗ ಹೊಡೆಯುತ್ತಿದ್ದಾರೆ.... ಈ ತೀರ್ಮಾನದ ಬಗ್ಗೆ ಶ್ರೀ ಚವ್ಹಾಣ ಅವರು ಇದುವರೆಗೆ ಯಾವ ಒಂದು ಶಬ್ದವನ್ನೂ ಹೇಳದೇ ಸುಮ್ಮನಿದ್ದರು.... ಶ್ರೀ ಚವ್ಹಾಣ ಅವರು ಎಲ್ಲಾ ಪಕ್ಷದ ಮುಖಂಡರನ್ನು ಕರೆದು ಸಭೆ ಸೇರಿಸಿ ಅವರುಗಳ ಅಭಿಪ್ರಾಯ ಕೇಳಬೇಕೆಂದು ಹೇಳಿದ್ದಾರೆ. ನಾನು ಆತ್ಮಸಾಕ್ಷಿಯಾಗಿ ಹೇಳುತ್ತೇನೆ ಆ ರೀತಿ ಅವರು ಸಭೆ ಕರೆದರೂ ಸಹ ಅವರಿಗೆ ತಕ್ಕಂತಹ ನ್ಯಾಯ ಸಿಕ್ಕಲಿಕ್ಕೆ ಸಾಧ್ಯವಿಲ್ಲವೆಂದು. ಅವರ ಮನಸ್ಸಿನೊಳಗೆ ಬೆಳಗಾವಿ ಸಿಕ್ಕಬೇಕು ಬೆಳಗಾವಿ ಸಿಕ್ಕಬೇಕು ಎಂದು ಇದೆ. ಆದರೆ ನಾನು ಹೇಳುತ್ತೇನೆ ಆಕಾಶ ಬಿದ್ದರೂ ಭೂಮಿ ಬಿರಿದರೂ ಸಹ ಬೆಳಗಾವಿ ಅವರಿಗೆ ಸಿಕ್ಕುವುದಿಲ್ಲ. ಬೆಳಗಾವಿ ಅವರಿಗೆ ಸಿಕ್ಕುವುದಿಲ್ಲ ಎಂದು. "[೧೪]

ಮುಂದುವರಿದು ಮಾತನಾಡುತ್ತ ಅವರು ಕನ್ನಡಿಗರ ಉದಾರ ನೀತಿಯನ್ನು ಹಾಗೂ ಮರಾಠಿಗರ ಠಕ್ಕ ನೀತಿಯನ್ನು ವಿವರಿಸುತ್ತಾರೆ :

" ಮಹಾಜನ ವರದಿ ಪ್ರಕಾರ ಕಾರ್ಯಾಚರಣೆಗೆ ಬರಬೇಕು. ಅದಕ್ಕೆ ವಿರೋಧವಾಗಿ ನಡೆದುಕೊಂಡರೆ ಕರ್ನಾಟಕದಲ್ಲಿ ಒಬ್ಬ ಕನ್ನಡಿಗನು ಬದುಕಿರುವವರೆಗೆ ಎರಡೂವರೆ ಕೋಟಿ ಜನರು ತಮ್ಮ ಸರ್ವಶಕ್ತಿಯಿಂದ ಅದನ್ನು ಎದುರಿಸುತ್ತಾರೆಂದು ನಾನು ಹೇಳುತ್ತೇನೆ. ಕನ್ನಡಿಗರು ಯಾವಾಗಲೂ ವಿಶಾಲ ಮನೋಭಾವದವರಾಗಿದ್ದಾರೆ. ಒಳ್ಳೆಯದನ್ನು ಒಪ್ಪುತ್ತೇವೆ. ಅನ್ಯಾಯವನ್ನು ಸರ್ವಶಕ್ತಿಯನ್ನು ಉಪಯೋಗಿಸಿ ಎದುರಿಸುತ್ತೇವೆ.... ಭಾರತ ಸರಕಾರದ ಗೃಹಮಂತ್ರಿಗಳ ಕೈಗೆ ಮಹಾಜನ ಕಮೀಶನ್ ವರದಿ ಅಗಸ್ಟ ೨೮ ನೇ ತಾರೀಖಿಗೆ ಬಂದರೂ ಕೂಡ ಎರಡೂವರೆ ತಿಂಗಳು ಅದನ್ನು ತಡೆಹಿಡಿದರು. ಸರಕಾರದ ಮುಂದೆ ಇಡಲಿಲ್ಲ. ನೇರವಾಗಿ ಪ್ರಧಾನ ಮಂತ್ರಿಯವರಿಗೆ ಕಳಿಸಿಕೊಡುತ್ತೇನೆ ಎಂದು ಹೇಳಿದರು. ಆದರೆ ಈ ವರದಿ ಹೊರಗೆ ಬಂದ ಮೇಲೆ ಮಹಾರಾಷ್ಟ್ರದ ನಾಯಕರು ದೊಡ್ಡ ನಾಟಕ ನಡೆಸಿ ಹರತಾಳ. ಬಂದ್ ಮುಂತಾದವನ್ನು ನಡೆಸಿ ಬೆಣ್ಣೆ ನುಂಗಿದ ಬೆಕ್ಕಿನಂತೆ ಕುಳಿತುಕೊಂಡಿದ್ದಾರೆ.... ಶ್ರೀ ಚವ್ಹಾಣ ಹೇಳಿದಂತೆ ಎಲ್ಲಾ ರಾಜಕೀಯ ಪಕ್ಷದವರನ್ನು ಕರೆದು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಾದರೆ ಈ ಏಕ ಸದಸ್ಯ ಸಮಿತಿ ವರದಿ ಏತಕ್ಕೆ ಬೇಕಾಯಿತು ? ಗೋವೆಯೊಳಗೆ ಓಪಿನಿಯನ್ ಪೋಲ್ ತೆಗೆದುಕೊಂಡಾಗ ಅಲ್ಲೂ ಮಹಾರಾಷ್ಟ್ರದವರಿಗೆ ಮುಖಭಂಗವಾಯಿತು.... "[೧೫]

ಪ್ರಜಾಪ್ರಭುತ್ವದಲ್ಲಿದ್ದ ಗುದ್ಲೆಪ್ಪನವರ ನಂಬಿಗೆಯನ್ನು ಕೆಳಗಿನ ಅವತರಣಿಕೆಯಲ್ಲಿ ಕಾಣುತ್ತೇವೆ :

" ಮಹಾಜನ ಅವರು ಸಮೀಕ್ಷೆ ನಡೆಸಿದಾಗ ನಾನು ಮಹಾರಾಷ್ಟ್ರಕ್ಕೆ ಸೇರಿದ ಕನ್ನಡ ಪ್ರದೇಶಗಳನ್ನು ನೋಡುವುದಕ್ಕಾಗಿ ಅಕ್ಕಲಕೋಟೆಗೆ ಹೋಗಿದ್ದೆ. ಆಗ ನನ್ನನ್ನು ಪೋಲೀಸ ಸ್ಟೇಶನ್ನಿಗೂ ಕರೆದೊಯ್ದಿದ್ದರು.... ಒಂದೆ

ಕಾಸರಗೋಡನ್ನು ಕೇರಳಕ್ಕೆ ಸೇರಿಸಿದ್ದರು. ಅದಕ್ಕೆ ಕಾರಣವೇ ಇರಲಿಲ್ಲ. ಮಹಾಜನ ಆಯೋಗವು ಇದನ್ನು ಮೈಸೂರಿಗೆ ಸೇರಿಸಬೇಕೆಂದು ಶಿಫಾರಸು ಮಾಡತಕ್ಕಂಥಾದ್ದು ಅವರ ನಿಷ್ಪಕ್ಷಪಾತ ಮನೋಭಾವನೆಗೆ ಒಂದು ನಿದರ್ಶನವಾಗಿದೆ.... ಆದರೆ ಜನಗಳಲ್ಲಿರತಕ್ಕಂಥ ಒಂದು ತಪ್ಪು ಭಾವನೆ ಏನೆಂದರೆ ಕರ್ನಾಟಕಕ್ಕೆ ಅನುಕೂಲವಾಗಿರುವುದರಿಂದ ಈ ಆಯೋಗದ ರಿಪೋರ್ಟನ್ನು ಕರ್ನಾಟಕದವರು ಸ್ವಾಗತಿಸುತ್ತಾರೆನ್ನತಕ್ಕಂಥ ಭಾವನೆ ಶುದ್ಧ ತಪ್ಪು. ನಾವು ಅದನ್ನು ಸ್ವಾಗತಿಸತಕ್ಕಂಥಾದ್ದು. ಒಪ್ಪಿಕೊಳ್ಳ ತಕ್ಕಂಥಾದ್ದು. ಏತಕ್ಕೆಂದರೆ ಒಂದು ಉದಾತ್ತ ಭಾವನೆಯಿಂದ ಪರಸ್ಪರ ರಾಜ್ಯಗಳಲ್ಲಿ ಸೌಹಾರ್ದ ಕಲ್ಪನೆ ಇರಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವು ಒಪ್ಪಿಕೊಳ್ಳುತ್ತಾ ಇದ್ದೇವೆ. ಕೇವಲ ಸರಕಾರ ಅಷ್ಟೇ ಅಲ್ಲ, ಜನತೆಯೂ ಕೂಡ ಆ ಮಾತನ್ನು ಒಪ್ಪಿಕೊಂಡಿದೆ.... "[೧೬]

ಗುದ್ಲೆಪ್ಪನವರು ತಮ್ಮನ್ನು ಭಾರತ ಮತ್ತು ಕರ್ನಾಟಕದೊಂದಿಗೆ ಗುರುತಿಸಿಕೊಳ್ಳುತ್ತಾರೆ. ಅವರು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ನಾಯಕತ್ವ ವಹಿಸಿದವರು. ಕರ್ನಾಟಕದ ಗಡಿ ಸಮಸ್ಯೆಗಳನ್ನು ರಾಷ್ಟ್ರೀಯ ಚೌಕಟ್ಟಿನೊಳಗೆ ನೋಡಬಯಸುತ್ತಾರೆ :

"ಏಕ ಸದಸ್ಯ ಆಯೋಗ ಬೇಡವೆಂದು ಏನು ಮಹಾ ಆಂದೋಳನ ನಡೆಯಿತೋ ಅದೇ ರೀತಿಯ ಆಂದೋಳನವನ್ನು ಆಯೋಗದ ವರದಿಯನ್ನು ಒಪ್ಪುವಂತೆ ಮಾಡಲು ಕೂಡ ಕನ್ನಡಿಗರು ಮಾಡಬೇಕು ಎನ್ನುವಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಭಾರತ ಮೊದಲು. ಅನಂತರ ಕರ್ನಾಟಕ. ನನಗೆ ಈಗ ೭೨ ವರ್ಷ. ೪೫ ವರ್ಷಗಳಿಂದ ಯಾವ ರೀತಿ ನ್ಯಾಯದ ಸಲುವಾಗಿ ಹೋರಾಟ ಮಾಡಿದ್ದೇನೆ. ಅದೇ ರೀತಿ ಭಾರತಕ್ಕಾಗಿ ಆ ತರುವಾಯ ಕರ್ನಾಟಕಕ್ಕಾಗಿ ಆ ತರುವಾಯ ನಮ್ಮ ಸಂಸ್ಕೃತಿಗಾಗಿ ಹೋರಾಟ ಮಾಡಿ ನ್ಯಾಯ ಪಡೆಯಲು ಶ್ರಮಿಸುತ್ತೇನೆ. "[೧೭]

ಮಹಾಜನ ವರದಿಯ ಶಿಫಾರಸುಗಳು ಪ್ರಕಟಗೊಂಡ ಮೇಲೆ ಗುದ್ಲೆಪ್ಪನವರು ತಮ್ಮ ಸ್ಪಷ್ಟವಾದ ಅಭಿಪ್ರಾಯಗಳನ್ನು ವಿಧಾನ ಪರಿಷತ್ತಿನ ಮೂಲಕ ವ್ಯಕ್ತಪಡಿಸಿದ್ದಾರೆ. ಈ ಶಿಫಾರಸುಗಳನ್ನು ನ್ಯಾಯನಿಷ್ಠುರರಾಗಿ ಕಂಡು ಕನ್ನಡ ಪರವಾಗಿರುವ ವಾದವನ್ನು ಹಾಗೂ ಮರಾಠಿಗರ ಹಟಮಾರಿತನವನ್ನು ವಿವರಿಸಿದ್ದಾರೆ. ಗುದ್ಲೆಪ್ಪನವರು ನ್ಯಾಯನಿಷ್ಠುರರಾಗಿರುವುದರಿಂದ ಹಾಗೂ ಸ್ಪಷ್ಟ ನಿರ್ಭಯ ವಕ್ತಾರರಾಗಿರುವುದರಿಂದ ಅವರ ಮಾತುಗಳು ಮರಾಠಿಗರಿಗೆ ಅಪ್ರಿಯವಾದರೂ ಸತ್ಯದ ಕಹಿಯನ್ನು ತಿಳಿಸಿದ್ದಾರೆ.

ನಂತರ ೧೯೬೯ ಜನವರಿ ೧೭ ರಂದು ಗುದ್ಲೆಪ್ಪನವರು ವಿಧಾನ ಪರಿಷತ್ತಿನಲ್ಲಿ ಮಾಡಿದ ಭಾಷಣದಲ್ಲಿ ಮಹಾಜನ ವರದಿ ಜಾರಿಗೊಳಿಸುವಲ್ಲಿ ಕೇಂದ್ರ ಸರಕಾರ ತೋರಿದ ವಿಳಂಬ ನೀತಿಯನ್ನು ವಿರೋಧಿಸಿ ಮಾತನಾಡಿದರು. ಅದರ ಅವತರಣಿಕೆಗಳು ಹೀಗಿವೆ :

" ....ಮಹಾಜನ ವರದಿಯ ನಿರ್ಣಯವನ್ನು ನಮ್ಮ ಸರಕಾರ ಮತ್ತು ನಮ್ಮ ಸಂಸ್ಥೆ ಈ ಎರಡೂ ಸಂಸ್ಥೆಗಳೂ ಬಹಳ ಖಚಿತವಾದ ರೀತಿಯಲ್ಲಿ ಬೆಂಬಲಿಸಿವೆ. ಮತ್ತು ಭಾರತ ಸರಕಾರದ ನೀತಿಯನ್ನು ಸಾಕಷ್ಟು ರೀತಿಯಿಂದ ಖಂಡನೆ ಮಾಡಿದ್ದೂ ಆಗಿದೆ. ಕಾರಣವೇನೆಂದರೆ ಭಾರತ ಸರಕಾರದ ವಿಳಂಬ ನೀತಿ. ಯಾವುದೇ ಒಂದು ಕಾರ್ಯವನ್ನು

ಮನಸ್ಸಿಲ್ಲದೆ ಮಾಡಬೇಕಾದರೆ ಅಥವಾ ಮುಂದೆ ಹಾಕಬೇಕಾದರೆ ಇಂತಹ ಕಮೀಶನ್ನುಗಳನ್ನು ನೇಮಿಸುವುದೇ ಒಂದು ಮಾರ್ಗವೆಂದು ತಿಳಿದುಕೊಂಡಿದ್ದಾರೆಂಬುದು ತಮಗೆಲ್ಲರಿಗೂ ಗೊತ್ತಿರುವಂತೆ ಕಾಣುತ್ತದೆ.... ಈ ವರದಿಯನ್ನು ಎಲ್ಲರೂ ಒಪ್ಪಬೇಕು. ಪುನಃ ಪುನಃ ಈ ಪ್ರಶ್ನೆಯನ್ನು ಎತ್ತುವುದರಿಂದ ಭಾರತ ರಾಷ್ಟ್ರದೊಳಗೆ ನೆಮ್ಮದಿ ಉಳಿಯುವುದಿಲ್ಲ. ಅಭಿವೃದ್ಧಿ ಕಾರ್ಯಗಳು ಹಾಗೂ ಭಾರತ ಕಟ್ಟುವಂಥ ಕೆಲಸ ಹಿಂದುಳಿಯುತ್ತದೆ. ಜನತೆಯೊಳಗೆ ಅಸಂತುಷ್ಟಿ ಅವಿಶ್ವಾಸ ಹೆಚ್ಚಾಗಿ ನೆಮ್ಮದಿ ಉಳಿಯುವುದಿಲ್ಲ ಎಂಬ ಮಾತನ್ನು ಕರ್ನಾಟಕದ ಜನತೆ ಘಂಟಾಘೋಷವಾಗಿ ಹೇಳಿದುದು ಅಷ್ಟೇ ಅಲ್ಲ. ಲಕ್ಷಾಂತರ ಹೆಣ್ಣು ಮಕ್ಕಳು. ಗಂಡು ಮಕ್ಕಳು. ಸಣ್ಣ ಮಕ್ಕಳು. ಮುಪ್ಪಿನ ಮುದುಕರೋಪಾದಿಯಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಶಾಂತಿಯಿಂದ ಅಹಿಂಸಾ ಮಾರ್ಗದಲ್ಲಿ ಸತ್ಯಾಗ್ರಹವನ್ನು ಆಚರಿಸಿದರು. " ೧೮

ಮಹಾಜನ ಅವರು ಮಹಾರಾಷ್ಟ್ರದ ಕನ್ನಡ ಭಾಗಗಳಲ್ಲಿ ಸಮೀಕ್ಷೆ ಕೈಕೊಂಡಾಗ ಅಲ್ಲಿಯ ಕನ್ನಡಿಗರಿಗೆ ಮರಾಠಿಗರು ಕೊಟ್ಟ ಚಿತ್ರಂಸೆ. ಬೆದರಿಕೆಗಳನ್ನು ಹಾಗೂ ಅಧಿಕಾರಿಗಳಿಗೆ ಆಮಿಷ ತೋರಿಸಿದ್ದನ್ನು ಜೊತೆಗೆ ತಮ್ಮನ್ನೂ ಪೊಲೀಸರು ವಿಚಾರಿಸಿದ್ದನ್ನು ಗುದ್ಲೆಪ್ಪನವರು ವಿಧಾನ ಪರಿಷತ್ತಿನ ಸದಸ್ಯರುಗಳ ಮುಂದಿಟ್ಟರು :

" ನಮ್ಮ ಕರ್ನಾಟಕದ ಜನರು ಯಾವಾಗಲೂ ಬಹಳ ಶಿಸ್ತಿನ ಜನರು. ಯಾವುದೇ ಒಂದು ಕಾರ್ಯವನ್ನು ರಾಷ್ಟ್ರದ ಹಿರಿಯ ನಾಯಕರು ಮಾಡಿದ್ದಾರೋ ಅದನ್ನು ಈ ಇಡೀ ಕರ್ನಾಟಕದ ಮೂರು ಕೋಟಿ ಜನತೆ ಬಹಳ ಶಿಸ್ತಿನಿಂದ ಒಪ್ಪಿದ್ದಾರೆ. ಈ ಮಹಾಜನ ಆಯೋಗದವರು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸಾಕ್ಷಿಯನ್ನು ಸಂಗ್ರಹಣೆ ಮಾಡಲು ಹೋದ ಕಾಲಕ್ಕೆ ಸಂಪೂರ್ಣ ಸಹಕಾರ ಕೊಟ್ಟಿದ್ದಾರೆ. ಹಾಗೆ ಕೊಡುವ ಕಾಲಕ್ಕೆ ಮಹಾರಾಷ್ಟ್ರ ಸರಕಾರದವರು ಮುಖ್ಯವಾಗಿ ಸೊಲ್ಲಾಪುರದ ಕಡೆಗಳಲ್ಲಿ ಕೊಟ್ಟಂತಹ ಚಿತ್ರಹಿಂಸೆ. ಅದನ್ನು ನೋಡಿದರೆ ಬಹಳ ವ್ಯಥೆ ಆಗುತ್ತದೆ. ಅಲ್ಲಿಯ ಕನ್ನಡಿಗರು ಕರ್ನಾಟಕದ ಭಾಗಕ್ಕೆ ಸೇರತಕ್ಕವರು ನ್ಯಾಯವಾದಂತಹ ಮಾತನ್ನಾಡಿ ನಾವು ಫಜಲಾಲಿ ಕಮೀಶನ್ ಬಂದ ಮೇಲೆ ಒಂದು ಗಟ್ಟಿ ಮನಸ್ಸು ಮಾಡಿ ಉಳಿದಿದ್ದೇವೆ. ಪುನಃ ನಾವು ಈ ಆಯೋಗದ ಮುಂದೆ ಧೈರ್ಯವಾಗಿ ಸತ್ಯವನ್ನು ಹೇಳುತ್ತೇವೆಂದು ಮುಂದೆ ಬಂದಾಗ. ಅಂಥವರಿಗೆ ಚಿತ್ರಹಿಂಸೆ ಕೊಟ್ಟಿದ್ದಾರೆ ಮತ್ತು ಜನರಿಗೆ ಬೆದರಿಕೆಯನ್ನು ಹಾಕಿದ್ದಾರೆ. ಅವರು ಟ್ರಕ್ಕಿನಲ್ಲಿ ಕೆಲವು ಬಡ ಜನರನ್ನು ಏನೂ ತಿಳಿವಳಿಕೆಯಿಲ್ಲದ ಜನರನ್ನು ಕುರಿಗಳಂತೆ ಹೇರಿಕೊಂಡು ಬಂದು. ಅವರ ಹತ್ತಿರ ನಾವು ಮಹಾರಾಷ್ಟ್ರದಲ್ಲಿರಬೇಕೆಂದು ಇಚ್ಛೆ ಪಡುವ ರೀತಿಯಲ್ಲಿ ಹೇಳುವಂತೆ ಮಾಡಿದ್ದಾರೆ. ಆ ಜನರಲ್ಲಿ ಕನ್ನಡ ಗೊತ್ತಿಲ್ಲದ ಜನರಿದ್ದಾರೆ. ಏನೂ ತಿಳಿಯದ ಜನರಿದ್ದಾರೆ. ಸೊಲ್ಲಾಪುರದಲ್ಲಿ ಸ್ವತಃ ಮಹಾಜನರವರೇ ಇವರೊಡನೆ. ' ಈ ಕುರಿಗಳನ್ನು ಹೇಗೆ ಹೇರಿಕೊಂಡು ಬಂದಿದ್ದೀರಿ ! ಇವರನ್ನು ಸುಮ್ಮನೆ ಹೇರಿಕೊಂಡು ಬಂದದ್ದೇ. ಅಥವಾ ಇವರನ್ನು ತಿರುಗಿ ಕಳಿಸುತ್ತೀರಾ ? ಇಲ್ಲ. ಇಲ್ಲಿಯೇ ಕೈ ಬಿಡುತ್ತೀರಾ ? ' ಎಂದು ಕೇಳಿದ್ದಾರೆ. ಈ ರೀತಿ ಮಹಾರಾಷ್ಟ್ರದವರು ಜನರನ್ನು ಹೇರಿಕೊಂಡು ಬಂದು. ನಾವು ಮಹಾರಾಷ್ಟ್ರಕ್ಕೆ ಸೇರಲು ಇಚ್ಛೆ ಪಡುತ್ತೇವೆಂದು ಹೇಳುವಂತೆ ಮಾಡಿದ್ದಾರೆ. ಯಾರು ತಿಳಿವಳಿಕೆಯಿಂದ ಕರ್ನಾಟಕಕ್ಕೆ ಹೋಗಬೇಕೆಂದು ಹೇಳುತ್ತಿದ್ದಾರೋ ಅವರಿಗೆ ಅನೇಕ ರೀತಿಯ ಬೆದರಿಕೆ ಹಾಕಿದಂತಹ. ಚಿತ್ರಹಿಂಸೆಯನ್ನು ಕೊಟ್ಟಂತಹ ನಿದರ್ಶನಗಳಿವೆ.

ದೊಡ್ಡ ದೊಡ್ಡ ಅಧಿಕಾರಿ ಅಲ್ಲಿ ಯಾರಿದ್ದಾರೆ ಅಂಥವರಿಗೆ ಇಂಥ ಇಂಥ ಅಧಿಕಾರ ಕೊಡುತ್ತೇವೆ. ಅವರಲ್ಲಿ ಏಕೆ ಸೇರಬೇಕು ಎಂದು ಹೇಳಿದ್ದಾರೆ. ಈ ರೀತಿ ಅವರು ಅಲ್ಲಿಯ ಕನ್ನಡಿಗರನ್ನು ಮಹಾರಾಷ್ಟ್ರದಲ್ಲಿ ಉಳಿಸುವಂತಹ ಪ್ರಯತ್ನವನ್ನೂ ಮಾಡಿದ್ದಾರೆ. ಅಲ್ಲಿ ಯಾರ್‍ಯಾರು ಕರ್ನಾಟಕದಿಂದ ಅಲ್ಲಿಯ ಮುಖ್ಯ ಜನರಿಗೆ ನಿಜ ಪರಿಸ್ಥಿತಿಯನ್ನು ಹೇಳಲು ಧೈರ್ಯಕೊಟ್ಟು ಸಂಘಟನೆ ಮಾಡಲು ಹೋಗಿದ್ದಾರೆ ಅವರಿಗೆ ಕಿರುಕುಳ ಕೊಟ್ಟಿದ್ದಾರೆ. ಸ್ವತಃ ನಾನೇ ಸೊಲ್ಲಾಪುರ ಅಕ್ಕಲಕೋಟೆಯ ಮೇಲೆ ಹಾಯ್ದು ಗುಲಬರ್ಗಕ್ಕೆ ಬಂದಾಗ ನನ್ನನ್ನೇ ಹೊರಗಡೆ ಹೋಗಲು ಬಿಡದೆ, ಪೋಲೀಸ ಠಾಣೆಗೆ ಒಯ್ದು, ನೀವು ಏಕೆ ಇಲ್ಲಿಗೆ ಬಂದಿದ್ದೀರಿ ? ಇಲ್ಲಿ ನಿಮಗೆ ಏನು ಕೆಲಸ, ಎಲ್ಲಿಂದ ಇಲ್ಲಿ ಬಂದಿದ್ದೀರಿ ಎಂಬುದನ್ನೆಲ್ಲ ಕೇಳಿ ಗದರಿಸಲಿಕ್ಕೆ ಸಹ ಅವರು ಹಿಂದೆ ಮುಂದೆ ನೋಡಲಿಲ್ಲ.... ಮಹಾಜನ ಅವರು ಯಾವುದು ಸತ್ಯ ಯಾವುದು ಅಸತ್ಯ, ಯಾವುದು ನ್ಯಾಯ ಯಾವುದು ಅನ್ಯಾಯ ಎಂಬ ಮಾತುಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು, ಪ್ರತ್ಯಕ್ಷವಾಗಿ ಪ್ರತಿ ಭಾಗಕ್ಕೂ ಹೋಗಿ ಅಲ್ಲಿಯ ವಿದ್ಯಮಾನಗಳನ್ನು ತಮ್ಮ ಸ್ವಂತ ಕಣ್ಣಿನಿಂದ ಕಂಡು ಅಲ್ಲಿಯ ಭೌಗೋಳಿಕ ಸ್ಥಿತಿ, ಐತಿಹಾಸಿಕ ಸ್ಥಿತಿಗಳನ್ನು ಅರಿತು, ಅಲ್ಲಿಯ ಜನರಿಗೆ ಭೇಟಿ ಕೊಟ್ಟು ಅವರ ಅಭಿಪ್ರಾಯಗಳನ್ನು ತಿಳಿದು, ಯಾವ ಜನರು ಎಲ್ಲಿರಬೇಕೆಂದು ನಿಶ್ಚಯಿಸಿ, ಯಾವ ಜನರು ಎಲ್ಲಿರಬೇಕೆಂದು ಇಚ್ಛೆ ಪಡುತ್ತಾರೆ, ಅವರ ಆಶೋತ್ತರಗಳೇನೆಂಬುದನ್ನೆಲ್ಲ ತಿಳಿದು ಜನರು ಎಲ್ಲಿ ಯಾವ ಕಡೆಯಲ್ಲಿ ಇದ್ದರೆ ಅವರ ಕಲ್ಯಾಣವಾಗುತ್ತದೆಂಬುದನ್ನೆಲ್ಲ ತಿಳಿದುಕೊಂಡು ಹತ್ತು ತಿಂಗಳ ಕಾಲ ವಿಶ್ರಾಂತಿ ಪಡೆಯದೇ ದುಡಿದು ಕೊನೆಗೆ ಒಂದು ಐತೀರ್ಪನ್ನು ಅದಕ್ಕೆ ಬೆಲೆ ಇರಬೇಕೆಂದು ನಿರ್ಭಯ ನಿರ್ದಾಕ್ಷಿಣ್ಯಗಳಿಂದ ಕೂಡಿದಂತಹ, ನ್ಯಾಯದಿಂದ ಕೂಡಿದಂತಹ, ಸತ್ಯದಿಂದ ಕೂಡಿದಂತಹ ವರದಿಯನ್ನು ಕೊಟ್ಟರು. ಇಂಥ ಒಂದು ವರದಿಯನ್ನು ಭಾರತ ಸರಕಾರಕ್ಕೆ ಒಪ್ಪಿಸಿದರು. ಇಷ್ಟೆಲ್ಲ ಮಾಡಿ ಕೊನೆಗೆ ಈ ಮಹಾಪುರುಷರು ಇದಕ್ಕಾಗಿ ಪಟ್ಟ ಕಷ್ಟದಿಂದ, ಶ್ರಮದಿಂದ, ತಮ್ಮ ಅಸುವನ್ನು ಕೂಡ ನೀಗಿದರು. ಇವರಿಗೆ ನಾವು ಎಷ್ಟು ಚಿರಋಣಿಯಾದರೂ ಸಾಲದು." ೧೯

ಮಹಾಜನ ವರದಿಯನ್ನು ಜಾರಿಗೊಳಿಸಬೇಕು. ಇಲ್ಲದಿದ್ದರೆ ಗಡಿಭಾಗದಲ್ಲಿ ಅಭಿವೃದ್ಧಿ ಕಾರ್ಯಗಳು ಹಿಂದೆ ಬೀಳುತ್ತವೆ ಎಂಬ ವಿಚಾರವನ್ನು ಗುದ್ಲೆಪ್ಪನವರು ವ್ಯಕ್ತಪಡಿಸುತ್ತಾರೆ :

" ಇಷ್ಟು ಕಷ್ಟದಿಂದ ಇಷ್ಟು ಶ್ರಮದಿಂದ ಕೊಟ್ಟ ಐತೀರ್ಪನ್ನು ಭಾರತ ಸರಕಾರದವರು ಒಂದೂ ಕಾಲು ವರ್ಷದವರೆಗೆ ತಮ್ಮ ಹತ್ತಿರ ಇಟ್ಟುಕೊಂಡು ಅದರ ಸ್ಥಿತಿಗತಿಯೇನು, ಮುಂದೆ ಏನು ಮಾಡಬೇಕೆಂಬುದನ್ನು ಕೂಡ ಹೇಳದಿರುವ ಈ ಸ್ಥಿತಿ ಭಾರತ ಸರ್ಕಾರಕ್ಕೆ ಬಂದಿದೆ.... ಯಾವಾಗ ಮಹಾರಾಷ್ಟ್ರದವರಿಗೆ ತಮಗೆ ಬೇಕಾದಂಥ ಬೆಳಗಾವಿ ನಗರ ಅಥವಾ ಕಾರವಾರ ಜಿಲ್ಲೆ ಇತ್ಯಾದಿ ಮುಖ್ಯ ಸ್ಥಳಗಳು ಬರಲಿಲ್ಲ, ತಮ್ಮ ಕಡೆಗೆ ಇದ್ದಂಥ ಅಕ್ಕಲಕೋಟೆ, ಜತ್ತ ಮುಂತಾದ ಭಾಗಗಳು ಕರ್ನಾಟಕಕ್ಕೆ ಬರಬೇಕೆಂದಾಯಿತು. ಆ ರೀತಿಯಾದ ಮೇಲೆ ಅವರಿಗೆ ಒಂದು ದೊಡ್ಡ ಕೊಡಲಿ ಪೆಟ್ಟು ಆದಂತಾಯಿತು. ಮಹಾರಾಷ್ಟ್ರದಲ್ಲಿದ್ದಂತಹ ನಾಯಕರಿಗೆ ದೊಡ್ಡ ನಿರಾಶೆಯುಂಟಾಯಿತು. ....ಆಯೋಗದ ವರದಿಯ ಪ್ರತಿಗಳೂ ಕೂಡ ತೀವ್ರವಾಗಿ ನಮ್ಮ ಕೈಗೆ ಸಿಕ್ಕದಂತೆ ಸಾರ್ವಜನಿಕರ ಕೈಗೆ ಸಿಕ್ಕದಂತೆ ಮಾಡುವಂಥ ಕೆಲಸದಲ್ಲಿ ಅವರು ತೊಡಗಿದರು. ಅದನ್ನು ಮುಂದಕ್ಕೆ ಹಾಕುವಂತಹ ಕೆಲಸದಲ್ಲಿ ತೊಡಗಿದರು.... ಈ ಆಯೋಗದ ವರದಿಯನ್ನು

ಕಳೆದ ೧೫ ತಿಂಗಳುಗಳಿಂದ ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಕೇಂದ್ರ ಸರಕಾರದವರು ಅದನ್ನು ಒಂದು ಮೂಲೆಗೆ ಒಗೆದಿದ್ದಾರೆ.... ಮಹಾಜನ ಆಯೋಗದ ಶಿಫಾರಸುಗಳನ್ನು ಐತೀರ್ಪು ಎಂದು ಪರಿಗಣಿಸಬೇಕೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ರೀತಿ ಪರಿಗಣಿಸದಿದ್ದರೆ ಸಿಪ್ಪಾಣಿ. ಖಾನಾಪುರ ತಾಲೂಕುಗಳು ಮಹಾರಾಷ್ಟ್ರಕ್ಕೆ ಹೋಗುತ್ತವೆಂದು ನಮ್ಮ ಸರಕಾರದವರು ಆ ಭಾಗಗಳಲ್ಲಿ ಏನೂ ಕೆಲಸಗಳನ್ನು ಮಾಡಿಸದೇ ಇರಬಹುದು. ಅಕ್ಕಲಕೋಟೆ ಮತ್ತು ಜತ್ತ ತಾಲೂಕುಗಳು ಮೈಸೂರಿಗೆ ಹೋಗುತ್ತವೆಂದು ಮಹಾರಾಷ್ಟ್ರದವರು ಆ ಭಾಗಗಳಲ್ಲಿ ಯಾವ ಕೆಲಸಗಳನ್ನೂ ಮಾಡಿಸದೇ ಇರಬಹುದು. ಕಾಸರಗೋಡು ಮೈಸೂರಿಗೆ ಹೋಗುತ್ತದೆಂದು ಕೇರಳದವರು ಅಲ್ಲಿ ಯಾವ ಕೆಲಸಗಳನ್ನೂ ಮಾಡಿಸದಿರಬಹುದು. ಇಂತಹ ಒಂದು ಪರಿಸ್ಥಿತಿ ಇರುವುದರಿಂದ ಈ ತೀರ್ಪಿನ ಬಗ್ಗೆ ಒಮ್ಮೆ ಸ್ಪಷ್ಟವಾಗಬೇಕಾಗಿದೆ.... ನಮ್ಮ ಸರಕಾರದವರು ಕೇಂದ್ರ ಸರಕಾರದವರನ್ನು ಇದಕ್ಕೆ ಒಪ್ಪಿಕೊಳ್ಳಬೇಕೆಂದು ಒತ್ತಾಯ ಮಾಡಬೇಕು." ೨೦ .

ಕರ್ನಾಟಕದ ಗಡಿ ಸಮಸ್ಯೆಗಳ ಸಲುವಾಗಿ ನೇಮಕಗೊಂಡ ಮಹಾಜನ ಆಯೋಗದ ವರದಿಯ ಶಿಫಾರಸುಗಳ ಜಾರಿಗೆ ವಿಳಂಬವಾದಾಗ ಗುದ್ಲೆಪ್ಪನವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ತಮ್ಮ ಈ ಭಾಷಣದಲ್ಲಿ ಮಹಾಜನ ಆಯೋಗದ ತೀರ್ಪಿನ ನಿಷ್ಪಕ್ಷಪಾತತೆಯನ್ನು ಎತ್ತಿ ತೋರಿಸಿದ್ದಾರೆ. ಮರಾಠಿಗರ ದೌರ್ಜನ್ಯದ ಚಿತ್ರಣವನ್ನು ಜನತೆಯ ಮುಂದಿಟ್ಟಿದ್ದಾರೆ. ವರದಿಯ ಶಿಫಾರಸುಗಳನ್ನು ಜಾರಿಗೊಳಿಸುವಲ್ಲಿ ವಿಳಂಬಿಸುತ್ತಿರುವ ಕೇಂದ್ರ ಸರಕಾರದ ಡೋಲಾಯಮಾನ ಮನೋಭಾವದ ಸ್ಥಿತಿಯನ್ನು ಟೀಕಿಸಿದ್ದಾರೆ. ಈ ಆಯೋಗದ ಶಿಫಾರಸುಗಳು ಕಾರ್ಯರೂಪಕ್ಕೆ ಬರದೇ ಇದ್ದಲ್ಲಿ ಗಡಿ ಭಾಗದ ಜನತೆ ಯಾವ ರೀತಿಯಿಂದ ಕಷ್ಟವನ್ನು ಅನುಭವಿಸಬೇಕಾಗುತ್ತದೆ ಮತ್ತು ಆ ಪ್ರದೇಶಗಳ ಅಭಿವೃದ್ಧಿ ಹೇಗೆ ಕುಂಠಿತವಾಗುತ್ತದೆನ್ನುವದನ್ನು ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಗುದ್ಲೆಪ್ಪನವರ ಜನತಾಪರ ಮತ್ತು ಅಭಿವೃದ್ಧಿಪರ ಕಾಳಜಿಯನ್ನು ಕಾಣಬಹುದು. ಪ್ರಾದೇಶಿಕ ಅಭಿವೃದ್ಧಿ ಕಡೆಗಿರುವ ಅವರ ದೃಷ್ಟಿಕೋನ ಭಾಷಾತೀತವಾಗಿದೆ ಮತ್ತು ಜನತಾ ಪರವಾಗಿದೆ. ಒಬ್ಬ ನಾಯಕ ಸಮಸ್ಯೆಗಳನ್ನು ಹೇಗೆ ತುಲನಾತ್ಮಕವಾಗಿ ನೋಡುತ್ತಾನೆನ್ನುವುದನ್ನು ಗುದ್ಲೆಪ್ಪನವರ ಈ ಭಾಷಣ ವ್ಯಕ್ತಪಡಿಸುತ್ತದೆ.

ಬರಗಾಲ :

ರಾಜ್ಯದಲ್ಲಿ ಉಂಟಾಗಿದ್ದ ಬರಗಾಲ ಪರಿಸ್ಥಿತಿಯ ಬಗ್ಗೆ ೧೯೬೮ ಸಪ್ಟಂಬರ ೬ ರಂದು ಗುದ್ಲೆಪ್ಪನವರು ವಿಧಾನ ಪರಿಷತ್ತಿನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. ಅದರ ಅವತರಣಿಕೆಗಳು ಹೀಗಿವೆ :

" ....ನಮ್ಮ ರಾಜ್ಯದೊಳಗೆ ೧೯೬೫. ೧೯೬೬ ಮತ್ತು ೧೯೬೭ ಈ ಮೂರು ವರ್ಷಗಳು ಮಳೆಯಿಲ್ಲದ ಅಭಾವ ಪರಿಸ್ಥಿತಿ ಸಾಕಷ್ಟು ರೀತಿಯಾಗಿ ಕಾಣಿಸಿಕೊಂಡು ಮತ್ತೆ ನಾಲ್ಕನೇ ವರ್ಷವೂ ಕೂಡ ಕಷ್ಟ ಪರಿಸ್ಥಿತಿಯಾಗಿದೆ..... ಇನ್ನು ದನಕರುಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ....ಮನುಷ್ಯರಿಗೆ ಹೇಗಾದರೂ ಮಾಡಿ ಆಹಾರ ಧಾನ್ಯಗಳನ್ನು ಕೊಡಬಹುದು. ನೀರನ್ನು ಎಲ್ಲಿಂದಾದರೂ ತರಿಸಬಹುದು. ಹೇಗಾದರೂ ಮಾಡಿ ಬೇರೆ ಜಿಲ್ಲೆಗಳಿಂದ ಧಾನ್ಯಗಳನ್ನು

ತರಿಸಬಹುದು. ಆದರೆ ರೈತನ ದನಕರುಗಳ ಪರಿಸ್ಥಿತಿಯನ್ನು ನೋಡಿದರೆ ನಿಜವಾಗಿ ಬಹಳ ಕನಿಕರ ಪಡಬೇಕಾಗಿದೆ. ದನಕರುಗಳಿಗೆ ಬೇಕಾಗುವಂಥ ಹೊಟ್ಟು, ಸೊಪ್ಪು, ಮೇವು ಇವುಗಳನ್ನು ದೊರಕಿಸುವುದು ಬಹಳ ಕಷ್ಟದಾಯಕವಾಗಿದೆ. ಅದಕ್ಕಾಗಿ ದನಕರುಗಳಿಗೆ ಬೇಕಾಗುವಂಥ ಮೇವನ್ನು ಯಾವ ಒಂದು ಕಡೆ ರಾಜ್ಯದಲ್ಲಾಗಲಿ, ಹೊರಗಾಗಲಿ ಕಂಡರೆ ಅದನ್ನು ಇಲ್ಲಿಗೆ ಕೂಡಲೇ ತರಿಸುವ ವ್ಯವಸ್ಥೆ ಪ್ರಥಮವಾಗಿ ಆಗಬೇಕು.

ನಮ್ಮ ರಾಜ್ಯದೊಳಗೆ ೧೯ ಜಿಲ್ಲೆಗಳಿವೆ. ೨೮ ಜನ ಮಂತ್ರಿಗಳಿದ್ದಾರೆ. ೯ ಜನ ಮಂತ್ರಿಗಳು ಹೆಚ್ಚಾಗಿದ್ದಾರೆ. ಒಬ್ಬೊಬ್ಬ ಮಂತ್ರಿಗಳು ಒಂದೊಂದು ಜಿಲ್ಲೆಯನ್ನು ವಹಿಸಿಕೊಂಡು ಬರಗಾಲ ದೂರ ಆಗುವವರೆಗೂ ವಾರಕ್ಕೆ ಒಂದೆರಡು ದಿವಸ ಬೆಂಗಳೂರಿಗೆ ಬಂದು ಸೆಕ್ರೆಟರಿಯೇಟ್ ಕೆಲಸ ನೋಡಿಕೊಂಡು ಉಳಿದ ನಾಲ್ಕು - ಐದು ದಿವಸ ಆಯಾ ಜಿಲ್ಲೆಗಳಲ್ಲೆ ಇದ್ದುಕೊಂಡು ಪ್ರತ್ಯಕ್ಷವಾಗಿ ಅಧಿಕಾರಿಗಳಿಗೆ ಸಲಹೆ ನೀಡಿ ಯಾವ ಯಾವ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂಬುದನ್ನು ಮಂತ್ರಿಗಳೇ ನಿಂತು ಮಾಡಿಸಿದರೆ ಕೆಲಸಗಳು ಆಗುತ್ತವೆ. ಇಲ್ಲದೇ ಹೋದರೆ ಬೇಕಾದಷ್ಟು ಹುಕುಂಗಳನ್ನು ಸರಕಾರ ಕಳುಹಿಸಿದರೂ ಕೆಲಸಗಳು ಆಗುವುದಿಲ್ಲ.... ಅಧಿಕಾರಿಗಳು ಜನಸೇವಕರೆಂದು ತಿಳಿದು ಕಾರ್ಯ ಮಾಡಬೇಕು. ಬರಗಾಲ ಕಾಮಗಾರಿ ಪ್ರಾರಂಭಿಸಬೇಕು. ಧಾನ್ಯವನ್ನು ಕೊಡುವಂಥ ಅಂಗಡಿಗಳನ್ನು ಪ್ರಾರಂಭ ಮಾಡಬೇಕು..... ಮಂತ್ರಿಗಳು ಬೆಂಗಳೂರಿನಲ್ಲಿ ಬಂಗಲೆಗಳಲ್ಲಿ ಕೂಡದೆ ಆಯಾ ಜಿಲ್ಲಾ ಸ್ಥಳಗಳಿಗೆ ಹೋಗಿ ಕೆಲಸಗಳನ್ನು ಮಾಡದೇ ಹೋದರೆ ಜನಗಳಿಗೆ ಕೂಲಿ ಕೆಲಸ ಸಿಕ್ಕುವುದಿಲ್ಲ. ಅವರಿಗೆ ತಿನ್ನುವುದಕ್ಕೆ ಆಹಾರ ಸಿಕ್ಕುವುದಿಲ್ಲ ಎನ್ನುವ ಮಾತನ್ನು ತಿಳಿದುಕೊಳ್ಳಬೇಕು.... ಸರಕಾರದವರು ಅಮೆರಿಕಾದಿಂದ ಅಲ್ಲಿ ಹಂದಿಗಳಿಗೂ ಹಾಕದೇ ಇರುವಂಥ ಕೆಂಪು ಜೋಳವನ್ನು ತರಿಸಿ ಜನಗಳಿಗೆ ಕೊಟ್ಟಿದ್ದಾರೆ. ಅದನ್ನು ಜನಗಳಿಗೆ ತಿನ್ನುವುದಕ್ಕೆ ಆಗುವುದಿಲ್ಲ. ಒಳ್ಳೆಯ ಆಹಾರವನ್ನು ಜನರಿಗೆ ಒದಗಿಸಬೇಕು.

ಅರಣ್ಯ ಸಂರಕ್ಷಣೆ ಹಾಗೂ ಅಭಿವೃದ್ಧಿ ಮಾಡಬೇಕು. ಹಳ್ಳಿಗಳಲ್ಲಿ ಅನೇಕ ಸಣ್ಣಪುಟ್ಟ ಕೆರೆಗಳಿವೆ. ಅವುಗಳನ್ನು ದುರಸ್ತಿ ಮಾಡಿ ಮಳೆಯಾದಾಗ ನೀರು ಸಂಗ್ರಹಿಸಿ ಚಿಕ್ಕ ನೀರಾವರಿ ಮಾಡಬೇಕು. ವನ ಮಹೋತ್ಸವ ಎಂದು ಹೋಗಿ ಬರೀ ಒಣ ಮಹೋತ್ಸವ ಎಂದಾಗಿದೆ. ಬರಿ ಗಿಡ ನೆಟ್ಟರೆ ಸಾಲದು ಅವುಗಳನ್ನು ಸಂರಕ್ಷಿಸಿ ಪೋಷಿಸಬೇಕು. ಸಣ್ಣ ಹಿಡುವಳಿದಾರರಿಗೆ ಎರಡು ಮೂರು ಎಕರೆಗಳಷ್ಟು ಜಮೀನು ಇದ್ದರೂ ಅಲ್ಲಿ ಒಂದು ಬಾವಿ ತೆಗೆಸಿಕೊಟ್ಟರೆ ನಾಲ್ಕಾರು ರೈತರು ಕೂಡಿಕೊಂಡು ವ್ಯವಸಾಯ ಮಾಡಲು ಅನುಕೂಲವಾಗುತ್ತದೆ. ದೇಶದಲ್ಲಿನ ಗ್ರಾಮದ ಪರಿಸ್ಥಿತಿ ಸ್ವಲ್ಪವಾದರೂ ಸುಧಾರಿಸಲು ಅನುಕೂಲವಾಗುತ್ತದೆ." [೨೧]

ನೊಂದವರ ಬಗೆಗಿರುವ ಅನುಕಂಪ ಮತ್ತು ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಸಕಾರಾತ್ಮಕ ಸಲಹೆ ಸೂಚನೆಗಳನ್ನು ಗುದ್ಲೆಪ್ಪನವರ ಈ ಭಾಷಣದಲ್ಲಿ ಕಾಣಬಹುದು. ಅವರ ಭಾಷಣ ಕೇವಲ ಟೀಕೆ ಟಿಪ್ಪಣಿಗಳಿಗಷ್ಟೇ ಮೀಸಲಾಗಿರಲಿಲ್ಲ. ಸಕಾರಾತ್ಮಕ ಹಾಗೂ ರಚನಾತ್ಮಕ ಸಲಹೆ ಸೂಚನೆಗಳನ್ನು ಸರಕಾರದ ಮುಂದಿಟ್ಟಿರುವದು ಕಂಡುಬರುತ್ತದೆ. ಒಬ್ಬ ಜನನಾಯಕ ಜನರ ಸಮಸ್ಯೆಗಳನ್ನಷ್ಟೇ ವಿವರಿಸಿದರೆ ಸಾಲದು. ಅವುಗಳಿಗೆ ಪರಿಹಾರಗಳನ್ನು ಸೂಚಿಸಬೇಕಾಗುತ್ತದೆ. ಇವೆರಡೂ ಗುಣಗಳನ್ನು ಗುದ್ಲೆಪ್ಪನವರಲ್ಲಿ ಕಾಣಬಹುದು.

ವೇತನ ಆಯೋಗದ ವರದಿ :

ನ್ಯಾಯಮೂರ್ತಿ ಟಿ. ಕೆ. ತುಕೋಳ ಅಧ್ಯಕ್ಷತೆಯಲ್ಲಿ ಸಲ್ಲಿಸಿದ ಸರಕಾರಿ ನೌಕರರ ವೇತನ ಆಯೋಗದ ವರದಿಯ ಬಗ್ಗೆ ೧೯೬೯ ಜನವರಿ ೨೮ ರಂದು ಗುದ್ಲೆಪ್ಪನವರು ವಿಧಾನ ಪರಿಷತ್ತಿನ ಚರ್ಚೆಯಲ್ಲಿ ಪಾಲ್ಗೊಂಡು ಭಾಷಣ ಮಾಡಿದರು. ಆ ಭಾಷಣದಲ್ಲಿ ಕೆಳವರ್ಗದ ನೌಕರರ ವೇತನವನ್ನು ಸ್ವಲ್ಪವಾದರೂ ಹೆಚ್ಚಿಸಿ ಸಂಪನ್ಮೂಲ ಸಂಗ್ರಹಿಸುವ ಸಲುವಾಗಿ ಜನಸಾಮಾನ್ಯರ ಮೇಲೆ ಕರಭಾರ ಹಾಕಬಾರದೆಂದು ಹೇಳಿದರು. ಇದು ಗುದ್ಲೆಪ್ಪನವರು ಜನಸಾಮಾನ್ಯರ ಬಗ್ಗೆ ಹೊಂದಿದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಆ ಭಾಷಣದ ಅವತರಣಿಕೆಗಳು ಹೀಗಿವೆ :

" ....ವೇತನ ಆಯೋಗದ ಶಿಫಾರಸುಗಳನ್ನು ನಮ್ಮ ರಾಜ್ಯ ಸರಕಾರ ಅನುಷ್ಠಾನಕ್ಕೆ ತರುವುದಾದರೆ ಎಷ್ಟು ಕೋಟಿ ರೂಪಾಯಿಗಳು ಬೇಕಾಗಬಹುದು ಎನ್ನುವುದನ್ನು ಯೋಚನೆ ಮಾಡಿದರೆ ಸರಕಾರದ ಕೈ ನಡುಗದೇ ಇರದು. ಹೊಸದಾಗಿ ೧೬ - ೧೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಪ್ರಸಂಗ ಬಂದಾಗ ಆ ಹಣ ಎಲ್ಲಿಂದ ತರಬೇಕು ಎಂಬ ಯೋಚನೆ ಸರಕಾರಕ್ಕೆ ಬರುವುದು ಸ್ವಾಭಾವಿಕ. ಈಗಾಗಲೇ ಕರಭಾರ ಮಿತಿಮೀರಿರುವಾಗ ಹೆಚ್ಚು ಭಾರ ಮತ್ತೆ ಹಾಕುವುದಕ್ಕೆ ಸಾಧ್ಯವಿಲ್ಲ. ಕರಭಾರ ಬೀಳುವುದು ಯಾವಾಗಲೂ ಸಾಮಾನ್ಯ ಮನುಷ್ಯನ ಮೇಲೆ. ಕರಭಾರ ಹೇರುವುದಾಗಿ ಹೇಳುವುದಾದರೆ ಹಿಂದೆ ಸರಕಾರಿ ನೌಕರರು ಆಂದೋಳನ ಹೂಡಿದಂತೆ ಕರಭಾರ ತೆರಬೇಕಾದ ಜನರು ಆಂದೋಳನ ಹೂಡಬೇಕಾದ ಪ್ರಸಂಗ ಬಂದೀತು ಎಂಬುದನ್ನು ಗಮನಿಸಬೇಕು. ಕೆಳದರ್ಜೆಯ ನೌಕರರ ವೇತನ ಏರಿಸಬೇಕಾದುದು ನ್ಯಾಯ. ....ನಮ್ಮದು ಬಡವರ ದೇಶ. ನಾವಿನ್ನೂ ಆರ್ಥಿಕ ದೃಷ್ಟಿಯಿಂದ ಅಷ್ಟೊಂದು ಮುಂದುವರಿದಿಲ್ಲ. ಸರ್ವೋದಯ ಸಮಾಜ ನಿರ್ಮಾಣ ನಮ್ಮ ರಾಷ್ಟ್ರದ ಗುರಿಯಾಗಿರುವಾಗ ಸರಕಾರಿ ನೌಕರಿಯಲ್ಲೂ ಬಡವ ಬಡವನಾಗಿಯೇ ಇರಬೇಕು. ಅರೆಹೊಟ್ಟೆ ತಿನ್ನಬೇಕು. ಅವನಿಗೆ ಎರಡು ಅಂಗಿ ಕೂಡ ಇರಬಾರದು. ಯಾರು ಠೀವಿಯಲ್ಲಿ ಶಿಸ್ತಿನಲ್ಲಿ ಇರುವರೋ ಅವರುಗಳ ಠೀವಿ. ಸೊಬಗು ಹೆಚ್ಚಬೇಕು ಎಂದು ಹೇಳುವುದು ಧರ್ಮವಲ್ಲ..... " ೨೨

ಅನವಶ್ಯಕವಾದ ಹುದ್ದೆಗಳನ್ನು ರದ್ದು ಮಾಡಿ ಉಳಿತಾಯವಾದ ಹಣವನ್ನು ಕೆಳವರ್ಗದ ನೌಕರರ ವೇತನದಲ್ಲಿ ಸ್ವಲ್ಪವಾದರೂ ಹೆಚ್ಚಿಸಲು ಬಳಸಬೇಕೆಂಬ ವಿಚಾರವನ್ನು ಗುದ್ಲೆಪ್ಪನವರು ವ್ಯಕ್ತಪಡಿಸುತ್ತಾರೆ :

" ದೊಡ್ಡ ದೊಡ್ಡ ಅಧಿಕಾರಿಗಳು ಕಾರಿನಲ್ಲಿ ಹೋಗುತ್ತಾ ಇರುತ್ತಾರೆ. ಅವರು ಯಾವ ಕಾಗದಪತ್ರಗಳನ್ನೂ ತೆಗೆದುಕೊಂಡು ಹೋಗುವದಿಲ್ಲ.. ಹಾಗಿದ್ದು ಅವರಿಗೆ ಕೈಗೆ ಒಬ್ಬರು ಕಾಲಿಗೆ ಒಬ್ಬರು ಸೇವಕರನ್ನು ಕೊಡುವಂತಹ ಒಂದು ವ್ಯವಸ್ಥೆ ಏನಿದೆ. ಇದು ಇಂಗ್ಲಂಡ ದೇಶದಲ್ಲೂ ಇಲ್ಲ. ಅಮೆರಿಕಾ ದೇಶದಲ್ಲೂ ಇಲ್ಲ. ಅಷ್ಟೇ ಅಲ್ಲ ಮತ್ತಾವ ದೇಶದಲ್ಲೂ ಇಲ್ಲ. ನಮ್ಮ ದೇಶದಲ್ಲಿ ಈ ನವಾಬಶಾಹಿ ಇನ್ನೂ ಇದೆ. ಪೂರ್ಣ ಸ್ವರಾಜ್ಯ ಬಂದ ಮೇಲೂ ಸಹ ಈ ನೌಕರರ ಸಂಖ್ಯೆಯನ್ನು ಬೆಳೆಸಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೇವೆ. ಅತ್ಯವಶ್ಯಕವಾದಂತಹ ಕೆಲವೊಂದು ನೌಕರರನ್ನು ಬಿಟ್ಟು ಉಳಿದ ನೌಕರರನ್ನು ಕಡಿಮೆ ಮಾಡಲಿಕ್ಕೂ ಸಹ ಬರುತ್ತದೆ..... ಯಾರಿಗೆ ಮಾಹೆಯಾನ ಪಗಾರ ೨೦೦ - ೩೦೦ ರೂಪಾಯಿಗಳ ಒಳಗಡೆ ಇರುತ್ತದೋ ಅಂಥವರ ಬಗ್ಗೆ ವರದಿಯಲ್ಲಿ

ಮಾಡಿರತಕ್ಕ ಶಿಫಾರಸುಗಳು ಏನಿವೆ ಅದಕ್ಕಿಂತಲೂ ಸ್ವಲ್ಪ ಇನ್ನೂ ಹೆಚ್ಚಿಗೆ ಆದರೂ ಚಿಂತೆಯಿಲ್ಲ. ಅದರಿಂದ ಸರ್ಕಾರದವರ ಮೇಲೆ ಒಂದು ಹೆಚ್ಚಿನ ಭಾರ ಬಿದ್ದಾಗ್ಗೂ ಅದನ್ನು ಕೊಟ್ಟು. ಸಂಬಳಗಳನ್ನು ಹೆಚ್ಚಿಸುವ ಕಾರ್ಯವನ್ನು ಅಲ್ಲಿಗೇ ನಿಲ್ಲಿಸಿ. ಅಲ್ಲಿ ಸರ್ಕಾರದವರ ಮೇಲೆ ಬೀಳತಕ್ಕ ಆ ಹೆಚ್ಚಿನ ಭಾರವೇನಿದೆ ಅದನ್ನು ಸರಿದೂಗಿಸಲು ಹಾಲಿ ಸರ್ಕಾರದಲ್ಲಿ ಅನವಶ್ಯಕವಾಗಿರತಕ್ಕ ಅನೇಕ ಹುದ್ದೆಗಳೇನಿವೆ ಅವುಗಳನ್ನು ರದ್ದು ಮಾಡಿ. ಅಲ್ಲಿ ಉಳಿತಾಯವಾಗತಕ್ಕ ಹಣವನ್ನು ಅದಕ್ಕೆ ಸರಿದೂಗಿಸಬಹುದು." ೨೩

ಗುದ್ಲೆಪ್ಪನವರು ವಿಧಾನ ಪರಿಷತ್ತಿನ ಸದಸ್ಯರಾಗಿ ಮಾಡಿದ ಭಾಷಣಗಳಲ್ಲಿ ವಿಷಯದ ಆಳವಾದ ಅಧ್ಯಯನ. ಪಕ್ಷಾತೀತ ಮನೋಭಾವನೆ ಹಾಗೂ ಜನಸಾಮಾನ್ಯರ ಬಗೆಗಿನ ಕಳಕಳಿ ವ್ಯಕ್ತವಾಗುತ್ತಿದ್ದವು. ನಾಡು ಮತ್ತು ನುಡಿಯ ಪ್ರಶ್ನೆ ಬಂದಾಗ ನಿಷ್ಠುರವಾಗಿ ಅಷ್ಟೇ ಖಚಿತವಾಗಿ ಮಾತನಾಡುವ ಸ್ವಭಾವ ಅವರದಾಗಿತ್ತು. ಅವರ ವಾಕ್ ಶೈಲಿ ಮತ್ತು ವಿಷಯವನ್ನು ಮಂಡಿಸುವ ರೀತಿ ಪರಿಣಾಮಕಾರಿಯಾಗಿರುತ್ತಿದ್ದವು. ಇದರಿಂದ ಗುದ್ಲೆಪ್ಪನವರು ಒಬ್ಬ ಸಮರ್ಥ ಸಂಸದೀಯ ಪಟು ಎಂಬುದು ವ್ಯಕ್ತವಾಗುತ್ತದೆ.

ಸಭಾಪತಿಗಳಾಗಿ ಕಾರ್ಯ ನಿರ್ವಹಣೆ

ವಿಧಾನ ಪರಿಷತ್ತಿನ ಸಭಾಪತಿ ಸ್ಥಾನಕ್ಕೆ ೧೯೬೨ ಜುಲೈ ೩ ರಂದು ನಡೆದ ಚುನಾವಣೆಯಲ್ಲಿ ಗುದ್ಲೆಪ್ಪ ಹಳ್ಳಿಕೇರಿ ಅವರು ಸರ್ವಾನುಮತದಿಂದ ಆಯ್ಕೆಯಾದರು. ಅವರ ಹೆಸರನ್ನು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಸೂಚಿಸಿದರು. ಗೊರೂರು ರಾಮಸ್ವಾಮಿ ಅಯ್ಯಂಗಾರ ಅನುಮೋದಿಸಿದರು. ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಹಾಗೂ ವಿರೋಧ ಪಕ್ಷದ ನಾಯಕ ಎಂ. ಪಿ. ಈಶ್ವರಪ್ಪನವರು ಗುದ್ಲೆಪ್ಪನವರನ್ನು ಸಭಾಪತಿ ಆಸನದತ್ತ ಕರೆದೊಯ್ದರು.

ಗುದ್ಲೆಪ್ಪನವರು ಸಭಾಪತಿಗಳಾಗಿ ಆಯ್ಕೆಯಾದ ಸಂದರ್ಭದಲ್ಲಿ ಅನೇಕ ಸದಸ್ಯರು ಅವರ ನಾಯಕತ್ವದ ವಿವಿಧ ಮುಖಗಳನ್ನು ವಿವರಿಸುತ್ತಾರೆ. ಅವುಗಳನ್ನು ಅರಿತುಕೊಳ್ಳಬೇಕಾದರೆ ಅಭಿನಂದನಾಪರ ಭಾಷಣಗಳ ಕೆಲವು ಅವತರಣಿಕೆಗಳನ್ನು ಇಲ್ಲಿ ಕೊಡುವುದು ಸೂಕ್ತವಾಗಿದೆ : ೨೪

ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು) : "ಸ್ವಾಮಿ. ತಾವು ಈ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾಗಿರುವುದು ನಮಗೆಲ್ಲರಿಗೂ ಬಹಳ ತೃಪ್ತಿ ಮತ್ತು ಆನಂದವನ್ನುಂಟು ಮಾಡಿದೆ. ತಮ್ಮ ಜೀವನ ರಾಷ್ಟ್ರಕ್ಕೇ ಮುಡುಪಾಗಿಟ್ಟಿದ್ದಾಗಿದೆ. ನನಗೆ ತಮ್ಮೊಡನೆ ಸುಮಾರು ಇಪ್ಪತ್ತು ವರ್ಷಗಳಿಂದಲೂ ಸ್ನೇಹಿತನಾಗಿ. ಸಹೋದ್ಯೋಗಿಯಾಗಿ ಕೆಲಸ ಮಾಡಲು ಒಂದು ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ..... ನಾನು ಮತ್ತು ನೀವು ಅನೇಕ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದೇವೆ. ಕಷ್ಟಕಾಲದಲ್ಲಿ ಅಡಿ ಇಟ್ಟರೂ ಎಡರು ತೊಡರುಗಳನ್ನು ಅನುಭವಿಸಿದ್ದೇವೆ. ಎಲ್ಲಿದ್ದರೂ ತಮ್ಮ ಪ್ರೇಮ. ವಿಶ್ವಾಸ. ಧೈರ್ಯ. ಮನೋಧಾರ್ಢ್ಯತೆಯಿಂದ ಯಾರಿಗೂ ಅಂಜದೆ ಯೋಗ್ಯ ಕೆಲಸವನ್ನು ಮಾಡುವವರು ಮತ್ತು ಆ ರೀತಿ ತಮ್ಮನ್ನು ಆತ್ಮಪ್ರಾಯರಾಗಿ ಜನ ನೋಡುತ್ತಿದ್ದರು. ಅಂತಹ ಒಂದು ಭಾವನೆಯಿಂದ ತಾವು ಒಂದೆ ವಿಧಾನ ಸಭೆಯಲ್ಲಿಯೂ ಮತ್ತು ವಿಧಾನ ಪರಿಷತ್ತಿನಲ್ಲಿಯೂ ಕೆಲಸ ಮಾಡತಕ್ಕ ಒಂದು ಅವಕಾಶ

ಸಿಕ್ಕಿತ್ತು. ಅಲ್ಲಿಯೂ ಯೋಗ್ಯರೀತಿಯಿಂದ ಕೆಲಸ ಮಾಡಿದ್ದೀರಿ ಎನ್ನುವುದು ಎಲ್ಲರಿಗೂ ಗೊತ್ತಿದೆ. ಅಲ್ಲದೆ ತಮಗೆ ಅನುಭವವು ಸಾಕಷ್ಟಿದೆ. ಅದರಲ್ಲೂ ಈ ದಿನ ಈ ಪರಿಷತ್ತಿನ ಎಲ್ಲ ಸದಸ್ಯರೂ ಒಮ್ಮತದಿಂದ ತಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿರತಕ್ಕದ್ದು ಒಂದು ಶುಭ ಸೂಚನೆ. ಇದರಿಂದ ತಾವು ಎಲ್ಲರಿಗೂ ಬೇಕಾದವರು ಎನ್ನುವುದು ಗೊತ್ತಾಗುತ್ತದೆ..... "

ಗೊರೂರು ರಾಮಸ್ವಾಮಿ ಅಯ್ಯಂಗಾರ (ಸುಪ್ರಸಿದ್ಧ ಸಾಹಿತಿಗಳು) : " .....ತಾವು ಸ್ವಾತಂತ್ರ್ಯಕ್ಕಾಗಿ ರಾಜಕೀಯ ಚಳುವಳಿಯನ್ನು ಹೂಡಿದಾಗ ೧೦ - ೨೦ ಸಾವಿರ ಜನಗಳ ಮಧ್ಯೆ ಧ್ವನಿವರ್ಧಕ ಯಂತ್ರದ ಸಹಾಯವಿಲ್ಲದೇನೇ ದೊಡ್ಡ ದೊಡ್ಡ ಭಾಷಣಗಳನ್ನು ಮಾಡತಕ್ಕ ಶಕ್ತಿಯನ್ನು ಹೊಂದಿದ್ದಿರಿ. ಈ ರೀತಿಯಿಂದ ಕಾರ್ಯರಂಗ ಮತ್ತು ಮೇಧಾಶಕ್ತಿ ಎರಡರಿಂದಲೂ ತಾವು ಈ ಸ್ಥಾನಕ್ಕೆ ಅರ್ಹರಾಗಿದ್ದೀರಿ..... ಈ ಮನೆಯ ಕಾರ್ಯಕಲಾಪಗಳು ಹೆಚ್ಚು ಹೆಚ್ಚಾಗಿ ಕನ್ನಡದಲ್ಲಿ ನಡೆಯಬೇಕೆಂಬುದು ನಮ್ಮ ಆಸೆ. "

ಹಾರನಹಳ್ಳಿ ರಾಮಸ್ವಾಮಿ : " .....ಕಳೆದ ೧೫ ವರ್ಷಗಳಿಂದಲೂ ತಮ್ಮ ಸಂಪರ್ಕ ನನಗಿದೆ. ಕಾರ್ಯ ಸಂಘಟನೆಯಲ್ಲಿ ಪ್ರಚಂಡ ಶಕ್ತಿಯನ್ನು ಹೊಂದಿರತಕ್ಕ ವ್ಯಕ್ತಿ ನೀವು ಆಗಿದ್ದೀರಿ. ದೇಶದಲ್ಲಿ ಜನಜಾಗೃತಿ ಮಾಡತಕ್ಕಂಥ, ದೇಶವನ್ನು ಕಟ್ಟತಕ್ಕಂಥ ಕೆಲಸವನ್ನು ಯಶಸ್ವಿಯಾಗಿ ಮಾಡಿರುವುದನ್ನು ನೋಡಿದ್ದೇನೆ. ಇಂಥ ಕಾರ್ಯದಲ್ಲಿ ಉಂಟಾದ ಅಪಾರ ಅಡಚಣೆಗಳನ್ನು ಧೈರ್ಯದಿಂದ ಎದುರಿಸಿ ಕೆಲಸ ಮಾಡಿರುವುದನ್ನು ನೋಡಿದ್ದೇನೆ..... ಹಿರಿಯರಾದ ಗಂಗಾಧರರಾವ ದೇಶಪಾಂಡೆಯವರೊಂದಿಗೆ ಸಂಸ್ಥೆಯಲ್ಲಿ ಕೆಲಸ ಮಾಡಿ ಕರ್ನಾಟಕ ರಾಜ್ಯ ರಚನೆ ಮಾಡಿದ್ದೀರಿ..... "

ಎಚ್. ಎಫ್. ಕಟ್ಟಿಮನಿ (ಗುದ್ಲೆಪ್ಪನವರ ವಿದ್ಯಾಗುರುಗಳು, ಪ್ರತಿಷ್ಠಿತ ಕೆ. ಎಲ್. ಇ. ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಸದಸ್ಯರು) : " .....ನಿಮ್ಮೊಂದಿಗೆ ನನ್ನ ವೈಯಕ್ತಿಕ ಸಂಬಂಧ ಏನೇ ಇದ್ದರೂ ನಾನು ನಿಮ್ಮನ್ನು ರಾಜಕೀಯ ಕ್ಷೇತ್ರದ ನನ್ನ ನಾಯಕನೆಂದು ಸ್ವೀಕರಿಸಿದ್ದೇನೆ. ನೀವು ನನ್ನನ್ನು ಕಾಂಗ್ರೆಸ್ಸಿಗೆ ತಂದಿರಿ. ನಿಮ್ಮ ಬೆಂಬಲದಿಂದಲೇ ನಾನು ಕಳೆದ ಹನ್ನೆರಡು ವರ್ಷಗಳಿಂದಲೂ ಮುಂಬಯಿ ಮತ್ತು ಇಲ್ಲಿಯ ವಿಧಾನ ಪರಿಷತ್ತಿನ ಸದಸ್ಯ ಸ್ಥಾನವನ್ನು ಅನುಭವಿಸುತ್ತಿದ್ದೇನೆ. ನಿಮ್ಮ ಪ್ರಭಾವದಿಂದಲೇ ನಾನು ಅವಿರೋಧವಾಗಿ ಆಯ್ಕೆಗೊಂಡೆನು. ನೀವು ನಾಯಕರುಗಳ ನಿರ್ಮಾಪಕರು ಮತ್ತು ನೀವು ನಾಯಕರ ನಾಯಕರು..... "

ಎ. ಆರ್. ಬದರಿ ನಾರಾಯಣ : " .....ನಾನು ಉಪಾಧ್ಯಾಯರ ಕ್ಷೇತ್ರದಿಂದ ಚುನಾವಣೆಗೆ ನಿಂತಾಗ ತಮ್ಮ ಕಡೆ ಪ್ರವಾಸ ಮಾಡತಕ್ಕ ಒಂದು ಸುಯೋಗ ನನಗೆ ದೊರೆಯಿತು. ಅಲ್ಲಿ ಯಾವ ಕಡೆಯಲ್ಲಿಯೇ ಹೋಗಲಿ, ಯಾರನ್ನೇ ನೋಡಲಿ ಯಾವ ವಿಚಾರವಾಗಿ ಯಾರನ್ನೇ ಸಂದರ್ಶನ ಮಾಡಿದಾಗ್ಯೂ ಕೂಡ, ಅವರು ಹಳ್ಳಿಕೇರಿ ಅವರಲ್ಲಿ ಹೋಗಿ, ಹಳ್ಳಿಕೇರಿ ಅವರು ಹೇಳಿದರೆ ಆಗುತ್ತದೆ ಎಂದು ಎಲ್ಲರೂ ಹೇಳುತ್ತಾರೆ. ಆದ್ದರಿಂದ ಶ್ರೀಮಾನ್ ಹಳ್ಳಿಕೇರಿ ಅವರ ವ್ಯಕ್ತಿತ್ವ ಎಷ್ಟರ ಮಟ್ಟಿನದು, ಅವರ ಪ್ರಭಾವ ಹೇಗಿದೆ ಎನ್ನತಕ್ಕಂಥಾದ್ದರ ಅರಿವು ಆಗುತ್ತದೆ..... ತಮ್ಮನ್ನು ಎಲ್ಲರೂ ಅವಿರೋಧವಾಗಿ ಈ ಸ್ಥಾನದಲ್ಲಿ ಕೂಡಿಸಿರುವುದನ್ನು ನೋಡಿದರೆ ತಾವು ದುಡಿದು ದುಡಿದು ದೇಶಕ್ಕಾಗಿ ಬಹಳ ಕಷ್ಟ ಪಟ್ಟಿದ್ದೀರಿ. ಆದ್ದರಿಂದ ತಮಗೆ ಅವಶ್ಯವಾದಂಥ ವಿಶ್ರಾಂತಿ ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ತಮ್ಮನ್ನು ಬಹುಶಃ ಅಧ್ಯಕ್ಷರನ್ನಾಗಿ ಆರಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. "

ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ : " .....ಯಾವ ಕಾಲದಲ್ಲಿ ಖಾದಿಯನ್ನು ಒಳ್ಳೆಯ ಬೆಲೆಗೆ ಕೊಂಡುಕೊಳ್ಳುವವರು ಇರಲಿಲ್ಲವೋ ಅಂಥ ಸಮಯದಲ್ಲಿ ಅದನ್ನು ಮೂಟೆ ಕಟ್ಟಿ. ಗ್ರಾಮ ಗ್ರಾಮಕ್ಕೆ ಹೋಗಿ. ಕಟ್ಟೆಯ ಮೇಲೆ ಕುಳಿತು ಗ್ರಾಮದವರಿಗೆ ಮಾರಾಟ ಮಾಡಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮವನ್ನು ನಡೆಸಿಕೊಂಡು ಬಂದಿರಿ..... "

ಎಲ್. ಎಚ್. ಹಿರೇಗೌಡರ : " .....ನನ್ನ ರಾಜಕೀಯ ಜೀವನ ಶುರು ಮಾಡಿದವರು ತಾವು..... ಗುಂಡಿನ ಬಾಯಿಗೆ ತಾವು ಹೆದರದೇ ಹೋದವರು..... ನಿದ್ರೆಯನ್ನು ಮೋಟಾರಿನಲ್ಲಿಯೇ ಮಾಡುತ್ತ ಇಂದು ಬೆಂಗಳೂರಿನಲ್ಲಿದ್ದರೆ, ಮತ್ತೊಂದು ದಿನ ಮುಂಬಯಿಯಲ್ಲಿ. ಇನ್ನೊಂದು ದಿವಸ ಮದರಾಸಿನಲ್ಲಿ. ಹೀಗೆ ಸಾಕಷ್ಟು ಕಷ್ಟಗಳನ್ನು ವಹಿಸಿ ಕೆಲಸ ಮಾಡಿದುದನ್ನು ಮೆಚ್ಚಬೇಕಾದ ಸಂಗತಿ. "

ಕೆ. ಎಸ್. ಚನ್ನಬಸವನಗೌಡ : " .....ನೀವು ಅಪಾರ ದೇಶಸೇವೆಯನ್ನು ಮಾಡಿದವರು. ಅದರಲ್ಲೂ ನಮ್ಮ ಬಳ್ಳಾರಿ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸಿ ಬಿಡಬೇಕು ಎನ್ನುವ ಪರಿಸ್ಥಿತಿ ಬಂದಿದ್ದಾಗ ಅದಕ್ಕೆ ಅವಕಾಶ ಕೊಡದೇ ಕೆಚ್ಚೆದೆಯಿಂದ ಬಳ್ಳಾರಿಯು ನಮ್ಮ ಕರ್ನಾಟಕದಲ್ಲಿಯೇ ಉಳಿಯುವಂತೆ ಮಾಡಿದವರು. ನಮ್ಮ ಬಳ್ಳಾರಿಯ ಜನರೆಲ್ಲರಿಗೂ ನೀವು ಚೇತನಸ್ವರೂಪ. ಬಳ್ಳಾರಿಯ ಬಜಾರದಲ್ಲಿ ಆಂಧ್ರ ಚಳುವಳಿಯ ಕಾಲದಲ್ಲಿ ದೊಣ್ಣೆ ಹಿಡಿದುಕೊಂಡು ತಾವು ಬರುತ್ತಿದ್ದುದು ನಮಗೆಲ್ಲ ಉತ್ಸಾಹ ಮತ್ತು ಹುರುಪನ್ನೀಯುತ್ತಿತ್ತು. ನಮ್ಮ ಜಿಲ್ಲೆಯಲ್ಲಿದ್ದ ಆದವಾನಿ ಮತ್ತು ಇನ್ನೂ ಅನೇಕ ಭಾಗಗಳನ್ನು ನಮ್ಮ ಕನ್ನಡ ನಾಡಿನಲ್ಲಿಯೇ ಉಳಿಸಬೇಕೆಂದು ತಾವು ಬಹಳವಾಗಿ ಶ್ರಮಿಸಿದವರು. ನಮ್ಮ ಬಳ್ಳಾರಿಯ ಹೊಸಪೇಟೆ, ಶಿರಗುಪ್ಪ ಈ ಭಾಗಗಳು ನಮ್ಮ ನಾಡಿನಲ್ಲಿಯೇ ಉಳಿಯುವಂತೆ ಮಾಡಿದುದಕ್ಕಾಗಿ ನಮ್ಮ ಭಾಗದ ಜನ ತುಂಬಾ ಕೃತಜ್ಞರಾಗಿದ್ದಾರೆ. ನಮ್ಮ ಭಾಗದಲ್ಲಿರುವ ಹುಡುಗರಿಗೆ ತಮ್ಮ ಹೆಸರು ಮನೆಮಾತಾಗಿರುವುದು ನಿಜವಾಗಿ ಆನಂದವಾಗಿದೆ..... "

ವಿ. ಸಿ. ಪಾವಟೆ : " .....ಕರ್ನಾಟಕದಲ್ಲಿಯ ಜನರಿಗೆ ಇವರನ್ನು ಜಿ. ವಿ. ಹಳ್ಳಿಕೇರಿಯವರೆಂದರೆ ಯಾರಿಗೂ ಅಷ್ಟು ಚೆನ್ನಾಗಿ ಗೊತ್ತಾಗುವುದಿಲ್ಲ. ಆದರೆ ಇವರನ್ನು ಅಲ್ಲಿಯ ಜನಗಳಿಗೆ ಗುದ್ಲೆಪ್ಪನವರೆಂದರೆ ಚೆನ್ನಾಗಿ ಅರ್ಥವಾಗುತ್ತದೆ..... ಯಾವಾಗಲೂ ಇವರ ಕೈಯಲ್ಲಿ ಆ ಒಂದು ಬಡಿಗೆ ಹಿಡಿಯುವುದು. ಇವರು ಮಾತನಾಡುವುದು. ನಡೆಯುವುದು ಇವುಗಳನ್ನೆಲ್ಲ ನೋಡಿದರೆ ಇವರನ್ನು ' ಕರ್ನಾಟಕದ ಸಿಂಹ ' ವೆಂದು ಕರೆದರೆ ಆಶ್ಚರ್ಯವೇನೂ ಇಲ್ಲ. "

ಮಾನ್ಯ ಸದಸ್ಯರುಗಳಾದ ಎಂ. ಪಿ. ಈಶ್ವರಪ್ಪ. ಕೆ. ವಿ. ನರಸಪ್ಪ. ಎಂ. ಪಿ. ಎಲ್. ಶಾಸ್ತ್ರಿ. ಬಿ. ಜಿ. ದೇಶಪಾಂಡೆ. ಕೆ. ಆರ್. ಆಚಾರ್. ವಿ. ವೆಂಕಟಪ್ಪ. ಹಿ. ಎಂ. ನಾಡಗೌಡ. ಡಾ. ಎಸ್. ಚಂಪಾ. ವಿ. ಎಸ್ ಚೆಟ್ನಳ್ಳಿ. ಎಂ. ಗೋವರ್ಧನರಾವ. ಟಿ. ಎಂ. ಮೋಟೆನಸರ ಹೆಗಡೆ. ಕೇಶವರಾವ ನಿಟ್ಟೂರಕರ. ಎಸ್. ಮುಕುಂದ ರಾವ್ ಅವರುಗಳು ಸಭಾಪತಿಗಳಾದ ಗುದ್ಲೆಪ್ಪ ಹಳ್ಳಿಕೇರಿ ಅವರನ್ನು ಅಭಿನಂದಿಸಿ ಮಾತನಾಡಿದರು.

ಸದಸ್ಯರುಗಳ ಅಭಿನಂದನಾ ಭಾಷಣಕ್ಕೆ ಸಭಾಪತಿ ಗುದ್ಲೆಪ್ಪನವರು ಕೃತಜ್ಞತೆಗಳನ್ನು ಸಲ್ಲಿಸಿ ಮಾತನಾಡಿದರು :

"......ನಾನು ಸ್ವಭಾವತಃ ಮೆತ್ತನೆಯ ಕುರ್ಚಿಯ ಮೇಲೆ ಕುಳಿತಿದ್ದಿಲ್ಲ ಮತ್ತು ಕುಳಿತುಕೊಳ್ಳತಕ್ಕ ಸ್ವಭಾವದವನಲ್ಲ. ನಲವತ್ತು ವರ್ಷಗಳ ಕಾಲ ರಾಜ್ಯದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ, ರಾಷ್ಟ್ರದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ದಿನಾಲು ನೂರಿನ್ನೂರು ಮೈಲಿ ಸುತ್ತಾಡದಿದ್ದರೆ ನನಗೆ ಸಮಾಧಾನವಿಲ್ಲ. ಪ್ರತಿದಿನವೂ ಹತ್ತು ಸಾವಿರ ಜನರನ್ನು ಕಾಣಲೇಬೇಕು. ಇಂಥ ಪರಿಸ್ಥಿತಿಯಲ್ಲಿ ಇವೊತ್ತಿನ ದಿವಸ ಈ ಸ್ಥಾನದಲ್ಲಿ ಕೂತಿರುವಂಥದ್ದು ಹೊಸದು..... ನಾನು ಸತತವಾಗಿ ಕೂತು ಕೆಲಸ ಮಾಡತಕ್ಕಂಥದ್ದನ್ನು ಕಲಿಯಬೇಕಾಗಿದೆ. ೪೦ ವರ್ಷಗಳ ಕಾಲ ಸತತವಾಗಿ ಎಲ್ಲಿ ಬೇಕಾದರೂ ಅಲ್ಲಿಗೆ ಹೋಗಿ ಕೆಲಸ ಮಾಡಿದ್ದುಂಟು..... ನನಗೆ ವಿಶ್ರಾಂತಿಯನ್ನು ಬಯಸಿ ಈ ಸ್ಥಾನವನ್ನು ಕೊಟ್ಟಿದ್ದಾರೆಂದು ತಿಳಿಯುತ್ತದೆ..... ಕೆಲವು ದಿನಗಳ ಹಿಂದೆ ಮೈಸೂರಿನ ಹತ್ತಿರ ಹೋಗುತ್ತಿದ್ದ ಕಾಲಕ್ಕೆ ಮೋಟಾರು ಅಪಘಾತವಾಗಿ ದವಾಖಾನೆಯಲ್ಲಿ ಇದ್ದಾಗ ೪೬ ದಿವಸ ಮತ್ತು ಜೇಲಿನಲ್ಲಿದ್ದಾಗ ಮಾತ್ರ ನಾನು ಒಂದೇ ಕಡೆ ಇದ್ದವನು. ಇದನ್ನು ಬಿಟ್ಟರೆ ಉಳಿದಂತೆ ಎರಡು ಮೂರು ದಿವಸಕ್ಕಿಂತ ಹೆಚ್ಚು ಕಾಲ ಒಂದು ಕಡೆ ಇದ್ದದ್ದು ನನಗೆ ಗೊತ್ತಿಲ್ಲ..... ನಾನು ಈ ಸಭೆಯ ಘನತೆ ಗೌರವಗಳನ್ನು ಕಾಯ್ದುಕೊಂಡು ಹೋಗುವುದಕ್ಕೆ ನನ್ನ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇನೆ. ವಿರೋಧ ಪಕ್ಷದ ಸದಸ್ಯರು ಯಾವ ರೀತಿಯ ಭಯವನ್ನು ಪಡುವ ಕಾರಣವಿಲ್ಲ..... "

ಗುದ್ಲೆಪ್ಪನವರು ಸತತವಾಗಿ ಊರಿಂದ ಊರಿಗೆ ಸಂಚರಿಸಿ ಜನಸಾಮಾನ್ಯರ ಮಧ್ಯದಲ್ಲಿದ್ದುಕೊಂಡು ಅವರ ನೋವು ನಲಿವುಗಳಿಗೆ ಸ್ಪಂದಿಸುತ್ತ ಜನಕಲ್ಯಾಣ ಕಾರ್ಯದಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿದ್ದರು. ಕ್ರಿಯಾಶೀಲ ಸಂಘಟಕರಾದ ಅವರನ್ನು ಸಭಾಪತಿಯಂಥ ಉನ್ನತ ಸ್ಥಾನಕ್ಕೆ ಪಕ್ಷಾತೀತವಾಗಿ ಎಲ್ಲರೂ ಸರ್ವಾನುಮತದಿಂದ ಆರಿಸಿದುದು ಗುದ್ಲೆಪ್ಪನವರ ಘನ ವ್ಯಕ್ತಿತ್ವಕ್ಕೆ ಸಂದ ಗೌರವವಾಗಿದೆ.

ಶಾಸಕರ ದಿನಾಚರಣೆ :

ಶಾಸನ ಸಭೆಯ ಸರ್ವಸದಸ್ಯರು ಒಂದೆಡೆ ಸೇರಲೆಂಬ ಸದುದ್ದೇಶದಿಂದ ೧೯೬೩ ರಲ್ಲಿ ಶಾಸನ ಸಭಾ ಸಮಿತಿಯು 'ಶಾಸಕರ ದಿನಾಚರಣೆ' ಯನ್ನು ಆಚರಿಸಲು ಸಲಹೆ ಮಾಡಿತು. ಆ ಮೇರೆಗೆ ೧೯೬೩ ರಲ್ಲಿ ಮೊದಲ ಸಲ ಶಾಸಕರ ದಿನಾಚರಣೆಯನ್ನು ಆಚರಿಸಲಾಯಿತು. ನಂತರ ೧೯೬೪ ರ ಮಾರ್ಚ ೩೦ ರಂದು ಆಚರಿಸಲಾಯಿತು. ಮೂರನೆಯ ಸಲ ೧೯೬೬ ಎಪ್ರಿಲ ೬ ರಂದು ಜರುಗಿದ ಶಾಸಕರ ದಿನಾಚರಣೆಯ ಸಮಾರಂಭದಲ್ಲಿ ಕೇಂದ್ರ ಯೋಜನಾ ಸಚಿವ ಅಶೋಕ ಮೆಹ್ತಾ ಅವರು ಉಪಸ್ಥಿತರಿದ್ದು ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿದರು. ಈ ಎಲ್ಲ ಕಾರ್ಯಕ್ರಮಗಳನ್ನು ಸಭಾಪತಿ ಗುದ್ಲೆಪ್ಪನವರು ವಿಶೇಷ ಆಸಕ್ತಿವಹಿಸಿ ಯಶಸ್ವಿಗೊಳಿಸಿದರು.

ಗಣ್ಯರ ಸಂದರ್ಶನ :

ಗುದ್ಲೆಪ್ಪನವರು ಸಭಾಪತಿಗಳಾಗಿದ್ದಾಗ ಅನೇಕ ಗೌರವಾನ್ವಿತ ಅತಿಥಿಗಳು ಶಾಸಕಾಂಗಕ್ಕೆ ಸಂದರ್ಶನವಿತ್ತರು. ರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್ ಅವರು ೧೯೬೩ ಅಕ್ಟೋಬರ ೧೦ ರಂದು ಸಂದರ್ಶನವಿತ್ತಾಗ ವಿಧಾನ ಪರಿಷತ್ ಸಭಾಪತಿ ಗುದ್ಲೆಪ್ಪನವರು ಹಾಗೂ ವಿಧಾನ ಸಭೆಯ ಅಧ್ಯಕ್ಷ ವೈಕುಂಠ ಬಾಳಿಗಾ ಅವರು ಸ್ವಾಗತಿಸಿದರು. ಅಂದು

ಡಾ. ರಾಧಾಕೃಷ್ಣನ್ ಅವರು ಮಹಾತ್ಮಾ ಗಾಂಧೀಜಿ ಅವರ ಭಾವಚಿತ್ರವನ್ನು ವಿಧಾನ ಸೌಧದಲ್ಲಿ ಅನಾವರಣಗೊಳಿಸಿದರು.

ಬ್ರಿಟನ್ನಿನ ಸಂಸತ್ತಿನ ನಿಯೋಗವು ೧೯೬೫ ಜನವರಿ ೩ ರಂದು ಸಂದರ್ಶನವಿತ್ತಿತು. ಸೋವಿಯತ್ ರಶಿಯದ ಸಂಸತ್ತಿನ ನಿಯೋಗವು ಸಹ ಸಂದರ್ಶನವಿತ್ತಿತು.

ಜಮ್ಮು ಮತ್ತು ಕಾಶ್ಮೀರ ವಿಧಾನ ಪರಿಷತ್ತಿನ ಸದಸ್ಯರ ನಿಯೋಗವು ಸಭಾಪತಿ ಮತ್ತು ಉಪಸಭಾಪತಿಗಳ ನೇತೃತ್ವದಲ್ಲಿ ೧೯೬೬ ಎಪ್ರಿಲ್ ೧೭ ರಿಂದ ೨೧ ರ ವರೆಗೆ ಬೆಂಗಳೂರಿಗೆ ಭೇಟಿಯಿತ್ತಾಗ ಸಭಾಪತಿ ಗುದ್ಲೆಪ್ಪನವರು ಅವರುಗಳನ್ನು ಸ್ವಾಗತಿಸಿದರು.

ಶಾಸಕಾಂಗ ಸಭಾಧ್ಯಕ್ಷರುಗಳ ಪರಿಷತ್ತು :

ವಿಧಾನ ಪರಿಷತ್ತಿನ ಸಭಾಪತಿಗಳಾಗಿದ್ದ ಗುದ್ಲೆಪ್ಪನವರು ಶಾಸಕಾಂಗ ಸಭಾಧ್ಯಕ್ಷರುಗಳ ಪರಿಷತ್ತುಗಳಲ್ಲಿ ಭಾಗವಹಿಸಿದರು. ೧೯೬೩ ಫೆಬ್ರುವರಿ ೧೦ ಮತ್ತು ೧೧ ರಂದು ಚಂಡೀಗಡದಲ್ಲಿ, ೧೯೬೪ ಜನವರಿ ೬ ಮತ್ತು ೭ ರಂದು ಪಾಟ್ನಾದಲ್ಲಿ ಹಾಗೂ ೧೯೬೫ ಜನವರಿ ೧೧ ರಂದು ಮುಂಬಯಿಯಲ್ಲಿ ಜರುಗಿದ ಪರಿಷತ್ತುಗಳಲ್ಲಿ ಪಾಲ್ಗೊಂಡರು.

ಸಭಾಪತಿ ಮತ್ತು ಪಕ್ಷ ಸಂಬಂಧ :

ಶಾಸನ ಸಭೆಗಳ ಸಭಾಧ್ಯಕ್ಷರುಗಳಾದವರು ತಮ್ಮ ಮೂಲ ಪಕ್ಷದ ಜೊತೆಗೆ ಸಂಬಂಧವನ್ನು ಇಟ್ಟುಕೊಳ್ಳದೆ ಪಕ್ಷಕ್ಕೆ ರಾಜೀನಾಮೆ ಕೊಡಬೇಕೆಂಬ ಸಂಪ್ರದಾಯ ನಡೆದು ಬಂದಿತ್ತು. ಅದರಂತೆ ಹಿಂದೆ ಆಗಿಹೋದ ಸಭಾಪತಿಗಳು ತಮ್ಮ ಪಕ್ಷಕ್ಕೆ ರಾಜೀನಾಮೆ ಕೊಟ್ಟಿದ್ದರು. ಆ ಮೇರೆಗೆ ಸಭಾಪತಿಗಳಾದ ಗುದ್ಲೆಪ್ಪನವರಿಗೂ ಪಕ್ಷಕ್ಕೆ ರಾಜೀನಾಮೆ ಕೊಡಬೇಕೆಂದು ಒತ್ತಾಯಗಳು ಬಂದವು. ಆದರೂ ಕೂಡ ಸಭಾಪತಿಗಳಾದ ಗುದ್ಲೆಪ್ಪನವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ಕೊಡಲಿಲ್ಲ. ಈ ವಿಷಯದ ಕುರಿತು ತಮ್ಮ ನಿಲುವನ್ನು ಸಮರ್ಥಿಸಿಕೊಂಡು ಕಾಂಗ್ರೆಸ್ ವರಿಷ್ಠ ಮಂಡಳಿಗೆ ಪತ್ರ ಬರೆದರು. ಈ ಪ್ರಸಂಗವು ೧೯೬೪ ಜನವರಿ ೬ ಮತ್ತು ೭ ರಂದು ಪಾಟ್ನಾದಲ್ಲಿ ನಡೆದ ಶಾಸಕಾಂಗ ಸಭಾಧ್ಯಕ್ಷರುಗಳ ಪರಿಷತ್ತಿನಲ್ಲಿಯೂ ಚರ್ಚೆಗೆ ಬಂದಿತು. ಅಲ್ಲಿ ಗುದ್ಲೆಪ್ಪನವರು ಸಭಾಪತಿಯಾದವರು ಪಕ್ಷದ ಸ್ಥಾನಮಾನ ತ್ಯಜಿಸಬೇಕಿಲ್ಲ ಎಂದೇ ಸಮರ್ಥಿಸಿಕೊಂಡರು.

" ಸಭಾಪತಿ ಸ್ಥಾನಕ್ಕಿಂತಲೂ ನನಗೆ ಕಾಂಗ್ರೆಸ್ಸೇ ಪ್ರಿಯವಾದುದು. ಅದನ್ನು ಖಂಡಿತ ಬಿಡಲಾರೆ ಎಂದು ಕಾಂಗ್ರೆಸ್ ವರಿಷ್ಠರಿಗೆ ತಮ್ಮ ವಾದವನ್ನು ತಿಳಿಹೇಳಿದ ಗುದ್ಲೆಪ್ಪನವರು ಎರಡೂ ಸ್ಥಾನಗಳಲ್ಲಿ ಉಳಿದುಕೊಂಡರು. " [೨೫]

ಹೀಗೆ ಸಭಾಪತಿಗಳಾದ ಗುದ್ಲೆಪ್ಪನವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡುವುದಕ್ಕೆ ಒಪ್ಪಲಿಲ್ಲ. ಆದರೆ ಅವರು ಸಂಸತ್ ಸಂಪ್ರದಾಯಗಳ ವಿರೋಧಿಗಳೇನಲ್ಲ. ಅಗಾಧವಾದ ಪಕ್ಷದ ನಿಷ್ಠೆಯು ಅವರ ಜೀವನದ ಅವಿಭಾಜ್ಯ ಅಂಗವಾಗಿತ್ತು. ಅವರ ಸಾರ್ವಜನಿಕ ಜೀವನ ಕಾಂಗ್ರೆಸ್ ಪಕ್ಷದಿಂದಲೇ ಪ್ರಾರಂಭವಾಗಿತ್ತು. ಕಾಂಗ್ರೆಸ್ ಪಕ್ಷದ ನಾಯಕರಾಗಿಯೇ ಅವರು ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕ ಏಕೀಕರಣ ಚಳುವಳಿಯ ನೇತೃತ್ವ ವಹಿಸಿದ್ದರು.



ರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್ ಅವರು ರಾಜ್ಯ ಶಾಸಕಾಂಗದ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡುತ್ತಿರುವುದು. ರಾಜ್ಯಪಾಲ ಜಯಚಾಮರಾಜ ಒಡೆಯರ ಹಾಗೂ ವಿಧಾನ ಪರಿಷತ್ತಿನ ಸಭಾಪತಿ ಗುದ್ಲೆಪ್ಪನವರನ್ನು ಕಾಣಬಹುದು. ೧೯೬೩



ಚಂಡೀಗಡದಲ್ಲಿ ಜರುಗಿದ ಭಾರತದ ಶಾಸಕಾಂಗ ಸಭಾಧ್ಯಕ್ಷರುಗಳ ಪರಿಷತ್ತಿನಲ್ಲಿ ಲೋಕಸಭಾಧ್ಯಕ್ಷ ಸರದಾರ ಹುಕುಂಸಿಂಗ
ಅವರೊಂದಿಗೆ ರಾಜ್ಯ ವಿಧಾನ ಪರಿಷತ್ತಿನ ಸಭಾಪತಿ ಗುದ್ಲೆಪ್ಪನವರು ಹಾಗೂ
ವಿಧಾನ ಸಭಾಧ್ಯಕ್ಷ ವೈಕುಂಠ ಬಾಳಿಗಾ ಪಾಲ್ಗೊಂಡಿದ್ದರು. ೧೯೬೩



ವಿಧಾನ ಪರಿಷತ್ತಿನ ಸಭಾಪತಿ ಗುದ್ಲೆಪ್ಪ ಹಳ್ಳಿಕೇರಿ ಹಾಗೂ ವಿಧಾನ ಸಭೆಯ ಅಧ್ಯಕ್ಷ ವೈಕುಂಠ ಬಾಳಿಗಾ ಅವರುಗಳು
ರಾಜ್ಯ ಶಾಸಕಾಂಗದ ಜಂಟಿ ಅಧಿವೇಶನಕ್ಕೆ ಹೋಗುತ್ತಿರುವುದು. ೧೯೬೪

ಸ್ವಾತಂತ್ರ್ಯ ಬಂದ ನಂತರ ತಮ್ಮನ್ನು ಪಕ್ಷದ ಸಂಘಟನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ಇಂಥ ಕ್ರಿಯಾಶೀಲ ಹುಟ್ಟು ಹೋರಾಟಗಾರರಾದ ಗುದ್ಲೆಪ್ಪನವರಿಗೆ ಕಾಂಗ್ರೆಸ್ ಪಕ್ಷದ ಸಾಂಘಿಕ ಸಂಬಂಧವನ್ನು ಕಡಿದುಕೊಳ್ಳುವುದು ಸಾಧ್ಯವಿರಲಿಲ್ಲ. ಅವರನ್ನು ಕಾಂಗ್ರೆಸ್ ವರಿಷ್ಠರು ಪಕ್ಷದ ಹಿರಿಯ ಹುದ್ದೆಯಲ್ಲಿ ತೊಡಗಿಸಬೇಕಾಗಿತ್ತು. ಅಥವಾ ಜನಪರ ಕಾರ್ಯಗಳನ್ನು ಕೈಕೊಳ್ಳಲು ಹೆಚ್ಚು ಅನುಕೂಲವಾಗುವಂತಹ ಸಚಿವ ಪದವಿಯನ್ನಾದರೂ ಕೊಡಬೇಕಾಗಿತ್ತು. ಗುದ್ಲೆಪ್ಪನವರ ದೃಷ್ಟಿಯಲ್ಲಿ ಸಭಾಪತಿ ಹುದ್ದೆಯು ತಾತ್ಕಾಲಿಕವಾದುದು. ಆದರೆ ಪಕ್ಷದ ಕಾರ್ಯ ನಿರಂತರವಾದುದಾಗಿತ್ತು.

ಸಭಾಪತಿ ಸ್ಥಾನದಿಂದ ಬೀಳ್ಕೊಡುಗೆ :

ಗುದ್ಲೆಪ್ಪ ಹಳ್ಳಿಕೇರಿ ಅವರು ವಿಧಾನ ಪರಿಷತ್ತಿನ ಸಭಾಪತಿಗಳಾಗಿ ೧೯೬೨ ಜುಲೈ ೩ ರಿಂದ ೧೯೬೬ ಮೇ ೧೩ ರ ವರೆಗೆ ಕಾರ್ಯ ನಿರ್ವಹಿಸಿದರು. ಅವರ ನಿವೃತ್ತಿಯ ಜೊತೆಗೆಯೇ ಇತರ ೨೧ ಸದಸ್ಯರೂ ನಿವೃತ್ತರಾಗುತ್ತಾರೆ. ಇವರೆಲ್ಲರ ಬೀಳ್ಕೊಡುಗೆಯು ೧೯೬೬ ಏಪ್ರಿಲ ೧೨ ರಂದು ವಿಧಾನ ಪರಿಷತ್ತಿನಲ್ಲಿ ಜರುಗುತ್ತದೆ.

ಸಭಾಪತಿಗಳಾದ ಗುದ್ಲೆಪ್ಪನವರ ಉಪಸ್ಥಿತಿಯು ಸದನದಲ್ಲಿ ಶಾಂತಿಯನ್ನು ತರಲು ಸಹಾಯಕವಾಗುತ್ತಿತ್ತು. ಅವರು ನಿಷ್ಪಕ್ಷಪಾತ ದೃಷ್ಟಿಯಿಂದ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದರು. ವಿರೋಧ ಪಕ್ಷದ ಸದಸ್ಯರುಗಳ ಸಂಖ್ಯೆ ಕಡಿಮೆ ಇದ್ದರೂ ಅವರಿಗೆ ಸದನದಲ್ಲಿ ಸಾಕಷ್ಟು ಅವಕಾಶ ಕೊಡುತ್ತಿದ್ದರು. ಈ ಅಂಶಗಳನ್ನು ಅಂದಿನ ಬೀಳ್ಕೊಡುವ ಸಂದರ್ಭದಲ್ಲಿ ಸದಸ್ಯರುಗಳು ಮಾಡಿದ ಭಾಷಣಗಳ ಅವತರಣಿಕೆಗಳಲ್ಲಿ ಕಾಣಬಹುದು :[೬]

ಎಂ. ವಿ. ಕೃಷ್ಣಪ್ಪ : " .....ನಮ್ಮ ಸಭಾಪತಿಗಳವರು ಈ ಸಭೆಯ ಘನತೆ ಗೌರವವನ್ನು ಬಹುಮಟ್ಟಿಗೆ ಎತ್ತಿಹಿಡಿದು ಈ ಸಭೆಗೆ ಒಂದು ಒಳ್ಳೆಯ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಭಾರತ ದೇಶದಲ್ಲಿ ನಮ್ಮ ಮೈಸೂರು ಸಂಸ್ಥಾನದ ಈ ಸಭೆಯು ಒಂದು ಮಾದರಿಯಾಗುವಂತೆ ನಡವಳಿಕೆಗಳನ್ನು ನಡೆಸಿಕೊಂಡು ಬಂದಿದ್ದಾರೆ..... ತಾವು ಅಧ್ಯಕ್ಷರು ಮಾತ್ರ ಹೊರಗಡೆ ಇರಕೂಡದು. ಇಲ್ಲಿ ಸಭಾಪತಿಗಳಾಗಿ ಬರಲೇಬೇಕು ಎಂದು ಹೇಳುತ್ತೇನೆ. "

ಜೆ. ಬಿ. ಮಲ್ಲಾರಾಧ್ಯ : " .....ತಾವು ಕೇವಲ ಸಭಾಪತಿಯಾಗುವುದರಿಂದ ಮಾತ್ರ ತೃಪ್ತಿಪಡುತ್ತೀರೆಂದು ನನಗನಿಸುವುದಿಲ್ಲ. ತಮ್ಮ ಜೀವನದೃಷ್ಟಿ. ತಾವು ಸಂಬಂಧ ಹೊಂದಿದ ಅನೇಕ ಕ್ಷೇತ್ರಗಳಲ್ಲಿ ಅದರಲ್ಲಿಯೂ ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿಯ ತಮ್ಮ ಚಟುವಟಿಕೆಗಳನ್ನು ಗಮನಿಸಿದಾಗ ತಾವು ಮಂತ್ರಿ ಸ್ಥಾನದಲ್ಲಿದ್ದರೆ ಹೆಚ್ಚು ಉಪಯುಕ್ತವಾಗುತ್ತದೆಂದು ನನಗನಿಸುತ್ತದೆ..... "

ಜಿ. ವಿ. ಆಂಜನಪ್ಪ : " .....ತಾವು ಈ ಸಭೆಯ ಸಭಾಪತಿಗಳಾಗಿ ಆಯ್ಕೆಯಾದಾಗ್ಗೆ ತಮ್ಮಲ್ಲಿ ಒಂದು ನಿವೇದನೆ ಮಾಡಿಕೊಂಡಿದ್ದೆನು. ಇದೊಂದು ನ್ಯಾಯಾಲಯ. ತಕ್ಕಡಿಯಲ್ಲಿ ತೂಗಿದ ಹಾಗೆ ವಿರೋಧ ಪಕ್ಷದವರಿಗೆ ಉತ್ತೇಜನ ಕೊಡಬೇಕು ಎಂದು ನಾಲ್ಕು ವರ್ಷಗಳ ಹಿಂದೆ ಹೇಳಿದ್ದೆ. ಈಗ ನಾಲ್ಕು ವರ್ಷಗಳ ನಂತರ ತಾವು ನಿವೃತ್ತರಾಗುವ ಸಂದರ್ಭದಲ್ಲಿ ಹೇಳುತ್ತೇನೆ. ತಾವು ವಿರೋಧ ಪಕ್ಷಕ್ಕೆ ಬಹಳ ಉತ್ತೇಜನ ಕೊಟ್ಟಿದ್ದೀರಿ. ವಿರೋಧ ಪಕ್ಷದ ಸದಸ್ಯರಿಗೆ ಮಾತನಾಡುವುದಕ್ಕೆ ಕಾಲಾವಕಾಶವನ್ನು ಸದಸ್ಯರ ನಿರೀಕ್ಷೆಗಿಂತ ಹೆಚ್ಚಾಗಿ ಕೊಟ್ಟಿದ್ದೀರಿ. ವಿರೋಧ ಪಕ್ಷದ ಪರವಾಗಿ

ನಾನು ತಮಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ..... ತಾವು ಪುನಃ ಈ ಸಭೆಗೆ ವಾಪಸು ಬರುತ್ತೀರಿ. ಮತ್ತು ಸಭಾಪತಿಗಳಾಗಬೇಕೆಂದು ಅನೇಕ ಸದಸ್ಯರು ಹಾರೈಸಿದ್ದಾರೆ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ ತಾವು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಬರಬೇಕು ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. "

ಸದಸ್ಯರುಗಳಾದ ಕೇಶವರಾವ ನಿಟ್ಟೂರಕರ. ಎಂ. ಸಿ. ನರಸಿಂಹನ್. ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ, ಉಪಸಭಾಪತಿಗಳಾಗಿದ್ದ ಎಚ್. ಎಫ್. ಕಟ್ಟಿಮನಿ ಹಾಗೂ ಶ್ರೀಮತಿ ಸುಮಿತ್ರಾಬಾಯಿ ತಾತ್ಯಾಸಾಹೇಬ ನಿಂಬಾಳಕರ ಅವರುಗಳೂ ಮಾತನಾಡುತ್ತಾರೆ.

ಸದಸ್ಯರುಗಳು ಅಭಿನಂದಿಸಿ ಮಾತನಾಡಿದ ನಂತರ ಸಭಾಪತಿಗಳಾದ ಗುದ್ಲೆಪ್ಪನವರು ತಮ್ಮ ಕೃತಜ್ಞತಾ ಭಾಷಣದಲ್ಲಿ ಹೀಗೆ ಹೇಳಿದರು : " ತಮ್ಮ ಶುಭಾಕಾಂಕ್ಷೆ. ಸದಾಶಯ ಇವುಗಳನ್ನು ಯಾವೊತ್ತಿಗೂ ಇಟ್ಟುಕೊಂಡು ಹೋಗತಕ್ಕ ಶಕ್ತಿ ಬೆಳೆಯಲೆಂದು ಪ್ರಾರ್ಥನೆ ಮಾಡುತ್ತೇನೆ. ಉಪಾಧ್ಯಕ್ಷರಾಗಿದ್ದ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರೂ ಈಗ ಉಪಾಧ್ಯಕ್ಷರಾಗಿರುವ ಪೂಜ್ಯ ಗುರುಗಳಾದ ಕಟ್ಟಿಮನಿಯವರೂ ಎರಡೆರಡು ವರ್ಷಗಳ ಕಾಲ ಅಧ್ಯಕ್ಷ ಪೀಠದ ಹೊರೆಯನ್ನು ನನಗಿಂತಲೂ ಹೆಚ್ಚಾಗಿ ಹೊತ್ತಿದ್ದಾರೆ. ನಾನು ಒಂದು ಗಂಟೆ ಕಾಲ ಪೀಠದಲ್ಲಿದ್ದರೆ ಅವರು ನಾಲ್ಕಾರು ಗಂಟೆ ಕಾಲ ಇರುತ್ತಿದ್ದರು. ಆದ್ದರಿಂದ ಶ್ರೀಮತಿ ಲಕ್ಷ್ಮಮ್ಮನವರಿಗೂ ಮತ್ತು ನನ್ನ ಪೂಜ್ಯ ಗುರುಗಳಾದ ಕಟ್ಟಿಮನಿಯವರಿಗೂ ಧನ್ಯವಾದಗಳನ್ನರ್ಪಿಸತ್ತೇನೆ. ಅದೇ ಪ್ರಕಾರವಾಗಿ ಎಲ್ಲ ಸದಸ್ಯರಿಗೂ ಸಹಕಾರವಿತ್ತುದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.. "

ಗುದ್ಲೆಪ್ಪನವರು ಸಭಾಪತಿಗಳಾಗಿ ಸದನದ ಘನತೆ ಗೌರವಗಳನ್ನು ಕಾಪಾಡಿಕೊಂಡು ಬಂದರು. ಇದನ್ನು ಎಲ್ಲ ಸದಸ್ಯರೂ ಪಕ್ಷಾತೀತವಾಗಿ ಶ್ಲಾಘಿಸಿದರು. ಸದ್ಯದ ಅವಧಿಯಲ್ಲಿ ನಿವೃತ್ತರಾದರೂ ಮುಂದಿನ ಅವಧಿಗೆ ಸಭಾಪತಿಗಳಾಗಿ, ಮಂತ್ರಿಗಳಾಗಿ ಹಾಗೂ ಮುಖ್ಯಮಂತ್ರಿಗಳಾಗಿಯೂ ಬರಬೇಕೆಂದು ಸದಸ್ಯರು ಹಾರೈಸಿದುದು ಗುದ್ಲೆಪ್ಪನವರ ವ್ಯಕ್ತಿತ್ವದ ಹಿರಿಮೆ ಗರಿಮೆಗಳನ್ನು ಎತ್ತಿ ತೋರಿಸುತ್ತದೆ.

ಎರಡನೆಯ ಅವಧಿಗೆ ಸಭಾಪತಿಗಳಾಗಿ ಆಯ್ಕೆ

ವಿಧಾನ ಪರಿಷತ್ತಿನ ಸದಸ್ಯತ್ವದ ಅವಧಿ ೧೯೬೬ ರಲ್ಲಿ ಮುಗಿದರೂ ಕೂಡ ಪುನರಾಯ್ಕೆಗೊಂಡ ಗುದ್ಲೆಪ್ಪ ಹಳ್ಳಿಕೇರಿಯವರು ೧೯೭೦ ಡಿಸೆಂಬರ ೨೬ ರಂದು ಎರಡನೆಯ ಅವಧಿಗೆ ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಸರ್ವಾನುಮತದಿಂದ ಆಯ್ಕೆಯಾದರು. ಎಚ್. ಕೆ. ಶಿವರುದ್ರಪ್ಪ ಗುದ್ಲೆಪ್ಪನವರ ಹೆಸರನ್ನು ಸಭಾಪತಿ ಸ್ಥಾನಕ್ಕೆ ಸೂಚಿಸಿದರು. ಟಿ. ಎನ್. ನರಸಿಂಹಮೂರ್ತಿ ಅನುಮೋದಿಸಿದರು. ಅವರೀರ್ವರೂ ಗೌರವದಿಂದ ಗುದ್ಲೆಪ್ಪನವರನ್ನು ಸಭಾಪತಿ ಆಸನದತ್ತ ಕರೆದೊಯ್ದರು.

ಈ ಸಂದರ್ಭದಲ್ಲಿ ಸಭಾಪತಿ ಗುದ್ಲೆಪ್ಪನವರನ್ನು ಅಭಿನಂದಿಸಿ ಸದಸ್ಯರುಗಳು ಭಾಷಣ ಮಾಡಿದರು. ಈ ಭಾಷಣಗಳಲ್ಲಿ ಅವರ ಘನ ವ್ಯಕ್ತಿತ್ವದ ಹಲವು ಮುಖಗಳನ್ನು ಕಾಣಬಹುದು : [೩೭]

ಕೆ. ವಿ. ಶಂಕರಗೌಡ (ವಿದ್ಯಾಶಾಖೆಯ ಮಂತ್ರಿಗಳು) : " .....ಸ್ವಾತಂತ್ರ್ಯ ಸಂಗ್ರಾಮದ ವೀರಯೋಧರೂ, ಕರ್ನಾಟಕದ ಜನಪ್ರಿಯ ನಾಯಕರೂ ಹಾಗೂ ರಚನಾತ್ಮಕ ಕಾರ್ಯಕರ್ತರಾಗಿರತಕ್ಕ ಮಾನ್ಯ ಶ್ರೀ ಜಿ. ವಿ. ಹಳ್ಳಿಕೇರಿಯವರು

ಈ ಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾಗಿರುವದು ನನಗೆ ತುಂಬ ಸಂತೋಷವನ್ನುಂಟು ಮಾಡಿದೆ..... ಬಡವರ ಬಗ್ಗೆ ಇವರಿಗಿರತಕ್ಕ ಅನುಕಂಪ ಅನುಕರಣೀಯವಾದುದು. ಈ ಹಿಂದೆ ಈ ಸಭೆಯ ಅಧ್ಯಕ್ಷರಾಗಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರರಾಗುವ ರೀತಿಯಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿದ್ದಾರೆ..... ಸದನದ ಘನತೆ ಗೌರವಗಳನ್ನು ಎತ್ತಿ ಹಿಡಿಯುವುದರಲ್ಲಿ ಜಯಗಳಿಸಲೆಂದು ಎಲ್ಲ ಸದಸ್ಯರ ಪರವಾಗಿ ಹೃತ್ಪೂರ್ವಕ ಹಾರೈಸುವೆ..... "

ಎ. ಎಚ್. ಶಿವಾನಂದಸ್ವಾಮಿ : " .....ಸರಕಾರಿ ಪಕ್ಷದವರಿಗೆ ಎಲ್ಲಾ ರಕ್ಷಣೆ ಇದೆ. ಆದರೆ ನಮಗೆ ಇರುವುದು ನಿಮ್ಮ ಒಂದು ರಕ್ಷಣೆ ಮಾತ್ರ. ಅಂತಹ ಒಂದು ರಕ್ಷಣೆಯನ್ನು ತಾವು ಕೊಡುತ್ತೀರಿ ಎಂದು ನಾವು ನಂಬಿದ್ದೇವೆ..... ತಾವು ಕರ್ನಾಟಕದ ಮುಖ್ಯಮಂತ್ರಿಯಾಗಬೇಕಾಗಿತ್ತು; ಮುಂದಾದರೂ ತಾವು ಮುಖ್ಯಮಂತ್ರಿಯಾಗುತ್ತೀರಿ ಎಂದು ನಾನು ಭಾವಿಸಿದ್ದೇನೆ..... "

ಎನ್. ರಾಚಯ್ಯ : " .....ತಮ್ಮ ವಿಚಾರದಲ್ಲಿ ಶ್ರೀಮಾನ್ ಶಿವಾನಂದಸ್ವಾಮಿಯವರು ಹೇಳಿದ ಹಾಗೆ ಕರ್ನಾಟಕದ ಹೋರಾಟಗಾರರಾದ ನೀವು ಏಕೀಕರಣ ಆದ ಮೇಲೆ ನೀವೇ ಮುಖ್ಯಮಂತ್ರಿಗಳಾಗುತ್ತೀರಿ ಎಂದು ನಾನೂ ಭಾವಿಸಿಕೊಂಡಿದ್ದೆನು. .....ತಾವು ಅಧಿಕಾರದಲ್ಲಿರಲಿ. ಇಲ್ಲದೇ ಇರಲಿ ಅನೇಕ ಕ್ಷೇತ್ರಗಳಲ್ಲಿ ರಾಜ್ಯದ ಸರ್ವತೋಮುಖವಾದ ಪ್ರಗತಿಗಾಗಿ ಜನತೆಯ ಹಿತಕ್ಕಾಗಿ ಕೆಲಸವನ್ನು ಮಾಡಿದ್ದೀರಿ..... "

ಎಚ್. ಕೆ. ಶಿವರುದ್ರಪ್ಪ : " .....ತಾವು ಈ ಒಂದು ಸ್ಥಾನವನ್ನು ಅಲಂಕರಿಸಿರುವ ಕಾಲ ಬಹಳ ಕಠಿಣವಾದ ಕಾಲ. ಹಿಂದಿನ ಸ್ಥಿತಿಗೂ ಇವೊತ್ತಿನ ಸ್ಥಿತಿಗೂ ಬಹಳ ವ್ಯತ್ಯಾಸವಿದೆ. ದೇಶದಲ್ಲಿ ನಾನಾ ತರಹ ಕಷ್ಟಕಾರ್ಪಣ್ಯಗಳು ಇರತಕ್ಕ ಕಾಲದಲ್ಲಿ. ಕರ್ನಾಟಕದ ಗಡಿಗಳಿಗೆ ಧಕ್ಕೆ ಬಂದಿರತಕ್ಕ ಸಮಯದಲ್ಲಿ ಕರ್ನಾಟಕಕ್ಕೆ ದುಡಿದ ಮಹನೀಯರು ಈ ಸ್ಥಾನವನ್ನು ಅಲಂಕರಿಸಿರುವುದು ಇನ್ನೂ ಹೆಚ್ಚಿನ ಮಹತ್ವದಿಂದ ಕೂಡಿದೆ ಎಂದು ನಾನು ಭಾವಿಸುತ್ತೇನೆ. ತಮ್ಮ ಅಧಿಕಾರಾವಧಿಯಲ್ಲಿ ದೇಶದ ರಕ್ಷಣೆ ಹಾಗೂ ಕರ್ನಾಟಕ ಗಡಿ ರಕ್ಷಣೆ ಆಗುತ್ತದೆ ಎನ್ನತಕ್ಕಂಥ ವಿಷಯದಲ್ಲಿ ನಂಬಿಕೆಯುಳ್ಳವರಲ್ಲಿ ನಾನೂ ಒಬ್ಬ..... "

ವಾಯ್. ಎಸ್. ಪಾಟೀಲ : " .....ನಿಮ್ಮ ಚಿಕ್ಕ ವಯಸ್ಸಿನಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಭಾರತದ ಸ್ವಾತಂತ್ರ್ಯದ ಸಲುವಾಗಿ ಜೀವನವನ್ನೇ ಮುಡುಪಾಗಿಟ್ಟ ನಿಮ್ಮ ಧೈರ್ಯವನ್ನು ನೋಡಿದರೆ ನಮಗೆ ತುಂಬಾ ಉತ್ಸಾಹ ಬರುತ್ತದೆ. ಕನ್ನಡ ಜನತೆಯ ಸೇವೆಗಾಗಿ ತಮ್ಮ ಈ ವೃದ್ಧ ವಯಸ್ಸಿನಲ್ಲಿಯೂ ಕೂಡ ಶ್ರಮಿಸುತ್ತಿದ್ದೀರಿ ಇದು ನಿಜವಾಗಿಯೂ ಶ್ಲಾಘನೀಯವಾಗಿದೆ..... "

ಸಿ. ಎಸ್. ಬಾಲಕೃಷ್ಣಗೌಡ : " .....ತಾವು ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದೀರಿ. ತಮಗೆ ಮುಖ್ಯಮಂತ್ರಿಯ ಪದವಿ ಸಿಗಬೇಕಾಗಿತ್ತು ಎಂಬುದಾಗಿ ನಮ್ಮ ಸ್ನೇಹಿತರು ಈಗ ಹೇಳಿದರು. ಮುಖ್ಯಮಂತ್ರಿಯ ಪದವಿಯೇ ದೊಡ್ಡ ಪದವಿ ಎಂದು ನಾನು ತಿಳಿದುಕೊಂಡಿಲ್ಲ. ಪೂಜ್ಯ ಮಹಾತ್ಮಾ ಗಾಂಧಿಯವರು ಯಾವ ಮುಖ್ಯವಾದ ಪದವಿಯನ್ನು ಹೊರದೇ ಇದ್ದರೂ ಕೂಡ ಇಡೀ ರಾಷ್ಟ್ರಕ್ಕೆ ಮಹಾ ನಾಯಕರಾಗಿದ್ದರು..... ಅವರಂತೆ ತಾವು ಕೂಡ

ಪದವಿಗಾಗಿ ಆಸೆ ಪಡದೆ ದೇಶ ಕಲ್ಯಾಣಕ್ಕಾಗಿ ಹೋರಾಟ ಮಾಡಿದವರು. ನಿಮಗೆ ಈ ಒಂದು ಸ್ಥಾನಮಾನವನ್ನು ಕೊಟ್ಟು ನಿಮ್ಮನ್ನು ಗೌರವಿಸಿರುವುದು ನಮಗೆ ನಾವೇ ಗೌರವಿಸಿಕೊಂಡಿದ್ದೇವೆಂದು ಹೇಳಿದರೆ ತಪ್ಪಾಗಲಾರದು..... "

ಟಿ. ಎನ್. ನರಸಿಂಹಮೂರ್ತಿ : " .....ಅತ್ಯಂತ ಹಿರಿಯ ನಾಯಕರಾದಂಥ ತಮ್ಮಂತಹವರು ಈ ಉನ್ನತ ಸ್ಥಾನಕ್ಕೆ ಬರತಕ್ಕಂಥ ಕಾಲದಲ್ಲಿ ಅಂದರೆ ಚುನಾವಣೆಯ ಆಯ್ಕೆಯ ಸಂಬಂಧದಲ್ಲಿ ತಮ್ಮ ನಾಮಾಂಕಿತವನ್ನು ಅನುಮೋದನೆ ಮಾಡುವ ಅವಕಾಶ ನನಗೆ ಸಿಕ್ಕಿದ್ದಕ್ಕಾಗಿ ನಾನು ಧನ್ಯನಾಗಿದ್ದೇನೆ. ಮತ್ತು ನಾನು ಈ ದಿನ ಅದೃಷ್ಟವಂತ ಯುವಕನಾಗಿದ್ದೇನೆ. ನಿಮ್ಮ ವಿಚಾರದಲ್ಲಿ ವೈಯಕ್ತಿಕವಾಗಿ ನಾನು ವಿದ್ಯಾರ್ಥಿ ದೆಸೆಯಿಂದಲೂ ಕೇಳಿದ್ದೇನೆ. ತಾವು ದೊಡ್ಡ ಹೋರಾಟಗಾರರು. ಕನ್ನಡ ರಾಜ್ಯ ಉದಯವಾಗುವಂತೆ ಮಾಡಲು ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ್ದೀರಿ. ಅದರ ಫಲವಾಗಿ ಇಂದು ವಿಶಾಲ ಕರ್ನಾಟಕವಾಗಿದೆ..... ಎರಡನೆಯ ಬಾರಿಗೆ ಈ ಸ್ಥಾನ ಅಲಂಕರಿಸಿರುವವರು ನೀವೊಬ್ಬರೇ ಎಂದು ಕೇಳಿದಾಗ ಬಹುಶಃ ಈ ಸದನದ ಅದೃಷ್ಟವೆಂದು ಹೇಳಬಹುದು...... "

ಕೆ. ಚನ್ನಬಸವನಗೌಡ : " .....ಕರ್ನಾಟಕ ಏಕೀಕರಣವಾಗಲು ಅನೇಕರು ವಿರೋಧ ವ್ಯಕ್ತಪಡಿಸಿದರೂ ಕೂಡ ಅದನ್ನು ತಾವು ಲೆಕ್ಕಿಸದೆ ಎಲ್ಲ ಕಡೆ ಸಂಚಾರ ಮಾಡಿ ಕರ್ನಾಟಕ ಏಕೀಕರಣವಾಗುವುದಕ್ಕೆ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿದಿರಿ. ಆ ಒಂದು ಕೀರ್ತಿ ನಿಮಗೆ ಸಲ್ಲುತ್ತದೆ. ಬಳ್ಳಾರಿ ಕೂಡ ಆಂಧ್ರಕ್ಕೆ ಸೇರಬೇಕೆಂಬ ಪರಿಸ್ಥಿತಿ ಬಂದಾಗ ಕೂಡ ತಾವು ಹೋರಾಟ ಮಾಡಿ ಅದು ಮೈಸೂರಿನಲ್ಲಿ ಸೇರುವಂತೆ ಮಾಡಿದಿರಿ..... ತಾವು ಮುಂಬಯಿ ಅಸೆಂಬ್ಲಿಯ ಸದಸ್ಯರಾಗಿದ್ದ ಕಾಲಕ್ಕೆ ಚುನಾವಣೆಯಲ್ಲಿ ಸೋತಿದ್ದ ಮೊರಾರ್ಜಿ ದೇಸಾಯಿಯವರನ್ನು ಮುಂಬಯಿ ರಾಜ್ಯಕ್ಕೆ ಮುಖ್ಯಮಂತ್ರಿಗಳನ್ನಾಗಿ ಮಾಡಲು ಸೂಚನೆ ಬಂದ ಕಾಲಕ್ಕೆ ತಾವು ಸೋತವರನ್ನು ಮುಖ್ಯಮಂತ್ರಿಗಳನ್ನಾಗಿ ನೇಮಕ ಮಾಡಬಾರದೆಂದು ಪ್ರತಿಭಟನೆ ವ್ಯಕ್ತಪಡಿಸಿದಿರಿ. ಅದರಿಂದ ನೀವು ನಿಷ್ಠುರ ಕಟ್ಟಿಕೊಂಡರೂ ಕೂಡ ಸತ್ಯಕ್ಕಾಗಿ, ನ್ಯಾಯಕ್ಕಾಗಿ ಹೋರಾಟ ಮಾಡಿದಿರಿ. ತಮ್ಮಂತಹವರನ್ನು ಸಭಾಪತಿಯವರನ್ನಾಗಿ ನೇಮಕ ಮಾಡಿದ್ದು ಸ್ತುತ್ಯವಾಗಿದೆ..... "

ವಾಯ್. ರಾಮಚಂದ್ರ : " .....ಕಾಗಿನೆಲೆಯಲ್ಲಿ ಕನಕದಾಸರ ಜಯಂತಿ ಸಂದರ್ಭದಲ್ಲಿ ಅಧ್ಯಕ್ಷರಾಗಿ ಹೆಚ್ಚಿನ ಮಟ್ಟದಲ್ಲಿ ಕೆಲಸಗಳನ್ನು ಮಾಡಿದ್ದೀರಿ. ಕಾಗಿನೆಲೆಗೆ ಒಳ್ಳೆಯ ರಸ್ತೆಗಳಿರಲಿಲ್ಲ. ಈಗ ಅಲ್ಲಿ ಒಳ್ಳೊಳ್ಳೆಯ ರಸ್ತೆಗಳಾಗಿವೆ. ಜನಗಳಿಗೆ ಕುಡಿಯುವುದಕ್ಕೆ ನೀರು ಇರಲಿಲ್ಲ. ಅದನ್ನು ಸಹ ಮಾಡಿಸಿ ಕೊಟ್ಟಿದ್ದೀರಿ. ಈ ರೀತಿಯಲ್ಲಿ ಒಳ್ಳೆಯ ಉಪಯುಕ್ತವಾದ ಕೆಲಸಗಳನ್ನು ಮಾಡಿ ಈಗ ಕಾಗಿನೆಲೆಯನ್ನು ಒಂದು ಸುಂದರ ಪಟ್ಟಣವನ್ನಾಗಿ ಪರಿವರ್ತನೆ ಮಾಡಿದ್ದೀರಿ. ಕನಕದಾಸರ ಜಯಂತಿ ಸಂಬಂಧದಲ್ಲಿ ಸುಮಾರು ೫ - ೬ ಲಕ್ಷ ಜನಗಳು ಅಲ್ಲಿ ಬಂದು ಸೇರಿದ್ದರು. ನಾನೂ ಸಹ ಆ ಸಮಾರಂಭದಲ್ಲಿ ಭಾಗವಹಿಸಿದ್ದೆ. ತಮ್ಮ ಶಕ್ತಿ ಏನು ಎಂಬುದು ಇದರಿಂದಲೇ ವ್ಯಕ್ತವಾಗುತ್ತದೆ. ತಾವು ಮಾತಿಗಿಂತ ಕೃತಿಯಲ್ಲಿ ಹೆಚ್ಚು ವಿಶ್ವಾಸ ಇರತಕ್ಕಂಥವರು..... "

ಬಸವರಾಜ ಕಟ್ಟಿಮನಿ (ಖ್ಯಾತ ಕಾದಂಬರಿಕಾರರು) : " .....ನಾನು ಸುಮಾರು ೪೦ ವರ್ಷಗಳಿಂದ ತಮ್ಮನ್ನು ಬಲ್ಲೆ. ತಮ್ಮ ವ್ಯಕ್ತಿತ್ವದ ವಿಶೇಷ ನನಗೆ ಗೊತ್ತಿದೆ. ತಾವು ಅತ್ಯುತ್ತಮ ಸಂಘಟಕರು ಮತ್ತು ಅತ್ಯಂತ ಧೈರ್ಯಶಾಲಿಯಾದ ಹೋರಾಟಗಾರರು. ಕನ್ನಡ ನಾಡು ಒಂದಾಗುವುದಕ್ಕೆ ಮೊದಲು ಕರ್ನಾಟಕವನ್ನು ಒಂದುಗೂಡಿಸಬೇಕೆಂಬ ವಿಷಯದಲ್ಲಿ

ತಾವು ಆ ಚಳುವಳಿಯಲ್ಲಿ ಅಗ್ರಗಣ್ಯರಾಗಿದ್ದಿರಿ. ಕರ್ನಾಟಕದ ರಚನೆಯಾಯಿತು. ಆದ ಮೇಲೆ ತಾವು. ಮುಖ್ಯಮಂತ್ರಿ ಅಥವಾ ಇತರ ಯಾವ ಮಂತ್ರಿಯೂ ಆಗಲಿಲ್ಲ. ಆದರೆ ತಾವು ಮಂತ್ರಿಗಳಿಗಿಂತ ಹೆಚ್ಚಿನವರು ಎಂಬುದು ನನ್ನ ಅಭಿಪ್ರಾಯ. ಮಂತ್ರಿಗಳನ್ನು ನಿರ್ಮಾಣ ಮಾಡಿದವರು ತಾವು. ಈಗಲೂ ಕೂಡ ತಾವು ಮಂತ್ರಿಗಳನ್ನು ನಿರ್ಮಾಣ ಮಾಡುವ ನಾಯಕರು. ತಮ್ಮ ಸ್ವಭಾವವನ್ನು ಬಲ್ಲ ನಾನು ಒಂದೇ ಮಾತಿನಲ್ಲಿ ಹೇಳಬೇಕಾದರೆ ಪಂಚ ಪಾಂಡವರಲ್ಲಿ ಭೀಮಸೇನ ಇದ್ದ ಹಾಗೆ ತಾವು ನಮ್ಮ ರಾಜ್ಯದ ನಾಯಕರು. ಸುಮಾರು ೮ - ೧೦ ದಿವಸಗಳ ಹಿಂದೆ ಮಹಾಜನ ವರದಿಯು ಸಂಸತ್ತಿನಲ್ಲಿ ಮಂಡಿಸಲ್ಪಟ್ಟ ತರುವಾಯ ಧಾರವಾಡದಲ್ಲಿ ನಡೆದ ಒಂದು ಸಭೆಯ ಅಧ್ಯಕ್ಷತೆ ವಹಿಸಿದ್ದೀರಿ. ನಾನೂ ಅಲ್ಲಿದ್ದೆ. ಆಗ ತಾವು ಕೇಂದ್ರ ಸರಕಾರದ ವರ್ತನೆಯನ್ನು ಕಟುವಾಗಿ ಖಂಡಿಸಿದ್ದೀರಿ. ಇನ್ನು ಮೇಲೆ ಹೋರಾಟ ಮಾಡಬೇಕಾದ ಕಾಲ ಬರುವುದು. ಅದಕ್ಕೆ ತಯಾರಾಗಬೇಕು ಎಂದು ಕರೆ ಕೊಟ್ಟಿರಿ..... ನಾವು ನೀವು ಎಲ್ಲರೂ ಸೇರಿಕೊಂಡು ಹೋರಾಟ ಮಾಡುವ ಪ್ರಸಂಗ ಬಂದರೆ ಅದಕ್ಕೆ ಯೋಗ್ಯರಾದ ನಾಯಕರು ಯಾರು ಎಂಬ ಪ್ರಶ್ನೆ ಬರುತ್ತದೆ. ನನ್ನ ಅಭಿಪ್ರಾಯದಲ್ಲಿ ಉತ್ತರ ಕರ್ನಾಟಕ ಮಾತ್ರವಲ್ಲ. ಇಡೀ ಕರ್ನಾಟಕದಲ್ಲಿ ಹೋರಾಟವನ್ನು ಸಂಘಟಿಸಿ ಅದನ್ನು ಯಶಸ್ವಿಯಾಗಿ ಮಾಡಬಲ್ಲ ಕೇವಲ ಎರಡು - ಮೂರು ಜನ ನಾಯಕರಲ್ಲಿ ತಾವು ಒಬ್ಬರು. ಉತ್ತರ ಕರ್ನಾಟಕದಲ್ಲಂತೂ ಇಂದು ತಮ್ಮನ್ನು ಬಿಟ್ಟರೆ ಬೇರೆ ನಾಯಕರಿಲ್ಲ..... "

ಸದಸ್ಯರುಗಳಾದ ಜಿ. ಎಸ್. ಉಲ್ಲಾಳ. ಎಂ. ಸತ್ಯನಾರಾಯಣರಾವ್. ಎಸ್. ಸಿ. ಕುಬಸದ. ಕೆ. ಜಾತಪ್ಪರಾಯ. ಕೇಶವರಾವ ನಿಟ್ಟೂರಕರ. ಕೆ. ಸೂರ್ಯನಾರಾಯಣ ಅಡಿಗ. ಟಿ. ಎಂ. ಕೆ. ಪೀರಸಾಬ. ಶ್ರೀಮತಿ ಲೀಲಮ್ಮ ಶಿವನಂಜಪ್ಪ. ಬಿ. ರಂಗಪ್ಪ. ಎನ್. ಎಂ. ಖೇಣಿ. ಆರ್. ಪರಮೇಶ್ವರಪ್ಪ. ಎಂ. ಜಿ. ಹಂದ್ರಾಳ. ಕೆ. ಧೂಮಪ್ಪ ಅವರುಗಳೂ ಸಭಾಪತಿಗಳಾದ ಗುದ್ಲೆಪ್ಪನವರನ್ನು ಅಭಿನಂದಿಸಿ ಮಾತನಾಡಿದರು.

ಸದಸ್ಯರುಗಳು ಮಾತನಾಡಿದ ನಂತರ ಸಭಾಪತಿಗಳಾದ ಗುದ್ಲೆಪ್ಪನವರು ಭಾಷಣ ಮಾಡಿದರು :

" ಮಾನ್ಯ ಸದನವು ನನ್ನನ್ನು ಸರ್ವಾನುಮತದಿಂದ ಎರಡನೇ ಸಾರಿ ಸಭಾಪತಿಯನ್ನಾಗಿ ಆಯ್ಕೆ ಮಾಡಿ ನನಗೆ ಒಂದು ದೊಡ್ಡ ಗೌರವವನ್ನು ಮಾಡಿದೆ. ಅದಕ್ಕಾಗಿ ನಾನು ಈ ಮಾನ್ಯ ಸದನಕ್ಕೆ ಬಹಳ ಕೃತಜ್ಞನಾಗಿದ್ದೇನೆ..... ಅನೇಕ ನನ್ನ ಮಿತ್ರರು ಹೇಳಿದ ಹಾಗೆ ಕಳೆದ ೫೦ ವರ್ಷಗಳಿಂದ ನಾನು ಒಬ್ಬ ರಾಷ್ಟ್ರ ಸೇವಕನಾಗಿ. ಒಬ್ಬ ಹೋರಾಟಗಾರನಾಗಿ ಕೆಲಸ ಮಾಡಿದ್ದೇನೆ. ಈ ತರಹದ ಕೆಲಸ ಮಾಡುವುದರಲ್ಲಿ ಸಂಪೂರ್ಣವಾದಂತಹ ಆನಂದವನ್ನು ಸಮಾಧಾನವನ್ನು ಪಡೆದಿದ್ದೇನೆ. ಇವೊತ್ತು ನನಗೆ ಈ ಸ್ಥಾನ ದೊರೆಯಲಿಲ್ಲ. ಆ ಸ್ಥಾನ ದೊರೆಯಲಿಲ್ಲ ಎಂದು ಎಳ್ಳಷ್ಟೂ ಅಸಮಾಧಾನ ಇಲ್ಲ. ಯಾವಾಗಲೂ ನನ್ನ ಎದುರಿಗೆ ಕರ್ತವ್ಯ ಇದ್ದರೆ ಅದೇ ನನಗೆ ಸಮಾಧಾನವಾಗುತ್ತದೆ..... ನಾನು ಯಾವಾಗಲೂ ಜನಗಳ ಮಧ್ಯೆ ಇದ್ದಂತಹ. ಯಾವಾಗಲೂ ಹೋರಾಟ ಮಾಡುವಂತಹ. ಅನ್ಯಾಯವನ್ನು ಎದುರಿಸುವಂತಹ ಮತ್ತು ಹಳ್ಳಿಗರ ಎದುರಿಗಿದ್ದಂತಹ ಮನುಷ್ಯ ಎಂದು ಹೇಳುತ್ತೇನೆ..... ಕಳೆದ ಸಲ ನಾನು ಸಭಾಪತಿಯಾಗಿ ನಾಲ್ಕು ವರ್ಷಗಳ ಕಾಲ ಇದ್ದಾಗ ಮಾನ್ಯ ಸದಸ್ಯರು ನನಗೆ ಒಂದು ಪ್ರಸಂಗದಲ್ಲಿಯೂ ಸಹ ರೂಲಿಂಗ್ ಕೊಡುವಂತಹ ಅವಕಾಶವನ್ನೇ ಕೊಡಲಿಲ್ಲ.....

ಈ ಸದನದ ನಾಲ್ಕೂ ಗೋಡೆಗಳ ಮಧ್ಯದಲ್ಲಿ ಇರುವ ಕಾಲಕ್ಕೆ ನನ್ನಷ್ಟು ನಿಷ್ಪಕ್ಷಪಾತವಾಗಿ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಯಾವ ಪಕ್ಷದವರೂ ನಮಗೆ ಅನ್ಯಾಯವಾಗಿದೆ. ಪಕ್ಷಪಾತವಾಗಿದೆ. ನಮಗೆ ಇಂತಹ ಅವಕಾಶ ದೊರೆಯಲಿಲ್ಲ ಎನ್ನುವಂತಹ ಪ್ರಸಂಗ ಯಾವ ಕಾಲಕ್ಕೂ ಒಂದು ನಿಮಿಷವೂ ಕೂಡ ಬರುವುದಿಲ್ಲ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ..... ನೀವು ನನ್ನ ವಿಷಯವಾಗಿ ಸದ್ಭಾವನೆಗಳನ್ನು. ವಿಶ್ವಾಸವನ್ನು ವ್ಯಕ್ತಮಾಡಿದ್ದೀರಿ. ಹೆಚ್ಚಿನ ರೀತಿಯಲ್ಲಿ ಇಲ್ಲಿ ಕೆಲಸ ಮಾಡುವುದಕ್ಕೆ ಯೋಗ್ಯವಾದ ಶಕ್ತಿಯನ್ನು ಪರಮಾತ್ಮನು ನನಗೆ ಕೊಡಲಿ ಎಂಬುದಾಗಿ ಪ್ರಾರ್ಥಿಸಿ. ಮತ್ತೊಮ್ಮೆ ತಮಗೆ ಅಭಯ ವಚನವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. "

ಎರಡನೆಯ ಅವಧಿಗೆ ಗುದ್ಲೆಪ್ಪನವರು ಸಭಾಪತಿಗಳಾಗಿ ಸರ್ವಾನುಮತದಿಂದ ಆಯ್ಕೆಗೊಂಡುದುದಕ್ಕೆ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರುಗಳ ಪ್ರೀತಿ ವಿಶ್ವಾಸಗಳೇ ಕಾರಣ. ಸದನದ ಘನತೆ ಗೌರವವನ್ನು ಕಾಪಾಡಿಕೊಂಡು ಬಂದುದಲ್ಲದೆ ಅವರ ಅವಧಿಯಲ್ಲಿ ಸಭೆಯ ಕಲಾಪಗಳು ಯಾವುದೇ ಅಡೆತಡೆಗಳಿಲ್ಲದೆ ಸುಗಮವಾಗಿ ನಡೆದವು.

ಅತ್ಯುತ್ತಮ ಸಭಾಪತಿ

ಗುದ್ಲೆಪ್ಪನವರು ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಶಿಸ್ತು ಮತ್ತು ನಿಷ್ಪಕ್ಷಪಾತದಿಂದ ಕಾರ್ಯನಿರ್ವಹಿಸಿ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದರು.

ಅವರು ಸಭಾಪತಿಗಳಾಗಿದ್ದ ಕಾಲದಲ್ಲಿ ವಿಧಾನ ಪರಿಷತ್ತಿನಲ್ಲಿ ಆಡಳಿತ ಕಾಂಗ್ರೆಸ್ ಪಕ್ಷದ ಸದಸ್ಯರಾಗಿದ್ದ ಟಿ. ಎನ್. ನರಸಿಂಹಮೂರ್ತಿ ಅವರು ಹೀಗೆ ಹೇಳುತ್ತಾರೆ : " ಗುದ್ಲೆಪ್ಪ ಹಳ್ಳಿಕೇರಿ ಅವರು ವಿಧಾನ ಪರಿಷತ್ತಿನಲ್ಲಿ ನಿಯಮಗಳನ್ನು ತತ್ವಶಃ ಪರಿಪಾಲನೆ ಮಾಡಿ ಸದನದಲ್ಲಿ ಶಿಸ್ತನ್ನು ಕಾಪಾಡತಕ್ಕಂಥವರಲ್ಲಿ ಪ್ರಥಮರಾಗಿದ್ದರು. ಸಭಾಪತಿ ಸ್ಥಾನಕ್ಕೆ ಅವರು ಸೂಕ್ತವಾದ ವ್ಯಕ್ತಿಗಳಾಗಿದ್ದರು. ಸದನದಲ್ಲಿ ಅವರು ಕೈಕೊಂಡ ನಿರ್ಧಾರಗಳು. ನೀಡುತ್ತಿದ್ದಂತಹ ಆದರ್ಶಗಳು ನಮ್ಮೆಲ್ಲರಿಗೆ ಕೈಗನ್ನಡಿಯಾಗಿ ಮಾರ್ಗದರ್ಶಕವಾಗಿವೆ. ವಿರೋಧ ಪಕ್ಷವಾಗಲಿ. ಆಳುವ ಪಕ್ಷವಾಗಲಿ ಶ್ರೀಮಾನ್ ಹಳ್ಳಿಕೇರಿಯವರೆಂದರೆ ಅವರ ವಿರುದ್ಧ ಯಾರೂ ಮಾತನಾಡುತ್ತಿರಲಿಲ್ಲ. ಅಂತಹ ವ್ಯಕ್ತಿತ್ವವನ್ನು ಪಡೆದಂತಹ ಕೆಲವೇ ನಾಯಕರುಗಳಲ್ಲಿ ಅವರೊಬ್ಬರು. " [೨೮]

ವಿಧಾನ ಪರಿಷತ್ತಿನಲ್ಲಿ ಜನಸಂಘದ ಸದಸ್ಯರಾಗಿದ್ದ ವಾಯ್. ಎಸ್. ಪಾಟೀಲ ಅವರ ಅಭಿಪ್ರಾಯವಿದು : " .....ಅವರು ಸಭಾಪತಿಗಳಾಗಿದ್ದಾಗ ಸದನದಲ್ಲಿ ಯಾವ ಗೊಂದಲಗಳೂ ಏಳುತ್ತಿರಲಿಲ್ಲ. ಚರ್ಚೆಗಳು ಮತ್ತು ಪ್ರಶ್ನೋತ್ತರ ವೇಳೆಯು ಶಿಸ್ತು. ಶಾಂತಿಯಿಂದ ಇರುವಂತೆ ನೋಡಿಕೊಳ್ಳುತ್ತಿದ್ದರು. ಗುದ್ಲೆಪ್ಪನವರು ವಿರೋಧ ಪಕ್ಷದವರೊಡನೆ ಆತ್ಮೀಯತೆ. ಸಹಾನುಭೂತಿ ಹಾಗೂ ಸಹಕಾರದಿಂದ ನಡೆದುಕೊಳ್ಳುತ್ತಿದ್ದರು. ಅವರಲ್ಲಿ ದ್ವೇಷ. ವೈಷಮ್ಯ ಇರಲಿಲ್ಲ. " [೨೯]

ಹೀಗೆ ಗುದ್ಲೆಪ್ಪನವರು ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರೊಂದಿಗೆ ಸೌಹಾರ್ದತೆಯಿಂದ ಇದ್ದರು. ಎಲ್ಲ ಸದಸ್ಯರಿಗೂ ಸದನದ ಕಾರ್ಯಕಲಾಪಗಳಲ್ಲಿ ಸಮಾನ ಅವಕಾಶ ಕೊಟ್ಟು ಅತ್ಯುತ್ತಮ ಸಭಾಪತಿಗಳೆನಿಸಿಕೊಂಡರು.

ಟಿಪ್ಪಣಿಗಳು

೧. ಗುದ್ಲೆಪ್ಪನವರ ೧೯೬೧ ರ ದಿನಚರಿ

೨. **Mysore Legislative Council Debates** — Official Report, 20th session, vol. - XXVIII (Nos. : 1 - 15), 20 July 1966 to 6 August 1966 (Bangalore : Mysore legislature secretariat, 1966) p. 260 and 261

೩. *Ibid.* p. 261 and 262

೪. *Ibid.* p. 262

೫. *Ibid.*

೬. *Ibid.* p. 263

೭. *Ibid.*

೮. *Ibid.* p. 264

೯. *Ibid.* p. 265 and 266

೧೦. *Ibid.* p. 266 - 268

೧೧. *Ibid.* p. 269

೧೨. *Ibid.* 23rd session, Vol. - XXXIV (No. : 2), 8 December 1967, p. 63

೧೩. *Ibid.* p. 65

೧೪. *Ibid.* p. 66

೧೫. *Ibid.* p. 67 and 68

೧೬. *Ibid.* p. 68 and 69

೧೭. *Ibid.* p. 70

೧೮. *Ibid.* 26 session, vol - XXXIX (Nos. : 1 - 11), 15 - 29 January 1969, p. 134

೧೯. *Ibid.* p. 135 and 136

೨೦. *Ibid.* p. 136 - 138

೨೧. *Ibid.* 25th session, vol. - XXXVIII (Nos. : 1 - 16), 2 - 19 September 1968, p. 164 - 169

೨೨. *Ibid.* p. 470 and 471

೨೩. *Ibid.* p. 472 - 474

೨೪. *Ibid.* 14th session, vol. - XIV (No. : 2), 3 July 1962, p. 8 - 31

೨೫. ಪಟ್ಟಣಶೆಟ್ಟಿ ಸಿದ್ದಲಿಂಗ.. **ಹಳ್ಳಿಕೇರಿ ಗುದ್ಲೆಪ್ಪನವರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೨೦೦೦. ತೃ. ಮು.) ಪು. ೬೨

೨೬. **Mysore Legislative Council Debates** — Official Report, 36th session, vol. - XXVIII (Nos. : 8 - 14) 4 - 12 April 1966, p. 649 - 656

೨೭. *Ibid.* 13th session, vol. - XLVII (Nos. : 1 - 4) 23 - 28 December 1970, p. 39 - 59

೨೮. ನರಸಿಂಹಮೂರ್ತಿ ಟಿ. ಎನ್.. ಮಾಜಿ ಸಚಿವರು ಹಾಗೂ ಅಧ್ಯಕ್ಷರು ರಾಜ್ಯ ಹಣಕಾಸು ಆಯೋಗ. ಬೆಂಗಳೂರು. ವಯಸ್ಸು : ೬೩. ೧೮ -೧೨ - ೨೦೦೦ ದಂದು ಸಂದರ್ಶನದಲ್ಲಿ ಹೇಳಿದುದು.

೨೯. ಪಾಟೀಲ ವಾಯ್. ಎಸ್.. ಮಾಜಿ ವಿಧಾನ ಪರಿಷತ್ ಸದಸ್ಯರು. ಧಾರವಾಡ. ವಯಸ್ಸು : ೭೫. ೧೬ - ೭ - ೨೦೦೧ ರಂದು ಸಂದರ್ಶನದಲ್ಲಿ ಹೇಳಿದುದು.

ಅಧ್ಯಾಯ ಏಳು

ಜನನಾಯಕನಿಗೆ ಅಂತಿಮ ವಿದಾಯ

ಅಧ್ಯಾಯ ಏಳು

ಜನನಾಯಕನಿಗೆ ಅಂತಿಮ ವಿದಾಯ

ಬದುಕಿನುದ್ದಕ್ಕೂ ಜನಸೇವೆಗಾಗಿ ಹಗಲಿರುಳೆನ್ನದೆ ಊರಿಂದೂರಿಗೆ ಸಂಚಾರ. ವಿಶ್ರಾಂತಿಯನ್ನು ಬಯಸದೆ ದೇಹದ ದಣಿವನ್ನು ಲೆಕ್ಕಿಸದೆ ನಿರಂತರ ಕಾರ್ಯತತ್ಪರತೆ ಹಾಗೂ ತಾವು ಕಟ್ಟಿ ಬೆಳೆಸಿದ ಕಾಂಗ್ರೆಸ್ಸಿನಲ್ಲಿಯ ಒಡಕಿನಿಂದಾಗಿ ಮಾನಸಿಕವಾಗಿ ನೊಂದ ಗುದ್ಲೆಪ್ಪ ಹಳ್ಳಿಕೇರಿ ಅವರ ಆರೋಗ್ಯ ಕ್ಷೀಣಿಸತೊಡಗಿತು.

೧೯೭೧ ರ ಮಾರ್ಚ್ ೧೯ ರಂದು ಜರುಗಿದ ವಿಧಾನ ಪರಿಷತ್ತಿನ ಕಾರ್ಯಕಲಾಪವೇ ಅವರು ನಡೆಸಿಕೊಟ್ಟ ಕೊನೆಯ ಸಭೆಯಾಗಿತ್ತು. ಗುದ್ಲೆಪ್ಪನವರು ತಮ್ಮ ಜೀವಿತಾವಧಿಯವರೆಗೆ ಅಂದರೆ ಮೇ ೧೫ ರ ವರೆಗೆ ಸಭಾಪತಿ ಸ್ಥಾನದಲ್ಲಿದ್ದರು.

ಸಿಹಿಮೂತ್ರ ರೋಗ ಹಾಗೂ ರಕ್ತದ ಒತ್ತಡಗಳಿಂದ ಬಳಲುತ್ತಿದ್ದ ಗುದ್ಲೆಪ್ಪನವರನ್ನು ೧೯೭೧ ರ ಮಾರ್ಚ್ ೨೧ ರಂದು ವೆಲ್ಲೂರಿನ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿಯ ಉತ್ತಮ ಉಪಚಾರದಿಂದ ಗುಣಮುಖವಾಗತೊಡಗಿದರು. ಕರ್ತವ್ಯನಿಷ್ಠರಾದ ಗುದ್ಲೆಪ್ಪನವರಿಗೆ ಆಸ್ಪತ್ರೆಯೇ ಕಾರ್ಯಾಲಯವಾಗಿ ಪರಿಣಮಿಸಿತು. ಇಡೀ ಸಿಬ್ಬಂದಿ ಅವರ ಜೊತೆಗಿತ್ತು. ಇಬ್ಬರು ಕಾರ್ಯದರ್ಶಿಗಳು, ಎರಡು ಬೆರಳಚ್ಚು ಯಂತ್ರಗಳು ಎಡೆಬಿಡದೆ ದುಡಿಯುವಂತೆ ಗುದ್ಲೆಪ್ಪನವರು ಕೆಲಸ ವಹಿಸಿದರು. ಬದುಕಿನುದ್ದಕ್ಕೂ ಶರಣರ ವಾಣಿಯಂತೆ ' ಕಾಯಕವೇ ಕೈಲಾಸ ' ವೆಂದು ನಂಬಿ ನಡೆದ ಜನನಾಯಕರವರು.

ಎಪ್ರಿಲ ಕೊನೆಯ ವಾರದಲ್ಲಿ ಬೆಂಗಳೂರಿಗೆ ಮರಳಿದರು. ಏಪ್ರಿಲ ೩೦ ರಂದು ವಿಶ್ರಾಂತಿಗೆಂದು ತಮಿಳುನಾಡಿನ ಊಟಿಗೆ ಹೋದರು. ಜೊತೆಗೆ ಧರ್ಮಪತ್ನಿ ಶ್ರೀಮತಿ ಗಂಗಾದೇವಿ, ಸೊಸೆ ಶ್ರೀಮತಿ ನಿರ್ಮಲಾ ಹಾಗೂ ಕಾರ್ಯದರ್ಶಿ ಶ್ರೀನಿವಾಸ ಅವರುಗಳು ಹೋಗಿದ್ದರು. ಕನ್ನಡಿಗರಾದ ನೀಲಗಿರಿಯ ಆದಿವಾಸಿ ತೋಡರು ಎತ್ತರದ ಬೆಟ್ಟದ ಅಂಚಿನಲ್ಲಿರುವ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಸಾಮಾನ್ಯ ಜನರ ಮಧ್ಯೆ ಇದ್ದು ಸಂತೃಪ್ತಿ ಪಡುವ ಗುದ್ಲೆಪ್ಪನವರಿಗೆ ಅನಾರೋಗ್ಯದ ಮಧ್ಯದಲ್ಲಿಯೂ ಅವರ ಬಳಿಗೆ ಹೋಗಬೇಕೆನಿಸಿತು. ಅವರ ಗುಡಿಸಲಿಗೆ ಹೋಗಿ ಅವರೊಂದಿಗೆ ಮಾತನಾಡಿ, ಯೋಗಕ್ಷೇಮ ವಿಚಾರಿಸಿ ಕಾಫಿ ಮಾಡಿಸಿಕೊಂಡು ಕುಡಿದರು. ಸಾಮಾನ್ಯರೇ ತಮ್ಮ ಪಾಲಿನ ದೇವರೆಂದು ಗುದ್ಲೆಪ್ಪನವರು ಆಗಾಗ್ಗೆ ಹೇಳುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದು.

ಅನಾರೋಗ್ಯ ಉಲ್ಬಣಿಸಿತು. ಹುಬ್ಬಳ್ಳಿಗೆ ತಂತಿ ಕಳಿಸಿ ಮೇ ೭ ರಂದು ಮೈಸೂರಿಗೆ ಬಂದರು. ಸ್ವತಃ ವೈದ್ಯರಾದ ಪುತ್ರ ಡಾ. ದೀನಬಂಧು ಅವರು ತಜ್ಞ ವೈದ್ಯರೊಂದಿಗೆ ಮೈಸೂರಿಗೆ ಹೋದರು. ಗುದ್ಲೆಪ್ಪನವರ ಪ್ರೀತಿಯ ವೈದ್ಯ ಡಾ. ದಾಸ್ ಅಲ್ಲಿರಲಿಲ್ಲ. ಆದ್ದರಿಂದ ದಿನಾಂಕ ೧೦ ರಂದು ಬೆಂಗಳೂರಿಗೆ ಹೋದರು. ದಿನಾಂಕ ೧೨ ರಂದು ನ್ಯೂರೋ ಸೈನ್ಸ್ ಸೆಂಟರಿನಲ್ಲಿ ವೈದ್ಯರು ಪರೀಕ್ಷಿಸಿದರು. ರುಗ್ಣಾವಸ್ಥೆಯಲ್ಲಿಯೂ ನಿತ್ಯದ ರಾಜಕೀಯ ಸುದ್ದಿಗಳನ್ನು ಓದಿಯೋ ಅಥವಾ ಡಾ. ದೀನಬಂಧು ಅವರಿಂದ ಓದಿಸಿಯೋ ತಿಳಿದುಕೊಳ್ಳುತ್ತಿದ್ದರು. ಬಾಂಗ್ಲಾದೇಶ ಹಾಗೂ ಲಾಹೋರಿನಲ್ಲಿ ಒಂದೆ ತಾವು ಕಂಡಿದ್ದ ಮುಜಿಬ್ ಉರ್ ರಹಮಾನರ ಬಗ್ಗೆ ಪ್ರತಿಕ್ಷಣವೂ ತಿಳಿಯುವ ಕುತೂಹಲ ಅವರಿಗಿತ್ತು.

ಮೇ ೧೩ ರ ರಾತ್ರಿ ಅವರ ದೇಹದ ಬಲಭಾಗಕ್ಕೆ ಪಾರ್ಶ್ವವಾಯು ಆಯಿತು. 'ನನ್ನ ಕ್ರಿಯಾಶಕ್ತಿ ತನ್ನ ತೀವ್ರತೆಯನ್ನು ಎಂದು ಕಳೆದುಕೊಳ್ಳುವುದೋ ಅಂದೇ ಆ ಗಳಿಗೆಯಲ್ಲೇ ನನಗೆ ಮರಣ ಬರಲಿ' ಎಂದು ಅವರೇ ಹೇಳಿದ ಮಾತನ್ನು ಸ್ಮರಿಸಬಹುದು. ೧೯೭೧ ರ ಮೇ ೧೪ ರಂದು ಬೆಳಗಿನ ಜಾವ ೫ ಗಂಟೆಗೆ ಅವರ ಜೀವಜ್ಯೋತಿ ಪರಂಜ್ಯೋತಿಯಲ್ಲಿ ಲೀನವಾಯಿತು !

ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕಾಗಿ ಬೆಂಗಳೂರಿನ 'ಲೇಕ್ ವ್ಯೂ' ಭವನದಲ್ಲಿರಿಸಲಾಗಿತ್ತು. ರಾಜ್ಯಪಾಲ ಧರ್ಮವೀರ. ಕೇಂದ್ರದ ಗೃಹಖಾತೆಯ ಉಪಸಚಿವ ಎಫ್. ಎಚ್. ಮೋಹಸೀನ. ವಿಸರ್ಜಿತ ವಿಧಾನಸಭಾಧ್ಯಕ್ಷ ಎಸ್. ಡಿ. ಕೊತಾವಳೆ. ವಿಧಾನ ಪರಿಷತ್ತಿನ ಉಪಸಭಾಪತಿ ಎಸ್. ಪಿ. ರಾಜಣ್ಣ. ಆಡಳಿತ ಕಾಂಗ್ರೆಸ್ ನಾಯಕ ಎಚ್. ಸಿದ್ವೀರಪ್ಪ ಮತ್ತಿತರರು ಅಂತಿಮ ಗೌರವ ಸಲ್ಲಿಸಿದರು.

ಸಕಲ ಸರ್ಕಾರಿ ಮರ್ಯಾದೆಯೊಂದಿಗೆ ಅವರ ಪಾರ್ಥಿವ ಶರೀರವನ್ನು ಅಂದೇ ಸಾಯಂಕಾಲ ಹಾವೇರಿಗೆ ತಂದು ಅವರೇ ಸ್ಥಾಪಿಸಿದ 'ಗುದ್ಲೆಪ್ಪ ಹಳ್ಳಿಕೇರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ'ದ ಆವರಣದಲ್ಲಿರಿಸಲಾಯಿತು. ಸಾವಿರಾರು ಜನ ಅಂತ್ಯದರ್ಶನ ಪಡೆದರು. ಅಂದೇ ರಾತ್ರಿ ಅವರ ಸ್ವಗ್ರಾಮವಾದ ಹೊಸರಿತ್ತಿಗೆ ತಂದು ಗಾಂಧಿ ಗ್ರಾಮ ಕೇಂದ್ರದಲ್ಲಿಡಲಾಯಿತು. ದಿನಾಂಕ ೧೬ ರಂದು ಪುಷ್ಪ ಮತ್ತು ರಾಷ್ಟ್ರಧ್ವಜದಿಂದ ಅಲಂಕರಿಸಲಾಗಿದ್ದ ಪಾರ್ಥಿವ ಶರೀರದ ಮೇಲೆ ಮಹಾತ್ಮಾ ಗಾಂಧೀಜಿಯವರ ಭಾವಚಿತ್ರವನ್ನಿಟ್ಟು ಮೆರವಣಿಗೆಯೊಂದಿಗೆ ಅವರ ಕನಸಿನ ಗಾಂಧಿ ಗ್ರಾಮೀಣ ಗುರುಕುಲದ ಆವರಣಕ್ಕೆ ತರಲಾಯಿತು. ಧಾರವಾಡ ಮುರುಘಾಮಠದ ಶ್ರೀ ಮಹಾಂತಸ್ವಾಮಿಗಳವರು ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದರು. ನಂತರ ಕುಟುಂಬದ ಸದಸ್ಯರು ಹಾಗೂ ಸಹಸ್ರಾರು ಜನರ ಕಂಬನಿಯ ಮಹಾಪೂರದ ಮಧ್ಯೆ ಅಂತ್ಯ ಸಂಸ್ಕಾರ ಜರುಗಿತು.

ಆಗ ಜರುಗಿದ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆಯನ್ನು ಧಾರವಾಡ ಜಿಲ್ಲಾ ಸಂಸ್ಥಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ವೆಂಕಟೇಶ ಮಾಗಡಿ ವಹಿಸಿದ್ದರು. ವಿಧಾನ ಪರಿಷತ್ತಿನ ಮಾಜಿ ಉಪಸಭಾಪತಿ ಎಚ್. ಎಫ್. ಕಟ್ಟಿಮನಿ. ಮಾಜಿ ಸಚಿವ ಬಸವರಾಜ ಮಾಗಾವಿ. ಕೆ. ಎಲ್. ಇ. ಸಂಸ್ಥೆಯ ಮಾಜಿ ಅಧ್ಯಕ್ಷ ವಿ. ವಿ. ತೆಗ್ಗಿಮನಿ ಮುಂತಾದವರು ಗುದ್ಲೆಪ್ಪ ಹಳ್ಳಿಕೇರಿ ಅವರು ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು.

ಶೋಕ ಸಂದೇಶ :

ರಾಷ್ಟ್ರಪತಿ ವಿ. ವಿ. ಗಿರಿ ಅವರು ತಮ್ಮ ಶೋಕ ಸಂದೇಶದಲ್ಲಿ, " ನನ್ನ ಗೌರವಾನ್ವಿತ ಮಿತ್ರರಾದ ಶ್ರೀ ಜಿ. ವಿ. ಹಳ್ಳಿಕೇರಿಯವರ ನಿಧನದ ವಾರ್ತೆ ಕೇಳಿ ಅತೀವ ದುಃಖವಾಗಿದೆ. ಅನೇಕ ವರ್ಷಗಳ ವರೆಗೆ ವಿಧಾನ ಪರಿಷತ್ತಿನ ಸಭಾಪತಿಯಾಗಿ ಅವರು ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. " ೧

ರಾಜ್ಯಪಾಲ ಧರ್ಮವೀರ ಅವರು ತಮ್ಮ ಶೋಕ ಸಂದೇಶದಲ್ಲಿ, " ಶ್ರೀ ಹಳ್ಳಿಕೇರಿಯವರು ಕರ್ನಾಟಕ ಏಕೀಕರಣಕ್ಕಾಗಿ ಅವಿರತ ಹೋರಾಡಿದರು. ಅವರು ಕರ್ನಾಟಕದ ಪ್ರಗತಿ, ಸಮೃದ್ಧಿ ಸಾಧನೆಯಲ್ಲಿ ವಿಶೇಷ ಆಸ್ಥೆ ವಹಿಸಿದ್ದರು. ಅವರ ನಿಧನದಿಂದ ತುಂಬಿಬಾರದ ಹಾನಿಯಾಗಿದೆ " ೨ ಎಂದು ಹೇಳಿದ್ದರು.

ಪತ್ರಿಕೆಗಳ ಶ್ರದ್ಧಾಂಜಲಿ :

ನಾಡಿನ ಅನೇಕ ಪತ್ರಿಕೆಗಳು ಅಗಲಿದ ನಾಯಕನ ಗೌರವಾರ್ಥ ಸಂಪಾದಕೀಯ ಹಾಗೂ ವಿಶೇಷ ಲೇಖನಗಳನ್ನು ಪ್ರಕಟಿಸಿ ಶ್ರದ್ಧಾಂಜಲಿ ಸಲ್ಲಿಸಿದವು. ಸಂಯುಕ್ತ ಕರ್ನಾಟಕ ದಿನಪತ್ರಿಕೆಯು " ಒರಿಯ ಹೋರಾಟಗಾರನ ಕಣ್ಮರೆ " ಎಂಬ ಶೀರ್ಷಿಕೆಯಡಿಯಲ್ಲಿ ಸಂಪಾದಕೀಯ ಬರೆಯಿತು : " .....ಶ್ರೀ ಹಳ್ಳಿಕೇರಿಯವರು ರಾಜಕೀಯದಲ್ಲಿ ಒಬ್ಬ ನಿಷ್ಠುರ ಹೋರಾಟಗಾರರೆಂದೇ ಹೆಸರು ಗಳಿಸಿದರು. ಕಾಂಗ್ರೆಸ್ ಸಂಸ್ಥೆಯಲ್ಲಿ ಸಾಮಾನ್ಯ ಸ್ವಯಂ ಸೇವಕರಾಗಿ ಸೇರಿದ ಅವರು ತಮ್ಮ ಧ್ಯೇಯ, ನಿಷ್ಠೆ ಮತ್ತು ಸಂಘಟನಾ ಬಲದಿಂದ ಧಾರವಾಡ ಜಿಲ್ಲೆಯ ಅದ್ವಿತೀಯ ಮುಂದಾಳುಗಳೆಂದೂ ಕರ್ನಾಟಕದ ಮುಂಚೂಣಿಯ ನಾಯಕರಲ್ಲೊಬ್ಬರೆಂದೂ ಸ್ಥಾನ ಪಡೆದರು..... ಶ್ರೀ ಹಳ್ಳಿಕೇರಿ ಅವರ ಲೋಕ ಸಂಗ್ರಹ ವೃತ್ತಿ ಅವರನ್ನು ಸದಾ ಸಾರ್ವಜನಿಕ ಜೀವನದ ಪ್ರಥಮ ಸಾಲಿನಲ್ಲೇ ಇರಿಸುತ್ತಿತ್ತು..... ಹಗಲಿರುಳೆನ್ನದೆ ನಿದ್ರೆ ವಿಶ್ರಾಂತಿಗಳ ಪರಿವೆ ಇಲ್ಲದೆ ಕೈಯಲ್ಲಿ ಎತ್ತಿಕೊಂಡ ಕೆಲಸಕ್ಕಾಗಿ ದುಡಿಯುವದು ಅವರ ಸ್ವಭಾವವೇ ಆಗಿತ್ತು. ಕರ್ನಾಟಕದ ಏಕೀಕರಣ ಕಾಲಕ್ಕೆ ಮತ್ತು ನಂತರ ಉತ್ತರದ ಗಡಿ ಕೈಬಿಟ್ಟು ಹೋಗುವದೆಂದು ಶಂಕೆ ಉಂಟಾದಾಗ ಅವರು ನಡೆಸಿದ ಚಳುವಳಿಗಳು ಅವರಲ್ಲಿಯ ಅದ್ಭುತ ಸಂಘಟನಾ ಶಕ್ತಿಯ ದ್ಯೋತಕವಾಗಿದ್ದವು. " ೩

ಕನ್ನಡಪ್ರಭ ದಿನಪತ್ರಿಕೆಯು " ಉತ್ತರ ಕರ್ನಾಟಕದ ಯಜಮಾನರು " ಎಂಬ ವಿಶೇಷ ಲೇಖನ ಪ್ರಕಟಿಸಿ ತನ್ನ ಶ್ರದ್ಧಾಂಜಲಿ ಸಲ್ಲಿಸಿತು : " ಕರ್ನಾಟಕದ ಕುಲಪುರೋಹಿತ ಆಲೂರು ವೆಂಕಟರಾಯರು ಕಣ್ಮರೆಯಾದ ನಂತರ ಅವರ ಉದ್ದೇಶವನ್ನೇ ತ್ರಿಕರಣಪೂರ್ವಕವಾಗಿ ಮುಂದುವರಿಸಿಕೊಂಡು ಬಂದಿದ್ದ ಧೀಮಂತರು ಗುದ್ಲೆಪ್ಪ ಹಳ್ಳಿಕೇರಿ..... ಯುವಜನರಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಗುದ್ಲೆಪ್ಪನವರನ್ನು ಉತ್ತರ ಕರ್ನಾಟಕದ ಗ್ರಾಮ ಗ್ರಾಮಗಳಲ್ಲಿಯೂ ಜನರು ' ಯಜಮಾನರು ' ಎಂದು ಸಂಬೋಧಿಸುತ್ತಿದ್ದರು..... ರಾಜ್ಯದ ಕ್ಷೇಮದ ಬಗ್ಗೆ ಅವರು ತಳೆದಿದ್ದ ಕಳಕಳಿ ಅಸದಳವಾಗಿತ್ತು. ಅಲ್ಲಲ್ಲಿ ಚದುರಿಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸುವಲ್ಲಿ ಸಫಲ ಪಾತ್ರವನ್ನು ವಹಿಸಿದ ನಂತರ ಕೆಲವು ವರ್ಷಗಳ ಹಿಂದಿನ ಮೈಸೂರು ಮಹಾರಾಷ್ಟ್ರ ಗಡಿ ಹೋರಾಟದಲ್ಲಿ ಸೇನಾಧಿಪತ್ಯವನ್ನು ವಹಿಸಿದ್ದರು. " ೪

ವಿಧಾನ ಪರಿಷತ್ತಿನಲ್ಲಿ ಶ್ರದ್ಧಾಂಜಲಿ :

ಸಭಾಪತಿಗಳಾಗಿದ್ದ ಗುದ್ಲೆಪ್ಪ ಹಳ್ಳಿಕೇರಿ ಅವರ ನಿಧನದ ಕುರಿತು ವಿಧಾನ ಪರಿಷತ್ತಿನಲ್ಲಿ ೧೯೭೨ ಮಾರ್ಚ್ ೨೫ ರಂದು ಸದಸ್ಯರುಗಳು ಶ್ರದ್ಧಾಂಜಲಿ ಸಲ್ಲಿಸಿದರು : [೫]

ಸಭಾಪತಿ ಸ್ಥಾನದಲ್ಲಿದ್ದ ಉಪಸಭಾಪತಿ ಎಸ್. ಪಿ. ರಾಜಣ್ಣ ಅವರು ಮಾತನಾಡಿ, " .....ಶ್ರೀ ಹಳ್ಳಿಕೇರಿಯವರು ಭೀಮಕಾಯ ಹೊಂದಿದ್ದರೂ ಚಿನ್ನದ ಹೃದಯವುಳ್ಳವರಾಗಿದ್ದರು. ಪ್ರತಿಯೊಬ್ಬರಿಗೂ ಸಹಾಯ ಮಾಡುವ ಸ್ವಭಾವ ಅವರದಾಗಿತ್ತು. ಅವರ ನಿಧನ ವೈಯಕ್ತಿಕವಾಗಿಯೂ ಸದನಕ್ಕೆ ಹಾಗೂ ರಾಜ್ಯಕ್ಕೆ ಬಹುದೊಡ್ಡ ನಷ್ಟ..... " ಎಂದರು.

ಎಸ್. ಸಿ. ಕುಬಸದ : " .....ಶ್ರೀಮಾನ್ ಹಳ್ಳಿಕೇರಿಯವರು ತಮ್ಮ ಜೀವನದಲ್ಲಿ ಸುಮಾರು ೪೨ ವರ್ಷಗಳ ಕಾಲ ದೇಶದ ಹಿತಕ್ಕಾಗಿ ಹೋರಾಟ ಮಾಡಿದ್ದಾರೆ. ಅವರು ಧಾರವಾಡ ಜಿಲ್ಲೆಯಲ್ಲಿ ಮಾತ್ರವಲ್ಲ ಇಡೀ ಕರ್ನಾಟಕದಲ್ಲಿಯೇ ತುಂಬಾ ಒಳ್ಳೆಯ ಹೆಸರನ್ನು ಗಳಿಸಿದ್ದರು. ಸ್ವಾತಂತ್ರ್ಯದ ಯುದ್ಧದಲ್ಲಿ ಅವರ ಇಡೀ ಮನೆತನವೇ ಭಾಗವಹಿಸಿದ್ದರಿಂದ ಅನೇಕ ತರುಣರು ಮತ್ತು ನಮ್ಮಂತಹವರು ಭಾಗವಹಿಸಿದಂತಹ ಸಂದರ್ಭ ಉಂಟು. ಅವರು ಅಧಿಕಾರಕ್ಕಾಗಿ ಎಂದೂ ಆಸೆ ಪಟ್ಟವರಲ್ಲ. ಅಧಿಕಾರಕ್ಕಿಂತ ಸಂಸ್ಥೆ ಮೇಲಾದದ್ದು ಎನ್ನುವದನ್ನು ಅವರು ವ್ಯಕ್ತಪಡಿಸಿದ್ದಾರೆ. ಅವರಂತಹ ದೊಡ್ಡ ಮನುಷ್ಯರು ಸಿಕ್ಕುವುದು ಕಡಿಮೆ..... "

ಬಸವರಾಜ ಕಟ್ಟಿಮನಿ : " .....ಶ್ರೀಮಾನ್ ಹಳ್ಳಿಕೇರಿಯವರ ಹೆಸರು ಅವರ ವ್ಯಕ್ತಿತ್ವದ ವಿಶೇಷವನ್ನು ಸೂಚಿಸುತ್ತದೆಂದು ಹೇಳಬಹುದು. ಅವರ ಹೆಸರು ಗುದ್ಲೆಪ್ಪ. ಎಂದರೆ ಗುದ್ದಲಿಯ ಅಪ್ಪ. ಗುದ್ದಲಿಯ ಹಾಗೆ ಅವರ ವ್ಯಕ್ತಿತ್ವ ಅತ್ಯಂತ ತೀಕ್ಷ್ಣವಾಗಿತ್ತು. ಶ್ರೀಮಾನ್ ಹಳ್ಳಿಕೇರಿಯವರು ಅನೇಕ ಸಾರಿ ದೊಡ್ಡ ಅಧಿಕಾರ ಸ್ಥಾನಗಳಿಗೆ ಬಂದರೂ ದೊಡ್ಡ ನಾಯಕರಾದರೂ ಕೂಡ ಕೊನೆಯವರೆಗೂ ಅವರು ತಾವು ಹುಟ್ಟಿದಂತಹ ಒಂದು ಹಳ್ಳಿಯ ಕೇರಿಯ ವ್ಯಕ್ತಿಯಾಗಿಯೇ ಉಳಿದರು. ಈ ಸಭೆಯ ಸದಸ್ಯರಾದ ನಾವು ಅವರನ್ನು ಕೊನೆಯ ಬಾರಿ ಆರಿಸಿದಾಗ ಅವರು ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದರು : ' ನಾನು ಕೊನೆಯವರೆಗೂ ಹಳ್ಳಿಯವನಾಗಿಯೇ ಉಳಿಯುತ್ತೇನೆ ' ಎಂದು. ಅವರು ಅಧಿಕಾರ ಸ್ಥಾನದ ಆಡಂಬರಕ್ಕೆ ಅಂಟಿಕೊಳ್ಳದೆ ಸರಳವಾದ ಹಳ್ಳಿಯ ಸಂಪ್ರದಾಯಗಳನ್ನೇ ಉಳಿಸಿಕೊಂಡು ಬಂದರು.

ಅವರ ಇನ್ನೊಂದು ವಿಶೇಷವೇನೆಂದರೆ ಅವರು ಯಾವ ಒಂದು ಸಂದರ್ಭದಲ್ಲೂ ಎದೆಗುಂದುತ್ತಾ ಇರಲಿಲ್ಲ. ಯಾವುದೇ ಹೋರಾಟ ಆದರೂ ಅಂಜುತ್ತಾ ಇರಲಿಲ್ಲ. ಅವರ ಜೀವನದಲ್ಲಿ ಹೋರಾಟವೇ ಪ್ರಿಯವಾಗಿತ್ತು..... ಅವರು ಕೇವಲ ನಾಯಕರಲ್ಲ. ನಾಯಕರ ಪೀಳಿಗೆಯನ್ನೇ ನಿರ್ಮಿಸಿದಂತಹ ನಾಯಕತ್ವವನ್ನು ಅವರು ಹೊಂದಿದ್ದರು. ಅವರು ಕೈಯಲ್ಲಿ ದೊಣ್ಣೆ ಹಿಡಿದು ನಡೆಯುತ್ತಿದ್ದಂತಹ ಠೀವಿ. ಅವರ ವರ್ತನೆ. ಅವರ ಕಾರ್ಯಕ್ಷೇತ್ರ ಇತ್ಯಾದಿಗಳನ್ನು ನೋಡಿದರೆ ಅವರಿಗೆ ಮುಖ್ಯಮಂತ್ರಿಗಳಿಗಿಂತ ಹೆಚ್ಚಿನದಾದ ಪ್ರಭಾವ ಇತ್ತು ಎಂದು ಹೇಳಬಹುದು. ಅವರು ಎರಡು ಬಾರಿ ಈ ಸದನದ ಸಭಾಪತಿಗಳಾಗಿ ಆಯ್ಕೆಯಾಗಬೇಕಾದರೆ ಅವರ ಕೀರ್ತಿ. ಅವರ ವ್ಯಕ್ತಿತ್ವ ಎಷ್ಟರಮಟ್ಟಿಗೆ ಇತ್ತು ಎಂಬುದು ವ್ಯಕ್ತವಾಗುತ್ತದೆ..... ಅವರಲ್ಲಿ ಜಾತೀಯತೆ ಲವಲೇಶವೂ ಇರಲಿಲ್ಲ.

ಅವರು ಊಟ, ನಿದ್ರೆ, ವಿಶ್ರಾಂತಿ ಇವಾವುಗಳನ್ನೂ ಲೆಕ್ಕಿಸದೆ ಕಾರಿನಲ್ಲಿ, ರೈಲಿನಲ್ಲಿ ೩೦೦ - ೪೦೦ ಮೈಲಿ ಸಂಚಾರ ಮಾಡಿ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಿ ೨೪ ಗಂಟೆಗಳ ಕಾಲವೂ ಕೆಲಸ ಮಾಡುವ ಅದ್ಭುತವಾದ ಶಕ್ತಿ ಅವರಲ್ಲಿತ್ತು..... "

ಕೆ. ಚನ್ನಬಸವನಗೌಡ : " .....ಶ್ರೀ ಹಳ್ಳಿಕೇರಿಯವರು ಕರ್ನಾಟಕದ ಉಕ್ಕಿನ ಮನುಷ್ಯ ಎಂದು ಹೆಸರಾಗಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಕಟ್ಟಾ ಪ್ರಜಾಪ್ರಭುತ್ವವಾದಿಗಳು..... "

ಎ. ಎಸ್. ಹಿರೇಗೌಡರ : " .....ಶ್ರೀ ಹಳ್ಳಿಕೇರಿಯವರ ಒಡನಾಡಿಯಾಗಿ ಕೆಲಸ ಮಾಡಿದ ನನ್ನ ಅನುಭವಗಳನ್ನು ಇಲ್ಲಿ ಹೇಳಬಯಸುತ್ತೇನೆ. .....ಅವರು ಎಲ್ಲಿ ಹೋದರೂ ಯಾವಾಗಲೂ ಮುಖ್ಯಮಂತ್ರಿ ಅಥವಾ ಮಂತ್ರಿಗಳು ಹೋಗುತ್ತಿದ್ದರೆ, ಅವರ ಹಿಂದೆ ಎಷ್ಟು ಜನರು ಸಾಮಾನ್ಯವಾಗಿ ಇರುತ್ತಿದ್ದರೋ ಅಷ್ಟೇ ಜನರು ಇವರ ಹಿಂದೆಯೂ ಇರುತ್ತಿದ್ದರು. ಪ್ರತಿ ಸಂದರ್ಭದಲ್ಲಿಯೂ ಸಾಮಾನ್ಯ ಜನರ ಕಷ್ಟಗಳನ್ನು ಅರಿತುಕೊಂಡು ಕೆಲಸ ಮಾಡುತ್ತಿದ್ದರು..... ಬಡವರ ಸಲುವಾಗಿ ಅಂತಃಕರಣದಿಂದ ಕೆಲಸ ಮಾಡುತ್ತಿದ್ದರು..... ನಾನು ಅವರ ಸಹಕಾರ್ಯಕರ್ತನಾಗಿ, ಶಿಷ್ಯನಾಗಿ ಸೇವೆ ಮಾಡುವಂಥ ಭಾಗ್ಯವನ್ನು ಪಡೆದಿದ್ದೆ..... "

ಕಂದಾಯ ಸಚಿವ ಎನ್. ಹುಚ್ಚಮಾಸ್ತಿಗೌಡ, ಟಿ. ಎನ್. ನರಸಿಂಹಮೂರ್ತಿ, ವಾಯ್. ಎಸ್. ಪಾಟೀಲ, ಪಿ. ಎಂ. ನಾಡಗೌಡ, ಕೆ. ಲಕ್ಕಪ್ಪ, ಎ. ಎಚ್. ಶಿವಾನಂದಸ್ವಾಮಿ, ಶ್ರೀಮತಿ ಅಕ್ಕೆವಿಯಾ ಅಲ್ಬುಕರ್ಕ ಅವರುಗಳು ಕೂಡ ಗುದ್ಲೆಪ್ಪನವರು ಸಲ್ಲಿಸಿದ ಬಹುಮುಖ ಸೇವೆಯನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸಿದರು.

ಜನ್ಮಸ್ಥಳ ಹೊಸರಿತ್ತಿಯಿಂದಲೇ ಪ್ರಾರಂಭವಾದ ಗುದ್ಲೆಪ್ಪನವರ ಸೇವಾ ಜೀವನ ಅಖಂಡ ಕರ್ನಾಟಕ ಹಾಗೂ ರಾಷ್ಟ್ರಮಟ್ಟದವರೆಗೂ ವಿಸ್ತಾರಗೊಂಡಿತು. ಕರ್ನಾಟಕದ ಇತಿಹಾಸದಲ್ಲಿಯೇ ಗಾಂಧಿ ಪ್ರಣೀತ ತತ್ವಗಳನ್ನು ಅಳವಡಿಸಿಕೊಂಡ ಅವರು ಮಹಾನ್ ನಾಯಕರಾಗಿ ಜನಮನದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ.

ಟಿಪ್ಪಣಿಗಳು

೧. ಸಂಯುಕ್ತ ಕರ್ನಾಟಕ. ೧೭ - ೫ - ೧೯೭೧

೨. ಅದೇ.

೩. ಅದೇ. ೧೬ - ೫ - ೧೯೭೧

೪. ಕನ್ನಡಪ್ರಭ. ೧೬ - ೫ - ೧೯೭೧

೫. **ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಕೆಗಳು.** ಅಧಿಕೃತ ವರದಿ. ೩೧ ನೇ ಅಧಿವೇಶನ. ಸಂಪುಟ ೪೯ (ಕ್ರಮಾಂಕ : ೧ - ೧೦) ೨೫ ಮಾರ್ಚ ೧೯೭೨ – ೧೨ ಏಪ್ರಿಲ ೧೯೭೨ (ಬೆಂಗಳೂರು : ಮೈಸೂರು ವಿಧಾನ ಸಭೆಯ ಸಚಿವಾಲಯ. ೧೯೭೨) ಪು. ೧ - ೭



ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯ ಉದ್ಯಾನವನದಲ್ಲಿ ಸ್ಥಾಪಿಸಲಾದ
ಗುದ್ಲೆಪ್ಪ ಹಳ್ಳಿಕೇರಿ ಅವರ ಕಂಚಿನ ಪುತ್ಥಳಿ

ಅಧ್ಯಾಯ ಎಂಟು

ಸಮಾರೋಪ

ಅಧ್ಯಾಯ ಎಂಟು

ಸಮಾರೋಪ

ಭಾರತ ಸ್ವಾತಂತ್ರ್ಯ ಹೋರಾಟ ವ್ಯಾಪಕವಾದಾಗ ಅದರ ಪ್ರಭಾವ ಉದಯೋನ್ಮುಖ ನಾಯಕರ ಮೇಲೆ ಆಗುತ್ತದೆ. ಅಂತಹ ಉದಯೋನ್ಮುಖ ನಾಯಕ ಗುದ್ಲೆಪ್ಪ ಹಳ್ಳಿಕೇರಿಯವರು. ಈ ಸ್ವಾತಂತ್ರ್ಯ ಹೋರಾಟದಿಂದ ಅವರಲ್ಲಿ ಸುಪ್ತವಾಗಿದ್ದ ನಾಯಕತ್ವ ಗುಣಗಳ ಬೆಳವಣಿಗೆಗೆ ಅವಕಾಶ ಸಿಕ್ಕಂತಾಯಿತು. ಸ್ವಾತಂತ್ರ್ಯ ಚಳುವಳಿ ಬೆಳೆದ ಹಾಗೆ ಅವರ ನಾಯಕತ್ವದ ಗುಣಗಳು, ಸಾಮರ್ಥ್ಯ ಬೆಳೆಯುತ್ತ ಹೋದವು.

ಬಹುಮುಖ ವ್ಯಕ್ತಿತ್ವವಿರುವ ಗಾಂಧೀಜಿಯವರ ನಾಯಕತ್ವವು ಉದಯೋನ್ಮುಖ ನಾಯಕರ ಮೇಲೆ ಪ್ರಭಾವ ಬೀರುತ್ತದೆ. ಅಂತಹ ಉದಯೋನ್ಮುಖ ನಾಯಕರಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರು ಒಬ್ಬರು. ಗಾಂಧೀಜಿಯವರ ನಾಯಕತ್ವ ಒಂದೇ ಕ್ಷೇತ್ರಕ್ಕೆ ಸೀಮಿತವಾಗಿರಲಿಲ್ಲ. ಅವರ ಚಟುವಟಿಕೆಗಳು ಸರ್ವವ್ಯಾಪಿಯಾಗಿದ್ದವು. ನಾಯಕತ್ವ ಹೊಂದಿದ ಉದಯೋನ್ಮುಖ ಯುವಕರು ಗಾಂಧೀಜಿಯವರ ತತ್ವಾಧಾರಿತ ಹಲವು ಕಾರ್ಯಕ್ಷೇತ್ರಗಳಲ್ಲಿ ತಮ್ಮನ್ನು ಸಮರ್ಪಿಸಿಕೊಂಡರು. ಅವು ಯಾವವೆಂದರೆ ಸ್ವಾತಂತ್ರ್ಯ ಚಳುವಳಿ, ಖಾದಿ ಪ್ರಚಾರ, ರಾಷ್ಟ್ರಭಾಷೆ ಹಿಂದಿ ಪ್ರಚಾರ, ಮಾತೃಭಾಷೆಯ ಅಭಿವೃದ್ಧಿ, ಹರಿಜನೋದ್ಧಾರ, ಪಾನಪ್ರತಿಬಂಧ, ಸ್ತ್ರೀ ಸಬಲೀಕರಣ, ಕೋಮು ಸೌಹಾರ್ದತೆ, ವ್ಯಾಪಕ ಜನಸಂಪರ್ಕ ಮುಂತಾದವುಗಳು. ನಾಯಕತ್ವ ಗುಣಗಳಿರುವ ಗುದ್ಲೆಪ್ಪನವರು ತಮ್ಮನ್ನು ಈ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಕಾರ್ಯ ಮಾಡಿ ವ್ಯಾಪ್ತಿಯನ್ನು ವಿಸ್ತರಿಸಿದರು. ಗುದ್ಲೆಪ್ಪನವರಿಗೆ ತಮ್ಮದೇ ಆದ ಪ್ರತ್ಯೇಕ ರಾಜಕೀಯ ಸಿದ್ಧಾಂತವಿರಲಿಲ್ಲ. ಗಾಂಧೀ ತತ್ವಗಳೇ ಅವರ ನಾಯಕತ್ವದ ಸಾಧನೆ-ಸಿದ್ಧಿಗಳ ತಳಹದಿಯಾಗಿದ್ದವು. ಅವರ ನಾಯಕತ್ವದಡಿಯಲ್ಲಿ ಕೆಲಸ ಮಾಡಿದ ಅನೇಕ ಜನರು ನಾಯಕತ್ವ ಗುಣಗಳನ್ನು ಬೆಳೆಸಿಕೊಂಡರು. ಹೀಗೆ ಗುದ್ಲೆಪ್ಪನವರ ಕಾರ್ಯ ಜನಸಾಮಾನ್ಯರೊಂದಿಗೆ ಇದ್ದರೂ ತಮ್ಮಂತೆಯೇ ಉತ್ಸಾಹಿ ಯುವಕರು ನಾಯಕತ್ವವನ್ನು ಬಲಪಡಿಸಿಕೊಂಡು ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ಮಾಡಬೇಕೆಂದು ಆಶಿಸಿ ಅವುಗಳನ್ನು ಅನುಷ್ಠಾನಕ್ಕೆ ತಂದರು.

ಈ ಎಲ್ಲ ಅಂಶಗಳನ್ನು ಹಿಂದಿನ ಅಧ್ಯಾಯಗಳಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ. ಗುದ್ಲೆಪ್ಪನವರ ನಾಯಕತ್ವ ಬೆಳೆದು ಬಂದ ಬಗೆ, ಅವರು ಕೈಕೊಂಡ ಕಾರ್ಯಕ್ಷೇತ್ರದ ವಿಸ್ತಾರ, ಅವರು ನಾಯಕರನ್ನು ನಿರ್ಮಿಸಿದ ರೀತಿ ಮುಂತಾದವುಗಳ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಭಾರತದ ಸ್ವಾತಂತ್ರ್ಯಕ್ಕಾಗಿ ಜನರನ್ನು ಸಂಘಟಿಸಿ ಅವರಲ್ಲಿ ದೇಶಾಭಿಮಾನ. ಸ್ವಾವಲಂಬನೆ. ನಿಸ್ವಾರ್ಥ ಸೇವೆ ಮುಂತಾದ ಗುಣಗಳನ್ನು ತುಂಬಿ ಹೋರಾಟದ ನೇತೃತ್ವ ವಹಿಸಿ ಸಮರ್ಪಣ ಮನೋಭಾವದಿಂದ ಹೋರಾಡಿದ ನಾಯಕರ ಅಗ್ರಗಣ್ಯ ಸಾಲಿನಲ್ಲಿ ಎದ್ದು ಕಾಣುವಂತಹ ಧೀರೋದಾತ್ತ ನಾಯಕ ಗುದ್ಲೆಪ್ಪ ಹಳ್ಳಿಕೇರಿಯವರು.

ಹಾವೇರಿ ಜಿಲ್ಲೆಯ ಹೊಸರಿತ್ತಿ ಗ್ರಾಮವನ್ನು ತಮ್ಮ ಕರ್ತೃತ್ವ ಶಕ್ತಿಯಿಂದಾಗಿ ರಾಷ್ಟ್ರಾಭಿಮಾನದ ಕೇಂದ್ರವಾಗುವಂತೆ ರೂಪಿಸಿ. ನಾಡಿನ ನಕ್ಷೆಯಲ್ಲಿ ಗುರುತಿಸಿಕೊಳ್ಳುವಂತೆ ಮಾಡಿದ ಶ್ರೇಯಸ್ಸು ಗುದ್ಲೆಪ್ಪನವರಿಗೆ ಸಲ್ಲುತ್ತದೆ.

ಗಾಂಧೀಜಿಯವರಿತ್ತ ಸ್ವಾತಂತ್ರ್ಯ ಹೋರಾಟದ ಕರೆಗೆ ಓಗೊಟ್ಟು ಗುದ್ಲೆಪ್ಪನವರು ವಿದ್ಯಾರ್ಥಿ ದೆಸೆಯಲ್ಲಿಯೆ ರಾಷ್ಟ್ರಭಕ್ತಿಯಿಂದ ಅದರಲ್ಲಿ ಧುಮುಕಿದರು. ತನ್ಮೂಲಕ ಹೋರಾಟದ ಜೀವನವನ್ನು ರೂಪಿಸಿಕೊಂಡರು. ರಾಷ್ಟ್ರೀಯ ಮಹಾಪುರುಷರ ಜೀವನ. ಅವರ ಭಾಷಣಗಳು ಹಾಗೂ ರಾಷ್ಟ್ರೀಯ ಸಾಹಿತ್ಯ ಇವು ಅವರ ವ್ಯಕ್ತಿತ್ವ ರೂಪುಗೊಳ್ಳಲು ಕಾರಣವಾದವು. ಹೀಗೆ ರಾಷ್ಟ್ರೀಯವಾದಿಯಾಗಿ ರೂಪಿತಗೊಂಡ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಯಕರ್ತರಾಗಿ. ನಾಯಕರಾಗಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

ಸ್ವಾತಂತ್ರ್ಯ ಹೋರಾಟದ ಜೊತೆಗೆ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುವಲ್ಲಿ ತ್ರಿಕರಣಪೂರ್ವಕವಾಗಿ ದುಡಿದರು. ನಾಯಕರಾಗಿ ನಿಂತು ಅದರಲ್ಲಿ ಇತರರೂ ಪಾಲ್ಗೊಳ್ಳುವಂತೆ ಪ್ರೇರಣೆ. ಪ್ರೋತ್ಸಾಹ ನೀಡಿದರು. ಹೀಗೆ ಹೋರಾಟ ಮತ್ತು ವಿಧಾಯಕ ಕಾರ್ಯಕ್ರಮಗಳನ್ನು ಮಾಡುತ್ತ. ತಮ್ಮ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಆದರ್ಶ ನಾಯಕರಾಗಿ ರೂಪುಗೊಂಡರು.

ಹುಟ್ಟು ಹೋರಾಟಗಾರರಾದ ಅವರು ದೇಶದ ಮತ್ತು ನಾಡಿನ ಅನೇಕ ಹೋರಾಟಗಳ ಮುಂಚೂಣಿಯ ನಾಯಕತ್ವ ವಹಿಸಿ 'ಹಲವು ಹೋರಾಟಗಳ ಕಲಿ' ಎನಿಸಿಕೊಂಡರು. ಹೋರಾಟ ಮತ್ತು ಸಂಘಟನೆ ಈ ಗುಣಗಳು ಅವರಲ್ಲಿ ರಕ್ತಗತವಾಗಿದ್ದವೆಂಬುದನ್ನು ಈ ಮಹಾಪ್ರಬಂಧದಲ್ಲಿ ನಿರೂಪಿಸಲಾಗಿದೆ. ಬಡವರು. ಕೂಲಿಕಾರರು. ರೈತರು. ಮಹಿಳೆಯರು ಹಾಗೂ ವಿದ್ಯಾರ್ಥಿಗಳು ಗುದ್ಲೆಪ್ಪನವರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯಹೋರಾಟ. ನಾಡಿನ ಏಕೀಕರಣ ಮತ್ತಿತರ ಹೋರಾಟಗಳಲ್ಲಿ ಪಾಲ್ಗೊಂಡರು.

ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಗುದ್ಲೆಪ್ಪನವರು ಕೈಕೊಂಡ ಕರ್ನಾಟಕ ಏಕೀಕರಣ ಚಳುವಳಿಯು ನಾಡಿನ ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತಹದು. ಏಕೀಕರಣದ ಕುರಿತು ಅಲ್ಲಲ್ಲಿ ಸಭೆ ಸಮ್ಮೇಳನಗಳನ್ನು ಜರುಗಿಸಿ ಕನ್ನಡ ನಾಡು ನುಡಿಯ ಬಗೆಗೆ ಜನರಲ್ಲಿ ಜಾಗೃತಿ ಮೂಡಿಸಿ ಹೋರಾಟಕ್ಕೆ ಅಣಿಗೊಳಿಸಿದರು. ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುವಲ್ಲಿ ವಿಶೇಷವಾಗಿ ಶ್ರಮಪಟ್ಟರು. ರಾಜ್ಯ ಪುನರ್ರಚನಾ ಆಯೋಗ ಹಾಗೂ ಗಡಿ ಸಮಸ್ಯೆಯ ಬಗೆಗೆ ನೇಮಕವಾದ ಮಹಾಜನ ಆಯೋಗ ಸಮೀಕ್ಷೆ ನಡೆಸಿದಾಗ ನೇತಾರ ಗುದ್ಲೆಪ್ಪನವರು

ಆಯೋಗ ಹೋದೆಡೆಯಲ್ಲೆಲ್ಲ ಸಂಚರಿಸಿ ಜನರಲ್ಲಿ ಕನ್ನಡ ಪ್ರಜ್ಞೆಯನ್ನು ಜಾಗೃತಗೊಳಿಸಿ ಸಾಕ್ಷ್ಯ ಸಂಗ್ರಹಕ್ಕೆ ಸಹಕರಿಸಿದರು. ಕನ್ನಡ ನಾಡಿಗೆ ಸಂಬಂಧಿಸಿದ ಇತರ ಹೋರಾಟಗಳಲ್ಲಿಯೂ ನಾಯಕತ್ವ ವಹಿಸಿ ಜನರನ್ನು ಹುರಿದುಂಬಿಸಿದರು.

ಸ್ವತಂತ್ರ ಭಾರತದಲ್ಲಿ ವಿಲೀನಗೊಳ್ಳದೆ ಪ್ರತ್ಯೇಕ ಅಸ್ತಿತ್ವ ಬಯಸಿದ ಹೈದರಾಬಾದ ಸಂಸ್ಥಾನವನ್ನು ಭಾರತದಲ್ಲಿ ವಿಲೀನಗೊಳ್ಳಲು ಮಾಡಿದ ಹೋರಾಟದಲ್ಲಿ ಸ್ವತಃ ಭಾಗವಹಿಸಿದ್ದಲ್ಲದೆ ಸಾಮಾನ್ಯ ಜನರೂ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆ, ಗೋವಾ ವಿಮೋಚನೆ ಹೀಗೆ ವಿವಿಧ ಹೋರಾಟಗಳಲ್ಲಿ ಜನರನ್ನು ಸಂಘಟಿಸಿ ಪಾಲ್ಗೊಳ್ಳುವಂತೆ ಶ್ರಮಿಸಿದರು.

ಸಂಘಟನಾ ಶಕ್ತಿಯು ನಾಯಕತ್ವದ ವಿಶೇಷ ಗುಣವಾಗಿದೆ. ನಗರಗಳ ಸುಶಿಕ್ಷಿತರು ಹಾಗೂ ಶ್ರೀಮಂತರನ್ನೊಳಗೊಂಡ ಕಾಂಗ್ರೆಸ್ಸನ್ನು ಹಳ್ಳಿ ಹಳ್ಳಿಗಳವರೆಗೂ ವಿಸ್ತರಿಸಿ ಜನಸಾಮಾನ್ಯರು ಮತ್ತು ಬ್ರಾಹ್ಮಣೇತರರು ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಿದುದು ಗುದ್ಲೆಪ್ಪನವರ ನಾಯಕತ್ವದ ಸಂಘಟನಾ ಸಾಮರ್ಥ್ಯದ ಪ್ರತೀಕವಾಗಿದೆ. ಚುನಾವಣೆಗಳಲ್ಲಿ ಕಾಂಗ್ರೆಸ್ ಜಯಗಳಿಸುವಂತೆ ಮಾಡುವಲ್ಲಿ ಗುದ್ಲೆಪ್ಪನವರ ನಾಯಕತ್ವದ ಜನಪ್ರಿಯತೆ, ಜನಮನ್ನಣೆ ವಿಶೇಷವಾಗಿ ನೆರವಾದವು.

ನಾಯಕ ಗುದ್ಲೆಪ್ಪನವರು ವಿವಿಧ ಹೋರಾಟ, ಕಾಂಗ್ರೆಸ್ ಸಂಘಟನೆ ಮತ್ತು ವಿಧಾಯಕ ಕಾರ್ಯಗಳ ಅವಿಭಾಜ್ಯ ಅಂಗವಾಗಿ ಬೆಳೆದು ಬಂದರು. ಇವುಗಳಿಂದಾಗಿ ರಾಷ್ಟ್ರೀಯ ನಾಯಕರನ್ನು ಆಕರ್ಷಿಸಿ ರಾಷ್ಟ್ರಮಟ್ಟದವರೆಗೂ ತಮ್ಮ ನಾಯಕತ್ವದ ಪ್ರಭಾವವನ್ನು ಗುರುತಿಸುವಂತೆ ಮಾಡಿದರು.

ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಅವರು ನಾಯಕತ್ವ ವಹಿಸಿ ಮಾಡಿದ ಕಾರ್ಯ ಅನುಪಮ, ಅಮೋಘ. ಸಮಾಜದಲ್ಲಿಯ ದಲಿತರ, ಹಿಂದುಳಿದವರ ಬಗ್ಗೆ ಅಪಾರ ಕಾಳಜಿ ಹೊಂದಿ ಅವರ ಸಾಮಾಜಿಕ ಸಮಾನತೆ ಹಾಗೂ ಆರ್ಥಿಕ ಸಬಲೀಕರಣಕ್ಕಾಗಿ ಶ್ರಮಿಸಿದರು. ಶಿಕ್ಷಣದಿಂದ ಸಮಾಜದ ಅಭಿವೃದ್ಧಿ ಎಂಬುದನ್ನರಿತ ಅವರು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಇಂಥ ರಚನಾತ್ಮಕ ಕಾರ್ಯಗಳನ್ನು ಸಮರ್ಥ ನಾಯಕ ಮಾತ್ರ ಮಾಡಬಲ್ಲನು.

ಪ್ರಜಾಪ್ರಭುತ್ವದ ಪ್ರಮುಖ ಅಂಗವಾದ ಪತ್ರಿಕಾ ರಂಗದಲ್ಲಿಯೂ ಗುದ್ಲೆಪ್ಪನವರು ಸೇವೆ ಸಲ್ಲಿಸಿದರು. ಅವರು ಸಂಘಟಿಸಿದ ಕನಕದಾಸ ಚತುಶ್ಶತಮಾನೋತ್ಸವವು ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅವರ ಸರ್ವಧರ್ಮ ಸಮನ್ವಯ ದೃಷ್ಟಿಯು ಅನುಕರಣೀಯವಾದುದು.

ವಿಧಾನಸಭೆಯ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿ, ವಿಧಾನ ಪರಿಷತ್ ಸಭಾಪತಿಗಳಾಗಿ ಮಾಡಿದ ಕಾರ್ಯಗಳು ಗುದ್ಲೆಪ್ಪನವರು ಒಬ್ಬ ಸಮರ್ಥ ಸಂಸದೀಯ ಪಟು ಎಂಬುದನ್ನು ತೋರಿಸಿಕೊಟ್ಟಿವೆ. ಅನೇಕರು

ಆಶಿಸಿದಂತೆ ಅವರು ಮುಖ್ಯಮಂತ್ರಿಯಾಗುವ ಅರ್ಹತೆಯನ್ನು ಹೊಂದಿದ್ದರು. ಆದರೆ ಪ್ರಜಾಪ್ರಭುತ್ವದಲ್ಲಿ ಅಪಾರ ಶ್ರದ್ಧೆ ಹೊಂದಿರುವ ನಾಯಕ ದೊರೆತ ಅಧಿಕಾರವನ್ನೇ ನಿಷ್ಠೆಯಿಂದ ನಿರ್ವಹಿಸಬಲ್ಲನೆಂಬುದನ್ನು ಅವರು ಸಿದ್ಧಪಡಿಸಿದ್ದಾರೆ. ಅವರು ನಾಯಕರನ್ನು ನಿರ್ಮಿಸುವ ಮಹಾನಾಯಕರಾಗಿ ಗೌರವಾನ್ವಿತರಾಗಿದ್ದಾರೆ.

ಗುದ್ಲೆಪ್ಪನವರಂತಹ ಜನಪರ, ಅಭಿವೃದ್ಧಿಪರ ನಾಯಕ ಕರ್ನಾಟಕದ ರಾಜಕೀಯ ರಂಗದಲ್ಲಿ ವಿರಳ. ಅವರ ನಾಯಕತ್ವದ ಬೆಳವಣಿಗೆ, ಕೈಕೊಂಡ ವಿವಿಧ ಹೋರಾಟಗಳು, ಸಾರ್ವಜನಿಕ ಮತ್ತು ಸಂಸದೀಯ ಸೇವೆ ಇವುಗಳನ್ನು ಐತಿಹಾಸಿಕ ಪದ್ಧತಿ ಮತ್ತು ನಾಯಕತ್ವದ ಸಿದ್ಧಾಂತಗಳ ಅಡಿಯಲ್ಲಿ ಈ ಮಹಾಪ್ರಬಂಧದಲ್ಲಿ ನಿರೂಪಿಸಲಾಗಿದೆ.

ಸೂಚನೆಗಳು :

೧. ಇತರ ರಾಷ್ಟ್ರೀಯ ನಾಯಕರ ಜೀವನ ಚರಿತ್ರೆಯ ಅಧ್ಯಯನದೊಂದಿಗೆ ಗುದ್ಲೆಪ್ಪನವರ ಜೀವನ ಚರಿತ್ರೆಯನ್ನೂ ಪ್ರಾಥಮಿಕ, ಪ್ರೌಢ ಮತ್ತು ಕಾಲೇಜು ಶಿಕ್ಷಣ ಪಠ್ಯಕ್ರಮದಲ್ಲಿ ಅಳವಡಿಸಬೇಕು.

೨. ಗುದ್ಲೆಪ್ಪನವರ ಜೀವನ ಮತ್ತು ಹೋರಾಟದ ಕಾರ್ಯಕ್ಷೇತ್ರಗಳನ್ನು ಪರಿಚಯಿಸುವ ಧಾರಾವಾಹಿಗಳನ್ನು ದೂರದರ್ಶನದಲ್ಲಿ ಪ್ರಸಾರ ಮಾಡಬೇಕು.

೩. ಗುದ್ಲೆಪ್ಪನವರು ಬರೆದಿಟ್ಟ ದಿನಚರಿಗಳು ರಾಜಕೀಯ ಆಗುಹೋಗುಗಳ ದಾಖಲೆಯಾಗಿ ರಾಜಕೀಯ ಇತಿಹಾಸಕ್ಕೆ ಪೂರಕ ಸಾಮಗ್ರಿಯಾಗಿರುವದರಿಂದ ಅವುಗಳನ್ನು ಪ್ರಕಟಿಸಬೇಕು.

೪. ಗುದ್ಲೆಪ್ಪನವರ ಹೋರಾಟದ ಜೀವನ ಮತ್ತು ಕಾರ್ಯಕ್ಷೇತ್ರದ ಕುರಿತು ನಾಡಿನ ವಿವಿಧ ಭಾಗಗಳಲ್ಲಿ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಯುವ ಜನಾಂಗಕ್ಕೆ ಪರಿಚಯಿಸಬೇಕು.

ಹೆಚ್ಚಿನ ಅಧ್ಯಯನಕ್ಕಾಗಿ ಸಲಹೆ :

ಪ್ರಸ್ತುತ ಮಹಾಪ್ರಬಂಧವು ಗುದ್ಲೆಪ್ಪ ಹಳ್ಳಿಕೇರಿಯವರ ರಾಜಕೀಯ ಜೀವನ ಮತ್ತು ಸಾಧನೆಗಳನ್ನು ವಿವರಿಸುವ ಪ್ರಯತ್ನವಾಗಿದೆ. ಇಲ್ಲಿಯ ಒಂದೊಂದು ಅಧ್ಯಾಯಗಳನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಆಳವಾದ ವಿಸ್ತೃತ ಅಧ್ಯಯನವನ್ನು ಕೈಕೊಳ್ಳಬಹುದು :

೧. ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಗುದ್ಲೆಪ್ಪನವರ ಪಾತ್ರ.

೨. ಗುದ್ಲೆಪ್ಪನವರು ಸಲ್ಲಿಸಿದ ಕನ್ನಡ ನಾಡು - ನುಡಿಯ ಸೇವೆ.

೩. ಕಾಂಗ್ರೆಸ್ ಪಕ್ಷಕ್ಕೆ ಗುದ್ಲೆಪ್ಪನವರು ಸಲ್ಲಿಸಿದ ಸೇವೆ.

೪. ಗುದ್ಲೆಪ್ಪನವರು ಸಲ್ಲಿಸಿದ ಸಾರ್ವಜನಿಕ ಸೇವೆ.

೫. ಗುದ್ಲೆಪ್ಪನವರು ಶಾಸಕಾಂಗದಲ್ಲಿ ಸಲ್ಲಿಸಿದ ಸೇವೆ.

ಪ್ರಸ್ತುತ ಅಧ್ಯಯನದ ಕೊಡುಗೆ :

೧. ಪ್ರಸ್ತುತ ಅಧ್ಯಯನವು ನಾಯಕತ್ವ ಸಿದ್ಧಾಂತಕ್ಕೆ ತನ್ನ ಕೊಡುಗೆಯನ್ನಿತ್ತಿದೆ. ಗ್ರಾಮೀಣ ಕುಟುಂಬ - ಮುಖ್ಯವಾಗಿ ಅವಿಭಕ್ತ ಕುಟುಂಬ ಮತ್ತು ಪರಿಸರವು ವ್ಯಕ್ತಿಯ ಜೀವನದ ಧ್ಯೇಯ ಧೋರಣೆಗಳನ್ನು ರೂಪಿಸುವಲ್ಲಿ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ಇಲ್ಲಿ ನಿರೂಪಿಸಲಾಗಿದೆ. ವ್ಯಕ್ತಿಯ ವಿಶಿಷ್ಟ ಗುಣಗಳು, ಅವನ ವರ್ತನೆ ಹಾಗೂ ಸನ್ನಿವೇಶಗಳು ನಾಯಕತ್ವಕ್ಕೆ ಹೇಗೆ ಪೋಷಕ ಮತ್ತು ಪೂರಕವಾಗಬಲ್ಲವೆಂಬುದನ್ನು ಸೈದ್ಧಾಂತಿಕವಾಗಿ ವಿವರಿಸಲಾಗಿದೆ.

೨. ಈ ಅಧ್ಯಯನವು ಸ್ವಾತಂತ್ರ್ಯ ಹೋರಾಟದ ಸಾಹಿತ್ಯಕ್ಕೆ ಒಂದು ಕಾಣಿಕೆಯಾಗಿದೆ. ಸ್ವಾತಂತ್ರ್ಯ ಹೋರಾಟವು ಬಹುಮುಖವಾದ ಹೋರಾಟ. ಈ ಬಹುಮುಖವಾದ ಹೋರಾಟಕ್ಕೆ ಗುದ್ಲೆಪ್ಪನವರು ತಮ್ಮದೇ ಆದ ಕಾಣಿಕೆ ಸಲ್ಲಿಸಿದುದನ್ನು ಇಲ್ಲಿ ನಿರೂಪಿಸಲಾಗಿದೆ.

೩. ಕರ್ನಾಟಕ ಏಕೀಕರಣದ ಸಾಹಿತ್ಯಕ್ಕೆ ಈ ಅಧ್ಯಯನವು ಒಂದು ಕೊಡುಗೆಯಾಗಿದೆ. ವಿವಿಧ ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ಪ್ರದೇಶಗಳನ್ನು ಭಾಷಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಒಂದುಗೂಡಿಸುವ ಚಳುವಳಿಯಲ್ಲಿ ಗುದ್ಲೆಪ್ಪನವರು ವಹಿಸಿದ ಅಮೋಘವಾದ ಪಾತ್ರವನ್ನು ಇಲ್ಲಿ ಚಿತ್ರಿಸಲಾಗಿದೆ.

೪. ಪ್ರಸ್ತುತ ಮಹಾಪ್ರಬಂಧವು ಕರ್ನಾಟಕದಲ್ಲಿಯ ಕಾಂಗ್ರೆಸ್ ಪಕ್ಷದ ಇತಿಹಾಸಕ್ಕೆ ಒಂದು ಕಾಣಿಕೆಯಾಗಿದೆ. ಕಾಂಗ್ರೆಸ್ ಪಕ್ಷದ ಪ್ರಚಾರ, ಸಂಘಟನೆ ಮತ್ತು ವಿಧಾಯಕ ಕಾರ್ಯಗಳಲ್ಲಿ ಗುದ್ಲೆಪ್ಪನವರು ಸಲ್ಲಿಸಿದ ಸೇವೆಯನ್ನು ಇಲ್ಲಿ ವಿವರಿಸಲಾಗಿದೆ.

೫. ಈ ಮಹಾಪ್ರಬಂಧವು ಸಮಾಜವಿಜ್ಞಾನದ ಸಾಹಿತ್ಯಕ್ಕೊಂದು ಕೊಡುಗೆಯಾಗಿದೆ. ಕಾರ್ಮಿಕರ ಕಲ್ಯಾಣ, ಪಾನ ಪ್ರತಿಬಂಧ, ಅಸ್ಪೃಶ್ಯತಾ ನಿವಾರಣೆ, ರಾಷ್ಟ್ರೀಯ ವಿವಾಹ ಇತ್ಯಾದಿ ಚಟುವಟಿಕೆಗಳಲ್ಲಿ ಗುದ್ಲೆಪ್ಪನವರು ತಮ್ಮನ್ನು ತೊಡಗಿಸಿಕೊಂಡು ಕಾರ್ಯಮಾಡಿದುದನ್ನು ಇಲ್ಲಿ ನಿರೂಪಿಸಲಾಗಿದೆ.

ಗಾಂಧೀಜಿಯವರ ಪ್ರಭಾವದಿಂದ ಪ್ರೇರಿತರಾದ ಗುದ್ಲೆಪ್ಪ ಹಳ್ಳಿಕೇರಿಯವರು ತಮ್ಮ ಜೀವನವನ್ನು ವಿವಿಧ ಹೋರಾಟಗಳಲ್ಲಿ ತೊಡಗಿಸಿಕೊಂಡರು. ಅವರು ರಾಷ್ಟ್ರ ಮತ್ತು ರಾಜ್ಯಕ್ಕೆ ತಮ್ಮದೇ ಆದ ಕೊಡುಗೆ ಸಲ್ಲಿಸಿದ ಮಹಾನ್ ನಾಯಕರು. ಸದಾ ಜನರ ಮಧ್ಯದಲ್ಲಿದ್ದು, ಜನಪರ ಮತ್ತು ಅಭಿವೃದ್ಧಿ ಪರ ಕಾರ್ಯಗಳ ಮೂಲಕ ನಾಡಿಗೆ ಅನುಪಮ ಸೇವೆ ಸಲ್ಲಿಸಿದ ಅವರ ಜೀವನವು ಇತಿಹಾಸದ ಒಂದು ಭಾಗವಾಗಿದೆ. ಹೀಗೆ ಕರ್ನಾಟಕದ ಜನಮನದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿದೆ.

ಅನುಬಂಧಗಳು

ಅನುಬಂಧ - ೧

ನಡೆಯಬೇಕಾಗಿರುವ ಸಾಮಾಜಿಕ ಕ್ರಾಂತಿ

ಹರಿಜನರನ್ನು ಮೆಟ್ಟಿ ನಿಂತ ಸಾಮಾಜಿಕ ವಿಷಮತೆಗಳ ಉಚ್ಚಾಟನೆಯಾಗಬೇಕು

(ಬ್ಯಾಡಗಿ ತಾಲೂಕ ಮೋಟೆಬೆನ್ನೂರಿನಲ್ಲಿ ೧೯೫೪ ಜೂನ್ ೪ ರಂದು ಜರುಗಿದ ಧಾರವಾಡ ಜಿಲ್ಲಾ ಪ್ರಥಮ ಹರಿಜನ ಪರಿಷತ್ತಿನ ಅಧ್ಯಕ್ಷತೆ ವಹಿಸಿ ಗುದ್ಲೆಪ್ಪ ಹಳ್ಳಿಕೇರಿಯವರು ಮಾಡಿದ ಭಾಷಣ)

೧೯೪೭ ನೆಯ ಇಸ್ವಿಯಿಂದ ನಮ್ಮ ದೇಶವು ಸ್ವತಂತ್ರವಾಗಿದೆ. ಸ್ವಾತಂತ್ರ್ಯದ ಮುಖ್ಯ ಲಕ್ಷಣವೆನಿಸಿದ ಸರಿಸಮಾನತೆಯ ಸ್ಥಿತಿ ಮಾತ್ರ ಇನ್ನೂ ಏರ್ಪಡಲಿಲ್ಲ. ಸರಿಸಮಾನತೆಯನ್ನು ಸ್ಥಾಪಿಸದೆ ಹೋದರೆ ಸ್ವಾತಂತ್ರ್ಯದ ಫಲ ಪ್ರಯೋಜನಗಳು ನಮಗೆ ದೊರೆಯಲಾರವು. ಹಿಂದೆ ನಾವು ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕಾಗಿ ಹೋರಾಡಿದಂತೆ ಇಂದು ನಾವು ಸರಿಸಮಾನತೆಯನ್ನು ಸಾಧಿಸಲು ಹೋರಾಡಬೇಕಾಗಿದೆ.

ಭಾರತದ ಜನಜೀವನದಲ್ಲಿ ಒಂದು ವರ್ಗದ ಜನರಿಗೆ ಅಂಟಿಕೊಂಡು ಬಂದ ಅಸಮಾನತೆಯ ಈ ಕಲಂಕವನ್ನು ತೊಡೆದು ಹಾಕಲು ಭಾರತ ಸ್ವಾತಂತ್ರ್ಯದ ಶಿಲ್ಪಿ. ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಆಜನ್ಮವೂ ಅವ್ಯಾಹತವಾಗಿ ಹೋರಾಡಿದರು. ಭಾರತೀಯ ರಾಜ್ಯ ಘಟನೆಯನ್ನು ರಚಿಸಿದವರ ಕಣ್ಣೆದುರಿನಲ್ಲಿ ಗಾಂಧೀಜಿಯ ಸರಿಸಮಾನತೆಯ ಆದರ್ಶ ಸದಾಕಾಲವೂ ನಿಂತುಕೊಂಡಿತ್ತು. ಅಲ್ಲದೆ ರಾಷ್ಟ್ರನಾಯಕ ಜವಾಹರಲಾಲ ನೆಹರೂ. ಘಟನಾ ಪಂಡಿತ ಡಾ|| ಬಿ. ಆರ್. ಅಂಬೇಡಕರ ಹಾಗೂ ಘಟನಾ ಸಮಿತಿಯ ಇನ್ನಿತರ ಮುಖಂಡರು ಪ್ರಥಮ ದರ್ಜೆಯ ಪ್ರಜಾಪ್ರಭುತ್ವವಾದಿಗಳಾದುದರಿಂದ ಹರಿಜನರಿಗೆ ಹಾಗೂ ಹಿಂದುಳಿದ ಇನ್ನಿತರ ಜನರಿಗೆ ಅಂಟಿಕೊಂಡು ಬಂದ ಅಪಾತ್ರತೆಯನ್ನು ಒಪ್ಪಲಿಲ್ಲ. ದೇಶದ ಜನರೆಲ್ಲರೂ ಸರಿಸಮಾನರೆಂದು ಘಟನೆಯಲ್ಲಿ ಅವರು ಉಲ್ಲೇಖ ಮಾಡಿದರು.

ಭಾರತದ ರಾಜ್ಯ ಘಟನೆಯು ಹರಿಜನರ ಹಕ್ಕುಗಳ ತಾಮ್ರಪಟವಾಗಿದೆ. ಸಾವಿರಾರು ವರುಷಗಳಿಂದ ಕೆಳಗೆ ಬಿದ್ದು ಅಸ್ಪೃಶ್ಯರೆನ್ನುವ ಅಪಖ್ಯಾತಿಯನ್ನು ಪಡೆದು ನಾಮನಿಶ್ಶೇಷರಾಗಿ ಹೋಗಿದ್ದ ಆರುಕೋಟಿ ಜನರು ಘಟನೆಯಲ್ಲಿ ಸರಿಸಮಾನತೆಯನ್ನು ಸಂಪಾದಿಸಿದ್ದಾರೆ. ಘಟನೆಯಲ್ಲಿ ಲಭಿಸಿರುವ ಈ ಸರಿಸಮಾನತೆ ಇಂದು ಪ್ರತ್ಯಕ್ಷ ಜೀವನದಲ್ಲಿ ಒಡಮೂಡಿ ಕಾಣಬೇಕಾಗಿದೆ.

ಶಾಸನದ ಸತ್ಯ ಹಾಗೂ ಜೀವನದ ಸತ್ಯ ಇವು ಬೇರೆ ಬೇರೆಯಾಗಿವೆ. ಶಾಸನದ ಸತ್ಯವು ಜೀವನದ ಸತ್ಯವಾಗಿ ಎಂದು ಪರಿವರ್ತನೆ ಹೊಂದುವುದೋ ಅಂದೇ ಹರಿಜನರ ಹಾಗೂ ಹಿಂದುಳಿದ ವರ್ಗದ ಜನರ ನಿಜವಾದ ಕಲ್ಯಾಣವಾಗುತ್ತದೆ.

ಶಾಸನದ ರೀತ್ಯಾ ಭಾರತೀಯರೆಲ್ಲ ಸರಿಸಮಾನರೆನಿಸಿದರೂ ಜೀವನದಲ್ಲಿ ಮಾತ್ರ ಇನ್ನೂ ಸರಿಸಮಾನರೆನಿಸಿಲ್ಲ. ಭಾರತೀಯ ಜೀವನವು ಅನೇಕ ವರ್ಗಗಳಲ್ಲಿ ವಿಂಗಡಿಸಿ ಹೋಗಿದೆ. ಈ ಅನೇಕ ವರ್ಗಗಳ ಜನರಲ್ಲಿ ಹರಿಜನರೆನ್ನುವವರ ಸ್ಥಿತಿಯಂತೂ ಶೋಚನೀಯವಾಗಿದೆ.

ಗಾಂಧೀಜಿಯವರು ಅಸ್ಪೃಶ್ಯ ಸಮಾಜದ ಜನರನ್ನು ದೇವರ ಮಕ್ಕಳೆಂದು ಕರೆದರು. ಹೆಸರು ಬದಲಾದ ಮಾತ್ರಕ್ಕೆ ಅವರ ಜೀವನ ಬದಲಾವಣೆ ಹೊಂದಲಿಲ್ಲ. ಸಾವಿರಾರು ವರುಷಗಳಿಂದ ಈ ದೇಶದಲ್ಲಿ ಬೆಳೆದುಕೊಂಡು ಬಂದ ಸ್ಪೃಶ್ಯಾಸ್ಪೃಶ್ಯ ಭಾವನೆ ಒಮ್ಮೆಲೇ ಅಳಿದು ಹೋಗುವದು ಕಷ್ಟಕರವಿದೆ. ಶತಮಾನಗಳ ಸಂಸ್ಕಾರ ಹಾಗೂ ಸಂಪ್ರದಾಯ ಶಾಸನದಲ್ಲಿ ಒಂದು ಗೆರೆ ಹಾಕುವುದರಿಂದ ಕೊನೆಗಾಣುವುದಿಲ್ಲ.

ಜನವರ್ಗದಲ್ಲಿ ಬೇರೂರಿರುವ ಈ ಮೇಲು ಕೀಳು ಭಾವನೆಗಳನ್ನು ಬುಡಮೇಲು ಮಾಡುವುದಕ್ಕಾಗಿ ಇಂದು ರಾಷ್ಟ್ರದಾದ್ಯಂತವೂ ಒಂದು ರಭಸದ ಚಳುವಳಿ ನಡೆಯಬೇಕಾಗಿದೆ. ಸಾಮಾಜಿಕವಾಗಿ ಜನತೆಯು ಒಂದಾಗದೆ ಹೋದರೆ ನಮ್ಮ ನೂತನ ಪ್ರಜಾಪ್ರಭುತ್ವವು ಭದ್ರವಾಗಿ ಚಿರಸ್ಥಾಯಿಯಾಗಿ ನೆಲೆಗೊಳ್ಳಲಾರದು.

ಭಾರತವು ಸಾರ್ವಭೌಮ. ಲೋಕಸತ್ತಾತ್ಮಕ. ಪ್ರಜಾರಾಜ್ಯ. ಇಲ್ಲಿಯ ಸಾರ್ವಭೌಮ. ಲೋಕಸತ್ತಾತ್ಮಕ ಹಾಗೂ ಪ್ರಜಾರಾಜ್ಯ ಎಂಬ ಈ ಮೂರು ಪದಗಳಲ್ಲಿ ಸಮಾಜದ ಹೊರವಲಯಗಳಲ್ಲಿ ವಾಸವಾಗಿರುವ ಹರಿಜನರೂ ಸೇರಿದ್ದಾರೆ. ಹರಿಜನರಾದವರು ಈಗಿರುವಂತೆಯೇ ಉಳಿಯಬೇಕೆಂದು ನಾವು ಬಯಸುವುದಾದರೆ. ಅವರನ್ನು ಮಾನವತೆಯ ಹೊರಗೆ ನಿಲ್ಲಿಸುವಂಥ ಪ್ರಜಾರಾಜ್ಯದ ಸಂರಕ್ಷಣೆಗಾಗಿ ಅವರೆಂದೂ ಹೋರಾಡಲಾರರು. ಇತರರಂತೆ ತಮ್ಮನ್ನು ಕೂಡ ಮನುಷ್ಯರೆಂದು ಪರಿಗಣಿಸುವ ಸ್ವಾತಂತ್ರ್ಯ ಬೇಕೆಂದು ಹರಿಜನರು ಇಂದು ಕೇಳತೊಡಗಿದ್ದಾರೆ.

ನಾಯಿ ಹಾಗೂ ಬೆಕ್ಕುಗಳನ್ನು ಕಟ್ಟಿಕೊಂಡು ಪ್ರತಿನಿತ್ಯದಲ್ಲಿ ಜೀವನ ನಡೆಸಿರುವ ಬಹುಸಂಖ್ಯಾತ ಜನರು ಹರಿಜನರಿಗೆ ಇಂದು ನಾಯಿ ಹಾಗೂ ಬೆಕ್ಕುಗಳಿಗೆ ಇರುವಂಥ ಸ್ಥಾನವನ್ನು ಕೂಡ ಕೊಡಲು ಸಿದ್ಧರಾಗಿಲ್ಲ. ಹುಟ್ಟಿಸಿದ ದೇವರು ಒಬ್ಬನೇ ಎಂದು ಶಾಸ್ತ್ರಗಳು ಸಾರುತ್ತವೆ. ಬೀಸುವ ಗಾಳಿ. ಬೆಳಗುವ ಸೂರ್ಯ. ನಿಂತ ನೆಲ ಒಂದೇ ಆಗಿದ್ದರೂ ಮನುಷ್ಯ-ಮನುಷ್ಯರು ತಂತಮ್ಮ ನಡುವೆ ಕೃತ್ರಿಮ ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡಿರುವುದು ಬಹು ವಿಚಿತ್ರವಾಗಿ ತೋರುತ್ತದೆ. ಒಂದೇ ಮಾನವತೆಯ ತತ್ವವನ್ನು ಒಪ್ಪದೇ ಹೋದರೆ ಭಾರತೀಯ ಜೀವನದಲ್ಲಿ ಸುಖಶಾಂತಿ ಉಳಿಯಲಾರದು.

ಹರಿಜನರನ್ನು ಮೆಟ್ಟಿ ನಿಂತಿರುವ ಸಾಮಾಜಿಕ ವಿಷಮತೆಗಳ ವಿರುದ್ಧ ಇಂದು ಒಂದು ದೊಡ್ಡ ಸಾಮಾಜಿಕ ಕ್ರಾಂತಿ ನಡೆಯಬೇಕು. ಪ್ರತಿಯೊಬ್ಬನ ಮನಸ್ಸಿನಲ್ಲಿಯೂ ತಾನು ಇಂದು ಹರಿಜನರನ್ನು ಕಾಣುತ್ತಿರುವ ದೃಷ್ಟಿ

ಅನ್ಯಾಯದ್ದೆನ್ನುವ ತಿಳಿವಳಿಕೆ ಮೂಡಿ ಆತನ ಜೀವನದಲ್ಲಿ ಪರಿವರ್ತನೆ ಉಂಟಾಗಬೇಕು. ವ್ಯಕ್ತಿಯ ಜೀವನದಲ್ಲಿ ಈ ಪರಿವರ್ತನೆ ಉಂಟಾದರೆ ಸಮಾಜ ಬದಲಾವಣೆ ತಡವಾಗಲಾರದು.

ಹರಿಜನರ ಮಟ್ಟಿಗೆ ಹರಿಜನರ ಸಮಸ್ಯೆ ಇದ್ದಿದ್ದರೆ ಅದು ಸುಲಭವಾಗಿ ನಿವಾರಣೆ ಹೊಂದಬಹುದಾಗಿತ್ತು. ಹರಿಜನರ ಸಮಸ್ಯೆಯಲ್ಲಿ ಹೆಚ್ಚಾಗಿ ಇನ್ನುಳಿದವರ ಸಂಬಂಧ ಇರುವುದರಿಂದ ಹರಿಜನರ ಸಮಸ್ಯೆ ಸುಲಭವಾಗಿ ಬಿಡಲೊಲ್ಲದಾಗಿದೆ. ಆದ್ದರಿಂದಲೇ ಇದನ್ನು ನಾನು ಹರಿಜನರ ಸಮಸ್ಯೆಯೆಂದು ಕರೆಯದೆ ಜನತೆಯ ಸಮಸ್ಯೆಯೆಂದು ಕರೆಯುತ್ತೇನೆ.

ಹರಿಜನರು " ಹೊಲಸು " ಕೆಲಸ ಮಾಡುತ್ತಿದ್ದಾರೆಂದು ಅವರಿಗೆ ಸಾಮಾಜಿಕ ಅಪಾತ್ರತೆ ಪ್ರಾಪ್ತವಾಗಿದೆ. ಸಮಾಜಕ್ಕೆ ಉಪಯುಕ್ತವಾದ ಕೆಲಸವು ಹೊಲಸು ಕೆಲಸವೆಂದಿಗೂ ಆಗಲಾರದು. ಉದ್ಯೋಗದ ಬಗೆಗೆ ಇರಿಸಿಕೊಂಡಿರುವ ಮೇಲು ಕೀಳಿನ ಈ ಕೃತ್ರಿಮ ಭಾವನೆಯಿಂದ ಹರಿಜನರ ಸಮಸ್ಯೆ ಉಲ್ಬಣಗೊಳ್ಳುತ್ತ ನಡೆದಿದೆ. ಮೇಲು ಕೀಳನ್ನು ತೊಡೆದುಹಾಕುವುದಕ್ಕಾಗಿ ಇಂದು ಸ್ಥಾನಿಕ ತಳಹದಿಯ ಮೇಲೆ. ಪ್ರಾಂತೀಯ ತಳಹದಿಯ ಮೇಲೆ ಸಂಯೋಜಿತವಾದ ಕಾರ್ಯ ನಡೆಯಬೇಕು. ಅಂದರೆ ಮಾತ್ರ ಹರಿಜನರ ಜೀವನದ ಸ್ಥಿತಿಗತಿಯಲ್ಲಿ ಪರಿಣಾಮಕಾರಿಯಾದ ಪ್ರಗತಿ ಎದ್ದು ಕಾಣಬಲ್ಲದು.

ಹರಿಜನರ ಸಮಸ್ಯೆ ದೊಡ್ಡ ನಗರಗಳ ಸಮಸ್ಯೆಯಲ್ಲ. ಅದು ಸಣ್ಣ ನಗರಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಇರುವ ಸಮಸ್ಯೆಯಾಗಿದೆ. ಸುಧಾರಣೆಯ ಕ್ರಮವನ್ನು ಹಳ್ಳಿಯಲ್ಲಿ ಆರಂಭಿಸುವ ಮೊದಲು ಸಣ್ಣ ನಗರಗಳಲ್ಲಿ ಆರಂಭ ಮಾಡಬೇಕು. ಹರಿಜನರಿಗಾಗಿ ಇರುವ ಪ್ರತ್ಯೇಕ ವಸತಿ ಗೃಹಗಳನ್ನು ತೆಗೆದುಹಾಕಿ ಅವರಿಗೆ ಇನ್ನಿತರ ಜನಗಳ ಮಧ್ಯದಲ್ಲಿ ವಸತಿಗೃಹಗಳನ್ನು ಕಲ್ಪಿಸಿಕೊಡಬೇಕು. ಅವರು ತಮ್ಮ ವೃತ್ತಿಯನ್ನು ಬೇಕಾದರೆ ಪ್ರತ್ಯೇಕ ಸ್ಥಳಗಳಲ್ಲಿ ನಡೆಸಲಿ. ಒಟ್ಟುಗೂಡಿ ಇರುವ ಭಾವನೆ ಜನತೆಯಲ್ಲಿ ಕ್ರಮಕ್ರಮೇಣ ಮೂಡುತ್ತ ಹೋದರೆ ಈ ಸುಧಾರಣೆಯ ಕ್ರಮವನ್ನು ಹಳ್ಳಿಗಳಿಗೂ ವಿಸ್ತರಿಸಬಹುದು. ಹಳ್ಳಿಗಳಲ್ಲಿ ಹಳ್ಳಿಯ ಜನರೊಟ್ಟಿಗೆ. ಹಳ್ಳಿಯ ಜೀವನದ ಒಂದು ಭಾಗವಾಗಿ ಹರಿಜನರು ಬೆಳೆಯಬೇಕಾಗಿದೆ.

ಹರಿಜನರ ಸಾಮಾಜಿಕ ಅಪಾತ್ರತೆಯನ್ನು ದೂರ ಮಾಡುವ ಪ್ರಶ್ನೆಯೊಂದಿಗೆ ಅವರ ಆರ್ಥಿಕ ಪ್ರಶ್ನೆಯೂ ಹೆಣೆದುಕೊಂಡಿದೆ. ಒಂದನ್ನು ಬಿಟ್ಟು ಒಂದಕ್ಕೆ ಪರಿಹಾರವಿಲ್ಲ. ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಮನುಷ್ಯನ ಕುಲಗೋತ್ರಗಳನ್ನು ಯಾರೂ ವಿಚಾರಿಸುವುದಿಲ್ಲ.

ಹರಿಜನರಿಗೆ ದೇವರ ದರ್ಶನಕ್ಕಿಂತಲೂ ಒಳ್ಳೆಯ ಆರ್ಥಿಕ ಜೀವನದ ದರ್ಶನ ಇಂದು ಆಗಬೇಕಾಗಿದೆ. ಹರಿಜನರ ಆರ್ಥಿಕ ಸ್ಥಿತಿ ಸುಧಾರಣೆ ಹೊಂದಬೇಕಾದರೆ ಚರ್ಮದ ಸಾಮಾನು ಮಾಡುವ ದೊಡ್ಡ ದೊಡ್ಡ ಕಾರಖಾನೆಗಳಿಗೆ ಅವಕಾಶ ದೊರೆಯಬಾರದು. ಒಂದೊಂದು ಜಿಲ್ಲೆಯ ತೊಗಲಿನ ಸಾಮಾನುಗಳ ಅಗತ್ಯವನ್ನು ಆಯಾ ಜಿಲ್ಲೆಯ ಹರಿಜನರೇ ಪೂರೈಸಿ ಕೊಡುವಂತೆ ವ್ಯವಸ್ಥೆಯಾಗಬೇಕು.

ಒಂದು ಕುಟುಂಬಕ್ಕೆ ಬೇಕಾದ ಚರ್ಮವು ಹರಿಜನ ಸಹಕಾರೀ ಸಂಸ್ಥೆಯಿಂದ ದೊರೆಯುವಂತೆ ಏರ್ಪಾಟಾಗಬೇಕು. ಹರಿಜನ ಕುಟುಂಬಗಳು ಸಿದ್ಧಪಡಿಸುವ ವಸ್ತುಗಳನ್ನು ಮಾರಾಟ ಮಾಡಲು ಸರಕಾರನಿಯುಕ್ತವಾದ ಒಂದು ಸಹಕಾರೀ ಸಂಘವು ಪ್ರತಿ ಜಿಲ್ಲೆ ಹಾಗೂ ತಾಲೂಕಿನಲ್ಲಿ ಸ್ಥಾಪನೆ ಹೊಂದಬೇಕು. ಹರಿಜನರಿಗೆ ಸರಕಾರೀ ನೌಕರಿಗಳಲ್ಲಿ ನೂರಕ್ಕೆ ಇಪ್ಪತ್ತರಷ್ಟಾದರೂ ನೌಕರಿ ದೊರೆಯುವಂತೆ ಅವಕಾಶ ಕಲ್ಪಿತವಾಗಬೇಕು. ಬೀಳು ಜಮೀನನ್ನು ಹಂಚುವ ಪ್ರಶ್ನೆ ಬಂದಾಗ ಹರಿಜನರಿಗೇ ಅಗ್ರ ಪ್ರಾಶಸ್ತ್ಯ ದೊರೆಯಬೇಕು. ಹರಿಜನರು ಇದುವರೆಗೆ ಸಹಿಸಿದ ಸಾಮಾಜಿಕ ಅನ್ಯಾಯಗಳನ್ನು ಮನದಂದು ಅವರಿಗೆ. ಪ್ರತಿಯೊಂದು ಕುಟುಂಬಕ್ಕೆ ಜೀವಿಸಲು ಸಾಲುವಷ್ಟು ಭೂಮಿಯನ್ನು ಒದಗಿಸುವುದು ಸರಕಾರದ ಕರ್ತವ್ಯವಾಗಿದೆ.

ಹರಿಜನರ ಮಕ್ಕಳ ವಿದ್ಯಾಭ್ಯಾಸದ ಬಗೆಗೆ ಈಗ ತೋರಿಸಲಾಗಿರುವ ಔದಾರ್ಯ ಸಾಲದು. ಅವರಿಗೆ ಓದು ಆಕರ್ಷಕವೆನಿಸುವಂತೆ ಪಾಟಿ ಪುಸ್ತಕ ಮೊದಲ್ಗೊಂಡು. ಅವರಿಗೆ ಉಡಿಗೆ ತೊಡಿಗೆ ಕೂಡ ಉಚಿತವಾಗಿ ದೊರೆಯಬೇಕು. ಸಾಮಾಜಿಕ ಕಲ್ಯಾಣವನ್ನೇ ಗುರಿಯಾಗಿರಿಸಿಕೊಂಡ ಸರಕಾರಕ್ಕೆ ಇದೊಂದೇನೂ ಅಸಾಧ್ಯ ಹೊರೆಯೆನಿಸಲಾರದು. ಮಾಧ್ಯಮಿಕ ಹಾಗೂ ಕಾಲೇಜು ವಿದ್ಯಾಭ್ಯಾಸ ಮಾಡುವ ಪ್ರತಿಯೊಬ್ಬ ಹರಿಜನ ವಿದ್ಯಾರ್ಥಿಗೂ ಹೆಚ್ಚುವರಿ ಪ್ರಮಾಣದಲ್ಲಿ ವಿದ್ಯಾರ್ಥಿವೇತನ ದೊರೆಯಬೇಕು. ತಾವು ಬದುಕುವುದೇ ಒಂದು ಸಮಸ್ಯೆಯಾಗಿರುವ ಹರಿಜನರಿಗೆ ತಮ್ಮ ಮಕ್ಕಳ ಓದು ಹಾಗೂ ಹೊಟ್ಟೆ ಬಟ್ಟೆಯ ಪ್ರಶ್ನೆಯನ್ನು ನೋಡಿಕೊಳ್ಳುವದು ಸಾಧ್ಯವಿಲ್ಲ.

ನಾನು ಇಲ್ಲಿ ಸೂಚಿಸಿರುವ ಪರಿಹಾರಗಳಲ್ಲಿ ಯಾವುದೂ ಕಲ್ಪನೆಯ ಪ್ರಪಂಚಕ್ಕೆ ಸೇರಿದುದಲ್ಲ. ಸಮಾಜದ ಧುರೀಣರು ಹಾಗು ಸರಕಾರದ ನಾಯಕರು ಮನಸ್ಸು ಮಾಡಿದರೆ ಇವೆಲ್ಲವೂ ಇಂದೇ ಕೃತಿಯಲ್ಲಿ ಬರುವುದು ಸಾಧ್ಯವಿದೆ.

(' ಪ್ರಪಂಚ ' ವಾರಪತ್ರಿಕೆ. ಹುಬ್ಬಳ್ಳಿ. ೧೯೫೪ ಜೂನ್ ೯. ಸಂಪುಟ : ೧. ಸಂಚಿಕೆ : ೧೪)

ಅನುಬಂಧ - ೨

ಮುಕ್ತ ಪ್ರಶ್ನಾವಳಿ

ಗುದ್ಲೆಪ್ಪ ಹಳ್ಳಿಕೇರಿ ಅವರ ಜೀವನ. ಹೋರಾಟ. ಕಾರ್ಯ ಹಾಗೂ ಸೇವೆಯ ಬಗೆಗೆ ಪ್ರಶ್ನೆಗಳನ್ನು ತಯಾರಿಸಿ ಸಂಬಂಧಿಸಿದವರಿಗೆ (೪೦ ಜನರು) ಕೇಳಲಾಯಿತು. ಅವರು ಕೊಟ್ಟ ವಿವರಣೆ. ವಿಶ್ಲೇಷಣೆಗಳನ್ನು ಈ ಅಧ್ಯಯನದ ವಿವಿಧ ಅಧ್ಯಾಯಗಳಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಎಲ್ಲ ಪ್ರಶ್ನೆಗಳನ್ನು ಎಂಟು ವಿಭಾಗಗಳಲ್ಲಿ ವರ್ಗೀಕರಿಸಿ ಮುಕ್ತ ಪ್ರಶ್ನಾವಳಿಯನ್ನು ಉಪಯೋಗಿಸಲಾಗಿದೆ. ವರ್ಗೀಕರಿಸಿದ ಮುಕ್ತ ಪ್ರಶ್ನಾವಳಿಯು ಈ ರೀತಿಯಾಗಿದೆ :

೧. ವ್ಯಕಿತ್ವ ಮತ್ತು ನಾಯಕತ್ವ ಗುಣ :

೧. ಗುದ್ಲೆಪ್ಪ ಹಳ್ಳಿಕೇರಿ ಅವರ ವಿದ್ಯಾಭ್ಯಾಸದ ಕುರಿತು ಹೇಳಿರಿ.

೨. ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಯಾರು ?

೩. ಗುದ್ಲೆಪ್ಪನವರ ದೈಹಿಕ ಆಕರ್ಷಣೆ ಹೇಗಿತ್ತು ?

೪. ಅವರ ಮಾನಸಿಕ ಬಲ ಮತ್ತು ನೆನಪಿನ ಶಕ್ತಿಯ ಬಗ್ಗೆ ಹೇಳಿರಿ.

೫. ಅವರಲ್ಲಿಯ ಮಾನವೀಯತೆಯ ಗುಣಗಳ ಬಗ್ಗೆ ಹೇಳಿರಿ.

೬. ಗುದ್ಲೆಪ್ಪನವರಲ್ಲಿ ನಾಯಕತ್ವದ ಗುಣಗಳು ಯಾವ ರೀತಿ ಇದ್ದವು ?

೨. ಸ್ವಾತಂತ್ರ್ಯ ಹೋರಾಟ :

೧. ಗುದ್ಲೆಪ್ಪನವರು ಯಾರ ಪ್ರೇರಣೆಯಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು ?

೨. ಉಪ್ಪಿನ ಸತ್ಯಾಗ್ರಹ ಮತ್ತು ಕಾಯ್ದೆಭಂಗ ಚಳುವಳಿಯಲ್ಲಿ ಅವರ ಪಾಲ್ಗೊಳ್ಳುವಿಕೆಯ ಕುರಿತು ತಿಳಿಸಿರಿ.

೩. ಗುದ್ಲೆಪ್ಪನವರು ಸ್ಥಾಪಿಸಿದ ' ಭಾರತೀಯ ತರುಣ ಸಂಘ ' ದ ಚಟುವಟಿಕೆಗಳು ಯಾವವು ?

೪. ಗುದ್ಲೆಪ್ಪನವರು ಹೊಸರಿತ್ತಿಯಲ್ಲಿ ಸ್ಥಾಪಿಸಿದ ಗಾಂಧಿ ಆಶ್ರಮದ ಕಾರ್ಯಚಟುವಟಿಕೆಗಳನ್ನು ತಿಳಿಸಿರಿ.

೫. ಅವರು ಹೊಸರಿತ್ತಿಯಲ್ಲಿ ಸಂಘಟಿಸುತ್ತಿದ್ದ ರೈತ ಪರಿಷತ್ತು ಹಳ್ಳಿಗರ ಮೇಲೆ ಯಾವ ರೀತಿ ಪ್ರಭಾವ ಬೀರಿತು ?

೬. ಭೂಗತರಾಗಿ ಗುದ್ಲೆಪ್ಪನವರು ಮಾಡಿದ ಕಾರ್ಯತಂತ್ರಗಳು ಯಾವವು ?

೭. ಅವರು ಮಹಾತ್ಮಾ ಗಾಂಧೀಜಿಯವರ ತತ್ವಗಳನ್ನು ಯಾವ ರೀತಿ ಅನುಷ್ಠಾನಕ್ಕೆ ತಂದರು ?

೮. ಗುದ್ಲೆಪ್ಪನವರ ಚಳುವಳಿಯ ಸಮಯದ ಜೇಲುವಾಸದ ಬಗ್ಗೆ ವಿವರಿಸಿರಿ.

೯. ಸ್ವಾತಂತ್ರ್ಯ ಚಳುವಳಿಯಲ್ಲಿ ಜನಸಾಮಾನ್ಯರು ಭಾಗವಹಿಸುವಂತೆ ಯಾವ ರೀತಿ ಪ್ರೇರಣೆ ನೀಡಿದರು ?

೧೦. ವೈಯಕ್ತಿಕ ಸತ್ಯಾಗ್ರಹ ಹಾಗೂ ಚಲೇಜಾವ್ ಚಳುವಳಿಯಲ್ಲಿಯ ಅವರ ಕಾರ್ಯಗಳ ಬಗ್ಗೆ ಹೇಳಿರಿ.

೧೧. ಗುದ್ಲೆಪ್ಪನವರ ಕುಟುಂಬದ ಸದಸ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಯಾವ ರೀತಿ ಪಾಲ್ಗೊಂಡರು ?

೩. ಕರ್ನಾಟಕ ಏಕೀಕರಣ :

೧. ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯ ಗುದ್ಲೆಪ್ಪನವರ ಪಾತ್ರ ಹೇಗಿತ್ತು ?

೨. ಏಕೀಕರಣ ಚಳುವಳಿಯಲ್ಲಿ ಜನಸಾಮಾನ್ಯರನ್ನು ಯಾವ ರೀತಿ ತೊಡಗಿಸಿದರು ?

೩. ಏಕೀಕರಣಕ್ಕಾಗಿ ಅವರು ಸಂಘಟಿಸುತ್ತಿದ್ದ ಪರಿಷತ್ತುಗಳು ಯಾವವು ?

೪. ನಾಡು ನುಡಿಗಾಗಿ ಕನ್ನಡಿಗರಲ್ಲಿ ಯಾವ ರೀತಿಯ ಜಾಗೃತಿ ಮಾಡಿದರು ?

೫. ಗಡಿನಾಡ ಕನ್ನಡಿಗರನ್ನು ಏಕೀಕರಣಕ್ಕಾಗಿ ಹೇಗೆ ಸಜ್ಜುಗೊಳಿಸಿದರು ?

೬. ರಾಜ್ಯ ಪುನರ್ರಚನಾ ಆಯೋಗ ಸಮೀಕ್ಷೆ ಕೈಕೊಂಡಾಗ ಗುದ್ಲೆಪ್ಪನವರು ನಿರ್ವಹಿಸಿದ ಪಾತ್ರವೇನು ?

೭. ಬಳ್ಳಾರಿ ಕರ್ನಾಟಕದಲ್ಲಿ ಉಳಿಯುವಂತೆ ಮಾಡುವಲ್ಲಿ ಗುದ್ಲೆಪ್ಪನವರ ಪಾತ್ರವೇನು ?

೪. ಇತರ ಹೋರಾಟಗಳು :

೧. ಮೈಸೂರು ಜವಾಬ್ದಾರಿ ಸರಕಾರದ ಸ್ಥಾಪನೆಯ ಹೋರಾಟದಲ್ಲಿ ಗುದ್ಲೆಪ್ಪನವರ ಪಾತ್ರ ಏನಿತ್ತು ?

೨. ಹೈದರಾಬಾದ ವಿಮೋಚನಾ ಹೋರಾಟದಲ್ಲಿ ಅವರ ಕಾರ್ಯಗಳು ಏನೇನು ?

೩. ಗೋವಾ ವಿಮೋಚನಾ ಚಳುವಳಿಯಲ್ಲಿ ಅವರ ಪಾತ್ರ ಹೇಗಿತ್ತು ?

೪. ಮಹಾಜನ ವರದಿ ಕಾಲದಲ್ಲಿ ಅವರು ನಿರ್ವಹಿಸಿದ ಕಾರ್ಯಗಳಾವವು ?

೫. ಕಾಂಗ್ರೆಸ್ ಸಂಘಟನೆ :

೧. ಗುದ್ಲೆಪ್ಪನವರು ಕಾಂಗ್ರೆಸ್ಸನ್ನು ಯಾವಾಗ ಸೇರಿದರು ?

೨. ಕಾಂಗ್ರೆಸ್ಸಿನ ಸಾಮಾನ್ಯ ಕಾರ್ಯಕರ್ತರಾಗಿ ಅವರು ಮಾಡಿದ ಕಾರ್ಯಗಳು ಯಾವವು ?

೩. ಕಾಂಗ್ರೆಸ್ಸಿನ ಯಾವ ಯಾವ ಹುದ್ದೆಗಳಲ್ಲಿ ಅವರು ಸೇವೆ ಸಲ್ಲಿಸಿದ್ದಾರೆ ?

೪. ಕಾಂಗ್ರೆಸ್ಸಿನ ಹಿರಿಯ ನಾಯಕರಾಗಿ ಅವರು ಮಾಡಿದ ಕಾರ್ಯಗಳು ಯಾವುವು ?

೫. ಕಾಂಗ್ರೆಸ್ಸಿನ ಸಾಮಾನ್ಯ ಕಾರ್ಯಕರ್ತರೊಂದಿಗೆ ಅವರ ವರ್ತನೆ ಹೇಗಿತ್ತು ?

೬. ಜನಸಾಮಾನ್ಯರನ್ನು ಕಾಂಗ್ರೆಸ್‌ನ ಕಡೆಗೆ ಹೇಗೆ ಆಕರ್ಷಿಸಿದರು ?

೭. ಗ್ರಾಮ ಕಾಂಗ್ರೆಸ್ಸಿನ ಸಮಿತಿಗಳ ಸ್ಥಾಪನೆಯಲ್ಲಿ ಅವರು ಹೇಗೆ ಶ್ರಮಿಸಿದರು ?

೮. ಕಾಂಗ್ರೆಸ್ ಸಂಘಟನೆಯಲ್ಲಿ ಮಹಿಳೆಯರಿಗೆ ಯಾವ ರೀತಿ ಪ್ರೋತ್ಸಾಹ ಕೊಡುತ್ತಿದ್ದರು ?

೬. ಶಾಸಕಾಂಗದಲ್ಲಿಯ ಕಾರ್ಯ :

೧. ಗುದ್ಲೆಪ್ಪನವರು ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಮುಂಬಯಿ ವಿಧಾನ ಸಭೆಗೆ ಸ್ಪರ್ಧಿಸಿದಾಗಿನ ಪ್ರಸಂಗಗಳನ್ನು ವಿವರಿಸಿರಿ.

೨. ಮೊರಾರ್ಜಿ ದೇಸಾಯಿ ಅವರೊಂದಿಗಿನ ಗುದ್ಲೆಪ್ಪನವರ ಸಂಬಂಧದ ಬಗ್ಗೆ ತಿಳಿಸಿರಿ.

೩. ಮೈಸೂರು ರಾಜ್ಯ ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿ ಅವರ ಕಾರ್ಯ ಹೇಗಿತ್ತು ?

೪. ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಯಾವ ರೀತಿ ಕಾರ್ಯಮಾಡಿದರು ?

೫. ವಿರೋಧ ಪಕ್ಷದವರೊಂದಿಗಿನ ಅವರ ಸಂಬಂಧ ಹೇಗಿತ್ತು ?

೬. ಸಭಾಪತಿಯಾದಾಗ ಅವರು ಕಾಂಗ್ರೆಸ್ ಪಕ್ಷ ತೊರೆಯಲಿಲ್ಲ. ಅದರ ಬಗ್ಗೆ ಹೇಳಿರಿ.

೭. ಸಾರ್ವಜನಿಕ ಸೇವೆ :

೧. ಜನಸಾಮಾನ್ಯರ ಬಗ್ಗೆ ಗುದ್ಲೆಪ್ಪನವರ ಕಾಳಜಿ ಹೇಗಿತ್ತು ?

೨. ದಲಿತರ ಮತ್ತು ಹಿಂದುಳಿದವರ ಪರವಾಗಿ ಅವರು ಮಾಡಿದ ಕಾರ್ಯಗಳಾವವು ?

೩. ಖಾದಿ ಮತ್ತು ಗ್ರಾಮೋದ್ಯೋಗ ಕ್ಷೇತ್ರದಲ್ಲಿ ಅವರು ಮಾಡಿದ ಕಾರ್ಯಗಳಾವವು ?

೪. ಕಾರ್ಮಿಕ ಸಂಘಗಳ ನಾಯಕರಾಗಿ ಅವರು ಸಲ್ಲಿಸಿದ ಸೇವೆ ಎಂತಹದು ?

೫. ಅವರು ಜನಕಲ್ಯಾಣಕ್ಕಾಗಿ ಮಾಡಿದ ಅಭಿವೃದ್ಧಿ ಕಾರ್ಯಗಳಾವವು ?

೬. ಶೈಕ್ಷಣಿಕ ಕ್ಷೇತ್ರದಲ್ಲಿ ಅವರು ಮಾಡಿದ ಕಾರ್ಯಗಳ ಬಗ್ಗೆ ಹೇಳಿರಿ.

೭. ಸ್ವಾವಲಂಬಿ ಶಿಕ್ಷಣದ ಬಗೆಗಿನ ಅವರ ದೃಷ್ಟಿಕೋನ ಎಂತಹದು ?

೮. ರಾಷ್ಟ್ರ ಭಾಷೆ ಹಿಂದಿಯ ಪ್ರಚಾರವನ್ನು ಅವರು ಹೇಗೆ ಮಾಡಿದರು ?

೯. ಪತ್ರಿಕೋದ್ಯಮದಲ್ಲಿನ ಅವರ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿಸಿರಿ.

೧೦. ಗುದ್ಲೆಪ್ಪನವರು ಕಾಗಿನೆಲೆಯಲ್ಲಿ ಕನಕದಾಸರ ಚತುಶ್ಶತಮಾನೋತ್ಸವದ ಸಂಘಟನೆಯನ್ನು ಹೇಗೆ ಮಾಡಿದರು ?

೧೧. ಅವರಿಗೆ ಅರವತ್ತು ವರ್ಷಗಳು ತುಂಬಿದಾಗ ಏರ್ಪಟ್ಟ ಷಷ್ಟ್ಯಬ್ಧಿ ಸಮಾರಂಭದ ಕುರಿತು ಹೇಳಿರಿ.

೧೨. ಧಾರ್ಮಿಕ ರಂಗದಲ್ಲಿಯ ಅವರ ಸೇವೆ ಎಂತಹದು ?

೮ ಗುದ್ಲೆಪ್ಪನವರ ಧರ್ಮಪತ್ನಿ ಶ್ರೀಮತಿ ಗಂಗಾದೇವಿ ಅವರಿಗೆ ಕೇಳಿದ ಕೆಲವು ಪ್ರಶ್ನೆಗಳು :

೧. ಗುದ್ಲೆಪ್ಪನವರೊಂದಿಗಿನ ತಮ್ಮ ರಾಷ್ಟ್ರೀಯ ವಿವಾಹದ ಬಗ್ಗೆ ಹೇಳಿರಿ.

೨. ಪತಿಯ ಹೋರಾಟದ ಜೀವನದ ಬಗ್ಗೆ ತಿಳಿಸಿರಿ.

೩. ಪತಿಯ ರಾಷ್ಟ್ರೀಯ ಕಾರ್ಯಗಳಲ್ಲಿ ತಾವು ಹೇಗೆ ಸಹಕಾರ ಕೊಟ್ಟಿರಿ ?

೪. ಹೊಸರಿತ್ತಿಯ ಗಾಂಧಿ ಆಶ್ರಮದಲ್ಲಿ ಯಾವ ಯಾವ ಕಾರ್ಯಗಳು ನಡೆಯುತ್ತಿದ್ದವು ?

- ಗ್ರಂಥ ಋಣ
- ಸಂಶೋಧನ ಕಾರ್ಯದಲ್ಲಿ ವ್ಯಕ್ತಿಗಳೊಂದಿಗೆ ಸಂದರ್ಶಿಸಿದ ವಿವರ
- ಭಾವಚಿತ್ರಗಳ ವಿವರ

ಗ್ರಂಥ ಋಣ

ಕನ್ನಡ :

೧. ಅಶ್ವತ್ಥ್. ಡಿ. ಎಸ್. ಮತ್ತು ಇತರರು.. (ಸಂ) **ವಿಮೋಚನೆ** (ಕೊಪ್ಪಳ : ಜಿಲ್ಲಾ ಆಡಳಿತ. ೧೯೯೯)

೨. ಅಸುಂಡಿ. ಎನ್. ಬಿ. (ಸಂ.). **ಭಾಗ್ಯವಂತ ಕಂಬಳಿಯವರು** (ಮುಂಡರಗಿ : ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ. ೧೯೮೪)

೩. ಎಚ್ಚಸ್ಕೆ (ಸಂ.) **ಅವಲೋಕನ** (ಬೆಂಗಳೂರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ೧೯೮೫)

೪. ಕಲಬುರ್ಗಿ. ಎಂ. ಎಂ. (ಸಂ.) **ಕರ್ನಾಟಕದ ಗಾಂಧಿ ಹರ್ದೇಕರ ಮಂಜಪ್ಪ** (ಬೆಂಗಳೂರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ೧೯೮೯)

೫. ಕಲಬುರ್ಗಿ. ಎಂ. ಎಂ.. ಪಾಟೀಲ. ಎಸ್. ಎಚ್. (ಸಂ.) **ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ– ಲಿಂಗಾಯತರ ಪಾತ್ರ** (ಗದಗ : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೧೯೯೮)

೬. ಕಾಮತ್. ಸೂರ್ಯನಾಥ.. **ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿ** (ಹುಬ್ಬಳ್ಳಿ : ಲೋಕಶಿಕ್ಷಣ ಟ್ರಸ್ಟ್ ಗ್ರಂಥಮಾಲೆ. ೧೯೯೨)

೭. ಕಾಮತ. ಸೂರ್ಯನಾಥ. (ಸಂ.) **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು**. ಸಂಪುಟ - ೧ (ಬೆಂಗಳೂರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ೧೯೯೮ ದ್ವಿ. ಮು.)

೮. ಕಾಮತ. ಸೂರ್ಯನಾಥ. (ಸಂ.) **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು**. ಸಂಪುಟ - ೨ (ಬೆಂಗಳೂರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ೧೯೯೮ ದ್ವಿ. ಮು.)

೯. ಕಾಮತ್. ಸೂರ್ಯನಾಥ.. **ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು** (ಹುಬ್ಬಳ್ಳಿ : ಬುರ್ಲಿ ಬಿಂದುಮಾಧವ ಸ್ಮಾರಕ ಪ್ರತಿಷ್ಠಾನ. ೧೯೯೮)

೧೦. ಕುಲಕರ್ಣಿ. ವ್ಹಿ. ಎಸ್.. **ಬಿ. ಎನ್. ಮುನವಳ್ಳಿ ವಕೀಲರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೧೯೯೧)

೧೧. ಕೆರಿಮನಿ. ಸಿ. ವ್ಹಿ.. **ಹುತಾತ್ಮ ಮೈಲಾರ ಮಹಾದೇವಪ್ಪನವರು** (ಹುಬ್ಬಳ್ಳಿ : ಬೆಳಗಾವ ವಿಭಾಗೀಯ ಖಾದಿ ಸೇವಾ ಶಿಕ್ಷಣ ಸಮಿತಿ. ೧೯೯೯)

೧೨. ಕೊರಗಲ್. ವಿರುಪಾಕ್ಷಪ್ಪ.. **ದೇವಿಹೊಸೂರಿನ ಚನಬಸಪ್ಪ ಕುರುಬಗೊಂಡಶೆಟ್ಟರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೧೯೯೬)

೧೩. ಕಂಬಿ ವ್ಹಿ. ಎಸ್.. **ಬಿ. ಎಂ. ಸಾಣಿಕೊಪ್ಪ ಸ್ವಾತಂತ್ರ್ಯಸಮರ ಮತ್ತು ನಂತರ** (ಧಾರವಾಡ : ಶ್ರೀ ವಿದ್ಯಾ ಪ್ರಕಾಶನ. ೧೯೯೧)

೧೪. ಕೃಷ್ಣಸ್ವಾಮಿ ಎನ್.. **ಕರ್ನಾಟಕದಲ್ಲಿ ಗಾಂಧಿ** (ಬೆಂಗಳೂರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ. ೧೯೯೬)

೧೫. ಗೋಕಾಕ. ವಿ. ಕೃ ಮತ್ತು ಇತರರು (ಸಂ.) **ಕನ್ನಡದ ಕಾಲು ಶತಮಾನ** (ಧಾರವಾಡ : ಮಿಂಚಿನ ಬಳ್ಳಿ ಕಾರ್ಯಾಲಯ. ೧೯೬೫)

೧೬. ಗೋಪಾಲರಾವ್ ಎಚ್. ಎಸ್.. **ಕರ್ನಾಟಕ ಏಕೀಕರಣ ಇತಿಹಾಸ** (ಬೆಂಗಳೂರು : ನವಕರ್ನಾಟಕ ಪ್ರಕಾಶನ. ೧೯೯೬)

೧೭. ಗೋವಿಂದರಾಜು. ಸಿ. ಆರ್.. **ಕನ್ನಡ ಚಳುವಳಿಗಳು** (ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ೧೯೯೯)

೧೮. ಚನ್ನಬಸವೇಶ್ವರ ಸಿ. ವ.. **ವೈ ಮಹಾಬಲೇಶ್ವರಪ್ಪನವರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ. ೧೯೮೧)

೧೯. ಚುರ್ಚಿಹಾಳಮಠ. ಸಿ. ಎಂ.. (ಪ್ರ.ಸಂ.) ಯಾಳಗಿ. ಮಹಾಲಿಂಗ (ಸಂ.) **ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ** (ಮುಂಡರಗಿ : ಮುಂಡರಗಿ ತಾಲೂಕಾ ಸ್ವಾತಂತ್ರ್ಯ ಯೋಧರ ಸಂಘ. ೧೯೯೯)

೨೦. ಜೋಶಿ ಆರ್. ಕೆ.. **ಬಿಡುಗಡೆಯ ಬಿರುಗಾಳಿಯಲ್ಲಿ** (ಹುಬ್ಬಳ್ಳಿ : ಬುರ್ಲಿ ಬಿಂದುಮಾಧವ ಸ್ಮಾರಕ ಪ್ರತಿಷ್ಠಾನ. ೧೯೯೪)

೨೧. ತೇಲಕರ. ಶ್ರೀಧರ.. ಹಿರೇಮಲ್ಲೂರ್. ಈಶ್ವರನ್.. **ಕರ್ನಾಟಕದ ಸಮರ ಭೇರಿ** (ಹುಬ್ಬಳ್ಳಿ : ಕಲ್ಪನಾ ಗ್ರಂಥ ಪ್ರಕಾಶನ ಸಮಿತಿ. ೧೯೫೧)

೨೨. ದಾನಿ. ಸುರೇಂದ್ರ (ಸಂ.) **ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಸಂಗ್ರಾಮ** (ಹುಬ್ಬಳ್ಳಿ : ಬುರ್ಲಿ ಬಿಂದುಮಾಧವ ಸ್ಮಾರಕ ಪ್ರತಿಷ್ಠಾನ. ೧೯೯೭)

೨೩. ದಿವಾಕರ ರಂ. ರಾ.. **ಕರ್ನಾಟಕ ಏಕೀಕರಣ ಕಥೆ** (ಹುಬ್ಬಳ್ಳಿ : ಲೋಕಶಿಕ್ಷಣ ಟ್ರಸ್ಟ್. ೧೯೫೬)

೨೪. ದಿವಾಕರ ರಂ. ರಾ.. **ರಾಷ್ಟ್ರೀಯ ಶಿಕ್ಷಣ** (ಹುಬ್ಬಳ್ಳಿ : ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟ್. ೧೯೪೫)

೨೫. ದೇಜಗೌ.. **ಕರ್ನಾಟಕದ ರೂವಾರಿ** (ಮೈಸೂರು : ಸಂವಹನ ಪ್ರಕಾಶನ. ೧೯೯೮)

೨೬. ಧ್ರುವನಾರಾಯಣ ಎಂ.. **ಮರಿಸ್ವಾಮಯ್ಯಮಠದ ಪಾಟೀಲ** (ಗದಗ : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೧೯೯೮)

೨೭. ನಾಯ್ಕರ. ಚಂದ್ರಮೌಳಿ ಎಸ್.. **ಛಲದಂಕಮಲ್ಲ ಹಳ್ಳಿಕೇರಿ ಗುದ್ಲೆಪ್ಪನವರು** (ಬೆಂಗಳೂರು : ಕನ್ನಡ ಪುಸ್ತಕ ಪ್ರಾಧಿಕಾರ. ೧೯೯೯)

೨೮. ನೆಶ್ವಿ. ಶಿವಣ್ಣ.. (ಸಂ.) **ಟಿ. ಆರ್. ನೆಶ್ವಿಯವರು** (ಹಂಸಭಾವಿ : ನೆಶ್ವಿ ಪ್ರಕಾಶನ. ೧೯೯೭)

೨೯. ಪಟ್ಟಣಶೆಟ್ಟಿ. ಸಿದ್ಧಲಿಂಗ.. **ಹಳ್ಳಿಕೇರಿ ಗುದ್ಲೆಪ್ಪನವರು** (ಗದಗ : ವಿರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೨೦೦೦ ತೃ. ಮು.)

೩೦. ಪಾಟೀಲ. ಕಲ್ಲನಗೌಡ.. **ಜಗತ್ತಿನ ಮಹಾವಿಭೂತಿಗಳಲ್ಲಿ ಮಹಾತ್ಮಾ ಗಾಂಧೀಜಿಯವರ ಸ್ಥಾನ** (ಧಾರವಾಡ : ಭಾರತೀಯ ತರುಣ ಸಂಘ. ೧೯೩೩)

೩೧. ಪಾಟೀಲ. ಆರ್. ಎಲ್. ಎಂ.. **ಜಿ. ವಿ. ಹಳ್ಳಿಕೇರಿ** (ಬೆಂಗಳೂರು : ಕರ್ನಾಟಕ ವಿಧಾನಸಭೆ ಸಚಿವಾಲಯ. ವಿಧಾನಸೌಧ. ೧೯೯೯)

೩೨. ಪಾಟೀಲ ಕೆ. ಎಸ್.. **ನನ್ನ ದಿನಚರಿ** (ಅದರಗುಂಚಿ ಶಂಕರಗೌಡರ ದಿನಚರಿ). (ಬೆಂಗಳೂರು : ವ್ಹಿ. ಬಿ. ಶಾಸ್ತ್ರೀಮಠ ಕರ್ನಾಟಕ ಸ್ವಾತಂತ್ರ್ಯಯೋಧರ ಪ್ರಧಾನ ಕಾರ್ಯದರ್ಶಿಗಳು. ೧೯೯೪)

೩೩. ಪಾಟೀಲ ಪುಟ್ಟಪ್ಪ.. **ಹೊಸಮನಿ ಸಿದ್ಧಪ್ಪನವರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೧೯೮೪)

೩೪. ಪಾಟೀಲ. ಭೋಜರಾಜ.. **ಸ್ವಾತಂತ್ರ್ಯಯೋಧ ತಿ. ರು. ನೆಶ್ವಿ**, (ಹಂಸಭಾವಿ : ನೆಶ್ವಿ ಪ್ರಕಾಶನ. ೧೯೯೮)

೩೫. ಪ್ರಧಾನ. ಗ. ಪ್ರ. (ಮೂಲ : ಮರಾಠಿ) ರಿಸಬೂಡ. ಸರಸ್ವತಿ.. (ಅನು) **ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ** (ಹುಬ್ಬಳ್ಳಿ : ಸಾಹಿತ್ಯ ಪ್ರಕಾಶನ. ೧೯೯೪)

೩೬. ಫಾಲಾಕ್ಷ.. **ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ** (ತಿಪಟೂರು : ಶಶಿ ಪ್ರಕಾಶನ. ೧೯೯೭)

೩೭. ಬಸವಾ. ಕೆ. ಡಿ.. **ನಿರ್ವಹಣಾಶಾಸ್ತ್ರದ ಮೂಲ ತತ್ವಗಳು** (ಹುಬ್ಬಳ್ಳಿ : ವಿದ್ಯಾವಾಹಿನಿ ಪ್ರಕಾಶನ. ೧೯೯೫)

೩೮. ಭದ್ರಾಪೂರ. ಮೋಹನ.. **ಅವಲೋಕನ** (ಹಾವೇರಿ : ಮೂಡಣ ಪ್ರಕಾಶನ. ೧೯೯೮)

೩೯. ರಾಮಸ್ವಾಮಿ. ಎಸ್. ಆರ್.. (ಸಂ.) **ಸ್ವಾತಂತ್ರ್ಯೋದಯದ ಮೈಲಿಗಲ್ಲುಗಳು** (ಬೆಂಗಳೂರು : ರಾಷ್ಟ್ರೋತ್ಥಾನ ಸಾಹಿತ್ಯ. ೧೯೯೮ ದ್ವಿ.ಮು.)

೪೦. ರುಮಾಲೆ. ಮೃತ್ಯುಂಜಯ.. **ಬಳ್ಳಾರಿಯ ಅಲ್ಲಂ ಸುಮಂಗಳಮ್ಮನವರು** (ಗದಗ : ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ೧೯೯೯)

೪೧. ಶೇಷಾದ್ರಿ. ಬಿ.. ಚಂದ್ರಶೇಖರ. ಟಿ. ಆರ್.. (ಸಂ.) **ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ** (ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ೧೯೯೮)

೪೨. ಶಂಕರನಾರಾಯಣರಾವ್. ಎನ್. ಪಿ.. **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು** (ಬೆಂಗಳೂರು : ನವಕರ್ನಾಟಕ ಪ್ರಕಾಶನ. ೧೯೯೧)

೪೩. ಶ್ರೀನಿವಾಸಮೂರ್ತಿ. ಎ. ಪಿ.. **ಭಾರತದ ಸ್ವಾತಂತ್ರ್ಯ ಚಳುವಳಿ** (೧೮೫೭-೧೯೪೭). (ಬೆಂಗಳೂರು : ಕನ್ನಡ ಪುಸ್ತಕ ಪ್ರಾಧಿಕಾರ. ೧೯೯೪)

೪೪. ಶ್ರೀಮತಿ ಎಚ್. ಎಸ್.. (ಸಂ.) **ಕನ್ನಡ ಮಹಿಳೆ ಮತ್ತು ಸ್ವಾತಂತ್ರ್ಯ ಹೋರಾಟ** (ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ೧೯೯೯)

೪೫. ಷೇಕ್ ಅಲಿ. ಬಿ.. (ಪ್ರ. ಸಂ.) ಚಂದ್ರಶೇಖರ. ಎಸ್.. (ಸಂಪುಟ ಸಂ.) **ಕರ್ನಾಟಕ ಚರಿತ್ರೆ**. ಸಂಪುಟ ೭ (ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ೧೯೯೭)

೪೬. ಸದಾಶಿವ. ಕೆ.. **ಭಾರತದ ಸ್ವಾತಂತ್ರ್ಯ ಹೋರಾಟ** (ಮೈಸೂರು : ಪ್ರಿಯದರ್ಶಿನಿ ಪ್ರಕಾಶನ. ೧೯೯೬)

೪೭. ಸಿದ್ಧವ್ವನಹಳ್ಳಿ ಕೃಷ್ಣಶರ್ಮ (ಸಂ.) **ಗಾಂಧೀ ಮತ್ತು ಕರ್ನಾಟಕ** (ಬೆಂಗಳೂರು : ಗಾಂಧೀ ಸ್ಮಾರಕ ನಿಧಿ. ೧೯೭೦)

೪೮. ಸುಬ್ರಹ್ಮಣ್ಯ. ಎಂ. ಎಂ.. ಮೂಲಗಿ. ರಾಮು.. (ಸಂ.) **ಜನನಾಯಕ ಹಳ್ಳಿಕೇರಿ ಗುದ್ಲೆಪ್ಪ** (ಹುಬ್ಬಳ್ಳಿ : ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಮೂರ್ತಿ ಪ್ರತಿಷ್ಠಾಪನಾ ಸಮಿತಿ. ೨೦೦೦)

೪೯. ಸೋಸಲೆ. ಚಿನ್ನಸ್ವಾಮಿ. ಎನ್.. **ಗಡಿ ಚಳುವಳಿಗಳು** (ಹಂಪಿ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ೧೯೯೯)

೫೦. ಸಂಪದ್ಗಿರಿರಾವ್. ಕೆ. ಮತ್ತು ಇತರರು (ಸಂ.) **ಕರ್ನಾಟಕದ ಪರಂಪರೆ**. ಸಂಪುಟ ೨ (ಬೆಂಗಳೂರು : ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ ಮೈಸೂರು ಸರಕಾರ. ೧೯೭೦)

೫೧. ಹಳ್ಳಿಕೇರಿ. ವಿರುಪಾಕ್ಷಪ್ಪ.. **ಶ್ರೀ ರಿತ್ತಿ ಅನ್ನದಾನ ಮರಿದೇವರು** (ಮುಂಡರಗಿ : ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ. ೧೯೯೧)

೫೨. ಹೇಮಗಿರಿಮಠ. ಸಿ. ಪಿ.. **ಹಾವೇರಿ ಪರಿಸರದಲ್ಲಿ ಚಲೇಜಾವ್ ಚಳುವಳಿ** (ಹೊಸರಿತ್ತಿ : ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಪ್ರತಿಷ್ಠಾನ. ೧೯೯೭)

೫೩. ಹಂಜಿ. ಎಸ್. ವಾಯ್.. **ಶ್ರೀ ಅಪ್ಪಣ್ಣಗೌಡರು** (ಹುಬ್ಬಳ್ಳಿ : ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ ಮೂರುಸಾವಿರ ಮಠ. ೧೯೮೫)

೫೪. ಹಂದ್ರಾಳ. ಮ. ಗು.. **ಮಹಾತ್ಮಾ ಗಾಂಧೀಜಿಯ ವಿಚಾರಧಾರೆ** (ಹೊಸರಿತ್ತಿ : ರಾಷ್ಟ್ರೀಯ ಶಿಕ್ಷಣ ಸಮಿತಿ. ೧೯೮೮)

ಅಭಿನಂದನ ಗ್ರಂಥಗಳು :

೧. ಗೋಕಾಕ. ವಿ. ಕೃ.. ಹಾಲಪ್ಪ. ಗ. ಸ.. ಧಾರವಾಡಕರ. ರಾ. ಯ.. ಬೇಂದ್ರೆ. ದ. ರಾ.. ಕರ್ಕಿ. ಡಿ. ಎಸ್.. (ಸಂ) **ರತ್ನಶಿಖಾ** (ಹುಬ್ಬಳ್ಳಿ : ಶ್ರೀ ಜಿ. ವಿ. ಹಳ್ಳಿಕೇರಿ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಸಮಿತಿ ಕಾಂಗ್ರೆಸ್ ಭವನ. ೧೯೬೬)

೨. ಚವಲಾರ. ಸರೋಜಿನಿ.. (ಸಂ.) **ಚಿರಚೇತನ** (ರಾಣೆಬೆನ್ನೂರ : ಶ್ರೀ ಕೆ. ಎಫ್. ಪಾಟೀಲರ ೮೪ ನೆಯ ವರ್ಧಂತಿ ಸನ್ಮಾನ ಸಮಿತಿ. ೧೯೮೯)

೩. ಹೇಮಗಿರಿಮಠ. ಸಿ. ಪಿ.. (ಸಂ.) **ಸೌಜನ್ಯ** (ಹುಬ್ಬಳ್ಳಿ : ಶ್ರೀ ಆರ್. ಬಿ. ಮಾಮಲೆದೇಸಾಯಿ ಸನ್ಮಾನ ಸಮಿತಿ. ೧೯೯೧)

ಸ್ಮರಣ ಸಂಚಿಕೆಗಳು :

೧. ಶರ್ಮ. ತಿ. ತಾ.. (ಸಂ.) **ಕಾಂಗ್ರೆಸ್ ಸುವರ್ಣ ಮಹೋತ್ಸವ ಸಂಚಿಕೆ** (ಬೆಂಗಳೂರು : ವಿಶ್ವಕರ್ನಾಟಕ. ೧೯೩೫)

೨. ಹಂಡಿಗಿ. ಸಂಗಮೇಶ.. (ಸಂ.) **ಕುಂದರ ನಾಡಿನ ಕುಂದಣ** (ಹುದಲಿ : ಖಾದಿ ಮತ್ತು ಗ್ರಾಮೋದ್ಯೋಗ ಸಹಕಾರಿ ಉತ್ಪಾದಕರ ಸಂಘ ನಿ.. ೧೯೮೨)

ವರದಿ, ನಿಯಮ ಹಾಗೂ ಕೈಪಿಡಿಗಳು :

೧. **ಕರ್ನಾಟಕದಲ್ಲಿಯ ಸತ್ಯಾಗ್ರಹದ ವರದಿಯು**, ೧೯೩೦-೩೧ (ಧಾರವಾಡ : ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿ. ೧೯೩೧)

೨. **ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳು** (ಬೆಂಗಳೂರು : ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ ವಿಧಾನಸೌಧ. ೧೯೯೫)

೩. **ರಾಷ್ಟ್ರದ ಹಾಗೂ ರಾಜ್ಯದ ಉನ್ನತ ಹುದ್ದೆಗಳನ್ನು ಅಲಂಕರಿಸಿದ ಗಣ್ಯವ್ಯಕ್ತಿಗಳ ಅಧಿಕಾರಾವಧಿಯ ವಿವರಗಳ ಕೈಪಿಡಿ** (ಬೆಂಗಳೂರು : ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ. ಕರ್ನಾಟಕ ವಿಧಾನ ಸಭೆಯ ಸಚಿವಾಲಯ. ವಿಧಾನ ಸೌಧ. ೨೦೦೦)

ವಿಶ್ವಕೋಶ ಹಾಗೂ ಗ್ಯಾಜೆಟಿಯರುಗಳು :

೧. ನಾಯಕ. ಹಾ. ಮಾ.. (ಪ್ರ. ಸಂ.) **ಕನ್ನಡ ವಿಶ್ವಕೋಶ**, ಸಂಪುಟ. ೪ (ಮೈಸೂರು : ಮೈಸೂರು ವಿಶ್ವವಿದ್ಯಾಲಯ. ೧೯೭೨)

೨. ನಿರಂಜನ.. (ಪ್ರ. ಸಂ.) **ಜ್ಞಾನ ಗಂಗೋತ್ರಿ**, ಸಂಪುಟ ೭ (ಬೆಂಗಳೂರು : ಕರ್ನಾಟಕ ಸಹಕಾರಿ ಪ್ರಕಾಶನ. ೧೯೭೪)

೩. ಕಾಮತ. ಸೂರ್ಯನಾಥ. ಯು.. (ಪ್ರ. ಸಂ.) **ಕರ್ನಾಟಕ ರಾಜ್ಯ ಗ್ಯಾಸೆಟಿಯರ್**, ಭಾಗ-೧ (ಬೆಂಗಳೂರು : ಕರ್ನಾಟಕ ರಾಜ್ಯ ಸರಕಾರ. ೧೯೮೪)

೪. ಕಾಮತ. ಸೂರ್ಯನಾಥ. ಯು.. (ಪ್ರ. ಸಂ.) **ಕರ್ನಾಟಕ ರಾಜ್ಯ ಗ್ಯಾಸೆಟಿಯರ್**, ಭಾಗ-೨ (ಬೆಂಗಳೂರು : ಕರ್ನಾಟಕ ರಾಜ್ಯ ಸರಕಾರ. ೧೯೮೫)

೫. ಕಾಮತ. ಸೂರ್ಯನಾಥ.. (ಸಂ.) **ಕರ್ನಾಟಕ ರಾಜ್ಯ ಗ್ಯಾಸೆಟಿಯರ್ – ಧಾರವಾಡ ಜಿಲ್ಲೆ** (ಬೆಂಗಳೂರು : ಕರ್ನಾಟಕ ರಾಜ್ಯ ಸರಕಾರ. ೧೯೯೫)

ಪಿಎಚ್. ಡಿ. ಮತ್ತು ಎಂ. ಫಿಲ್. ಪ್ರಬಂಧಗಳು :

೧. ಗೋವಿಂದರಾಜು. ಸಿ. ಆರ್.. **ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ** (ಬೆಂಗಳೂರು : ಎಸ್.ಬಿ.ಎಸ್. ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್. ೧೯೯೮)

೨. ವಾಲೀಕಾರ. ಯಾಸ್ಮೀನ. ಜಿ.. **ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗುದ್ಲೆಪ್ಪ ಹಳ್ಳಿಕೇರಿಯವರ ಪಾತ್ರ - ಒಂದು ಅಧ್ಯಯನ**. ಎಂ.ಫಿಲ್. ಪ್ರಬಂಧ (ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ. ೧೯೯೯) (ಅಪ್ರಕಟಿತ)

ಲೇಖನಗಳು :

೧. ಆರೂರು. ಲಕ್ಷ್ಮಣ. ಶೇಟ್.. **ಹೊಸರಿತ್ತಿಯ ಗಾಂಧೀ ಗ್ರಾಮೀಣ ಗುರುಕುಲ** (ಮಣಿಪಾಲ : ತರಂಗ. ೨೫-೫-೨೦೦೦)

೨. ಕೆರೆಮಲ್ಲಾಪುರ. ರುದ್ರಗೌಡ.. **ಹೊಸರೀತಿಯ ಹೊಸರಿತ್ತಿ ಗುರುಕುಲ** (ಬೆಂಗಳೂರು : ಸುಧಾ. ೨೫-೩-೧೯೯೯)

೩. ಚಿಕ್‌ವೆಂಕ್ಟು. **ಗುದ್ಲೆಪ್ಪ ಹಳ್ಳಿಕೇರಿ** (ಬೆಂಗಳೂರು : ಪ್ರಜಾಮತ. ೩೦-೫-೧೯೭೧)

೪. ಪಾಟೀಲ ಪುಟ್ಟಪ್ಪ.. **ಹಳ್ಳಿಕೇರಿಯೆಂಬ ನಿಜವಾದ ಜನನಾಯಕ** (ಹುಬ್ಬಳ್ಳಿ : ಪ್ರಪಂಚ. ೧೩-೬-೧೯೯೯)

೫. ಹಕಾರಿ ದೇವೇಂದ್ರಕುಮಾರ.. **ಒಂದು ನೆನಪು : ಚಿಂತನಶೀಲ ಗುದ್ಲೆಪ್ಪ** (ಹುಬ್ಬಳ್ಳಿ : ಸಂಯುಕ್ತ ಕರ್ನಾಟಕ. ೬-೬-೧೯೮೧)

೬. ಹಕಾರಿ. ದೇವೇಂದ್ರಕುಮಾರ.. **ರಾಷ್ಟ್ರೀಯತೆಯ ಹರಿಕಾರ ಹಳ್ಳಿಕೇರಿ ಗುದ್ಲೆಪ್ಪ** (ಬೆಳಗಾವಿ : 'ಕನ್ನಡಮ್ಮ' ದೀಪಾವಳಿ ವಿಶೇಷಾಂಕ. ೧೯೯೪)

೭. ಹಳ್ಳಿಕೇರಿ ಗುದ್ಲೆಪ್ಪ.. **ಜಗದ್ವಂದ್ಯ ಬಾಪೂಜಿ** (ಹುಬ್ಬಳ್ಳಿ : ನವಯುಗ. ೧೨-೨-೧೯೪೮)

೮. ಹಳ್ಳಿಕೇರಿ ಗುದ್ಲೆಪ್ಪ.. **ಹರಿಜನರನ್ನು ಮೆಟ್ಟಿ ನಿಂತ ಸಾಮಾಜಿಕ ವಿಷಮತೆಗಳ ಉಚ್ಚಾಟನೆಯಾಗಬೇಕು** (ಹುಬ್ಬಳ್ಳಿ : ಪ್ರಪಂಚ. ೯-೬-೧೯೫೪)

೯. ಹಂಡಿಗಿ. ಸಿದ್ಧಲಿಂಗೇಶ.. **ಕರ್ನಾಟಕ ಏಕೀಕರಣ ಮತ್ತು ವೀರಶೈವರ ಪಾತ್ರ** (ಹುಬ್ಬಳ್ಳಿ : ' ಪ್ರಜಾಜ್ಯೋತಿ ' ದೀಪಾವಳಿ - ರಾಜ್ಯೋತ್ಸವದ ವಿಶೇಷ ಸಂಚಿಕೆ. ನವಂಬರ. ೧೯೯೮)

೧೦. ಹಂಡಿಗಿ. ಸಂಗಮೇಶ.. **ಅಪ್ರತಿಮ ಗಾಂಧಿವಾದಿ ಹಳ್ಳಿಕೇರಿ ಗುದ್ಲೆಪ್ಪ** (ಹುಬ್ಬಳ್ಳಿ : ವಿಜಯ ಕರ್ನಾಟಕ. ೬-೬-೨೦೦೦)

೧೧. ಹಂಡಿಗಿ. ಸಂಗಮೇಶ.. **ಕನ್ನಡಿಗರಲ್ಲಿ ಜಾಗೃತಿ ಮೂಡಿಸಿದ ಹಳ್ಳಿಕೇರಿಯವರು** (ಅಪ್ರಕಟಿತ)

೧೨. ಹಂದ್ರಾಳ. ಮ. ಗು.. **ಮರೆಯಲಾಗದ ಹೋರಾಟಗಾರ ಹಳ್ಳಿಕೇರಿ ಗುದ್ಲೆಪ್ಪ** (ಹುಬ್ಬಳ್ಳಿ : ವಿಜಯ ಕರ್ನಾಟಕ. ೬-೬-೨೦೦೧)

ವೃತ್ತ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು :

೧. ಕನ್ನಡ ಪ್ರಭ

೨. ಕನ್ನಡಮ್ಮ

೩. ಕನ್ನಡಿಗ

೪. ಜೀವನ ಶಿಕ್ಷಣ

೫. ತರಂಗ

೬. ನವಯುಗ

೭. ಪ್ರಜಾಜ್ಯೋತಿ

೮. ಪ್ರಜಾಮತ

೯. ಪ್ರಜಾವಾಣಿ

೧೦. ಪ್ರಪಂಚ

೧೧. ವಿಜಯ ಕರ್ನಾಟಕ

೧೨. ಸುಧಾ

೧೩. ಸಂಯುಕ್ತ ಕರ್ನಾಟಕ

English Books :

1. Basaṿa, K. D., **Principles of management** (Hubli : Vidya Vahini Prakashana, 1995)
2. Basavaraja, K. R., **History and Culture of Karnataka** (Dharwad : Chalukya Publications, 1984)
3. Diwakar, R. R., and Others, **Karnataka Through The Ages** (Bangalore : The Government of Mysore, 1968)
4. **Gandhiji on Removal of Untouchability** (Bombay : The Directorate of Publicity Government of Bombay, 1956)
5. Halappa, G. S., (ed) **History of Freedom Movement in Karnataka,** Vol : II (Bangalore : Government of Mysore, 1964)
6. Hersey, Paul., and Blanchard, Kennath. H., **Management of organizational Behavior : Utilizing Human Resources** (New Delhi : Prentice Hall, 1982, 2nd ed.)
7. Hollander, Edwin. P., **Leadership Dynamics; A practical Guide to Effective relationships** (New York : The Free press A division of macmillan publishing Co., 1978)
8. Paige, Glenn. D., **The Scientific study of Political leadership** (New York : The Free press A Division of macmillan publishing Co., 1977)
9. Patil, S. H., **Modernisation and democratic Politics of a dominant community : A case study of Lingayats in Karnataka** (New Delhi : Indian council of social sciences Research, 1998) (Unpublished)
10. Shintri, Sarojini, B., and Raghavendra Rao, K., **The Iron man of Karnataka : Hallikeri Gudleppa** (Dharwad : Dakshina Bharat Hindi Prachar Sabha, Karnataka, 2000)

11. Szilagyi, Andrew. D., and Wallace Marc. J., **Organizational Behavior and Performance** (Illinois : Scott Foresman and Company, 1980, 2nd ed.)

Brochure, Reviews, Proceedings and Debates :

1. **A Brochure on Karnataka** (Bangalore : Research and Reference Section, Karnataka Legislative Assembly Secretariat, 2000, 2nd ed.)
2. **A Review of working of Mysore Legislative council,** 1962 to 1966 (Bangalore : Mysore Legislature Secretariat, 1967)
3. **Proceedings of the conference of presiding officers of Legislative Bodies in India** (New Delhi : Lok Sabha Secretariat, 1964)
4. **The Myosre Legislative Council Debates- Official Report** (Bangalore : Mysore legislature secretariat, 1961-1972) (separate volumes)

M. Phil. Dissertation :

1. Mogalishettar, V. C., **Shri Hallikeri Gudleppa - A political profile,** M.Phil. Dissertation (Dharwad : Karnatak University, 1985) (Unpublished)

Diaries :

The Diaries of Gudleppa Hallikeri (Unpublished)

1. 1959
2. 1960
3. 1961
4. 1971

News Papers :

1. Deccan Herald
2. The Sunday Standard

ಸಂಶೋಧನ ಕಾರ್ಯದಲ್ಲಿ ವ್ಯಕ್ತಿಗಳೊಂದಿಗೆ ಸಂದರ್ಶಿಸಿದ ವಿವರ :

ಅ.ನಂ.	ಹೆಸರು	ಉದ್ಯೋಗ	ವಯಸ್ಸು	ಸ್ಥಳ	ಸಂದರ್ಶಿಸಿದ ದಿನಾಂಕ
೧.	ಅಂಗಡಿ ಎಸ್. ಕೆ.	ನಿವೃತ್ತ ಮುಖ್ಯ ಇಂಜನೀಯರರು	೬೯	ಹುಬ್ಬಳ್ಳಿ	೦೮-೧೧-೨೦೦೦
೨.	ಅಂಗಡಿ ಪಂಚಪ್ಪ ಗುರುಬಸಪ್ಪ	ವ್ಯಾಪಾರಸ್ಥರು	೮೭	ಹೊಸರಿತ್ತಿ. ತಾ. ಜಿ. ಹಾವೇರಿ	೦೩-೧೧-೨೦೦೦
೩.	ಕಮಲಾನಿ ರವೀನಾ ಸಿ.	ಮಾಜಿ ವಿಧಾನ ಪರಿಷತ್ ಸದಸ್ಯೆ	೬೫	ಧಾರವಾಡ	೨೪-೦೬-೨೦೦೧
೪.	ಕಮಲಾನಿ ಸಿ. ಜೆ.	ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ	೭೩	ಧಾರವಾಡ	೨೪-೦೬-೨೦೦೧
೫.	ಕುರಹಟ್ಟಿ ತಿಪ್ಪಣ್ಣ ಅಂದಾನೆಪ್ಪ	ಸ್ವಾತಂತ್ರ್ಯಯೋಧರು	೮೦	ನವಲಗುಂದ	೦೭-೧೧-೨೦೦೦
೬.	ಕುಲಕರ್ಣಿ ಗೋಪಣ್ಣ	ಮುಖ್ಯಾಧ್ಯಾಪಕರು, ಗಾಂಧಿ ಗ್ರಾಮೀಣ ಗುರುಕುಲ	೭೦	ಹೊಸರಿತ್ತಿ. ತಾ. ಜಿ. ಹಾವೇರಿ	೦೨-೧೧-೨೦೦೦
೭.	ಚಿಕ್ಕಿ ವೀರಣ್ಣ ಉಳಿವೆಪ್ಪ	ಕಾರ್ಯದರ್ಶಿ. ನಾಡ ರಾಷ್ಟ್ರೀಯ ಶಿಕ್ಷಣ ಸಮಿತಿ. ಹೊಸರಿತ್ತಿ	೬೨	ಹುಬ್ಬಳ್ಳಿ	೨೪-೦೬-೨೦೦೧
೮.	ಚುರ್ಚಿಹಾಳಮಠ ಸಿ. ಎಂ.	ಸ್ವಾತಂತ್ರ್ಯಯೋಧರು. ಮಾಜಿ ವಿಧಾನಸಭಾ ಸದಸ್ಯರು	೭೮	ಮುಂಡರಗಿ	೨೭-೦೮-೨೦೦೦
೯.	ಚೌಶೆಟ್ಟಿ ಸಿದ್ಧಪ್ಪ ಚನ್ನಪ್ಪ	ವ್ಯಾಪಾರಸ್ಥರು	೭೮	ಹಾವೇರಿ	೦೪-೧೧-೨೦೦೦
೧೦.	ಜತ್ತಿ ಬಿ.ಡಿ.	ಮಾಜಿ ಉಪರಾಷ್ಟ್ರಪತಿಗಳು	೮೭	ಬೆಂಗಳೂರು	೨೩-೧೦-೧೯೯೮
೧೧.	ಧರಣೆಪ್ಪನವರ ಪಿ. ಎಸ್.*	ನಿವೃತ್ತ ಶಿಕ್ಷಕರು	೬೯	ಹುಬ್ಬಳ್ಳಿ	೨೯-೦೮-೨೦೦೧
೧೨.	ನರಸಿಂಹಮೂರ್ತಿ ಟಿ. ಎನ್.	ಮಾಜಿ ಸಚಿವರು, ಅಧ್ಯಕ್ಷರು ರಾಜ್ಯ ಹಣಕಾಸು ಆಯೋಗ	೬೩	ಬೆಂಗಳೂರು	೧೮-೧೨-೨೦೦೦
೧೩.	ನಿಜಲಿಂಗಪ್ಪ ಎಸ್.	ಮಾಜಿ ಮುಖ್ಯಮಂತ್ರಿಗಳು	೯೭	ಚಿತ್ರದುರ್ಗ	೨೪-೧೦-೧೯೯೮
೧೪.	ಪಾಟೀಲ ಪುಟ್ಟಪ್ಪ	ಮಾಜಿ ರಾಜ್ಯಸಭಾ ಸದಸ್ಯರು. ಸಂಪಾದಕರು ' ಪ್ರಪಂಚ-ವಿಶ್ವವಾಣಿ '	೭೯	ಹುಬ್ಬಳ್ಳಿ	೨೨-೧೦-೨೦೦೦
೧೫.	ಪಾಟೀಲ ನಾಗಮ್ಮ ವೀರನಗೌಡ	ಸ್ವಾತಂತ್ರ್ಯಯೋಧೆ. ಮಾಜಿ ವಿಧಾನ ಸಭಾ ಸದಸ್ಯೆ	೯೭	ಹುಬ್ಬಳ್ಳಿ	೨೨-೧೨-೨೦೦೦
೧೬.	ಪಾಟೀಲ ಬಿ. ಎಸ್. *	ಮಾಜಿ ಸಚಿವರು	೭೧	ಮನಗೂಳಿ. ತಾ. ಬ.ಬಾಗೇವಾಡಿ	೧೯-೦೮-೨೦೦೧
೧೭.	ಪಾಟೀಲ ವಾಯ್. ಎಸ್.	ಮಾಜಿ ವಿಧಾನ ಪರಿಷತ್ ಸದಸ್ಯರು, ಹಿಂದಿನ ಜನಸಂಘದ ರಾಜ್ಯಾಧ್ಯಕ್ಷರು	೭೫	ಧಾರವಾಡ	೧೬-೦೭-೨೦೦೧
೧೮.	ಪೂಜಾರ ಸೊಲಬಯ್ಯ ಮಹದೇವಯ್ಯ*	ಕೃಷಿಕರು	೭೮	ನವಲಗುಂದ	೦೫-೧೧-೨೦೦೦
೧೯.	ಬಡಕಲಿ ಎಂ. ಎಸ್.	ಸ್ವಾತಂತ್ರ್ಯಯೋಧರು	೮೫	ನವಲಗುಂದ	೦೫-೧೧-೨೦೦೦
೨೦.	ಬಿದರಗಡ್ಡಿ ರಾಜೇಶ್ವರಿ ವಿರುಪಾಕ್ಷಪ್ಪ	ಗುದ್ಲೆಪ್ಪನವರ ಮಗಳು	೫೫	ಹುಬ್ಬಳ್ಳಿ	೨೨-೧೨-೨೦೦೦

೨೧.	ಜಿದರಗಡ್ಡಿ ವ್ಹಿ. ಬಿ.	ಗುದ್ಲೆಪ್ಪನವರ ಅಳಿಯ. ನಿವೃತ್ತ ಕಾರ್ಯನಿರ್ವಾಹಕ ಇಂಜನೀಯರರು	೬೧ ಹುಬ್ಬಳ್ಳಿ	೨೨-೧೨-೨೦೦೦
೨೨.	ಬಂಕಾಪೂರ ಪ. ಲೋ.	ಪತ್ರಕರ್ತರು	೮೧ ಹುಬ್ಬಳ್ಳಿ	೨೮-೧೦-೨೦೦೦
೨೩.	ಭದ್ರಾಪೂರ ನೀಲಮ್ಮ ಚನ್ನಪ್ಪ	ಸ್ವಾತಂತ್ರ್ಯಯೋಧೆಯರು	೮೩ ಹುಬ್ಬಳ್ಳಿ	೦೮-೧೧-೨೦೦೦
೨೪.	ಮಠದ ಶಾಂತಕ್ಕ *	ಸಮಾಜ ಕಾರ್ಯಕರ್ತೆ	೭೦ ಹುಬ್ಬಳ್ಳಿ	೦೬-೦೬-೨೦೦೦
೨೫.	ಮಹಾಜನಶೆಟ್ಟರ ಜಿ. ಎಸ್.	ಪ್ರಾಚಾರ್ಯರು ಕೆ.ಎಲ್.ಇ. ಪಾಲಿಟೆಕ್ನಿಕ್	೫೯ ಹುಬ್ಬಳ್ಳಿ	೨೪-೦೬-೨೦೦೧
೨೬.	ಮೂಜಗಂ (ಮೂರುಸಾವಿರ ಮಠದ ಜಗದ್ಗುರು ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು)	ಜಗದ್ಗುರುಗಳು. ಮೂರುಸಾವಿರಮಠ	೭೫ ಹುಬ್ಬಳ್ಳಿ	೨೦-೧೨-೨೦೦೦
೨೭.	ಮೆಣಸಿನಕಾಯಿ ಜಿ. ಎಂ.	ಮಾಜಿ ಲೋಕಸಭಾ ಸದಸ್ಯರು	೭೬ ಹಾವೇರಿ	೦೪-೧೨-೨೦೦೦
೨೮.	ಮೇದಿ ಹುಚ್ಚೇಶ್ವರ	ಸ್ವಾತಂತ್ರ್ಯಯೋಧರು. ಸಂಪಾದಕರು 'ಕನ್ನಡಿಗ 'ವಾರಪತ್ರಿಕೆ	೭೮ ಹುಬ್ಬಳ್ಳಿ	೧೪-೦೨-೧೯೯೯
೨೯.	ವಿಜಾಪುರ ಬಿ. ಎಫ್ *	ನಿವೃತ್ತ ಶಿಕ್ಷಕರು	೬೯ ಹುಬ್ಬಳ್ಳಿ	೨೦-೦೮-೨೦೦೧
೩೦.	ವೀರಭದ್ರಯ್ಯ ಬಿ. ಎನ್.	ನಿವೃತ್ತ ಉಪಕಾರ್ಯದರ್ಶಿಗಳು. ವಿಧಾನ ಸೌಧ	೬೮ ಬೆಂಗಳೂರು	೧೮-೧೨-೨೦೦೦
೩೧.	ಶಾಮರಾವ್ ಕೆ.	ವ್ಯವಸ್ಥಾಪಕ ಸಂಪಾದಕರು. 'ಸಂಯುಕ್ತ ಕರ್ನಾಟಕ ' ದಿನಪತ್ರಿಕೆ	೮೬ ಬೆಂಗಳೂರು	೧೭-೧೨-೨೦೦೦
೩೨.	ಸಾಣಿಕೊಪ್ಪ ಎಸ್. ಜಿ.	ನಿವೃತ್ತ ಅಧೀಕ್ಷಕ ಇಂಜನೀಯರರು	೬೪ ಹುಬ್ಬಳ್ಳಿ	೨೨-೧೨-೨೦೦೦
೩೩.	ಸಾರಂಗಮಠ ಕೆ. ಸಿ. *	ನಿವೃತ್ತ ಮುಖ್ಯಾಧ್ಯಾಪಕರು	೭೩ ಧಾರವಾಡ	೩೦-೦೮-೨೦೦೧
೩೪.	ಹರಕಂಗಿ ಪರಮೇಶ್ವರಗೌಡ ನಿಂಗನಗೌಡ	ಸ್ವಾತಂತ್ರ್ಯಯೋಧರು	೭೫ ನೆಗಳೂರು. ತಾ. ಜಿ. ಹಾವೇರಿ	೦೩-೧೧-೨೦೦೦
೩೫.	ಹಳ್ಳಿಕೇರಿ ಗಂಗಾದೇವಿ	ಗುದ್ಲೆಪ್ಪನವರ ಧರ್ಮಪತ್ನಿ	೮೪ ಹುಬ್ಬಳ್ಳಿ	೨೨-೧೦-೨೦೦೦
೩೬.	ಹಳ್ಳಿಕೇರಿ ದೀನಬಂಧು	ಗುದ್ಲೆಪ್ಪನವರ ಹಿರಿಯ ಪುತ್ರ. ಶಸ್ತ್ರ ಚಿಕಿತ್ಸಾ ತಜ್ಞರು	೫೯ ಹುಬ್ಬಳ್ಳಿ	೨೦-೧೨-೨೦೦೦
೩೭.	ಹಳ್ಳಿಕೇರಿ ವಿರುಪಾಕ್ಷಪ್ಪ ಸಂಗನಬಸಪ್ಪ*	ಗುದ್ಲೆಪ್ಪನವರ ಅಣ್ಣನ ಮಗ. ಸ್ವಾತಂತ್ರ್ಯ ಯೋಧರು ಹಾಗೂ ಹಿಂದಿನ ಸಂಪಾದಕರು ' ಸಹಕಾರ ' ವಾರಪತ್ರಿಕೆ	೭೯ ಹುಬ್ಬಳ್ಳಿ. ವಾಸ : ಬೆಂಗಳೂರು	೩೦-೦೧-೨೦೦೦
೩೮.	ಹಳ್ಳಿಕೇರಿ ವೀರಪ್ಪ ಸಂಗನಬಸಪ್ಪ*	ಗುದ್ಲೆಪ್ಪನವರ ಅಣ್ಣನ ಮಗ. ಸ್ವಾತಂತ್ರ್ಯಯೋಧರು	೮೩ ಹೊಸರಿತ್ತಿ. ತಾ. ಜಿ. ಹಾವೇರಿ	೦೨-೧೧-೨೦೦೦
೩೯.	ಹಾರನಹಳ್ಳಿ ರಾಮಸ್ವಾಮಿ	ಮಾಜಿ ಸಚಿವರು. ಅಧ್ಯಕ್ಷರು ಆಡಳಿತ ಸುಧಾರಣಾ ಆಯೋಗ	೭೮ ಬೆಂಗಳೂರು	೧೭-೧೨-೨೦೦೦
೪೦.	ಹಿರೇಮಠ ಚನಬಸಯ್ಯ ನೂರೊಂದಯ್ಯ	ರಂಗಕಲಾವಿದರು	೮೫ ಹುಬ್ಬಳ್ಳಿ. ವಾಸ : ಗೋಕರ್ಣ	೨೮-೧೦-೨೦೦೦

* ಇವರುಗಳನ್ನು ಹೊರತುಪಡಿಸಿ ಉಳಿದವರೆಲ್ಲರ ಸಂದರ್ಶನದ ಧ್ವನಿಸುರುಳಿಗಳಿವೆ.

ಭಾವಚಿತ್ರಗಳ ವಿವರ

೧. ಜನನಾಯಕ ಗುದ್ಲೆಪ್ಪ ಹಳ್ಳಿಕೇರಿ

೨. ಗಾಂಧಿ ಭಕ್ತ ಗುದ್ಲೆಪ್ಪ ಹಳ್ಳಿಕೇರಿ

೩. ಅಧ್ಯಯನಾಸಕ್ತ ಗುದ್ಲೆಪ್ಪನವರು

೪. ಗುದ್ಲೆಪ್ಪನವರು ಜನಿಸಿದ ಹೊಸರಿತ್ತಿಯ ಮನೆ.

೫. ಪತ್ನಿ, ಮಕ್ಕಳು ಮತ್ತು ಮೊಮ್ಮಗಳೊಂದಿಗೆ ಗುದ್ಲೆಪ್ಪನವರು

೬. ಸತ್ಯಾಗ್ರಹಿ ಗುದ್ಲೆಪ್ಪನವರು. ೧೯೩೦

೭. ಗುದ್ಲೆಪ್ಪನವರೊಂದಿಗೆ ಭಾರತೀಯ ತರುಣ ಸಂಘದ ಸದಸ್ಯರಾದ ತಲ್ಲೂರ ರಾಯನಗೌಡ ಪಾಟೀಲ, ಕೆ. ಬಿ. ದುಂದೂರ, ಎ. ಟಿ. ಮಾಗಡಿ, ಎಸ್. ಬಿ. ಹಿರೇಮಠ ಮತ್ತಿತರರು ೧೪-೧೨-೧೯೪೧

೮. ಗುದ್ಲೆಪ್ಪನವರ ನೇತೃತ್ವದಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಆಗ್ರಹಿಸಿ ಹಳೆಹುಬ್ಬಳ್ಳಿ ಕಿಲ್ಲೆಯಿಂದ ಹೊರಟ ಮೆರವಣಿಗೆ

೯. ಮೈಸೂರಿನ ಮುಖ್ಯಮಂತ್ರಿ ಕೆ. ಹನುಮಂತಯ್ಯ ಅವರೊಂದಿಗೆ ಗುದ್ಲೆಪ್ಪನವರು. ಇದೇ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕೆ ಆಗ್ರಹಿಸಿ ಶ್ರೀಮತಿ ನೀಲಮ್ಮ ಮತ್ತು ಚನ್ನಪ್ಪ ಭದ್ರಾಪೂರ ದಂಪತಿಗಳು ಹುಬ್ಬಳ್ಳಿಯ ಹರಿಜನ ಕಾಲನಿಯಲ್ಲಿ ಮನವಿ ಅರ್ಪಿಸಿದರು. ೧೯೫೪

೧೦. ಎಸ್. ನಿಜಲಿಂಗಪ್ಪನವರೊಂದಿಗೆ ಗುದ್ಲೆಪ್ಪನವರು.

೧೧. ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಕಾಮರಾಜ ನಾಡಾರ ಅವರೊಂದಿಗೆ ಅಂದಾನಪ್ಪ ಕುಂದರಗಿ, ಗುದ್ಲೆಪ್ಪನವರು, ಕೊಳ್ಳೂರು ಮಲ್ಲಪ್ಪ ಹಾಗೂ ಮುಖ್ಯಮಂತ್ರಿ ಬಿ. ಡಿ. ಜತ್ತಿ

೧೨. ಹುಬ್ಬಳ್ಳಿಯ ಸಾರ್ವಜನಿಕ ಸಮಾರಂಭದಲ್ಲಿ ಪ್ರಧಾನಿ ಜವಾಹರಲಾಲ ನೆಹರೂ, ಶ್ರೀಮತಿ ಇಂದಿರಾಗಾಂಧಿ, ಹುಬ್ಬಳ್ಳಿಯ ನಗರ ಸಭಾಧ್ಯಕ್ಷ ಹಾಜಿ ಹನಸಿ ಮತ್ತು ಗುದ್ಲೆಪ್ಪನವರು. ೧೯೫೫

೧೩. ಬೆಂಗಳೂರಿನಲ್ಲಿ ಜರುಗಿದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಪ್ರಧಾನಿ ನೆಹರೂ ಅವರನ್ನು ಗುದ್ಲೆಪ್ಪನವರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ೧೯೬೦

೧೪. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ ಗುದ್ಲೆಪ್ಪನವರು ಅಂಬರ ಚರಖಾ ಸ್ಪರ್ಧೆಯನ್ನು ಉದ್ಘಾಟಿಸುತ್ತಿರುವುದು.

೧೫. ಖಾದಿ ಪರಿಷತ್ತಿನಲ್ಲಿ ಮೊರಾರ್ಜಿ ದೇಸಾಯಿ ಹಾಗೂ ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ ವೈಕುಂಠಲಾಲ ಮೆಹ್ತಾ ಅವರೊಂದಿಗೆ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷ ಗುದ್ಲೆಪ್ಪನವರು. ೧೯೫೮

೧೬. ಗುದ್ಲೆಪ್ಪ ಹಳ್ಳಿಕೇರಿ ಅವರು ಹಳ್ಳಿಗರನ್ನುದ್ದೇಶಿಸಿ ಮಾತನಾಡುತ್ತಿರುವುದು. ೧೯೬೫

೧೭. ಮೈಸೂರು ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘದ ಪರಿಷತ್ತಿನಲ್ಲಿ ಸಂಘದ ಅಧ್ಯಕ್ಷ ಗುದ್ಲೆಪ್ಪನವರು. ಬೆಂಗಳೂರು. ೨೭-೧-೧೯೫೭

೧೮. ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲದ ಮಹಾದ್ವಾರ.

೧೯. ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲ ಕಟ್ಟಡದ ಮುಂಭಾಗ

೨೦. ಹೊಸರಿತ್ತಿಯ ಗಾಂಧಿ ಗ್ರಾಮೀಣ ಗುರುಕುಲದ ಮುಂದೆ ಇರುವ ಗುದ್ಲೆಪ್ಪನವರ ಸಮಾಧಿಯ ಮೇಲೆ ಪ್ರತಿಷ್ಠಾಪಿಸಿದ ಅವರು ಕಂಚಿನ ಮೂರ್ತಿ.

೨೧. ಹಾವೇರಿಯ ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯದ ಮುಂದೆ ಸ್ಥಾಪಿಸಿದ ಅವರ ಕಂಚಿನ ಪುತ್ಥಳಿ.

೨೨. ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಭೇಟಿ ಇತ್ತಾಗ ಅವರೊಂದಿಗೆ ಗುದ್ಲೆಪ್ಪ ಹಳ್ಳಿಕೇರಿ, ಎಸ್. ಆರ್. ಕಂಠಿ, ಡಾ. ಡಿ. ಸಿ. ಪಾವಟೆ, ಎಸ್. ನಿಜಲಿಂಗಪ್ಪ, ಬಿ. ಡಿ. ಜತ್ತಿ, ಆರ್. ಆರ್. ದಿವಾಕರ ಅವರುಗಳನ್ನು ಕಾಣಬಹುದು. ೧೯೫೮

೨೩. ರಾಷ್ಟ್ರಪತಿ ಝಾಕೀರ ಹುಸೇನ ಅವರೊಂದಿಗೆ ಗುದ್ಲೆಪ್ಪನವರು

೨೪. ಗುದ್ಲೆಪ್ಪನವರು ಮತ್ತು ಹಿಂದೀ ಚೀನಿ ಭಾಈ ಭಾಈ ನಿಯೋಗದ ಸದಸ್ಯರು, ಚೀನಾದ ಶಾಂಘಾಯಿನಲ್ಲಿ. ೧೯೫೪

೨೫. ಭಾರತೀಯ ಸಂಸದೀಯ ನಿಯೋಗದ ಸದಸ್ಯರಾದ ಗುದ್ಲೆಪ್ಪನವರು ಮಹಾಕವಿ ಶೆಕ್ಸಪಿಯರನ ಜನ್ಮಸ್ಥಳ ಇಂಗ್ಲಂಡಿನ ಸ್ಟ್ರಾಟಫೋರ್ಡನ ಮನೆಯ ಮುಂದೆ ನಿಂತಿರುವುದು. ಎಸ್. ಆರ್. ಕಂಠಿ, ಜೆ. ಇಮಾಮ, ಆರ್. ಜೆ. ದುಬೆ ಅವರೊಂದಿಗೆ ಇದ್ದಾರೆ. ೧೯೬೦

೨೬. ಕಾಗಿನೆಲೆಯಲ್ಲಿ ಜರುಗಿದ ಕನಕದಾಸ ಚತುಶ್ಶತಮಾನೋತ್ಸವದಲ್ಲಿ ಹುಮಾಯೂನ ಕಬೀರ ಅವರೊಂದಿಗೆ ಗುದ್ಲೆಪ್ಪನವರು ಹಾಗೂ ಡಾ. ದ. ರಾ. ಬೇಂದ್ರೆ. ೧೯೬೫

೨೭. ಉಪರಾಷ್ಟ್ರಪತಿ ವಿ. ವಿ. ಗಿರಿ ಅವರೊಂದಿಗೆ ಗುದ್ಲೆಪ್ಪನವರು. ೫-೯-೧೯೬೭

೨೮. ಹೊಸರಿತ್ತಿಯಲ್ಲಿ ಜರುಗಿದ ಗುದ್ಲೆಪ್ಪನವರ ಷಷ್ಟ್ಯಬ್ದಿ ಸಮಾರಂಭದಲ್ಲಿ ವರಕವಿ ಡಾ. ದ. ರಾ. ಬೇಂದ್ರೆ ಮಾತನಾಡುತ್ತಿರುವುದು. ಗುದ್ಲೆಪ್ಪನವರು, ಆರ್. ಬಿ. ಮಾಮಲೆ ದೇಸಾಯಿ, ಎನ್. ಎಲ್. ಪಾಟೀಲ, ಜಾನಪದ ಗಾಯಕ ಹುಕ್ಕೇರಿ ಬಾಳಪ್ಪ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ. ಸಿ. ಪಾವಟೆ ಅವರುಗಳನ್ನು ಕಾಣಬಹುದು. ೬-೬-೧೯೬೬

೨೯. ಬೆಂಗಳೂರಿನ ವಿಧಾನ ಸೌಧದಲ್ಲಿ ಜರುಗಿದ ಗುದ್ಲೆಪ್ಪನವರ ಷಷ್ಟ್ಯಬ್ದಿ ಸಮಾರಂಭದಲ್ಲಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಮಾತನಾಡುತ್ತಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ ಅಲಿ ಅವರನ್ನು ಕಾಣಬಹುದು. ೧೯೬೬

೩೦. ರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್ ಅವರು ರಾಜ್ಯ ಶಾಸಕಾಂಗದ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡುತ್ತಿರುವುದು. ರಾಜ್ಯಪಾಲ ಜಯಚಾಮರಾಜ ಒಡೆಯರ ಹಾಗೂ ವಿಧಾನ ಪರಿಷತ್ತಿನ ಸಭಾಪತಿ ಗುದ್ಲೆಪ್ಪನವರನ್ನು ಕಾಣಬಹುದು. ೧೯೬೩

೩೧. ಚಂಡೀಗಡದಲ್ಲಿ ಜರುಗಿದ ಭಾರತದ ಶಾಸಕಾಂಗ ಸಭಾಧ್ಯಕ್ಷರುಗಳ ಪರಿಷತ್ತಿನಲ್ಲಿ ಲೋಕಸಭಾಧ್ಯಕ್ಷ ಸರದಾರ ಹುಕುಂಸಿಂಗ ಅವರೊಂದಿಗೆ ರಾಜ್ಯ ವಿಧಾನ ಪರಿಷತ್ತಿನ ಸಭಾಪತಿ ಗುದ್ಲೆಪ್ಪನವರು ಹಾಗೂ ವಿಧಾನ ಸಭಾಧ್ಯಕ್ಷ ವೈಕುಂಠ ಬಾಳಿಗಾ ಪಾಲ್ಗೊಂಡಿದ್ದರು. ೧೯೬೩

೩೨. ವಿಧಾನ ಪರಿಷತ್ತಿನ ಸಭಾಪತಿ ಗುದ್ಲೆಪ್ಪ ಹಳ್ಳಿಕೇರಿ ಹಾಗೂ ವಿಧಾನ ಸಭೆಯ ಅಧ್ಯಕ್ಷ ವೈಕುಂಠ ಬಾಳಿಗಾ ಅವರುಗಳು ರಾಜ್ಯ ಶಾಸಕಾಂಗದ ಜಂಟಿ ಅಧಿವೇಶನಕ್ಕೆ ಹೋಗುತ್ತಿರುವುದು. ೧೯೬೪

೩೩. ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯ ಉದ್ಯಾನವನದಲ್ಲಿ ಸ್ಥಾಪಿಸಲಾದ ಗುದ್ಲೆಪ್ಪ ಹಳ್ಳಿಕೇರಿ ಅವರ ಕಂಚಿನ ಪುತ್ಥಳಿ.

೩೪. ಗುದ್ಲೆಪ್ಪನವರ ಹಸ್ತಾಕ್ಷರವಿರುವ ದಿನಚರಿಯ ಪುಟಗಳು

೩೫. 'ನವಯುಗ' ದಿನಪತ್ರಿಕೆಯ ಮುಖಪುಟ